MICROFILMED BY
NEHRU MEMORIAL MUSEUM
AND LIBRARY
TEEN MURTI HOUSE
NEW DELHI

SWADESHABHIMANI
KANNADA WEEKLY
PUBLISHED FROM
MANGALORE

ROLL No. I

FROM

1907

PKG

15380

ಸ್ವದೇಶಾಭಿಮಾನಿ

ಪುಸ್ತಕ 1. ಮಂಗಳೂರು, 1ನೇ ಜನವರಿ 1907. ಸಂಚಿಕೆ 1.

ಭಾರತೀಯ ಪತ್ರಿಕಾಕರ್ತರ ಉದ್ದಿಷ್ಟ ಕರ್ತವ್ಯವು.

ಕೊಳುಗುಳದೊಳೋಡಿದರೆ ಹಜ್ಜೆಗೆ |
ಫಲಮಹಾಪಾತಕವು ಮುಂದಣ |
ಗೊಲಿದು ಹಜ್ಜೆಯನಿಡಲು ಹಜ್ಜೆಯೊಳಶ್ವಮೇಧಫಲ ||

ಅಳಿದನಾದರೆ ದೇವಲೋಕದ |
ಲಲನೆಯರು ತೊತ್ತಿರು ಸುರೇಂದ್ರನ |
ನೆಲನ ನುಗ್ಗಡಿಸುವರು ವೀರಸ್ವರ್ಗವಹುದೆಂದ ||

ಮಹಾ ಭಾರತ.

"ಪೌರ್ವಾತ್ಯ ಜನಾಂಗಗಳ ಸುಧಾರಣೆಕೆಯು ಸ್ಥಾವರ ಸ್ವಭಾವದ್ದು. ಪಾಶ್ಚಾತ್ಯರು ಉನ್ನತಿಯ ಪಥದಲ್ಲಿ ಸ್ಪರ್ಧಿಸುವವರು" ಎಂಬ ಈ ಮಾತು ಯುರೋಪಿಯ ಶಾಸ್ತ್ರಕರ್ತರ ಪ್ರಿಯತನು ಸಿದ್ಧಾಂತವಾಗಿತ್ತು. (Sir H. Maine.) ಬ್ಲಂಟ್‌ಶ್ಲಿ ಮೊದಲಾದ ರಾಜನೀತಿ ವಿಶಾರದರೂ ಈ ಸಿದ್ಧಾಂತಕ್ಕೆ ಸಹಿ ಹಾಕಿದ್ದಾರೆ. ಚೀನ ರಾಜ್ಯವನ್ನು ಅಚಲಿತ ದುರ್ಗಂಧ ಜಲತಟಾಕಪ್ರಾಯವಾದ ಸ್ಥಾವರ ಪದ್ಧತಿಗಳಿಗೆ ದೃಷ್ಟಾಂತವಾಗಿಟ್ಟರು. ಸಾರಾಂಶ, ಆಸ್ಯಾಖಂಡದವರು ಯುರೋಪಿಯರ ದಾಸ್ಯಕ್ಕೆ ಹುಟ್ಟಿದವರು ಎಂದೂ ಇವರು ಕತ್ತಲೆಯಲ್ಲಿ ಹೊರಳಾಡುವ ಬಡಿಮತಿಗಳಿಗೆ ಬೆಳಕನ್ನೀಯುವ ದೇವತೆಗಳೆಂದೂ ಅಭಿಪ್ರಾಯ ಹುಟ್ಟಿತು.

ಪಾಶ್ಚಾತ್ಯಪರಿಜ್ಞಾನದಿಂದ ರಚಿತವಾದ ಈ ದುರ್ಗಕ್ಕೆ ಜಪಾನ ದೇಶವು ಮೊದಲನೇ ಒಡೆಕೊಟ್ಟಿತು. ಯುರೋಪಿಯ ರಾಜ್ಯಗಳಲ್ಲಿ ಮುಂದಾಳಾದ ರಷ್ಯದ ಕೊಬ್ಬನ್ನು ಆಸ್ಯಖಂಡದ ನಿನ್ನೆ ಹುಟ್ಟಿದ ಚಿಕ್ಕ ದ್ವೀಪವು ಮುರಿದು ಲೋಕದಲ್ಲಿ ಅನೇಕರಿಗೆ ವಿಸ್ಮಯಾನಂದವನ್ನು, ಅನೇಕರಿಗೆ ಅಸೂಯಾಭಯಗಳನ್ನೂ ಹುಟ್ಟಿಸಿತು. ಯುರೋಪಿಯರ ಅನುಸರಣೀಯವಾದ ಉತ್ತಮ ಪದ್ಧತಿಗಳನ್ನು ತನ್ನಲ್ಲಿ ಪ್ರಚಾರಕ್ಕೆ ತಂದ ಕಾರಣ ಜಪಾನನು ಈ ಅದ್ಭುತ ಕಾರ್ಯವನ್ನು ಕೈಗೂಡಿಸಿತೆಂದು ನೋಡಿ, ಆಸ್ಯದ ಮಿಕ್ಕ ರಾಜ್ಯಗಳು ಇದೇ ದಾರಿಯಲ್ಲಡಿ ಇಡುತ್ತಾರೆ. ಪಾರ್ಸಿ ದೇಶದ ಶ್ಯಾಹನು ತನ್ನ ರಾಜ್ಯದಲ್ಲಿ ಪ್ರಜಾಪ್ರತಿನಿಧಿಗಳ ಸಭೆಯನ್ನು ಸ್ಥಾಪಿಸಿದನು. ಚೀನಾ ದೇಶವೂ ಪಾಶ್ಚಾತ್ಯರ ಯುದ್ಧರಚನೆಯ ರೀತಿಗಳನ್ನೂ ಫಿರಂಗಿ ಮುಂತಾದ ಸಾಮಗ್ರಿಗಳನ್ನೂ ತನ್ನಲ್ಲಿ ನೆಲೆಗೊಳ್ಳಿಸಿ ಸುನಿಯಂತ್ರಿತ ಲೋಕನಿಯುಕ್ತ ರಾಜಪದ್ಧತಿಯನ್ನವಲಂಬಿಸುವದು. ಅಫಘಾನ ದೇಶದ ಅಮೀರನೂ ಸಹ, ಮತೈಕಾಭಿಮಾನವೇ ಸಲ್ಲದೆಂದು ಕಂಡು ಐಹಿಕ ಶಾಸ್ತ್ರಗಳನ್ನೂ ಪಾಠಶಾಲೆಗಳಲ್ಲಿ ಕಲಿಸುವ ಏರ್ಪಾಡು ಮಾಡಿರುತ್ತಾನೆ. ತನ್ನ ರಾಜ್ಯದಲ್ಲಿ ಒಂದು ವಿಧವಾದ ಪ್ರಜಾಪ್ರತಿನಿಧಿಸಭೆಯನ್ನು ನಿರ್ಮಿಸಿದ್ದಾನೆ. ಈ ಎಲ್ಲಾ ಪ್ರವರ್ತನಗಳು ಪಾಶ್ಚಾತ್ಯರ ಉದ್ದಿಷ್ಟ ಸಿದ್ಧಾಂತಗಳನ್ನು ಧ್ವಂಸನಡಿಸುವವು.

ವಸ್ತುತಃ ಸುಧಾರಣೆಕೆಯು ಸೂರ್ಯನು ಮೊದಲು ಪೂರ್ವದಲ್ಲಿ ಮೂಡಿ ಕ್ರಮೇಣ ಪಶ್ಚಿಮಕ್ಕೆ ತೆರಳುತ್ತಿರಲು ಈ ಪ್ರಾಂತ್ಯದಲ್ಲಿ ಕತ್ತಲೆಯಾಯಿತೆಂದು ಇತಿಹಾಸದಿಂದ ತೋರುವದು. ಯುರೋಪಿಯ ಜನಾಂಗಗಳನ್ನು ಉನ್ನತಿಗೆ ತಂದ ಕ್ರಿಸ್ತಧರ್ಮ ಬೋಧಕನು ಆಸ್ಯಖಂಡದವನು.

ಸುತ್ತಲಿನ ದೇಶಗಳಲ್ಲಿ ತೋರುವ ವೃದ್ಧಿಸೂಚನೆಗಳು ಹಿಂದೂ ದೇಶದಲ್ಲಿಯೂ ಕಣ್ಣಿಗೆ ಬೀಳುವವು. ನೇಷನಲ್ ಕೊಂಗ್ರೆಸ್, ಸೋಸಿಯಲ್ ಕೊನ್ಫರೆನ್ಸ್ ಮುಂತಾದ ಸಭೆಗಳೂ, ಬ್ರಹ್ಮ ಸಮಾಜ, ಆರ್ಯ ಸಮಾಜ, ಮುಂತಾದ ಕೂಟಗಳೂ ಈ ಚಳವಳಿಯ [illegible]ರುಹುಗಳಾಗಿವೆ. ನಾವೂ ರಾಜಕೀಯ, ಸಾಮಾಜಿಕ, ಸಾಂಪತ್ತಿಕ, ವಿಷಯಗಳಲ್ಲಿ ನಮ್ಮ [illegible] ಸಭ್ಯ[illegible] [illegible]ನಕೊಡತೊಡಗಿದ್ದೇವೆ. ಆದರೆ ಈ ಸ್ಥಿತಿಯನ್ನು ಸಿವಾರಿಸುವದಕ್ಕೆ [illegible] ನೊಗನಾಗಿ [illegible]

ನಮಗೆ ಹಲವು ಅಭ್ಯಂತರಗಳಿವೆ. ನಮ್ಮಲ್ಲಿ ಏಕರಾಷ್ಟ್ರೀಯ ಕಲ್ಪನೆಯು ಇನ್ನೂ ಗೊಂಡಿಲ್ಲ. ಭಾಷಾಭೇದ, ಜಾತಿಭೇದ, ಮತಭೇದ, ಕುಲಭೇದಗಳಿಂದ ತುಂಡುತುಂಡಾಗಿದ್ದೇವೆ. ಸನಿಯಂತ್ರಿತ ರಾಜ್ಯಪದ್ಧತಿಯಾದರೋ ಹಿಂದೂ ದೇಶದಲ್ಲಿ ಅಶ್ರುತಪೂರ್ವವೇ. ವಿಲಾಯತಿಯ ಜನರಿಗಾದರೆ ಅವರ ರಾಜಪದ್ಧತಿಯ ದೆಸೆಯಿಂದಲೂ ಅಲ್ಲಲ್ಲಿ ಸ್ಥಾಪಿಸಲ್ಪಟ್ಟ (Association) ಸಂಘ (Club) ಕೂಟಗಳ ಮೂಲಕವೂ ಅಗ್ಯಾಗ್ಯೆ ರಾಜನೀತಿವಿಶಾರದರು ಹಳ್ಳಿಹಳ್ಳಿಗಳಲ್ಲಿ ಜನರಿಗೆ ಕೊಡುವ ಭಾಷಣಗಳಿಂದಲೂ, ಲಕ್ಷಗಟ್ಟಲೆಯಲ್ಲಿ ಕೊಂಡುಕೊಳ್ಳಲ್ಪಡುವ ಪತ್ರಗಳ ಮುಖಾಂತರ ದೇಶದ ರಾಜ್ಯಭಾರ ವಿಷಯಗಳು ಕುಲಾಂಕುಶವಾಗಿ ತಿಳಿದು ಬರುವವು. ಈ [illegible] ಶಿಕ್ಷಣವು ಎಷ್ಟರಮಟ್ಟಿಗೆ ಸಮಾಜದ ಎಲ್ಲಾ ವರ್ಗಗಳಲ್ಲಿಯೂ ಹರಡಿಯದೆಂದು ವಿ[illegible]ತಿಯಿಂದ ಬಂದ ಒಬ್ಬ ರಸಿಕ ಹಿಂದೂ ಗೃಹಸ್ಥರು ಹೇಳಿದ್ದ ಒಂದು ಚುಟುಕ[illegible]ಯಿಂದ ತಿಳಿಯಬಹುದು. ವಿಲಾಯತಿಗೆ ಹೋದೊಡನೇ ಇವರ ಆಪ್ತರು ಇವರನ್ನು ಪೇಟೆಗೆ ಏಕಾಕಿಯಾಗಿ ಹೋಗಬಾರದೆಂದು ಬೋಧಿಸಿದರು. ಆದರೂ ಇವರು ಒಂದು ಬೆ[illegible]ವನ್ನು ಕೊಂಡುಕೊಳ್ಳಲಿಕ್ಕೆಂತ ಒಂದು ಅಂಗಡಿಗೆ ಹೋದರು. ಈ ಗಿರಾಕಿಯನ್ನು ಕಂಡಕೂಡಲೇ ಅಲ್ಲಿದ್ದ ಹೆಂಗಸು (ವಿಲಾಯತಿಯಲ್ಲಿ ಹೆಚ್ಚಾಗಿ ಹೆಂಗಸರು ಮಾರಾಟದ ಕೆಲಸವನ್ನು ಮಾಡುತ್ತಾರೆ.) ಇವರನ್ನು ಕುಂಪ್ರಿಸಿ ನಿನ್ನೆ ರಾತ್ರಿ ಪಾರ್ಲಿಮೆಂಟಿನಲ್ಲಿ ಮಿ. ಬಾಲ್ಫರ್ (ಮಾಜಿ ಪ್ರಧಾನ ಮಂತ್ರಿ) ದೊರೆಗಳು ಮಾಡಿದ ಭಾಷಣದ ವಿಷಯ ನಿಮ್ಮ ಅಭಿಪ್ರಾಯವೇನೆಂದು ಕೇಳಿದಳು. ಈ ಪ್ರಶ್ನೆಗೆ ಗಿರಾಕಿಯು ತಟಸ್ಥನಾದನು. ಮತ್ತು ಅಂದಿನಿಂದ ದಿವಸ ದಿವಸದ ವರ್ತಮಾನ ಪತ್ರಿಕೆಗಳನ್ನು ಓದದಿದ್ದರೆ ಕಿರುಕುಳ ಅಂಗಡಿಗಾರರಿಂದಲೂ ತನ್ನ ಅಭಿಮಾನಕ್ಕೆ ಕುಂದು ಬಂದೀತೆಂದು ಎಣಿಸಿದನು.

ಸರ್ವಸಾಧಾರಣರಿಗೆ ಇಂಥಾ ಶಿಕ್ಷಣ ಸಿಕ್ಕದಿದ್ದರೆ ಪ್ರತಿನಿಧಿ ಸಭೆಯು ಪ್ರಾಪ್ತಿಸಲ್ಲದು. ತತ್ರಾಪಿ ಪ್ರಾಪ್ತಿಸಿದರೂ ಬದ್ಧಮೂಲವಾಗಿ ಬಾಳಲಾರದು. ಯಾಕೆಂದರೆ ದೇಶದಲ್ಲಿ ಯಾವ ವರ್ಗವು ವಿದ್ಯಾ, ಬುದ್ಧಿ ಧನಸಂಪನ್ನವಾಗಿರುವದೋ ಅವರ ಕೈಯಲ್ಲಿ ರಾಜ್ಯಭಾರವು ಸೇರುವುದೆಂದು ಇತಿಹಾಸದ ಪರಿಚಿತಿಯು ವ್ಯಕ್ತಪಡಿಸುವದು. [illegible]ಜ್ಯದಲ್ಲಿ ಪ್ರಜಾಸಾಮಾನ್ಯರು ಅಶಿಕ್ಷಿತರಾಗಿ ಸಂಭಾವಿತ ಕುಟುಂಬಿಕರು ವಿರಳರಾಗಿಯೂ ಪರಸ್ಪರ ಮತ್ಸರಪೀಡಿತರಾಗಿಯೂ, ಭೋಗಾಸಕ್ತರಾಗಿಯೂ, ಇದ್ದ ಸ್ಥಿತಿಯಲ್ಲಿ ರಾಜನೇ ಸರ್ವ ಸ್ವತಂತ್ರನಾಗಿರುವನು. (Absolute monarch) ಕುಲೀನ ಮಂಡಳಿಯವರು ಬಲಾಢ್ಯರೂ ವಿದ್ಯಾಸಂಪನ್ನರಾದ್ದಲ್ಲಿ ರಾಜ್ಯವು ಇವರ ಕೈಯಲ್ಲಿ ಸೇರಿ ಕುಲೀನಾಧಿಪತ್ಯವೆನ್ನಿಸುವದು (Aristocracy). ಸಾಮಾನ್ಯರು ಸುಶಿಕ್ಷಿತರಾದರೆ ತಾವು ತೆರುವ ಕಂದಾಯ ವೆಚ್ಚ ಮಾಡುವದರಲ್ಲಿ ತಮಗೆ ಅಧಿಕಾರವಿರಬೇಕು, ರಾಜ್ಯಭಾರವು ಪ್ರಜಾಸುಖಾರ್ಥವಾದ್ದರಿಂದ ಸರ್ಕಾರದ ರಾಜನೀತಿಯನ್ನು ಚರ್ಚಿಸಲಿಕ್ಕೆ ನಮಗೆ ಸ್ವಾತಂತ್ರ್ಯ ಬೇಕನ್ನುವರು. ಈ ರೀತಿ ಪ್ರಜಾಪ್ರತಿನಿಧಿಗಳ ಸಭೆಗೆ ಅವಕಾಶವಾಗುವದು. ವಿದ್ಯೆಯೇ ಬಲದಾಯಕವಾಗಿರುವ[illegible]

ಪ್ರಜಾಶಿಕ್ಷಣೆಗೆ ಹಿಂದೂ ದೇಶದಲ್ಲಿ ಯಾವ ಸೌಕರ್ಯವಿರುವದು? ನಮ್ಮಲ್ಲಿ[illegible] ಸಭೆಗಳು ಕುಂಭಕರ್ಣನಿಗಿಂತಲೂ ಇಮ್ಮಡಿ. ಇಪ್ಪ[illegible] ಕೊಮ್ಮೆ ನಿದ್ರೆಯಿಂದೆದ್ದು ಅನ್ಯಭಾಷೆಯಲ್ಲಿ ಉಪನ್ಯಾಸ ಮಾಡುವರು. ರಾಜಕೀಯ ವಿಷಯಗಳನ್ನು ಚರ್ಚಿಸುವ ಸಂಘಗಳು ಈ ದೇಶದಲ್ಲಿ ಇಲ್ಲವೆನ್ನಬಹುದು. ಇದ್ದರೂ ಅವುಗಳಲ್ಲಿ ನಡಿಯುವ ಭಾಷಣಗಳು ಇಂಗ್ಲೀಷಿನಲ್ಲಿಯಾದ್ದರಿಂದ ಸಾಧಾರಣರಿಗೆ ಅವು ಅಗಮ್ಯವೇ. ಜನರಲ್ಲಿ ಇಂಗ್ಲೀಷ ಭಾಷಾಪರಿಚಿತಿಯು ಪಸರಿಸುವವರೆಗೆ ಕಾದರೆ ಲೋಕಾಂತದ ವರೆಗೂ ಕಾಯಬಹುದು.

ದೇಶೋನ್ನತಿಯ ಈ ಉತ್ತಮ ಮಾರ್ಗವನ್ನು ಸಾಧಿಸಲಿಕ್ಕೆ ದೇಶಭಾಷೆಯಲ್ಲಿ [illegible]ಸುವ ಪತ್ರಗಳೇ ಸಹಕಾರಿಗಳು. [illegible]ವು ಘಳಿಸಿದ ವಿದ್ಯೆಯ[illegible] ಸಾಧಾರಣ[illegible]

... ಯುಕ್ತಿ ... ಕಲಿತ ... ಸ್ವಭಾವವು ಇದೇ. ಈಗಲಾದರೋ ಇಂಗ್ಲೀಷ ವಿದ್ಯೆಯು ... ಬಂಬು ಜನರಿಗೂ ಉಳಿದ ಕೋಟ್ಯಾವಧಿ ಸರ್ವಸಾಧಾರಣರಿಗೂ ... ಭೇದವೆನಗಳಿಲ್ಲ. ಈ ಎರಡು ವರ್ಗಗಳ ನಡುವೆ ನಿರ್ಮಿತವಾದ ಈ ಕಂದಕವನ್ನು ದಾಟ ಸಹಜವಾದ ಸಂಕವು ಸ್ವಭಾಷೆಯೇ! ಆದ್ದರಿಂದಲೇ ಬಂಗಾಳ ದೇಶದ (National Council of Education) ರಾಷ್ಟ್ರೀಯ ವಿದ್ಯಾಸಭೆಯು ತಾವು ಸ್ಥಾಪಿಸುವ ಶಾಲೆಗ ... ವಿಧ ಶಾಸ್ತ್ರಗಳನ್ನು ದೇಶಭಾಷೆಯಲ್ಲೇ ಕಲಿಸಬೇಕೆಂದು ನಿಶ್ಚಯಿಸಿ ಈ ಸಲುವಾಗಿ ... ಪುಸ್ತಕಗಳನ್ನು ರಚಿಸಲಿಕ್ಕೆ ಒಂದು ಕಮ್ಮಿಟಿಯನ್ನು ನೇಮಿಸಿದರು. ರಾಷ್ಟ್ರೀಯ ... ಯು ಎಲ್ಲರಲ್ಲಿಯೂ ನೆಲೆಗೊಂಡು ಜನರಲ್ಲಿ ಐಕ್ಯಭಾವವು ಬೆಳೆದು ಹಿಂದೂ ದೇಶದ ... ಭೇದಗಳು ನೀಗಲಿಕ್ಕೆ ಸ್ವಭಾಷಾಪತ್ರಿಕೆಗಳು ಅತ್ಯಂತ ಸಹಕಾರಿಗಳೆಂದು ನಾವು ... ದ್ದೇವೆ. ಹಿಂದೂ ದೇಶದಲ್ಲಿ ಎಷ್ಟುಕಾಲ ದಾಟಿದ ನಂತರವಾದರೂ ಇಂಥಾ ಸ್ಥಿತಿಯು ... ಗಿದರೆ ಈ ಪತ್ರಗಳ ಪ್ರಯತ್ನಗಳು ಸಫಲಿಸುವವು. ಈ ಪತ್ರಗಳ ಜೀವನವು ಹಿಂದೂ ... ಶದ ಚರಿತ್ರೆಯಲ್ಲಿ ಗಣನೀಯವಾಗುವದು.

THE INDIAN NATIONAL CONGRESS.

ರಾಷ್ಟ್ರೀಯ ಸಭೆ.

... ಸ್ಥಾನದಲ್ಲಿ ಬ್ರಿತಿಷರ ಆಳುವಿಕೆಯು ದೇಶೋನ್ನತಿಗೋಸ್ಕರ ದೇವರು ಕಲ್ಪಿಸಿದ ... ದು ಪರವನ್ನೈದಿದ ಮಹಾದೇವ ಗೋವಿಂದ ರಾನಡೆಯವರ ಅಭಿಪ್ರಾಯ ... ಈ ತತ್ವವನ್ನು ರಾಷ್ಟ್ರೀಯ ಸಭೆಯು ಸಮರ್ಥಿಸುವದು. ಇಂಗ್ಲೀಷರು ಶೀಮೆ ... ಡೊಂದಾಗಿ ಜಯಿಸಿ ಕ್ರಮೇಣ ಇಡೀಭರತಖಂಡದಲ್ಲಿ ಆಧಿಪತ್ಯವನ್ನು ಸ್ಥಾಪಿಸಿ ... ಲೆಗಳಲ್ಲೆಲ್ಲಾ ಇಂಗ್ಲೀಷ ಭಾಷೆ ಕಲಿಸ ತೊಡಗಿದರು. ರಾಜ್ಯದಲ್ಲಿ ವ್ಯಾಪಿಸಿದ ... ಒಂದೇ ಸರಕಾರದ ಕೈಕೆಳಗಿನ ಜೀವನವೂ, ಬಿನ್ನವಂಶಗಳ ಜನರಿಗೆ ಪರಸ್ಪರ ... ನುಕೂಲವಾದ ಇಂಗ್ಲೀಷ ಬಾಷೆಯೂ, ಲೋಕವಾರ್ತೆಯನ್ನು ಒಂದು ಮೂಲೆ ಇನ್ನೊಂದು ಮೂಲೆಗೆ ನೈಯ್ಯುವ ವರ್ತಮಾನಪತ್ರಗಳೂ, ದೇಶದ ಉಪಭಾಗಗಳ ... ಸ್ಪರ ಬಂಧಿಸಿ ಪರಿಚತಿಯನ್ನು ಹೆಚ್ಚಿಸಿದ ರೈಲು ಹೊಗೆಬಂಡಿಗಳೂ, ಇಂಗ್ಲೀಷ ಮೂಲಕ ಕಲಿತ ಆಯಾ ದೇಶಗಳ ಇತಿಹಾಸ ರಾಜನೀತಿಗಳೂ, ಇವೆಲ್ಲಾ ಜನರ ... ಗಳಲ್ಲಿ ರಾಷ್ಟ್ರೀಯ ಕಲ್ಪನೆಯನ್ನು ಬಿತ್ತಿದವು. ಈ ಕಲ್ಪನೆಯು ಮೊಳೆತು ಜಿಲ್ಲೆ ... ಲ್ಲಿಯೂ ಅಲ್ಪಸ್ವಲ್ಪ ಜನರ ದೃಷ್ಟಿಯು ಇಡೀ ಭರತಖಂಡವನ್ನು ಆವರಿಸಿ "ನಾವು ... ಗಳು, ಬಂಗಾಳಿಯವರು, ಪಂಜಾಬಿಗಳು, ಅಥವಾ ಮರಾಠಿಯರು ಮಾತ್ರವಲ್ಲ, ... ರೂ ವ ... ವಾಗಿ ಭಾರತೀಯರು, ನಮ್ಮ ಮಾತೃ ಭೂಮಿಯಾದ ಈ ಆರ್ಯ ಭೂಮಿ ... ಮೇಲ್ಮೆಗಾಗಿ ಆ ಮಹೋದ್ದೇಶಕ್ಕೋಸ್ಕರ ತನುಮನ ಧನವನ್ನರ್ಪಿಸುವದು ಮಹಾಯ ... , ದೇಶಾಬಿಮಾನಿಗಳೆಲ್ಲವರ ಕರ್ತವ್ಯವೆಂದೆಣಿಸ ತೊಡಗಿದರು. ಈ ಬಾವನೆಯು ದೇ ... ದ ಬೇರೆ ಬೇರೆ ಕಡೆಗಳಲ್ಲಿದ್ದ ಬಿನ್ನಭಾಷೆಯ ಭಿನ್ನ ಕುಲಗಳ ಜನರಲ್ಲಿ ಸಹಾನು ಭೂತಿ ... ನನ್ನು ಉತ್ಪನ್ನಗೊಳಿಸಿ, ಅವರೆಲ್ಲರನ್ನೂ ರಾಜಕೀಯ ವಿಷಯಗಳನ್ನು ಚರ್ಚಿಸಲಿಕ್ಕಾಗಿ ಒಟ್ಟು ... ಡಿಸಿತು ... ರೆ ಕಾಂಗ್ರೆಸ್ ಸಭೆಯು ಜನವೆತ್ತಿತು. ಈ ಸಭೆಯು ಹಿಂದುಸ್ಥಾನದ ... ಯ ರಾಷ್ಟ್ರೀಯ ಕಲ್ಪನೆಯನ್ನು ಪ್ರತಿಬಿಂಬಿಸುವದು. ಇಂತಹ ಕಲ್ಪನೆಯು ರಾಜ್ಯದಲ್ಲಿ ... ಸರಿಸಿದಂತೆಲ್ಲಾ ಕಾಂಗ್ರೆಸ್ ಸಭೆಯು ಊರ್ಜಿತಕ್ಕೆ ಬರುವದು. ಕಾಂಗ್ರೆಸ್ ಚಳವಳಿ ... ಯಲ್ಲಿ ಸಾಮಾನ್ಯರು ಎಷ್ಟೆಷ್ಟು ಲಕ್ಷಣದ ತ್ತಾರೊ ಅಷ್ಟಷ್ಟು ಅವರಲ್ಲಿ ದೇಶವಾತ್ಸಲ್ಯವೂ ... ರಾಷ್ಟ್ರೀಯ ಕಲ್ಪನೆಯೂ ಬೆಳೆಯುವವು. ಇಂಗ್ಲೀಷ ವಾಙ್ಮಯಕ್ಕೆ ಕೈನಿಲುಕದ ಸಾಮಾ ... ರಲ್ಲಿ ಕಾಂಗ್ರೆಸ್ ಸಂಘದ ಪರಿಚಿತಿಯಿಲ್ಲದವರ ಪ್ರಯೋಜನಾರ್ಥ ಈ ಕೆಳಗೆ ಅದನ್ನು ... ಸಹವಾಗಿ ವಿವರಿಸುವೆವು.

ಕ್ರಿ. ಶ 1884ನೇ ಇಸವಿಯಲ್ಲಿ ಮೀ ಹ್ಯೂಮ್ ಸಾಹೇಬರಿಗೆ ಕಾಂಗ್ರೆಸ್ ಸಭೆಯ ... ಯು ಮೊಗಲು ಸಫಲಿಸಿತು. ಇದರಿಂದಲೇ ಇವರಿಗೆ ಕಾಂಗ್ರೆಸ್ ಪಿತೃವೆಂದು ... ಬಂದದೆ. ಆದರೆ ಇವರು ಈ ಸಭೆಯಲ್ಲಿ ಪ್ರಜೆಗಳ ಮುಖಂಡರು ಸಮಾಜ ಸುಧಾ ... ಯ ವಿಷಯಗಳನ್ನು ತರ್ಕಿಸಬೇಕೆಂದು ಅಭಿಪ್ರಾಯಪಟ್ಟು ಈ ತಮ್ಮ ಹೊಸ ಅಭಿಪ್ರಾ ... ವನ್ನು ಆ ಕಾಲದ ವೈಸರಾಯ ಧೊರೆಗಳಾದ ಡಫರಿನ್ ಪ್ರಭುಗಳಿಗೆ ತಿಳಿಸಲು ಇವರು ... ಗ್ರೇಸರರು ಹಿಂದುಸ್ಥಾನದ ನಾಲ್ಕು ಕಡೆಗಳಿಂದಲೂ ಒಟ್ಟುಕೂಡಿ ಒಂದು ಸಂಘವ ... ಏರ್ಪಡಿಸಬೇಕೆಂಬವಷ್ಟುಮಟ್ಟಿಗೆ ಹ್ಯೂಮ್ ಧೊರೆಗಳ ಅಭಿಪ್ರಾಯವನ್ನು ಅನುಮೋದಿ ... ದ. ಆದರೆ ಈ ಸಭೆಯು ಚರ್ಚಿಸಬೇಕಾದ ವಿಷಯಗಳು ಸಾಮಾಜಿಕವಲ್ಲ, ರಾಜನೀತಿ ... ರಬೇಕೆಂದು ಹೇಳಿದರು. ನಮ್ಮಲ್ಲಿ ಹಿಂ ... ಮಹಮ್ಮದಿ ಕ್ರೈಸ್ತ ಮುಂತಾದ ಅನೇ ... ಆರ್ಯ, ದ್ರಾವಿಡ, ಮೊಗ ... ಮುಂತಾದ ಅನೇಕ ವಂಶ

... ಗಳು ಇರುವದರಿಂದ ಸಮಾಜ ಸಂಸ್ಕಾರದ ವಿಷಯವು ಸರ್ವಜನ ಸಾಮಾನ್ಯ ... ವಾಗುವದು. ಆದ್ದರಿಂದ ಡಫರಿನ್ ಪ್ರಭುಗಳ ಅಭಿಮತವು ಯುಕ್ತಿ ಯುಕ್ತವಾ ... ಈ ಮತಾನುಸಾರ ಮೊದಲನೇ ಕಾಂಗ್ರೆಸ್ ಸಭೆಯು ಬೊಂಬಾಯಿಯಲ್ಲಿ ಚಿರಸ್ಮರಣೀಯವಾದ 1885ನೇ ದಶಂಬರ ತಾರೀಕು 28ನೇ ದಿನ ನೆರೆಯಿತು. ಈ ಸಭೆಗೆ ಕೀರ್ತಿಶೇಷರಾದ ಉಮೇಶಚಂದ್ರ ಬೆನರ್ಜಿಯವರನ್ನು ಪ್ರೆಸಿಡೆಂಟರನ್ನಾಗಿ ನೇಮಿಸಿದರು. ಆ ವರ್ಷದಲ್ಲಿ 72-ಡೆಲಿಗೇಟರು ಯಾ ಪ್ರತಿನಿಧಿಗಳು ಕೂಡಿದರು. ಆದರೆ ಇವರು ಯಥಾರ್ಥವಾಗಿ ಲೋಕನಿಯುಕ್ತರೆಂದು ಹೇಳಲಾಗುವದಿಲ್ಲ. ಪ್ರಜೆಗಳಿಂದ ನೇಮಿಸಲ್ಪಟ್ಟ ಪ್ರತಿನಿಧಿಗಳು ಮೊದಲು 1886ನೇ ವರ್ಷದ ಕಲ್ಕತ್ತಾ ಸಭೆಯಲ್ಲಿ ಕೂಡಿದರು. ಆದರೂ ಹಲವು ವರುಷಗಳವರೆಗೆ ಈ ಸಂಸ್ಥೆಗೆ ಸುನಿಯಂತ್ರಿತ ಕಾರ್ಯಭಾಗ (Constitution) ಇಲ್ಲದೆ ಸಾಧಾರಣವಾಗಿ ನೆರೆಯುವ ಸಭೆಗಳಂತೆಯೇ ವರ್ಷಕ್ಕೊಮ್ಮೆ ಕೂಡುತ್ತಿದ್ದರು. ನಿಯಮಿತ ವ್ಯವಸ್ಥೆಯ ವಿಷಯವು ಮೊದಲು ಮದ್ರಾಸಿನಲ್ಲಿ ಕೂಡಿದ 3ನೇಯ ಸಭೆಯಲ್ಲಿ ಚರ್ಚೆಗೆ ಬಂದಾಗ್ಯೂ ಸಭೆಯ ನಿಯಮಗಳು ಸಮಗ್ರವಾಗಿ ಏರ್ಪಡಿಸಲಿಕ್ಕೆ ಹಲವು ವರ್ಷಗಳು ತಗಲಿದವು. ಕಡೆಗೆ ಲಕ್ಷ್ಮಣಾವತಿಯಲ್ಲಿ ಬೆಳೆದ ಹದಿನೈದನೆಯ ಸಭೆಯಲ್ಲಿ ಈ ಕೆಳಗಿನ ನಿಬಂಧನೆಗಳು ಸ್ವೀಕರಿಸಲ್ಪಟ್ಟವು.

(1) ರಾಜಶಾಸನಾನುಸಾರವಾದ ಮಾರ್ಗಗಳ ಮೂಲಕ ಭಾರತೀಯರನ್ನು ಅಭಿವೃದ್ಧಿಗೆ ತರುವದು ಈ ಸಂಘದ ಉದ್ದೇಶವಾಗಿರುವದು.

(2) ಈ ಸಂಘವು ಸಾಧಾರಣವಾಗಿ ವರ್ಷಕ್ಕೊಮ್ಮೆ ಕಳೆದ ಸಭೆಯಲ್ಲಿ ನಿರ್ಣಯಿಸಲ್ಪಟ್ಟ ಸ್ಥಳ ಕಾಲಗಳಲ್ಲಿ ಕೂಡಬೇಕು. ಆದರೆ ಕೆಳಗೆ ವಿವರಿಸಲ್ಪಟ್ಟ ಕಾಂಗ್ರೆಸ್ ಕಮ್ಮಿಟಿಯವರು ಈ ಸ್ಥಳಕಾಲಗಳನ್ನು ಅವಶ್ಯ ತೋರಿದ್ದಲ್ಲಿ ಬದಲಾಯಿಸ ಬಹುದು. ಇದಲ್ಲದೆ ಇದೇ ಕಮ್ಮಿಟಿಯವರು ಅನುಪತ್ಯ ಒದಗಿದರೆ ಸಭೆಯ ಅಸಾಧಾರಣ ಕೂಟವನ್ನು ಯುಕ್ತ ಕಂಡ ಸ್ಥಳಕಾಲಗಳಲ್ಲಿ ಕೂಡಿಸಬಹುದು.

(3) ಈ ಸಂಘದ ಸಭಾಸದರು ರಾಜಕೀಯ ಯಾ ಇತರ ಸಮಾಜಗಳಿಂದಾಗಲೀ ಊರಿನ ಜನರು ಮೀಟಿಂಗ್ ಯಾ ಸಭೆಕೂಡಿಯಾಗಲೀ ನೇಮಿಸಲ್ಪಡಬೇಕು.

(4) ಇದರ ಆಡಳಿತೆಯು ಇಂಡಿಯನ್ ಕಾಂಗ್ರೆಸ್ ಕಮ್ಮಿಟಿ ಎಂಬ ಒಂದು ಕಮ್ಮಿಟಿಯ ಕೈಯಲ್ಲಿರತಕ್ಕದ್ದು. ಈ ಕಮ್ಮಿಟಿಯಲ್ಲಿ ಎಕ್ಸ್ ಒಫಿಸಿಯೊ (ಹುದ್ದೆದಾರ) ವಿನಹಾ ಕೊಂಗ್ರೆಸ್ಸಿನಲ್ಲಿ ಆರಿಸಲ್ಪಟ್ಟ 45 ಜನ ಮೆಂಬರರು ಇದ್ದು ಇವರ ಪೈಕಿ 40 ಜನರು ಹಿಂದುಸ್ಥಾನದ ಏಳು ಪ್ರಧಾನ ಸೀಮೆಗಳಲ್ಲಿಯ ಕಮ್ಮಿಟಿಗಳ ಶಿಫಾರಸಿನ ಮೇರೆಗೆ ಅಥವಾ ಅಂಥಾ ಕಮ್ಮಿಟಿಗಳಿಲ್ಲದ ಸೀಮೆಗಳಿದ್ದರೆ ಕಾಂಗ್ರೆಸ್ಸಿನಲ್ಲಿ ನೆರೆದ ಆ ಸೀಮೆಗಳ ಪ್ರತಿನಿಧಿಗಳಿಂದ ಆರಿಸಲ್ಪಡುವರು. ಹುದ್ದೆದಾರ (ex officio) ಮೆಂಬರುಗಳು ಯಾರೆಂದರೆ ಜೀವಿತ ... ವ ಕಳೆದ ಎಲ್ಲಾ ಕೊಂಗ್ರೆಸ್ಸ್‌ಗಳ ಅಧ್ಯಕ್ಷರು, ಬರುವ ಸಭೆಗೆ ನೇಮಕವಾದ ಅಧ್ಯಕ್ಷರು, ಕಾಂಗ್ರೆಸ್ ಸೆಕ್ರೆಟರಿ, ಅಸಿಸ್ಟಾಂಟ್ ಸೆಕ್ರೆಟರಿ, ಆಮಂತ್ರಣ ಸಭೆಯ ಅಧ್ಯಕ್ಷ ವ ಸೆಕ್ರೆಟರಿ ಕಾಂಗ್ರೆಸ್ ಕಮ್ಮಿಟಿ ಮೆಂಬರರ ಹುದ್ದೆಯು ಒಂದು ವರುಷದ ವರೆಗಿರುವದು.

(5) ಕಾಂಗ್ರೆಸ್ ಕಮ್ಮಿಟಿಯವರು ಕಾಂಗ್ರೆಸ್ ಸಭೆ ತೀರಿದ ಕೂಡಲೇ ಒಂದು ಸಾರಿ, ಜೂನ್ ಒಕ್ಟೋಬರ ತಿಂಗಳ ನಡುವೆ ಇನ್ನೊಂದು ಸರ್ತಿ, ಎರಡನೇ ಕಾಂಗ್ರೆಸ್ ಕೂಡಬೇಕಾದರೆ ಮತ್ತೊಂದು ಸಾರಿ, ಹೀಗೆ ವರುಷಕ್ಕೆ ಮೂರು ಸಾರಿಯಾದರೂ ಕೂಡಬೇಕು.

(6) ಕಾಂಗ್ರೆಸ್ ಕಮಿಟಿಗೆ ಒಬ್ಬ ಸೆಕ್ರೆಟರಿಯೂ ಒಬ್ಬ ಅಸಿಸ್ಟಾಂಟ್ ಸೆಕ್ರೆಟರಿಯೂ ತಕ್ಕ ಶಿಬಂದಿಯೂ ಇರತಕ್ಕದ್ದು. ಅಸಿಸ್ಟಾಂಟ್ ಸೆಕ್ರೆಟರಿಗೂ ಶಿಬಂದಿಗೂ ಸಲ್ಲತಕ್ಕ ಸಂಬಳದ ಉದ್ದಿಶ್ಯ ವರ್ಷಂಪ್ರತಿ 5000 ರೂಪಾಯಿ ಚಾಕ್ತಿ ಮತ್ತು ಬರುವ ವರ್ಷಗಳ ರಿಸೆಪ್ಷನ್ (Reception Committee) ಕಮಿಟಿಯವರು ಸಮಪಾಲಿನಲ್ಲಿ ತೆರಬೇಕು.

(7) ಆಯಾ ಸಂಸ್ಥಾನಗಳ ಮುಖ್ಯ ಪಟ್ಟಣಗಳಲ್ಲಿ ಸ್ಥಳೀಯ ಕಾಂಗ್ರೆಸ್ ಕಮ್ಮಿಟಿಗಳನ್ನು ನೇಮಿಸಿ ಅವುಗಳ ಮುಖಾಂತರ ಆಯಾ ಸೀಮೆಗಳಲ್ಲಿ ಈ ಚಳವಳಿಯನ್ನು ಸಾಗಿಸತಕ್ಕದ್ದು. ಈ ಕಮ್ಮಿಟಿಗಳು ವರ್ಷಕ್ಕೊಮ್ಮೆ ಮೇಲ್ಕಮ್ಮಿಟಿಗೆ ತಾವು ನಡಿಸಿದ ಕಾರ್ಯದ ಕುರಿತು ರಿಪೋರ್ಟು ಬರಕೊಳ್ಳಬೇಕು.

(8). ಪ್ರೆಸಿಡೆಂಟರನ್ನು ನೇಮಿಸುವದು, ಸಭೆಯಲ್ಲಿ ಮಂಜೂರಾಗತಕ್ಕ ಠರಾವನ್ನು ತಯಾರಿಸುವದೂ ಮತ್ತು ಕಾಂಗ್ರೆಸ್ ಸಮ್ಬಂಧವಾದ ಇತರ ಎಲ್ಲಾ ಕೆಲಸವನ್ನು ನೆರವೇರಿಸುವದು-ಕಾಂಗ್ರೆಸ್ ಕಮ್ಮಿಟಿಯ ಕರ್ತವ್ಯ.

(9) ಸ್ಥಳೀಯ ಕಮ್ಮಿಟಿಗಳು, ಕಾಂಗ್ರೆಸ್ ಕಮ್ಮಿಟಿಯವರು ಮಂಜೂರು ಮಾಡುವ ಶರ್ತದ ಮೇರೆ ತಮ್ಮ ತಮ್ಮ ಕಮ್ಮಿಟಿಗೆ ಅಗತ್ಯವಿರುವ ನಿಬಂಧನೆಗಳನ್ನು ವಿಸುವವು.

(10) ಕಾಂಗ್ರೆಸಿನ ಹಿತವನ್ನು ಸಾಧಿಸಲಿಕ್ಕಾಗಿ ಬ್ರಿಟಿಷ ಕಾಂಗ್ರೆಸ್ [illegible] ಹೆಸರಿನ ಒಂದು ಕಮ್ಮಿಟಿಯು ವಿಲಾಯತಿಯಲ್ಲಿ ಸ್ಥಾಪಿಸಲ್ಪಡ ಬೇಕು. [illegible] ಬೇಕಾದ ಹಣದ ಮೊಬಲಗನ್ನು ಕಾಂಗ್ರೆಸ್ ಸಭೆಯು ನಿಶ್ಚಯಿಸಿ, ಇಂಡಿಯನ್ [illegible] ಕಮ್ಮಿಟಿಯು ಸಂಪಾದಿಸುವದು.

(11) ಇಂಡಿಯನ್ ನೆಶನಲ್ ಕಾಂಗ್ರೆಸಿನ ಖರ್ಚಿಗೋಸ್ಕರ ಒಂದು ಕಾಯಂ ಫಂಡನ್ನು ಸ್ಥಾಪಿಸಲಿಕ್ಕೆ ಅಗತ್ಯವಿರುವ ಏರ್ಪಾಡನ್ನು ಕಾಂಗ್ರೆಸ್ ಕಮ್ಮಿಟಿಯವರು ಮಾಡ ತಕ್ಕದ್ದು. ಈ ಫಂಡು ಒಂದೊಂದು ಶೀಮೆಗೆ ಒಬ್ಬನಂತೆ ಏಳು ಜನ ಮೊಕ್ತ್ಯಾರರ ಹೆಸರಿನಲ್ಲಿರ ತಕ್ಕದ್ದು. ಈ ಮೊಕ್ತ್ಯಾರರನ್ನು ಕಾಂಗ್ರೆಸಿನಲ್ಲಿ ನೇಮಿಸುವರು.

ಇಂತಹ ನಿಬಂಧನೆಗಳಿಗೊಳಪಟ್ಟು ವರ್ತಿಸುವ ಕಾಂಗ್ರೆಸ್ ಸಂಘದ ಒಂದು ಕೂಟ (Session) ವನ್ನು ಚುಟುಕಿನಲ್ಲೇ ವರ್ಣಿಸುವೆವು. ಸುಮಾರು ಜುಲಾಯಿ ತಿಂಗಳಲ್ಲಿ ಕಾಂಗ್ರೆಸ್ ಕಮ್ಮಿಟಿಯವರು ಬರುವ ದಶಂಬರ ತಿಂಗಳ ಸಭೆಕಾರ್ಯವನ್ನು ನಿರ್ದೋಷವಾಗಿ ನೆರವೇರಿಸುವ ಏರ್ಪಾಡು ಮಾಡಲಿಕ್ಕೆ ಸಭೆ ಕೂಡುತ್ತಾರೆ. ಈ ಸಭೆಯಲ್ಲಿ ಚೆಯರ್ಮನ್ ಸಹಿತ ಒಂದು ರಿಸೆಪ್ಶನ್ ಕಮ್ಮಿಟಿ ಯಾ ಆಮಂತ್ರಣ ಸಭೆಯನ್ನು ನೇಮಿಸುತ್ತಾರೆ. ಒಂದು ಯೋಗ್ಯವಾದ ಸ್ಥಳವನ್ನಾರಿಸಿ ಕಾಂಗ್ರೆಸ್ ಮಂಟಪವನ್ನು ಕಟ್ಟಿಸುವದು, ನಾಲ್ಕು ಕಡೆಗಳಿಂದ ಬರುವ ಪ್ರತಿನಿಧಿಗಳನಸ್ತಿಗೂ ಇತರ ಸೌಖ್ಯಕ್ಕೂ ತಕ್ಕ ಅವಕಾಶ ಮಾಡುವದು, ಮತ್ತು ಶಾಲೆ ಹುಡುಗರಲ್ಲಿ ಯೋಗ್ಯರನ್ನು ತೆಗೆದು ತಮಗೆ ಸಹಾಯಕವಾಗಿ ಅವರ ಒಂದು ಇಚ್ಛಿತ ಫೌಜನ್ನು ನಿರ್ಮಿಸುವದು. ಇವೇ ಮೊದಲಾದವುಗಳು ಈ ರಿಸೆಪ್ಶನ್ ಕಮಿಟಿಯ ಕರ್ತವ್ಯಗಳು. ಈ ಫೌಜಿಗೆ ಬೇರೆ ಸೈನ್ಯದಂತೆ ಕೆಪ್ಟನ್ ಲೆಫ್ಟಿನೆಂಟ್ ಮುಖ್ಯರಾದ ಉದ್ಯೋಗಸ್ಥರು ಇದ್ದು ಪರಸಂಸ್ಥಾನಗಳ ಪ್ರತಿನಿಧಿಗಳು ಅನಾಯಾಸವಾಗಿರುವಂತೆ ಅನೇಕ ವಿಷಯಗಳಲ್ಲಿ ಈ ವಿದ್ಯಾರ್ಥಿಗಳ ದಳವು ಜೋಪಾಡುತ್ತದೆ. ಕಾಂಗ್ರೆಸ್ ಸಭೆಯ ಮುಂದೆ ಯಾವ ವಿಷಯಗಳನ್ನು ತರಬೇಕೆಂದು ಇಂಡಿಯನ್ ಕಾಂಗ್ರೆಸ್ ಕಮ್ಮಿಟಿಯವರು ಸ್ಥಳೀಯ ಕಮ್ಮಿಟಿಗಳನ್ನು ಕೇಳಿ, ಈ ಕಮ್ಮಿಟಿಗಳು ಸೂಚಿಸಿದ ವಿಷಯಗಳಲ್ಲಿ ಮುಖ್ಯವಾದವುಗಳನ್ನು ಆರಿಸುತ್ತಾರೆ. ನವಂಬರ, ದಶಂಬರ ತಿಂಗಳುಗಳಲ್ಲಿ ದೇಶದ ಆಯಾ ಜಿಲ್ಲೆ, ಸಂಸ್ಥಾನಗಳ ಮುಖ್ಯ ಪಟ್ಟಣಗಳ ನಿವಾಸಿಕರು ತಮ್ಮ ಪ್ರತಿನಿಧಿಗಳನ್ನು ಚುನಾಯಿಸಿ ಕಾಂಗ್ರೆಸ್ ಸಭೆಗೆ ಕಳುಹಿಸುವರು. ಸಭೆಯು ಕ್ರಿಸ್ತಮಸ್ ಹಬ್ಬದ ರಜಾದಿವಸಗಳಲ್ಲಿ ದೇಶದ ಮುಖ್ಯ ಪಟ್ಟಣಗಳಲ್ಲೊಂದರಲ್ಲಿ ನೆರೆಯುವದು.

ಮೊದಲನೇ ದಿನ ಆಮಂತ್ರಣ ಸಭೆಯ ಅಧ್ಯಕ್ಷನು ನೆರೆದ ಸಭಿಕರೆಲ್ಲರನ್ನು ಕುರಿತು, ಆದರಪೂರ್ವಕ ಸ್ವಸ್ತಿಸ್ವಾಗತ ವಚನಗಳಿಂದ ಭಾಷಣ ಕೊಡುತ್ತಾನೆ. ಈ ವಕ್ತೃತೆ ತೀರಿದೊಡನೆ ಸಭಾಧ್ಯಕ್ಷರನ್ನು ಯಥಾವಿಧಿಯಿಂದ ಅಗ್ರಾಸನಕ್ಕೆ ನಿಯಮಿಸುವರು. ಇವರು ದೇಶಾಭ್ಯುದಯಪರವಾದ ವಿಷಯಗಳನ್ನು ಹಿಡಿದು ತಮ್ಮ ಪ್ರಾರಂಭದ ಭಾಷಣಕೊಡುವರು. ಇದಾದಕೂಡಲೆ ಕಾಂಗ್ರೆಸಿನ ಮುಂದೆ ತರಬೇಕಾದ ವಿಷಯಗಳನ್ನು ಚರ್ಚಿಸಲಿಕ್ಕಾಗಿ ಒಂದು ಸಬ್ಜೆಕ್ಟ್ ಕಮ್ಮಿಟಿ ನೇಮಕವಾಗುತ್ತದೆ. ಈ ಕಮ್ಮಿಟಿಯಲ್ಲಿ ದೇಶದ ಎಲ್ಲಾ ಭಾಗಗಳ ಪ್ರತಿನಿಧಿಗಳಿರುವಂತೆ ಕಾಂಗ್ರೆಸಿನಲ್ಲಿ ನೆರೆದ ಆಯಾ ಸೀಮೆಗಳ ಪ್ರತಿನಿಧಿಗಳು ತಮ್ಮ ಸಂಸ್ಥಾನಗಳ ಕಡೆಯಿಂದ ತಮ್ಮೊಳಗಿನ ಯೋಗ್ಯ ಗೃಹಸ್ಥರ ಹೆಸರುಗಳನ್ನು ಕಳುಹಿಸುತ್ತಾರೆ. ಈ ಹೆಸರುಗಳನ್ನು ನಮೂದಿಸಿರುವ ಕಾಗದ ತುಂಡುಗಳೆಲ್ಲಾ ಒಟ್ಟಾದೊಡನೆ ಅವುಗಳನ್ನು ಓದಿ ಹೇಳುವರು. ಹೀಗೆ ಈ ಕಮ್ಮಿಟಿ ಏರ್ಪಡಲು ಮೊದಲನೇ ದಿನದ ಕಾರ್ಯ ಮುಗಿಯಿತು.

ಅದೇ ದಿನ ರಾತ್ರಿ ಈ ಸಬ್ಜೆಕ್ಟ್ಸ್ ಕಮ್ಮಿಟಿಯು ಕೂಡಿ ಮರುದಿನ ಕಾಂಗ್ರೆಸ್ ಮುಂದಿಡಬೇಕಾದ ವಿಷಯಗಳನ್ನು ಸಾಂಗವಾಗಿ ಚರ್ಚಿಸಿ ಆ ಸಭೆಯ ಮಂಜೂರಾತಿಗೆ ಠರಾವುಗಳ ಮಸೂದೆಗಳನ್ನು ತಯ್ಯಾರಿಸುತ್ತಾರೆ. ಇವರೇ ಸಭೆಯಲ್ಲಿ ಯಾರ್ಯಾರು ಯಾವ್ಯಾವ ವಿಷಯ ಭಾಷಣಕೊಡಬೇಕೆಂದು ನಿಶ್ಚಯಿಸಿ ಅಂತವರನ್ನು ನೇಮಿಸುತ್ತಾರೆ. ಕಾಂಗ್ರೆಸ್ ಸಭೆಯಲ್ಲಿ ನಡಿಯುವ ಕೆಲಸದ ಮುಖ್ಯಭಾಗವು ಈ ಕಮ್ಮಿಟಿಯವರದಾಗಿದೆ.

ಎರಡನೇ ದಿನ ಕಾಂಗ್ರೆಸ್ ಸಭೆ ಕೂಡಿದಾಗ ದಿನದ ನಿಯಮಿತ ಕಾರ್ಯಗಳನ್ನು ಆರಂಭಿಸುವ ಮೊದಲು ಸಭೆಯ ಭಾಷಣದ ನಿಯಮಗಳನ್ನು ಓದಿ ಹೇಳುವರು. ಇವುಗಳ ಸಾರಾಂಶವೇನಂದರೆ, ಒಬ್ಬ ವಕ್ತೃವೂ ತನ್ನ ಭಾಷಣಕ್ಕೆ ಪ್ರೆಸಿಡೆಂಟರು ವಿಧಿಸಿದ ಕಾಲವನ್ನು ಅವರ ಅಪ್ಪಣೆ ವಿನಹಾ ಮೀರಬಾರದು. ಸಬ್ಜೆಕ್ಟ್ ಕಮ್ಮಿಟಿಯಿಂದ ಪ್ರಸಂಗಿಸಲಿಕ್ಕೆ ನೇಮಕ್ಕೊಳಗದ ಒಬ್ಬ ಸಭಿಕನು ಮಾತನಾಡಬೇಕಾದರೆ ಪ್ರೆಸಿಡೆಂಟರ ಅಪ್ಪಣೆ ಪಡೆಕೊಳ್ಳಬೇಕು. ಸಬ್ಜೆಕ್ಟ್ಸಕಮ್ಮಿಟಿಯವರು ನಿಶ್ಚಯಿಸಿದ ವಿಷಯಗಳನ್ನು ಮೊದಲು ಸಭೆಯಲ್ಲಿ ಚರ್ಚಿಸಿ ಪಾರಗಾಣಿಸುವರು. ನಂತರ ಹೊಸ ವಿಷಯಗಳನ್ನು ಚರ್ಚಿಸಲಿಕ್ಕೆ ಯಾವ [illegible] ಸಭಿಕನು ಪ್ರೆಸಿಡೆಂಟರಿಗೆ ಸಭೆಯ ಆರಂಭದಲ್ಲಿ ಸೂಚಿಸದಿದ್ದರೆ ಇವರು ಸಭೆಗೆ ಆ [illegible] ಸೂಚನೆಗೆ ಸಭಿಕರ ಅನುಮತಿ ಉಂಟೆಂತ ಕಂಡುಬಂದರೆ ಆ ವಿಷ

[illegible] ಪ್ರಸಂಗಿಸಲಾಗುವದು. [illegible] [illegible] ಮುಂದಿಡಲಾಗುವದು. ಆ ರಾತ್ರಿಯು [illegible] ಕಮ್ಮಿಟಿಯವರು ಮರುದಿನದ ವಿಷಯವನ್ನು ಸಿದ್ಧಪಡಿಸುವರು. ಮೂರನೇ [illegible] ದುವ ಸಭೆಯು ಹಿಂದಿನ ರಾತ್ರಿ ಕಮಿಟಿಯವರು ತಯಾರಿಸಿದ ಕೇಸವನ್ನು [illegible] ಲ್ಕನೇ ದಿನವೂ ಹೀಗೆಯೇ ವಿಷಯಗಳನ್ನು ಚರ್ಚಿಸಿ ಠರಾವುಗಳು ಮಂಜೂರಾದನಂತರ [illegible] ಡೆಂಟರು ತಮ್ಮ ಮುಕ್ತಾಯದ ಭಾಷಣ ಕೊಡುವರು. ಇದಾದನಂತರ ಚಕ್ರವರ್ತಿಯರಿಗೂ ರಾಜ ಕುಟುಂಬಕ್ಕೂ ವ್ಯಾಸರಾಯ ದೊರೆಗಳಿಗೂ ಸಭೆ ಕೂಡಿದ ಸಂಸ್ಥಾನದ ಗವರ್ನರ ದೊರೆಗೂ ಕಾಂಗ್ರೆಸ್‌ಪಿತೃಹ್ಯೂಮ್ ದೊರೆ, ಮಿ. ದಾದಾಭಾಯಿ ನೌರೋಜಿ, ಮುಂತಾದ ವಿಲಾಯತಿಯಲ್ಲಿಯ ಕಾಂಗ್ರೆಸ್ ಹಿತೈಷಿಗಳಿಗೂ ಜಯ ಜಯ ಘೋಷದಿಂದ ಸಭೆಯು ಸಮಾಪ್ತವಾಗುವದು.

ಈ ಕಾಂಗ್ರೆಸ್ ಸಭೆಯಿಂದ ಪ್ರಜೆಗಳಿಗೆ ಯಾವ ಪ್ರಯೋಜನ ಸಿಕ್ಕಿಯದೆಂಬ ಪ್ರಶ್ನೆಯನ್ನು ಸ್ವಲ್ಪಮಟ್ಟಿಗೆ ಚರ್ಚಿಸುವಾ. ದೇಶದ ಭಿನ್ನಜಾತಿ ಕುಲಗಳ ಮುಖಂಡರೊಳಗೆ ಸಹಾನುಭೂತಿ ಹುಟ್ಟಿ ರಾಜಕೀಯ ವಿಷಯಗಳಲ್ಲಿ ತಾವು ಒಂದೇ, ತಮ್ಮ ಮಾತೃಭೂಮಿಯೊಂದೇ ಎಂದು ಅವರ ಅರಿತಿದು, ಈ ಕಾಂಗ್ರೆಸ್ ಸಭೆ ಕೈಗೂಡಿ ಬಂದಿತೆಂಬದು ದೇಶಕ್ಕೆ ದೊಡ್ಡ ಪ್ರಯೋಜನ. ಕಾಂಗ್ರೆಸ್ ಇನ್ನೂ ಬಾಲ್ಯ ಪ್ರಾಯವನ್ನು ಮೀರಿಲ್ಲವೆಂತ ಹೇಳಬೇಕಾದ್ದರಲ್ಲಿ ನಾವು ಇಷ್ಟು ಬೇಗ ಈ ಸಭೆಯಿಂದ ದೊಡ್ಡ ದೊಡ್ಡ ಕಾರ್ಯಗಳನ್ನು ಅಪೇಕ್ಷಿಸಲಿಕ್ಕಾಗುವದಲ್ಲ. ಮೊದಲು ಈ ಸಭೆಯನ್ನು ಪರವಾದಿಗಳು ಮೂದಲಿಸುತ್ತಿದ್ದರು. ನಂತರ ಸಭೆಯಲ್ಲಿ ವಿಶ್ವವಂತರೂ ಗುಣವಂತರೂ ಇದ್ದು ಸಭೆ ಬೆಳೆಯುವದನ್ನು ಕಂಡು ಅದನ್ನು ಬಲವಾಗಿ ಎದುರಿಸಿ ರಾಜದ್ರೋಹಿ ಸಭೆ ಮುಂತಾದ ಮರಾಭಿಧಾನಗಳನ್ನಿಟ್ಟರು. ಈ ಸ್ಥಿತಿಯೂ ದಾಟಿ ಈಗ ಕಾಂಗ್ರೆಸ್ ಸಭೆಯನ್ನು ಎಲ್ಲರೂ ಮನ್ನಿಸ ತೊಡಗಿದ್ದಾರೆ. ಈ ಸಭೆಯು ವಿಲಾಯತಿಯಲ್ಲಿ ಒಂದು ಕಮ್ಮಿಟಿಯನ್ನು ಸ್ಥಾಪಿಸಿ ಅದರ ಮುಖಾಂತರವೂ ಆಗ್ಯಾಗ ಇಲ್ಲಿಂದ ಕಳುಹಿಸಲ್ಪಡುವ ಸಭೆಯ ಮುಖ್ಯ ಪ್ರತಿನಿಧಿಗಳ ಮುಖಾಂತರವೂ ವಿಲಾಯತಿ ಜನರಿಗೆ ಹಿಂದುಸ್ಥಾನದ ಧೀನಸ್ಥಿತಿಯನ್ನು ತಿಳಿಯ ಹೇಳಿ ತಕ್ಕ ಏರ್ಪಾಡುಗಳನ್ನು ನೆರವೇರಿಸುವ ಪ್ರಯತ್ನ ನಡಿಸುತ್ತಾರೆ.

ಸರ್ಕಾರದ ಕೈಯಿಂದ ಸಭೆಯು ದೇಶಕ್ಕೆ ಸಂಪಾದಿಸಿದ ಪ್ರಯೋಜನಗಳು ಯಾವವೆಂದರೆ:— (1) ನ್ಯಾಯ ವಿಧಾಯಕ ಸಭೆಗಳಿಗೆ (Legislative Councils) ಸಭಿಕರನ್ನು ಚುನಾಯಿಸುವ ವಿಷಯ ಜನರಿಗೆ ಸ್ವಲ್ಪ ಮಟ್ಟಿಗೆ ಸಿಕ್ಕಿದ ಸ್ವಾತಂತ್ರ್ಯ.

2) ಹಿಂದುಸ್ಥಾನದ ರಾಜ್ಯಭಾರದ ಖರ್ಚಿನ ವಿಷಯದಲ್ಲಿ ತನಖಿ ನಡಿಸಲಿಕ್ಕೆಂತ [illegible] ರ್ನಮೆಂಟಿನವರಿಂದ (Welby Commission) ವೆಲ್ಬಿ ಕಮ್ಮಿಶನ್ ಎಂಬ ಒಂದು ಕಮ್ಮಿಶನ್ ನೇಮಕ ಪಟ್ಟು ಅದರಿಂದ ಹಿಂದುಸ್ಥಾನದ ಪಾಲಿಗೆ ಬೀಳುವ ವಿಲಾಯತಿ [illegible] 257,000 ಪೌಂಡು ಕಡಿಮೆಯಾಯಿತು.

3) ಹಾಗೆಯೇ ಹಿಂದುಸ್ಥಾನದ ಕ್ಷಾಮಕಾಲಗಳ ವಿಷಯ ವಿಮರ್ಶೆ ನಡಿಸಲಿಕ್ಕೆ ಒಂದು ಕಮ್ಮಿಶನ್ ಏರ್ಪಟ್ಟಿತು.

4) ವಾಯುವ್ಯ ಸಂಸ್ಥಾನದಲ್ಲಿಯೂ ಪಂಜಾಬಿನಲ್ಲಿಯೂ ನ್ಯಾಯ ವಿಧಾಯಕ ಸಭೆಗಳು ಏರ್ಪಟ್ಟವು.

5) ಕೆಲವು ಜಿಲ್ಹೆಗಳಲ್ಲಿ ಕ್ರಿಮಿನಾಲ್ ಕೋರ್ಟುಗಳಲ್ಲಿ ಜ್ಯೂರಿ ಸಹಿತ ತಕ್ಷೀರ ತನಖಿ ನಡಿಸುವ ಪದ್ಧತಿಯು ಪ್ರಚಾರಕ್ಕೆ ಬಂತು.

6) ಉಪ್ಪಿನ ಮೇಲಿನ ಸುಂಕವು ತಗ್ಗಿತು.

7) (income tax) ಆದಾಯ ತೆರಿಗೆಗೆ ಒಳಪಡುವ ಮೊಬಲಗನ್ನು ಹೆಚ್ಚಿಸಿದರು. ಇವುಗಳ ವಿನಹಾ ಈ ಸಭೆಯು ಬೆಳೆದು ಕೆಲವು ಶಾಖೆಗಳನ್ನು ಬಿಟ್ಟಿದೆ. ವಸ್ತು ಪ್ರದರ್ಶನ (Industrial exhibition), ಔದ್ಯೋಗಿಕ ಸಭೆ (Industrial conference), ಸಾಮಾಜಿಕ ಸಭಾ (Social conference), ಮುಂತಾದವುಗಳೂ ವರ್ಷಂಪ್ರತಿ ಕಾಂಗ್ರೆಸ್ ಸಭೆ ನೆರೆವಲ್ಲಿಯೇ ಕೂಡಿ ದೇಶಾಭಿವೃದ್ಧಿಯ ಬೇರೆ ಬೇರೆ ವಿಷಯಗಳನ್ನು ಚರ್ಚಿಸುತ್ತ [illegible] ಇತ್ತಲಾಗೆ ಕಾಂಗ್ರೆಸ್ ಸಭೆಯಲ್ಲಿ ಭಿನ್ನಾಭಿಮತಗಳು ಹುಟ್ಟಿ ನೈಮಸ್ತ ಮತ್ತು [illegible] ಪಕ್ಷಗಳೆಂದು ಎರಡು ತಂಡಗಳು ಹುಟ್ಟಿ ಅವರೊಳಗಿನ ಭೇದಗಳಿಂದ ಸಭೆಯು [illegible] [illegible] ಸದಿಕೆಯು ಸಹ ಕೆಲವರಲ್ಲಿ ತಲೆದೋರಿತು. [illegible] ವರುಷದ ಸಭೆಯು ಹಿಂದುಸ್ಥಾನದ ಅಪ್ರತಿಮವೀರ [illegible] ದಾದಾಭಾಯಿ [illegible] ಅಧ್ಯಕ್ಷತೆ [illegible] [illegible] ಸ್ ಸಭೆಯು ಬಲವಾಗಿ [illegible] ಹಿಂದಾಗಿಸದೆ ತನ್ನ [illegible]

[illegible] ಬ್ರಿಟಿಷ ಐಕ್ಯತಾ ಸಾಮಾಜಿಕಗಳಲ್ಲಿ [illegible] ಸಮೃದ್ಧಿ [illegible] ಶ್ರಮವನ್ನು ವಿಯೋಗಿಸುವ ಈ ಭರತಖಂಡದಲ್ಲಿ ದಾದಾಭಾಯಿ ಎಂಬ ದೇಶಾಭಿ ಮಾನಿಗಳು ಇನ್ನೂ ವೃದ್ಧಿ ಹೊಂದಿ ಈ ಸಭೆಯನ್ನು ಬಲಪಡಿಸಿ ಬ್ರಿಟಿಷ ಸರ್ಕಾರಕ್ಕೂ ಭಾರತೀಯ ಪ್ರಜೆಗಳಿಗೂ ಮಧ್ಯಸ್ಥ ಸ್ಥಾನವನ್ನು ವಹಿಸಿ ಎರಡು ಪಕ್ಷಕ್ಕೂ ಮೇಲನ್ನೆಸಗಲಿ ಎಂದು ಕರುಣಾಸಿಂಧುವನ್ನು ಕೃತಜ್ಞಪೂರ್ವಕ ಪ್ರಾರ್ಥಿಸುವೆವು. *S. A. K.*

ದಾದಾಭಾಯಿ ನವರೋಜಿಯವರ ಚರಿತ್ರ.

ಕಾಂಗ್ರೆಸ್ ಸಭೆಯ ಅಧ್ಯಕ್ಷರಾಗಿ ಮೂರನೇ ಸಲ ನೇಮಿಸಲ್ಪಟ್ಟು ವಿಲಾಯತಿಯಿಂದ ತೆರಳಿದ ದಾದಾಬಾಯಿ ನವರೋಜಿಯವರು ಬೊಂಬಾಯಿಯಲ್ಲಿ ಇಳಿಯುವ ಮೊದಲು ಬೊಂಬಾಯಿ ಗಜೇಟ್ ಪತ್ರದ ಪ್ರತಿನಿಧಿಯು ಹಡಗಿನಲ್ಲಿಯೇ ಇವರ ಭೇಟಿಗೆ ಹೋಗಿ ಮಾತು ನಡಿಯುವಾಗ "ಇನ್ನೊಮ್ಮೆ (ವಿಲಾಯತಿಯ) ಪಾರ್ಲಿಮೆಂಟ ಮೆಂಬರರಾಗುವ ಅಪೇಕ್ಷೆಯಿದೆಯೋ" ಎಂದು ಕೇಳಿದನು. 82 ವರುಷದ ವೃದ್ಧನು ಕಣ್ಣುಗಳನ್ನು ಮಿನುಗಿಸುತ್ತಾ ಕೊಟ್ಟ ಪ್ರತ್ಯುತ್ತರವೇನಂದರೆ:—"ನಾನು ಮುದುಕ ವಕ್ತೃತೆಗಳು ಇನ್ನು ನನಗೆ ತಕ್ಕದಲ್ಲ ಆದರೂ (ಪಾರ್ಲಿಮೆಂಟಿನ) ಸಾಮಾನ್ಯರ ಸಭೆಯಲ್ಲಿ ನನ್ನಿಂದ ಭರತವರ್ಷಕ್ಕೆ ಸ್ವಲ್ಪಮಟ್ಟಿಗೂ ಪ್ರಯೋಜನ ಶಕ್ಯವಿದ್ದರೆ ನನ್ನನ್ನು ಪಾರ್ಲಿಮೆಂಟಿಗೆ ಕರೆದಲ್ಲಿ ನಾನು ಉಪೇಕ್ಷಿಸಲಾರೆನು. ಅಯ್ಯೋ! ನಿಜ ಆದರೂ ದೇಶಕ್ಕೋಸ್ಕರ ಕೈಲಾದಷ್ಟು ಮಾಡಿದ್ದೇನೆ ಇನ್ನು ನನ್ನಲ್ಲಿ ಸ್ವಲ್ಪ ಶಕ್ತಿಯಿದೆ ದೇವರು ಅತಿದಯಾಳು." ನವರೋಜಿಯವರ ಇಡೀ ಜೀವನ ಚರಿತ್ರೆಯು ಈ ವಾಕ್ಯದ ವ್ಯಾಖ್ಯಾನವನ್ನ ಬಹುದು. ಈ ಮಾತುಗಳಲ್ಲಿ ತೋರುವ ಭಾವವು ಅವರನ್ನು ಎಲ್ಲಾ ಕೃತ್ಯಗಳಲ್ಲಿಯೂ ಪ್ರೇರಿಸಿತು. ರಾಜಕೀಯ ವಿಷಯಗಳಲ್ಲಿ ಇವರ ಅಭಿಮತಗಳನ್ನು ಸ್ವೀಕರಿಸದವರೂ ಇವರಲ್ಲಿ ಆವಾಸಿಸುವ ಮಹತ್ತಾದ ದೇಶವಾತ್ಸಲ್ಯವನ್ನೂ ನಿಷ್ಕಾಮ ಕರ್ಮಪರಾಯಣತೆಯನ್ನೂ, ಆತ್ಮನಿವೇದನವನ್ನೂ ನಿಷ್ಕಳಂಕವಾದ ಪ್ರಾಮಾಣಿಕತೆಯನ್ನೂ, ಅಕೃತ್ರಿಮ ರಾಜಭಕ್ತಿಯನ್ನೂ, ಯಥಾರ್ಥವಾಗಿ ಶ್ಲಾಘಿಸುವರು ಕಾಂಗ್ರೆಸಿನಲ್ಲಿ ವಿಶ್ವಾಸವಿಲ್ಲದ ಆಂಗ್ಲೋ ಇಂಡಿಯನರೂ ಕಾಂಗ್ರೆಸ್ ಸಭೆಯ ಮೂಲಾಧಾರವಾದ ನವರೋಜಿಯವರನ್ನ ಸನ್ಮಾನಿಸುವರು. ದೇಶದಲ್ಲಿ ವಿದ್ಯಾಬುದ್ಧಿ ಧನಸಂಪನ್ನರೆನಿಸುವ ಪಾರ್ಶಿಕುಲದಲ್ಲಿ ಹುಟ್ಟಿ ಪಾಶ್ಚಾತ್ಯ ವಾಙ್ಮಯ ಶಾಸ್ತ್ರಗಳಲ್ಲಿ ನಿಪುಣರೆನಿಸಿ, ತನ್ನ ಜೀವಕಾಲದಲ್ಲಿ ಅವಲಂಬಿಸಿದ ವೃತ್ತಿಗಳಲ್ಲಿ ಸಂಪಾದಿಸಿದ ಧನಜ್ಞಾನಗಳನ್ನು ಫಲಾಪೇಕ್ಷೆಯಿಲ್ಲದೆ ಮಾತೃಭೂಮಿಯ ಸೇವೆಯಲ್ಲಿ ವಿನಿಯೋಗಿಸಿದ ಈ ಮಹರ್ಷಿಯ ವೃದ್ಧರ ಪುಣ್ಯಚರಿತ್ರೆಯು ಎಂದೆಂದಿಗೂ ವಾಚಕರಿಗೆ ಪಲಕವೇ. ಪ್ರಜಾಸೇವೆಯಿಂದ ಜನರ ಕೃತಜ್ಞತೆಗೆ ಪಾತ್ರರಾಗಿ ಸ್ವಯಂ ವಿದ್ಯಾಗುಣಸಂಪನ್ನರಾದ ಮಿ ಗೋಖಲೆಯವರು ಯಾರನ್ನು ಲೋಕದ ಮಹಾತ್ಮರಲ್ಲಿ ಒಬ್ಬರೆಂದು ಶ್ಲಾಘಿಸಿದರೋ ಅಂಥಾ ದಾದಾಬಾಯಿಯವರ ಚರಿತ್ರೆಯು ವಿಶೇಷವಾಗಿ ದೇಶಾನುರಾಗದ ಆವಶ್ಯಕತೆ ಇರುವ ಈ ಸಂಧಿಯಲ್ಲಿ ನಿತ್ಯಸ್ಮರಣೀಯವು. ಅವರ ಜನ್ಮತಿಥಿಯನ್ನು ಪ್ರಜೆಗಳು ಆಚರಿಸುವಂತೆ ಗಾಂಧಿಬಾಯಿಯ ಜನ್ಮದಿನವನ್ನು ದೇಶದಲ್ಲಿ ಆಚರಿಸಿ ಇವರು ಪ್ರಜಾನಾಯಕರೆಂದು ಪ್ರಕಾಶಗೊಳಿಸಿದರು.

ಕ್ರಿ ಶ 1825ನೇ ಸಪ್ಟಂಬರ ನಾಲ್ಕನೇ ದಿನ ಬೊಂಬಾಯಿ ಪಟ್ಟಣದಲ್ಲಿ ಪಾರ್ಸಿ ಅರ್ಚಕ ಕುಲದಲ್ಲಿ ದಾದಾಬಾಯಿಯವರು ಜನಿಸಿದರು ಇವರ ನಾಲ್ಕನೇ ವಯಸ್ಸಿನಲ್ಲಿ ತಂದೆಯು ಕಾಲವಾದರು. ಆದರೆ ತಾಯಿಯು ಬಹಳ ಆಸ್ಥೆಯಿಂದ ಇವರನ್ನು ಸಾಕಿದರು. ಇವರ ವಿದ್ಯಾಭ್ಯಾಸವು ಮಾವನ ಕೈಯಿಂದ ಸಾಗಿತು ತಾನು ಕಲಿಯುತ್ತಿದ್ದ ಎಲಿಫಿನ್‌ಸ್ಟನ್ ಇನ್ಸ್‌ಟಿಟ್ಯೂಷನ್ (Elphinstone Institution ಈಗ ಇದು ಕೋಲೇಜ ತರಗತಿಯನ್ನು ಹೊಂದಿಯದೆ) ಎಂಬ ಶಾಲೆಯಲ್ಲಿ ತನ್ನ ಪಾಂಡಿತ್ಯದಿಂದ ಹೆಚ್ಚು ಇನಾಮುಗಳನ್ನು ಪಡೆದರು. ದಾದಾಬಾಯಿಯ ಚಾತುರ್ಯಕ್ಕೆ ಆ ಕಾಲದ ಹ್ಯಾಕೋರ್ಟು ನ್ಯಾಯಾಧೀಶರೂ ವಿದ್ಯಾಸಭೆಯ ಅಧ್ಯಕ್ಷರೂ ಆದ Sir Eskine Perry ಎಂಬವರು ಪ್ರೋತ್ಸಾಹಿತರಾಗಿ ಯುವಕನನ್ನು ಯಜಮಾನರು ವಿಲಾಯತಿಗೆ ಬ್ಯಾರಿಷ್ಟರ ವೃತ್ತಿ ಕಲಿಯಲಿಕ್ಕೆ ಕಳುಹಿಸುವದಾದರೆ ಅರ್ಧ ಖರ್ಚನ್ನು ತಾನು ಕೊಡುವೆನೆಂದು ಮಾತು ಕೊಟ್ಟರು. ಆದರೆ ಯುವಕನ ಕುಟುಂಬದವರು ಇವನು ವಿಲಾಯತಿಗೆ ಹೋದರೆ ಜಾತಿವಿರುದ್ಧ ಕಟ್ಟಳೆಗಳನ್ನನುಸರಿಸಿ [illegible]ನಾದಾನೆಂದು ಹೆದರಿದ್ದರಿಂದ ಈ ಮಾರ್ಗವೂ ತಪ್ಪಿತು. ವಿದ್ಯಾಭ್ಯಾಸವು ತೀರಿದಾಗ ತಾನು ಕಲಿತ ಶಾಲೆಯಲ್ಲಿಯೇ ಮೊದಲು ಅಸಿಸ್ಟಾಂಟ ಮಾಸ್ತರ ಕೆಲಸವನ್ನೂ ಸಂ[illegible] (professor) ಪ್ರೊಫೆಸರ ಪದವಿಯನ್ನೂ ಹೊಂದಿದರು. ದಾದಾಬಾಯಿಯವರು ಭಾರತೀಯರಲ್ಲಿ ಮೊದಲನೇ ಪ್ರೊಫೆಸರು. [illegible] ಇವರ ಲೋಕೋಪಕಾರದ ಜೀವನಕ್ಕೆ ಮು[illegible] ವಿದ್ಯಾರ್ಥಿಗಳ ಅಭಿವೃದ್ಧಿಗಾಗಿ Students' Literary and scienti[illegible] [illegible] ಸ್ಥಾಪಿಸಿದರು. [illegible] ಮರಾಠಿ ಮತ್ತು ಗುಜರಾತಿ ಭಾಷೆಯಲ್ಲಿ ಉಪನ್ಯಾಸಗಳು ಆದವು. ಸ್ಟೂಡೆಂಟ್ಸ್ ಲಿಟರರಿ ಮಿಸ್ಸಲೆನಿ ಎಂಬ ಇಂಗ್ಲೀಷ ಪತ್ರವನ್ನೂ ರಾಸ್ತ ಗೋಫ್ತರ ಎಂಬ ಗುಜರಾತಿ ಪತ್ರವನ್ನೂ ಪ್ರಕಾಶಿಸಿದರು ಮತ್ತು ಇದೇ ಸಭೆಯ ಆಡಳಿತೆಯಲ್ಲಿ ಬೊಂಬಾಯಿಯ ಮೊದಲನೇ ಬಾಲಿಕಾ ಪಾಠಶಾಲೆಗಳು ತಲೆಎತ್ತಿದವು. ಈ ಸಭೆಯೂ ಶಾಲೆಗಳೂ ಇನ್ನೂ ಬಾಳಿ ಬೆಳೆದಿವೆ ಇರಾನಿ ಫಂಡ್, ಪಾರ್ಸಿ ತಾಲೀಂಖಾನೆ (Gymnasium) ವಿಕ್ಟೋರಿಯಾ ಅಲ್ಬರ್ಟ ಮ್ಯೂಝಿಯಮ್, ವಿಧವಾ ವಿವಾಹಸಭೆ ಇವೇ ಮೊದಲಾದ ಪ್ರಜಾಹಿತಕರ ಸಂಘಗಳು ದಾದಾಭಾಯಿಯವರ ಪರಿಶ್ರಮದಿಂದ ಸ್ಥಾಪಿತವಾದವು. ತನ್ನ ಜೀವಮಾನದ ಈ ಕಾಲವು ಸ್ಮೃತಿಗೆ ಬಂದರೆ ಲೋಕೋಪಕಾರ ಧರ್ಮವನ್ನು ತಾನು ನೆರವೇರಿಸಿದ್ದನ್ನ ಕಂಡು ಮನಸ್ಸು ಸಂತೋಷದಿಂದ ಉಬ್ಬುವದೆಂದು ಇವರು ಹೇಳುವದು ವಾಸ್ತವಿಕವೇ.

1856ನೇ ಇಸವಿಯಲ್ಲಿ ನವರೋಜಿಯವರು ಈ ಹುದ್ದೆಗೆ ರಾಜೀನಾಮೆ ಕೊಟ್ಟು ಆಗ ವಿಲಾಯತಿಯಲ್ಲಿ ಸ್ಥಾಪಿತವಾದ ಮೊದಲನೇ ನೇಟಿವ್ ಭಂಡಸಾಲೆಯಾದ ಕಾಮಾ ಎಂಡ್ ಕೊ ಎಂಬ ಸಂಸ್ಥೆಯಲ್ಲಿ ಪಾಲುಗಾರರಾದರು ಅಲ್ಲಿ ಇಂಡಿಯನ್ ಸಿವಿಲ್ ಸರ್ವಿಸ್ ಪರೀಕ್ಷೆಯ ವಿಷಯವು ಇವರನ್ನು ಮೊದಲು ಆಕರ್ಷಿಸಿತು ಈಗ ಈ ಪರೀಕ್ಷೆ ತೆರಬೇಕೆಂದಿರುವವರು ವಿಲಾಯತಿಗೆ ಹೋಗ ಬೇಕು ಇದು ಹಿಂದುಗಳಿಗೆ ಕೆಲವು ವಿಧದಲ್ಲಿ ಬಹಳ ಸಂಕಷ್ಟಕರವಾದ್ದರಿಂದ ಈ ಪರೀಕ್ಷೆಯನ್ನು ಎರಡು ದೇಶಗಳಲ್ಲಿಯೂ ಏಕಕಾಲದಲ್ಲಿ ನಿರ್ವಹಿಸ ಬೇಕೆಂದು ಸಾಧನೆ ನಡಿಸಿದರು. ಇದರ ಫಲವಾಗಿ 1892ನೇ ಇಸವಿಯಲ್ಲಿ ಪಾರ್ಲಿಮೆಂಟಿನ ಸಾಮಾನ್ಯ ಸಭೆಯವರು ತಾವು ಈ ಏರ್ಪಾಡಿಗೆ ಸಮ್ಮತಿಸುತ್ತೇವೆಂದು ದೃಢ ಪಡಿಸಿದರು. ಆದರೂ ಆ ಕಾಲದ ಇಂಗ್ಲಿಷ ಅಧಿಪತ್ಯವು ಈ ಸೂಚನೆಯನ್ನು ತಿರಸ್ಕರಿಸಿತು. ಪ್ರಸಕ್ತಕಾಲದಲ್ಲಿ ಬ್ರಿಟಿಷ ಪ್ರಜೆಗಳಿಗೆ ಹಿಂದೂ ದೇಶದ ಸ್ಥಿತಿಯ ವಿಷಯ ಏನೂ ತಿಳಿದಿರಲಿಲ್ಲವೆಂದು ನವರೋಜಿಯವರಿಗೆ ಕಂಡು ಬಂತು ಹಿಂದು ಪ್ರಜೆಗಳ ಸಂತಾಪಗಳು ಬ್ರಿಟಿಷ ಜನರ ಹೃದಯದಲ್ಲಿ ನಾಟಿದ ವಿನಹ ದೇಶಕ್ಕೆ ಶುಭವಾಗಲಾರದೆಂದು ತಿಳಿದು ಈ ಕಾರ್ಯಸಾಧನೆಗೆ ಇವರು ಮೊದಲು ಲಂಡನ್ ಇಂಡಿಯನ್ ಸೊಸ್ಯಾಟಿನಂತರ ಈಸ್ಟ್ ಇಂಡಿಯನ್ ಎಸ್ಸೋಸಿಯೇಶನ್ ಎಂಬ ಸಂಘಗಳನ್ನ ಸ್ಥಾಪಿಸಿ ಅಲ್ಲಿ ಪ್ರಭಾವಿತ ಗೃಹಸ್ಥರನ್ನು ಆಮಂತ್ರಿಸಿ ಭಾರತೀಯ ವಿಷಯಗಳನ್ನು ಹಿಡಿದು ಉಪನ್ಯಾಸಗಳನ್ನೂ ತರ್ಕವನ್ನೂ ನಡಿಸಿ ಇಂಗ್ಲಿಷ ಜನರಿಗೆ ಈ ವಿಷಯಗಳಲ್ಲಿ ಕುತೂಹಲವನ್ನುಂಟುಮಾಡಿದರು. ಆಗ್ಯಾಗ್ಯೆ ದೇಶದ ಬೇರೆ ಬೇರೆ ಕಡೆಗಳಲ್ಲಿ ಸಂಚರಿಸಿ ಭಾಷಣಗಳಿಂದ ಹಿಂದುಸ್ಥಾನದ ವಿಷಯಗಳನ್ನ ವಿವರಿಸಿ ಹೇಳಿದರು. ಪದೇಪದೇ ಇಂಗ್ಲೀಷ ಪತ್ರಗಳಲ್ಲಿ ಉದ್ದಿಷ್ಟ ವಿಷಯಗಳಲ್ಲಿ ಲೇಖನಗಳನ್ನು ಮುದ್ರಿಸಿದರು ಕಡೆಗೆ ಬ್ರಿಟಿಷ ಚಕ್ರಾಧಿಪತ್ಯದ ಭಾರತೀಯ ಮಂತ್ರಿ (Secretary of state for India)ಯ ಕೂಡ ಇದೇ ಸಂಗತಿಯಲ್ಲಿ ಪತ್ರವ್ಯವಹಾರವನ್ನ ನಡಿಸಿದರು. ಇವರು ಕಾಮಾ ಎಂಡ್ ಕೊ ಎಂಬವರಿಂದ ಆಗಲೆ ಸ್ಥಾಪಿಸಿದ ಸ್ವಂತ ವ್ಯಾಪಾರವು ಕವಡಿದಿತ್ತು. ಈ ದುರವಸ್ಥೆಯು ಅಲ್ಲಿದ್ದ ಒಬ್ಬ ಹಿಂದೂ ಗೃಹಸ್ಥನನ್ನು ದಿವಾಳಿಯಿಂದ ಪಾರು ಮಾಡಲಿಕ್ಕೆ ಪ್ರಯತ್ನಿಸಿದ್ದರಿಂದ ಸಂಭವಿಸಿತು. ಆದರೂ ನವರೋಜಿಯವರ ಪ್ರಾಮಾಣಿಕತೆಯು ಸರ್ವರಿಗೂ ತಿಳಿದಿದ್ದರಿಂದ ಈ ಕೇಡಿನಿಂದ ಪಾರಾಗಿ 1869ರಲ್ಲಿ ಬೊಂಬಾಯಿಗೆ ತೆರಳಿದರು.

ದೇಶಹಿತಕ್ಕಾಗಿ ಇವರು ಪಟ್ಟ ಶ್ರಮಕ್ಕೆ ಜನರು ತಮ್ಮ ಕೃತಜ್ಞತಾಭಾವವನ್ನ ತೋರ್ಪಡಿಸುವಂತೆ ಸಭೆ ಕೂಡಿಸಿ ದ್ರವ್ಯಾನುಕೂಲವನ್ನು ಉಚಿತವಾಗಿ ಕೊಟ್ಟರು ಈ ಹಣವನ್ನು ದಾದಾಭಾಯಿಯವರು ಲೋಕ ಹಿತಾರ್ಥ ಕರ್ತವ್ಯಗಳಲ್ಲಿ ವೆಚ್ಚ ಮಾಡಿದರೆಂದು ಬೇರೆ ಹೇಳ ಬೇಕಿಲ್ಲ

ಹಿಂದುಸ್ಥಾನದ ಆದಾಯ ವೆಚ್ಚಗಳ ವಿಷಯ ಪರಾಮರ್ಶೆ ನಡಿಸಲಿಕ್ಕೆ ಏರ್ಪಟ್ಟ ಫೋಸೆಟ್ ಕಮ್ಮಿಟಿ ಎಂಬ ಪಾರ್ಲಿಮೆಂಟಿನ ಕಮ್ಮಿಟಿಯ ಮುಂದೆ ಸಾಕ್ಷಿ ಕೊಡಲಿಕ್ಕೆ ಇವರು ಸ್ವಲ್ಪ ಕಾಲದಲ್ಲೇ ವಿಲಾಯತಿಗೆ ತೆರಳಬೇಕಾಯಿತು ಹಿಂದೂ ಜನರ ಆದಾಯವು ಸರಾಸರಿ ಒಬ್ಬನಿಗೆ ವರ್ಷಂಪ್ರತಿ 20 ರೂಪಾಯಿ ಪ್ರಕಾರ ಬರುವದೆಂದು ಕಮ್ಮಿಟಿಯ ಮುಂದೆ ನವರೋಜಿಯವರು ಹೇಳಲು ಕಮ್ಮಿಟಿಯವರು ಇದು ನಂಬತಕ್ಕದ್ದಲ್ಲವೆಂದು ನಕ್ಕರು ಆದರೆ ಇವರು ತನ್ನ ಮತವನ್ನ ಪ್ರತಿಪಾದಿಸಲಗತ್ಯವುಳ್ಳ ಐತಿಹಾಸಿಕ ಸಂಖ್ಯೆಗಳೂ ಸಂಗತಿಗಳೂ ಸ್ವಾಧೀನವಿಲ್ಲದೆ ಏನೊಂದು ಅಭಿಪ್ರಾಯವನ್ನು ಪ್ರಕಾಶ ಪಡಿಸುವವರಲ್ಲವಾದ್ದರಿಂದಲೂ ಹಿಂದುಸ್ಥಾನದ ದಾರಿದ್ರ್ಯದ ವಿಶಯವನ್ನು ಸಾಂಗೋಪಾಂಗವಾಗಿ ಅವರು ತಿಳಿದಿದ್ದರಿಂದಲೂ ಕಡೆಗೆ ಈ ಸಿದ್ಧಾಂತವನ್ನೇ ಸರ್ಕಾರದವರು ಬಹಳ ಮಟ್ಟಿಗೆ ಸ್ವೀಕರಿಸಿದರು ದಾದಾಭಾಯಿಯವರ ಪರಿಶ್ರಮದಿಂದ ಇಂಗ್ಲೀಷ ಜನರಿಗೆ ಹಿಂದುಸ್ಥಾನವು ಹಿಂದೆ ತಾವು ನೆನಸಿದಂತೆ ಹಣ ತುಂಬಿದ ಭಂಡಾರವಲ್ಲ ದ್ರವ್ಯ ಶೋಷಣದಿಂದ ದುರ್ಬಲವಾಗಿದೆಂದು ತಿಳಿಯ ಬಂತು. ಇದೇ ಸಂದರ್ಭದಲ್ಲಿ ಇವರು ಹಿಂದುಸ್ಥಾನದ ರಾಜ್ಯಭಾರದ ಖರ್ಚು ವಿಪರೀತವಾದದ್ದೆಂದೂ ದೇಶೀಯರನ್ನು ಮೇಲ್ತರದ ಹುದ್ದೆಗಳಿಗೆ ನೇಮಿಸಿದರೆ ಖರ್ಚು ತಗ್ಗು[illegible] ಸರ್ಕಾರವು ನಿಷ್ಪಕ್ಷಪಾತಿಯೆಂದು ಹೆಸರುಗೊಳ್ಳುವದೆಂದೂ [illegible]

ಕಲ್ಕತ್ತೆಯ ಕೈಗಾರಿಕೇ ವಸ್ತು ಪ್ರದರ್ಶನ. ಕಳೆದ ತಿಂಗಳ ತಾರೀಕು 21ರಲ್ಲಿ ವ್ಯಾಸರಾಯ ಪ್ರಭುಗಳಿಂದ ಕೈಗಾರಿಕೇ ವಸ್ತು ಪ್ರದರ್ಶನಾಲಯವು ತೆರೆಯಲ್ಪಟ್ಟಿತು. ಬಂಗಾಳ ಬಿಹಾರಿನಲ್ಲಿ ಸ್ವಾಭಾವಿಕವಾದ ಕ್ಷಾಮದ ದೆಸೆಯಿಂದಲೂ ವಂಗಭಂಗದಿಂದುಂಟಾದ ಪ್ರಜಾ ಅಸಂತುಷ್ಟಿಯಿಂದಲೂ ಈ ಪ್ರದರ್ಶನವು ಕೈಗೂಡುವದೋ ಎಂಬ ಅನುಮಾನವಿತ್ತು. ಆದರೆ ಪ್ರದರ್ಶನಾ ಕಮಿಟಿಯವರಿಗೆ ಗವರ್ನಮೆಂಟಿನವರು ಸರ್ವಾನುಕೂಲ್ಯಗಳನ್ನು ಒದಗಿಸಿ ಕೊಟ್ಟದ್ದರಿಂದ ಈ ಪ್ರದರ್ಶನಾಮಹೋತ್ಸವವು ಸಾಂಗ್ಯವಾಗಿ ನೆರವೇರಿತು. ಪ್ರದರ್ಶನಾಮಂಟಪವು 22 ಎಕ್ರೆ ವಿಸ್ತೀರ್ಣವುಳ್ಳದ್ದಾಗಿದೆ. ಇದರೊಳಗಿನ ರಸ್ತೆಗಳ ಉದ್ದಳತೆಯು ಮೂರು ಮೈಲುಗಳಾಗಿದೆ. ಆಲಯದ ಗೇಟು ಕಂಟ್ರಾಕ್ಟದಾರನು ಗೇಟಿನ ಹಣ ವಸೂಲು ಮಾಡುವದನ್ನು ಒಂದು ಲಕ್ಷ ಐವತ್ತು ಸಾವಿರ ರೂಪಾಯಿಗಳಿಗೆ ವಹಿಸಿಕೊಂಡಿರುತ್ತಾನೆ. ಪ್ರದರ್ಶನೆಗೆ ತಂದಿರುವ ಕೈಗಾರಿಕೇ ಯಂತ್ರಗಳಲ್ಲಿ, ಪೂರ್ವಕಾಲದಿಂದ ನಮ್ಮ ದೇಶದಲ್ಲಿ ವ್ಯವಸಾಯಕ್ಕೆ ಎರಡನೇದಾಗಿದ್ದು ಜೀರ್ಣವಾಗಿ ಈಚೆಗೆ ತಲೆದೋರಿಸುವ ವಸ್ತ್ರ ನೇಯುವ ನವೀನ ವಿಧದ ಮಗ್ಗಗಳು ನೋಟಕರನ್ನು ವಿಸ್ಮಯಗೊಳಿಸುವವು. ಉಷ್ಣ ಪ್ರದೇಶದಲ್ಲಿರುವ ನಮ್ಮ ದೇಶೀಯರಿಗೆ ಪ್ರತಿನಿತ್ಯವೂ ಸ್ನಾನದ ಅಗತ್ಯ ಇರುವದರಿಂದ ಸಾಬೂನು ಕಾರ್ಖಾನೆಗಳ ವೃದ್ಧಿಗೆ ಆಸ್ಪದ ಕೊಡುವ ನಮ್ಮ ಊರಿನ, ಸ್ವದೇಶಿ ಸಾಬೂನುಗಳು ಆ ಮಂಟಪದಲ್ಲಿ ಪ್ರದರ್ಶನೆಗೋಸ್ಕರ ಇಟ್ಟಿರುವವು. ಮೊದಲು ಈ ಕಾರ್ಖಾನೆಗಳು ಎರಡು ಯಾ ಮೂರು ಇದ್ದವು. ಈಗ ಸ್ವದೇಶಿ ಚಳವಳಿಯಿಂದ ಇಪ್ಪತ್ತಕ್ಕಿಂತ ಹೆಚ್ಚು ಕಾರ್ಖಾನೆಗಳಿವೆ. ಇನ್ನೂ ಬಗೆ ಬಗೆಯ ಬೆಂಕಿ ಪೆಟ್ಟಿಗೆ, ಗಾಜಿನ ಸಾಮಾನು, ಹೊಗೆಸೊಪ್ಪಿನ ಸಿಗರೆಟ್ ಮುಂತಾದ ಒಡವೆಗಳನ್ನು ಸ್ವದೇಶಿ ಕಾರ್ಖಾನೆಗಳ ತಯಾರಿಸಿ ಈ ಸರ್ತಿಯ ಪ್ರದರ್ಶನಕ್ಕೆ ಕಳುಹಿಸಿರುತ್ತವೆ. ಬಂಗಾಳ ವಿದ್ಯಾಇಲಾಖೆಯವರೂ ಶಿವಪುರ ಎಂಬಲ್ಲಿಯ ಇಂಜಿನಿಯರಿಂಗ್ ಕಾಲೇಜಿನವರೂ ಡಿಸ್ಟ್ರಿಕ್ಟ ಬೋರ್ಡು ಟೆಕ್ನಿಕಲ್ ಶಾಲೆಯವರೂ ತಮ್ಮ ತಮ್ಮ ವಸ್ತುಗಳನ್ನು ಈ ಮಂಟಪದಲ್ಲಿ ಪ್ರದರ್ಶನೆ ಬಗ್ಗೆ ಇಟ್ಟಿರುತ್ತಾರೆ. ಹೀಗೆ ಸರಕಾರದವರೂ ತರತರದ ವೃತ್ತಿಯ ಪ್ರಜೆಗಳೂ ಕೂಡಿ ಭರತ ಖಂಡದ ಕೈಗಾರಿಕೆಗಳನ್ನು ಜೀರ್ಣೋದ್ಧಾರ ಮಾಡಲಿಕ್ಕೂ ನವೀನ ವಿಧ, ದಿಸಲಿಕ್ಕೂ ಐಕ್ಯದಿಂದ ಸಾಹಸ ಪಡುವದು, ಬಹಳ ಶ್ಲಾಘನೀಯ. ಮಂಟಪದಲ್ಲಿ ಸರ್ವರಲ್ಲಿಯೂ ಏಕಪ್ರಕಾರವಾಗಿ ವ್ಯಾಪಿಸಿರುವ ಈ ಭಾವನೆಯನ್ನು ವ್ಯಾಸರಾಯ ಪ್ರಭುಗಳು ಶ್ಲಾಘಿಸಿ, ರಾಜಕೀಯ ವಿಷಯಗಳಿಂದ ಈ ಸ್ವದೇಶಿಭಾವವನ್ನು ಬೇರ್ಪಡಿಸ ಬೇಕಾಗಿಯೂ ಅಂಥಾ ಭಾವನೆಗಳಿರುವ ದೇಶಹಿತಕರವಾದ ಸ್ವದೇಶ ವಾತ್ಸಲ್ಯವನ್ನು ಪ್ರೋತ್ಸಾಹಿಸಲಿಕ್ಕೆ ತಾನು ಮೊದಲನೆಯವನೆಂತಲೂ ಅಪ್ಪಣೆ ಕೊಡಿಸಿದರು

ದೇಶಾನುರಕ್ತ ಒಬ್ಬ ಇಂಗ್ಲೀಷ ಮಿಶನರಿ ಹಿಂದುಸ್ಥಾನದಲ್ಲಿ ಪ್ರಜಾ ಏಕತ್ವಕ್ಕೂ ವೃದ್ಧಿಗೂ ಮುಂದರಿಯಲಿಕ್ಕೆ ಅಸ್ಪದವನ್ನೀಯದ ಹಲವು ಕಷ್ಟಗಳಲ್ಲಿ ವರ್ಣಭೇದ ಜಾತಿಭೇದ ಎಂಬವುಗಳನ್ನು ಸೂಚಿಸಿ, ಯಾವದೊಂದು ಜನಾಂಗವು ತನ್ನಾಧೀನವುಳ್ಳ ಇನ್ನೊಂದು ಜನಾಂಗದ ವೃದ್ಧಿಯ ಮೊಳಕೆಗಳನ್ನು ನಾಶಪಡಿಸ ಪ್ರಯತ್ನಿಸುವದೋ ಅದು "ಪರರ ಕೇಡು ತನ್ನ ಕೇಡು' ಎಂಬ ಗಾದೆಯ ಸೂಚಿಸಿದ ಗತಿಯನ್ನೈದುವದೆಂಬದು ಕ್ರೈಸ್ತಧರ್ಮದಿಂದಲೂ, ಇಂಗ್ಲೀಷರ ಇತಿಹಾಸಗಳಿಂದಲೂ ವ್ಯಕ್ತವಾಗುವದೆಂದು ಆ ಮಿಶನರಿಯು ಅಭಿಪ್ರಾಯ ಪಟ್ಟರು. ಹಿಂದೆ ಇಂಗ್ಲೀಷರು ಈಗಿನ ಅಮೇರಿಕದ ಸಂಯುಕ್ತ ಸಂಸ್ಥಾನವು ತಮ್ಮ ಕೈಕೆಳಗಿರುವಾಗ್ಯೆ ಈ ರೀತಿ ಅನುಸರಿಸಿದ್ದರಿಂದ ಆ ದೇಶದವರು ಒಕ್ಕಟ್ಟಾಗಿ ಸ್ವರಾಜ್ಯವನ್ನು ಸ್ಥಾಪಿಸಿದರೆಂದರು. ಕೆನಡಾ ದೇಶದಲ್ಲಿಯ ಬ್ರಿಟಿಷ ಸಾಮ್ರಾಜ್ಯ ಪರಿಪಾಲನೆಯ ಕ್ರಮಗಳನ್ನು ಭರತಖಂಡದಲ್ಲಿಯೂ ಬ್ರಿಟಿಷರು ಅನುಸರಿಸ ಬೇಕೆಂಬದಾಗಿಯೂ ಹೇಳಿದರು. ಇವರು ಗತವರ್ಷದ ಕಾಂಗ್ರೆಸ್ ಸಭೆಗೂ ಬಂದಿದ್ದರು. [illegible] ಸಾಹೇಬರು. [illegible]ನ ಪಂಡಿತರಾಗಿರುತ್ತಾರೆ. ಇವರು ಹಿಂದುಸ್ಥಾನಕ್ಕೆ ಬಂದು ಮೂರು ವರುಷಗಳಾದವು. [illegible] ಆಂಗ್ಲೋ ಇಂಡಿಯನರ ಗಾಳಿಯು ಇವರನ್ನು ಇನ್ನೂ ಸೋಂಕಲಿಲ್ಲವೆಂಬದಾಗಿ ಕಾಣುತ್ತದೆ.

ರೈತರ ಕೃತಗಳ ಮೇಲಿನ ತೆರಿಗೆ. ಈಚೆಗೆ ಕುಂಭಕೋಣದಲ್ಲಿ ಎಗ್ರಿಕಲ್ಚರಲ್ ಎಸೋಸಿಯೇಶನಿನ ಸಭೆ ನೆರೆದಾಗ ಸರಕಾರಿ ಕಡೆಯ ಎಗ್ರಿಕಲ್ಚರಿನ ಡಿರೆಕ್ಟರರು ಅಲ್ಲಿ ನೆರೆದ ಸಭಿಕರಿಗೆ ಖಾತ್ರಿಯಾಗಿ ಈ ವಿಷಯವನ್ನು ಹೇಳಿದರು "ರೈತನು ತನ್ನ ಬುದ್ಧಿ ಚಾತುರ್ಯದಿಂದಲೂ ಹಣವೆಚ್ಚದಿಂದಲೂ ಮಾಡಿದ ಕಷ್ಟಕೃತಗಳಿಂದ ಉಂಟಾಗಬಹುದಾದ ಪೂರ್ಣ ಪ್ರಯೋಜನವನ್ನು ರೈತನೇ ಪಡೆಯಬೇಕೆಂಬ ತಮ್ಮ ಖಂಡಿತ ಅಭಿಪ್ರಾಯವನ್ನು ರೇವಿನ್ಯೂ ಬೋರ್ಡಿನವರೂ ಮದ್ರಾಸ ಗವರ್ನಮೆಂಟಿನವರೂ ಇಂಡಿಯಾ ಗವರ್ನಮೆಂಟಿನವರೂ ಕೊಟ್ಟಿರುತ್ತಾರೆ"

ಆದರೆ ಅನೇಕ ವರುಷಗಳಿಂದ ತಮ್ಮ ಮಕ್ಕಳನ್ನು ಶಿಕ್ಷೆ ಮಾಡುವ ದಾರಿಯಲ್ಲಿ ದಕ್ಷಿಣ ಕನ್ನಡದ ರೈತರು ತಮ್ಮ ತಮ್ಮ ಆಸ್ತಿಗಳಲ್ಲಿ ಮಾಡಿದ ಕೃತಗಳ ಪೂರ್ಣ ಪ್ರಯೋಜನವನ್ನು ನಮ್ಮ ರೇವಿನ್ಯೂ ಸೆಟ್ಲಮೆಂಟು ಇಲಾಖೆಯವರು ಯಾರು ಹೊಂದುವಂತೆ ಮಾಡಿರುತ್ತಾರೆಂಬದು ನಮಗೆಲ್ಲರಿಗೂ ಎಂದೂ ಮರೆಯದ. ಹೀಗಿರುತ್ತಾ ಗವರ್ನಮೆಂಟಿನವರು ಕೃತಗಳ ಮೇಲಿನ್ನು ತೆರಿಗೆಯು ಹೊರಿಸಲ್ಪಡಲಿಕ್ಕಿಲ್ಲ ಎಂಬ ಒಳೇ ಮಾತು ಪ್ರಸಂಗವು ಏನೂ ಪ್ರಯೋಜನವಿಲ್ಲ. ಒಂದು ವೇಳ್ಯ ಸದ್ಯಕ್ಕೆ ಏರಿಸಿದ ತೀರ್ವೆಯನ್ನು ಪರ್ಯಾಲೋಚಿಸಿ ಕಡಿಮೆ ಮಾಡಿದ ಪಕ್ಷಕ್ಕೆ ಈ ಡಿರೆಕ್ಟರರು ಕುಂಭಕೋಣದಲ್ಲಿ ಅಪ್ಪಣೆ ಕೊಡಿಸಿದಂಥಾದನ್ನು ಎಲ್ಲರೂ ಮನ್ನಿಸುವರು

ಹೀಗೆ ಕುಂಭಕೋಣದಲ್ಲಿ ಪ್ರಸಂಗಿಸಿದ ಡಿರೆಕ್ಟರರು ಯಾರೆಂತ ಬೇರೆ ವ್ಯಕ್ತಪಡಿಸುವ ಅಗತ್ಯವಿಲ್ಲ. ಇವರು ನಮ್ಮಲ್ಲಿ ರೈತರೆಲ್ಲರ ಹೃದಯಗಳಲ್ಲಿಯೂ ಸಿರತರ ನಿವಾಸ ಮಾಡಿರುವ ಧೊರೆಗಳೇ

ಕಾಶೀ ಕ್ಷೇತ್ರದ ವೈದಿಕರ ಪರೀಕ್ಷೆ — ವೇದವಿದ್ಯಾವರ್ಧಿನಿ ಸಭೆಯವರು ಕಾಶೀಯಲ್ಲಿ ಸ್ಥಾಪಿಸಲ್ಪಟ್ಟ ಪಾಠಶಾಲೆಗಳ ವೈದಿಕ ವಿದ್ಯಾರ್ಥಿಗಳನ್ನು ಪರೀಕ್ಷಿಸಿದರು. ವಿದ್ಯಾರ್ಥಿಗಳೆಲ್ಲರೂ ದಶವಿಧ ಬ್ರಾಹ್ಮಣ ಸಂಪ್ರದಾಯದರಾಗಿರುತ್ತಾರೆ. ಪರೀಕ್ಷೆಯು ಬಾಲಾಜಿದೇವ ಮಂದಿರದಲ್ಲಿ ನೆರವೇರಿತು. ಉತ್ತೀರ್ಣರಾದ ೫೦೦ ಮಂದಿ ವಿದ್ಯಾರ್ಥಿಗಳಿಗೆ ಅವರವರ ಯೋಗ್ಯತಾನುಸಾರವಾಗಿ ದಕ್ಷಿಣೆಗಳು ಕೊಡಲ್ಪಟ್ಟವು. ಇಂತಹ ವೇದವಿದ್ಯಾವರ್ಧಿನಿ ಸಭೆಗಳು ಬ್ರಾಹ್ಮಣರಿರುವ ಎಲ್ಲಾ ಸ್ಥಳಗಳಲ್ಲಿಯೂ ಏರ್ಪಟ್ಟು ವೈದಿಕರೆಲ್ಲರೂ ತಮ್ಮ ವೈದಿಕ ಎಂಬ ಗುಣನಾಮವನ್ನು ಸಮರ್ಥಿಸಬೇಕಾಗಿ ನಿರಂತರವೂ ಅಪೇಕ್ಷಿಸುವೆವು

ಥಿಯೊಸಫಿಕಲ್ ಸೊಸ್ಯಾಟಿಯ ಮೆಂಬರರಾದ ಒಬ್ಬ ಡಿ ಎಚ್ ಹರಕಾರೆ ಎಂಬವರು ಮತವಿಷಯಗಳನ್ನು ಚರ್ಚಿಸಲಿಕ್ಕೆ ಈ ವರುಷದಲ್ಲಿ ಬಿಜಾಪುರದಲ್ಲಿ ಒಂದು ನಾಷನೆಲ್ ಕಾಂಗ್ರೆಸಿನ ಹಾಗೆಯೇ ಕಾಂಗ್ರೆಸನ್ನು ಏರ್ಪಡಿಸುವ ಆಲೋಚನೆಯಲ್ಲಿದ್ದಾರೆ, ಈ ಆಲೋಚನೆಯು ಯುಕ್ತಿಯುಕ್ತವಾದದ್ದೇ. ಎಲ್ಲಾ ಅಭಿಮಾನಕ್ಕೂ, ವೃದ್ಧಿಗೂ, ಧರ್ಮಗೋಪಾನವು ಮೊದಲನೇದು

ಇಂಡಿಯಾ ಗವರ್ನಮೆಂಟಿನವರು ಪ್ರೈಮೆರಿ ವಿದ್ಯಾಭ್ಯಾಸವನ್ನು ಉಚಿತವಾಗಿರುವಂತೆ ಮಾಡ ಪ್ರಯತ್ನಿಸುತ್ತಾರೆಂಬ ವರ್ತಮಾನವು ನಮ್ಮ ವಾಚಕರೆಲ್ಲರೂ ಕೇಳಿರಲಿಕ್ಕೆ ಸಾಕು. ಬಂಗಾಳ ಗವರ್ನಮೆಂಟಿನವರು ಪ್ರೈಮೆರಿ ಶಾಲೆಗಳಲ್ಲಿ ಓದುವದಕ್ಕೋಸ್ಕರ ನೇಮಿಸಲ್ಪಟ್ಟಿರ ತಕ್ಕ ಎಲ್ಲಾ ದೇಶಭಾಷಾ ಪುಸ್ತಕಗಳನ್ನು ರಚಿಸುವ ಮತ್ತು ಮುದ್ರಿಸುವ ಎಲ್ಲಾ ಹಕ್ಕುಗಳನ್ನು ಅಲ್ಲಿಯ ಮಿಶನರಿಗಳಿಗೆ ಕೊಟ್ಟಿರುತ್ತಾರಂತೆ.

ಇಂಗ್ಲಾಂಡಿನಲ್ಲಿ ಈಗಿನ [illegible] ವಿಲಾಯತಿ [illegible] [illegible] ಪ್ರಕಾಶ ಕೊಡುವದಕ್ಕೆ [illegible] ಹಣವನ್ನು ಮುಂದಾಗಿ [illegible]ತ್ತಾರೆ. ಇದರಿಂದ ಅವರು ಕೈಯಲ್ಲಿ [illegible] ಕೊಂಡುಕೊಂಡು ಧಾರಣೆಯನ್ನು ಹೆಚ್ಚಿಸುವದರಲ್ಲಿದ್ದಾರೆ. ಯಥೇಷ್ಟವಾಗಿದ್ದರೂ ಕ್ಷಾಮಕಾಲದ ಧಾರಣೆಯೇ ಈ ವಿ[illegible]ತಿಯವರ ದೆಸೆಯಿಂದ ನಿಲ್ಲುವದೆಂದು ಸ್ವದೇಶಿ ಹಿತೈಷ್ಯ[illegible] ಹಿಂದು ಮುಂದು ಗೊತ್ತಿಲ್ಲದ ರೈತರಿಗೆ ಹಾಗೆ ಭತ್ತವನ್ನು [illegible]ಬಾರದಾಗಿ ಬೋಧಿಸುತ್ತಾರೆ.

ಈ ವರುಷದ ಕಾಂಗ್ರೆಸ್ ಸಭೆಯಲ್ಲಿ ಕುರ್ಚಿ ಮೇ[ಜು] ಮುಂತಾದ ಅಜಬಾಬುಗಳು ಪೂರ್ಣ ಸ್ವದೇಶದ್ದೇ ಆಗಿದ್ದ[ವು]

ನವ ಬಂಗಾಳದಲ್ಲಿ ಮಹಮ್ಮದೀಯರ ವಿದ್ಯಾಭ್ಯಾಸ[ವನ್ನು] ಪ್ರೋತ್ಸಾಹಿಸುವಗೋಸುಗ ಮಹಮ್ಮದೀಯ ವಿದ್ಯಾ[ರ್ಥಿಗಳ] ಬಗ್ಗೆ ಹೊಸ ರೂಲುಗಳನ್ನು ಅಲ್ಲಲ್ಲಿ ಸ್ಥಾಪಿಸಿದರೆ ವಿದ್ಯಾರ್ಥಿ[ಗಳಿಗೆ] ಬಹಳ ಅನುಕೂಲವಾಗುವದೆಂಬ ಅಭಿಪ್ರಾಯಪಟ್ಟ ಗವರ್ನಮೆಂಟಿನವರು ಈ ವಿಷಯದಲ್ಲಿ ಅಲ್ಲಿಯ ಮಹಮ್ಮದೀಯರ ಮುಖರ ಅಭಿಪ್ರಾಯಗಳನ್ನು ಕೇಳಿರುತ್ತಾರಂತೆ

ಅಫಘಾನಿಸ್ಥಾನದ ಅಮೀರರ ಸವಾರಿಯು ಆಗ್ರಕ್ಕೆ ಈ[illegible] ತಿಂಗಳ ತಾರೀಕು ೪ಕ್ಕೆ ಬರುವದು, ವ್ಯಾಸರಾಯ ಪ್ರಭುಗ[ಳೂ] ಇತರ ರಾಜರೂ ಇವರ ಸಂದರ್ಶನಕ್ಕೆ ಒಂದು ದಿವಸ ಮುಂಚೆ[illegible]ವಾಗಿಯೇ ಅಲ್ಲಿಗೆ ಹೋಗುವರು

ಭರತ ಧರ್ಮ ಮಹಾಮಂಡಲ. ಈ ಸಂಘ[illegible]ವರ ಸಭೆಯು ತಾ 2ಕ್ಕೆ ಜರಗಿತು. ದರ್ಭಂಗಾ ಮಹಾರಾಜ[ರು] ಸಭೆಯ ಅಧ್ಯಕ್ಷರಾಗಿದ್ದರು. ರಾಜಪುತಾನ, ಕಾಸಿಂಬಜ[illegible], ಹತ್ವಾರ, ಮಹಾರಾಜ ಬಹದೂರರೆಲ್ಲರೂ ಈ ಸಭೆಗೆ ಚಿತ್ತೈ[ಸಿ]ದ್ದರು

ಇಂದ್ರಜಾಲವಿದ್ಯೆಯ ಮಾಹಿತಿಯುಳ್ಳ ಒಬ್ಬ ಹೆಂಗ[illegible] ಕಲ್ಕತ್ತೆಯಲ್ಲಿ ಜನರನ್ನು ಠಕಾಯಿಸಿದ್ದರಿಂದ 8 ತಿಂಗಳ ಸ[illegible] ಆಯಿತು. ಇವಳನ್ನು ಕೋರ್ಟಿನವರು ವಿಚಾರಿಸುವಾಗ ಅ[illegible]ಳು ಫಕ್ಕನೆ ತನ್ನ ಬಾಯಿಯಿಂದ ಒಂದು ಹಿಡಿ ತುಂಬ [illegible]ಳನ್ನು ಉಗುಳಿ ಬೆಂಚ್ ಕ್ಲಾರ್ಕನ ಕೈಯಲ್ಲಿ ಕೊಟ್ಟಳು. [illegible]ರ್ಟಿನಲ್ಲಿ ತೀರ್ಪು ಓದಿ ಹೇಳಿದ್ದನ್ನು ಕೇಳಿ ಅವಳು "ಎರ[illegible] ತಾಸು ನನ್ನನ್ನು ಬಂಧನೆಯಲ್ಲಿ ಇಟ್ಟವರನ್ನು ನಾ ಕಾಣೆ! ಎಂ[illegible] ತಿಂಗಳ ಮಾತು ಹಾಗೇ ಇರಲಿ" ಎಂದು ಹೇಳಿದಳಂತೆ.

ವಿದೇಶಿ ಸಕ್ಕರೆಯು ಎಲುಬಿನ ಚೂರು ಮಧ್ಯ ಮುಂ[illegible] ಅನೇಕ ತರದ ಭ್ರಷ್ಟ ಪದಾರ್ಥಗಳಿಂದ ತಯಾರಿಸಲ್ಪಡುವದೆ[illegible] ಮನಸ್ಸಿನ ಸಂಶಯದಿಂದ ಲಾಹೋರಿನ ಅಮೃತಸಾರ್ ಎ[illegible] ಊರಿನ ನಿವಾಸಿಗಳು ಈ ಸಕ್ಕರೆಯನ್ನು ಉಪಯೋಗಿಸಕೂಡ[ದು] ಎಂದು ಖಾನಪುರದಲ್ಲಿ ಆಗುವ ಸಕ್ಕರೆಯಲ್ಲಿ ಈ ದೋಷಗಳಿ[illegible] ಕಾರಣ ಎಲ್ಲರೂ ಈ ಖಾನಪುರ ಸಕ್ಕರೆಯನ್ನೇ ಉಪಯೋ[illegible]ಬೇಕೆಂದು ಪ್ರಕಟಿಸಿರುತ್ತಾರೆ. ಅಮೃತಸಾರಿನಲ್ಲಿ ವರುಷ[illegible]ತಿ ಐಮಿಲಿಯ ರೂಪಾಯಿಯ ವಿದೇಶಿ ಸಕ್ಕರೆ ವ್ಯಾಪಾರ[illegible] ಇನ್ನು ಈ ಪ್ರಕಟಣೆಗಳ ದೆಸೆಯಿಂದ ಈ ವ್ಯಾಪಾರಕ್ಕೆ [illegible]ಯುಂಟಾಗುವದು.

ಕಲ್ಕತ್ತಾ ಹೈಕೋರ್ಟಿನಲ್ಲಿ ಅಕಬ್ ಜನಾಬುನ[illegible] ಕಂಟ್ರಾಕ್ಟದಾರರು, ಪ್ರಿನ್ಸ್ ಆಫ್ ವೇಲ್ಸ್ ಇವರು ಕಲ್ಕತ್ತೆ[illegible] ಚಿತ್ತೈಸಿದಾಗ ಅಲ್ಲಿಯ ಮೈದಾನನ್ನು ಶೃಂಗಾರಿಸಲಿಕ್ಕೆ [illegible] ಖರ್ಚಿನಲ್ಲಿ ಕೊಡದೆ ಬಾಕಿ ಉಳಿದ 17,000 [illegible] ವ್ಯಾಜ್ಯವನ್ನು ಆ ಕಾಲದ ರಿಸೆಪ್ಷನ್ ಕಮಿಟಿಯವರ [illegible] ಹೂಡಿರುತ್ತಾರೆ. ವ್ಯಾಜ್ಯವು ಕೋರ್ಟಿನವರಿಂದ ಅಂಗೀ[illegible]ಲ್ಪಟ್ಟಿತು.

[illegible]

[illegible] ಜಪಾನು ರಾಜ್ಯಗಳಿಗೆ ಹೋಗಿ ಅಲ್ಲಿಯ [illegible] ಕಾರ್ಖಾನೆಗಳಲ್ಲಿ ಕೆಲಸ ಕಲಿಯಲಿಕ್ಕೆ [illegible] ವಿದ್ಯಾರ್ಥಿಗಳಿಗೆ ವೇತನವನ್ನು ಈ ಕೆಳ [illegible] ನಿಯಮಗಳಿಗನುಸಾರವಾಗಿ ಕೊಡುವರು. ವಿದ್ಯಾರ್ಥಿಗಳೆಲ್ಲರೂ ಸ್ವಭಾವ ಸಂಪನ್ನರಾಗಿದ್ದು ಎಫ್. ಎ. ಪರೀಕ್ಷೆಯಾದರೂ ಪಾಸಾಗಿರಬೇಕು. ವಿದ್ಯಾರ್ಥಿಗಳ ಪ್ರಾಯವು 23 ವರುಷಕ್ಕೆ ಮೀರಿರಕೂಡದು. ಯುರೋಪು ಮತ್ತು ಅಮೇರಿಕಕ್ಕೆ ಹೋಗುವವರಿಗೆ ವರುಷ 1ಕ್ಕೆ 200 ಪವನುಗಳ ಪ್ರಕಾರ 3 ವರುಷಗಳ [illegible]ಗೆ 5 ವರುಷಕ್ಕೆ ಮಿಕ್ಕದೆಯೂ ಕೊಡಲ್ಪಡುವದು. [illegible]ವೆ ಸ್ಕಾಲರ್ ಸ್ಕೀಪ್‌ಗಳೆರಡಿರುವವು: ಬ್ರಿಟಿಷ ಹಿಂದುಸ್ಥಾನದಲ್ಲಿ ಕಲಿಸುವವರಿಗೆ ತಿಂಗಳಿಗೆ 50 ರೂಪಾಯಿ ಪ್ರಕಾರ ಜಾಪಾನಲ್ಲಿ ಕಲಿಯುವವರಿಗೆ ತಿಂಗಳಿಗೆ 100 ರೂಪಾಯಿ ಪ್ರಕಾರ 3 ವರುಷಗಳ ವರೇ[illegible] ವೇತನಗಳು ಕೊಡಲ್ಪಡುವವು. ಇಂಥಹ ಸ್ಕಾಲರ್ ಸ್ಕೀಪ್‌ಗಳು 6 ಇರುವವು.

ಸ್ವದೇಶಿ ಕೊಡೆಗಳ ಕಾರ್ಖಾನೆ:— ಆರ್. ವ್ಹಿ. [illegible]ಂಬ್ಲೆ ಎಂಬವರು ಪುನೆಯಲ್ಲಿ ಒಂದು ದೊಡ್ಡ ಕೋ[illegible]ಯನ್ನು ಕಟ್ಟಿಸಿರುತ್ತಾರೆ. ಇದರಲ್ಲಿ ಇವರು [illegible]ಲಾಯತಿ ನಮೂನೆಯ ವಾಟರ್ ಪ್ರೂಫು ಕೊಡೆಗಳನ್ನು ತಯಾರಿಸುವರು. ಈ ಕೊಡೆಗಳಿಗೆ ಬೇಕಾದ ಎಲ್ಲಾ ಸಾಮಾಗ್ರಿಯು ಸ್ವದೇಶದ್ದೇ ಆಗಿರುವದೆ. ಮೇ॥ ಬಾಲಗಂಗಾಧರ ತಿಲಕರಿದ್ದು ಈ ಕಾರ್ಖಾನೆಗೆ ಇತ್ತಲಾಗೆ ಮುಹೂರ್ತವಾಯಿತು.

[illegible] ಮ ರಾ. ರಾ ಕಾಬಿ ರಾಮನುಥ ಶ್ಯಾನುಬಾ[illegible] ಬಿ. ಎ, ಎಂ ಎಲ್ ಇವರು ಅಡ್ವೊಕೇಟ್ ಪದವಿಯನ್ನು ಹೊಂದಿ ಮದ್ರಾಸ್ ಹ್ಯಾಕೋರ್ಟಿನಲ್ಲಿ ವ್ಯವಹರಿಸುತ್ತಾರೆ ಇವರ ವೃತ್ತಿಯಲ್ಲಿ ಇವರಿಗೆ ಅಭಿವೃದ್ಧಿಯನ್ನು ಬಯಸುತ್ತೇವೆ

[illegible] ಪ್ರಾಥಮಿಕ ವಿದ್ಯಾಭ್ಯಾಸವನ್ನು ಯಾವ್ಯಾವ [illegible]ಧಾನಗಳಿಂದ ಸರ್ವಸಾಧ್ಯವಾಗಿ ಮಾಡಬಹುದೆಂಬದನ್ನು ನಿಶ್ಚಯಿಸಲಿಕ್ಕೆ ಬೊಂಬಾಯಿ ಗವರ್ನಮೆಂಟಿನವರು ಒಂದು ಕಮ್ಮಿಟಿಯನ್ನು ಕಳೆದ ಜುಲಾಯಿ ತಿಂಗಳಲ್ಲಿ ನೇಮಿಸಿದ್ದರು ಈ ಕಮ್ಮಿಟಿಗೆ ನಾಮ[illegible]ರ್. ಹ್ಯಾಕೋರ್ಟು ನ್ಯಾಯಾಧಿಪತಿ ಎಸ್ ಜಿ [illegible]ಂದಾವರ ಕಾರರು ನಾಮದಾರ್ ಇಬ್ರಾಹಿಮ್ ರಹಿಮತ್ತುಲ್ಲಾ, ನಾಮದಾರ್ ದಾಮೋದರ ಠಕರೆಸ್ಸೆ [illegible] ಖಾನ್‌ಬಹದೂರ ದರಾಷಹಾ ರತಂಜಿ ಚಿತ್[illegible]ರ್ ಇವರೆಲ್ಲರು ಹೊಸ ಮೆಂಬರರಾಗಿ ನೇಮಿಸಲ್ಪಟ್ಟಿರುತ್ತಾರೆ.

[illegible] ಮದ್ರಾಸು ಟ್ರಿಪ್ಲಿಕೇನ್ ಹ್ಯಾಸ್ಕೂಲಿನ ಹೆಡ್ ಮಾಸ್ತರರಾದ ವಿ. ಶ್ರೀನಿವಾಸ ಶಾಸ್ತ್ರಿಯವರು ತಮ್ಮ [illegible] ರಾಜಿನಾಮೆ ಕೊಟ್ಟು (Servants of India Society) ಸರ್ವಂಟ್ಸ್ ಆಫ್ ಇಂಡಿಯಾ ಸೊಸೈಟಿಯ ಮೆಂಬರಾಗುವರು. ಈ ಸಂಘದ [illegible] ಉದ್ದೇಶವು ಭರತಖಂಡಕ್ಕೆ ಬ್ರಿಟಿಷ ಕೌನ್ಸಿಲ [illegible] [illegible]

[illegible] ತಮ್ಮ ಎಲ್ಲಾ ಧನಾರ್ಜನೆಯ ವೃತ್ತಿಗಳನ್ನು ಬಿಟ್ಟು ತಮ್ಮ ತನುಮನಧನವನ್ನರ್ಪಿಸಬೇಕು. ಈ ಸಂಘದವರ ಕಾಯಂ ಠಿಕಾಣೆಯು ಪುನೆಯಲ್ಲಾಗಿರುತ್ತದೆ. ಇದು 1905ನೇ ಜೂನ್ ತಾ. 12ರಲ್ಲಿ ಮೇ॥ ಗೋಖಲೆಯವರಿಂದ ಸ್ಥಾಪಿಸಲ್ಪಟ್ಟಿತು ಇವರೇ ಇದರ ಮೊದಲನೇ ಮೆಂಬರರೂ ಸರ್ವಾಧಿಕಾರಿಗಳೂ ಆಗಿರುತ್ತಾರೆ.

ಮದ್ರಾಸ್ ಪಿಂಜರಾಪೋಲ್:— ಕಳೆದ ತಾ 23 ರಲ್ಲಿ ಮದ್ರಾಸು ಗವರ್ನರರಾದ ಸರ್ ಆರ್ಥರ್ ಲೊಲಿಯವರಿಂದ ಈ ಮದ್ರಾಸಿನಲ್ಲಿ ಕಟ್ಟಲ್ಪಡುವ ಮೃಗಾಶ್ರಯಾಲಾಯದ ಅಸ್ತಿಬಾರವನ್ನು ಹಾಕುವ ಮುಹೂರ್ತವಾಯಿತು

ಮದ್ರಾಸು ಗವರ್ನಮೆಂಟಿನವರು ನೆಲ್ಲೂರಿನಲ್ಲಿ ಒಂದು ದೊಡ್ಡ ಚರ್ಮದ ಕಾರ್ಖಾನೆಯನ್ನು ಇಡಲಿಕ್ಕೆ 40,000 ರೂಪಾಯಿಯನ್ನು ಮೂಲಧನವಾಗಿ ವಿನಿಯೋಗಿಸಲಿಕ್ಕೆ ಏರ್ಪಡಿಸಿರುತ್ತಾರಂತೆ.

ಕರ್ನಲ್ ಅಲ್ಕಟರವರು ಬಹಳ ಕಠಿಣ ಕಾಯಿಲೆಯಲ್ಲಿದ್ದದರಿಂದ ಗತವರ್ಷದ ಥಿಯೊಸಫಿಕಲ್ ಕಾನ್ಫರೆನ್ಸ್ ಮದ್ರಾಸಿನಲ್ಲಿ ನೆರವೇರಿತು.

ಮಾಜೀ ಮದ್ರಾಸ ಗವರ್ನರಾದ ವೆನ್‌ಲಾಕ್ ಪ್ರಭುಗಳು ಈಗಿನ ಗವರ್ನರಾದ ಸರ್ ಆರ್ಥರ್ ಲೊಲಿಯವರನ್ನು ಸಂದರ್ಶಿಸ ಬಂದಿರುತ್ತಾರೆ

ಬತೋಡೆ ರಾಜರ [illegible] ಮನ್ನಣೆ[illegible]ರಿಸಿ ಕೊಟ್ಟ ಸರಕಾರದವರು ಪ್ರಾಥಮಿಕ [illegible] ಸವನ್ನು ತಮ್ಮ ರಾಜ್ಯದ ಬಾಲಕರಿಗೆಲ್ಲಾ ಕಡ್ಡಾಯವಾಗಿ ಮಾಡಿದ್ದಾರೆಂಬ ವದಂತಿಯುಂಟು

ಸ್ವದೇಶಿ ಸ್ಟೀಮರ್ ಕಂಪೆನಿ— ಟ್ಯುಟಿಕೋರಿನಲ್ಲಿ ಒಂದು ಹೊಸ ಸ್ವದೇಶಿ ಸ್ಟೀಮರ್ ಕಂಪೆನಿಯಾಗಿದೆ ಇದಕ್ಕೆ ಇಷ್ಟರ ವರೇಗೆ ಸಾಧಾರಣ ಎರಡು ಲಕ್ಷ ರೂಪಾಯಿ ಚಂದಾ ವಸೂಲಾಗಿರುತ್ತದೆ ಈ ಕಂಪೆನಿಯವರು ಜಾಪಾನಿನಿಂದ ಒಂದು ಸ್ಟೀಮರನ್ನು ತರಿಸುವ ಆಲೋಚನೆಯಲ್ಲಿ ಅಲ್ಲಿಗೆ ನಾಜಿನ ಕೈಗಾರಿಕೆಯನ್ನು ಕಲಿಯಲಿಕ್ಕೆ ಹೋಗಿರುವ ಒಬ್ಬ ವಿದ್ಯಾರ್ಥಿಗೆ ಬರೆದಿರುತ್ತಾರೆ ಈ ವಿದ್ಯಾರ್ಥಿಯು ಜಾಪಾನಿನ ಒಬ್ಬ ಪತ್ರಿಕಾ ಕರ್ತರ ಹತ್ತಿರ ಹೋಗಿ ಈ ವಿಷಯವನ್ನು ಕೇಳಲು. ಅವರು. ಅನೇಕ ಮಹನೀಯರು ಹಿಂದುಸ್ಥಾನದಲ್ಲಿದ್ದರೂ, ಹಿಂದುಸ್ಥಾನಕ್ಕೆ ವ್ಯಾಪಾರ ಮಾಡಲಿಕ್ಕೆ 9000 ವಿದೇಶಿ ಸ್ಟೀಮರುಗಳಿವೆ ಎಂತಲೂ, ಈ ಪೈಕಿ 8000 ಸ್ಟೀಮರುಗಳು ಬ್ರಿಟಿಷರದ್ದೆಂತಲೂ, ಇದೇ ತರದ ಇನ್ನೂ ಹಲವು ವಿಷಯಗಳಲ್ಲಿ ಭಾರತೀಯರು ನಿಶ್ಚಿಂತರಾಗಿ ನಿದ್ರೆ ಹೋದರೆ, ಹಿಂದುಸ್ಥಾನದ ಅಭಿವೃದ್ಧಿಯುಂಟಾಗುವದೆಂತು ಎಂಬೀ ವಿಷಯಗಳನ್ನು ಚರ್ಚಿಸಿದ್ದಲ್ಲದೆ, ಇಂಡಿಯದವರಿಗೆ ಸ್ಟೀಮರ್ ಕಂಪೆನಿಗಳನ್ನೇರ್ಪಡಿಸ ಮನಸ್ಸಿದ್ದರೆ ರುಶ್ಯಾ ಜಾಪಾನ ಯುದ್ಧದ ಸಮಯದಲ್ಲಿ ಜಾಪಾನಿಯರು ಕಟ್ಟಿಸಿದಂಥಾ ಅನೇಕ ಸ್ಟೀಮರುಗಳು ಏನೂ ಕೆಲಸವಿಲ್ಲದೆ ಇವೆ. ಜಾಪಾನಿಯರೂ ಹಿಂದುಸ್ಥಾನದವರೂ ಪರಸ್ಪರ ಸಹಕಾರಿಗಳಾಗಿ ಸ್ವದೇಶಿ ಸ್ಟೀಮರ್ ಕಂಪೆನಿಗಳನ್ನಿಡಬಹುದೆಂಬದನ್ನು ಸಹಾ ಸೂಚಿಸಿದರು ಹಿಂದೂ ಜಾಪಾನಿಯ ಎಸೋಶಿಯೇಶನ್ ಎಂಬ ಒಂದು ಜಾಪಾನಿಯ ಮುಖಂಡರ ಸಂಘವು ಈ ಎರಡು ಜನಾಂಗಗಳ ಏಳಿಗೆಗಾಗಿ ಏರ್ಪಡಿಸಿರುತ್ತದೆಂಬದನ್ನು ಹಿಂದುಸ್ಥಾನದಲ್ಲಿಯ ಮುಖ್ಯ ಮುಖ್ಯಪತ್ರಿಕಾ ಕರ್ತರಿಗೆ ಬರೆಯಬೇಕೆಂತ ಈ ವಿದ್ಯಾರ್ಥಿಗೆ ತಿಳಿಸಿರುತ್ತಾರೆ

ತಂಜಾವೂರಿನ ಡಿಸ್ಟ್ರಿಕ್ಟ ಬೋರ್ಡಿನ ಪ್ರೆಸಿಡೆಂಟರಾದ ಮಿ॥ ಬೆತ್ ಪರ್ಡ್ ಸಾಹೇಬರು ಡಿಸ್ಟ್ರಿಕ್ಟ ಬೋರ್ಡಿನ ಅಧ್ಯಕ್ಷ್ಯ ಕೂಡುವ ಸಭೆಗಳಲ್ಲಿ ಎಲ್ಲಾ ವಿಷಯಗಳನ್ನು ಅಲ್ಲಿಯ ದೇಶಭಾಷೆಯಾದ ತಮಿಳಿನಲ್ಲಿ ಚರ್ಚಿಸುವ ಹಾಗೆ ಏರ್ಪಡಿಸಿರುತ್ತಾರಂತೆ ಅಗತ್ಯವಿದ್ದವರಿಗೆ ಮಾತ್ರ ಠರಾವುಗಳನ್ನು ಇಂಗ್ಲಿಷಿನಲ್ಲಿ ತರ್ಜುಮೆ ಮಾಡಿ ಹೇಳಲ್ಪಡುವವು ಎಲ್ಲಾ ಕಡೆಗಳಲ್ಲಿಯೂ ಡಿಸ್ಟ್ರಿಕ್ಟ ಬೋರ್ಡ ಪ್ರೆಸಿಡೆಂಟರು ಈ ರೀತಿ ವರ್ತಿಸಿದರೆ, ಡಿಸ್ಟ್ರಿಕ್ಟ ಬೋರ್ಡುಗಳು ಏನೆಂಬ ವಿಷಯ ಎಲ್ಲರಿಗೂ ವ್ಯಕ್ತವಾಗುವದು

[illegible]ತೂರಿನ ಪುಷ್ಪಗಿರಿ ಎಂಬಲ್ಲಿಯ ಬಿ. ಎ[illegible] ಶ್ರೀನಿವಾಸ ದೀಕ್ಷಿತ ಬಲರಾಮಯ್ಯರೆಂಬವರ[illegible] ಮನೆ ಮಗ್ಗಗಳ ಸ್ಥಿತಿಯನ್ನು ಉಚ್ಚಸ್ಥಿತಿಗೆ [illegible]ಕೆಂದಾಲೋಚಿಸಿ ನಾಗರಕೊಯ್ಲ್ ಎಂಬಲ್ಲಿಯ [illegible] ಇನ್‌ಸ್ಟಿಟ್ಯೂಟಿನಲ್ಲಿ ಈ ವಿಷಯ [illegible] ಎಲ್ಲವನ್ನು ಕಲಿತುಕೊಂಡರು ಇವರ [illegible] 100 [illegible] [illegible] ಇವರಲ್ಲಿಯ ಮಗ್ಗಗ[illegible] [illegible] ಮಗ್ಗಗಳಿಗಿಂತ ಹೆಚ್ಚಿನ ಕೆಲಸವನ್ನು ಮಾಡುವ[illegible] ಮಗ್ಗಗಳನ್ನು ಇನ್ನೂ [illegible] ಉಪಯೋಗಕ್ಕೆ ತರಬೇಕೆಂದಿದ್ದಾರೆ ಇವರಿಂದ [illegible] ಕಲಿತುಕೊಳ್ಳ ಮನಸ್ಸುಳ್ಳವರು ಇವರಿಗೆ [illegible] ತಮ್ಮ ಕಲಿಯುವಿಕೆ [illegible] ಎಲ್ಲವನ್ನೂ [illegible] ಸಿದ್ಧರಾಗಿರುತ್ತಾರೆ

ನೇಯಿಗಾರರ ಒಂದು ಹೊಸ ಮಗ್ಗ [illegible] ಯಂ ಕೋಟಿ[illegible] [illegible] ಯಂ [illegible]ಗೇದಂ ಎಂಬವನು ಒಂದು ನೇಯುವ [illegible]ಸ ಮಗ್ಗವನ್ನು ಕಲ್ಪಿಸಿರುತ್ತಾನೆ ಅದರಿಂದ ಸಾಧಾರಣ ಹತ್ತು ಹದಿನೈದು ವರುಷ ಪ್ರಾಯದ ವಿಶೇಷ [illegible] ಒಂದು ದಿವಸದಲ್ಲಿ 20 ಯಾರ್ಡು ಉದ್ದ, 54 ಇಂಚು ಅಗಲದ ವಸ್ತ್ರವನ್ನು ನೇಯಬಹುದು ಈ ಹೊಸ ಯಂತ್ರವನ್ನು ಕಲ್ಪಿಸಿದಂಥವನು ಬಹಳ ಬಡವನಾದ್ದರಿಂದ ಅವನಿಗೋಸ್ಕರ ಯಂತ್ರವನ್ನು ಪೇಟೆಂಟ್ ಮಾಡುವ ಹಾಗಿದೆ.

ಕನೂರ್ಲ್ ಡಿಸ್ಟ್ರಿಕ್ಟ ಫೋರೆಸ್ಟ ಆಫೀಸರರಾದ ದಕ್ಷಿಣ ಕನ್ನಡ ಪಡುಮನ್ನೂರು ಆನಂದರಾಯರು ಕಳೆದ ತಿಂಗಳ ತಾರೀಕು 22ರಲ್ಲಿ ಪರಲೋಕವನೈದಿದರೆಂಬದನ್ನು ತಿಳಿಸಲು ತುಂಬಾ [illegible]

[illegible] ವೃತ್ತಾಂತ

[illegible] ಇವರು ಈ ತಿಂಗಳ ತಾರೀಕು 10ಕ್ಕೆ ವಿಲಾಯತಿಯಿಂದ ನಮ್ಮತ್ತ ಕಡೆಗೆ ಹೊರಡುತ್ತಾರೆ. ಅವರು ತಾ. 20ಕ್ಕೆ ಕೊಲೊಂಬೊಗೆ ತಲ್ಪಿ ಅಲ್ಲಿಂದ ಅದೇ ದಿವಸ ಹೊಂಕ್‌ಕೊಂಗಿಗೆ ತೆರಳುತ್ತಾರೆ. ಫೆಬ್ರುವರಿ ತಾ. 22ಕ್ಕೆ ಬರ್ಮಾ ದೇಶಕ್ಕೆ ತಲಪುವರು. ಮಾರ್ಚಿ 5ನೇ ತಾರೀಕಿಗೆ ಇವರ ಸವಾರಿಯು ಕಲ್ಕತ್ತೆಗೆ ಚಿತ್ತೈಸುವದು

ಲೆಂಕಶಾಯಿರ ವಸ್ತ್ರ ಕಾರ್ಖಾನೆಗಳ ಖಾವಂದರು ಅಮೇರಿಕದಲ್ಲಿ 10,000 ಎಕ್ರೆ ಸ್ಥಳವನ್ನು ಕೊಂಡು ಕೊಂಡು ಹತ್ತೀ ವ್ಯವಸಾಯವನ್ನು ವೃದ್ಧಿಸ ಪ್ರಯತ್ನಿಸುತ್ತಾರೆ.

ಅಮೇರಿಕದ ಬ್ರಿಟಿಷ ಕೆನಡಾದೇಶಕ್ಕೆ ಹೋಗಿ ನೆಲೆಗೊಂಡಿದ್ದ ಅನೇಕ ಜನ ಪಂಜಾಬಿಗಳನ್ನೂ, ಸಿಕ್ಕರನ್ನೂ ಅಲ್ಲಿಂದ ಹೊರಡಿಸಬೇಕೆಂಬ ಪ್ರಯತ್ನವನ್ನು ಕೆನಡಾದವರು ಮಾಡುತ್ತಲಿದ್ದಾರೆ ಟ್ರೆನ್ಸ್‌ವಾಲ ಮುಂತಾದ ನಮ್ಮರಸುಗಳ ಸ್ವಾಧೀನತೆಯಲ್ಲಿರುವ ಸಂಸ್ಥಾನಗಳಲ್ಲಿ ಭಾರತೀಯರ ಸ್ಥಿತಿಯು ಬಹಳ ದುಃಖಕರವಾಗಿರುತ್ತದೆ. ನಮ್ಮ ದೇಶದಿಂದ ಇಂತಹ ಸಂಸ್ಥಾನಗಳಿಗೆ ಹಿಂದುಸ್ಥಾನದವರು ಹೋಗಬೇಕಾದರೆ, ಈಗ ಇಲ್ಲಿ ಹ್ಯಾಗೆ ಪ್ಲೇಗ್‌ತಗಲಿದೆ ಊರಿನಿಂದ ಬೇರೆ ಊರಿಗೆ ಹೋಗುವವರಿಗೆ ರಹದಾರಿ ಉಂಟೋ ಅಂತಹ ರಹದಾರಿಯನ್ನು ಅರ್ಜಿಮೂಲಕ ಕುರುವಿನಲ್ಲಿ ಆಯಾ ಸಂಸ್ಥಾನಗಳ ಗವರ್ನಮೆಂಟನವರಿಂದ ಪಡೆಯಬೇಕು. ಅನೇಕ ಸಾರಿ ಈ ಅರ್ಜಿಗಳು ತಿರಸ್ಕರಿಸಲ್ಪಡುತ್ತವೆ. ನಮ್ಮಂತಹ ಪ್ರಜಾಸುರಕ್ಷಿತಕ್ಕೆ ಬ್ರಿಟಿಷ ಸರಕಾರದ ಇನ್ನೂ ಬಗೆಬಗೆಯ ನಿಯಮಗಳಿರುತ್ತವೆ.

ರುಸ್ಯದೇಶದಲ್ಲಿ ಕೀಫ್ ಎಂಬವ ಮಾಜಿ ಗವರ್ನರ ಜನರಲ್‌ರಾದ ಎಲೆಕ್ಸಿಸ್ ಇಗ್ನೆಟಿಫ್ ಪ್ರಭುಗಳನ್ನು ಯಾರೋ ಒಬ್ಬ ರಾಜದ್ರೋಹಿಗಳು ಕೊಂದಿದ್ದಾರೆ ಕೊಲೆಪಾತಕಿಯನ ಕೈದುಮಾಡಿರುತ್ತಾರೆ

ಜಾಪಾನ್‌ದೇಶ ಈ ದೇಶದ ಅಭಿವೃದ್ಧಿಗೆ ಅದರ ಕೈಗಾರಿಕೆಗಳೇ ಮುಖ್ಯವಾದವುಗಳು. ೧೯೦೪ರಲ್ಲಿ ಈ ದೇಶದಲ್ಲಿ ೯೦೩೪ರ ಕಾರಖಾನೆಗಳಿದ್ದವು, ಇವುಗಳಲ್ಲಿ ಎರಡುಲಕ್ಷ [illegible] ಸಾವಿರದ [illegible] ಭತ್ತೊಂದು ಜನ ಗಂಡಸರು, ೩೦೯೨೪೮ ಜನ ಹೆಂಗಸರು, ಕೆಲಸ ಮಾಡಿ ಜೀವಿಸುತ್ತಿದ್ದರು. ಇವುಗಳಲ್ಲಿ ಹೊಗೆ ಯಂತ್ರಗಳಿಂದ ಕೆಲಸ ನಡೆಯುವ ಕಾರಖಾನೆಗಳು ೨೦೯೮೯ ನೀರಿನ ಶಕ್ತಿಯಿಂದ ಕೆಲಸ ಮಾಡ ತಕ್ಕವುಗಳು ೪೯೮೯ ಕಾರಖಾನೆಗಳು ಇದ್ದವು. ಈ ಕಾರ್ಖಾನೆಗಳಲ್ಲಿ ಆಬಾಲವೃದ್ಧರಿಗೆ ಉದ್ಯೋಗವೂ ಜೀವನವೂ ಸಿಕ್ಕುವದು. ಇದರಿಂದಲೇ ಆ ದೇಶದಲ್ಲಿ ನಿರುಪಾಧಿಕವಾಗಿ ಜೀವಿಕೆಯು ಸಿಕ್ಕುವುದು ಬಂಡವಾಳವಿಲ್ಲವೆಂಬ ಸಂಕಟವು ಇವರಿಗೆ ಇರುವುದಿಲ್ಲ ಆ ದೇಶದಲ್ಲಿ ಪರಸ್ಪರ ಸಹಾಯದ ಬ್ಯಾಂಕುಗಳು ಬಹಳ ರೂಢಿಯಲ್ಲಿರುವವು. ಪ್ರತಿಯೊಂದು ಬ್ಯಾಂಕಿನವರೂ ಒಂದೊಂದು ಕೆಲಸವನ್ನು ಉಪಕ್ರಮಿಸಿ ಅದನ್ನು ರೂಢಿಸುವರು ವ್ಯವಸಾಯ ಮಾಡತಕ್ಕವರೂ ಕೂಡ ವ್ಯವಸಾಯದ ಅಭಿವೃದ್ಧಿಗೆ ಇಂಥಾ ಬ್ಯಾಂಕುಗಳನ್ನು ಮಾಡಿಕೊಂಡು ವೃದ್ಧಿಗೆ ಬರುವರು. ಈ ಅಭಿವೃದ್ಧಿಯ ಮರ್ಮಗಳನ್ನು ತಿಳಿದುಕೊಂಡ ಹೊರತು ನಮ್ಮ ಜನಗಳು ವೃದ್ಧಿಗೆ ಬರುವುದು ಕಷ್ಟ (ವೃ ಚಿ)

1906ನೇ ಕಾಂಗ್ರೆಸ್ ಪತ್ರಿಕೆಯು ಮುದ್ರಾಲಯವನ್ನು ಸೇರುವಾಗ ಕಾಂಗ್ರೆಸ್ ಅಧ್ಯಕ್ಷ ದಾದಾಬಾಯಿಯರ ಪ್ರಾಸ್ತಾವಿಕ ಭಾಷಣವು (Presidential address) ದೊರಕಿತು ಇದರ ಸಾರಾಂಶವನ್ನು ಚುಟುಕಿನಲ್ಲಿ ಕೇಳಿ ತಪಸೀಲುಗಳನ್ನು ಮುಂದಿನ ಸಂಚಿಕೆಯಲ್ಲಿ ತಿಳಿಸುವೆವು ಉಪನ್ಯಾಸವು ಅಧ್ಯಕ್ಷನ ೫೨ವರ್ಷಗಳ ವರೆಗೆ ಘಳಿಸಿದ ಪಕ್ವವಾದ ಸುಜ್ಞಾನದಿಂದ ತುಂಬಿದೆ ನಾವು ಬ್ರಿಟಿಷ ಪ್ರಜೆಗಳ ಸಮಭಾಗಿಗಳು ಅವರಿಗಿರುವ ಹಕ್ಕು ಸ್ವಾತಂತ್ರ್ಯಗಳಿಗೆ ಪಾತ್ರರೆಂಬುವನ್ನು ಮೊದಲು ಪ್ರತಿಪಾದಿಸಿದರು ಈ ಸ್ವಾತಂತ್ರ್ಯಗಳನ್ನು ವಿಭಜಿಸಿ ಅವನ್ನು ಮೂರು ಭಾಗಗಳಾಗಿ ವಿಂಗಡಿಸಿದರು

1 ನಮ್ಮ ರಾಜ್ಯದ ಹುದ್ದೆಗಳಿಗೆಲ್ಲಾ ನೇಟಿವರನ್ನೇ ನೇಮಿಸಬೇಕೆಂಬುದು

2 ರಾಜಕಾರ್ಯ (ಕಂದಾಯ ಕೊರಿಸುವದ, ಕಾನೂನು ಮಾಡುವದು, ಕಂದಾಯ ದ್ರವ್ಯದ ನಿಗಾವನಿ) ನಿರ್ವಾಹಕ್ಕೋಸ್ಕರ ನಮ್ಮ ದೇಶಕ್ಕೂ ವಿಲಾಯತಿಯಂತೆ ಲೋಕ ನಿಯುಕ್ತರಾಜ್ಯಪದ್ಧತಿಯ ಸ್ಥಾಪನೆ ಮಾಡು

3 ರಾಜ್ಯದ ಖರ್ಚಿನಲ್ಲಿ ಇಂಗ್ಲಿಷರು ನ್ಯಾಯವಾದ ಪಾಲನ್ನು ತೆರುವದು.

ಈ ಸ್ವಾತಂತ್ರ್ಯತ್ರಯದಾಯಕ ಹಕ್ಕನ್ನು ಬ್ರಿಟಿಷರು ನಾವು ಎಷ್ಟು ಬೇಡಾಡಿದರೂ ಇನ್ನೂ ದಯಪಾಲಿಸಿಲ್ಲವೆಂದು [illegible] ನೋಡುತ್ತೇನೆ. ಸ್ವರಾಜ್ಯ ಹಕ್ಕುಗಳನ್ನು [illegible] ನಾದರೆ ಈ ವರೆಗೆ ಮಾಡಿದ ಪ್ರಯತ್ನಗಳ [illegible] ಮನಗುಂದಿ ಗಡಕೊಳ್ಳುವದಿಲ್ಲ. ಸದ್ಯ ಅಧಿಕಾರ [illegible] (Liberal) ಲಿಬರಲ್ ಪಕ್ಷದವರಿಂದ ನಮಗೆ [illegible] ಶುಭಚಿನ್ಹೆಗಳಿರುವ ಕಾರಣ ಕೋರಿಕೆಯಿಂದ [illegible] ವೆನು "ಸ್ವದೇಶಿ"ಯು ಸಮಯೋಚಿತವಾದ [illegible] ವಂಗಭಂಗವು ಅತ್ಯನುಚಿತ ಕಾರ್ಯ. ಅದನ್ನು [illegible] ಲಿಕ್ಕಾಗಲೀ ಬೇರೆ ಯಾವ ಏರ್ಪಾಡನ್ನು ಕೈಗೊಡಿಸಲಿಕ್ಕಾ[illegible] ನಿರಂತರ ಕಳಕಳವೇ (agitation) ಉಪಾಯ. ಈ ಕಳಕಳವನ್ನು ಇಂಗ್ಲಾಂಡಿನಲ್ಲಿಯೂ ಹಿಂದುಸ್ಥಾನದಲ್ಲಿಯೂ ನಡೆಸಬೇಕು. ಯೋಗ್ಯರಾದ ಕೆಲವು ಗ್ರಹಸ್ಥರು ವಿಲಾಯತಿಗೆ ಹೋಗಿ ಬ್ರಿಟಿಷ ಜನರಿಗೆ ನಮ್ಮ ದುಃಸ್ಥಿತಿಯನ್ನು ತಿಳಿಯಹೇಳಿ ಅನ್ಯಾಯಶೀಲತೆ, ಕರಭಾರ, ಮನಃಸಾಕ್ಷಿಗಳನ್ನು ಎಬ್ಬಿಸಬೇಕು. ಚಕ್ರವರ್ತಿಗಳ ಸನ್ನಿಧಾನಕ್ಕೆ ಲಕ್ಷಾವಧಿ ಜನರು ಸಹಿ ಹಾಕಿದ ಬಿನ್ನವತ್ತಳೆಗಳನ್ನು ಅರ್ಪಿಸಬೇಕು ಹಿಂದುಸ್ಥಾನದ ಸರ್ವನಾಡಿನಲ್ಲಿಯೂ ಇವರು ಸರ್ವಸಾಧಾರಣರಿಗೆ ದೇಶದ ಸಂಕಷ್ಟವನ್ನು ಬಿಡಿಸಿ ಹೇಳಲಿಕ್ಕಾಗಿ ಒಂದು ಮಂಡಲಿಯನ್ನು ಸ್ಥಾಪಿಸಬೇಕು. ಇದೇ ಸಾರ್ಥಕವಾದ ಕಳವಳ ಬ್ರಿತಿಷರು ಈ ವಿದ್ಯೆಯಲ್ಲಿ ಅತಿ ಕುಶಲರು. ಈ ಚಳುವಳಿಯನ್ನು ಹಿಂದುಗಳೂ ಮುಸಲ್ಮಾನರೂ ಒಂದಾಗಿ ಮುಂದುವರಿಸಬೇಕು. ಈ ಎರಡು ತಂಡಗಳಲ್ಲಿ ಐಕ್ಯವು ಅವಶ್ಯಕ "ಒತ್ತಂಡದಿಂದ ಜಯ ಇತ್ತಂಡದಿಂದಲೆ ಲಯ ಸಂಭವಿಸುವದು ಮುಸಲ್ಮಾನರೂ ಹಿಂದುಗಳೂ ದೇಶದ ಎರಡು ಕಣ್ಣುಗಳು ಮುಸಲ್ಮಾನರು ನವೀನ ವಿದ್ಯಾಭ್ಯಾಸದಲ್ಲಿ ಹಿಂದುಗಳ ತರಗತಿಗೆ ಬರಬೇಕು. ದೇಶ ಹಿತಕಾರಿಗಳಾದ ಸಾಮಾಜಿಕ, ಔದ್ಯೋಗಿಕ ವಿಷಯಗಳಿಗೆ ಪ್ರತ್ಯೇಕ ಸಭೆಗಳನ್ನು ಪ್ರವರ್ತಿಸಿದರೆ, ಒಂದು ಖಾತೆಯಲ್ಲಿ ಮಾಡಿದ ಅಭಿವೃದ್ಧಿಯಿಂದ ಇನ್ನೊಂದಕ್ಕೆ ಬಲ ಸಿಕ್ಕುವದು. ಈ ವೃದ್ಧ ಮಹಾತ್ಮನ ವ್ಯಾಖ್ಯಾನದ ಒಬ್ಬಿವಾದವು ತನ್ನಲ್ಲಿರುವ ದೇಶವಾತ್ಸಲ್ಯವನ್ನೂ ಜನಹಿತಕಾಂಕ್ಷೆಯನ್ನೂ, ಕಾಲೋಚಿತ ಜ್ಞಾನವನ್ನೂ ಪ್ರಕಾಶಪಡಿಸುವದು "ನನ್ನ ಜೀವಮಾನದಲ್ಲಿ ಉಳಿದ ಅಲ್ಪಕಾಲದಲ್ಲಿ ಇನ್ನು ಏನು ಭಾಗ್ಯವಿರುವದೋ ಅರಿಯೆ. ಸ್ವದೇಶ ದೇಶೀಯರಲ್ಲಿ ನನಗಿರುವ ಶ್ರದ್ಧಾನುರಾಗ ಸೂಚಕವಾದ ಒಂದು ಮಾತು ಹೇಳಬೇಕಾದರೆ ನಾನನ್ನುವದೇನಂದರೆ—ಒಟ್ಟಾಗಿರಿ, ಧೈರ್ಯದಿಂದ ಬೇಡಾಡಿರಿ, ಈಗ ದಾರಿದ್ರ್ಯ, ಪ್ಲೇಗ್ ಕ್ಷಾಮಗಳಿಂದ ವಿಲ್ಲಕಟ್ಟೆಯಲ್ಲಿ ಸಾಯುವವರೂ ಹೊಟ್ಟೆತುಂಬವಿಲ್ಲದೆ ಕೆಟ್ಟಗಟ್ಟೆಯಲ್ಲಿ ಸಾಯುವವರೂ ಉಳಿಯುವಂತೆಯೂ ಭೂಲೋಕದ ಜನಾಂಗಗಳಲ್ಲಿ ನಾಗರೀಕತೆಯಲ್ಲಿಯೂ ಮಹತ್ವದಲ್ಲಿಯೂ ಅಗ್ರಗಾಮಿಯೆನಿಸಿದ ಭರತಖಂಡವು ಪ್ರಾಚೀನಸ್ಥಾನವನ್ನೈದುವಂತೆಯೂ ಸ್ವರಾಜ್ಯವನ್ನು ಕೈಸೇರಿಸಿರಿ.

ದಕ್ಷಿಣ ಕನ್ನಡಾ:—ಪೆನ್ಶನ್ ಹೊಂದುವದಕ್ಕೆ ಮೊದಲು ನೆಲ್ಲೂರಿನಲ್ಲಿ ಜಡ್ಜರಾಗಿ ಹೋಗಿದ್ದ ದಿವಾನ ಬಹದ್ದೂರರಾ ರಾ ಆ. ವೆಂಕಟರಮಣ ಪೈಗಳವರನ್ನು ಸನ್ಮಾನಿಸಲಿಕ್ಕೆ ನೆಲ್ಲೂರಿನ ಸರ್ಕಾರಿ ವಕೀಲರು ರಾ. ರಾ. ಚಂಗಯ್ಯನವರು ಸೋಶಿಯೆಲ್ ಗಾದರಿಂಗ್ ಎಂಬ ಒಂದು ಕೂಟವನ್ನು [illegible]ದರು. ಗಾಯನ ತಾಂಬೂಲಾದ್ಯುಪಚಾರಗಳು ಒಬ್ಬ [illegible] ದಾರ ಹಾಸ್ಯಗಾರನ ರಸಿಕೋಕ್ತಿಗಳೂ [illegible] ಚಂಗಯ್ಯನವರು ದಿವಾನ ಬಹದ್ದೂರರವರ [illegible] ಲತೆ ಮೊದಲಾದ ಗುಣಾತಿಶಯಗಳನ್ನು [illegible] ದೇವರಿಂದ ಸೌಖ್ಯವನ್ನೂ ದೀರ್ಘಾಯುಸ್ಸನ್ನೂ [illegible]ದರು. ಅಭ್ಯಾಗತರು ತನಗೆ ನ್ಯಾಯವರ್ಗದಲ್ಲಿ [illegible] ಎಲ್ಲಾ ಕಡೆಗಳಲ್ಲಿಯೂ ವಿಶೇಷವಾಗಿ ನೆಲ್ಲೂರಿನ [illegible] ಗಳಾಗಿದ್ದರಿಂದ [illegible]

ಶಾಲಿವಾಹನ ಶಕ ೧೮೨೮ನೇ ಪರಾಭವ ಸಂವತ್ಸರದ ಪುಷ್ಯ ಬಹುಳ ಬಿದಿಗೆ ಕುಜವಾರದಾರಭ್ಯ ಮಾಘ ಶುದ್ಧ ಪಾಡ್ಯವು ಕುಜವಾರದ ವರೆಗಿನ ವಾರಪಂಚಾಂಗವು 1907ನೇ ಇಸವಿ ಜನವರಿ ತಾರೀಕು 1ರಿಂದ 15ರ ವರೆಗ

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ತಾ,	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ
1	ಕುಜ	ಬಿ	೫೫	ಪುನರ್ವ	೧೩।	8	ಕುಜ	ನವ	೪೭|||	ಚಿ	೨೦|||
2	ಬುಧ	ತ	೫೭|||	ಪುಷ್ಯ	೧೭|||	9	ಬುಧ	ದಶ	೪೨|||	ಸ್ವಾ	೧೭|||
3	ಗುರು	ಚೌ	೫೯	ಆಶ್ಲೇಷ	೨೧।	10	ಗುರು	ಏ	೩೭||	ವಿ	೧೪।
4	ಶುಕ್ರ	ಪ	೫೯।	ಮಘೆ	೨೩||	11	ಶುಕ್ರ	ದ್ವಾ	೩೧|||	ಅನು	೧೦||
5	ಶನಿ	ಷ	೫೮	ಹುಬ್ಬಾ	೨೪||	12	ಶನಿ	ತ್ರ	೨೬	ಜ್ಯೆ	೬।
6	ಆದಿ	ಸ	೫೫||	ಉತ್ತರೆ	೨೪।	13	ಆದಿ	ಚತು	೨೦।	ಮೂ	[illegible]
7	ಚಂದ್ರ	ಅ	೫೨	ಹಸ್ತ	೨೩।	14	ಚಂದ್ರ	ಅಮಾ	೧೪|||	ಉಷಾ	೫೪|||
						15	ಕುಜ	[illegible]	[illegible]	ಶ್ರ	[illegible]

ಪತ್ರಿಕಾಕರ್ತರ ವಿನಂತಿ.

ಕನ್ನಡ ಪತ್ರಕರ್ತರ ಹಲವು ತರದ ಅಭ್ಯಂತರಗಳು ಸಾಧಾರಣವಾಗಿ ಎಲ್ಲರಿಗೂ ತಿಳಿದವುಗಳೇ. ಹಾಗೂ ನಮ್ಮ ಪತ್ರದ ಕಲ್ಪನೆಯಂತೂ ಬಹಳ ಮಟ್ಟಿಗೆ ಈ ಜಿಲ್ಲೆಯಲ್ಲಿ ನವೀನವೆನ್ನಬಹುದು. ಈ ಕಾರಣದಿಂದಲೂ ಸ್ವತಹಾ ನಮಗೆ ಈ ಕಾರ್ಯದಲ್ಲಿ ಪರಿಚಯವಿಲ್ಲದ್ದರಿಂದಲೂ ಅನುಭವ ದೊರೆಯುವ ತನಕ ಅಲ್ಪಕಾಲ ನಮಗೆ ಆದರಪೂರ್ವಕ ಕೈಕೊಡಬೇಕೆಂದು ಪ್ರಾರ್ಥಿಸುವೆವು. ಯಾವ ಕಾರ್ಯಕ್ಕೂ ಅನುಭವವೇ ಪ್ರಧಾನ, ಹಾಗೆ ಅನುಭವ ಸಂಪಾದಿಸಿ ನಾವು ಪತ್ರವನ್ನು ಉತ್ಕೃಷ್ಟ ರೀತಿಗೆ ತರುವಂತೆ ನಮ್ಮ ಪರೀಕ್ಷಾ ಕಾಲದಲ್ಲಿ ನಮಗೆ ಸದುತ್ಸಾಹ ಹಿತಕಾರಿಗಳು ಕೈನೀಡುವರೆಂದು ಧೃಢವಾಗಿ ನಂಬಿದ್ದೇವೆ.

ಚಂದಾದಾರರನ್ನು ಸಂಗ್ರಹಿಸಿ ಕೊಟ್ಟ ನಮ್ಮ ಮಿತ್ರವರ್ಯರ ಹೃತ್ಪೂರ್ವಕ ಉಪಕಾರಸ್ಮರಣೆಯನ್ನು ಮಾಡುತ್ತೇವೆ.

ಪತ್ರಿಕಾಕರ್ತ

ಸ್ವದೇಶಾಭಿಮಾನಿಯಲ್ಲಿ ಪ್ರಕಟಣೆಗಳನ್ನು ಪ್ರಕಟಿಸುವದರ ದರ.

	೧ ಸಾರಿ	೪ ಸಾರಿ	೧೨ ಸಾರಿ	೨೪ ಸಾರಿ
ಇಡೀ ಪಾನು	ರೂ ೬	ರೂ. ೨೩	ರೂ ೪೮	ರೂ ೭೨
ಅರ್ಧ ಪಾನು	,, ೩ ೮	,, ೧೨	,, ೨೪	,, ೪೦
ಕಾಲು ಪಾನು	,, ೨ ೮	,, ೮	,, ೧೮	,, ೩೦
ಅರೆಕಾಲು ಪಾನು	,, ೧ ೮	,, ೫	,, ೧೩	,, ೨೨

ಅರೆಕಾಲು ಪಾನುಗಳಿಗಿಂತಲೂ ಸಣ್ಣದಾದ ಪ್ರಕಟಣೆಗಳ ದರವನ್ನು ಮೆನೇಜರರಿಗೆ ಬರೆದು ತಿಳಕೊಳ್ಳಬೇಕು

ಸ್ವದೇಶಾಭಿಮಾನಿಯ ಚಂದಾಹಣ

	ರೂ	ಆ.
ಟಪ್ಪಾಲು ಹಾಸಲು ಇಲ್ಲದೆ ೧ ವರ್ಷಕ್ಕೆ	೨	೦
ಟಪ್ಪಾಲು ಹಾಸಲು ಸಹಿತ ೧ ವರ್ಷಕ್ಕೆ	೧	೬
,, ಅರ್ಧ ವರ್ಷಕ್ಕೆ		೧೨

ಚಂದಾಹಣವನ್ನು ಮುಂದಾಗಿ ತೆರತಕ್ಕದ್ದು. ಪ್ರಕಟಣೆಗಳನ್ನೂ ಚಂದಾದಾರಿಕೆಯನ್ನೂ ಕುರಿತ ಈ ಕೆಳಗಿನ ವಿಳಾಸಕ್ಕೆ ಬರೆಯುವದು. ಈ ಪತ್ರಿಕೆ ತಿಂಗಳಿಗೆ ಎರಡಾವರ್ತಿ ಪ್ರಕಟಿಸಲ್ಪಡುವದು.

ಎಲ್ಲಾ ಕಡೆಯಲ್ಲಿಯೂ ಬಾತ್ಮಿದಾರರು ಬೇಕು. ಬಾತ್ಮಿದಾರರಿಗೆ ಒಂದು ಪ್ರತಿ ಉಚಿತವಾಗಿ ಕಳಹಿಸುವೆವು.

ವಿಳಾಸ — ಮೆನೇಜರ್ ಶಾರದಾ ಛಾಪಖಾನೆ, ಮಂಗಳೂರು,

DIARY FOR 1907.

೧೯೦೭ನೇ ಇಸವಿಯ ಡೈರಿ.

ಪರಿಮಾಣ 4" × 5½"

CONTENTS.

ಟಪ್ಪಾಲ್ ಆಫೀಸಿನ ಕ್ರಮ, ಸ್ಟಾಂಪು ಆಕ್ಟಿನ ಸಾರಾಂಶ; ಸಮ್ಮನ್ಸ್ ಮಾಡಲ್ಪಟ್ಟವರ ಪ್ರಯಾಣದ ವ ಇತರ ಖರ್ಚಿನ ಪಟ್ಟಿ, ಸಿವಿಲ್ ದೇಶೆದಾರರ ಜೀವನಕ್ಕಾಗಿ ತಿಂಗಳಂಗಟ್ಲೆ ಕೊಡತಕ್ಕ ಭತ್ತೆಯ ಪಟ್ಟಿ; 1907ನೇ ಇಸವಿಯ ಗ್ರಹಣಗಳು; ಸಂಕ್ರಮಣ ಕಾಲಗಳು; ವಿವಿಧ ಶಕಾಬ್ದಗಳು; ಗುರುಶುಕ್ರರ ಅಸ್ತೋದಯಗಳು; 1907ನೇ ಇಸವಿ ಹಿಂದು, ಕ್ರೈಸ್ತ, ಮಹಮ್ಮದಿಯರ ಹಬ್ಬಗಳು ಇತ್ಯಾದಿ. ಕ್ರಯ 6 ಆಣೆ. ಹದಿನೆರಡು ಪ್ರತಿಗಳನ್ನು ತೆಗದುಕೊಳ್ಳುವವರಿಗೆ ಒಂದು ಪ್ರತಿ ಕ್ರಯವಿಲ್ಲದೇನೇ ದೊರೆಕುವದು. ವ್ಯಾಪಾರಸ್ಥರಿಗೆ ಬೇರೆ ಕಮ್ಮಿದರ.

THE

MANGALORE TRADING ASSOCIATION.

FORMERLY

S. Nagappa Nayak & Co.

ಮಂಗಳೂರು

ಟ್ರೇಡಿಂಗ್ ಎಸೋಸಿಯೇಶನ್,

(ಮೊದಲು ಸುಜೀರ ನಾಗಪ್ಪ ನ್ಯಾಕ ಎಂಡ್ ಕೋ)

ಈ ಕಂಪೆನಿಯಲ್ಲಿ ಅನೇಕ ನಮೂನೆಯ ವಿಲಾಯತಿ ಔಷಧಗಳು, ಒಳ್ಳೇ ಪರಿಮಳ ದ್ರವಗಳು, ಚಾ, ಕೊಕೊವಾ ಬಿಸ್ಕೂಟು ಸಾಬೂನು, ಚುರುಟು, ಮುಂತಾದವುಗಳು, ಕಾಗದ ಪೆಟ್ಟಿಗೆ ಲಕೋಟೆ ಸಾಮಾನುಗಳು, ಕೋರ್ಟಿನ ಎಲ್ಲಾ ನಮೂನೆಯ ಫ್ರೋಮುಗಳು, ಕ್ರಯಕ್ಕೆ ದೊರೆಯುತ್ತವೆ. ಇದೇ ಕಂಪನಿಗೆ ಸಮ್ಮಂಧಪಟ್ಟ,

Sharada Press

ಶಾರದಾ ಮುದ್ರಾಲಯ

ಇಲ್ಲಿ ವಿವಾಹ ಪತ್ರಿಕೆಗಳು, ಎಲ್ಲಾ ನಮೂನೆಯ ಫ್ರೋಮುಗಳು ನೋಟೀಸುಗಳು, ಕನ್ನಡ ಮತ್ತು ಇಂಗ್ಲಿಷ ಪುಸ್ತಕಗಳು, ಯೋಗ್ಯರೀತಿಯಲ್ಲಿ ಮುದ್ರಿಸಲ್ಪಡುತ್ತವೆ. ಅಂಗಡಿ, ಬೇರೆ ವ್ಯಾಪಾರಸ್ಥರ ಬಗ್ಗೆ ತಯಾರಿಸಿದ ವರ್ಗ ಕಾಗದ ಪುಸ್ತಕಗಳು, ಯಾವಾಗಲೂ ಕ್ರಯಕ್ಕೆ ದೊರೆಯುತ್ತವೆ. ಇತರ ಪುಸ್ತಕಗಳನ್ನು ಬೇಕಾದ ನಮೂನೆಯಲ್ಲಿ ಬ್ಯಾಂಡು ಮಾಡಿಕೊಡಲಾಗುತ್ತದೆ.

TO LET.

Printed and published at the Mangalore Trad

ಸ್ವದೇಶಾಭಿಮಾನಿ

ಎಂಬ

ಕನ್ನಡ ಸಾಪ್ತಾಹಿಕ ಪತ್ರವು.

ಪುಸ್ತಕ 1. ಮಂಗಳೂರು, 16ನೇ ಜನವರಿ 1907. ಸಂಚಿಕೆ 2.

ಧರ್ಮ ಸರ್ವಸ್ವ

ಆಹಾರನಿದ್ರಾಭಯ ಮೈಥುನಂಚ ಸಾಮಾನ್ಯಮೇತತ್ ಪಶುಭಿರ್ನರಾಣಾಂ।
ಧರ್ಮೋಹಿತೇಷಾಮಧಿಕೋ ವಿಶೇಷೋ ಧರ್ಮೇಣಹೀನಾಃ ಪಶುಭಿಃಸಮಾನಾಃ॥

ಜಗತ್ತಿನಲ್ಲಿ ಧರ್ಮಗ್ಲಾನಿಯು ಸಂಭವಿಸಿ ಅಧರ್ಮವು ಯಾವಾಗ ಹೆಚ್ಚುವದೋ ಆಗ ತಾನು ಯುಗ ಯುಗಕ್ಕೂ ಅವತರಿಸುವೆನೆಂದು ಭಗವಾನ್ ಶ್ರೀಕೃಷ್ಣನ ವಾಕ್ಯವಿರುವದು. ಪ್ರಜೆಗಳಲ್ಲಿ ಪಾಪವು ಹೆಚ್ಚಿ ಜನರು ಪರಮಾತ್ಮನನ್ನೂ ಪರಲೋಕವನ್ನೂ ಮರೆತು ವಿಷಯಾಪರರಾಗಿ ಸದ್ವಿವೇಕವು ನಾಶವಾಗುವ ಕಾಲದಲ್ಲಿ ಲೋಕಕ್ಕೆ ಸನ್ಮಾರ್ಗವನ್ನು ಬೋಧಿಸಿ ಧರ್ಮವನ್ನು ಉದ್ಧರಿಸಲಿಕ್ಕೆ ದೇವಾಂಶನಾದ ಮಹಾ ಪುರುಷನು ಜನ್ಮವೆತ್ತುವನೆಂಬ ತತ್ವವನ್ನು ಈ ಗೀತಾವಾಕ್ಯವು ಬೋಧಿಸುವದು. **ಲೋಕದ ಇತಿಹಾಸವೂ ಈ ಸೂತ್ರಕ್ಕೆ ಪ್ರಮಾಣವಾಗಿದೆ.** ಈಗಿನ ಇಂಗ್ಲೀಷ ರಾಜ್ಯದಂತೆ ಪ್ರಾಚೀನ ಕಾಲದಲ್ಲಿ ಖ್ಯಾತಿಗೊಂಡ ರೋಮು ಸಾಮ್ರಾಜ್ಯವು [illegible] ಮುಂತಾದ ದುರಾತ್ಮರಾದ ಚಕ್ರವರ್ತಿಗಳ ಕಾಲದಲ್ಲಿ ಅನಾಚಾರದಿಂದ [illegible] ಕುಲೀನರು, ಸಾಮಾನ್ಯರು, ಬಡವರು, ದೊಡ್ಡವರು ಎನ್ನದೆ ಎಲ್ಲರೂ ಸಾ[illegible] ಧರ್ಮಗಳಲ್ಲಿ ಮಗ್ನರಾದರು. ದುಷ್ಕರ್ಮಗಳಲ್ಲಿ ಲೀನರಾದ ಜನರನ್ನು ಉದ್ಧರಿಸುವದಕ್ಕೆ ಆ ಲೋಕವಿಸ್ತಾರವಾದ ರಾಜ್ಯದ ಒಂದು ಮೂಲೆಯಲ್ಲಿ ಒಂದು ಹಳ್ಳಿಯಲ್ಲಿ ಕ್ರಿಸ್ತನು ಜನ್ಮಿಸಿದನು. ಮನೋವಾಕ್ಕಾಯಗಳಿಂದ ಸದ್ಧರ್ಮವನ್ನು ಬೋಧಿಸಿ ಧರ್ಮಕ್ಕಾಗಿ ಪ್ರಾಣವನ್ನು ಅರ್ಪಿಸಿದನು. ಈ ನಿಷ್ಕಳಂಕ ಜೀವನವೂ ಸನ್ಮಾರ್ಗ ಬೋಧೆಯೂ ಮೊದಲು ಹನ್ನೆರಡು ಜನರಲ್ಲಿ ಬೇರೂರಿ ಇವರು ಕ್ರಿಸ್ತನ ಶಿಷ್ಯರಾದರು. ಇವರ ವೃದ್ಧಿಯಿಂದ ಕ್ರೈಸ್ತಧರ್ಮವು ಬಲವಾಗ್ನಯಂತೆ ಹಬ್ಬಿ ಕ್ರಮೇಣ ಯುರೋಪು ಖಂಡವನ್ನಾವರಿಸಿತು. ಹಲವು ಶತಮಾನಗಳು ಕಳೆಯುತ್ತಾ ಈ ಮತದ [illegible] ದುರಾಚಾರಗಳು ಪ್ರವೇಶಿಸಿ ಧರ್ಮಬೋಧಕರೂ ಅಧರ್ಮದಲ್ಲಿ ಪ್ರವರ್ತಿಸಲು ಲೂಥರನು ಹುಟ್ಟಿ ಪ್ರೊತೆಸ್ತಾಂತ ಮತವನ್ನು ಸ್ಥಾಪಿಸಿದನು. ಇಂಗ್ಲಾಂಡಿನಲ್ಲಿಯೂ ಅಗಸ್ಟೈನ್ ವೆಸ್ಲಿ ವಿಕ್ಲಿಫ್ ಮೊದಲಾದವರು ಜನರನ್ನು ಧರ್ಮಮಾರ್ಗಕ್ಕೆ ತಂದರು. ಪುಣ್ಯಭೂಮಿಯೆನಿಸುವ ಹಿಂದೂ ದೇಶದಲ್ಲಿ ಬುದ್ಧ, ಶಂಕರಾಚಾರ್ಯ, ರಾಮಾನುಜ, ಚೈತನ್ಯ, ಕಬೀರ, ತುಕಾರಾಮ ಮುಂತಾದ ಮಹಾತ್ಮರು ಅವತರಿಸಿ ನೆರವೇರಿಸಿದ ಕಾರ್ಯವು ಎಲ್ಲರಿಗೂ ತಿಳಿದದ್ದೇ. ಧರ್ಮೋದ್ಧಾರಕ್ಕೆ ದೇವರು ತಾನು ಜನ್ಮವೆತ್ತುವೆನೆಂದರೆ, ಧರ್ಮವು ಸಮಾಜ ಸುಖಕ್ಕೆ ಎಷ್ಟು ಅವಶ್ಯಕರವಾಗಿರ ಬೇಕು?

ಒದರೆ ಧರ್ಮವನ್ನು ಆಚಾರದಿಂದ ಭೇದಿಸಬೇಕು. ಆಚಾರವು ದೇಶ, ಕಾಲ, ಜನವೆಂಬ ಬಾಹ್ಯ ಸಂದರ್ಭಗಳನ್ನನುಸರಿಸುವದು. ಜಗತ್ತಿನಲ್ಲಿರುವ ಬೇರೆ ಬೇರೆ ಮತಗಳು ಬೇರೆ ಬೇರೆ ಆಚಾರಗಳನ್ನು ವಿಧಿಸಿದ್ದರೂ ಅವು ಬೋಧಿಸುವ ಧರ್ಮ[illegible]ವು ಒಂದೇ: ಯಾವ ಮತವೇ ಆಗಲಿ ಸರ್ವಜ್ಞನಿಯೂ, ಸರ್ವಶಕ್ತನೂ, [illegible] ಅದೇ [illegible] ಮನುಷ್ಯನಿಗೆ [illegible]
[illegible]

ತಾಳನ್ನು ಮಾನವ ಬಂಗಿ ಕರೆಸುವನೋ ಅಂಥವನು ಪರಮಾತ್ಮನನ್ನೂ ಪರಲೋಕವನ್ನೂ ನಂಬಿದ್ದು ನಡೆಯ ಬೇಕು. ಸತ್ಯ, ಸದಾಚಾರ, ವಿನಯ, ಶಾಂತಿ, [illegible] ಲೋಕವ್ಯಕ್ತಿ ಎಂಬ ಸುಗುಣಗಳು ಅಂಥವನಲ್ಲಿ ನೆಲೆಗೊಳ್ಳುವವು. ಸಾಧಾರಣ ಮನುಷ್ಯನಲ್ಲಿ ಪಾಪದ ಅಂಜಿಕೆಯನ್ನು ಹುಟ್ಟಿಸಿ ಅವನನ್ನು ನೀತಿವಂತನನ್ನಾಗಿ ಮಾಡುವದು ಸಕಲ ಧರ್ಮಗಳ ಉದ್ದೇಶ್ಯವಾದ್ದರಿಂದ ಯಾವ ಮತಾವಲಂಬಿಯಾದರೂ ಸರಿ, ತನ್ನ ಧರ್ಮವನ್ನು ಶ್ರದ್ಧೆಯಿಂದಂಗೀಕರಿಸಿ ವಿಶ್ವಾಸದಿಂದ ನಡೆದರೆ ನೀತಿವಂತನಾಗಿ ಪ್ರಜೆಗಳಲ್ಲಿ ಯೋಗ್ಯನೆನಿಸುವನು. ಮಹಮ್ಮದೀಯರ ಮಸೀದಿಗಳಲ್ಲಿಯೂ, ಹಿಂದೂ ದೇವಾಲಯದಲ್ಲಿಯೂ, ಕ್ರಿಸ್ತ ಮಂದಿರಗಳಲ್ಲಿಯೂ ತಾನು [illegible] ಕಂಡನೆಂದು ಅಕ್ಬರನ ಪ್ರಸಿದ್ಧ ಮಂತ್ರಿಯಾದ ಅಬ್ದುಲ್ ಫಾಜಲನು [illegible] ಇದ ಸಾರ ನಮ್ಮ ಅರ್ಥವನ್ನು ವ್ಯಕ್ತಪಡಿಸುವದು. "ಏಕಂ ಸತ್ ವಿಪ್ರಾ ಬಹುಧಾವದಂತಿ" ಎಂಬ ವೇದವಾಕ್ಯವಿರುವದು.

ಸದಾಚಾರವು ಮನುಷ್ಯನಿಗೆ ಇಹಪರಲೋಕಗಳಲ್ಲಿ ಅಭಿವೃದ್ಧಿಗೆ ಅವಶ್ಯವು. ಜನಾಂಗದ ಮೇಲ್ಮೆಗೂ ಸದಾಚಾರವೇ ಆಗತ್ಯ. ಹಿಂದೂ ಜನಾಂಗದ ಧರ್ಮಬೋಧೆ [illegible] ದ ಗುಣದಿಂದ ಅದರ ಗೌರವ ನಾಶವು ಬರುವದೆಂದು ಲೋಕದ ಇತಿಹಾಸ [illegible] ಬಹುದು. [illegible] ದುರ್ದಶೆಯು ಇಂದಲ್ಲ ನಾಳೆ [illegible] ದೇ ಬರುವದು. ಹಿಂದೆ ಪಾರಸೀಯರ ಅಸಂಖ್ಯಾತ ಸೈನ್ಯಗಳನ್ನು ಚೆಲ್ಲಾಪಿಲ್ಲಿಯಾಗಿ ಚದರಿಸಿದ ಗ್ರೀಕರಲ್ಲಿ ದುರ್ನಡತೆಯು ಹೆಚ್ಚಿ ಜನರು ದೈವಹೀನರಾದ್ದರಿಂದ ದೇಶವು ರೋಮು ರಾಜ್ಯದ ಪಾಲಾಯಿತು. ಅದೇ ರೋಮನ್ನರು ಕ್ರಮೇಣ ರಾಜ್ಯ[illegible] ಪೂರ್ವದ ಸನ್ಮಾರ್ಗಗಳನ್ನು ತೊರೆದು ಭೋಗಾಸಕ್ತರಾಗಿ ಪೌರುಷವನ್ನು ಕಳೆದು ಕೊಂಡರು. ಆಗ ಸುತ್ತ ಮುತ್ತಲಿನ ಅನಾಗರಿಕ ಪಾಮರ ಕುಲಗಳು ತಡೆಕಡದ ಪ್ರವಾಹದಂತೆ ದೇಶದಲ್ಲಿ ಹರಡಿ ಲೂಟಿಮಾಡಿ ತಮ್ಮ ರಾಜ್ಯವನ್ನು ಸ್ಥಾಪಿಸಿದರು. ಪಾಪಿಷ್ಟ ಹೃದಯವು ಬಾಹುಬಲವನ್ನು ಹೀರುವದು, ಎಂದು [illegible] ಪ್ರಖ್ಯಾತ ಇಂಗ್ಲಿಷ ಕವಿಯು ಬರೆದಿರುವನು.

ದೇಶ [illegible] ದೇಶಾಭಿವೃದ್ಧಿಗೆ ಅವಶ್ಯಕವೆಂದು ರಾಜ್ಯಾಧಿಕಾರಿಗಳೂ ತಿಳಕೊಳ್ಳುತ್ತಾರೆ. ಈ ವಿಷಯವು ಧರ್ಮಸ್ಥಾಪನೆಯ ನೆವನದಿಂದ ಪರಮತಾವಲಂಬಿಗಳನ್ನು ಹಿಂಸಿಸಿ ಬಲಾತ್ಕಾರದಿಂದ ತಮ್ಮ ಮತಕ್ಕೆ ಸೇರಿಸಿಕೊಂಡ ಮೊಗಲ ಚಕ್ರವರ್ತಿ ಔರಂಗಜೇಬ, ಟಿಪ್ಪು ಮೊದಲಾದ ಮತಾಂಧರ ಚರಿತ್ರೆಯಿಂದ ಮಾತ್ರವಲ್ಲ, ಈಗಿನ ಸುಧಾರಣೆ ಹೊಂದಿದ ರಾಜ್ಯಗಳ ನಡತೆಯಿಂದಲೂ ಕಂಡು ಬರುವದು. ಅಮೇರಿಕದ ಅತ್ಯುನ್ನತ ರಾಜ್ಯವಾದ ಸಂಯುಕ್ತ ಸಂಸ್ಥಾನದಲ್ಲಿ ಕೆಲವು ಕಾಲಕ್ಕೆ ಮುಂಚೆಯೂ ಏಸ್ಯದಲ್ಲಿ ಅತ್ಯುತ್ಕೃಷ್ಟವೆನಿಸುವ ಜಪಾನದಲ್ಲಿ ಈಚೆಗೆ ನಡೆದ ಧರ್ಮಪರಿಷತ್ ಸಭೆಗಳೇ ಇದಕ್ಕೆ ದೃಷ್ಟಾಂತವಾಗಿವೆ. ದೇಶಾಭಿವೃದ್ಧಿಗೆ ಪ್ರಜೆಗಳಲ್ಲಿ ನಿಷ್ಪಕ್ಷಪಾತ, ನ್ಯಾಯಶೀಲತೆ, ಕಾರ್ಯಶ್ರದ್ಧೆ, ಧೈರ್ಯ ಮುಂತಾದ ಸುಗುಣಗಳಿರಬೇಕು. [illegible] ಧಾರ್ಮಿಕವಾಗಿ ಧರ್ಮಾಸಕ್ತಿಯುಳ್ಳವನಿಗೆ ಈ ಗುಣಗಳು ಲಭಿಸುವವು. ಮತ್ತು ಯಾವ ಆಪತ್ತಿನಲ್ಲಿಯೂ ಎಂಥಾ ಬಾಧಕಗಳಿಗೂ [illegible]
ಈಚೆ ತಿರುಗನು. [illegible] ಉದ್ದರಿಸಿದ [illegible]
ಧರ್ಮದಿಂದ ಆಸಕ್ತಿಯೂ [illegible]
[illegible]

ಅವರ ಧರ್ಮದೇವತೆಯು ಸಹಾಯದಿಂದ ಸಮರ [illegible] ಸಾರು ಮುಂದಿ ಕೌರವರನ್ನು ಗೆದ್ದರು.

ಧರ್ಮನಿರತನಾದವನಿಗೆ ಶ್ರದ್ಧೆಯೂ ಏಕಾಗ್ರ ಚಿತ್ತವೂ [illegible] ಅವನು ಲೌಕಿಕ ಕಾರ್ಯಗಳಲ್ಲಿ ಉದ್ಯುಕ್ತನಾದಾಗಲೂ ಅವುಗಳನ್ನು ಶ್ರದ್ಧೆಯಿಂದಲೂ ಏಕಾಗ್ರ ಮನದಿಂದಲೂ ನೆರವೇರಿಸುವನು. ಧರ್ಮದಿಂದ ಲಭಿಸುವ ಈ ಅಮೂಲ್ಯ ಗುಣಗಳಿಗೆ ಲೌಕಿಕ ಮಾರ್ಗದಲ್ಲಿಯೂ ಬೆಲೆಯುಂಟು. ಧರ್ಮನಿಷ್ಠೆಯೆಂಬ ಕಾರಂಜಿಯಿಂದ ಒಸರುವ ಶಕ್ತಿಯೆಂಬ ಪ್ರಾಣಪ್ರದಜಲವು ನಾವು ನಡೆಸುದ್ದಲ್ಲಿ ಹರಿದು ಸುತ್ತಲಿನ ಪ್ರದೇಶವನ್ನು ಫಲವತ್ತಾಗಿಸಗೊಡುವದು. ಧರ್ಮಪರಾಯಣತೆಯು ಸಮಾಜದಲ್ಲೆಲ್ಲಾ ಏಕಪ್ರಕಾರವಾಗಿ ಹಬ್ಬಿದರೆ ಎಲ್ಲಾ ಜನರ ಇಚ್ಛಾಶಕ್ತಿಯು ಒಂದೆಡೆಗೆ ಒಂದೇ ಕಡೆಗೆ ಚಲಿಸುವದರಿಂದ ದೇಶಾಭಿವೃದ್ಧಿಯ ಮಹೋದ್ದೇಶಗಳು ಕೈಗೂಡುವವು. ಭರತಖಂಡವನ್ನು ಮ್ಲೇಂಛರಿಂದ ಸೆಳಕೊಂಡ ಆರ್ಯರೂ, ಯುರೋಪ ಏಸ್ಯಾ ಅಮೇರಿಕ ಖಂಡಗಳಲ್ಲಿ ದಂತೆತ್ತಿ ರಾಜ್ಯಗಳನ್ನು ಸ್ಥಾಪಿಸಿದ ಅಜೇಯರೆನಿಸಿದ ಮಹಮ್ಮದಿಯರೂ, ಹಿಂದುಸ್ಥಾನದಲ್ಲಿ ಮಹಮ್ಮದಿಯರನ್ನು ಸೋಲಿಸಿ ಸ್ವರಾಜ್ಯವನ್ನು ಸ್ಥಾಪಿಸಿದ ಪೋರ್ಚುಗೀಸರೂ ತಮ್ಮ ತಮ್ಮ ಧರ್ಮದ ಹೆಸರಲ್ಲಿ ಜಯ ಹೊಂದಿರು. ಭವಾನಿಭಕ್ತನಾದ ಶಿವಾಜಿ ಮಹಾರಾಜನು ಸ್ವತಂತ್ರ್ಯಕ್ಕೆ ಹೋರಾಡುವಾಗ ತುಕಾರಾಮ ಮೊದಲಾದ ದೇವಪುರುಷರು ದೇವರ ರಾಜ್ಯವನ್ನು ಮಹಾರಾಷ್ಟ್ರದಲ್ಲಿ ಸ್ಥಾಪಿಸಿದ್ದರಿಂದ ಜಯಲಕ್ಷ್ಮಿಯು ಶಿವಾಜಿಯ ಕೈಸೇರಿದಳು. ದೇಶೋನ್ನತಿಗೋಸ್ಕರ (Servants of India Society) ಎಂಬ ಭಾರತವರ್ಷ ಸೇವಾಸಂಘವನ್ನು ಸ್ಥಾಪಿಸುವಾಗ ದೇಶವಾತ್ಸಲ್ಯದಲ್ಲಿ ಧರ್ಮವಿಶ್ವಾಸದ ಸೇರಬೇಕು ಎಂದು ಮಾ. ಗೋಖಲೆಯವರು ಹೇಳಿದರು. ಅಂದರೆ ಧರ್ಮಪರಾಯಣತೆಯು ಕಾರ್ಯಶ್ರದ್ಧೆಯನ್ನುಂಟು ಮಾಡಿ ಉತ್ಸಾಹಕ್ಕೆ ಬಲವಾದ ಪ್ರೇರಣೆಯನ್ನೊದಗಿಸುವದಂತಾಯಿತು.

ದೇಶೋನ್ನತಿಗೆ ಧರ್ಮವು ಅವಶ್ಯಕವೆಂದು ಸಾಧಾರಣ ಜ್ಞಾನವೂ ಇತಿಹಾಸ ಪರಿಚಿತಿಯೂ ಪ್ರತಿಪಾದಿಸುವವು. ಹೀಗಿರಲಾಗಿ ಆರ್ಯಭೂಮಿಯಲ್ಲಿ ಈಗ ತೋರುವ ಧರ್ಮೋತ್ಪತ್ತಿಯು ಅತೀ ಶೋಚನಿಯವಾದದ್ದು. ಅನೇಕರು ಧರ್ಮವೆಂದು ಕೆಲವು ಆಚಾರಗಳನ್ನು ಅನುಸರಿಸುವರು. ಕೆಲವರು ಹಿಂದೂ ಮತವು ಮೂರ್ತಿಪೂಜೆಯೆಂದು ಬಿಟ್ಟು ಬಿಟ್ಟು ಪರಮತಾವಲಂಬಿಗಳಾಗಿದ್ದಾರೆ. ಹಲವರು ಮತವೆಂಬ ಶಬ್ದವನ್ನೇ ಮರೆತು ಬಿಟ್ಟಿದ್ದಾರೆ. ಕಾಂಚನ ಭಜಕರಾದ ಅನೇಕರು ಸ್ವಾರ್ಥಮತಾವಲಂಬಿಗಳಾಗಿರುವರು. ಧರ್ಮಗ್ರಂಥೋದಕನೆನಿಸುವ ಅನೇಕರ ಸಂಗಡ ವೇದ, ಗೀತೆ, ಕಡೆಗೆ ಸಂಧ್ಯಾವಂದನೆಯ ಅರ್ಥ ಕೇಳಿದರೆ ಅದರ ಅರ್ಥವು ಗೂಢವಾದದ್ದು ತಿಳಿಯಲಶಕ್ಯ, ಶ್ಲೋಕಗಳನ್ನು ಪಾರ ಮಾಡ ಬೇಕನ್ನುವರು. ಆರ್ಯ ಸನಾತನಧರ್ಮ ಜ್ಯೋತಿಯು ಕುಂದಿ ಮಂದವಾಗಿ ಕರಿಹಿಡಿದು ಹೋಗಿದೆ, ದೇಶದ ಹೀನಸ್ಥಿತಿಗೆ ಇದೇ ಮುಖ್ಯ ಕಾರಣವಾಗಿದೆ.

ಈ ಸಂಕಷ್ಟವನ್ನು ನಿವಾರಿಸ ಬೇಕಾದರೆ ಮಕ್ಕಳಿಗೆ ಬಾಲ್ಯದಲ್ಲಿಯೇ ಧರ್ಮದ ಮೂಲತತ್ವಗಳನ್ನು ಕಲಿಸಿ ಸದಾಚಾರಕ್ಕೆ ಪ್ರೇರೇಪಿಸಬೇಕು. ಗಿಡವಾಗಿ ಬೊಗ್ಗದ್ದು ಮರವಾಗಿ ಬೊಗ್ಗದು. ಈ ಉದ್ದಿಶ್ಯ ಹಿರಿಯರು ಮಕ್ಕಳಿಗೆ ಎಳೇ ಪ್ರಾಯದಲ್ಲಿಯೇ ಉಪನಯನವನ್ನು ರಚಿಸಿದರು. ಈಗ ಉಪನಯನದಿಂದ ಹುಡುಗರಿಗೆ ನಿಜವಾಗಿ ಎಷ್ಟು ಧರ್ಮೋಪದೇಶವಾಗುತ್ತದೆಂದು ಎಲ್ಲರಿಗೂ ಗೊತ್ತದೆ. ಸರಕಾರದವರು ಮತಗಳಲ್ಲಿ ಪ್ರವೇಶಿಸದ್ದರಿಂದ ಪಾಠಶಾಲೆಗಳಲ್ಲಿ ಧರ್ಮೋಪದೇಶದ ಕ್ರಮವಿಲ್ಲ. ಕೆಲವು ಸಾರಿ ಮಿಶನ್ ಶಾಲೆಗಳಲ್ಲಿ ಕಲಿಯುವ ಹಿಂದೂ ಹುಡುಗರು ಸ್ವಧರ್ಮಹೀನರಾದ್ದರಿಂದ ಮಿಶನರಿಗಳ ಸತ್ಯವೇದವನ್ನು ನಂಬಿ ಪರಧರ್ಮವನ್ನು ಸೇರುವರು. ಈ ದುಸ್ಥಿತಿಯನ್ನು [illegible] ಶಾಲೆಗಳಲ್ಲಿ ಧರ್ಮವನ್ನು ಬೋಧಿಸಿ ಮತಾ[illegible] ಪ್ರೋತ್ಸಾಹ ಕೊಡಬೇಕು.

[illegible] ಹಿಂದು ಕಾಲೇಜಿನಲ್ಲಿ ಈ ರೀತಿ [illegible]ವದು. [illegible] ಹಿಂದೂ ಧರ್ಮಸಾರವನ್ನು ಸಂಗ್ರಹಿಸಿ ಇಂಗ್ಲೀಷಿನಲ್ಲಿ ಪುಸ್ತಕಗಳನ್ನು ರಚಿಸಿ ಬೇರೆ ಪಾಠಗಳಂತೆಯೇ ಅವನ್ನೂ ಕಲಿಸುವರು. ಈ ಪುಸ್ತಕಗಳಲ್ಲ [illegible] ಪ್ರವೀಣರಿ[illegible] ಕೊಟ್ಟ ಅಭಿಪ್ರಾಯವನ್ನು [illegible]. [illegible] ಹಿಂದೂ ಸರ್ವ ವಿದ್ಯಾಲಯ [illegible] ಒಂದು ಶಾಖೆಯನ್ನು ಸ್ಥಾಪಿಸುವರು. [illegible] ಹಿಂದೂ ಜನರನ್ನು [illegible]

ಕಳೆಯುತ್ತಾರೆ. ನಮ್ಮ [illegible] ಧನಾಢ್ಯರೂ ಮಠಾಧಿಪತಿಗಳೂ ಹೀಗೆಯೇ ಹಿಂದೂ ಶಾಸ್ತ್ರಜ್ಞರನ್ನು ನೇಮಿಸಿ ಜನರಿಗೆ ಧರ್ಮಬೋಧೆಯನ್ನು ಮಾಡಿದರೆ ಎಷ್ಟೋ ಒಳ್ಳೇದಿಲ್ಲ!

ನಾವು ಶ್ರದ್ಧೆಯಿಂದ ಪ್ರಯತ್ನಿಸಿದರೆ ನ್ಯಾಯಶೀಲರಾದ ಬ್ರಿಟಿಷರು ನಮ್ಮ ಸಂಕಷ್ಟಗಳನ್ನು ಪರಿಹರಿಸದಿರರು ಎಂದು ಇವರ ಮನೋನಿಶ್ಚಯ. ಈ ಸ್ಥಿರಬುದ್ಧಿಯ ದೆಸೆಯಿಂದಲೇ ಮನಗುಂದುಗಳನ್ನೂ, ಅಪಜಯವನ್ನೂ ಸಹಿಸಿ ಛಲದಿಂದ ಹೋರಾಡುವರು. ಕಾಂಗ್ರೆಸ್ ಸಭೆಯು 20 ವರುಷಗಳ ವರೆಗೆ ಕಂಠಶೋಷಣ ಮಾಡಿದರೂ ಇಂಗ್ಲೀಷರು ಕಿವಿಕೊಡುವದಿಲ್ಲವಲ್ಲಾ ಎಂದು ಇಲ್ಲಿ ಕೆಲವರಲ್ಲಿ ಅಸಂತುಷ್ಟಿ ಮೊಳೆಯಿತು. ಕರ್ಜನ್ ಪ್ರಭುಗಳ ಅಮಂಗಳಕರವಾದ ರಾಜನೀತಿಯು ಈ ಮೊಳಕೆಯನ್ನು ಪೋಷಿಸಿತು. ವಂಗಭಂಗದಿಂದ ಈ ಸಸಿಗೆ ಬೇರುನಾಟಿ ಫುಲ್ಲರ್ ದೊರೆಗಳ ... ಈ ವಿಷ ವೃಕ್ಷದ ಗೆಲ್ಲುಗಳು ಪ್ರಸರಿಸಿ ಬಂಗಾಳ ಸೀಮೆಯನ್ನಾವರಿಸಿದವು. ಇದರ ಗಾಳಿಯು ದೇಶದಲ್ಲೆಲ್ಲಾ ಪ್ರಸರಿಸಿ ಮನಸ್ತಾಪವನ್ನುಂಟುಮಾಡಿತು ... ಇವರು "ನಾವಿನ್ನು ರಾಜ್ಯಾಧಿಕಾರಿಗಳನ್ನು ಪ್ರಾರ್ಥಿಸಿ ಪ್ರಯೋಜನವಿಲ್ಲ, ... ಸ್ವಾವಲಂಬನದಲ್ಲಿಯಲ್ಲದೆ ಕಲ್ಯಾಣವಿಲ್ಲ" ಎಂದು ಹೇಳತೊಡಗಿದರು. ಹೀಗೆ ಕಾಂಗ್ರೆಸಿನಲ್ಲಿ ಎರಡು ಭಾಗಗಳು ಹುಟ್ಟಿದವು. ಒಂದು ಮಂದ ... ಜನ ಮಾರ್ಗವನ್ನು ಪ್ರತಿಪಾದಿಸುವ ... ಪಕ್ಷ. ಇನ್ನೊಂದು ಸ್ವಾವಲಂಬನವನ್ನು ಪ್ರಜಾಪ್ರಾಬಲ್ಯವನ್ನೂ ಬೋಧಿಸುವ ಇನ್ನೊಂದು ನವೀನ ಪಕ್ಷ. ಇವರ ಮತಭೇದಗಳು ಬೆಳೆದು ಕಾಂಗ್ರೆಸ್ ಮುರಿದುಹೋಗುವುದೋ ಎಂಬ ಭಯವು ಹುಟ್ಟಿದ್ದಾಯಿತು. ಈ ಸಮಯದಲ್ಲಿ ಎಲ್ಲರ ಕಣ್ಣುಗಳೂ ದಾದಾಭಾಯಿಯವರ ಕಡೆಗೆ ತಿರುಗಿದವು. ಇವರೊಬ್ಬರೇ ಸಭೆಯನ್ನು ಈ ಗಂಡಾಂತರದಿಂದ ವಿಮೋಚಿಸ ಶಕ್ತರೆಂದು ಎಲ್ಲರೂ ತಿಳಿದು ಗತವರ್ಷದ ಅಧ್ಯಕ್ಷಸ್ಥಾನವನ್ನು ಏಕಸ್ವರದಿಂದ ಇವರಿಗೆ ಒಪ್ಪಿಸಿದರು. 82 ವರ್ಷದ ಯೋಗ್ಯರು ಪ್ರತಿಗಳ ವಿನಂತಿಯನ್ನು ಮನ್ನಿಸಿ ವಿಲಾಯತಿಯಿಂದ ಚಿತ್ತೈಸಿದರು. ಕಳೆದ ದಶಂಬರ 14ನೇ ಶುಕ್ರವಾರ ಬೊಂಬಾಯಿಯಲ್ಲಿ ಹಡಗದಿಂದಿಳಿದಾಗ ಜನರು ಕೊಟ್ಟ ಸ್ವಾಗತವು ರಾಜರಿಗೆ ಸಿಕ್ಕುವ ತೆರದ್ದು. ನೆಲ ಹತ್ತುವಾಗ ಪ್ರಜಾನಾಯಕನಿಗೆ ಜಾತಿ ಮುತ್ತುಗಳ ಅಭಿಷೇಕವಾಯಿತು. ಹೊರಟ ಘಳಿಗೆಯಿಂದ ಮನೆಗೆ ತಲಪುವ ವರೆಗೂ ನೆರೆದ ಜನಸ್ತೋಮದ ಭರದಿಂದ ಬಂಡಿಗಳು ಒಂದು ಸಾಲು ಕಟ್ಟಿ ಹೋಗುವದು ಕಷ್ಟಸಾಧ್ಯವಾಯಿತು. ದಾದಾಭಾಯಿಯವರ ಮೋಟಾರ್‌ಕಾರ್ ಅವರಿಗೆ ಅರ್ಪಿಸಿದ ಪುಷ್ಪ ಗುಚ್ಛಗಳಿಂದಲೇ ತುಂಬಿ ಹೋಯಿತು. ಅನೇಕ ಕಡೆಗಳಲ್ಲಿ ಅಡ್ರೆಸ್ಸುಗಳನ್ನು ನಾನಾ ವಿಧವಾದ ಬೆಳ್ಳಿ ಬಂಗಾರಗಳ ಪಾತ್ರೆಗಳಲ್ಲಿಟ್ಟು ಪಾತ್ರೆಗಳ ಸಮೇತ ಅವುಗಳನ್ನು ಸಮರ್ಪಿಸಿದರು. ಬೀದಿ ಬೀದಿಗಳಲ್ಲಿಯೂ ಇವರ ಗುಣಾತಿಶಯಗಳನ್ನು ಹಲವು ಬಗೆಯಲ್ಲಿ ಶ್ಲಾಘಿಸುವ ಪತಾಕೆಗಳು ತೂಗುತ್ತಿದ್ದವು. ಜವಳಿ ಸಾವುಕಾರರು ರೇಷ್ಮೆ ವಸ್ತ್ರಗಳಿಂದಲೂ ಹೂವಾಡಿಗರು ಪುಷ್ಪಹಾರಗಳಿಂದಲೂ ಮಿಠಾಯಿಕಾರರು ಮಿಠಾಯಿಗಳಿಂದಲೂ ತೋರಣಗಳನ್ನು ಕಟ್ಟಿದರು. ಎಲ್ಲಾ ಜಾತಿಯ ಎಲ್ಲಾ ಮತಗಳ ಎಲ್ಲಾ ವಂಶಗಳ ಸ್ತ್ರೀ ಪುರುಷರು ಅಲ್ಲಲ್ಲಿ ಸಾಗರಗಳಂತೆ ಕೂಡಿದರು. ಇಷ್ಟು ಜನರ ಹೃದಯವನ್ನು ಒಳಕೊಳ್ಳುವ ಹೃದಯವು ತಾನೆಷ್ಟು ವಿಸ್ತಾರವಾಗಿರಬೇಕು?

ತಾರೀಕು 17ರಲ್ಲಿ ಬೊಂಬಾಯಿಯ ಸ್ವದೇಶಿ ಕೊಆಪರೇಶನ್ ಸ್ಟೋರ್ ಯಾನೆ ಸ್ವದೇಶ ಸಾಮಾಗ್ರಿ ಭಂಡಸಾಲೆಗೆ ಮುಹೂರ್ತ ಮಾಡಿದರು. ಈ ಸಂದರ್ಭದಲ್ಲಿ ನಮ್ಮವರು ಉತ್ಸಾಹ, ಪರಸ್ಪರ ಸಹಾಯ ಕಾಮಗಿರಿಯಲ್ಲಿ ಸಮಗ್ರ ಪರಾಮರ್ಶೆ ... ಕಲಿಯಲಿಕ್ಕೆಂದೆಯೂ ಈ ಸ್ಟೋರ್ ಸ್ಥಾಪಕರು ಸ್ವದೇಶಿ ಕಾರ್ಖಾನೆಗಳಿಗೂ ... ಇಲ್ಲದೆ ವ್ಯಾಪಾರಸ್ಥರಿಗೂ, ಸಹಾಯಕರಾಗಿರತಕ್ಕದೆಂದೂ ಒಪ್ಪಣೆ ಕೊಡಿ... ಕಾಂಗ್ರೆಸಿನಲ್ಲಿ ಇವರು ಕೊಟ್ಟ ಭಾಷಣದ ಅಂತರಂಗವನ್ನು ಮೊದಲೇ ಭಾ... ... ಸ್ವರಾಜ್ಯ ಸಿದ್ಧಿ ತಾತ್ಪರ್ಯವೂ ಸಹಾನುಭೂತಿಯೂ ಈ ಸಂಧಿ... ಪ್ರಯೋಜನಕಾರಿಯಾಗಿ ಕಾಂಗ್ರೆಸಿನಲ್ಲಿ ಭಿನ್ನಮತಗಳಿಗೆ ಅಪ್ರತಿಮದ ... ಭಾಷಣವನ್ನು ಇವರು ಮಾಡಿದರು.

ಈ ಮಹನೀಯರಿಂದ ನಮಗಾದ ಪ್ರಯೋಜನವು ಸಾಂಗವಾಗಿ ಸದ್ಯಾ ಅಳೆಯಲಾಗುವದಿಲ್ಲ. ಈ ಬಂಜರುಬಿದ್ದ ಭಾರತವರ್ಷದ ಶ್ರೇಯಸ್ಸೆಂಬ ಭೂಮಿಯನ್ನು ಉತ್ತು ಸರಿಮಾಡಿ ಬಿತ್ತಿ ನೀರು ಹಾಯ್ಸುವ ಕೆಲಸವು ನವರೋಜಿಯವರ ಪಾಲಿಗೆ ಬಿತ್ತು. ಈ ಕಲಸದ ಮಹತ್ವಿಕೆಯು ದೃಷ್ಟಿಗೋಚರವಾಗುವದಿಲ್ಲ. ಆದರೂ ಮುಂದೆ ದೇವತಾನುಗ್ರಹದಿಂದ ಬಂಗಾರದಂತಹ ಪೈರು ಕೂಡಿಸುವಾಗ ದಾದಾಭಾಯಿಯ ಉಪಕಾರವು ಹಿಂದುಸ್ಥಾನದ ಭಾವಿ ಪೀಳಿಗೆಗಳಿಗೆ ವ್ಯಕ್ತವಾಗುವದು. ಇಂಥಾ ದೃಷ್ಟಿಗೋಚರವಾಗದ ಪ್ರತಿಫಲ ದೊರೆಯುವ ಹೋರಾಟದಲ್ಲಿ ನಿರಲಸತೆಯಿಂದ ಪ್ರವೃತ್ತರಾದವರಿಗೆ ಎಷ್ಟು ಧೈರ್ಯ ಸ್ಥೈರ್ಯ ದೇಶಾನುರಾಗಗಳಿರಬೇಕು.

ನವರೋಜಿಯವರು ಮೊನ್ನೆಸಾರಿ ದೇಶಕ್ಕೆ ತೆರಳಬೇಕಾದರೆ ವಿಲಾಯತಿಯಲ್ಲಿ ಬ್ರಿಟಿಷ ಹಿಂದೂ ಮಿತ್ರರು ಇವರಿಗೆ ಆಮಂತ್ರಣ ಮಾಡಿದರು. ಆ ಕಾಲದಲ್ಲಿ ಪ್ರೊ. ... ವಾಡ್ಯಾ ಎಂಬವರು ಇವರ ಹೆಸರು ಗುಣವಾಚಕವೆಂದು ವ್ಯಾಖ್ಯಾನ ಮಾಡಿದರು. ದಾದಾ ಶಬ್ದಕ್ಕೆ (ದೇಶದ) ತಂದೆಯೆಂದೂ, ಭಾಯಿ ಶಬ್ದಕ್ಕೆ (ಹೆತ್ತವಳ ಸುಪುತ್ರ) ಭ್ರಾತೃವೆಂದೂ, ನವರೋಜಿ ಶಬ್ದಕ್ಕೆ (ಪ್ರಬುದ್ಧ ಭಾರತೀಯರು ...) ಹೊಸ ದಿನವನ್ನು ತೋರಿಸ್ಸುವವನೆಂದೂ ವ್ಯಾಖ್ಯಾನ ಮಾಡಿದರು. ಈ ಪತಿತ ಭೂಮಿಯನ್ನು ... ಪುನಃ ಸಂಸ್ಥಾಪಿಸಿ ಭಾರತವರ್ಷದಲ್ಲಿ ... ಇಂದು ಈ ... ಭೂಮಿಯು ... ಮತ್ತ ... ಹೇಳಾಟಗಳ ... ದಲ್ಲಿ...

ಸತ್ತವರೇಳುವದು.

...ಯೋರ್ಕದಲ್ಲಿಯ ಒಬ್ಬ ಇಂಗ್ಲೀಷ ಡಾಕ್ಟರನು ಒಂದು ಸಾಯಂಕಾಲ ತನ್ನ ಚಿಕಿತ್ಸಾಕಾರ್ಯವಾಗಿ ತನ್ನ ಕೋಣೆಯಲ್ಲಿ ಕುಳಿತುಕೊಂಡಿರಲು ಆತನ ಬಾಗಿಲ ದ್ವಾರದಲ್ಲಿ ... ಅಲ್ಲಿಗೆ ಬಂದು ಯಾರೋ ಒಬ್ಬ ಹುಡುಗಿಯು ತನ್ನನ್ನು ಕರೆಯುತ್ತಿರುತ್ತಾಳೆಂದನು. ತಾನು ಬಹಳ ದಣಿದಿದ್ದದರಿಂದ ನೆರೆಯ ಇನ್ನೊಬ್ಬ ಡಾಕ್ಟರನನ್ನು ಕರೆದುಕೊಂಡು ಹೋಗಲಿ ಎಂದು ಆ ಡಾಕ್ಟರನು ನೆರೆಯವನ ವಿಳಾಸವನ್ನು ತನ್ನ ನೌಕರರ ಮೂಲಕ ಆಕೆಗೆ ತಿಳಿಸಿದನು. ಆದರೆ ಹುಡುಗಿಯು ಈ ಮಾತುಗಳಿಂದ ಸಮಾಧಾನ ಹೊಂದದಿರಲು ವೈದ್ಯನು ತಾನು ಸ್ವತಹಾ ಹೊರಗೆ ಹೋಗಿ ಹುಡುಗಿಯನ್ನು ಕೇಳಲು ಅವಳ ದೈನ್ಯಭಾವದಿಂದ ಕನಿಕರ ಪಟ್ಟು ಆ ಪ್ರಸ್ಥದಲ್ಲಿರುವ ಅವಳ ತಾಯಿಯನ್ನು ನೋಡುವ ಬಗ್ಗೆ ಗಾಡಿ ಹತ್ತಿ ಹುಡುಗಿಯ ಸಂಗಡ ಹೊರಟು ಹೋದನು. ಇಬ್ಬರು ರೋಗಿ ತಾಯಿಯವಳು ಇದ್ದ ಉಪ್ಪರಿಗೆಯನ್ನು ಹತ್ತಿದರು. ಆದರೆ ಹುಡುಗಿಯು ತಾಯಿಯು ಇರುವ ಕೋಣೆಯನ್ನು ವೈದ್ಯನಿಗೆ ತೋರಿಸಿಕೊಟ್ಟು ಅಲ್ಲಿಂದ ಮಾಯವಾದಳು. ತಾಯಿಯನ್ನು ಪರೀಕ್ಷಿಸಿ ನೋಡಿ ಆ ಡಾಕ್ಟರನು "ನಿನಗೆ ಪ್ರಾಪ್ತಿಯಾದ ರೋಗವು ಅಂಟುರೋಗವಾದ್ದರಿಂದ ನೀನು ಇಲ್ಲಿರದೆ ಒಳ್ಳೇ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಮಾಡಿಸಿಕೊ, ಇಲ್ಲಿ ಇದ್ದರೆ ನಿನ್ನ ಮಗಳಿಗೂ ಇದೇ ರೋಗವು ತಗಲುವದೆಂದು" ಹೇಳಲು, ಆ ಬಡ ಹೆಂಗಸು ದುಃಖದಿಂದ ಕಣ್ಣೀರು ತುಂಬಿ "ಅಯ್ಯಾ, ದೇವರು ನನಗೆ ಒಬ್ಬಳೇ ಮಗಳನ್ನು ದಯಪಾಲಿಸಿದರೂ ಅವಳನ್ನು ಇರಗೊಡಿಸುವ ಭಾಗ್ಯವು ನನಗಿರಲಿಲ್ಲ" ಎಂದಳು. ಇವಳ ಮಗಳು ಮುಂಚಿನ ದಿವಸವೇ ಅದೇ ರೋಗದಿಂದ ಮೃತಪಟ್ಟಳೆಂತಲೂ ಅವಳ ಶವವು ತಾಯಿ ಇರುವ ಕೆಳಗಿನ ಕೋಣೆಯಲ್ಲಿದೆ ಎಂದೂ ಡಾಕ್ಟರನು ತಾಯಿಯಿಂದ ತಿಳಿದು ಆ ಕೋಣೆಗೆ ಹೋಗಿ ನೋಡಿ ಶವವನ್ನು ಪರೀಕ್ಷಿಸಲು ತನ್ನನ್ನು ಕರೆದುಕೊಂಡು ಬಂದ ಹುಡುಗಿ ತಾನು ಅಲ್ಲಿಗೆ ಬರುವ 24 ತಾಸುಗಳ ಮುಂಚೆ ಮೃತಪಟ್ಟವಳೆಂದು ನಿರ್ಧರಿಸಿ ಬಹಳ ಆಶ್ಚರ್ಯಪಟ್ಟನು.

ಸತ್ತವರೇಳುವದೆಂದರೇನು? ಆದರೆ ಪ್ರಾಣಿಗಳು ... ದೇಹವನ್ನು ಬಿಟ್ಟ ಕೂಡಲೇ ಸೂಕ್ಷ್ಮಶರೀರ ಎಂಬ ಇನ್ನೊಂದು ... ವದೆಂಬದನ್ನು ಈ ಕಥೆಯು ಸೂಚಿಸುವದು.

ಪತ್ರವ್ಯವಹಾರ

ರೈತರ ಕೃತಗಳ ಮೇಲಿನ ತೆರಿಗೆ

ಅಯ್ಯಾ ಪತ್ರಕರ್ತರೇ,

ಈಚೆಗೆ ಕುಂಭಕೋಣದಲ್ಲಿ ನೆರೆದ ಎಗ್ರಿಕಲ್ಚರಲ್ ಅಸೋಸಿಯೇಷನಿನವರ ಸಭೆಯ ಮುಂದೆ ಎಗ್ರಿಕಲ್ಚರಲ್ ಡಿರೆಕ್ಟರರು—ರೈತನು ತನ್ನ ಬುದ್ಧಿ ಚಾತುರ್ಯದಿಂದಲೂ ಹಣ ವೆಚ್ಚದಿಂದಲೂ ಮಾಡಿದ ಕಷ್ಟ ಕೃತಗಳಿಂದ ಉಂಟಾಗಬಹುದಾದ ಪೂರ್ಣ ಪ್ರಯೋಜನವನ್ನು ರೈತನೇ ಪಡೆಯಬೇಕೆಂಬ ತಮ್ಮ ಖಂಡಿತ ಅಭಿಪ್ರಾಯವನ್ನು ರೆವೆನ್ಯು ಬೋರ್ಡಿನವರೂ ಮದ್ರಾಸ ಗವರ್ನಮೆಂಟಿನವರೂ ಇಂಡಿಯಾ ಗವರ್ನಮೆಂಟಿನವರೂ ಸಹಾ ಕೊಟ್ಟಿರುತ್ತಾರಾಗಿ ಭರವಸ ಕೊಟ್ಟರೆಂತ ತಮ್ಮ ಪ್ರಥಮ ಸಂಚಿಕೆಯ 5ನೇ ಪಾನಿನಲ್ಲಿ ತಾವು ಪ್ರಕಟಿಸಿದ ವರ್ತಮಾನವು ತಮ್ಮ ವಾಚಕರನ್ನು ಹರ್ಷಿಸುವದಲ್ಲದೆ ಅವರಲ್ಲಿ ವಿಶೇಷ ಚರ್ಚೆಗೆ ಆಸ್ಪದ ಕೊಟ್ಟಿರುತ್ತದೆ. ನಮ್ಮ ತಲೆ ಮೇಲೆ ಈಗ ಇಟ್ಟ ರೆವೆನ್ಯು ಸೆಟ್ಲಮೆಂಟಿನ ಹೊರೆ ಇಳಿಸಿ ತೆರಿಗೆ ಪೂರ್ವಸ್ಥಿತಿಗೆ ತಂದಿಟ್ಟು ವಿನಹಾ ತಾವು ಕೊಟ್ಟ ವರ್ತಮಾನವು ನಮಗೆ ಸಂತೋಷ ಕೊಡದು.

ಶ್ರೀಮಾನ್ ರಮೇಶ ಚಂದ್ರದತ್ತರವರು ಸೆಟ್ಲಮೆಂಟಿನಿಂದ ರೈತರಿಗೆ ಉಂಟಾಗುವ ಬಾಧಕಗಳನ್ನೂ ಜಮೀನು ಮೇಲೆ ಹೊರಿಸಿದ ತೆರಿಗೆ ಶಾಶ್ವತವಾದರೆ ಜನರಿಗೆ ಸಿಕ್ಕುವ ಪ್ರಯೋಜನಗಳನ್ನೂ ಸವಿಸ್ತಾರವಾಗಿ ವಿವರಿಸಿ, 1900ನೇ ಇಸವಿ ಫೆಬ್ರವರಿ ತಾರೀಕು 20ರಲ್ಲು ಮಾಡಿದ ಅರ್ಜಿಯನ್ನು ಮ್ಯಾಸರ್ಸ ಧೊರೆಗಳು ರೆವೆನ್ಯು ಬೋರ್ಡಿಗೆ ಕಳುಹಿಸಿದರು. ರೆವೆನ್ಯು ಬೋರ್ಡಿನವರ ಕಡೆಯಿಂದ ಕೆಲಂಚಕಾಲ ನಮ್ಮ ಜಿಲ್ಲೆಯ ಕಲೆಕ್ಟರರಾಗಿದ್ದ ನಿಕೊಲ್ಸನ್ ಧೊರೆಗಳು ಜನರ ಹಿತಚಿಂತಕರಾಗಿ ವಿಶೇಷ ಸಾಹಸದಿಂದ ರಮೇಶ ಚಂದ್ರ ದತ್ತರ ಅಭಿಪ್ರಾಯಗಳನ್ನೆಲ್ಲಾ ಖಂಡನೆ ಮಾಡಿ ಗವರ್ನಮೆಂಟಿನವರು ಸೆಟ್ಲಮೆಂಟು ಮಾಡುವಂಥಾದ್ದು ಸರ್ವ ತರದಲ್ಲಿಯೂ ನ್ಯಾಯ್ಯವೇ ಸರಿ ಎಂಬದಾಗಿ ಅಭಿಪ್ರಾಯ ಕೊಟ್ಟರು. ಈ ಅಭಿಪ್ರಾಯವು ರೆವೆನ್ಯು ಬೋರ್ಡಿನವರ ಅಭಿಪ್ರಾಯವಾಗಿ ಮದ್ರಾಸ ಗವರ್ನಮೆಂಟಿನವರೂ ಸ್ವೀಕರಿಸಿದ್ದಲ್ಲದೆ ರಮೇಶ ಚಂದ್ರ ದತ್ತರ ಆಕ್ಷೇಪಗಳನ್ನೆಲ್ಲಾ ಖಂಡನೆ ಮಾಡಿದಂಥ ನಿಕೊಲ್ಸನ್ ಧೊರೆಗಳ ಸಾಮರ್ಥ್ಯವನ್ನು ಹೊಗಳಿ ಅವರಿಗೆ ಧನ್ಯವಾದ ಕೊಟ್ಟು, 1901ನೇ ಇಸವಿ ಮಾರ್ಚ ತಿಂಗಳ ತಾರೀಕು 13ರಲ್ಲು ಪ್ರೊಸೀಡಿಂಗ್ಸ್ ದ್ವಾರಾ ಪ್ರಕಟಿಸಿದರು. ಮದ್ರಾಸು ಗವರ್ನಮೆಂಟಿನವರ ಅಭಿಪ್ರಾಯ ಇಂಡಿಯಾ ಗವರ್ನಮೆಂಟಿನವರು ಒಪ್ಪಿ ಜಮೀನಿನ ಬೇರೀಜು ಆಗ್ಯಾಗ್ಯೆ ತಬ್ದೀಲ್ ಆಗುವಂಥಾದ್ದು ರೈತರಿಗೆ ಒಳ್ಳೇದೆಂತಲೂ, ಯಾವ ದೇಶದಲ್ಲಿ ಸೆಟ್ಲಮೆಂಟು ಮಾಡಿಯದೋ ಅಲ್ಲಿ ಸುಭಿಕ್ಷ ... ದುರ್ಭಿಕ್ಷೆಯಿಲ್ಲವೆಂತಲೂ ಸೆಟ್ಲಮೆಂಟು ಆಗದ ದೇಶಗಳಲ್ಲಿ ದುರ್ಭಿಕ್ಷೆ ಬಂದದ್ದುಂಟೆಂತಲೂ, ತಮ್ಮ ಅಭಿಪ್ರಾಯ ಪ್ರಕಟಿಸಿದರು. ಈ ಅಭಿಪ್ರಾಯಕ್ಕೆ ಅನುಗುಣವಾಗಿ ನಮ್ಮ ಜಿಲ್ಲೆಯಲ್ಲಿಯೂ ಸೆಟ್ಲಮೆಂಟು ಕೆಲಸ ಪ್ರಾರಂಭವಾಗಿ ಮುಗಿಯಿತು. ಕೆಲಸ ಉತ್ತಮ ರೀತಿಯಲ್ಲಿ ನಿರ್ವಹಿಸಿದರೆಂತ ಸೆಟ್ಲಮೆಂಟು ಆಫೀಸರರಾಗಿದ್ದ ಕೌಚಮಾನ್ ಧೊರೆಗಳು ಬಡ್ತಿ ಹೊಂದಿ ಮದ್ರಾಸಿಗೆ ಹೋದರು. ಸೆಟ್ಲಮೆಂಟು ಕೆಲಸ ಮಾಡಿದ ಇಬ್ಬರು ಡಿಪ್ಯುಟಿ ಕಲೆಕ್ಟರರಲ್ಲಿ ಒಬ್ಬರಿಗೆ ರಾವು ಬಹದೂರ ಎಂಬ ಪದವಿ ಸಿಕ್ಕಿತು. ಇನ್ನೊಬ್ಬರಿಗೆ ಇಂಥಾ ಪದವಿ ಬಹುಬೇಗನೇ ಸಿಕ್ಕುವದು. ಸಂಗತಿಗಳು ಹೀಗೆ ಇರುವಾಗ್ಯೆ ಸೆಟ್ಲಮೆಂಟು ಜನರಿಗೆ ಕ್ಷೇಮಕರವೆಂತಲ್ಲ ನಾವು ತಿಳಕೊಳ್ಳಬೇಕಾದ್ದಲ್ಲವೇ.

ಹೀಗಿರುವಲ್ಲಿ ರೈತನ ಪರಿಶ್ರಮದ ಫಲವು ಪೂರ್ಣವಾಗಿ ರೈತನಿಗೇನೇ ಸಿಕ್ಕುವದು ಎಂಬದಾಗಿ ಎಗ್ರಿಕಲ್ಚರಿನ ಡಿರೆಕ್ಟರರು ಕುಂಭಕೋಣದಲ್ಲಿ ಭರವಸ ಕೊಟ್ಟರೆಂತ ತಾವು ಕೊಡುವ ವರ್ತಮಾನದ ಅರ್ಥವು ನಮಗೆ ಸ್ಪಷ್ಟವಾಗಿ ತಿಳಿಯದು.

ಸೆಟ್ಲಮೆಂಟು ಮಾಡುವದು ರೈತರಿಗೆ ಕ್ಷೇಮಕರವಲ್ಲವೆಂತಲೂ ನ್ಯಾಯವಿರುದ್ಧವೆಂತಲೂ ತೋರಿಸುವ ಉದ್ದೇಶ್ಯ ರಮೇಶ ಚಂದ್ರದತ್ತರು ತಮ್ಮ ಮನವಿಯಲ್ಲಿ ವಿವರಿಸಿದ ಕಾರಣಗಳಲ್ಲಿ ಮುಖ್ಯವಾದದ್ದು ಯಾವದೆಂದರೆ—ಪರ್ಮನೆಂಟಾಗಿ ಬೇರೀಜು ಒಪ್ಪಿ ನಿರ್ಣಯಿಸಿದ ನಂತರ ಆ ಬೇರೀಜು ಶಾಶ್ವತವೇ ಎಂತಲೂ, ವರ್ಗದಾರರು ವರ್ಗದ ಧನಿಗಳೇ ಎಂತಲೂ ಸುಮಾರ ಒಂದು ಶತಮಾನದ ಹಿಂದಿನಿಂದ ಕಾನೂನು ಮೂಲಕ ಪ್ರಕಟಿಸಿ ಜಮೀನ್ ಬೇರೀಜು ಶಾಶ್ವತವೆಂತ ಸರಕಾರದವರು ಜನರಲ್ಲಿ ನಂಬಿಕೆ ಉಂಟು ಮಾಡಿರತ್ತಾ ಅಂಥಾ ನಂಬಿಕೆಗೆ ವಿರೋಧವಾಗಿ ಸೆಟ್ಲಮೆಂಟು ಮಾಡುವದು ನ್ಯಾಯವಲ್ಲವೆಂಬುವದೇ.

ಇದಕ್ಕೆ ಉತ್ತರವಾಗಿ ನಿಕೊಲ್ಸನ್ ದೊರೆಗಳು ಸರಕಾರದವರು ಜನರಲ್ಲಿ ಕಾನೂನು ಮೂಲಕ ಉಂಟುಮಾಡಿದ್ದ ಆ ನಂಬಿಕೆ ಕಾನೂನು ಪ್ರಕಾರ ಸರಕಾರದವರಿಗೆ ಬಾಧಿಸತಕ್ಕದ್ದಲ್ಲ. ... 7?? ನೇ ಇಸವಿಯಲ್ಲಿ ಕಸೆಲ್ ರೀಡ್ ದೊರೆಗಳು ಬೇರೀಜು ಶಾಶ್ವತವೆಂತ ಮಾಡಿದ ಪ್ರಕಟಣೆ ನ್ಯಾಯವಾಗಿ ಸರಕಾರದಿಂದ ಅಧಿಕಾರ ಹೊಂದಿ ಮಾಡಿದ್ದಲ್ಲವೆಂತಲೂ 1802ನೆ ಇಸವಿ ಊರ್ಜಿತವಾಯಿತು ಮದ್ರಾಸ ಗವರ್ನಮೆಂಟಿನವರು ಜಮೀನ್ ಬೇರೀಜಿನ ಕುರಿತು ಮಾಡಿದ ರೆಗ್ಯುಲೇಶನ್‌ಗಳ ಅರ್ಥವು ಸರಿಯಾಗಿ ಮಾಡಿದರೆ ಜಮೀನ್ ಬೇರೀಜು ಶಾಶ್ವತ ಮಾಡಿದ್ದೆಂತ ತಿಳಕೊಳ್ಳಲಿಕ್ಕೆ ಆಧಾರ ಸಿಕ್ಕುವದಿಲ್ಲ ಎಂತಲೂ ಉದಾಹರಿಸಿದರು.

?? ವರುಷಗಳಿಗೆ ಒಮ್ಮೆ ಸೆಟ್ಲಮೆಂಟು ಮಾಡಬೇಕಾಗಿ ನಮ್ಮ ಸರಕಾರದವರು ನಿರ್ಣಯಿಸಿರುವದರಿಂದ ಇನ್ನು ?? ವರುಷಗಳಲ್ಲಿ ಪುನಹಾ ನಮ್ಮ ಜಿಲ್ಲೆಗೆ ಸೆಟ್ಲಮೆಂಟು ಬಂದರೆ ಆಗ್ಯೆ ನಮ್ಮ ಪರಿಶ್ರಮದ ಫಲದ ಮೇಲೆ ತೆರಿಗೆ ಹೊರಿಸಿದರೆ ನಾವು ಯಾ ನಮ್ಮ ಮಕ್ಕಳು ಆಕ್ಷೇಪಿಸಲಿಕ್ಕೆ ಆಧಾರವಿರಬೇಕಲ್ಲವೇ? ಆದದರಿಂದ ಎಗ್ರಿಕಲ್ಚರಿನ ಡಿರೆಕ್ಟರರು ಕುಂಭಕೋಣದಲ್ಲಿ ಕೊಟ್ಟ ಭರವಸೆ ರೆವೆನ್ಯು ಬೋರ್ಡಿನವರಿಂದ ಅಧಿಕಾರ ಹೊಂದಿ ಕೊಟ್ಟದ್ದೋ? ಅಂಥಾ ಭರವಸೆ ಕೊಡುವದಕ್ಕೆ ರೆವೆನ್ಯು ಬೋರ್ಡಿನವರು ಮದ್ರಾಸ ಸರಕಾರದಿಂದ ಅಧಿಕಾರ ಹೊಂದಿರುತ್ತಾರೋ? ಮದ್ರಾಸ ಸರಕಾರದವರು ಇಂಡಿಯಾ ಗವರ್ನಮೆಂಟಿನವರಿಂದ ಅಧಿಕಾರ ಹೊಂದಿರತ್ತಾರೋ? ಇಂಡಿಯಾ ಗವರ್ನಮೆಂಟಿನವರು ಬ್ರಿಟಿಷ ಸರಕಾರದವರಿಂದ ಅಧಿಕಾರ ಹೊಂದಿರುತ್ತಾರೋ? ಎಂಬದು ತಮ್ಮ ವಾಚಕರು ಯಾರಾದರೂ ಈ ಪತ್ರಿಕೆಯ ಮೂಲಕ ತಿಳಿಸಿದರೆ ಬಡರೈತರಿಗೆ ಉಪಕಾರವಾಗುವದು.

ಮಂಗಳೂರ)
28 1 1907)

ದಾಸ ಭಟ್ಟ.

ನಿರ್ಮಲ ಹೃದಯವೇ ಬೇಕಾದ್ದು

ಪಿಡಿಯೊಳ್ ತುಂಬಿರೆ ಪಂಕ, ಮೇಲೆ ತೊಳೆಯಲ್, ತಾಂ ಶುದ್ಧನೇ [ಮಾಡುತಂ
ಕಡು ಪಾಪಂಗಳ, ವಿನಾಯಲಾತ ಕುಳಿಭೋ? ಕಾಕಾಳಿಗಳ್ ವಿನಾ [ಯವೇ? ।
ಗೃಧ್ರಪಾನಂಗಳೊಳದ್ದೆ, ಕೆಯ್ಸೆ ಸೂರೆ ತಾಂ ಸ್ವಾದಪ್ಪುದೇ? ಬಾಹ್ಯ [ದೊಳ್
ಶುದ್ಧಿಯೇ! ನಿರ್ಮಲಚಿತ್ತವೆಯ್! ಹರಹರಾ ಶ್ರೀ ಚನ್ನ ಸೋಮೇ...

ವಿದೇಶ ವರ್ತಮಾನ

ಬ್ರಿಟಿಷ ಚಕ್ರಾಧಿಪತ್ಯಕ್ಕೆ ಸೇರಿದ ಜಮಿಯಕಾ ಎಂಬಲ್ಲಿ ಭೂಕಂಪ ಸಂಭವಿಸಿ ಅನೇಕ ಸಂಕಷ್ಟಗಳುಂಟಾಗಿವೆ. ಭೂಕಂಪದೊಂದಿಗೆ ಅನೇಕ ಮನೆಗಳಿಗೆ ಬೆಂಕಿ ಬಿದ್ದು ಕಟ್ಟಡಗಳೆಲ್ಲವೂ ಉರಿದುಹೋಗಿವೆ. ಈ ನೆಲಗುಡುಗಿನಿಂದ ದೊಡ್ಡ ದೊಡ್ಡ ಕಟ್ಟಡಗಳು ಕಳಚಿ ಬಿದ್ದು ಬಹಳ ಜನರು ಹತರಾದರು. ದೇಶದ ಹಲವು ಭಾಗಗಳು ಸಮುದ್ರದಲ್ಲಿ ಮುಣುಗಿ ಹೋಗಿವೆ. ಹಡಗಗಳ ಚಲನೆಯು ಸಮುದ್ರದೊಳಗಿನ ನೀರಿನಿಂದ [illegible] ಈ ಭೂಕಂಪದಿಂದ [illegible] ಕೆಲವು ಹಡಗಗಳು ನೆಲಮೇರಿ [illegible] ಊರಿನ ನಿವಾಸಿಕರೆಲ್ಲರೂ ಅನ್ನ ನೀರಿಲ್ಲದೆ ಕಂಗಾಲು ಸ್ಥಿತಿಯಲ್ಲಿದ್ದಾರೆ. ಇನ್ನು ಅನೇಕ ವರುಷಗಳ ಪರ್ಯಂತರ ಊರು ಪೂರ್ವಸ್ಥಿತಿಗೆ ಬರಲಾರದೆಂದೆನ್ನುವರು.

ಈ ಊರ ನಿವಾಸಿಗಳ ಸಂಕಟ ನಿವಾರಣಾರ್ಥವಾಗಿ [illegible] ಸಂಸ್ಥಾನದ ನೌಕ ಸೇನಾಧಿಪರು [illegible] ನೌಕ ಸೇನಾಧಿಪರು [illegible] ನೌಕರರೊಡನೆ ಬ್ರಿಟಿಷ [illegible] ಬ್ರಿಟಿಷ [illegible]

[illegible]

[illegible]

[illegible]

[illegible]

[illegible] ಏಪ್ರಿಲ್ 1-ನೆ [illegible]

[illegible] ಬ್ರಿಟಿಷ [illegible] ತಮ್ಮ ತಮ್ಮ ಅರಸರ ಪ್ರತಿನಿಧಿಗಳಾಗಿ ವಿಶೇಷ ಸ್ವಾಗತ ಭಾಷಣಗಳನ್ನು ಮಾಡಿದರು. ನಮ್ಮ ಎಡ್ವರ್ಡ ಮಹಾ ಚಕ್ರವರ್ತಿಗಳು ತಂತಿ ಮೂಲಕ ಸಹಾರಿಗ ಶುಭವನ್ನು ಬಯಸಿದರು.

ಅಮೇರಿಕದಲಿ ಒಹಿಯೋ ಎಂಬ ನದಿಯಲ್ಲಿ ನೆರೆ [illegible] ಊರಿನ ಮನೆಗಳೆಲ್ಲಾ ನಾಶವಾಗಿ [illegible] ಸಂಕಷ್ಟದಲ್ಲಿರುತ್ತಾರೆ.

[illegible] ದೇಶಕ್ಕೆ ಪ್ರಾಪ್ತಿಯಾದ ಕ್ಷಾಮ ನಿವಾರಣೆಗಾಗಿ ಸ್ಥಾಪಿಸಿದ ಫಮಿನ ಕೇಂಪಿನಲ್ಲಿ ಸಿಡುಬುರೋಗದಿಂದ ಎಲ್ಲಾ ಕ್ಷಾಮ ತಗಲಿದ ಜನರು ದೇಶೇಸ್ತ್ರೀ ಗತಿಯಿಲ್ಲದೆ ತಮ್ಮ ತಮ್ಮ ಮನೆ ಸೇರುತ್ತಾರೆ. ಈ ಜನರ ಸಂಕಷ್ಟವು ಬಹಳ ಭಯಂಕರವಾದ್ದು. ಈ ಕೇಂಪಿನಲ್ಲಿಯೇ ಸಾಧಾರಣ ಕಾಲುಮಿಲಿಯ ಜನರು ವ್ಯಾಧಿಯಿಂದಲೇ ಸಾಯುವರು. ಅಂಬೊಗ್ ಎಂಬ ಇನ್ನೊಂದು ಊರಲ್ಲಿ ಸುಮಾರು 4 ಲಕ್ಷ ಜನರು ಸಾಯುತ್ತಿರುತ್ತಾರೆ. ಯಾವ ಮನೆ ನೋಡಿದರೂ ಅಲ್ಲಲ್ಲಿ ಸತ್ತವರೂ ಸಾಯುವವರೂ ಕಾಣುವರು.

ಉತ್ತರ ಹಿಂದುಸ್ಥಾನ

[illegible] 2 [illegible] ತಾರೀಕಿನಲ್ಲಿ [illegible] ಅಪಘಾತ [illegible] ಡಿಲ್ಲಿ [illegible] 100 [illegible] ಈ ಸಮಯದಲ್ಲಿ [illegible] ಕೇಂದ್ರದ [illegible] ಹಿಂದುಸ್ಥಾನದಲ್ಲಿ [illegible]

[illegible]

[illegible] ಪುರೋಹಿತನ [illegible] ಹೇನಾ [illegible] ಇವನಲ್ಲಿ [illegible] ಸಮ್ಮತಿಸಲಿಲ್ಲ. ತಾನು [illegible] ಅಪವಾದವನ್ನು ಕ್ಷಮಿಸಬೇಕೆಂತ ಮನೆ ನೆಗ [illegible] 20 [illegible] ಕೊಟ್ಟಿತಂತೆ.

[illegible] ಕಲಕತ್ ಎಂಬಲ್ಲಿ ಸ್ವದೇಶಿ ವಿಷಯ ಮೇ, ಬಾಬು ಶ್ರೀಂಷ ಚಂದ್ರ ಚಕ್ರವರ್ತಿ [illegible] ಆತ್ಯಾಸಕ್ತಿಯಿಂದ ಭಾಷಣ ಮಾಡುತ್ತಿರುವಾಗ್ಯೆ ಸ್ಮೃತಿ ತಪ್ಪಿ ತಕ್ಷಣವೇ ಮೃತ ಪಟ್ಟರು.

ಮಿ. ಬಿಪಿನ್. ಚಂದ್ರಪಾಲರು ಇನ್ನು ಸ್ವಲ್ಪ ಸಮಯದಲ್ಲಿ ಮದ್ರಾಸ ಕಡೆ ಬರುವರಂತೆ.

ವಿದ್ಯಾಭ್ಯಾಸಂಗವನ್ನು ಈಗಿನ ಹೊಸ ಸರಕಾರಿ ನಿಯಮಗಳಿಗನುಸಾರವಾಗಿ ಕಷ್ಟಸಾಧ್ಯ ಮಾಡಿರುವದ[illegible] ದೇಶದ ಎಳೆಗೆ ದೇಶಾದ ವಿದ್ಯಾಭ್ಯಾಸಂಗವನ್ನು ವಿದ್ಯಾರ್ಥಿಗಳು ಹೊಂದುವ ಹಾಗೆ ತಮ್ಮ ಸ್ವಂತ ವಿದ್ಯಾಲಯಗಳನ್ನು ಸ್ಥಾಪಿಸಿರುವದು ಸರ್ವರಿಗೂ ಗೊತ್ತಿರಬಹುದು. ಈ ಶಾಲೆಗಳು ಸ್ಥಾಪಿತವಾಗಿ ಒಂದು ವರುಷವಾಯಿತು. ಮೊದಲನೇ ವರುಷದ ವರಧಿಯು ದೇಶಾಭಿಮಾನಿಗಳೆಲ್ಲರಿಗೂ ಆನಂದಕರವಾಗಿರುವದು. ಮದ್ರಾಸ, ಬೊಂಬಾಯಿ ಮೊದಲಾದ ಸರ್ವ ವಿದ್ಯಾಶಾಲೆಗಳಿಗನ ಸಾರವಾಗಿ ಹ್ಯಾಗ ಆಯಾ ಸಂಸ್ಥಾನದ ಊರುಗಳಲ್ಲಿ ಶಾಲೆಗಳು ಸ್ಥಾಪಿಸಲ್ಪಟ್ಟಿರುವವೋ ಹಾಗೆಯೇ ಬಂಗಾಳೆಯಲ್ಲಿರುವ ಈ ನವೀನ ಖಾಸಗಿ ಸರ್ವ ವಿದ್ಯಾಶಾಲೆಗನುಸರಿಸಿ ಬಂಗಾಳ ದೇಶದ ಎಳು ಊರುಗಳಲ್ಲಿ ಎಳು ಶಾಲೆಗಳ ಸ್ಥಾಪಿಸಲ್ಪಟ್ಟಿರುವವು. [illegible] 2000 ವಿದ್ಯಾರ್ಥಿಗಳಿರುತ್ತಾರೆ. ಈ [illegible] ವಿದ್ಯಾಶಾಲೆಯವರು ಈ ಎಳು ಶಾಲೆಗಳ [illegible] 9000 ರೂಪಾಯಿ ಗ್ರಾಂಟ್ ಕೊಟ್ಟಿರುತ್ತಾರೆ. ಇವರ [illegible] ಡಿಸೆಂಬರ್ ವರೆಗೆ) ವರುಷದ ಹಿಚು 41,321-13-2 [illegible] 49,717 [illegible] ಜುಲೈ ತಿಂಗಳ [illegible] 29 [illegible] ವಿದ್ಯಾರ್ಥಿಗಳ [illegible]

[illegible] 600 ರೂಪಾಯಿ [illegible] 12 [illegible]

[illegible] 60 [illegible] ವಿದ್ಯಾರ್ಥಿಗಳ [illegible] ಕಲಿಸಲು [illegible] ಅಲ್ಲದೆ ಈ ಸರ್ವ ಸಹಾ 40 ಮಂದಿಯನ್ನು ಕಳುಹಿಸುತ್ತಾರೆ.

ಕಲಕತ್ತೆಯಲ್ಲಿ ಗಂಗಾನದಿಯ ತೀರದಲ್ಲಿ ಕಳೆದ ಸೂರ್ಯಗ್ರಹಣಕಾಲದಲ್ಲಿ ಅನೇಕ ಜನ ಶ್ರೀಮಂತ ಸ್ತ್ರೀಯರು ಸೇರಿದ್ದಾಗ 'ಸಾಧಕಸಮಿತಿ' ಎಂಬ ಸಂಘದವರು ಕ್ಷಾಮ ನಿವಾರಣಾರ್ಥವಾಗಿ ಸ್ತ್ರೀ ಸಮೂಹದಿಂದ ಚಂದಾ ಕೊಡಿಸಿದನಂತರ ತಮಗೆ ಇನ್ನೂ ನಿಮ್ಮಿಂದ ಇನ್ನೊಂದು ಉಪಕಾರವಾಗುವದುಂಟೆಂದೆನ್ನಲು ಆ ಸ್ತ್ರೀಯರು ಮುಕ್ತವಾಗಿ 'ಅದೇನು, ನಮ್ಮ ಶಕ್ತ್ಯಾನುಸಾರ ನಾವೆಲ್ಲರೂ ಕೊಟ್ಟಿರುತ್ತೇವೆ, ಇನ್ನೂ ಕೊಡತಕ್ಕಂಥಾದ್ದೇನು? ಎಂತ ಕೇಳಿದರು. ಅದಕ್ಕವರು ನಮ್ಮ ದೇಶಕ್ಕೆ ಇನ್ನು ಎಂದೂ ಕ್ಷಾಮ ಬಾರದ ಹಾಗೆ ಎಲ್ಲರೂ ಸ್ವದೇಶಿ ವಸ್ತುಗಳನ್ನೇ ಉಪಯೋಗಿಸುವರಿ ಎಂತ ಈ ಪವಿತ್ರ ಗಂಗಾ ಥಡದಲ್ಲಿ ನಿರ್ಣಯಿಸಿರಿ [illegible]

[illegible] ಮಹಮ್ಮದಿಯರ ಕಾಲೇಜಿಗೆ [illegible] 20,000 ರೂಪಾಯಿಗಳನ್ನು [illegible] ಕೊಟ್ಟಿದ್ದಲ್ಲದೆ ಪ್ರತಿ ವರುಷವೂ 6000 ರೂಪಾಯಿಗಳ ಪ್ರಕಾರ ಕಾಲೇಜಿಗೆ ಕೊಟ್ಟು ಬರುವರು.

ಕಾನ್ಪೂರದಲ್ಲಿ ಬ್ರಷ್ಯ (Brush) ಗಳನ್ನು ತಯ್ಯಾರಿಸುವ ಕಾರ್ಖಾನೆಗೆ ಅವಿಧಾರರು ಹೋಗಿದ್ದರಂತೆ ಅಲ್ಲಿ ಅವರಿಗೆ ತರ ತರದ ಬ್ರಷ್ಯಗಳು ತೋರಿಸಲ್ಪಟ್ಟವು ಅವುಗಳಲ್ಲಿ ಹಂದಿ ಕೂದಲಿನಿಂದ ಮಾಡಿದವುಗಳನ್ನು ಪ್ರತ್ಯೇಕಿಸಿದರು. ಇದನ್ನು ನೋಡಿ ಆ ಹಂದಿ ಕೂದಲಿನ ಬ್ರಷ್ಯಗಳಲ್ಲಿ ಒಂದನ್ನು ಕೈಯ್ಯಲ್ಲಿ ಹಿಡಿದು ಬ್ರಷ್ಷಿನ ಕೂದಲಿಗೆ ಮುಟ್ಟಿ, ಹಂದಿಯ ಹಸಿಕೂದಲನ್ನು ಮುಟ್ಟಕೂಡದು ಒಣಗಿದ್ದ ಕೂದಲುಗಳನ್ನು ಮುಟ್ಟಬಹುದೆಂದರಂತೆ

ಬಂಕೀಪುರ ಎಂಬಲ್ಲಿ ಕಲಕತ್ತೆಯಲ್ಲಿಯ ವಸ್ತುಪ್ರದರ್ಶನದ ಹಾಗೆಯೇ ಒಂದು ವಸ್ತುಪ್ರದರ್ಶನವು ಏರ್ಪಡಿಸಲ್ಪಟ್ಟಿದೆ

ವಂಗಭಂಗದಿಂದ ಅಲ್ಲಿಯ ಜನರು ಇನ್ನೂ ಕಳವಳಿಸುತ್ತಿದ್ದಾರೆ ವಿಲಾಯತಿ ಸಾಮಾನುಗಳನ್ನು ಮಾರುವ ಕೆಲವು ಜನ ಅಂಗಡಿಗಾರರಿಗೆ ಬಹಿಷ್ಕಾರ ಹಾಕಿರುತ್ತಾರೆ ಅವರಲ್ಲಿಯ ಸರಸ್ವತಿ ಪೂಜೆಗೆ ವೈದಿಕರ್‍ಯಾರೂ 500 ರೂಪಾಯಿ ದಕ್ಷಿಣೆ ಕೊಟ್ಟರೂ ಹೋಗುವದಿಲ್ಲ ಪೋಲೀಸಿನವರು ಗುಂಪುಗುಂಪಾಗಿ ಬೀದಿಸಾಲಿನ ಎಲ್ಲಾ ಕಡೆಯಲ್ಲಿಯೂ ತಿರುಗುತ್ತಾರೆ

ಮಹಿಳ ಸಮಿತಿ ಎಂಬ ಸ್ತ್ರೀಯರ ಒಂದು ಸಂಘವು ಕಲಕತ್ತೆಯಲ್ಲಿ ಏರ್ಪಟ್ಟು ಎರಡು ವರುಷಗಳಾದವು ಭಾರತೀಯ ಸ್ತ್ರೀಯರ ಸ್ಥಿತಿಗತಿಗಳನ್ನು ಉನ್ನತಿಗೆ ತರುವದೇ ಈ ಸಂಘದವರ ಮುಖ್ಯ ಉದ್ದಿಶ್ಯ ಬರೋಡೆ ಮಹಾರಾಣಿಯವರಿಂದ ಇತ್ತಲಾಗೆ ಪ್ರೋತ್ಸಾಹಿಸಲ್ಪಟ್ಟ ಈ ಸಂಘದವರು, ಏನೂ ಗತಿಯಿಲ್ಲದವರಿಗೂ ಅನಾಥ ವಿತಂತುಗಳಿಗೂ ಜಾತಿ ಮತ ಬ್ರಷ್ಟರಾಗದ ರೀತಿಯಲ್ಲಿ ಸ್ವತಂತ್ರ ಜೀವನೋಪಾಯವನ್ನು ಒದಗಿಸುವ ಕೈಗಾರಿಕೆ ಉದ್ದಿಮೆಗಳನ್ನು ಕಲಿಸುವರ

ತಾ 19ನೇ ಜನವರಿ ತಿಂಗಳಲ್ಲಿ ಅಂತ್ಯವಾಗುವ ವಾರದಲ್ಲಿ ಪ್ಲೇಗ್ ಮರಣಗಳು 11 975, ಪ್ಲೇಗ್ ತಗಲಿದವರ ಸಂಖೆಯು 14,449 ಆಗಿರುತ್ತದೆ

ಇತ್ತಲಾಗೆ ಮೃತಪಟ್ಟ ಬೊಂಬಾಯಿ ಹ್ಯಾಕೋರ್ಟು ಜಡ್ಜ ಮಿ| ತಯಾಬ್ಜಿಯರ ಜ್ಞಾಪಕಾರ್ಥವಾಗಿ ಬೊಂಬಾಯಿಯಲ್ಲಿ ಏನೇನು ಏರ್ಪಡಿಸಬೇಕೆಂತ ನಿಶ್ಚಯಿಸಲಿಕ್ಕೆ ಒಂದು ಸಭೆ ಕೂಡಿತು ಸಭಾಧ್ಯಕ್ಷರು ಅಲ್ಲಿಯ ಗವರ್ನರರಾದ ಲೆಮಿಂಗ್ಟನ್ ಪ್ರಭುಗಳಾಗಿದ್ದರು

ದಾದಾಭಾಯಿ ನವರೋಜಿಯರು ಕಳೆದ ತಿಂಗಳ ತಾರೀಕು 19ಕ್ಕೆ ವಿಲಾಯತಿಗೆ ತೆರಳಿದರು.

ಭವನಗರದ ಗೈಕ್ವಾರರ ತಮ್ಮ ಶ್ರೀಮಂತ ಸಾಂಪತ್‌ರಾವ್ [illegible] ಗೈಕ್ವಾರರು ಜಪಾನ ವಿದ್ಯಾಶಾಲೆ ಕ್ರಮಗಳನ್ನು ನೋಡಿ ಕಲಿಯುವ ಬಗ್ಗೆ ಹೋಗಿರುತ್ತಾರೆ.

ದಕ್ಷಿಣ ಹಿಂದುಸ್ಥಾನ.

ತ್ರಿಚಿನಾಪಳ್ಳಿ ಎಂಬಲ್ಲಿ ಕಳೆದ ತಿಂಗಳ ತಾ. 19ರಲ್ಲಿ ನೆಟೀವ್ ಪಂಡಿತರ ಸಭೆ ಕೂಡಿತು. ಶ್ರೇಷ್ಠ ಸ್ಥಳಿಕರು 400 ಜನರು ಕೂಡಿದ್ದರು ಕಲಿಕೋಟೆಯ ಮೂರನೇ ರಾಜರು ಸಭಾ ಅಧ್ಯಕ್ಷರಾಗಿದ್ದರು. ಹಿಂದು ವೈದ್ಯಶಾಸ್ತ್ರವನ್ನು ಸಹಾ ಈಗಿನ ಡಾಕ್ಟಾರೀ ಪರೀಕ್ಷೆಗಿಡಬೇಕೆಂದು ಗವರ್ನ್ಮೆಂಟಿನವರಿಗೆ ಮನವಿ ಮಾಡಬೇಕೆಂಬ ನಿರ್ಣಯವನ್ನು ಈ ಸಭೆಯವರು ಮಾಡಿರುತ್ತಾರೆ

ಮದ್ರಾಸಿನಲ್ಲಿಯ ಹಿಂದು ಸಭೆಯ ಸೆಕ್ರೆಟರಿಯವರು ಅಫಘಾನ್ ಅಮೀರರನ್ನು ಮದ್ರಾಸಿಗೆ ಬರಬೇಕೆಂದು ಚಿತ್ತೈಸುವರೆ ಆಮಂತ್ರಣವನ್ನು ಟೆಲಿಗ್ರಾಮ್ ಮುಖಾಂತರ ಕಳುಹಿಸಿರುತ್ತಾರೆ

ಕುಂಭಕೋಣದಲ್ಲಿ ಸುಮಾರು 4 ಫೀಟು ಉದ್ದವಾದ ಒಂದು ಮಂಗವು ಊರೊಳಗೆ ಬಹಳ ಉಪದ್ರ ಕೊಡುತ್ತಿತ್ತು ಮನೆ ಮನೆ ಪ್ರವೇಶಿಸಿ ಎಲ್ಲಾ ಅನ್ನ ಆಹಾರಗಳನ್ನು ತಿನ್ನುತ್ತಿತ್ತು. ಮನೇ ಹೆಂಗಸರು ಭಯದಿಕೆಯಿಂದ ಓಡುತ್ತಿದ್ದರು ಕೆಲವು ಚಿಕ್ಕ ಮಕ್ಕಳನ್ನು ಸಹಾ ಕೊಂದಿದೆ ಮುನಿಸಿಪಾಲಿಟಿಯವರು ಮಂಗವನ್ನು ಕೊಂದವರಿಗೆ ಹತ್ತು ರೂಪಾಯಿ ಇನಾಮು ಇಟ್ಟರು ಪೋಲೀಸಿನವರು ಎಷ್ಟು ಪ್ರಯತ್ನಿಸಿದರೂ ಮಂಗವು ಸಾಯಲಿಲ್ಲ ಕಡೆಗೆ ಒಬ್ಬ ಸಬ್ ಕಲೆಕ್ಟರನ ಪೇದೆಯು ಇದನ್ನು ಗುಂಡು ಹೊಡೆದು ಕೊಂದನು

ಎಲ್ಲಾ ಎಗ್ರಿಕಲ್ಚರಲ್ ಸ್ಟೇಶನುಗಳಲ್ಲಿ ಒಬ್ಬ ಒಂದನೇ ತರಗತಿಯ ಮೆನೇಜರ್ ಒಬ್ಬ ಎರಡನೇ ತರಗತಿಯ ಮೆನೇಜರ್, ಇನೂ [illegible] ಅಸಿಸ್ಟಾಂಟ್ ಮೆನೇಜರ್ ಎಂಬಿವರನ್ನು [illegible] ಕೆಂ [illegible] ರೆವಿನ್ಯು ಬೋರ್ಡಿನವರ ನಿರ್ಣಯವನ್ನು ಗವರ್ನಮೆಂಟಿನವರು ಮಂಜೂರು ಮಾಡಿದ್ದಾರೆ ಆದರೆ ಈಗ ಸದ್ಯಕ್ಕೆ ಒಂದನೇ ಯಾ ಎರಡನೇಯ ತರಗತಿಯ ಒಬ್ಬ ಮೆನೇಜರನೂ ಒಬ್ಬ ಅಸಿಸ್ಟಾಂಟ್ ಮೆನೇಜರನೂ ಸಾಕೆಂತಾಗಿದೆ ಅವಶ್ಯವಿದ್ದಲ್ಲಿ ಇನ್ನೊಬ್ಬ ಅಸಿಸ್ಟಾಂಟ್ ಮೆನೇಜರನನ್ನು ಇಡಬಹುದು ಅಸಿಸ್ಟಾಂಟ್ ಮೆನೇಜರನಿಗ ರೂ 25 5-50 ಸಂಬಳ, ಎರಡನೇ ತರಗತಿ ಮೆನೇಜರನಿಗೆ ರೂಪಾ ಯಿ50 5-100 ರ ವರೆಗಿನ ಸಂಬಳ, ಒಂದನೇ ತರಗತಿಯವನಿಗೆ ರೂಪಾಯಿ 100 10 150 ವರೆಗಿನ ಸಂಬಳವಾಗಿರುತ್ತದೆ

ಆರ್ಬತ್‌ನೋಟ್ ಕಂಪೆನಿಯ ಪಾಲುಗಾರರು ಒಂದು ಪೈಯೂ ತಮ್ಮ ಸ್ವಂತ ಭಂಡವಾಳವಿಲ್ಲದೆ ವ್ಯಾಪಾರ ನಡಿಸಿ ಅನ್ಯರು ವಿಶ್ವಾಸದಿಂದ ಇಟ್ಟಂಥಾ ಠೇವಣಾತಿ ಹಣವನ್ನು ತಮ್ಮ ಸ್ವಂತ ಖರ್ಚಿಗೆ ಲಕ್ಷ ಕಟ್ಲೆಯಿಂದ ಉಪಯೋಗಿಸಿರುವ ಹಣದ ಮೊಬಲಗುಗಳು ಈ ಕೆಳಗಿನ ಪಟ್ಟಿಯಿಂದ ಕಾಣುವವು

ಪಾಲುಗಾರರ ಹೆಸರು.	ಇವರ ಮೇಲೆ ಕಂಪನಿ ಲೆಕ್ಕದ ಪ್ರಕಾರ ಬಾಕಿ ಇರುವ ಹಣ
ಸರ್. ಜೊರ್ಜ ಆರ್ಬತ್‌ನೋಟ್ … …	7,37,854
ಜೆ. ಎಮ್ ಎಂಗ್ … … … …	3,57079
ಮಾನ್ಸ. ಎಗ್ನ್ಯು … … … … …	2,08,548
ಆರ್. ಕೆ. ಎಮ್. ಆರ್ಬತ್‌ನೋಟ್ [illegible]	48,160
ಸಿ. ಡೆಲ್‌ಫೀಡನ್ ಎಂಡ್ ಕೋ … …	72.10,909

ದಕ್ಷಿಣ ಕನ್ನಡ.

ಆರ್ಬತನೋಟ್ ಕಂಪೆನಿಯಲ್ಲಿ ಹಣ ಠೇವಣಾತಿಯಾಗಿಟ್ಟ ನಮ್ಮಲ್ಲಿಯವರ ಹೆಸರುಗಳು.

ಸಿಸ್ಟರ್ ಮೇರಿ ಎಸ್ಟರ್ … … ರೂ	3000
ಮಿಸಿಸ್. ಆರ್ ಜೆ ಫರ್ನಾಂಡಿಸ್ …	1000
„ ಆರ್ ಎಸ್ & ಇ ಬಿ. ಫರ್ನಾಂಡಿಸ	3142
ಮಿ ಅಲೆಕ್ಸಂಡರ್ ಫರ್ನಾಂಡಿಸ್	887
ಫಾದರ್ ಪಿ ಪಿರೆಸಿ	8000
„ ಡಿ ಫರ್ನಾಂಡಿಸ್	1000
ಮಿಸಿಸ್ ಪಿ ಗಿರಿಜಾಬಾಯಿ	2,200
ಮಿ ಗಿರಿಯಪ್ಪ ಬಂಗೇರಾ	1083
„ ಎಫ್. ಜೆ ಗೊನ್ಸಾಲ್ವಿಸ್ ಬಂಟ್ವಾಳ	1411
„ ಉಳ್ಳಾಲ ಗೋಪಾಲ ರಾವ್	4515
ಮಿಸಿಸ್ ಇ ಬಮಿರ್ ಬೇಗ್	1100
ಮಿ ಎಚ್ ಓ ಬಿ ಹಾರ್ಬಂಗ್ (ಕರೆಂಟ್ ಎಕೌಂಟ್)	202
ಫಾದರ್ ಜೆ ಎಸ್ ಆಬ್ರೆಪೊ	1000
ಮಿಸಿಸ್ ಅಚ್ಚು ಯಾನೆ ಲಕ್ಷ್ಮೀ	14 000
ಮಿ ಜಿ ಎಸ್ ಅಲ್ಬುಕರ್ಕ	12,000
ಮಿ ಆನಂದ ಚೆಂದಾವರ್ ಕಾಸ್ಟಗೋಮ	4,905
ಮಿ ಅಲೆಕ್ಸ ಅಲ್ಬುಕರ್ಕ	2,000
ಮಿ ಉಳ್ಳಾಲ ಬಾಬ ರಾವ್	1,000
ಮಿ ಎಂ ಬಾಲಕೃಷ್ಣ ರಾವ್	2,027

(ಮುಂದೆ ಸಾಗುವದು).

ಮಂಗಳೂರು. ಶಹರಿನಲ್ಲಿ ದಿವಸಕ್ಕೆ ಒಂದೆರಡು ಇಲ್ಲಲ್ಲಿ ಪ್ಲೇಗ್ ಮರಣಗಳಾಗುತ್ತವೆ ಇಲಿಗಳು ಸಾಯುತ್ತಿರುತ್ತವೆಂಬ ವರ್ತಮಾನ ಉಂಟು

ಕಳೆದ ವರುಷದ ಎಫ್ ಎ ಪರೀಕ್ಷೆಯಲ್ಲಿ ಗವರ್ನಮೆಂಟ್ ಕಾಲೇಜಿನ 35ರಲ್ಲಿ 21 ಜನ ವಿದ್ಯಾರ್ಥಿಗಳು ತೇರ್ಗಡೆ ಪಟ್ಟರು. ಇವರು ಮಾತ್ರ ಪ್ರಥಮ ತರಗತಿಯಲ್ಲಿ ಪಾಸಾಗಿರುತ್ತಾರೆ 1904ನೇ ಮೆಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ಪ್ರಥಮ ತರಗತಿಯ ಪಾಸವಟ್ಟಿಯಲ್ಲಿ ಪ್ರಥಮ ಸ್ಥಾನವನ್ನು ಹೊಂದಿದ ಪಣಂಬೂರ ರಾಘವೇಂದ್ರ ರಾಯರು ಈ ಸರ್ತಿಯ ಎಫ್ ಎ ಪರೀಕ್ಷೆಯಲ್ಲಿ ಸಹಾ ಅದೇ ಸ್ಥಾನವನ್ನು ಹೊಂದಿರುವರು ಎಲೊಸಿಯಸ್ ಕಾಲೇಜಿನಿಂದ 9ರಲ್ಲಿ ಒಬ್ಬನು ಫಸ್ಟ್ ಕ್ಲಾಸ್, ಬಾಕಿ ಎಂಟು ಜನರು ಸೆಕೆಂಡ್ ಕ್ಲಾಸ್ ಪಾಸಾಗಿರುತ್ತಾರೆ ಮೆಟ್ರಿಕ್ಯುಲೇಶನ್ ಪರೀಕ್ಷೆಯ ಪಾಸವಟ್ಟಿಯನ್ನು ನಿರೀಕ್ಷಿಸುತ್ತಿದೆ.

ಹೋದ ಆದಿತ್ಯವಾರ ಕೆನರಾ ಹಿಂದು ಪರ್ಮನೆಂಟ್ ಫಂಡಿನವರ ಆಫೀಸಿನಲ್ಲಿ, ಫಂಡಿನ ಮೆಂಬರರು ಕಳೆದ ಡಿಸೆಂಬರ ತಿಂಗಳಲ್ಲಿ ಸಭೆಕೂಡಿ ಮಾಡಿದ ನಿರ್ಣಯಗಳನ್ನು ಸ್ಥಿರಪಡಿಸುವ ಬಗ್ಗೆ ಸಭೆ ಕೂಡಿತು. ಸಭೆಗೆ [illegible] ಕಷ್ಟು ಮೆಂಬರರು ಹಾಜರಿದ್ದ ಇರುವ [illegible]

[illegible] ಮರುಶ್ಯಾಮ ಘಂಟೆ 5ಕ್ಕೆ [illegible] ಸ್ಥಿರಪಡಿಸುವದೆಂತ [illegible].

ಕಿವರಾ ಹ್ಯಾಸ್ಕೂಲ್. ಈ ಶಾಲೆಗೆ ಮ। ರಾ। ರಾ। ಮಂಜೇಶ್ವರ ಸಾವ್ಕಾರ ನರಸಿಂಹ ಶ್ಯಾನುಭಾಗರು ತನಗೆ ದೇವರು ಪುತ್ರೋತ್ಸವವನ್ನು ದಯಪಾಲಿಸಿದ ಸಂತೋಷದಿಂದ 1000 ರೂಪಾಯಿಗಳನ್ನು ಉಚಿತವಾಗಿ ಕೊಟ್ಟರು. ಲೋಕದಲ್ಲಿ ಯೋಗ್ಯವಾದ ರೀತಿಯಿಂದ ಯಾರು ಹಣ ಖರ್ಚುಮಾಡುವನೋ ಅತನೇ ಶ್ರೀಮಂತನು. ಇಂತಹ ಈ ಶ್ರೀಮಂತರಾದ ಮ। ರಾ। ರಾ। ನರಸಿಂಹ ಶ್ಯಾನುಭಾಗರಿಗೂ ಇವರ ಎಳೇ ಶಿಶುವಿಗೂ ದೀರ್ಘಾಯುಷ್ಯವನ್ನು ಬಯಸುತ್ತೇವೆ. ದೊಡ್ಡವರೂ ಬಡವರೂ ರಾ. ನರಸಿಂಹ ಶ್ಯಾನುಭಾಗರಂತೆಯೇ ತಮ್ಮಲ್ಲಿ ಆಗ್ಯಾಗ್ಯೆ ಆಗುವ ಶುಭಕಾರಣಗಳ ಸಮಯದಲ್ಲಿ ಅನಾವಶ್ಯಕವಾಗಿ ಹಣ ವೆಚ್ಚಮಾಡುವ ಬದಲಿಗೆ ತಕ್ಕಾದ ರೀತಿಯಲ್ಲಿ ತಮ್ಮ ಕಾರಣ ಪ್ರಯೋಜನಗಳನ್ನು ಮಾಡಿ ಈ ಶುಭಕಾರ್ಯಗಳ ಸಲುವಾಗಿ ತಮ್ಮ ಶಕ್ತ್ಯಾನುಸಾರ ಇಂತಹ ಲೋಕೋಪಕಾರಗಳನ್ನು ಮಾಡುವದು ಎಷ್ಟು ಒಳ್ಳೆಂದಲ್ಲ!

K V B

ಉಪ್ಪಿನಂಗಡಿ ತಾಲೂಕಿನ ಕ್ರಿಮಿನಲ್ ಮೊಕದಮೆ. ಶೇಷಪಾಂಡಿ ಎಂಬ ಒಬ್ಬ ಜೈನನಿಗ ಜಿನಪ್ಪಪಾಂಡಿ ಎಂಬ ಅಳಿಯನೊಬ್ಬನಿದ್ದನು. ಇವರ ಕುಟುಂಬಕ್ಕೆ 30 ಕೋರ್ಜಿ ಅಕ್ಕಿಗಿಂತಲೂ ಹೆಚ್ಚು ಹುಟ್ಟುವಳಿ ಇತ್ತು. ಅಳಿಯ ಸಂತಾನದ ಸಾಂಪ್ರದಾಯವನ್ನನುಸರಿಸುವ ಈ ಕುಟುಂಬಕ್ಕೆ ಜಿನಪ್ಪಪಾಂಡಿಯು ತನ್ನ ಮಾವನ ನಂತರದ ಯಜಮಾನನಾಗಿದ್ದನು. ಶೇಷಪಾಂಡಿಯ ಹೆಂಡತಿಯು ಜಿನಪ್ಪಪಾಂಡಿಯು ಯಜಮಾನನಾದರೆ ತನ್ನ ಮಕ್ಕಳಿಗೆ ಸಿಕ್ಕುವ ಪ್ರಯೋಜನ ತಪ್ಪುವದೆಂದು ಜಿನಪ್ಪಪಾಂಡಿಯನ್ನು ಯಾವ ವಿಧದಲ್ಲಿಯಾದರೂ ನಿರ್ನಾಮ ಮಾಡಬೇಕೆ ಪ್ರಯತ್ನಿಸುತ್ತಿದ್ದಳು. ಈ ಉದ್ದೇಶದಿಂದ ಆವಳು ಜಿನಪ್ಪಪಾಂಡಿಯ ಅಂಗರಕ್ಷಕನಾದ ಹಾವುದೆ ಎಂಬವನನ್ನು ತನ್ನ ವಶಮಾಡಿಕೊಂಡಳು. ಈ ಹಾವುದೆಯು ಜಿನಪ್ಪಪಾಂಡಿಯನ್ನು ಬಲತ್ಕಾರದಿಂದ ಒಂದು ಕಾಡಿಗೆ ತೆಗದುಕೊಂಡು ಹೋದನು. ಅಲ್ಲಿ ಇವನನ್ನು ಕಾದುಕೊಂಡಿದ್ದ 2—9 ಮುದ್ದೆಯಾಳಿಗಳು ಇವನನ್ನು ಕೊಂದು [illegible] ಹಂಡತಿಗೆ ತೋರಿಸುವ ಬಗ್ಯೆ ತಂದರು. ಈ ದುಷ್ಟಳು ಇದನ್ನು ನೋಡಿ ಆನಂದದಿಂದ ಮುದ್ದೆಯಾಳಿಗಳಿಗೆ 200 ರೂಪಾಯಿಗಳನ್ನು ಇನಾಮಾಗಿ ಕೊಟ್ಟಳು. 2ನೇ ಮುದ್ದೆಯಾಳಿಯು ಶೇಷಪಾಂಡಿಯ ಮಗನು. ಇವುಗಳೆಲ್ಲ ನಿಜವಾಗಿ ನಡೆದ ಸಂಗತಿಗಳಂತೆ.

ಆರು ದಿವಸಗಳ ಮೇಲೆ ಜಿನಪ್ಪಪಾಂಡಿಯ ಕುತ್ತಿಗೆಗೆ ಕಲ್ಲು ಕಟ್ಟಿದ ಹೆಣವು ನೇತ್ರಾವತಿ ಹೊಳೆಯಲ್ಲಿ ಸಿಕ್ಕಿತು.

ಕಳೆದ ತಿಂಗಳ ಸೆಶನ್‌ನಲ್ಲಿ ತನಿಖೆಯಿಂದ ಮುದ್ದೆಯಾಳಿಗಳೆಲ್ಲವರ ಮೇಲೆಯೂ ತಪ್ಪು ಸ್ಥಾಪಿತವಾದ್ದರಿಂದ ಜಡ್ಜರು ಈ ಕೆಳಗಿನ ಶಿಕ್ಷೆಯನ್ನು ವಿಧಿಸಿದರು. ಶೇಷಪಾಂಡಿಗೂ ಅವನ ಮಗನಿಗೂ ಫಾಶೀ ಹುಕುಂ ಆಯಿತು. ಬಾಕಿ ಎಲ್ಲವರಿಗೂ ಶೇಷಪಾಂಡಿಯ ಹೆಂಡತಿಗೂ ಕಾಲಾಪಾನಿ ಶಿಕ್ಷೆ ಆಯಿತು.

ಕುತ್ಯಾರ ಅರಸು ಕ್ರಿಮಿನಲ್ ಮೊಕದಮೆಯ ಅಪೀಲು ತೀರ್ಪು:

ಸಿದ್ದಶೆಟ್ಟಿ, ಚೆಂಬುಶೆಟ್ಟಿ, ಗೋಳ್ಬಡಿ ಬಾಬುಶೆಟ್ಟಿ, ಅವಿರೂನ್ ಕೂಸಪ್ಪ, ಇವರ ಮೇಲೆ ತಪ್ಪು ಸ್ಥಾಪಿತವಾಗದಿದ್ದರಿಂದ ಹ್ಯಾಕೋರ್ಟಿನವರು ಇವರನ್ನು ಶಿಕ್ಷೆಯಿಂದ ವಿಮೋಚನೆ ಮಾಡಿದರು. 1, 2, 3, 4, 8ನೇ ಮುದ್ದೆಯಾಳಿಗಳಿಗೆ ಆರು ತಿಂಗಳ ಬದಲಿಗೆ ಮೂರು ತಿಂಗಳ ಶಿಕ್ಷೆಯಾಯಿತು. ಬಾಕಿ ಎಲ್ಲರಿಗೂ ಒಂದೊಂದು ತಿಂಗಳ ಶಿಕ್ಷೆ. ಇದನ್ನು ಇವರು ಮೊದಲೇ ಅನುಭವಿಸಿರುತ್ತಾರೆ. ಜುರ್ಮಾನೆಯ ವಿಷಯವೇನೂ ಮಾಫಿಯಾಗಲಿಲ್ಲ.

ಮಂಗಳೂರು ತಾಲೂಕ ತಹಶೀಲ್ದಾರರು ಕಾಹಿಲೆ ಸಮ್ಬಂಧ ಎರಡು ತಿಂಗಳ ರಜೆ ತಕೊಂಡಿರುತ್ತಾರಂತೆ.

ಮಂಗಳೂರಿಂದ ಬಂಟ್ವಾಳ ಮಾರ್ಗವಾಗಿ ಕುಂದಾಪಿಗೆ ಪ್ರಯಾಣಸ್ಥರ ಬಗ್ಯೆ ಮೋಟರ್ ಕಾರ್ನ್ನಡೆಸುವರ ಮೋಟರ್ ಕಾರಿನ ಸಾಮಾನುಗಳೆಲ್ಲವೂ ಬೊಂಬಾಯಿಯಿಂದ ಬಂದಿರುತ್ತವೆ. ಇನ್ನು ಸ್ವಲ್ಪ ದಿವಸದಲ್ಲಿಯೇ ಈ ಮೋಟರ್ ಗಾಡಿಗಳ ಓಡ್ಯಾಟವು ಪ್ರಾರಂಭಿಸುವದು.

[illegible] ಮೆಂಬರರು ತಿದ್ದೇ ತಿಂಗಳ ತಾರೀಕು ತಿರಲ್ಲಿ [illegible] ಆಫೀಸಿನಲ್ಲಿ [illegible] ಕಂಪೆನಿಯ ವಾರ್ಷಿಕ ವರದಿಯನ್ನು ಮೆಂಬರರಿಗೆ ತಿಳಿಸಿ ಕಂಪೆನಿಯ ರೆಗ್ಯುಲೇಶನುಗಳನ್ನು ಅವಶ್ಯ ತೋರಿಸಿದ್ದಲ್ಲಿ ತಿದ್ದುವರು.

ಕಾಪು. ಈಚೆಗೆ ಇಲ್ಲಿಯ ಒಬ್ಬ ಕ್ಷೌರಿಕನಿಗೂ ಆತನ ಅಳಿಯನಿಗೂ ಪರಸ್ಪರ ದ್ವೇಷ ಉಂಟಾಯಿತು. ಅಳಿಯನು ಮಾವನ ಹತ್ತರ ತನ್ನ ಪಾಲು ಕೇಳಿದನಂತೆ. ಈ ದ್ವೇಷದಿಂದ ಮಾವನು ಅಳಿಯನನ್ನು ಕೊಂದು ಕಾಪಿಯಿಂದ ಆರು ಮೈಲು ದೂರಕ್ಕೆ ಆತನ ಶವವನ್ನು ಹುಗಿದನಂತೆ. ಕೆಲವು ದಿವಸಗಳನಂತರ ಈ ವರ್ತಮಾನವು ಊರೆಲ್ಲಾ ಹಬ್ಬಿ ಪೋಲೀಸಿನವರು ಆತನ ಹೆಣವನ್ನು ಹುಡುಕಿ ತೆಗದಿದ್ದಾರಂತೆ. ಅಳಿಯನ ವಿಷಯ ಮಾವನನ್ನು ಕೇಳಲು, ಆತನು—ನನ್ನನ್ನು ಸಹಾ ಕತ್ತಿಯಿಂದ ಘಾಯಮಾಡಿ ಎಲ್ಲಿಗೆ ಹೋಗಿದ್ದಾನೆಂತಲೂ ತೋರುವದಿಲ್ಲವೆಂತ ಹೇಳಿದನಂತೆ. ಅನೇಕ ಜನರು ಈ ಕ್ಷೌರಿಕನಿಗೆ ಸಹಾಯಮಾಡಿದ್ದಾರೆಂತಲೂ ಇವರ ನಿಜ ಸ್ಥಿತಿಯು ಏನೆಂತ ತಿಳಿಯಲಶಕ್ಯವೆಂತಲೂ ಊರೆಲ್ಲಾ ವರ್ತಮಾನವುಂಟು.

ಕಾಪಿಯವ.

ಮೂಡಬಿದ್ರೆ. ನಮ್ಮಲ್ಲಿ ತಾಲೂಕು ಆಫೀಸು ಇನ್ನು ಬೇಗನೆ ಸ್ಥಾಪಿತವಾಗುವದು. ಈ ಬಗ್ಯೆ ಒಬ್ಬ ರೆವೆನ್ಯು ಕಮಿಶನರು ನಮ್ಮ ಕಲೆಕ್ಟರರೊಂದಿಗೆ ನಮ್ಮಲ್ಲಿ ಕತೆ ಕಳೆದ ಡಿಸೆಂಬರ ತಿಂಗಳಲ್ಲಿ ಬಂದು ಸ್ಥಳ ನೋಡಿ ಹೋಗಿರುತ್ತಾರೆ. ಕೊಂತೆ ಮಲ್ಲಣ್ಣ ಶೆಟ್ರ ಆಸ್ತಿಗಳು ಸಹಾ ಇನ್ನು ಬೇಗನೆ ಹರಾಜು ಹಾಕಲ್ಪಡುವವು.

1? -1—'07 ***M P. M***

ವಿವಿಧ ವಿಷಯ.

ಇಡೀ ಭೂಲೋಕದಲ್ಲಿರುವ ಜನಸಮುದಾಯವು ಅಲ್ಲಲ್ಲಿ ವಾಸಿಸಿ ಇರುವ ಪರಿಮಾಣ. ಭೂಲೋಕದಲ್ಲೆಲ್ಲಾ ಕಡೆಯಲ್ಲಿಯೂ ನಿವಾಸವಾಗಿರುವ ಪ್ರತಿ ಸಾವಿರದಲ್ಲಿ ಆಸ್ಯದಲ್ಲಿರುವವರು 558, ಯುರೋಪಿನಲ್ಲಿ 242, ಆಫ್ರಿಕದಲ್ಲಿ 111, ಅಮೇರಿಕದಲ್ಲಿ 32, ಓಶಾನಿಯ ಮತ್ತು ಧ್ರುವ ಪ್ರಾಂತ್ಯಗಳಲ್ಲಿ 5, ಆಸ್ಟ್ರೇಲ್ಯದಲ್ಲಿ 2, ಹೀಗೆ ಇಡೀ ಲೋಕದಲ್ಲಿರುವ ಜನಸಂಖ್ಯೆಯಲ್ಲಿ ಸಮ ಅರ್ಧಪಾಲು ಆಸ್ಯದಲ್ಲಿಯೂ, ಕಾಲುಪಾಲು ಯುರೋಪಿನಲ್ಲಿಯೂ ಇರುತ್ತದೆ.

ಜಪಾನ ದೇಶದ ವರ್ತಮಾನ ಪತ್ರಗಳು. ಜಪಾನಿನಲ್ಲಿ ಹೆಚ್ಚು ಕಡಿಮೆ 4,000 ವರ್ತಮಾನ ಪತ್ರಗಳಿವೆ ಪಾಶ್ಚಾತ್ಯ ನವನಾಗರಿಕೆಯ ಇತರ ಇಲಾಖೆಗಳಲ್ಲಿಯಂತೆಯೇ ಇದರಲ್ಲಿ ಸಹಾ ಜಪಾನೀಯರು ಹೆಚ್ಚಿನ ಅಭಿವೃದ್ಧಿಯನ್ನು ಹೊಂದಿರುತ್ತಾರೆ. ಮೊದಲನೇ ವರ್ತಮಾನ ಪತ್ರವು 1852ರಲ್ಲಿ ಪ್ರಕಟಿಸಲ್ಪಟ್ಟಿತು. 1879ನೇ ಇಸವಿಯಲ್ಲಿ 226 ಪತ್ರಗಳಿದ್ದವು. 1886ರಲ್ಲಿ ಅವುಗಳ ಸಂಖ್ಯೆಯು 2000ವಾಯಿತು. ಈಚೆಗೆ ವರ್ತಮಾನ ಪತ್ರಗಳ ಸಂಖ್ಯೆಯು [illegible] ಪಟ್ಟಣದಲ್ಲಿಯೇ 120 ಪತ್ರಗಳು [illegible] ಎಂಬ ಜಪಾನ ವರ್ತಮಾನ ಪತ್ರ [illegible] ಸಾರರುತ್ತಾರೆ.

ಶಾಲಿವಾಹನ ಶಕ ೧೮೨೮ನೇ ಪರಾಭವ ಸಂವತ್ಸರದ ಮಾಘ ಬ ತದಿಗೆಯು ಶುಕ್ರವಾರದಾರಭ್ಯ ಫಾಲ್ಗುಣ ಶು ತದಿಗೆಯ ಶುಕ್ರವಾರದ ವರೇಗಿನ ವಾರ ಪಂಚಾಂಗವು 1907 ಇಸವಿ ಫೆಬ್ರುವರಿ ತಾರೀಕು 1ರಿಂದ 15ರ ವರೆಗೆ

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ತಾ,	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ
1	ಶುಕ್ರ	ತ	೩೭।	ಹು	೪೪						
2	ಶನಿ	ಚೌ	೩೬	ಚಿತ್ತ	೪೩॥	9	ಶನಿ	ಯೋ	೩॥	ಧ	೧೫॥
3	ಆದಿ	ಪ	೩೩॥	ಹ	೪೨॥	10	ಆದಿ	ತ್ರ	೫೨॥	ಪೂಷಾ	೧೮॥
4	ಚಂದ್ರ	ಷ	೩೦।	ಚಿ	೪೧	11	ಚಂದ್ರ	ಚತು	೪೭॥	ಉಷಾ	೧೫।
5	ಕುಜ	ಸ	೨೫॥	ಸ್ವಾ	೪೮	12	ಕುಜ	ಅಮ	೪೩।	ಶ್ರ	೧೨।
6	ಬುಧ	ಅ	೨೦॥	ವಿ	೩೪॥	13	ಬುಧ	ಪಾ	೪೦	ಧ	೧೦
7	ಗುರು	ನವ	೧೫।	ಅ	೩೦॥	14	ಗುರು	ಬಿದಿಗೆ	೩೭॥	ಶ್ರ	೮॥
[illegible]	[illegible]	[illegible]	೯॥	ಜ್ಯೆ	೨೬॥	15	ಶುಕ್ರ	ತದಿಗೆ	೩೬॥	[illegible]	೮॥

WILLIAM & Co., 16 OAK LANE, FORT BOMBAY.

ಅಮೃತಾಂಜನ

ಬಾಟ್ಲಿ ಒಂದಕ್ಕೆ ಕಿಮ್ಮತು 0—8—0 ವಿ. ಪಿ. 0—12—0.

ಅಮೃತಾಂಜನ—ಸುಖಾಂಜನ.
ಅಮೃತಾಂಜನ—ದಿವ್ಯಾಂಜನ.
ಅಮೃತಾಂಜನ—ಸಂಜೀವನ.
ಅಮೃತಾಂಜನ—ಪರಮಾಂಜನ.
ಅಮೃತಾಂಜನ—ಅಶೀತಭಂಜನಿ.
ಅಮೃತಾಂಜನ—ಪ್ರಾಭಂಜನವಿಮರ್ದಿನಿ

SAFE ★ EFFICACIOUS ★ SURE ★ WILLIAM & Co. BOMBAY ★ PILLS ★ OINTMENTS ★ POWDERS

ಅಮೃತಾಂಜನ—ಅಪೂರ್ವದರ್ಜನಿ
ಅಮೃತಾಂಜನ—ತಕ್ಷಣ ಪರಿಹಾರಿನಿ
ಅಮೃತಾಂಜನ—ಗಂಟ್ಲು ನೋವಿಗೆ.
ಅಮೃತಾಂಜನ—ವಾತದ ನೋವಿಗೆ
ಅಮೃತಾಂಜನ—ಎದೆ ನೋವಿಗೆ
ಅಮೃತಾಂಜನ—ತಲನೋವಿಗೆ

ಮನುಷ್ಯವರ್ಗಕ್ಕೆ ಬರುವ, ಸಂಧಿವಾತ, [illegible] ಎಲ್ಲಾ ತರದ [illegible] ಈ ಔಷಧವು ಉತ್ತಮವಾಗಿರುತ್ತದೆ. ಇದರಿಂದ ಗುಣವು ಕಂಡುಬರುವದಿಲ್ಲವಾದರೆ ಹಣವು ಹಿಂದಿರುಗಿ ಕೊಡಲ್ಪಡುವದು

ಗಜಕರ್ಣದ ಮುಲಾಮು ಡಬ್ಬಿ 1ಕ್ಕೆ 0 6 0 ವಿ. ಪಿ. 0 10 0.

ಗಜಕರ್ಣದ ಮುಲಾಮು—ಇದನ್ನು ಹಾಗಿಸುವದರಿಂದ ಎಲ್ಲಾ ತರದ ಇಜ್ಜಿಯು ನಾಶವಾಗಿ ಹೋಗುವದು
ಗಜಕರ್ಣದ ಮುಲಾಮು—ಮೂರುಸಾರಿ ಹಚ್ಚುವದರೊಳಗೆ ಗಜಕರ್ಣವು ಹೋಗುವದು.
ಗಜಕರ್ಣದ ಮುಲಾಮು—ಇದನ್ನು ಹಚ್ಚಿ [illegible] ಇದರಿಂದ [illegible] ಬಿಡುವದಿಲ್ಲ
ಗಜಕರ್ಣದ ಮುಲಾಮು—ಇದನ್ನು ಒಂದು ಸಾರೆ ಪರೀಕ್ಷಿಸಿ ನೋಡಿರಿ [illegible] ಕಮ್ಮಿ. ಗುಣ ಹೆಚ್ಚು
ಗಜಕರ್ಣದ ಮುಲಾಮು—ಇದರಿಂದ ಗುಣ ಕಂಡುಬರುವದಿಲ್ಲವಾದರೆ ಹಣವು ಹಿಂತಿರುಗಿ ಕೊಡಲ್ಪಡುವದು

	ರೂ	ಆ	ಪೈ
ಜೀರ್ಣರಸಾಯನ—ಹೊಟ್ಟೆಯಲ್ಲಿ [illegible]	1	4	0
ವಜ್ರಗುಟಿಕ—[illegible]	1	0	0
ಜ್ವರಹಾರಿ—ಎಲ್ಲಾ ತರದ ಜ್ವರಗಳ [illegible] ಬಾಟ್ಲಿ 1ಕ್ಕೆ	0	12	0
ಚೇಳುಕಡಿತದ ಮದ್ದು—ಚೇಳುವಿನ ಕಡಿತದ ಮೇಲೆ [illegible]	0	8	0
ಇಜ್ಜಿ ಮುಲಾಮು—ಈ ಮುಲಾಮು ಅತಿಶಯ [illegible]	0	3	0
ದಂತಮಂಜನ—ಈ ಮಂಜನದಿಂದ ಹಲ್ಲುಗಳನ್ನು ದಿನಾಲು ತಿಕ್ಕಿ [illegible] ರಕ್ತ [illegible] 1ಕ್ಕೆ	0	2	0
ರೋಮಹಾರಿ—ಈ ಚೂರ್ಣವನ್ನು [illegible]	0	[illegible]	0
ಕೇಶವರ್ದಿನೀ ತೈಲ್ಯ—ಇದು ತಲೆಯ [illegible] ಬಾಟ್ಲಿಗೆ [illegible]	1	0	0
ಜುಲಾಬು ಮಾತ್ರೆ—[illegible] ಉತ್ತಮವಾದ[illegible]	0	[illegible]	0
ಕವಹಾರಿ—[illegible] ಕ್ಷಯ, ಕೊರಗು [illegible]	1	1	0
ಸುಂದರೀ ತೈಲ್ಯ—ಈ ತೈಲ್ಯವನ್ನು ಮೋರೆಯ ಮೇಲೆ ಹಾಗಿಸಿದರೆ, ಮೊಡಿವೆಗಳು ಹೋಗಿ ಕಪ್ಪುದ ಕಲೆಗಳನ್ನು ತೆಗದು ಕಾಂತವಾದ ಮತ್ತು ಮನೋಹರವಾದ ರೂಪವನ್ನು ತರಿಸುತ್ತದೆ ಡಬ್ಬಿ 1ಕ್ಕೆ	0	[illegible]	0

ನೇತ್ರಾಂಜನ 0 4 0 **ಕುಸುಮಾರಿ ಗುಟಿಕ** 1-0 0, **ಪ್ರಮೇಹದ ಮಿಶ್ರಣ** 1 0 0, **ಜಂತುವಾತಹಾರಿ** 0–8 0, **ಕಫನಾಶಕ ಚೂರ್ಣ** 0 8 0

ಎಲ್ಲಾ ತರದ ಔಷಧಗಳು ಇರುವದರಿಂದ ಕೆಟಲಾಗು ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರದು ತರಿಸಿಕೊಳ್ಳಬಹುದು

AMRUTANJAN CURES RHEUMATISAM.

TRY OUR AMRUTANJAN AND YOU WILL LIKE IT

AMRUTANJAN IS VERY CHEAP AND EFFECTIVE.

ವಿಳಾಸ:—ವಿಲಿಯಂ ಮತ್ತು ಕಂಪನಿ, ಫೋರ್ಟು ಮುಂಬಯಿ.

ಸ್ವದೇಶಾಭಿಮಾನಿ

ಎಂಬ

ಕನ್ನಡ ಪಕ್ಷ ಪತ್ರವು.

ಪುಸ್ತಕ 1. ಮಂಗಳೂರು, 16ನೇ ಫೆಬ್ರವರಿ 1907. ಸಂಚಿಕೆ 4.

ಟ್ರಾನ್ಸ್‌ವಾಲ್ ಭಾರತೀಯರ ಸ್ಥಿತಿ.

———o———

(ಆತ್ಮವತ್ ಸರ್ವಭೂತೇಷು ಯಃ ಪಶ್ಯತಿ ಸಪಶ್ಯತಿ)

ಟ್ರಾನ್ಸ್‌ವಾಲ್ ದೇಶದಲ್ಲಿಯ ಭಾರತೀಯ ಪ್ರಜೆಗಳು ಅಲ್ಲಿಯ ಸರಕಾರದವರಿಂದ ಅನುಭವಿಸುವ ಕ್ಲೇಶಗಳು ಕ್ರೋಧ ಶೋಕಾಸ್ಪದವೆಂದೂ ಅಂಥಾ ನಡತೆಯು ಬ್ರಿಟಿಷ ಚಕ್ರಾಧಿಪತ್ಯಕ್ಕೆ ಅಪಾಯಕರವೆಂದೂ ಕಳೆದ ಕೊಂಗ್ರೆಸ್ ಸಭೆಯಲ್ಲಿ ಪ್ರಥಮ ನಿರ್ಣಯವಾಯಿತು. ಹಲವು ವರುಷಗಳಿಂದ ಈ ಬಡ ಪಾಪಿಗಳು [illegible]ಸುವ ಅಳಲು ನಮ್ಮ ವಾಚಕರಲ್ಲಿ ಅನೇಕರಿಗೆ ತಿಳಿದೇ ಇದೆ. ಇದನ್ನು ಓದದವ[illegible]ರ್ಯಾರಾದರೂ ಇದ್ದರೆ ಅಂಥವರು ನಾವು ಕೆಳಗೆ ಕೊಡುವ ವೃತ್ತಾಂತ ಸಾರಾಂಶದಿಂದ "ಇಪ್ಪತ್ತನೇ ಶತಮಾನದ ನವನಾಗರಿಕರೆನಿಸುವ ಕ್ರಿಸ್ತಮತಾವಲಂಬಿಗಳೆಂದ ಬಿಳೇ ಜನರಲ್ಲಿ ಇಂಥಾ ದುಷ್ಟ ಹೃದಯವು ಹ್ಯಾಗೆ ನೆಲಗೊಂಡಿತೋ?" ಎಂದ ಆ[illegible]ರ್ಯ ವಿಷಾದಗಳನ್ನು ತೋರದಿರರು.

ಟ್ರಾನ್ಸ್‌ವಾಲದೇಶದಲ್ಲಿ ಮೊದಲು ಬೋರರ ಆಧಿಪತ್ಯವು ಸ[illegible]ತ್ತೆಂದೂ ನಂತರ ಕ್ರೂಗರಿಗೂ ಇಂಗ್ಲೀಷರಿಗೂ ನಡೆದ ಯುದ್ಧದಲ್ಲಿ ಇಂಗ್ಲಿಷರ [illegible] ಬ್ರಿಟಿಷ ಸಾಮ್ರಾಜ್ಯವು ಅಲ್ಲಿ ಸ್ಥಾಪಿತವಾಯಿತೆಂದೂ ನಮ್ಮ ವಾಚಕರಿಗೆ ಗೊತ್ತಿದೆ. ಬೋರರು ಭಾರತೀಯ ನಿವಾಸಿಕರಿಗೆ ಕೊಡುವ ಸಂಕಷ್ಟಗಳನ್ನು ನಾವು ನಿವಾರಿಸ ಬದ್ಧರಾಗಿದ್ದೇವೆಂದೂ ಆ ದೀನ ಜನರ ದುಃಸ್ಥಿತಿಯು ಯುದ್ಧಕ್ಕೆ ಒಂದು ಹೇತುವೆಂದೂ ಇಂಗ್ಲೀಷ ಮಂತ್ರಿಗಳು [illegible]ಸಿದರು. ಆದರೆ ಆ ಬಡ ಪಾಪಿಗಳ ಈಗಿನ ಸ್ಥಿತಿಯು ಹಲವು ವಿಧಗಳಲ್ಲಿ ಮುಂಚಿಗಿಂತ ದುಃಖಕರವಾಗಿದೆ. ಮುಂಚೆ ಬೋರರು ಇಂಗ್ಲೀಷರನ್ನು ನೋಡಿ ಇಂಡಿಯದ ನಿವಾಸಿಕರನ್ನು ಬಾಧಿಸಲು ಅಳುಕುತ್ತಿದ್ದರು. ಈಗ ಇಂಗ್ಲಿಷರೇ ರಾಜರಾದ್ದು 'ಕೊಲೊನಿಯಲ್ ಆಧಿಪತ್ಯವು ನಿರಾತಂಕವಾಗಿ ಕಾನೂನುಗಳನ್ನು ಏರ್ಪಡಿಸಿ ನಮ್ಮ ನಿವಾಸಿಕರನ್ನು ಹುರಿಯುವದು. ಇಷ್ಟೇ ಅಲ್ಲ, ಹಿಂದುಸ್ಥಾನದ ಪೋರ್ತುಗೀಸ ಯಾ ಫ್ರೆಂಚ ಸಾಮ್ರಾಜ್ಯಗಳಿಂದ ಹೋದ ಭಾರತೀಯರ ಸ್ಥಿತಿಯು ಬ್ರಿಟಿಷ ಇಂಡಿಯದಿಂದ ಹೋದವರಷ್ಟು ಕೆಟ್ಟದ್ದಲ್ಲ. ಯಾಕಂದರೆ, ಪೋರ್ತುಗೀಸ ಯಾ ಫ್ರೆಂಚ ಸರಕಾರವು ತಮ್ಮ ಪ್ರಜೆಗಳನ್ನು ಕಾಪಾಡುವದು. ಇಂಗ್ಲೀಷರಾದರೆ ತಾವು ಈ ಬಡ ಪ್ರಜೆಗಳಿಗಾಗಿ ಟ್ರಾನ್ಸವಾಲ್ ಸರಕಾರದವರನ್ನು ಗದರಿಸಲು ಆ ಅಧಿಪತ್ಯದವರು ಸಿಟ್ಟುಗೊಂಡರೆ ಪರಸ್ಪರ ವೈಷಮ್ಯ ಹುಟ್ಟೀತೆಂದು ಹೆದರುತ್ತಾರೆ.

ಬೋರರ ಕಾಲದಲ್ಲಿ ಟ್ರಾನ್ಸವಾಲಿಗೆ ನಮ್ಮವರು ನಿರಾತಂಕವಾಗಿ ಹೋಗಬಹುದಿತ್ತು. ಈಗಿನ ಕಾರ್ಯಭಾರದಲ್ಲಿ ಪರ್ಮಿಟು ವಿನಹ ಪ್ರವೇಶಿಸ ಕೂಡದು. ಈ ಪರ್ಮಿಟು ಸಿಕ್ಕಿದರೆ ಪ್ರವೇಶ ಹಾಸಲು (ತಲೆತೆರಿಗೆ?) ತೆರಬೇಕು. ಇಂಥಾ ಪರ್ಮಿಟುಗಳಾದರೂ ಮುಂಚೆ ಟ್ರಾನ್ಸ್‌ವಾಲ್ ನಿವಾಸಿಕರಾಗಿದ್ದು ಯುದ್ಧಕಾಲದಲ್ಲಿ ದೇಶವನ್ನು ಬಿಟ್ಟವರಿಗೆ ಮಾತ್ರ ದೊರಕುವದು. ಊರಲ್ಲಿ ಈ ಕಪ್ಪು ಜನರಿಗೆ ಬೇರೆ ಠಾಣ್ಯಗಳನ್ನು ಪ್ರತ್ಯೇಕಿಸಿದ್ದಾರೆ. ಇವರು ತಮ್ಮ ವ್ಯವಹಾರಗಳನ್ನೆಲ್ಲಾ ಅಲ್ಲೇ ನಡಿಸಬೇಕು. ವ್ಯಾಪಾರ ನಡಿಸಬೇಕಾದರೆ ಲ್ಯಾಸನ್ಸ್ ಹೊಂದಬೇಕು. ಆಫ್ರಿಕದ ಕಾಫರರ ತರಗತಿಯಲ್ಲಿ ಇವರನ್ನು ಸೇರಿಸಿದ್ದಾರೆ. ಕ್ರೂಗರನ ಆಧಿಪತ್ಯದಲ್ಲಿ ಭಾರ[illegible]ನಿವಾಸಿಕರಿಗೆ ಯುರೋಪಿಯರ ಹೆಸರಲ್ಲಿ ಜಮೀನು ಕೊಂಡುಕೊಳ್ಳಲಿಕ್ಕೆ ಅಪ್ಪಣೆಯಿತ್ತು. ಈಗ ಇವರಿಗೆ ಈ ಸ್ವಾತಂತ್ರ್ಯ ಇಲ್ಲ. ನಮ್ಮಲ್ಲಿ ಹೊಲೆಯನಾದರೂ ದುಡ್ಡಿದ್ದರೆ ಆಸ್ತಿ ಸಂಪಾದಿಸಬಹುದು. ರೈಲ್ವೆಯ ಮೊದಲನೇ ಎರಡನೇ ಕ್ಲಾಸುಗಳಲ್ಲಿಯೂ ಟ್ರಾಮ್ ಬಂಡಿಗಳಲ್ಲಿಯೂ ಟ್ರಾನ್ಸ್‌ವಾಲಿನಲ್ಲಿಯ ಭಾರತೀಯ ಬೃಷ್ಟರು ಸಂಚರಿಸ ಕೂಡದು. ಇವರಿಗೆ ಮಾರ್ಗದಲ್ಲಿ ನಡಿಯ ಅಪ್ಪಣೆಯಿಲ್ಲ. ರಾತ್ರೆ ಒಂಬತ್ತು ಗಂಟೆ ಕಳೆದ ಮೇಲೆ ಅಲ್ಲಿಯ ಭಾರತೀಯ ನಿವಾಸಿಕನ್ಯಾರೂ ಹೊರಗೆ ಉಳಿಯಬಾರದು. ಹಿಂದುಗಳಲ್ಲಿ ಜಾತಿಭೇದಗಳಿವೆ. ಕೀಳು ಮೇಲು ತರಗತಿಗಳಿವೆ. ಕೀಳು ಜಾತಿಯವರನ್ನು ಕುಲೀನರು ಬಾಧಿಸುವರೆಂದು ಸಾರಿ, ದೇಶದ "ಕರಿಜನರನ್ನು" ಬೆಳಕಿಗೆ ಬರಹೇಳುವ ಯುರೋಪಿಯ ಪಾದರಿಗಳು ತಮ್ಮ ಬಾಂಧವರ ಈ ನಡತೆಯನ್ನು ಲಕ್ಷ್ಯಕ್ಕೆ ತಂದರೆ ಮನುಷ್ಯಸ್ವಭಾವಗಳಲ್ಲಿ ನಾಟಿದ ವಿಷವೈರಿಗಳು [illegible] ಸ್ಥಳಿದರೂ ನೆಗ್ಗವೆಂದು ತಿಳಿಯುವರು.

ಬೋರರಿಂದ ತಾವು ಪಡುವ ಸಂಕಷ್ಟಗಳು ಇಂಗ್ಲಿಷರು ಸಹಿಸಲಾರದೆ ಕ್ರೂಗರನ ಸಂಗಡ ಯುದ್ಧಕ್ಕೆ ಹೋದದ್ದನ್ನು ಕಂಡು ಬ್ರಿಟಿಷ ಆಧಿಪತ್ಯದಲ್ಲಿ ತಮಗೆ ಸುಖ ದೊರೆಯುವದೆಂದು ಟ್ರಾನ್ಸವಾಲದ ನಮ್ಮ ದೇಶೀಯರು ಕೋರಿದ್ದರು. ಆ ಕೋರಿಕೆಯು ವ್ಯರ್ಥವಾಯಿತು. ಬೋರರ ಕಾಲದಲ್ಲಿ ಹಿಂಡನೆಗಳಿದ್ದಾಗ್ಯೂ ಅವನ್ನು ಈಗಿನಷ್ಟು [illegible] ಈಗ ಈ ಬಡ ನಿವಾಸಿಕರ ಮೇಲ್ವಿಚಾರಣೆಗಾಗಿ ಪ್ರತ್ಯೇಕ [illegible] ನೇಮಿಸಿದ್ದಾರೆ. ಈ ಕಾನೂನುಗಳು ಸಾಲದೆಂ[illegible] ಕಳೆದ ವರುಷ ಒಂದು ಹೊಸ ಕಾನೂನ "ಏಸ್ಯಾಟಿಕ್ ಲಾ ಎಮೆಂಡ್‌ಮೆಂಟ್ [illegible]" [illegible] ಸ್ಥಾಪಿಸಿದರು. ಇದರ ಪ್ರಕಾರ ಪ್ರತಿ ಒಬ್ಬ ಏಶ್ಯದ [illegible] ಒಂದು ಸರ್ಟಿಫಿಕೆಟು ಯಾ ಪಾಸ್ ಇಟ್ಟುಕೊಳ್ಳತಕ್ಕದ್ದು. ಸರಕಾರದವರು ವಾಸಿಸಲಿಕ್ಕೆ ಕೊಟ್ಟ ಈ ಸರ್ಟಿಫಿಕೇಟುಗಳನ್ನು ಪೋಲಿಸಿನವರು ಕೇಳಿದಾಗ ತೋರಿಸಬೇಕು. ಮತ್ತು ಅಗತ್ಯವಿದ್ದರೆ ಆ ಪತ್ರದ ಮಾಲಿಕನು ತಾನೆಂದು ತನ್ನ ಬೆರಳುಗಳ ಮುದ್ರೆಯಿಂದ ರುಜುಪಡಿಸಬೇಕಾಗುವದು. ಈ ಕಾಯಿದೆಯನ್ನು ಬೇರೆ ಕಡೆಗಳಲ್ಲಿ ಬಿಡ್ಡಾಡಿಗಳ ವಿಷಯದಲ್ಲಿ ಜಾರಿ ಇಡುತ್ತಾರೆಂದೂ ಇದು ಮುನಿಸಿಪಾಲಿಟಿಯವರಲ್ಲಿ ಕುತ್ತಿಗೆಗೆ ಪಟ್ಟಿ ಇಲ್ಲದ ನಾಯಿಯನ್ನು ಕೊಲ್ಲಬೇಕೆಂದಿರುವ ಕಾನೂನಿನಂತಹದ್ದೆಂದೂ ಇಂಗ್ಲೀಷ ಹ್ಯಾವಸ್ಸು ಪತ್ರಿಕಾ ಕರ್ತರು ಟೀಕೆ ಮಾಡುತ್ತಾರೆ.

ಈ ಕಾನೂನನ್ನು ತಾವು ಒಪ್ಪುವದಕ್ಕಿಂತಲೂ ಸೆರೆಮನೆಯನ್ನು ಸೇರುವೆವೆಂದು ಈ ಬಡ ನಿವಾಸಿಕರು ದೃಢ ಪ್ರತಿಜ್ಞೆಮಾಡಿ ಈ ದುಃಸ್ಥಿತಿಯನ್ನು ನಿವಾರಿಸುವದಕ್ಕೆ ತಮ್ಮ ಮುಖ್ಯಸ್ಥರ ಒಂದು ಕೂಟವನ್ನು ಕಳುಹಿಸಿದರು. ಇವರ ಪ್ರಯತ್ನಗಳಿಂದ ಇಂಗ್ಲೀಷ ಸರಕಾರದವರು ಈ ಕಾನೂನನ್ನು ಮಂಜೂರು ಮಾಡಲಾರೆವೆಂದು ಹೇಳಿದ್ದಾರೆ. ಆದರೂ ಟ್ರಾನ್ಸವಾಲದೇಶಕ್ಕೆ ಸ್ವರಾಜ್ಯ ಪದ್ಧತಿಯನ್ನು ಬ್ರಿಟಿಷರು ಸದ್ಯ ಕೊಡುವರಾದ್ದರಿಂದ ಭಾರತೀಯ ನಿವಾಸಿಕರ ಹಾಡು ಹ್ಯಾಗೆ ನಿಲ್ಲುವದೋ ತಿಳಿಯದು.

ಟ್ರಾನ್ಸ್‌ವಾಲ್ ನಿವಾಸಿಕರು ರಾಜಕೀಯ ಸ್ವಾತಂತ್ರ್ಯಗಳನ್ನು ಬಯಸುವದಿಲ್ಲ. ನಿರಂಕುಶ ವ್ಯವಹಾರ ಸಂಚಾರಗಳು, ಭೂಮಿಯ ಸ್ವಾಮ್ಯ ಮೊದಲಾದ ನಾಗರಿಕರ ಸಾಧಾರಣ ಹಕ್ಕುಗಳನ್ನ ಪೇಕ್ಷಿಸುವರು. ಸರಕಾರದವರು [illegible] ವದಿಲ್ಲ. ಇದರ ಕಾರಣವು ಅಲ್ಲಿಯ ಭಾರತೀಯರು [illegible]

[illegible] ಇವರಲ್ಲಿ ಧನಿಕ[illegible] ವ್ಯಾಪಾರಿಗಳೂ [illegible]ಯವರ[illegible] ಕಾಂಗ್ರೆಸ್ ಮಹಾಸಭೆ [illegible] ಚರ್ಮದ ವರ್ಣ[illegible] ಹೊರತು ಬೇರೆ [illegible] ಜನರು ಸತ್ಪುರುಷರಾಗಿರಲು ಹುಟ್ಟಿನ ಮೇ[illegible] ಮತ್ಸರಗಳೇ [illegible] ಕಾರಣ. ಅರಬಿಯರು ಯುರೋಪದ ಸ್ಪೇನ ದೇಶವನ್ನಾಳುವಾಗ ವರ್ಣಭೇದಗಳನ್ನು ಲೆಕ್ಕಿಸಲಿಲ್ಲ. ಬ್ರಿಟಿಷ ಸಾಮ್ರಾಜ್ಯದಲ್ಲಿ ವರ್ಣಭೇದಗಳನ್ನು [illegible]ಸಿದರೆ ಈ ಚಕ್ರಾಧಿಪತ್ಯವು ಅರ್ಧಕ್ಷಣದಲ್ಲೂ ಕೀಳೆನಿಸದೆ? ಎಂದು [illegible] ಜಡ್ಜ ಅಮೀರ್ ಅಲಿಯವರು ಒಂದು ಭಾಷಣದಲ್ಲಿ ಹೇಳಿದ್ದಾರೆ. ಟ್ರಾನ್ಸ್ವಾಲದವರಿಗೆ ಜ್ವರದ ನಾಡುಗಳಲ್ಲಿ ಗೆಯ್ಮೆಗೆ ನಮ್ಮ ಕೂಲಿಗಳು ಬೇಕು. ಆದರೆ ಇವರು ನಾಗರಿಕರಂತೆ ಮನೆಮಾರು ಮಾಡುವದು ದುಃಸಹ. ಕಪ್ಪು ಜನರಾದರೆ ಹುಟ್ಟುಗುಲಾಮರೆಂಬ ಸಿದ್ಧಾಂತವು ಅವರಲ್ಲಿ ಉಚಿತವಾಗಿದೆ. ಗುಲಾಮರ ಸ್ಥಿತಿಗೂ ಟ್ರಾನ್ಸ್ವಾಲ ಭಾರತೀಯ ನಿವಾಸಿಕರಿಗೂ ಹೆಚ್ಚಿನ ಭೇದವಿಲ್ಲ. ಚಕ್ರಾಧಿಪತ್ಯದ ಕಂದಭಾರವನ್ನು ಹೊರಿಸಬೇಕೆಂದಿದ್ದರೆ ಭಾರತೀಯರನ್ನು ಬ್ರಿಟಿಷ ಪ್ರಜೆಗಳೆಂದು ಕರೆಯುವರು. ಸ್ವಾತಂತ್ರ್ಯಗಳ ಸಂಧಿ ಒದಗಿದರೆ ಅದಕ್ಕೆ ನೂರಾರು ತೊಂದರೆಗಳಿವೆ.

ನಮ್ಮ ಬಡಭ್ರಾತೃಗಳ ಗೋಳಿಗೆ ಮದ್ದಾವುದು? ಬ್ರಿಟಿಷ ಪಾರ್ಲಿಮೆಂಟಿಗೆ ಮೊರೆಯಿಟ್ಟರೆ ಟ್ರಾನ್ಸ್ವಾಲ್ ರಾಜ್ಯದ ಒಳ ಕಾರುಬಾರಿನಲ್ಲಿ ನಾವು ಪ್ರವೇಶಿಸಕೂಡದೆನ್ನುವರು. ಇಂಡಿಯಾ ಗವರ್ನಮೆಂಟಿನವರು, ಮುಖ್ಯವಾಗಿ ಕರ್ಜನ್ ಪ್ರಭುಗಳು ಮಾಡಿದ ಪ್ರಯತ್ನಗಳು ಫಲಿಸಲಿಲ್ಲ. ಜಪಾನೀಯರು ಆಸ್ಯಾಖಂಡದವರಾಗಿದ್ದರೂ ಅವರನ್ನು ಈ ರೀತಿ ಟ್ರಾನ್ಸ್ವಾಲ್ ಆಧಿಪತ್ಯವು ಬಂಧಿಸಲಿಕ್ಕಿಲ್ಲ. ಯಾಕೆಂದರೆ ಜಪಾನ ಆಧಿಪತ್ಯಕ್ಕೆ ಗೌರವವಿದೆ. ನಾವೂ ಟ್ರಾನ್ಸ್ವಾಲರಂತೆಯೇ ಸ್ವರಾಜ್ಯವ್ಯವಸ್ಥೆಯನ್ನು ಪಡೆದರೆ ನಮ್ಮವರಿಗೆ ಆ ದೇಶದಲ್ಲಿ ಈಗಿನದಕ್ಕಿಂತ ಒಳ್ಳೇ ರೀತಿ ನಡೆಸ್ಯಾರು. ಇದಕ್ಕೋಸ್ಕರ ನಾವು ಸ್ವದೇಶಿ, ಬಹಿಷ್ಕಾರಗಳೆಂಬ ಮಾರ್ಗಗಳನ್ನವಲಂಬಿಸಬೇಕು. ಇದರಿಂದ ಪರದೇಶಕ್ಕೆ ಹೋಗುವ ದ್ರವ್ಯವು ಕಡಿಮೆಯಾಗುವದರಿಂದಲೂ ಇಲ್ಲಿ[illegible]ರಿಗೆ ವೃತ್ತಿಗಳು ದೊರಕುವದರಿಂದಲೂ ಭಾರತೀಯರು ಪರದೇಶಕ್ಕೆ ಹೋಗಿ ಬಾಳುವ ಕಾಲವು ಬರಲಿಕ್ಕಿಲ್ಲ. ದೇಶದಲ್ಲಿ ಸಂಪತ್ತಿಯು ಹೆಚ್ಚಲು [illegible] ಮಾರ್ಗವು ಸುಲಭವಾಗುವದು. ಟ್ರಾನ್ಸ್ವಾಲ ಭಾರತೀಯ ನಿವಾಸಿಕರ ಬಾಳುಗಳೇ, ಇಲ್ಲಿಯವರ ನಮ್ಮ ಬಾಳುಗಳೇ ವೃದ್ಧಿ ಹೊಂದಬೇಕಾದರೆ ಸ್ವಾವಲಂಬನವೇ ಮುಖ್ಯ ಮಾರ್ಗ.

ಆನಂದ ಮೋಹನ ಬೋಸರ ಜೀವನಚರಿತ್ರ

—o—

ಗುಣವಂತನೂ ಶಕ್ತಿವಂತನೂ ಆದ ಮಹಾತ್ಮನ ಜೀವನವನ್ನು ಪರೀಕ್ಷಿಸಿದರೆ, ಮನುಷ್ಯನಲ್ಲಿ ಪರಂಜ್ಯೋತಿಯ ಕಿಡಿಯು ವಾಸಿಸುತ್ತದೆಂಬದು ನಿಜವೆಂದು ಬೋಧೆಯಾಗುವದು. ನಮ್ಮಲ್ಲಿ ಅಡಗಿರುವ ಈ ಕಿಡಿಯು ಪ್ರಜ್ವಲಿಸಿ ನಮ್ಮ ಬಾಳು ಪವಿತ್ರವಾಗುವ ಹಾಗೆ ನಾವು ಮುಂಜಾನೆ ದೇವರನ್ನೂ ದಿವ್ಯ ಸ್ತ್ರೀಪುರುಷರನ್ನೂ ಧ್ಯಾನಿಸಬೇಕೆಂದು ಹಿರಿಯರು ಆಜ್ಞಾಪಿಸಿರುವರು. ರಾವಣ, ಹಿರಣ್ಯಕಶ್ಯಪು ಮುಂತಾದವರಲ್ಲಿ ಮಿತಿಯಿಲ್ಲದ ಪರಾಕ್ರಮವಿತ್ತು. ಆದರೆ ಈ ಬಲವನ್ನು ಪರಪೀಡನೆಗೆ ಉಪಯೋಗಿಸಿದ್ದರಿಂದ ನಾವು ಈ ದಾನವರನ್ನು ಭಯದಿಂದಲೂ ಹೇಸಿಕೆಯಿಂದಲೂ ಭಾವಿಸುತ್ತೇವೆ. ಅನೇಕಸಾರಿ ಗುಣಸಂಪನ್ನರಾದವರು ಲೋಕದಲ್ಲಿ ಉಚ್ಚಸ್ಥಾನಕ್ಕೇರಲಾರದೆ ಗಣಿಯಲ್ಲಿದ್ದ ವಜ್ರದಂತೆ ಮನೆಯಲ್ಲೇ ಹುಟ್ಟಿ ಬದುಕಿ ಸಾಯುವರು. ಸದ್ಗುಣಗಳ ತೇಜಸ್ಸು ಯಾರಲ್ಲಿ ಏಕರೀತಿ ಪ್ರಕಾಶಿಸುವದೋ ಅಂತಹ ವಿರಳ ಮಹಾತ್ಮರಿಂದ ಲೋಕಕ್ಕೆ ಮಂಗಳವಾಗುವದು. ಪಾಪಚರಿತವಾದ ಪ್ರಪಂಚದಲ್ಲಿ ನಡೆಯುವ ದೀನರಿಗೆ ಅಂಥವರ ಜೀವನವು ಸಂಸಾರಸಮುದ್ರದ ದೀಪಸ್ತಂಭವಾಗಿರುವದು. ಕಳೆದ ಆಗಸ್ಟಿನಲ್ಲಿ ಕಾಲವಾದ ಆನಂದ ಮೋಹನ ಬೋಸರು ಇಂತಹ ಮಹಾತ್ಮರು.

ಇವರು 1847ನೇ ಆಗಸ್ಟು ತಿಂಗಳಲ್ಲಿ ಪೂರ್ವ ಬಂಗಾಳದ ಮೈಮನಸಿಂಗ ಜಿಲ್ಲೆಯ ಜೆಯಸಿದ್ಧಿ ಎಂಬ ಊರಲ್ಲಿ ಹುಟ್ಟಿದರು. ಬೋಸರ ತಂದೆ ಜಿಲ್ಲೆಯ ಶಿರಸ್ತೇದಾರರಾಗಿದ್ದರು. ತಾಯಿಯು ಪತಿಪರಾಯಣಳೂ, ಧರ್ಮನಿರತಳೂ, ಭಕ್ತಿಪರಳೂ ಆಗಿದ್ದಳು. ಮಗನಲ್ಲಿ ಈ ಭಕ್ತಿಭಾವವು ಉತ್ಕೃಷ್ಟವಾಗಿ ಫಲಿಸಿತು. ಚಿಕ್ಕಂದಿನಿಂದಲೇ ಇವರು ಬುದ್ಧಿಶಾಲಿತೆಯನ್ನು ತೋರಿಸಿದರು. 16ನೇ ವಯಸ್ಸಿನಲ್ಲಿ ಮೆಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ಅಗ್ರಸ್ಥಾನವನ್ನು ಪಡೆದರು. ನಂತರ ಎಫ್. ಎ. ಬಿ. ಎ ಪರೀಕ್ಷೆಗಳಲ್ಲಿಯೂ ಈ ತರಗತಿಯನ್ನು ಬಿಡಲಿಲ್ಲ. ಎಂ. ಎ ಪರೀಕ್ಷೆಯಲ್ಲಿ ಪ್ರಥಮ ತರಗತಿಯಲ್ಲಿ ಅಗ್ರಸ್ಥಾನವನ್ನು ಕೊಂಡು 10,000 ರೂಪಾಯಿ ತುಲ್ಯದ ಪ್ರೇಮಚಂದ ರಾಯಚಂದ ಎಂಬ ವಿದ್ಯಾರ್ಥಿವೇತನವನ್ನು ಗಳಿಸಿದರು. ಒಕ್ಸ್ಫರ್ಡ್ ಕೆಂಬ್ರಿಜ್ ಶಾಲೆಗಳ ಅಗ್ರಗಣ್ಯ ಕುಮಾರರಾದರೂ ಇವರಿಗಿಂತಲೂ [illegible]ಗಲಾರರೆಂದು ಸರ್ವ ವಿದ್ಯಾಲಯದ ಚಾನ್ಸಲರರು ಆನಂದ ಮೋಹನರನ್ನು ಶ್ಲಾಘಿಸಿದರು. ವ್ಯಾಸರಾಯ ಪ್ರಭುಗಳು ಒಮ್ಮೆ ಕಾಲೇಜಿಗೆ ಚಿತ್ತೈಸಿದಾಗ ಮುಖ್ಯ ಉಪಾಧ್ಯಾಯರು ಇವನು ಊರ್ಜಿತಕ್ಕೆ ಬರುವ ಹುಡುಗನೆಂದು ಇವರನ್ನು ತೋರಿಸಿದರು.

ಮೇಲೆ ಹೇಳಿದಂತೆ ವೇತನ ದೊರೆಯಲು 1870ರಲ್ಲಿ ಬೋಸರು ವಿಲಾಯತಿಗೆ ತೆರಳಿ ಕೆಂಬ್ರಿಜ್‌ನ ವಿದ್ಯಾಲಯವನ್ನು ಪ್ರವೇಶಿಸಿದರು. [illegible] ಪರೀಕ್ಷೆಯಲ್ಲಿ 'ರೆಂಗ್ಲರ್' ಪದವಿಯನ್ನು ಸಂಪಾದಿಸಿದವರಿಂದ ಇಂಗ್ಲಿಷರಿಗೆ ಹಿಂದೂಗಳಲ್ಲಿಯೂ ಇಂತಹ ಜಾಣರಿದ್ದಾರೆಂದು ಹೊಸತಾಗಿ ತಿಳಿದು ದೇಶಕ್ಕೆ [illegible] ದೊರೆಯಿತು. [illegible]ಲ್ಲಿ ತನ್ನ ವಾಗ್ಮಿತ್ವದಿಂದಲೂ ಹೆಸರು ಹೊಂದಿದರು. 1874ರಲ್ಲಿ ಬ್ಯಾರಿಸ್ಟರರಾಗಿ ಹಿಂದುಸ್ಥಾನಕ್ಕೆ ತಿರುಗಿದರು.

ಸ್ವದೇಶವನ್ನು ಸೇರಿದಂದಿನಿಂದ ಬೋಸರು ಲೋಕೋಪಕಾರಿಯಾದ ವರ್ತನಗಳಲ್ಲಿ ಪ್ರವೇಶಿಸಿದರು. ಇವರಿಗೆ ವಿದ್ಯಾರ್ಥಿಗಳಲ್ಲಿರುವ ವಿಶೇಷ ಅನುರಾಗದ ಗುರುತಾಗಿ ವಿದ್ಯಾರ್ಥಿಗಳ ಸಂಘವೆಂಬ ಒಂದು ಸಂಘವನ್ನು ಸ್ಥಾಪಿಸಿ ಹುಡುಗರ ವಿದ್ಯಾಭಿವೃದ್ಧಿಗೆ ಕಷ್ಟಪಡುತ್ತಿದ್ದರು. ಬಂಗಾಳೆಯಲ್ಲಿ ಪ್ರಜಾನಾಯಕರೆನಿಸುವ ಸುರೇಂದ್ರನಾಥ ಬೆನರ್ಜಿಯವರ ಸಹಿತ ಇಂಡಿಯನ್ ಅಸೋಸಿಯೇಷನ್ ಎಂಬ ಮತ್ತೊಂದು ಪ್ರಬಲವಾದ ಸಂಘವನ್ನು ಪ್ರತಿಷ್ಠಿಸಿದರು. ಈ ಸಂಘಗಳಲ್ಲಿ ಕೂಡಿದ ಜನರು ಇವರು ಆಗಾಗ್ಗೆ ಕೊಡುವ ಉಪನ್ಯಾಸಗಳಿಂದ ಮೋಹಿತರಾಗುತ್ತಿದ್ದರು. 1877ರಲ್ಲಿ ಇವರಿಗೆ ಫೆಲೋ ಒಫ್ ಯುನಿವರ್ಸಿಟಿ ಎಂಬ ಬಹುಮಾನವು ದೊರಕಿತು. ಮಾರಣೇ ವರುಷ ಸಿಂಡಿಕೇಟಿನ (ವಿಶ್ವವಿದ್ಯಾಶಾಲೆಯ ಸಂಘದ) ಮೆಂಬರರಾದರು. [illegible] ಇವರು ನಡೆಸಿದ ವಿವಾದಗಳನ್ನು [illegible] ಬಹು ಮಾನಗಳ [illegible] ಸಹವೇ [illegible] 'ಸಿಟಿ ಕಾಲೇಜ್' ಎಂಬ [illegible] ಒಂದು ಪಾಠಶಾಲೆಯನ್ನು ನಿರ್ವಹಿಸುತ್ತಿದ್ದರು [illegible] ಕಾಲೇಜು [illegible]. ಬಾಲಿಕಾ ಪಾಠಶಾಲೆ [illegible] ಎಂಬ ಪಾಠಶಾಲೆಯಲ್ಲಿ ಬಿರತು ಸ್ತ್ರೀಯರಿಗೆ ಉತ್ತಮ [illegible].

[illegible] ಬಂಗಾಳದ ನ್ಯಾಯವಿಧಾಯಕ ಸಭೆಯಲ್ಲಿ ಮೂರುಸಾರಿ ಮೆಂಬರರಾಗಿ ದೇಶಹಿತಕಾರಿಯಾದ ವಿವಾದಗಳ [illegible] ಪ್ರತಿಷ್ಠಿಸಿದರು. ಇದಲ್ಲದೆ ಮುನಿಸಿಪ್ಯಾಲಿಟಿಯಲ್ಲಿ ಕಮಿಶನರಾಗಿದ್ದರು. ನೇಷನಲ್ ಇಂಡಿಯನ್ ಅಸೋಸಿಯೇಶನ್ ಮೊದಲಾದ ಹಲವು ಸಂಘಗಳಿಗೆ ಕೈಕೊಟ್ಟರು. ಇವೆಲ್ಲಾ ಕಾರ್ಯಗಳನ್ನೂ ತನ್ನ ಬ್ಯಾರಿಸ್ಟರ್ ಉದ್ಯೋಗವನ್ನೂ ನಡೆಸುವಂತೆ ಇವರು ಅನೇಕಾವರ್ತಿ ಎಡಬಿಡದೆ ದಿನಕ್ಕೆ 18 ತಾಸುಗಳ ಪ್ರಕಾರ ಕೆಲಸ ಮಾಡುತ್ತಿದ್ದರು.

ಈ ಮಹಾತ್ಮರಲ್ಲಿ ವಾಸವಾಗಿದ್ದ ಅಕೃತ್ರಿಮ ಭಕ್ತಿಯು ಇವರ ಎಲ್ಲಾ ಕೃತ್ಯಗಳಲ್ಲಿ ವ್ಯಾಪಿಸಿ ತೋರಿತು. ಜೀವನವೆಂಬದು ದೇವರ ಪವಿತ್ರ ದಾನವು. ಒಂದು ದಿನ ನಾವು ಇದರ ಲೆಕ್ಕ ಒಪ್ಪಿಸಬೇಕು. ಆದ್ದರಿಂದ ಈ ಜೀವನವನ್ನು ಪರೋಪಕಾರದಲ್ಲಿ ವಿನಿಯೋಗಿಸಿ ಸಾರ್ಥಕಪಡಿಸಬೇಕೆಂಬ ಭಾವನೆಯು ಬೋಸರಲ್ಲಿ ನೆಲೆಗೊಂಡಿದ್ದರಿಂದ ಇವರು ಇಷ್ಟು ಹೋರಾಡುತ್ತಿದ್ದರು. ಮರಣವು ಸಮೀಪಿಸಿ ಹಾಸಿಗೆಯಲ್ಲಿದ್ದಾಗಲೂ, ಸುತ್ತಲಿದ್ದವರು ಪ್ರಜಾಹಿತಕಾರಿಯಾದ ವಿಷಯವನ್ನೆತ್ತಿದರೆ ಈ ಪೂಜ್ಯರು ಕೂಡಲೇ ಹಾಸಿಗೆಯಿಂದ ಧುಮುಕಿ ಆಸಕ್ತಿಯನ್ನು ಪ್ರಕಾಶಪಡಿಸುತ್ತಿದ್ದರು. ಹೀಗೆ ತಾನು ಸಂಕಟದಿಂದ ನರಳುವಾಗಲೂ, ಇವರ ಯೋಚನೆಯು ತನ್ನ ಜೀವನವು ಲೋಕಕ್ಕೆ ನಿಷ್ಪ್ರಯೋಜಕವಾಗಿ ಮೂಲೆಯಲ್ಲಿ ಸವೆಯುತ್ತದಲ್ಲಾ ಎಂದಾಗಿತ್ತು. ಬ್ರಹ್ಮಸಮಾಜದ ಗುರುವರ್ಯರಾದ ಕೇಶವ ಚಂದ್ರಸೇನರ ವಿಶ್ವಾಸದ ಶಿಷ್ಯನಾಗಿದ್ದು ಕಡೆಗೆ ಸಾಧಾರಣ ಬ್ರಹ್ಮ ಸಮಾಜವನ್ನು ಸ್ಥಾಪಿಸಿ ತಾನು ಅದರ ಮೊದಲನೇ ಅಧ್ಯಕ್ಷರಾದರು.

(ಸಶೇಷ)

ಧರ್ಮವ್ಯಾಧನು.

—o—

"[illegible] ಭಿಕ್ಷಾಂ ದೇಹಿ" ಎಂದು ಮನೆಯ ಬಾಗಿಲಲ್ಲಿ ಭಿಕ್ಷೆ ಕೇಳಲಿಕ್ಕೆ ಬಂದ ಬ್ರಾಹ್ಮಣನೊಬ್ಬನನ್ನು ನಿಲ್ಲಲಿಕ್ಕೆ ಹೇಳಿ ಶುಚಿಯಿಂದ ಭಿಕ್ಷೆಯನ್ನು ಬ್ರಾಹ್ಮಣನಿಗೆ ಕೊಡುವ ಬಗ್ಗೆ ಭಿಕ್ಷಾಪಾತ್ರವನ್ನು ಒಬ್ಬಾನೊಬ್ಬ ಮನೆಗರತಿಯು ತೊಳೆಯುತ್ತಿದ್ದಳು. ಮಧ್ಯಾಹ್ನ ಸಮಯ. ಉರಿಯುವ ಬೇಸಿಗೆಯ ಬಿಸಿಲಿನಿಂದ ಭೂತಳವೆಲ್ಲವೂ ಕಾದು ಕಾವಲಿಯ ತೆಗದಂತೆ ಪ್ರಜ್ವಲಿಸುತ್ತಿತ್ತು. ಅಷ್ಟರಲ್ಲಿಯೇ ಮನೆಗರತಿಯ ಯಜಮಾನನು ಬಿಸಿಲಿನ ಉಷ್ಣತೆಯಿಂದ ಬೇಸತ್ತು ಆಯಾಸದಿಂದ ಮನೆಗೆ ಬಂದನು. ಈತನ ಧರ್ಮಪತ್ನಿಯು ಪತಿಯ ಆಗಮನವನ್ನು ನೋಡಿದ ಕೂಡಲೇ ಕೈಯಲ್ಲಿದ್ದ ಭಿಕ್ಷಾಪಾತ್ರವನ್ನಲ್ಲಿರಿಸಿ, ಮಧ್ಯಾಹ್ನ ಊಟಕ್ಕೆ ಬಂದಿದ್ದ ತನ್ನ ಯಜಮಾನನ ಕೈತೋಳೆಯುವುದು ಉಪಚಾರಗಳನ್ನು ಮಾಡಲುದ್ಯುಕ್ತಳಾದಳು. ಈ ಲೋಕದಲ್ಲಿ ಮನೋವಾಕ್ಕಾಯ ಕರ್ಮಗಳಲ್ಲಿ ಪತಿ ಶುಶ್ರೂಷಣವೇ ಪತಿವ್ರತೆಗಳಾದ ಸ್ತ್ರೀಯರಿಗೆ ಪ್ರಶಸ್ತವಾದದ್ದು, ಈ ರೀತಿಯಿಂದ ಪಾತಿವ್ರತ ಧರ್ಮಗಳನ್ನು ನಡೆಯಿಸಿದರೆ ಉತ್ತಮವಾದ ಪುಣ್ಯಪ್ರಾಪ್ತಿಯು ಸ್ತ್ರೀಯರಿಗಾಗುವದು, ಎಂಬೀ ಸ್ತ್ರೀಧರ್ಮತತ್ವಗಳು ಇವಳಲ್ಲಿ ಪರಿಪೂರ್ಣವಾಗಿದ್ದವು. ಗಂಡನ ಸಂಧ್ಯಾಹ್ನಿಕ ಮೊದಲಾದವುಗಳು ತೀರಿದ ಮೇಲೆ ಆದರಿಸಿ ಉಣ್ಣಿಸಿ ಊಟ ಮುಗಿಯುವ ತನಕ ಗಂಡನ ಎದುರಿನಲ್ಲಿಯೇ ಇದ್ದಳು.

ಇತ್ತ ಭಿಕ್ಷೆ ಬೇಡಲಿಕ್ಕೆ ಬಂದ ಕೌಶಿಕ ಋಷಿಯು ಇವಳನ್ನು ಹೊರಗೆ ಕಾಯುತ್ತಿದ್ದನು. ಈ ಕಾಲದ ಬ್ರಾಹ್ಮಣರು ಸಕಲ ವೇದಶಾಸ್ತ್ರಪುರಾಣ ಇತಿಹಾಸಗಳನ್ನು ಕಲಿತು ಕ್ಷತ್ರಿಯ ವೈಶ್ಯ ಶೂದ್ರ ಈ ಮೂರು ವರ್ಣಗಳವರಿಗೆ ಗುರುವರ್ಯರಾಗಿದ್ದರು. ಲೋಕವ್ಯವಹಾರಿಕ ಎಲ್ಲಾ ಕೃತ್ಯಗಳಲ್ಲಿ ಬ್ರಾಹ್ಮಣರ ಉಪದೇಶವೇ ಮುಖ್ಯವಾಗಿತ್ತು. ಬ್ರಾಹ್ಮಣರನ್ನು ಪೋಷಿಸುವದು ಆ ಕಾಲದ ಸರ್ವರ ಧರ್ಮ. ಮನೆಬಾಗಿಲಿಗೆ ಬಂದ ಬ್ರಾಹ್ಮಣನಿಗೆ ಭಿಕ್ಷೆಗೋಸ್ಕರ ಕಾದುಕೊಂಡಿರಿಸುವುದು ಧರ್ಮವಿರೋಧವಾಗಿತ್ತು. ಭಿಕ್ಷೆ ಇಲ್ಲವೆಂತ ಹೇಳುವದೆಂತೂ ಮಹಾಪಾತಕವು. ಭಿಕ್ಷೆ ಬೇಡಲಿಕ್ಕೆ ಬಂದ ಈ ಬ್ರಾಹ್ಮಣನು ಎಲ್ಲಾ ಶಾಸ್ತ್ರಗಳನ್ನರಿತ ನಿಪುಣನೂ ಮಹಾ ತಪಸ್ವಿಯೂ ಆಗಿದ್ದನು. ವಿದ್ಯೆಯು ಬುದ್ಧಿಯನ್ನು ತಿದ್ದುವದು. ಸ್ವಭಾವವು ಪೂರ್ವಸಂಚಿತ ಕರ್ಮಗಳನ್ನನುಸರಿಸುವದು. ವೇದವಿದ್ಯೆಯನ್ನು ಕಲಿತು ಮಹಾ ತಪಸ್ವಿಯಾಗಿದ್ದರೂ ಈತ ಸ್ವಭಾವವನ್ನು ಅಲಂಕರಿಸುವ ಸಹನಾಗುಣವು ಇವನಲ್ಲಿರಲಿಲ್ಲ. ಗಂಡನ ಸೇವೆಯಲ್ಲಿ ತನ್ನ ವಾಗಲೇ ಬ್ರಾಹ್ಮಣನು ಹೊರಗೆ ಕಾದುಕೊಂಡಿದ್ದಾನೆಂಬ ನೆನಪು ಆ ಪತಿವ್ರತಾಶಿರೋಮಣಿಗಿತ್ತು. ಬ್ರಾಹ್ಮಣನನ್ನು ಇಷ್ಟು ಹೊತ್ತು ಕಾದುಕೊಂಡಿರಿಸಿದೆನಲ್ಲಾ ಎಂದು ಮನಸ್ಸಿನಲ್ಲಿ ಪಶ್ಚಾತ್ತಾಪಪಟ್ಟು ಭಕ್ತಿಯಿಂದ ಆತನಿಗೆ ಭಿಕ್ಷೆಯನ್ನು ನೀಡಲು, ಆತನು ಕ್ರೋಧಾವಿಷ್ಟನಾಗಿ— ಎಲೌ ಸ್ತ್ರೀಯೇ ಭಿಕ್ಷಾಟನೆಗೆ ಬಂದವನನ್ನು ನಿಲ್ಲಲಿಕ್ಕೆ ಹೇಳಿ ಎಷ್ಟು ಸಮಯವಾಯಿತು! ನನ್ನನ್ನು ಹೋಗಲಿಕ್ಕೆ ಹೇಳದೆ ಈ ರೀತಿ ನನ್ನನ್ನು ಅರೆ ತೊಂದರೆ ನಿನ್ನ ಶೀಲವು ಒಳ್ಳೇದಲ್ಲ— ಅಂದನು. ಹೀಗೆ ಕೋಪವನ್ನು ತಾಳಿ ಕಿಡಿಗೆದರುವ ಬ್ರಾಹ್ಮಣನ ಮುಖವನ್ನು ನೋಡಿ ಆ ಪತಿವ್ರತೆಯು—ಮಹಾಸ್ವಾಮಿಗಳೇ, ನನ್ನ ತಪ್ಪನ್ನು ಕ್ಷಮಿಸಿರಿ. ಸ್ತ್ರೀಯರಿಗೆ ಪತಿಯೇ ಶ್ರೇಷ್ಠ ದೇವರು. ಬೆಂದು ಬಸವಳಿದು ಹಸಿವೆಯಿಂದ ಬಂದ ನನ್ನ ಪತಿಸೇವೆಯಲ್ಲಿಯೇ ನಿರತಳಾಗಿದ್ದೆನು— ಎಂದುಸಿರಲು ಆ ಬ್ರಾಹ್ಮಣನು ಮತ್ತಷ್ಟು ಕೋಪದಿಂದ— ಲೋಕದಲ್ಲಿ ದೇವತೆಗಳಿಂದ ಸಹಾ ಸನ್ಮಾನಿಸಲ್ಪಟ್ಟು ಭೂಸುರರೆನಿಸುವ ಬ್ರಾಹ್ಮಣರನ್ನು ನಿನ್ನ ಗಂಡನಷ್ಟು ಶ್ರೇಷ್ಠರಲ್ಲೆಂದು ಭಾವಿಸಿದಿಯೇ? ಮಹಾ ತಪಸ್ವಿಗಳಾದ ನಾವು ನಮ್ಮ ತಪೋಬಲದಿಂದ ಎಲ್ಲವನ್ನು ಬೂದಿಮಾಡುವ ನಮ್ಮ ತ್ರಾಣದ ಬಗೆಯು ನಿನಗೆ ಗೊತ್ತಿಲ್ಲವೇ?— ಎಂದು ಕೋಪಾಸಕ್ತಿಯಿಂದ ಮಾತಾಡುವ ಆ ಬ್ರಾಹ್ಮಣನ ಮಾತುಗಳನ್ನು ಕೇಳಿ ಆ ಬಾಲೆಯು— ಬ್ರಾಹ್ಮಣೋತ್ತಮರೇ, ತಾವು ಸಿಟ್ಟಿನಿಂದ ಬೂದಿಮಾಡಿದ ಹೆಣ್ಣು ಬಕದಂತೆಯೇ ನನ್ನನ್ನು ಗ್ರಹಿಸಬೇಡಿರಿ! ತಾವು ತಪಸ್ವಿಗಳು. ತಪೋಬಲದ ಸಾಮರ್ಥ್ಯವು ನನಗೆ ಗೊತ್ತಿರುವದು. ಬ್ರಾಹ್ಮಣರನ್ನು ದೇವರೆಂದೇ ಬಗೆಯುವೆನು ಹೊರತು ಅನ್ಯಥಾ ಆಲೋಚಿಸಲಿಲ್ಲ. ವೇದಗಳ ಗೊತ್ತು ತಿಳಿದ ಬ್ರಾಹ್ಮಣರು ತಮ್ಮ ಜ್ಞಾನಶಕ್ತಿಯಿಂದ ಅನ್ಯರ ಅಪರಾಧಗಳನ್ನು ಕ್ಷಮಿಸಬೇಕಲ್ಲದೆ ಕೋಪಾವೇಶಿತರಾಗಿ ವರ್ತಿಸಕೂಡದು. ಸಹನಾಗುಣವಿಲ್ಲದ ಸರ್ವವನ್ನೂ ತಿಳಿದ ಬ್ರಾಹ್ಮಣನು ಬ್ರಾಹ್ಮಣನಲ್ಲ. ಪತಿಗೆ ಸಮಾನವಾದ ಅನ್ಯದೇವತೆ ಇಲ್ಲ ಎಂಬ ಭಾವನೆಯಿಂದ ಈ ರೀತಿ ನಡೆದೆನು. ನನ್ನ ತಪ್ಪನ್ನು ಕ್ಷಮಿಸಿರಿ. ಸಕಲ ವೇದಶಾಸ್ತ್ರಗಳನ್ನು ತಾವು ಕಲಿತರೂ ಧರ್ಮದ ಜ್ಞಾನ [illegible]ವನ್ನು ಓದಿದ ಮಾತ್ರದಿಂದ ಧರ್ಮವು ನಮ್ಮ ಕೈವಶವಾಗದೆಂಬುದು ತಾವು ಇನ್ನೂ ತಿಳಿಯಲಿಲ್ಲ. ಇದನ್ನು ಮಿಥಿಲಾಪಟ್ಟಣದಲ್ಲಿರುವ ಧರ್ಮವ್ಯಾಧನಿಂದ [illegible] ಕೊಳ್ಳಿ— ಎಂದೆನ್ನಲು, ಬ್ರಾಹ್ಮಣನು ವಿಸ್ಮಯದಿಂದ ಚಕಿತನಾದನು.

ಈ ಕೌಶಿಕ ಋಷಿಯು ಒಂದು ಮರದ ನೆರಳಲ್ಲಿ ವೇದ ಪಠಣವನ್ನು ಮಾಡುತ್ತಿದ್ದಾಗ ಮರದ ಮೇಲಿದ್ದ ಒಂದು ಹೆಣ್ಣು ಬಕವು ಈತನ ಶುಚಿಯನ್ನು ಭ್ರಷ್ಟ ಮಾಡಿತು. ತಕ್ಷಣವೇ ಆ ಬಡ ಬಕವು ತಪಸ್ವಿಯಾದ ಈತನ ರೋಷಾವೇಷದಿಂದ ಬೂದಿಯಾಗಿ ಕೆಳಗೆ ಬಿತ್ತು. ಇದನ್ನು ಕಂಡು ಆ ಬ್ರಾಹ್ಮಣನು ತನ್ನ ಕೋಪದಿಂದುಂಟಾದ ಈ ಅಕೃತ್ಯಕ್ಕೋಸ್ಕರ ಪಶ್ಚಾತ್ತಾಪ ಪಟ್ಟು ಆ ಮರದ ನೆರಳಿನಿಂದ ಭಿಕ್ಷಾಟನೆಗೆ ಹೊರಟು, ಮೇಲೆ ಹೇಳಿದ ಪತಿವ್ರತೆಯಲ್ಲಿಗೆ ಭಿಕ್ಷೆಗೋಸ್ಕರ ಹೋಗಿದ್ದನು. ಆ ಸ್ತ್ರೀಯು ಹೇಳಿದ ಬುದ್ಧಿವಾದವು ಆತನ ಮನಸಿನಲ್ಲಿ ನಾಟಿ ಪದೇ ಪದೇ ಅದನ್ನು ಗ್ರಹಿಸುತ್ತಾ ಮಿಥಿಲಾ ಪಟ್ಟಣದ ಮಾರ್ಗವಾಗಿ ಪ್ರಯಾಣ ಬೆಳಸಿದನು. ಪ್ರಾಣಿಗಳನ್ನು ಕೊಂದು ಮಾಂಸ ಮಾರುವ ಬೇಡನನ್ನು ಹುಡುಕುವೆನೆಂಬ ಲಕ್ಷ್ಯವನ್ನು ಬಿಟ್ಟು ಪ್ರಯಾಣಸ್ಥರಿಂದ ಈ ಬೇಡನ ಇರವನ್ನು ತಿಳಿದು ಬ್ರಾಹ್ಮಣನು ಬೇಡನ ಮನೆ ಹತ್ತಿರ ಸಾರಿದನು. ಮಾಂಸರಾಶಿಯಿಂದ ತುಂಬಿದ ಬೇಡನ ಅಂಗಳವನ್ನು ಪ್ರವೇಶಿಸಲು ಗಿರಾಕಿಗಳಿಂದ ಸುತ್ತಲ್ಪಟ್ಟ ಬೇಡನು ಕೌಶಿಕನ ದೃಷ್ಟಿಗೆ ಕಾಣದೆ ಹೋದರೂ ವ್ಯಾಧನು ಬ್ರಾಹ್ಮಣನ ಬರೋಣವನ್ನು ತಿಳಿದು ತನ್ನಾಸನದಿಂದೆದ್ದು ಬ್ರಾಹ್ಮಣನನ್ನು ಸನ್ಮಾನದಿಂದ ಎದುರುಗೊಂಡು— ತಾವು ಹುಡುಕುವ ಬೇಡನು ನಾನೇ. ಪತಿವ್ರತೆಯು ಮಿಥಿಲಾ ಪಟ್ಟಣದಲ್ಲಿರುವ ಬೇಡನ ಹತ್ತರ ಹೋಗ ಹೇಳಿದ್ದು ನನಗೆ ಗೊತ್ತದೆ. ಈ ಅಂಗಳವು ತಮ್ಮಂಥವರಿಗೆ ಯೋಗ್ಯವಲ್ಲದ ಕಾರಣ ನಮ್ಮ ಮನೆಗೆ ಹೋಗುವಾ—ಎಂದು ಹೇಳಿ ಬ್ರಾಹ್ಮಣನನ್ನು ಕರಕೊಂಡು ಮನೆಗೆ ಹೋಗಿ ದಿವ್ಯಾಸನವನ್ನು ಬ್ರಾಹ್ಮಣನಿಗೆ ಕೊಟ್ಟು ತಾನು ಕುಳಿತುಕೊಂಡನು.

ಕೌಶಿಕನು ಸ್ತ್ರೀ ಶಿರೋಮಣಿಗೂ ತನಗೂ ನಡೆದ ವೃತ್ತಾಂತ ಈ ಬೇಡನಿಗೆ ಹ್ಯಾಗೆ ತಿಳಿಯಿತಪ್ಪಾ ಎಂದು ಮನಸ್ಸಿನಲ್ಲಿ ಆಶ್ಚರ್ಯಪಟ್ಟು ಈ ಬೇಡನು ಸಾಮಾನ್ಯ ಪುರುಷನಲ್ಲವೆಂತ ನಿರ್ಧರಿಸಿ— ಎಲೈ, ವ್ಯಾಧನೇ ನಿನ್ನಂಥವನಿಗೆ ಪ್ರಾಣಿಗಳನ್ನು ಹಿಂಸಿಸುವ ಈ ಬೇಡರ ವೃತ್ತಿಯು ಸಲ್ಲದು—ಎಂದೆನ್ನಲು, ಬೇಡನು—ದೇವರು ನನ್ನನ್ನು ಯಾವ ವೃತ್ತಿಯವರಲ್ಲಿ ನಿರ್ಮಿಸಿದನೋ ಅದೇ ವೃತ್ತಿಯು ನನಗೆ ಯೋಗ್ಯವಾದದ್ದು. ಸರ್ವ ಸುಖಕಾರಿಯಾದ ಸಂತುಷ್ಟಿಯೇ ನಮಗೆ ನಮ್ಮ ವೃತ್ತಿಗಳಲ್ಲಿ ಬೇಕಾದ್ದು. ಯಾವ ವೃತ್ತಿಯನ್ನನುಸರಿಸಿದರೂ ಧರ್ಮಮಾರ್ಗವು ಎಲ್ಲರಿಗೂ ಸಾಧ್ಯ. ಸತ್ಯ ವಿನಹಾ ಬೇರೇನೂ ತಿಳಿಯೆನು, ಅಸೂಯೆಯು ನನ್ನಲ್ಲಿಲ್ಲ, ಅನ್ಯರನ್ನು ತುಷ್ಟೀಕರಿಸುವದು ನನಗೆ ಹೊಸತೇ, ನನ್ನಿಂದ ಕೈಲಾಗುವಷ್ಟು ಪರೋಪಕಾರವನ್ನು ಮಾಡುವೆನು. ತಂದೆತಾಯಿಗಳು ನನ್ನ ಅಭಿಮಾನ ದೇವತೆಗಳು. ಪೂರ್ವಜನ್ಮದಲ್ಲಿ ಮಾಡಿದ ಪಾಪಫಲ ವಿಶೇಷತ್ವದಿಂದ ಈ ಬೇಡರಕುಲದಲ್ಲಿ ಉತ್ಪತ್ತಿ ಹೊಂದಿದೆನು. ಸಂತುಷ್ಟಿಯಿಂದಲೂ ಚಿತ್ತಶಾಂತಿಯಿಂದಲೂ ನನ್ನ ಉದ್ಯೋಗವನ್ನು ಮಾಡುವೆನು. ಸರ್ವ ವೇದ ಉಪನಿಷ್ಯದಗಳ ರಹಸ್ಯವನ್ನು ತಿಳಿದ ಬ್ರಾಹ್ಮಣ ಶ್ರೇಷ್ಠರೇ, ನನ್ನಲ್ಲಿರುವ ಹುದುಗಿದ ಸದ್ಧರ್ಮಶೀಲದ ಒಳಂತರಂಗವನ್ನು ಹೇಳಿ ಕೊಡುವೆನು ಎಂದು ಹೇಳಿ ಕೌಶಿಕನನ್ನು ಕರೆದುಕೊಂಡು ಮನೆಯೊಳಗಿನ ಒಂದು ಕೋಣೆಗೆ ಹೋದನು.

ವೃದ್ಧಾಪ್ಯದಿಂದ ಎದ್ದು ನಿಲ್ಲಲಾರದ ಬೇಡನ ತಂದೆತಾಯಿಗಳು ನಿಶ್ಚಿಂತರಾಗಿ ನಿರ್ಮಲವಾದ ಹಾಸಿಗೆಯಲ್ಲಿ ಪವಡಿಸಿಕೊಂಡಿದ್ದರು. ಬೇಡನು ಬ್ರಾಹ್ಮಣನೊಟ್ಟಿಗೆ ಒಳಗೆ ಪ್ರವೇಶಿಸುತ್ತಲೇ, ದಂಪತಿಗಳು ಕಣ್ಣು ತೆರೆದು ಮಗನನ್ನು ಸಂತೋಷದಿಂದ ನೋಡಲು ವ್ಯಾಧನು ಸಾಷ್ಟಾಂಗ ಪ್ರಣಾಮವನ್ನು ಮಾಡಿ ಕೈಮುಗಿದು ಕೌಶಿಕನ ಆಗಮನವನ್ನು ತಿಳಿಸಲು ಆ ವೃದ್ಧ ದಂಪತಿಗಳು ಬ್ರಾಹ್ಮಣನನ್ನು ಯೋಗ್ಯರೀತಿಯಲ್ಲಿ ಸನ್ಮಾನಿಸಿದರು. ತರುವಾಯ ಈ ಧರ್ಮವ್ಯಾಧನು ತಾಯಿತಂದೆಗಳ ಸೇವೆಯನ್ನು ತಾನು ಮನಃಪೂರ್ವಕ ಮಾಡಿ ತನ್ನ ತನುಮನಧನಗಳನ್ನೂ ಹೆಂಡತಿ ಮಕ್ಕಳನ್ನೂ, ಪಂಚಪ್ರಾಣಗಳನ್ನೂ ಕಡೆಗೆ ಸರ್ವವನ್ನೂ ತನ್ನ ಹೆತ್ತವರ ಸೇವೆಗೆ ಅರ್ಪಿಸಿರುವೆನೆಂದೂ, ತನ್ನ ಧರ್ಮಜ್ಞಾನವೂ ಎಲ್ಲಾ ಸೌಭಾಗ್ಯವೂ ಅವರ ಆಶೀರ್ವಾದದ ದೆಸೆಯಿಂದುಂಟಾಯಿತೆಂದೂ, ಆ ಕೌಶಿಕ ಋಷಿಗೆ ತಿಳಿಸಿದನು. ಕೌಶಿಕನು ಬೇಡನ ದೆಸೆಯಿಂದ ತಾನು ಅನೇಕ ಧರ್ಮತತ್ವಗಳನ್ನು ತಿಳಿದೆನೆಂದು [illegible] ಆ ಬೇಡನು—ನಿಮ್ಮ ಅಭಿವೃದ್ಧಿಮಾರ್ಗವು ನನಗೆ ಗೊತ್ತಿರುವದು. ಸಕಲ [illegible] ಸ್ತ್ರಗಳನ್ನು ನೀವು ಕಲಿತಿರುತ್ತೀರಿ. ಆದರೆ ವೇದ ವಿದ್ಯೆಯು [illegible] ಲಿಲ್ಲ. ನಿಮ್ಮ ಧರ್ಮಬುದ್ಧಿ [illegible]

[illegible] ಇದು ಧರ್ಮವಿರುದ್ಧ. ಇಲ್ಲಿಂದಲೇ ತಾವು ತಮ್ಮ ಹೆತ್ತವರಿ [illegible] ಅವರ ಸೇವೆಯನ್ನು ಕೈಕೊಂಡಕ್ಷಣವೇ ತನಗೆ ಎಲ್ಲಾ ಜ್ಞಾನವು ಲಭಿಸುವದು—ಎಂದನು. ಆ ಮೇರೆಗೆ ಕೌಶಿಕನು ಬೇಡನನ್ನು ವಂದಿಸಿ ತನ್ನ ತಾಯಿ ತಂದೆಗಳ ಬಳಿಗೆ ಹೋಗಿ ಅವರನ್ನು ಸೇವಿಸುತ್ತಾ ಇದ್ದನು.

ಸಮಾಜ ಸಂಸ್ಕಾರ.

—o—

ಸಮಾಜ ಸಂಸ್ಕಾರದ ಕಡೆಗೆ ಲೋಕವು ಹೆಚ್ಚು ಹೆಚ್ಚು ಲಕ್ಷ್ಯಕೊಡುತ್ತಿದೆ ಇಂಗ್ಲಿಷ ವಿದ್ಯೆ ಕಲಿತು ನವೀನ ಸುಧಾರಣೆಯನ್ನಂಗೀಕರಿಸಿದವರು ಬಾಲವಿವಾಹವು ಅಸ್ವಾಭಾವಿಕವೆಂದೂ ದಂಪತಿಗಳಲ್ಲಿ ಪರಸ್ಪರ ಅನುರಾಗವನ್ನುಂಟು ಮಾಡತಕ್ಕದ್ದಲ್ಲವೆಂದೂ ಪ್ರಜಾದೌರ್ಬಲ್ಯಕ್ಕೆ ಕಾರಣವೆಂದೂ ತಿಳಿದು, ಅಂಥಾ ಕಟ್ಟಳೆಯು ಪೂರ್ವದಿಂದ ನಡೆದು ಬಂದದ್ದಾದರೂ, ತ್ಯಜಿಸಬೇಕೆಂದು ತರ್ಕಿಸುವರು. ನವನಾಗರಿಕರಲ್ಲಿ ಬಡಬ್ರಾಹ್ಮಣನಿಗೆ ಮಗಳು ಪ್ರಾಪ್ತವಯಸ್ಕಳಾಗಾಗ ಅಂದರೆ ಹತ್ತು ಹನ್ನೊಂದು ವರುಷ ಬೆಳೆದಾಗ ವರನನ್ನು ಹುಡುಕುವದರಲ್ಲಿ ಗ್ರಹಪಿತೃಸ್ಥವಿದ್ದರೆ ವರದಕ್ಷಿಣೆ [illegible] ರೀತ್ಯ, ವರನು ಯೋಗ್ಯನಾದರೆ ಜಾತಕ ಕೂಡಿಬಾರದು ಎಂಬ ಚಿಂತೆಯಿಂದ ಕೇತುಕ್ಕೆ ಮನಸ್ಸು ಬಾರದು. ಮಗಳೇ ಮಾರಿಯಂತೆ ತೋರುವಳು. ಇಷ್ಟರಲ್ಲಿ ಹುಡುಗಿಗೆ ಹದಿನೆರಡು ದಾಟುವದು. ತಂದೆಯು ಇನ್ನು ತಡಿಯಲಾರದೆ [illegible] ನ್ನು ನಂಬಿ ಮೊದಲು ಸಿಕ್ಕಿದವನ ಕೊರಳಿಗೆ ಮಗಳನ್ನು ಕಟ್ಟುವನು. ಈ ವರ್ತ್ತಾಯದ ರುಜುವಿನಿಂದಾದ ಸಂಟಸ್ತಿಕೆಯ ಪರಸ್ಪರ ಪ್ರೀತಿ ಹುಟ್ಟಿಸುವದಕ್ಕೆ ಸಮರ್ಥ [illegible] ಚರವಾಗದು. ಮದುವೆಗೆ ತೆಗೆದುಕೊಂಡ ಸಾಲತೀರಿಸುವ ಮೊದಲು [illegible] ವೆಯಾಗುವದೂ ಉಂಟು. ಇಂತಹ ರಂಗೆಯ [illegible]

ಪ್ರೌಢ ವಿವಾಹವು ಶಾಸ್ತ್ರ ಸಮ್ಮತವೋ ಎಂಬ ವಿಷಯದಲ್ಲಿ [illegible] ಚರ್ಚೆ ನಡೆಯುವದು. ಈ ಸಂದರ್ಭದಲ್ಲಿ ದಿವಾನ ಬಹದೂರ [illegible] ಹೇಳುವ ಮಾತುಗಳಿಗೆ ವಾಚಕರು ಗಮನ ಕೊಡತಕ್ಕದ್ದ [illegible] ಶಾಸ್ತ್ರಜ್ಞರಾದಂತವರು ಹೇಳುವದೇನಂದರೆ—"ಮದುವೆ ಮಾಡದೆ [illegible] ದಲು ಹೆಂಗಸರು ವಿವಾಹ ವಿಹಿತರಲ್ಲವೆಂದೂ [illegible] ಕಕ್ಕೊಳಗಾಗುದಿಲ್ಲವೆಂದೂ ಇಂಥಾ ಸ್ಥಿತಿಯಲ್ಲಿ ಆಕೆ [illegible] ವಿಧಿಗಳಿಂದ ಆಕೆಗೆ ಪುನರ್ವಿವಾಹವಾಗ [illegible] ಗಸು ಜಾತಿ ಕೆಡುವದಿಲ್ಲ ಅವಳ ಮಕ್ಕಳು ಕುಲವಂತರಾಗುವರು. [illegible] ದಗಳನ್ನು ಬ್ರಾಹ್ಮಣ ಗುರುಗಳು ಶೋಧಿಸಿ ಸಮಾಜ [illegible] ಸಾರವಾಗಿ ನೆರವೇರಿಸಿದರೆ ಹಲವು ತರದ [illegible] ನವೀನ ಪೂರ್ವ ಪಕ್ಷಗಳೆಂಬ ಭೇದಗಳು [illegible] ಏಕಪ್ರಕಾರವಾಗಿ ಸನ್ಮಾನಿಸುವರು. ಇಲ್ಲವಿದ್ದರೆ [illegible] ನಾದ ಸಮಾಜದಲ್ಲಿ ಇನ್ನೂ ಜಾತಿಗಳು [illegible] ವು ಯಾಕೆಂದರೆ ಶಿಫೋರ್ಮ ಪಾರ್ಟಿ ([illegible] ಸಂಸ್ಕಾರ [illegible]) ಪ್ರತಿ ಬೆಳೆಯುತ್ತಾ ಬರುತ್ತದೆ. [illegible] ಅನೇಕ ಅನರ್ಥಗಳು [illegible] ವಿದ್ಯಾವಿನಾ [illegible] ಪ್ರೌಢ ವಿವಾಹ [illegible] ಸಿದಕ್ಕಾಗಿ ಜನರು ಬಹಿಷ್ಕೃತರಾದರೆ ಅವರಿಗೆ [illegible] ಅವರಾಗಲೀ ಅವರ ಮುಂದಿನ ಸಂತತಿಯಾಗಲೀ [illegible] ಕರ್ಮಗಳನ್ನೆಸಗಿ ಪತಿತರಾದರೆ ಆ ಕುಂದು ಸಮಾಜಕ್ಕಲ್ಲವೇ? ನಾವು ಮೇಲೆ ಚಿಸಿದ ರೀತಿಯಲ್ಲಿ ಭಿನ್ನಪಕ್ಷಗಳು [illegible] ಕೂಡಿ [illegible] ಸಮಾಜ ಸಂಸ್ಕಾರಗಳಿಗೆ ಶಾಸ್ತ್ರಾಧಾರ [illegible] ಮೈಸೂರು ಆರ್ಯ ಧರ್ಮೋಜ್ಜೀವಿನೀ ಸಭೆ [illegible] ಬರುತ್ತದೆ. ಇಂತಹ ಕಾರ್ಯಕ್ಕೆ [illegible]

M. B.

ಅಫಘಾನದೇಶದ ಅಮೀರರ ವಿಷಯ.

ಅಫಘಾನ್‌ದೇಶದ ಅಮೀರರು ಒಮ್ಮೆ ವಾತರೋಗದಿಂದ ಪೀಡಿಸಲ್ಪಟ್ಟು ಅವರ ದೇಶದ ಹಕೀಮರು ತರತರದ ಔಷಧ ಕೊಟ್ಟರೂ ಕಾಹಿಲೆಯು ಏನೂ ಕಮಿಯಾಗಲಿಲ್ಲ. ಇವರ ಆರೋಗ್ಯ ರಕ್ಷಣಾರ್ಥವಾಗಿ ಕರ್ಜನ್ ಪ್ರಭುಗಳಿಂದ ಕಳುಹಿಸಲ್ಪಟ್ಟ ಇಂಗ್ಲಿಷ ಡಾಕ್ಟ್ರರನ್ನು ಇವರು ಇದಕ್ಕೆ ಮುಂಚೆಯೇ ವಾಪಾಸು ಕಳುಹಿದ್ದರು. ಸಂಕಷ್ಟವು ಅಮೀರರನ್ನು ರಾತ್ರಿ ನಿದ್ರೆ ಮಲಕ್ಕೆ ಬಿಡುತ್ತಿರಲಿಲ್ಲ. ಹೀಗಿರುವಾಗ್ಯೆ ಒಬ್ಬ ಹಿಂದುಸ್ಥಾನದ ಆಸ್ಪಿಟಲ್ ಅಸಿಸ್ಟಾಂಟನು ಅಫಘಾನಿಸ್ಥಾನದಲ್ಲಿ ವೈದ್ಯವೃತ್ತಿಯನ್ನು ಮಾಡಬೇಕೆಂದು ಹೋಗಿದ್ದನು. ಅಮೀರರ ಪ್ರಧಾನಿಯು ಇದನ್ನು ಕೇಳಿ ಈ ಹೊಸ ಆಸ್ಪಿಟಲ್ ಅಸಿಸ್ಟಾಂಟನನ್ನು ಕರತರಿಸಿದರು. ರಾತ್ರೆಯಲ್ಲಿ ನಿದ್ರೆ ಬೀಳುವದೆ ತಾನು ಉತ್ತಮ ಔಷಧಿಯನ್ನು ಕೊಡುವೆನೆಂದು ಹೇಳಿ ಈ ಹೊಸ ವೈದ್ಯನು ಯೋಗಪ್ರಕಾರ ಕೆಲವು ಇಂಗ್ಲಿಷ ದ್ರಾವಣಗಳನ್ನು ಒಂದು ಶೀಸೆಯಲ್ಲಿ ಕೂಡಿಸಿ ಹಲವು ಸರ್ತಿ ತೆಗೆದುಕೊಳ್ಳಲಿಕ್ಕೆ ಬೇಕಾದ ಔಷಧಿಯನ್ನು ಒಂದೇ ಸರ್ತಿ ಕಳುಹಿಸಿ ಕೊಟ್ಟನು. ಔಷಧಿಯ [illegible] ಯಾವ ಪ್ರಕಾರ ಎಷ್ಟೆಷ್ಟು ಸೇವಿಸಬೇಕೆಂದು ಈ ವೈದ್ಯನು ಹೇಳಿದರೂ, ಏನೊ ಒಂದು ಸಂದರ್ಭದಲ್ಲಿ ಅಮೀರರು ಇದನ್ನು ಮರೆತು ಔಷಧಿಯ ಕುಪ್ಪಿಯನ್ನು ಕೈಯಲ್ಲಿ ತೆಗೆದು ಮುಕ್ತಾಸನವಾಗಿ ಅದರ ಅರ್ಧಪಾಲನ್ನು [illegible] ಎಂಬ ತನ್ನ ಸೇವಕನಿಗೆ ಕೊಟ್ಟರು. ಸೇವಕನು ಅನೇಕ ಸರ್ತಿ ತೆಗೆದುಕೊಳ್ಳಬೇಕಾದ ಔಷಧಿಯನ್ನು ಒಂದೇ ಸಲ ಸೇವಿಸಿದ್ದರಿಂದ ಔಷಧಿಯ ವೇಗವನ್ನು ತಾಳಲಾರದೆ ಮೃತಪಟ್ಟನು. ಔಷಧಿಯು [illegible] ಹಾಗೆ [illegible] ತಾಯಿತು. ಕೆಲವು ದಿವಸಗಳಲ್ಲಿ [illegible] ವಾತರೋಗವು [illegible] ಗುಣವಾಯಿತು. ಆಸ್ಪಿಟಲ್ ಅಸಿಸ್ಟಾಂಟನನ್ನು ಕರೆಸಿ [illegible] ಆತನು ತಾನು ಕೊಟ್ಟ ಔಷಧಿಯಿಂದ ಅಮೀರರು ಆರೋಗ್ಯವೃದ್ಧಿ [illegible] ತನಗೆ ಉಚಿತ ಸತ್ಕಾರದ [illegible] ಕಳುಹಿಸಬೇಕೆಂದು [illegible] ಅಮೀರರು [illegible] "ಇವರಲ್ಲಿದ್ದ ಅರ್ಧ ಔಷಧಿಯಿಂದ ನನ್ನ ಸೇವಕ [illegible] ಆಸ್ಪಿಟಲ್ ಅಸಿಸ್ಟಾಂಟನು [illegible] ಅಮೀರರ [illegible] ಇಂಗ್ಲಿಷ [illegible] ಆಸ್ಪಿಟಲ್ ಅಸಿಸ್ಟಾಂಟ [illegible] ಔಷಧಿ ಕುಡಿದು [illegible] ವಾಂತಿ ಔಷಧಿಯನ್ನು ಕೊಟ್ಟು ಆತ [illegible]

ಇದೆಲ್ಲ [illegible] ಕಾಬೂಲು ಪೋಲೀಸು ಕಾಕರಿಕ್ಕೆಂತ ಪೋಲಿಸಿನಲ್ಲಿ [illegible] ಅವರಲ್ಲ ಒಂದು ತೀಟು ಇತ್ತು. ಮಾತಾಡದೆ ಸುಮ್ಮ [illegible] ಪರನನ್ನು ಕರೆದು ಜೇಲಿನಲ್ಲಿರುವ ಪೋಲೀಸನ್ನು ತೋರಿಸಿ—[illegible] ಅಷ್ಟೆ [illegible] ಪೋಲೀಸಿನಲ್ಲಿ [illegible] ಜೇಲು [illegible] ಅವನಿಗೆ [illegible] ತಪ್ಪಿ [illegible] ದರಂತೆ.

[illegible] ಕಲಕತ್ತೆಗೆ ಬಿಜ್ಜೆ ಮಾಡಿದ್ದ [illegible] ಇಂಗ್ಲಿಷ ಕಂಪೆನಿಯವರ ಜಂಗ್ರಾಲಿಗೆ ಹೋಗಿ ಅಲ್ಲಿರುವ ಸಮಸ್ತ [illegible] ಅಲಂಕರಿಸಿಟ್ಟ ಒಂದು [illegible] ಕ್ರಯ ಕೇಳಿದರು. ಅದರ ಕ್ರಯವು 12000 ರೂಪಾಯಿ [illegible] ಇಂಥಾ [illegible] ತಯ್ಯಾರಿಸ [illegible] ಯಾವ ಮಂಚದಲ್ಲಿ ಒಬ್ಬೇ [illegible] ಒಬ್ಬರೆ ಮಲಗುವದು, 12000 ರೂಪಾಯಿ ಕ್ರಯ ಬಾಳುವ ಮಂಚದಲ್ಲಿ ಮಲಗಿದರೆ ರಾಜ್ಯಭಾರ ಕೆಲಸವು ಅತೀ ಕಷ್ಟವಾಗಿ ತೋರುವದೆಂದೂ ಅಂಥಾ ದೊಡ್ಡ ಮಂಚದಲ್ಲಿ [illegible] ದೊಡ್ಡ ಅಪೇಕ್ಷೆಯಿಲ್ಲವೆಂದೂ ಹೇಳಿ ಸಾಧಾರಣ ಕ್ರಯದ ಒಂದು ಮಂಚವನ್ನು ತೆಕ್ಕೊಂಡರಂತೆ. ಅಮೀರರಿಗಿಂತ ಮೇಲಾದ ಈ ನಮ್ಮ ಹಿಂದು ರಾಜರು ಯಾರೋ? ಪ್ರಜೆಗಳೆಲ್ಲರೂ ಕ್ಷಾಮ, ಪ್ಲೇಗ ಮೊದಲಾದ ಸಂಕಷ್ಟಗಳಿಂದ ನರಳುವಾಗ್ಯೆ 'ಸ್ವದೇಶಿ' ಚಳವಳಿಯು ಊರೆಲ್ಲಾ ವ್ಯಾಪಿಸಿರುತ್ತಾ, ನಮ್ಮ ಹಿಂದೂ ರಾಜರು ಸಹಿಸಲಾರದ ಪ್ರಜಾಯೋಚನೆಯಿಂದ ನಿದ್ರಾರಹಿತರಾಗಿ 12000ರೂಪಾಯಿಯ ವಿದೇಶೀ ಮಂಚಗಳನ್ನು ಕ್ರಯಕ್ಕೆ ಪಡೆದು ಸ್ವದೇಶಿ ಕೈಗಾರಿಕೆಗಳನ್ನು ಪ್ರೋತ್ಸಾಹಿಸುವ ತೆರವು ಬಹಳ ಉತ್ಕೃಷ್ಟವಾದದ್ದೇ ಸರಿ!

ಅಮೀರರು ಕಳೆದ ತಿಂಗಳ ತಾರೀಕು 28ಕ್ಕೆ ಕಲಿಕತ್ತೆಗೆ ದಯಮಾಡಿಸಿ, ಅಲ್ಲಿಯ ರಾಜ್ಯಭಾರದ ಅನೇಕ ಇಲಾಖೆಗಳ ರಹಸ್ಯವನ್ನು ಕುಲಾಂಕುಶವಾಗಿ ತಿಳಿದು, ಆಯುಧಶಾಲೆಗಳಲ್ಲಿ ಆಯುಧಗಳನ್ನು ಮಾಡುವ ಕ್ರಮವನ್ನೂ, ಟಂಕಶಾಲೆಯ ಏರ್ಪಾಡುಗಳನ್ನೂ, ವಿದ್ಯಾಭ್ಯಾಸದ ಕ್ರಮಗಳನ್ನೂ, ಮದ್ದುಗುಂಡುಗಳ ಕಾರ್ಖಾನೆಗಳ ವರ್ಮಗಳನ್ನೂ ಪರಿಶೀಲಿಸಿ, ಇನ್ನೂ ಅನೇಕ ವಸ್ತು ತತ್ವಗಳನ್ನು ತಿಳಿದುಕೊಂಡರು. ಮಾರ್ಚ ತಿಂಗಳ ತಾರೀಕು 15ಕ್ಕೆ ಇವರು ಕಾಬೂಲಿಗೆ ತಲುಪುವರು.

ಇಂಗ್ಲೆಂಡ ವೃತ್ತಾಂತ.

ಶ್ರೀ ಚಕ್ರವರ್ತಿ ಎಡ್ವರ್ಡ ಮಹಾರಾಜರವರು ಮಹಾರಾಣಿಯವರೊಂದಿಗೆ ಫ್ರಾನ್ಸದೇಶದ ರಾಜಧಾನಿಯಾದ ಪ್ಯಾರಿಸಿಗೆ ಹೋಗಿದ್ದರು. ಪ್ಯಾರಿಸಿನಲ್ಲಿ ದೇವಾಲಯದ ... ಪ್ರಾಟೆಸ್ಟಾಂಟ್ ದೇವಾಲಯಕ್ಕೆ ಹೋಗಿದ್ದರು.

ರುಷ್ಯಾದೇಶದಲ್ಲಿ ಕಳೆದ ಜೂನ್ ತಿಂಗಳಲ್ಲಿ ಡ್ಯೂಮಾ ಎಂಬ ಪ್ರಜಾಪ್ರತಿನಿಧಿಸಭೆಯು ಕೂಡಿ ರಾಜಕೀಯ ವಿಷಯಗಳನ್ನು ಉಪಯೋಗ ತೃಪ್ತಿ ಇಲ್ಲದ ರೀತಿ ತರ್ಕಿಸಿದ್ದರಿಂದ ರುಷ್ಯಾದೇಶದ ಪ್ರಜಾಪ್ರತಿನಿಧಿಸಭೆಯು ಏನೂ ಪ್ರಯೋಜನವನ್ನುಂಟುಮಾಡದೆ ಹೋಯಿತು. ಇದೇ ಸ್ಥಿತಿಯು ಬರುವ ಮಾರ್ಚ ತಿಂಗಳಲ್ಲಿ ತಿರುಗಿ ನಡೆಯುವದು. ರುಷ್ಯಾದೇಶದ ರಾಜರು ಈ ಸರ್ತಿಯು ಪ್ರಜಾಪ್ರತಿನಿಧಿಸಭೆಯ ಮೂಲಕ ರಾಜ್ಯಭಾರದಲ್ಲಿ ಸಾಮಾನ್ಯ ಪ್ರಜೆಗಳಿಗೂ ಯುಕ್ತವಾದ ಪಾಲನ್ನು ಕೊಟ್ಟು ರಾಜ್ಯದಲ್ಲಿ ದಿವಸಾಗಲೂ ಉಂಟಾಗುವ ಕೊಲೆಪಾತಕ ಮುಂತಾದ ಅನೇಕ ಅನರ್ಥಗಳನ್ನು ಹೋಗಗೊಡಿಸುವರೆಂದ ಎಲ್ಲರೂ ಕೋರುತ್ತಾರೆ.

ರುಷ್ಯಾದೇಶದಲ್ಲಿ ಕ್ಷಾಮವು ಪ್ರಾಪ್ತಿಯಾಗಿವೆ. ಹೊಟ್ಟೆಗಿಲ್ಲದ ಜನರು ಸ್ವಮೇಧಿಕವ ಜಪ್ತಿಗಳನ್ನು ಮಾಡುವರು.

ರುಷ್ಯಾಯವರು ಚೀನಾ ಮತ್ತು ಜಪಾನಗಳಿಗೆ ಮಂಚೂರಿಯನ್ನು ಎಪ್ರಿಲ್ 15ರ ವರೆಗೆ ಪಾಯಿರೆ ಇದ್ದರೂ ಕೂಡಲೇ ಬಿಟ್ಟುಕೊಡುವ ತಮ್ಮ ಇಂಗಿತವನ್ನು ಪ್ರಕಟಿಸುತ್ತಾರೆ.

ಸೆಕ್ರೆಟರಿ ಆಫ್ ಸ್ಟೇಟ್ ಫಾರ್ ಇಂಡಿಯಾ ಇವರು ಹಿಂದುಸ್ಥಾನಗೋಸ್ಕರ ಒಂದು ಲಕ್ಷ ರೂಪಾಯಿ ಚಿನ್ನವನ್ನು ಟಂಕಸಾಲೆಯಿಂದ ಫೆಬ್ರುವರಿ ತಾರೀಕು 16ಕ್ಕೆ ತೆಗದುಕೊಳ್ಳುವರು.

ವಿಯೆನ್ನಾ ಎಂಬ ಊರಿನ ಡೊಯಿನ್ ಎಂಬ ವಿಶೇಷ ಡಾಕ್ಟರರೊಬ್ಬರು ಉಷ್ಣದ ಹೊರಕಡೆಯನ್ನು ಒಂದು ಹೊಸ ಯುಕ್ತಿಯಿಂದ ಗುಣಪಡಿಸುವ ವಿಧವನ್ನು ಕಂಡುಹಿಡಿದಿದ್ದಾರೆ. ಅದು ಯಾವದರಿ— ಪಶುಗಳಿಗೆ ಆ ರೋಗದ ಬೀಜಗಳಿಂದ ರೋಗವನ್ನುಂಟುಮಾಡಿ 'ಸೀರಮ್' ಎಂಬ ಡಾಕು ಹಾಕುವ ದ್ರವವನ್ನು ತೆಗದು ಮನುಷ್ಯರಿಗೆ ಡಾಕು ಹಾಕಿದರೆ ಈ ರೋಗವು ಬೇಗನೇ ಗುಣವಾಗುವದು. ಈ ಹೊಸ ಕಲ್ಪನೆಯು ತನ್ನ ಅನುಭವಸಿದ್ಧವಾದದ್ದೆಂದು ಡೊಯಿನ್ ಡಾಕ್ಟರರು ಹೇಳುವರು.

ಇಂಗ್ಲಾಂಡಿನಲ್ಲಿ ಇತ್ತಲಾಗೆ ಕಾಲವಾದ ಕೋಟ್ಯಾಧೀಶ ವಿಧವೆಯೊಬ್ಬಳು ಎಲ್ಲ ಗೃಹಸ್ಥರು ಬಡವರಿಗೋಸ್ಕರ ಧರ್ಮಶಾಲೆಗಳನ್ನು ಕಟ್ಟಿಸುವ ಬಗ್ಗೆ ಒಂದು ಕೋಟಿ ರೂಪಾಯಿಯನ್ನು ತಮ್ಮ "ವಿಲ್"ನಾಮೆಯಲ್ಲಿ ತೆಗೆದಿಟ್ಟಿದ್ದರೆ. [illegible]

ರುಷ್ಯಾದೇಶದ ಸ್ಥಿತಿಯು ಬಹಳ ಹಾಳಾಗಿರುವದೆ [illegible] ಪ್ರತಿನಿಧಿಗಳ [illegible]

... ಲ್ಯಾಂಡ್ ಹೇಗ್ ಪಟ್ಟಣದಲ್ಲಿ ಒಂದು ಕಾನ್ಫರೆನ್ಸನ್ನು ಕೂಡಿಸಿ ರುಷ್ಯಾದೇಶದಲ್ಲಿ ಸಮಾಧಾನ ಸ್ಥಿತಿಯುಂಟಾಗುವಂತೆ ರುಷ್ಯಾದೇಶದ ರಾಜ್ಯಭಾರ ಕ್ರಮಪಡಿಸುವಂತೆ ಮಾತಾಡಬೇಕೆಂಬ ಪ್ರಯತ್ನವನ್ನು ಮಾಡುತ್ತಲಿರುವರು.

ಉತ್ತರ ಹಿಂದುಸ್ಥಾನ.

ಬ್ಯಾರಿಸಾಲ್ ಇಲ್ಲಿಯ ಹಜಾಮರು ಕೆಲವು ಕೂಡಿ ಪರದೇಶಿ ವಸ್ತ್ರ ವಗೈರೆ ಸಾಮಾನುಗಳನ್ನು ವಿಕ್ರಯಿಸುವ ವ್ಯಾಪಾರಿಗಳ ಕ್ಷೌರ ಕೈಕೊಳ್ಳಲೊಲ್ಲೆವೆಂದು ಠರಾಯಿಸಿಕೊಂಡರು. ಹಾಗೆಯೇ ಧೋಬಿಗಳೂ ವೃತ್ತಿ ಹಿಡಿದ್ದಾರೆ. ಸ್ವದೇಶೀ ವೃಕ್ಷವು ಬೇರು ನಾಟಿ ಬೆಳೆಯುವದು ಇಂಥವರ ಪರಿಶ್ರಮಗಳಿಂದಲೇ.

ಅಮೇರಿಕೆಗೆ ಅಪೀಸಿನಿಯಾಕ್ಕಾಗಿ ಕಲಕತ್ತಾ ಮಹಾಪಾಲಿಟಿಯವರು 2 ಸಾವಿರ ರೂಪಾಯಿ ಖರ್ಚಿನಿಂದ ಭಂಗಾರದ ಕಾಳೆಯಲ್ಲಿ ಒಂದು ಮಾನಪತ್ರವನ್ನು ಕೆತ್ತಿಸಿ ಬೆಳ್ಳಿಯ ಕರಡಿಗೆಯಲ್ಲಿಟ್ಟು ಕೊಡುವದೆಂತ ನಿಶ್ಚಯಿಸಿದ್ದರು. ಆದರೆ ಅಮೀರರು ಆಗಮವು ಖಾಸಗಿ ಸ್ವಭಾವದ್ದರಿಂದ ಈ ಮರ್ಯಾದೆಯನ್ನು ತಿರಸ್ಕರಿಸಿದರು.

ಪಿಸ್ಸೀ ಜವಾಬ್ದಾ ಮಂಡಳಿಯಲ್ಲಿ ತೂಗಿಸಲಿಕ್ಕೆ ಅಮೀರರು ಒಂದು ಬೆಳ್ಳಿಯ "ರೂಂಬರ"ವನ್ನು ದಯಪಾಲಿಸಿದರೆಂದು ತಿಳಿದು ಬರುತ್ತದೆ.

ದಂಡಾಮಾಮಿ ಸವರೋಟಿಗಳ ಜಳೆಯರಾದ ವಿದ್ಯಾರ್ಥಿನಿ ಇವರಿಗೆ 300 ರೂಪಾಯಿ ತಲಬಿನ ಉದ್ಯೋಗವನ್ನು ಮೋದಿ ಗಾಯಕವಾಡರು ತಮ್ಮ ರಾಜ್ಯದಲ್ಲಿ ದಯಪಾಲಿಸಿದರು.

"ವಿಕ್ಟೋರಿಯಾ" ಲೋಹದಿಂದ ಮಾಡಿದ ಒಂದಾಣೆಯ ನಾಣ್ಯವನ್ನು ಚಕ್ರವರ್ತಿಯವರ ಮಂಜೂರು ಮಾಡಿದ್ದಾರೆ. ಒಂದೆರಡು ತಿಂಗಳಲ್ಲಿ ಈ ನಾಣ್ಯಗಳು ಪ್ರಚಾರಕ್ಕೆ ಬರುವವು.

ಪಂಜಾಬಿನ ಸಿಕ್ಕರ ಸ್ಟೇಶನ್‌ಗಳಲ್ಲಿ ಪ್ಲೇಗ್ ರೋಗ ಪ್ರಾರಂಭಿಸಿದ್ದರಿಂದ ಶಿಪಾಯಿಯರನ್ನು ಪ್ರಿಗೇಟ್ ಮಾಡುತ್ತಾರೆ.

ಅಲ್ಲಹಾಬಾದ— ಇಲ್ಲಿ ಕೆಲವು ದಿವಸಕ್ಕೆ ಮ. ರಾ. ತಿಲಕರು (ಕೇಸರಿ ಪತ್ರಕರ್ತ) ಬಹಿಷ್ಕಾರದ ವಿಷಯ ಉಪನ್ಯಾಸ ಮಾಡಿದ್ದರು. ಈಗ ಡಾ. ಗೋಖಲೆಯವರು ರಾಷ್ಟ್ರೀಯ ವಿಷಯಗಳಲ್ಲಿ ಭಾಷಣಗಳನ್ನು ಮಾಡಿದ್ದಾರೆ. ಇವರು ನೇಮಸ್ಥ ಪಕ್ಷದವರು. ಬೇಶಿನ ಚಂದ್ರಪಾಲ (ಬಂಗಾಲಿ) ಮತ್ತು ಲಾಲಾಲಜಪತರಾಯ (ಪಂಜಾಬಿ)ನವರೂ ಸಹ ಇತ್ತ ಇಲ್ಲಿಗೆ ಬಂದು ತಮ್ಮ ನವೀನ "ಪಕ್ಷ"ದ ಭಾಷಣಗಳನ್ನು ಮಾಡುವರಂತೆ. ಕಾಂಗ್ರೆಸ್ಸಿನಲ್ಲಿ ಹೀಗೆ ಎರಡು ಪಕ್ಷಗಳು ಹುಟ್ಟಿದ್ದರಿಂದ [illegible] ಪ್ರಕಟವಾಗುವ ಮಾರ್ಗವಾಯಿತು. [illegible]

ಕಲಕತ್ತೆಯಲ್ಲಿಯ ಕಳೆದ ವರ್ಷದ ಕಾಂಗ್ರೆಸ್ ಸಮಿತಿಗೆ ಒಟ್ಟು 85 ಸಾವಿರ ರೂಪಾಯಿ ಜಮಾಯಿಸಿತು. ಇದರಲ್ಲಿ 50 ಸಾವಿರ ರೂಪಾಯಿ ಖರ್ಚಾಯಿತು. ಉಳಿದ 35 ಸಾವಿರದಲ್ಲಿ 10 ಸಾವಿರ ಪ್ರಾಂತಿಕ ಕಾಂಗ್ರೆಸ್ ಕಮ್ಮಿಟಿಗೂ 20 ಸಾವಿರ ರೂಪಾಯಿ ಹಿಂದುಸ್ಥಾನದ ಕಾಂಗ್ರೆಸ್ಸಿಗಾಗಿಯೂ ತೆಗದಿಟ್ಟಿದ್ದಾರೆ.

ನಾಗಪುರ ದಾಪೋಲಿಯ ಕಾಲೇಜ್ ಸಾಯನ್ಸ್ ಪ್ರೊಫೆಸರ (ಉಪಾಧ್ಯಾಯರಾದ) ಡಾ. ಮುಕರ್ಜಿಯವರು ತಮ್ಮ ಕೆಲಸಕ್ಕೆ ರಾಜೀನಾಮೆ ಕೊಟ್ಟರು. ಇವರು ಬಂಗಾಳದಲ್ಲಿ ಸ್ಥಾಪಿತವಾದ ರಾಷ್ಟ್ರೀಯ ಸರ್ವ ವಿದ್ಯಾಲಯವನ್ನು ಸೇರಿದರು.

ಚಕ್ರವರ್ತಿ ಮಹಾರಾಜ ಎಡ್ವರ್ಡ ದೊರೆಗಳ ಪುತ್ರರಾದ ಡ್ಯೂಕ್ ಆಫ್ ಕನ್ನಾಟ್‌ರು ತಮ್ಮ ಧರ್ಮಪತ್ನಿಗಳ ಸಮೇತ ಮಾರ್ಚ ತಾರೀಕು 7ಕ್ಕೆ ರಂಗೂನಿನಿಂದ ಕಲಿಕತ್ತೆಗೆ ತಲಪುವರು. ಮಾರ್ಚ 14ನೇ ವರೇಗೆ ವ್ಯಾಸರಾಯ ಪ್ರಭುಗಳ ಅತಿಥಿಗಳಾಗಿ ಕಲಿಕತ್ತೆಯಲ್ಲಿ ನಿಲ್ಲುವರು.

ಕಲಿಕತ್ತೆಯಲ್ಲಿ ಗಂಗಾಚರಣ ಡೇ ಎಂಬವರು ನಾಲ್ಕು ತಿಂಗಳ ಮುಂಚೆ 5000 ರೂಪಾಯಿಗಳ ಕರೆನ್ಸಿ ನೋಟುಗಳನ್ನು 10,000 ನೋಟುಗಳಾಗಿ ಮಾಡಲಿಕ್ಕೆ ಎಂಟಲ್ಲಿ ಎಂಬಲ್ಲಿ ಬಂದು ಉಳಕೊಂಡಿದ್ದ ಎರಡು ಆಸಾಮಿಗಳ ಹತ್ತರ ಕೊಟ್ಟಿದ್ದರು. ಇದಕ್ಕಿಂತ ಮೊದಲು ಈ ಆಸಾಮಿಗಳು ಕರೆನ್ಸಿ ನೋಟುಗಳನ್ನು ಮಾಡಬಲ್ಲೆವೆಂದು ಅಲ್ಲಿಯ ಕೆಲವು ಜನರಿಗೆ 10 ರೂಪಾಯಿ ಒಂದು ನೋಟಿಗೆ ಎರಡು ನೋಟುಗಳನ್ನು ಮಾಡಿ ಕೊಡುತ್ತಿದ್ದರು. ಹೀಗಿರುತ್ತಾ ಸತೀಶ ಚಂದ್ರ ಘೋಷ ಎಂಬವರು ಗಂಗಾಚರಣ ಡೇ ಎಂಬವರನ್ನು ಈ ಆಸಾಮಿಗಳ ಕಡೆಗೆ ಕರಕೊಂಡು ಹೋಗಿ ಇವರ ನೋಟುಗಳನ್ನು ರಚಿಸುವ ಚಮತ್ಕಾರಗಳನ್ನು ಕಣ್ಣಾರೆ ಕಂಡರು. ಗಂಗಾಚರಣರು ಇವರನ್ನು ನಂಬಿ ಮೇಲೆ ಹೇಳಿದ ಹಾಗೆಯೇ ಒಂದೊಂದು ಸಾವಿರ ರೂಪಾಯಿಗಳ ಐದು ನೋಟುಗಳನ್ನೂ ಖರ್ಚಿನ ಬಗ್ಗೆ 300 ರೂಪಾಯಿಗಳನ್ನೂ ಈ ಆಸಾಮಿಗಳಿಗೆ ಕೊಟ್ಟರು. ಆಸಾಮಿಗಳು ಏನೋ ಒಂದು ಚಮತ್ಕಾರವನ್ನು ತೋರಿಸಿ ಒಂದು ಪೆಟ್ಟಿಗೆಯಲ್ಲಿ ಕಟ್ಟಿದ ಕಾಗದಗಳ ಪೆಟ್ಟಿಗೆಯನ್ನು ಇವರಿಗೆ ತಂದು ಕೊಟ್ಟು ನಾಲ್ಕು ತಿಂಗಳುಗಳ ಮೇಲೆ ಬಿಚ್ಚಿ ನೋಡಿದರೆ ಹತ್ತೊಂದು ಸಾವಿರ ರೂಪಾಯಿಗಳ ಕರೆನ್ಸಿ ನೋಟುಗಳು ಸಿಕ್ಕುವವೆಂತ ಹೇಳಿ ಗಂಗಾಚರಣರನ್ನು ಕಳುಹಿಸಿ ಬಿಟ್ಟರು. ಗಂಗಾಚರಣರು ನಾಲ್ಕು ತಿಂಗಳ ಮೇಲೆ ಬಿಚ್ಚಿ ನೋಡಿದ್ದಲ್ಲಿ ಪೆಟ್ಟಿಗೆಯಲ್ಲಿ ನೋಟುಗಳ ಬದಲಿಗೆ ಕೆಲವು ಹಳೆಯ ಕಾಗದ ಚೂರುಗಳಿದ್ದವು. ಗಂಗಾಚರಣರು ಇವರ ಮೇಲೆ ಫಿರ್ಯಾದು ಕೊಟ್ಟಿರುತ್ತಾರೆ. ಮುದ್ದೆಯಾಲೆಗಳು ಪೋಲೀಸಿನವರಿಗೆ ಸಿಕ್ಕಿರುತ್ತಾರೆ. [illegible]

ಕಲಿಕತ್ತೆಯಲ್ಲಿ [illegible] ಪೋಲೀಸ ಕಮಿಷನರ [illegible] ಕರಿಂಗ್ ಕ್ರಾಸ ಎಂಬ [illegible] ತಯಾರಿಸುವ [illegible] ಯಲ್ಲಿ [illegible]

೨೩ನೇ ಕಾಂಗ್ರೆಸ್ ಸಭೆಯು ನಾಗಪುರದಲ್ಲಿ ನೆರೆಯುವದು. ಅಲ್ಲಿಯ ಪ್ರಜಾ ನಾಯಕರು ಸಭೆ ಕೂಡಲಿಕ್ಕೆ 10 ತಿಂಗಳುಗಳಿದ್ದರೂ ಈಗಲೇ ಅನೇಕ ತರದ ತಯಾರಿಗಳನ್ನು ಮಾಡುವರು.

ಹಿಂದುಸ್ಥಾನದಲ್ಲಿ ಪ್ಲೇಗು ಹೆಚ್ಚುತ್ತಾ ಬರುತ್ತದೆ ಈ ತಿಂಗಳ ತಾರೀಖು 7ಕ್ಕೆ ಅಖೈರಾಗುವ ವಾರದಲ್ಲಿ ೨೦,೭೬೩ ಪ್ಲೇಗು ತಗಲಿದವರಲ್ಲಿ ೧೬,೬೦೧ ಜನರು ಮೃತಪಟ್ಟರು. ಬೊಂಬಾಯಿ ಮತ್ತು ಸಿಂಧುದೇಶಗಳಲ್ಲಿ ೨,೨೦೬ ಮರಣಗಳು, ಬೆಂಗಾಳೆಯಲ್ಲಿ ೧,೨೮೭ ಸಂಯುಕ್ತದೇಶಗಳಲ್ಲಿ ೫,೪೦೯ ಪಂಜಾಬಿನಲ್ಲಿ ೫,೩೬೨ ಮಧ್ಯದೇಶಗಳಲ್ಲಿ ೧೨೮೯.

ಬಾವಾಜಿತ್ ಸಿಂಗ್ ಎಂಬ ಹಿಂದುವನ್ನು ಕಂದಹಾರಿನ ಗವರ್ನರರು ಅನ್ಯದೇಶದ ಬೇಹುಗಾರನೆಂಬ ಅಪವಾದ ಹೊರಿಸಿ ಕೈದು ಮಾಡಿರುತ್ತಾರೆ. ಈತನು ತಾನು ಕಾಬೂಲಿನಲ್ಲಿರುವ ಹಿಂದುಗಳ ಹತ್ತಿರ ಭಿಕ್ಷೆ ಬೇಡಲಿಕ್ಕೆ ಬಂದ ಒಬ್ಬ ಬಡ ಭಿಕ್ಷನೆಂದು ಹೇಳುವನು. ಈತನನ್ನು ಕಾಬೂಲಿಗೆ ಕಂದಹಾರಿನ ಗವರ್ನರರು ತನಿಖೆ ಬಗ್ಗೆ ಕಳುಹಿಸಿರುತ್ತಾರೆ. ಸರದಾರ ಇನಾಯತ್ ಉಲ್ಲಾ ಖಾನರು ಸ್ವತಃ ಇವನನ್ನು ತನಿಖೆ ಮಾಡುವರು.

ಅಮೃತ ಬಜಾರ ಪತ್ರಿಕೆಯವರು ಬಾಳೇಗಿಡದ ವ್ಯವಸಾಯ ವೃದ್ಧಿಯ ವಿಷಯ ಈ ರೀತಿ ಬರೆಯುತ್ತಾರೆ — ಬಾಳೆಹಣ್ಣಿನ ಹಿಟ್ಟನ್ನು ತಯಾರಿಸಿ ಅದರಿಂದ ಅನೇಕ ವಿಧದ ಬಿಸ್ಕತ ಮುಂತಾದ ತಿನ್ನುವ ಸಾಮಾನುಗಳನ್ನು ಮಾಡುವ ಬಗ್ಗೆ ಲಂಡನಿನಲ್ಲಿ ಮೂವತ್ತು ಸಾವಿರ ಪವನುಗಳು ಭಂಡವಾಳವಿರುವ ಒಂದು ಕಾರ್ಖಾನೆಯು ಈಚೆಗೆ ಸ್ಥಾಪಿಸಲ್ಪಟ್ಟಿದೆ. ಹಲವು ಸಾರಿ ಅಮೃತ ಬಜಾರ ಪತ್ರಿಕೆಯವರು ಬಾಳೆ ಹಿಟ್ಟಿನ ಕಾರ್ಖಾನೆಯ ವಿಷಯ ಬರೆದಾಗ್ಯೂ ಅಮಿತ ಭಂಡವಾಳವುಳ್ಳ ಭಾರತೀಯ ವರ್ತಕರು ಇದಕ್ಕೆ ಏನೂ ಮನಸ್ಸು ಕೊಡಲಿಲ್ಲ. ಹಿಂದುಸ್ಥಾನದಲ್ಲಿ ಯಾವ ಸ್ಥಳದಲ್ಲಿಯೂ ಬಾಳೇ ಗಿಡವು ಸಮೃದ್ಧಿಯಿಂದ ಬೆಳೆಯುತ್ತದೆ. ಈ ಗಿಡಗಳನ್ನು ಬೆಳಸಲಿಕ್ಕಂತೂ ಭಾರೀ ಖರ್ಚಿಲ್ಲ. ಬಾಳೆಗಿಡಗಳನ್ನು ನಟ್ಟು ಬಾಳೆ ಹಣ್ಣಿನ ಹಿಟ್ಟನ್ನು ತಯ್ಯಾರಿಸುವ ಕಾರ್ಖಾನೆಗಳನ್ನು ಹಿಂದುಸ್ಥಾನದಲ್ಲಿ ಅಲ್ಲಲ್ಲಿ ಇಕ್ಕಿದರೆ ಕ್ಷಾಮದಿಂದ ಹೊರಳಾಡುವ ಅನೇಕ ಬಡ ಜನರು ಇದರಿಂದ ಜೀವಿಸ್ಯಾರಂತೂ, ಬಾಳೆ ಹಿಟ್ಟು ಗೋದಿ ಹಿಟ್ಟಿನಷ್ಟೇ ಪುಷ್ಟಿಕರವೆಂದೂ ಈ ಪತ್ರಿಕೆಯವರು ಬರೆಯುತ್ತಾರೆ

ಕಲಕತ್ತಾ ಯುನಿವರ್ಸಿಟಿಯವರು ಒಂದು ಲಕ್ಷ ಹತ್ತು ಸಾವಿರ ರೂಪಾಯಿಗಳನ್ನು ಗ್ರೆಂಟಾಗಿ ಖಾಸಗಿ ಶಾಲೆಗಳಿಗೂ ಕೊಲೇಜುಗಳಿಗೂ ಕೊಟ್ಟಿರುತ್ತಾರೆ. ರಿಪನ್ ಕೊಲೇಜಿನ ಅಧಿಕಾರಿಗಳು ಈ ಸರಕಾರಿ ಗ್ರೆಂಟನ್ನು ತಿರಸ್ಕರಿಸಿರುತ್ತಾರೆ. ಮ. ರಾ. ಸುರೇಂದ್ರನಾಥ ಬೆನರ್ಜಿಯವರು ಈ ಕೊಲೇಜಿನ ಅಧಿಕಾರಿಗಳು. ಸರಕಾರದಿಂದ ದ್ರವ್ಯಸಹಾಯವನ್ನು ಪಡೆಯುವದು ಸ್ವದೇಶಿ ಚಳವಳಿಗೂ ವಿದೇಶ ಬಹಿಷ್ಕಾರಕ್ಕೂ ವಿರೋಧವಾದದ್ದೆಂದು ಬಾ. ಬೆನರ್ಜಿಯವರು ಗ್ರೆಂಟನ್ನು ಅಂಗೀಕರಿಸಲಿಲ್ಲ.

ಕಲಿಕತ್ತೆಯಲ್ಲಿ ಅಮೀರರು ಮೆಡಿಕಲ್ ಕೊಲೇಜ್ ಹೊಸ್ಪಿಟಲ್ ಎಂಬ ಸರಕಾರಿ ಆಸ್ಪತ್ರೆಯನ್ನು ನೋಡಲಿಕ್ಕೆ ಹೋದಾಗ ಉಪ್ಪರಿಗೆಯ ಕೆಳಗಿನ ನೆಲದಲ್ಲಿರುವ ಸೇಟಿವ ರೋಗಿಗಳಿಯವರನ್ನು ನೋಡಿ, ಆಸ್ಪತ್ರೆಯಲ್ಲಿರುವ ಡಾಕ್ಟರನ ಹತ್ತಿರ ಯುರೋಪಿಯನರಿಗೂ ಹಿಂದುಸ್ಥಾನದವರಿಗೂ ಒಂದೇ ರೀತಿಯಲ್ಲಿ ಆರೈಕೆ ಮಾಡುತ್ತಾರೋ ಎಂದು ಕೇಳಲು, ಆತನು ಹೌದೆಂದು ಹೇಳಿದನು. ಉಪ್ಪರಿಗೆ ಮೇಲೆ ಅಮೀರರೂ ಆ ಡಾಕ್ಟರರೂ ಹೋದರು ಇಲೆಕ್ಟ್ರಿಕ್ ಪಂಕಾವನ್ನು ಛಳಿಗಾಲದ ದೆಸೆಯಿಂದ ಸಂಕೋಚಿಸಿಟ್ಟಿದ್ದರಿಂದ ಅದೇನೆಂದು ತಿಳಿಯದೆ ಅಮೀರರು ಅದೇನೆಂದು ಕೇಳಲು, ಅದು ಇಲೆಕ್ಟ್ರಿಕ್ ದೀಪ ಎಂತ ಡಾಕ್ಟರರು ಹೇಳಿದರು. ತಾನು ಇಂಥಾದ್ದನ್ನು ನೇಟಿವ ರೋಗಿಯವರ ಕೋಣೆಗಳಲ್ಲಿ ಕಾಣಲಿಲ್ಲವೆಂದರು. ಡಾಕ್ಟರರು ನೇಟಿವರ ಕೋಣೆಗಳಲ್ಲಿ ಸಹಾ ಇಲೆಕ್ಟ್ರಿಕ್ ದೀಪಗಳುಂಟೆಂದೂ ಗಲಿಬಿಲಿಯಾಗಿ ಹೇಳಲು, ಅಮೀರರಿಗೆ ಯುರೋಪಿಯರ ಕೋಣೆಗಳಲ್ಲಿ ತೂಗುವಂಥಾದ್ದು ಇಲೆಕ್ಟ್ರಿಕ್ ಪಂಕಾ ಎಂತ ಕ್ರಮೇಣ ಸಂಭಾಷಣೆಯಿಂದ ಕಂಡು ಬಂತು. ಹೀಗೆ ಆಸ್ಪತ್ರೆಯಲ್ಲಿಯೂ ಸಹಾ ನೇಟಿವರನ್ನೂ ಯುರೋಪಿಯನರನ್ನೂ ಒಂದೇ ರೀತಿ ಆರೈಕೆ ಮಾಡುವದು ಅಮೀರರ ಮನಸ್ಸಿನಲ್ಲಿ ಚನ್ನಾಗಿ ನಾಟಿದಂತಾಯಿತು,

---

ಬೊಂಬಾಯಿಯಲ್ಲಿ 'ಪತಿತ ಶುದ್ಧಿ ಸಭೆ' ಎಂಬ ಒಂದು ಸಂಘವು ಏರ್ಪಟ್ಟಿದೆ. ನಾಮದಾರ್ ಗೋಕುಲದಾಸ್ ಕಹನದಾಸ್ ಪರೇಖ ಎಂಬವರು ಇದರ ಅಧ್ಯಕ್ಷರು. ಇದರ ಉದ್ದೇಶಗಳು ಯಾವವೆಂದರೆ — ಹಿಂದೂ ಮತಭ್ರಷ್ಟರಾಗಿ ಅನ್ಯಮತವನ್ನು ಸೇರಿ ಸಿಕ್ಕಿಬಿದ್ದ ಪುನಃ ತಮ್ಮ ಹಿಂದೂ ಮತವನ್ನೇ ಅವಲಂಬಿಸಬೇಕೆಂತ ಅಪೇಕ್ಷಿಸ ಪವರಿಗೆ ತಿರುಗಿ ಜಾತಿಗೆ ಕೂಡಿಸಿಕೊಳ್ಳುವದು. ಶೂದ್ರರ ಹೀನಸ್ಥಿತಿಯನ್ನು ತಿದ್ದಿ ಅವರನ್ನು ಉನ್ನತಿಗೆ ತರುವದು. ತಕ್ಕದೆಂದು ಕಂಡಲ್ಲಿ ಅನೇಕ ... ಸಾಕಿ ... ಅವರನ್ನು ಕಾಪಾಡುವದು.

ದಕ್ಷಿಣ ಹಿಂದುಸ್ಥಾನ.

ಮದ್ರಾಸು. ಟ್ರಾನ್ಸ್‌ವಾಲದಲ್ಲಿ ಹಿಂದು ಜನರು ಅನುಭವಿಸುವ ಸಂಕಷ್ಟಗಳ ವಿಷಯ ಆಲೋಚಿಸಲಿಕ್ಕೆ ಇಲ್ಲಿ ಕಳೆದ ಜನವರಿ 31ಕ್ಕೆ ಪ್ರಸಿದ್ಧ ಮುಖ್ಯಸ್ಥರುಗಳ ಸಭೆ ಕೂಡಿತು. ಸಭೆಯ ಅಗ್ರಾಸನವನ್ನು "ಇಂಡಿಯನ್ ಪೆಟ್ರಿಯಟ್" ಪತ್ರದ ಸಂಪಾದಕರಾದ ಸಿ. ಕರುಣಾಕರ ಮೇನನ್ ಇವರು ವಹಿಸಿದರು. ಟ್ರಾನ್ಸ್‌ವಾಲ ವ ಇತರ ವಸಾಹತಿಗಳಲ್ಲಿ ನಮ್ಮ ಸ್ವದೇಶೀಯರು ಪಡುವ ಕ್ಲೇಶಗಳನ್ನು ವರ್ಣಿಸಿದನಂತರ ವಸಾಹತಿಗಳ ಸರ್ಕಾರದವರು ಅಲ್ಲಿಯ ಭಾರತೀಯ ಪ್ರಜೆಗಳಿಗೆ ಸಂಕಷ್ಟಕರವಾದ ಕಾನೂನುಗಳನ್ನು ವಜಾ ಮಾಡುವ ವರೆಗೂ ತಾವು ವಸಾಹತಿಗಳ ಬಿಳೆ ಜನರನ್ನು ಬಹಿಷ್ಕಾರ ದವಿಡಬೇಕೆಂಬ ಠರಾವು ಮಂಜೂರಾಯಿತು. ಈ ನಿರ್ಣಯದ ಪ್ರಕಾರ ಆಸ್ಟ್ರೇಲ್ಯದ ಕುದುರೆಗಳನ್ನು ತಾವು ಕೊಳ್ಳದಿರುವೆಂದೂ, ಕೆನಡದ ಇನ್ಶುರೆನ್ಸ್ ಕಂಪೆನಿಯಲ್ಲಿ ಜೀವವಿಮೆ ಇಳಿಸುವದಿಲ್ಲವೆಂದೂ, ವಸಾಹತಿಗಳಿಂದ ಬಂದ ನಾಟಕ ಸರ್ಕಸಗಳನ್ನು ನೋಡಬಾರದೆಂದೂ ನಿಶ್ಚಯಿಸಿದರು.

ಟ್ಯುಟಿಕೋರಿನ ಸ್ವದೇಶಿ ಸ್ಟೀಮ್ ನೇವಿಗೇಶನ್ ಎಂಬ ಕಂಪೆನಿಯು ಎರಡು 'ಸ್ಟೀಮರು'ಗಳನ್ನೂ ಕೆಲವು 'ಲೊಂಚು'ಗಳನ್ನೂ ಬೊಂಬಾಯಿಯಲ್ಲಿ 30,000 ಪವನುಗಳಿಗೆ ಪಡಕೊಂಡಿರುತ್ತಾರೆ. ಇನ್ನೂ ಹೆಚ್ಚು ಸ್ಟೀಮರುಗಳನ್ನು ತಗೆದುಕೊಳ್ಳುವ ಆಲೋಚನೆಯುಂಟು. ಈ ಸ್ವದೇಶಿ ಕಂಪೆನಿಯು ರಿಜಿಸ್ಟ್ರಿಯಾದ ಲಿಮಿಟೆಡ್ ಕಂಪೆನಿಯಾಗಿರುತ್ತದೆ. ಕಂಪೆನಿಯ ಭಂಡವಾಳಕ್ಕೆ ಬೇಕಾಗುವ ಮೊಬಲಗು 30 ಕೋಟಿ ರೂಪಾಯಿ. ಈ ಹಣವನ್ನು ಕೂಡಿಸುವ ಬಗ್ಗೆ 25 ರೂಪಾಯಿಗಳಿಗೆ ಒಂದೊಂದು ಸೇರು ಯಾ ಪಾಲುಗಳನ್ನು ಮಾಡಿರುತ್ತಾನೆ. ಇಷ್ಟರ ವರೇಗೆ ಅರ್ಧ ಭಂಡವಾಳ ಸಹಾ ವಸೂಲಾಗಲಿಲ್ಲ. ಸ್ವದೇಶ ಹಿತೈಷಿಗಳಾದ ದೊಡ್ಡ ಜಮೀನುದಾರರೂ ಸಂಸ್ಥಾನಿಕರಾದ ರಾಜರೂ, ಕೊಂಗ್ರೆಸ ಮತ್ತು ಕೊನ್ಫರೆನ್ಸುಗಳ ಮುಖಂಡರೂ ಈ ಕಂಪೆನಿಯ ಪಾಲುಗಳನ್ನು ಕೊಂಡು ಕೊಂಡು ಕಂಪೆನಿಯವರನ್ನು ಪ್ರೋತ್ಸಾಹಿಸಲು ಅದರ ಕಾರ್ಯದರ್ಶಿಗಳು ಪ್ರಾರ್ಥಿಸುವರು.

ಹತ್ತು ವರುಷಗಳ ಮುಂಚೆ ಸುಟ್ಟು ಹೋದ ಮೈಸೂರು ಅರಸರ ಅರಮನೆಯನ್ನು ಮೊದಲಿನ ಜಾಗದಲ್ಲಿಯೇ ಕಟ್ಟಿಸುತ್ತಾರೆ. ಕಟ್ಟೋಣಕ್ಕೆ 32 ಲಕ್ಷ ರೂಪಾಯಿಗಳ ಖರ್ಚು ತಗಲುವದು. ಕಟ್ಟಿಸುವದು 1909ನೇ ಇಸವಿಯಲ್ಲಿ ಅಂತ್ಯವಾಗುವದು. ಕಷ್ಟಸಾಧ್ಯ ಬಸ್ ಬೊರ್ನ್ ಮೇರಿ ಪೆತರ್ ಎಂಬ ವಿಲಾಯತಿ ಕಂಪೆನಿಯವರು ಇದಕ್ಕೆ 1,20,000 ರೂಪಾಯಿ ಕ್ರಯ ಬಾಳುವ ಬೆಂಕಿಹಿಡಿಯದ ಪೊಪುಗಳನ್ನು ತಯಾರಿಸಿ ಕೊಡುವರು.

ಮದ್ರಾಸ ಗವರ್ನಮೆಂಟಿನವರ ಕೊಯಮುತ್ತೂರಿನಲ್ಲಿ ಎಗ್ರಿಕಲ್ಚರಲ್ ಕೊಲೇಜ್ ರಿಸರ್ಚ್ ಇನ್ಸಟಿಟ್ಯುಟ್‌ನ ಕಟ್ಟೋಣಗಳ ಬಗ್ಗೆ 4,47,000 ರೂಪಾಯಿ ಸಂಕ್ಷನ್ ಮಾಡಿರುತ್ತಾರೆ

ಮದ್ರಾಸು ನೇಶನಲ್ ಫಂಡು ಮತ್ತು ಕೈಗಾರಿಕೇ ಸಂಘದವರು ಮೇ ಕಾರ್ಯಪ್ಪ ಎಂಬವರನ್ನು ಸಾಬೂನು, ಮೇಣದ ಬತ್ತಿ, ಪೆನ್ಸೀಲ್, ಸಿಮೆಂಟು ಮೊದಲಾದವುಗಳನ್ನು ತಯ್ಯಾರಿಸಲು, ಕಲಿತು ಬರುವಂತೆ ಜಪಾನಿಗೆ ಕಳುಹಿಸಿರುತ್ತಾರೆ. ಇವರು ಬಿ ಎ ಪರೀಕ್ಷೆಯ ಸಾಯನ್ಸ್ ಬ್ರೆಂಚಿನ ಕೆಮಿಸ್ಟ್ರಿಯಲ್ಲಿ ಪಾಸಾಗಿರುತ್ತಾರೆ. ಈ ಕಾರ್ಯಪ್ಪನವರು ಕೊಡಗು ದೇಶದವರು. ಮಂಗಳೂರಲ್ಲಿ ಕೆನರಾ ಹೈಸ್ಕೂಲಿನಲ್ಲಿ ಮೆಟ್ರಿಕ್ಯುಲೇಶನ್ ಕ್ಲಾಸಿನ ವರೆಗೆ ಕಲಿತರು. ಇವರಿಗೆ ತಿಂಗಳೊಂದಕ್ಕೆ 50 ರೂಪಾಯಿಯ ವಿದ್ಯಾರ್ಥಿವೇತನವೂ ಜಪಾನಿಗೆ ಹೋಗಿ ಬರುವದಕ್ಕೆ ತಗಲುವ ಖರ್ಚು ನೇಶನಲ್ ಫಂಡಿನವರು ಕೊಡುತ್ತಿರುವರು. ಇದೇ ಮಾದರಿಯ ಇನ್ನೊಂದು ಸ್ಕೊಲರ್‌ಶಿಪ್ ಈ ಕಂಪೆನಿಯವರು ಕೊಡಲಿಕ್ಕೆ ಸಿದ್ಧರಾಗಿರುತ್ತಾರೆ,

---

ತಿರುಚಿನಾಪಳ್ಳಿಯಲ್ಲಿ ಕಲಿಕತ್ತೆಯ ಬಾಬು ಎಚ್. ಎಸ್. ಸಿಂಗ ಎಂಬವರು ವಿದ್ಯಾರ್ಥಿಗಳಿಗೂ ಇತರ ಜನಗಳಿಗೂ ಸ್ವದೇಶಿ ಚಳವಳಿಯ ವಿಷಯ ಭಾಷಣ ಕೊಡುತ್ತಿರುತ್ತಾರೆ. ತಿರುಚಿನಾಪಳ್ಳಿಯಲ್ಲಿ 3000 ವಿದ್ಯಾರ್ಥಿಗಳಿರುವರು. ಇವರಿಂದ ಯಾವ ಕೆಲಸ ಸಾಧ್ಯವಲ್ಲ? ಎಂತ ಬಾ. ಸಿಂಗರು ಹೇಳುವರಂತೆ. 'ಸ್ವದೇಶಿ ಸಭೆ' ಎಂಬ ಒಂದು ಸಂಘವು ತತ್ಕಾಲದಲ್ಲಿಯೇ ಏರ್ಪಟ್ಟಿತು.

ದಕ್ಷಿಣ ಕನ್ನಡ.

1906ನೇ ಮೆಟ್ರಿಕ್ಯುಲೇಶನ್ ಪರೀಕ್ಷೆ, ಜಾಸ ಪಟ್ಟಿ:—

	ಪರೀಕ್ಷೆ ಕೊಟ್ಟವರು.	ಪಾಸಾದವರು.
ಮಿಶನ್ ಹ್ಯಾಸ್ಕೂಲ್ ಮಂಗಳೂರು	12	8
ಬೋರ್ಡ ಹ್ಯಾಸ್ಕೂಲ್ ಕುಂದಾಪುರ	30	19
ಕೆನರಾ ಹ್ಯಾಸ್ಕೂಲ್ ಮಂಗಳೂರು	37	21
ಸ್ಟಂಟ್ ಎನ್ ಸ್ಕೂಲ್ ,,	12	6
,, ಎಲೋಸಿಯುಸ್ ಕೋಲೇಜ ,,	33	15
ಬಿ.ಇಎಮ್ ಹ್ಯಾಸ್ಕೂಲ್ ಉಡುಪಿ	20	6
ಗವರ್ನಮೆಂಟ ಕೊ. ಮಂಗಳೂರು	29	6

1906ನೇ ವರುಷದ ಬಿ. ಎ. ಪರೀಕ್ಷೆಯ ಇಂಗ್ಲೀಷ ಲೆಂಗ್ವೇಜ್ ಬ್ರೇಂಚಿನಲ್ಲಿ ಇಬ್ಬರೇ ಫಸ್ಟ್ ಕ್ಲಾಸ್ ಪಾಸಾಗಿರುತ್ತಾರೆ. ಇವರಿಬ್ಬರೂ ನಮ್ಮ ದಕ್ಷಿಣ ಕನ್ನಡದವರು ಕೆನರಾ ಹ್ಯಾಸ್ಕೂಲಿನಲ್ಲಿ ಮೆಟ್ರಿಕ್ಯುಲೇಶನ್ ಪಾಸಾದವರು. ಒಬ್ಬರು ರಾ: ಮಂಗಳೂರ ಸಾವುಕಾರ ತಿಮ್ಮ ಪೈಗಳವರ ಪುತ್ರ ರಾ. ಗೋವಿಂದ ಪೈಗಳು. ಇನ್ನೊಬ್ಬರು ರಾ. ಪೇಜಾವರ ಮೋಹನರಾಯರು.

ಗವರ್ನಮೆಂಟ್ ಕೋಲೇಜ ಮಂಗಳೂರು. ಈ ಕೋಲೇಜಿನ ವರ್ಧಂತಿ ಉತ್ಸವವು ಈ ಹೊತ್ತು ಸಾಯಂಕಾಲ. ಈ ಸಂದರ್ಭದಲ್ಲಿ ಕೋಲೇಜಿನ ಹುಡುಗರು ಒಂದು ನಾಟಕವನ್ನಾಡುವರು. ಪರೀಕ್ಷೆಗಳಲ್ಲಿ ಬಹುಮಾನವನ್ನು ಹೊಂದಿ ಪಾಸಾದ ಹುಡುಗರಿಗೆ ಈ ಸಮಯದಲ್ಲಿಯೇ ಇನಾಮು ಕೊಡಲ್ಪಡುವದು.

ಸ್ಯಂಟ್ ಎಲೋಸಿಯುಸ್ ಕೊಲೇಜ್ ಮಂಗಳೂರು. ಈ ಕೊಲೋಜಿನ ವರ್ಧಂತಿ ಉತ್ಸವವು ಬಹಳ ಸಂಭ್ರಮದಿಂದ ಕಳೆದ ಮಂಗಳವಾರ ದಿವಸ ನಡೆಯಿತು.

ಮರ್ಚಂಟ್ಸ ರೀಡಿಂಗ್ ಸೊಸ್ಯಾಟಿ ಮಂಗಳೂರಲ್ಲಿ ಹಲವು ಜನ ಸಾವುಕಾರರು ಒಟ್ಟುಕೂಡಿ ಈ ಸಂಘವನ್ನು ಏರ್ಪಡಿಸಿರುತ್ತಾರೆ. 'ಗುಜರಾತಿವಾಚನಸಂಗ್ರಹ' ಎಂಬ ಹೆಸರಲ್ಲಿ ಈ ಸಂಘವು 1899ನೇ ನವಂಬರ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು. 1905ನೇ ಇಸವಿಯಲ್ಲಿ ಮರ್ಚಂಟ್ಸ್ ರೀಡಿಂಗ್ ರೂಮ್ ಎಂದು ಹೆಸರ್ಗೊಂಡಿತ. ಸೊಸ್ಯಾಟಿಯವರು ಅನೇಕ ವಿಧದ ಕನ್ನಡ, ಇಂಗ್ಲೀಷ, ಮರಾಟ, ಗುಜರಾತಿ, ವರ್ತಮಾನ ಪತ್ರಗಳನ್ನು ತರಿಸುತ್ತಾರೆ. [illegible] ಈ ಸಂಘದ ವರ್ಧಂತಿ ಸಭಾಧ್ಯಕ್ಷರಾದ [illegible] ಮಲ್ಯಾರವರು ತಮ್ಮ ಭಾಷಣದಲ್ಲಿ ವ್ಯಕ್ತಪಡಿಸಿದ ಸಂಘದಿಂದುಂಟಾಗುವ ಐಕ್ಯ, ಮಿತ್ರತ್ವ, ವಿಚಾರ ಬದಲಾವಣೆಗಳಿಂದಾಗುವ ಪರಸ್ಪರ ಶಿಕ್ಷಣ, ಇವುಗಳು ಇಂತಹ ಸಂಘದ ಪ್ರಯೋಜನಗಳು. ಇಂತಹ ಸಂಘಕ್ಕೆ ನಾವು ದೀರ್ಘಾಯುಷ್ಯವನ್ನು ಬಯಸುವೆವು.

ಅಬ್ಕಾರಿ ಮೊಕದ್ದಮೆ: ನಮ್ಮ ಜಿಲ್ಲೆ ಅಬ್ಕಾರಿ ಇಲಾಖೆಯವರ ಉಪದ್ರಗಳು ಜನಜನಿತವಾಗಿ ಎಲ್ಲರಿಗೂ ತಿಳಿದವುಗಳೇ. ಈಚೆಗೆ ಸುಮಾರು ಮೂರು ದಿವಸಗಳ ಹಿಂದೆ ಒಬ್ಬ ಅಬ್ಕಾರಿ ಮೊಕದ್ದಮೆಯು ಮುದ್ರಣಶಾಲೆಯು ತನ್ನ ಮೇಲೆ ತಪ್ಪು ಸ್ಥಾಪಿತ ಮಾಡಿದ ಅಬ್ಕಾರಿ ಇನ್ಸಪೆಕ್ಟರರ ಮೇಲೆ ವ್ಯವಹರಣೆ ನಡಿಸಲಿಕ್ಕೆ ಹೆಡ್‌ಕ್ವಾರ್ಟರ್ಸ್ ಡೆಪ್ಯುಟಿ ಕಲೆಕ್ಟರವರಲ್ಲಿ ಸೆಂಕ್ಷನಿಗೆ ಅರ್ಜಿ ಕೊಟ್ಟಿರುತ್ತಾನೆ. ಈ ಅಬ್ಕಾರಿ ಇನ್ಸಪೆಕ್ಟರರು ಕೆಲವು ದಿವಸಗಳ ಹಿಂದೆ ಈ ಮುದ್ರಣಶಾಲೆಯ ಮೇಲೆ ಒಂದು [illegible] ಫಿರ್ಯಾದನ್ನು ಸಬ್ ಮೇಜಿಸ್ಟ್ರೇಟರಲ್ಲಿ ದಸಂತ್ರದ ಮುಂದೆ [illegible] ದಿದರು ಸಬ್ ಮೇಜಿಸ್ಟ್ರೇಟರು ಯಾವದೋ ಒಂ[illegible] ಹೆದರಿಕೆಯಿಂದಲೋ ಅಥವಾ ಸತ್ಯತ್ವವನ್ನು ತಿಳಿದೋ, 50 ರೂಪಾಯಿ ಜುರ್ಮಾನೆ ಈ ಮುದ್ರಣಶಾಲೆಗೆ ವಿಧಿಸಿದರು. ಆದರೆ ಡೆಪ್ಯುಟಿ ಕಲೆಕ್ಟರ್ ಶಿ. ನಾರಾಯಣ ಮೋಸನರ ತನಿಖೆಯಿಂದ ಮುದ್ರಣಶಾಲೆ ಮೇಲಿನ ತಪ್ಪೀರು ಪೂರ್ಣ ಸುಳ್ಳು ಸ್ವಭಾವದ್ದು ಎಂತ ನಿರ್ಧರಿಸಿ ಸಬ್ ಮೇಜಿಸ್ಟ್ರೇಟರ ತೀರ್ಪನ್ನು ರದ್ದು ಪಡಿಸಿದರು. ಮುದ್ರಣಶಾಲೆಯು ಅಬ್ಕಾರಿ ಇನ್ಸಪೆಕ್ಟರರ ಮೇಲೆ ಸೆಂಕ್ಷನ್ ಪಡಿಯಲಿಕ್ಕೆ ಅರ್ಜಿ ಮಾಡಿರುತ್ತಾನೆ. ನ್ಯಾಯಶೀಲತೆಗೆ ಹೆಸರ್ಗೊಂಡ ನಮ್ಮ ಈಗಿನ ಡೆಪ್ಯುಟಿ ಕಲೆಕ್ಟರವರು ಅರ್ಜಿದಾರನು ಅರ್ಜಿಯಲ್ಲಿ ನಮೂದಿಸಿದ ಸಂಗತಿಗಳು ಸತ್ಯವೆಂತ ಕಂಡುಬಂದ ಪಕ್ಷದಲ್ಲಿ ಅಬ್ಕಾರಿ ಆಫೀಸರರ ಮೇಲೆ ಮುದ್ರಣಶಾಲೆಯು ಅಪೇಕ್ಷಿಸಿದ ಸೆಂಕ್ಷನ್ ಕೊಟ್ಟರೆ ಬಹಳ [illegible] ಉಪಕಾರವಾದೀತು.

ಗೋವಿಂದರಾಯ ಕೊಡ್ಗಿ ಕ್ರಿಮಿನಲ್ ಮೊಕದ್ದಮೆ: ಕುಂದಾಪುರ ತಾಲೂಕು ಅಮಾಸೆಬೈಲು ಗೋವಿಂದರಾಯ ಕೊಡ್ಗಿಯು ಶೇಷಗಿರಿ ಎಡಿಯಾಳಾ ಎಂಬವನ ಮನೆಯಿಂದ ಚೋರಿಯಾದ ಸಾಮಾನನ್ನು ಕೊಡ್ಗಿಯು ಗೊತ್ತಿದ್ದು ತೆಕ್ಕೊಂಡಿದ್ದಾನೆಂತ ನಮ್ಮ ಸೆಶನ್ ಜಡ್ಜರು ತಿಳಿದು ಕೊಡ್ಗಿಗೆ ಎರಡು ವರುಷಗಳ ಸಜಾವನ್ನೂ 3000 ರೂಪಾಯಿ ಜುರ್ಮಾನೆ ವಿಧಿಸಿದ್ದನ್ನು ಎಲ್ಲರೂ ತಿಳಿದಿರ ಬಹುದು. ಕೊಡ್ಗಿಯು ಹ್ಯಾಕೋರ್ಟಿಗೆ ಅಪೀಲು ಮಾಡಿದ್ದಲ್ಲಿ ಇವನನ್ನು ಜಾಮೀನಿನ ಮೇಲೆ ಬಿಟ್ಟಿರುತ್ತಾರೆ. ಅಪೀಲು ತನಿಖೆಗೆ ಬಾಕಿ ಇಟ್ಟಿದೆ.

ಈ ತಿಂಗಳ ಸೆಶ್ಶನ್ಸ್ ಈ ತಿಂಗಳ ಸೆಶ್ಶನ್ಸನಲ್ಲಿ ವಿಶೇಷ ನಂಬರುಗಳಿರಲಿಲ್ಲ. ಒಂದು ಪ್ಲೇಗ್ ಪಾಸ್ ಪೋರ್ಟಿನ ಫೋರ್ಜರಿ ಕೇಸಿತ್ತು. ಇದರ ಸಾರಾಂಶವೇನಂದರೆ — ಪಾಸ್‌ಪೋರ್ಟು ತೆಗದುಕೊಂಡ ಒಬ್ಬ ಆಸಾಮಿಯು ಆರು ದಿವಸಗಳ ವರೆಗೆ ಆಸ್ಪತ್ರಿಗೆ ಹೋಗಿ ದಸ್ಕತು ಮಾಡಿಸಿದನು. ತದನಂತರ ಹತ್ತು ದಿವಸಗಳಿಗೆ ಬಾಕಿ ಇದ್ದ ದಿವಸಗಳಲ್ಲಿ ಆಸ್ಪತ್ರಿಗೆ ಹೋಗದೆ ದಸ್ಕತ್ತನ್ನು ಫೋರ್ಜರಿ ಮಾಡಿದನು ಪ್ರಯೋಜನ ಹೊಂದದಿದ್ದರೂ ದಿವಸ್ಕತೆಯಂತಾಗುವವು.

ಯಂತ್ರದ ಕಾರ್ಖಾನೆಗಳ ಮತ್ತು ಧನಿಕ ಕಂಪೆನಿಗಳದ್ವಾರಾ ಕೈಕೆಲಸವೂ, ಕಂಪೆನಿಗಳ ಮುಂದೆ ಚಿಲ್ಲರೆ ವ್ಯಾಪಾರ [illegible] ಲೋಕದ ಜನಾಂಗಗಳೊಳಗೆ ವ್ಯಾಪಾರದ ಲಾಭಕ್ಕೋ[illegible]ಗಳಲ್ಲಿ ಒಕ್ಕಟ್ಟೇ ಬಲವಾದ್ದರಿಂದ ಯುರೋಪಿಯರು ತಾನು [illegible] ಸ್ಥಾಪಿಸಿದ್ದಾರೆ. ಹಿಂದುಸ್ಥಾನದಲ್ಲಿ ಪರ ದಸ್ಕತುಗಳನ್ನು [illegible] ರು ಪಾಲುಗಾರರು ಐದು ಲಿಯು ಹೇಳಿದನು. ಜಡ್ಜ[illegible]ರು ಕಡಿಮೆ ಹಾಗೆ ಗೊತ್ತಿಲ್ಲದವನೂ ಏನೂ ತಿಳಿಯದವನ[illegible]ರ್ಯವಿಲ್ಲದೆ ಚಿಸಿ ಈತನಿಗೆ ಹತ್ತು ರೂಪಾಯಿ ಜರುಮಾನ[illegible] ಕೋರ್ಟು ಕೈದಾಗುವ ತನಕ ಸಜಾವ[illegible] ವಿಧಿಸಿದರು.

ಉಳ್ಳಾಲದಲ್ಲಿ ಹೆಂಡತಿಯನ್ನ ಕೊಂದ ಕೊಲೆಪಾತಕಿಗೆ ಪಾಸಿ ಹುಕುಮಾಯಿತು. ಮಾರ್ಚ ತಿಂಗಳ ಸೆಶ್ಶನ್ಸಗೆ ಮೂರು ಭಾರಿ ಮೊಕದ್ದಮೆಗಳಿರುವ ಸಂಭವವುಂಟು. ಇವುಗಳಲ್ಲಿ ಎರಡು ಉಡುಪಿಯಿಂದ, ಒಂದು ಬಂಟ್ವಾಳದಿಂದ

ಬ್ರಹ್ಮಾವರ ಕೊಚ್ಚಿಕಾರ ಅಣ್ಣಪೈಗಳ ಆಭರಣಗಳನ್ನು ಕದ್ದ ಸೇಲಿಂವನಿಗೆ 9 ತಿಂಗಳ ಕಠಿಣಶಾಮಗಿರಿ, 500 ರೂಪಾಯಿ ಜರುಮಾನೆಯನ್ನು ಕುಂದಾಪುರದಲ್ಲಿ ಹೆಡ್ ಅಸಿಸ್ಟ್ಯಾಂಟ್ ಕಲೆಕ್ಟರವರು ವಿಧಿಸಿದರು. ಸುಮಾರು 2000 ಕ್ರಯ ಬಾಳುವ ಆಭರಣಗಳೆಲ್ಲವೂ ಸಾಬೀತಿಯಿಂದ ಸಿಕ್ಕಿವುವೆ. ಹೆಡ್ ಕೊನಿಸ್ಟೇಬಲ್ ಕೃಷ್ಣಯ್ಯನವರ ಬುದ್ಧಿಚಾತುರ್ಯದಿಂದ ಸೇಲಂನಲ್ಲಿ ಈ ಕಳ್ಳನು ಆಭರಣಗಳ ಸಮೇತ ಸಿಕ್ಕಿದನು.

ಪಾಣೆಮಂಗಳೂರ: ಇಲ್ಲಿಂದ ಸುಮಾರು ನಾಲು ಮೈಲು ದೂರ ಅನಂತಾಡಿ ಗ್ರಾಮದ ಪೈರ ಎಂಬ ಸ್ಥಳದಲ್ಲಿ ಗಾಣಿಗ ಜಾತಿಯ ಮೂರಿ ಹೆಂಗುಸಿನ ಮೇಲೆ ಹಲವು ಜನ ಮಾಪಿಳೆಯವರು ಬಲೋದ್ಘಂಡಿ ನಡಿಸಿ ಆಕೆಯ ಮೈಮೇಲೆ ಇದ್ದ ಆಭರಣಗಳನ್ನು ಕಿತ್ತು ತೆಗದು ಮನೆಯೊಳಗಿದ್ದ ಸುಮಾರು 500 ರೂಪಾಯಿ ಕ್ರಯ ಬಾಳುವ ಚಿನ್ನಾಭರಣವನ್ನು [illegible] ಹೋಗಿರುತ್ತಾರೆ. ಪೋಲೀಸಿನವರು ಇವರಲ್ಲಿ [illegible]ರನ್ನು ಹಿಡಿದು ಇನ್ನೂ ತಲಾಶಿಯಲ್ಲಿರುತ್ತಾರೆ.

ಶಾಲಿವಾಹನ ಶಕ ೧೮೨೮ನೇ ಪರಾಭವ ಸಂವತ್ಸರದ ಫಾಲ್ಗುಣ ಶು. ಚೌತಿಯು ಶನಿವಾರದಾರಭ್ಯ ಫಾಲ್ಗುಣ ಶು. ಪೂರ್ಣಿಮೆಯು ಗುರುವಾರದ ವರೆಗಿನ ವಾರ ಪಂಚಾಂಗವು. 1907 ಇಸವಿ ಫೆಬ್ರವರಿ ತಾರೀಕು 16ರಿಂದ 28ರ ವರೆಗೆ.

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ
16	ಶನಿ	ಚೌ	೩೩॥	ಉಭಾ	೯॥
17	ಆದಿ	ಪ	೩೭॥	ರೇ	೧೧॥
18	ಚಂದ್ರ	ಷ	೪೦॥	ಅ	೧೫॥
19	ಕುಜ	ಸ	೪೪	ಭ	೧೯॥
20	ಬುಧ	ಅ	೪೭॥	ಕೃ	೨೫
21	ಗುರು	ನವ	೫೩॥	ರೋ	೩೧
22	ಶುಕ್ರ	ದಶ	೫೯	ಮೃ	[illegible]
			೬೦	ಆರ್	

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ
24	[illegible]	ಯೋ	೪	ಪು	೫೦
25	ಚಂದ್ರ	ದ್ವಾ	೯॥	ಪು	೫೫
26	ಕುಜ	ತ್ರ	೧೨	ಆ್ಲ	೫೯
27	ಬುಧ	ಚತು	೧೪।	ಮ	೬೦
28	ಗುರು	ಪೂ	೧೫।	ಮ	೩

WILLIAM & Co., 16 OAK LANE, FORT BOMBAY.

ಅಮೃತಾಂಜನ

ಬಾಟ್ಲಿ ಒಂದಕ್ಕೆ ಕಿಮ್ಮತ್ತು 0—8—0 ವಿ. ಪಿ 0—12—0.

ಅಮೃತಾಂಜನ—ಸುಖಾಂಜನ.
ಅಮೃತಾಂಜನ—ದಿವ್ಯಾಂಜನ.
ಅಮೃತಾಂಜನ—ಸಂಜೀವನ.
ಅಮೃತಾಂಜನ—ಪರಮಾಂಜನ
ಅಮೃತಾಂಜನ—ಅತೀತಭಂಜನಿ
ಅಮೃತಾಂಜನ—ಪ್ರಾಣಭಂಜನ [illegible]

ಅಮೃತಾಂಜನ—ಅಪೂರ್ವದರ್ಶನಿ
ಅಮೃತಾಂಜನ—ತಕ್ಷಣ ಪರಿಹಾರಿಣಿ.
ಅಮೃತಾಂಜನ—ಗಂಟ್ಲು ನೋವಿಗೆ.
ಅಮೃತಾಂಜನ—ವಾತದ ನೋವಿಗೆ
ಅಮೃತಾಂಜನ—ಎದೆ ನೋವಿಗೆ
ಅಮೃತಾಂಜನ—ತಲೆನೋವಿಗೆ.

[illegible] ಮನುಷ್ಯವರ್ಗಕ್ಕೆ ಬರುವ, ಸಂಧಿವಾತ, [illegible] ತರದ ರೋಗಕ್ಕೆ ಈ ಔಷಧವು ಉತ್ತಮವಾಗಿರುತ್ತದೆ. ಇದರಿಂದ ಗುಣವು ಕಂಡುಬರುವದಿಲ್ಲವಾದರೆ [illegible] ಹಿಂತಿರುಗಿ ಕೊಡಲ್ಪಡುವದು.

ಗಜಕರ್ಣದ ಮುಲಾಮು ಡಬ್ಬಿ 1ಕ್ಕೆ 0-6-0 ವಿ. ಪಿ. 0-10-0.

ಗಜಕರ್ಣದ ಮುಲಾಮು—ಇದನ್ನು ಹಾಗಿಸುವದರಿಂದ ಎಲ್ಲಾ ತರದ ಕಜ್ಜಿಯು ನಾಶವಾಗಿ ಹೋಗುವದು

ಗಜಕರ್ಣದ ಮುಲಾಮು—ಮೂರುಸಾರಿ ಹಚ್ಚುವದರೊಳಗೆ ಗಜಕರ್ಣವು ಹೋಗುವದು

ಗಜಕರ್ಣದ ಮುಲಾಮು—ಇದನ್ನು ಹಚ್ಚಿದಲ್ಲಿ ಉರಿಯು ಬರುವದಿಲ್ಲ ಇದರಿಂದ ಚರ್ಮವು ಕಪ್ಪಾಗುವದಿಲ್ಲ.

ಗಜಕರ್ಣದ ಮುಲಾಮು—ಇದನ್ನು ಒಂದು ಸಾರಿ ಪರೀಕ್ಷಿಸಿ ನೋಡಿರಿ, ಕ್ರಯ ಬಹಳ ಕಮ್ಮಿ ಗುಣ ಹೆಚ್ಚು

ಗಜಕರ್ಣದ ಮುಲಾಮು—ಇದರಿಂದ ಗುಣ ಕಾಣಬರದಿದ್ದಲ್ಲಿ ಹಣವು ಹಿಂತಿರುಗಿ ಕೊಡಲ್ಪಡುವದು

	ರೂ.	ಆ	ಪೈ
ಜೀರ್ಣರಸಾಯನ—ಹೊಟ್ಟೆಯಲ್ಲಿ ಹಸಿವೆ ಆಗಲಿಕ್ಕೆ [illegible] ಉತ್ತಮವಾದ್ದು	1	4	0
ವಜ್ರಗುಟಿಕ—ಧಾತು ಪುಷ್ಟಿ [illegible] ಶಕ್ತಿ ಕೊಡುತ್ತದೆ	1	0	0
ಜ್ವರಹಾರಿ—ಎಲ್ಲಾ ತರದ ಜ್ವರಗಳ ಮೇಲೆ ಜ್ವರಹಾರಿ [illegible] ಔಷಧವು ಸಿಗುತ್ತದೆ ಬಾಟ್ಲಿ 1ಕ್ಕೆ	0	12	0
ಚೇಳುಕಡಿತದ ಮದ್ದು—ಚೇಳು ಕಡಿತದ [illegible]	0	9	0
ಕಜ್ಜಿ ಮುಲಾಮು—[illegible]	0	3	0
ದಂತಮಂಜನ—ಈ ಮಂಜನದಿಂದ ಹಲ್ಲುಗಳನ್ನು ದಿನಾಲು ತಿಕ್ಕಿ ಸ್ವಚ್ಛ ಮಾಡುವದರಿಂದ [illegible] ಗಟ್ಟಿಯಾಗಿ ಹಲ್ಲಿನೊಳಗಿಂದ ರಕ್ತ ಸುರಿಯುವದು [illegible] ಕ್ರಯ ಬಹಳ ಕಮ್ಮಿ [illegible] 1ಕ್ಕೆ	0	2	0
ರೋಮಹಾರಿ—ಈ ಚೂರ್ಣವನ್ನು ಹಚ್ಚುವದರಿಂದ ರೋಮವನ್ನು ಪೂರ್ಣವಾಗಿ ತೆಗೆಯುತ್ತದೆ	0	8	0
ಕೇಶವರ್ಧಿನೀ ತೈಲ—ಇದು ತಲೆಯ ಕೂದಲನ್ನು [illegible] ಕೂದಲುಗಳನ್ನು ಬೆಳೆಸುತ್ತದೆ [illegible] ಚಲೋ ಪರಿಮಳವು ಬರುತ್ತದೆ ಮೂರು [illegible] ಬಾಟ್ಲಿಗೆ ಕ್ರಯ	1	0	0
ಜುಲಾಬು ಮಾತ್ರೆ—ಜುಲಾಬಿಗೆ ಉತ್ತಮವಾದದ್ದು	0	8	0
ಕಫಹಾರಿ—ಕೆಮ್ಮು, ದಮ್ಮು, ಕ್ಷಯ, [illegible] ಕಫ [illegible] ಇದು ಅಮೂಲ್ಯವಾಗಿರುತ್ತದೆ	1	4	0
ಸುಂದರೀ ತೈಲ—ಈ ತೈಲವನ್ನು ಮೋರೆಯ ಮೇಲೆ ಹಚ್ಚಿದರೆ, ಮೊಡವೆಗಳು ಹೋಗಿ ಕಪ್ಪಿನ ಕಲೆಗಳನ್ನು ತೆಗೆದು ಕಾಂತವಾದ ಮತ್ತು [illegible] ರೂಪವನ್ನು ತರುತ್ತದೆ ಡಬ್ಬಿ 1ಕ್ಕೆ	0	8	0

ನೇತ್ರಾಂಜನ 0-4-0, **ಕುಸುಮಹಾರಿ ಗುಟಿಕ** 1-0-0, **ಪ್ರಮೇಹದ ಮಿಶ್ರಣ** 1-0-0, **ಜಂತುವಾತಹಾರಿ** 0-8-0, **ಕಫನಾಶಕ ಚೂರ್ಣ** 0-8-0

ಎಲ್ಲಾ ತರದ ಔಷಧಗಳು ಇರುವದರಿಂದ ಕೆಟಲಾಗು ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು.

AMRUTANJAN CURES RHEUMATISAM.

TRY OUR AMRUTANJAN AND YOU WILL LIKE IT.

AMRUTANJAN IS VERY CHEAP AND EFFECTIVE

ವಿಳಾಸ.—ವಿಲಿಯಮ್ ಮತ್ತು ಕಂಪನಿ, ಫೋರ್ಟ್ ಮುಂಬಯಿ

Printed and published by V. S Kamath at the Mangalore Tr[illegible]

ಸ್ವದೇಶಾಭಿಮಾನಿ

ಎಂಬ

ಕನ್ನಡ ಪಕ್ಷ ಪತ್ರವು.

ಪುಸ್ತಕ 1. ಮಂಗಳೂರು, 1ನೇ ಮಾರ್ಚ 1907. ಸಂಚಿಕೆ 5.

ವ್ಯಾಪಾರವೂ ದೇಶವಾತ್ಸಲ್ಯವೂ.

—o—

ಮನುಷ್ಯನ ಎಲ್ಲಾ ಅಂಗಗಳಲ್ಲಿ ಶ್ರೇಷ್ಠವಾದದ್ದು ಶಿರಸ್ಸೆಂದೂ ಎಲ್ಲಾ ಶಕ್ತಿಗಳಲ್ಲಿ ಉತ್ತಮವಾದದ್ದು ಬುದ್ಧಿಯೆಂದೂ ತಿಳಿಯುವೆವು. ಆದರೆ ಶಿರಸ್ಸು ದೃಢವಾಗಿ ಬುದ್ಧಿಯು ವಿಕಾಸಿಸಿ ಮನುಷ್ಯನ ಉತ್ಕೃಷ್ಟ ಪುರುಷಾರ್ಥಗಳು ಕೈಗೂಡಬೇಕಾದರೆ ದೇಹಪೋಷಣೆಯು ತಕ್ಕ ರೀತಿಯಲ್ಲಿ ಸಾಗಬೇಕು. ಕೀಳೆಂದು ಎಣಿಸುವ ಹೊಟ್ಟೆಯು ಬಲಗೊಳ್ಳಬೇಕು. ಇದ್ದಲು ಇಲ್ಲದೆ ಯಂತ್ರವು ತನ್ನ ಅದ್ಭುತಕಾರ್ಯಗಳನ್ನು ಸಾಧಿಸಲಾರದು. ಹಾಗೆಯೇ ಜನಾಂಗದ ಸುಧಾರಣೆಯು ಉಚ್ಚ ಸ್ಥಿತಿಕ್ಕೆ ಏರಬೇಕಾದರೆ ಸಂಪತ್ತೇ ಮುಖ್ಯ ಸಾಧನವು. ಸಂಸ್ಕೃತ ಸಮಾಜವು ಪೂರ್ವದಲ್ಲಿ ಉಚ್ಚಸ್ಥಿತಿಯಲ್ಲಿದ್ದಾಗ ದುಡಿದದ್ದರಲ್ಲಿ ಷಷ್ಠವನ್ನು ಉಳಿಸುವುದಕ್ಕೆ ಕಲಿಸುತ್ತಾ ನಂತರ ಗೃಹಸ್ಥತೆಯು ತಲೆದೋರಲವಕಾಶವಾಯಿತೆಂದು ಶಾಸ್ತ್ರಜ್ಞರು ಹೇಳುವರು. ಈಗಿನ ಜನಾಂಗಗಳಲ್ಲಿ ಮೊದಲನೇ ತರಗತಿಯನ್ನು ಹೊಂದಿದ ಇಂಗ್ಲಿಷರೂ ಅಮೇರಿಕನರೂ ಧನದಲ್ಲಿಯೂ ಬೇರೆಲ್ಲರನ್ನು ಮೀರಿರುವರು. ಅಜೀಜಿ ಧನವನ್ನು ಮಹಾಜನಗಳು ನೆಚ್ಚ ಮಾಡಿದ್ದರಿಂದ ನಾಶ ಸಂಭವಿಸಿದರೂ ಸ್ವದೇಶವನ್ನು ಉನ್ನತಿಗೆ ತಂದ ಜನರೆಲ್ಲಾ ಅದೇ ಧನವನ್ನು ದೇಶಹಿತಕ್ಕಾಗಿ ಉಪಯೋಗಿಸಿದ್ದರಿಂದ ತಮ್ಮ ಉದ್ದೇಶ್ಯವನ್ನು ನೆರವೇರಿಸಿದರೆಂದು ನಾವು ನೋಡಬಹುದು. ಹಣ ಹಲವು ಕೆಲಸಗಳನ್ನೆಸಗುವದೆಂದು ಇಂಗ್ಲೀಷರಲ್ಲಿ ಒಂದು ಗಾದೆ ಮಾತಿದೆ.

ಆರ್ಯರು ಅಂದರೆ ನಮ್ಮ ಪೂರ್ವಜರು ಸುಧಾರಿಸಿದ ಜನಾಂಗಗಳಲ್ಲಿ ಅಗ್ರಗಣ್ಯರೆನ್ನಿಸಿದರೆಂದು ಇತಿಹಾಸವು ಹೇಳುವುದು. ನಾವು ಆ ಉತ್ಕೃಷ್ಟ ಆರ್ಯರ ಸಂತತಿಯವರು, ಈಗಿನ ಜನಾಂಗಗಳಲ್ಲಿ ಹಿಂದುಳಿದವರೆಂದೂ ಅನ್ಯದೇಶೀಯರನೇಕರು ನಮ್ಮನ್ನು ಹೀನೈಸುವರೆಂದೂ, ಕೆಲವರ ನಮ್ಮ ನಾಶ ನೋಡಿ ಕನಿಕರ ಪಡುವರೆಂದೂ ಪ್ರತ್ಯಕ್ಷ ಕಾಣುವದು. ಈ ದೀನ ದೆಸೆಯನ್ನು ಕಳೆದು ಬಿಡಬೇಕಾದರೆ ಹಿಂದು ದೇಶದಲ್ಲಿ ಪೂರ್ವದಲ್ಲಿದ್ದಂತೆ ಕೈಗಾರಿಕೆಗಳು ಈಗಲೂ ಏಳಿಗೆ ಬರಬೇಕೆಂದು ಜನರು ಕಂಡುಕೊಂಡಿದ್ದಾರೆ. ಇದುವೆ ಅಲ್ಲವೇ ಸ್ವದೇಶಿ ಚಳವಳಿಯು ಪ್ರಚಾರಕ್ಕೆ ಬಂದದ್ದು. ಸ್ವದೇಶೀ ಶಬ್ದವು ನ್ಯಾಯವಾಗಿ ದೇಶಾಭ್ಯುದಯದ ಎಲ್ಲಾ ವಿಷಯಗಳನ್ನೊಳಗೊಳ್ಳುವದಾದರೂ, ಸದ್ಯ ಆ ಶಬ್ದಕ್ಕೆ ದೇಶದ ಕೈಗಾರಿಕೆಗಳ ಪ್ರೋತ್ಸಾಹವೆಂದೇ ಅರ್ಥವು ರೂಢಿಗೆ ಬಂದದ್ದರ ಕಾರಣವು, ದೇಶೋನ್ನತಿಗೆ ಕೈಗಾರಿಕೆಗಳ ವರ್ಧನವು ಮುಖ್ಯ ಸಾಧನವೆಂದು ಜನರು ತಿಳಿದದ್ದೇ ಎಂದು ತೋರುತ್ತದೆ.

ಈ ಉದ್ದಿಶ್ಯವನ್ನೀಡೇರಿಸುವಲ್ಲಿ ಹಲವು ಸಂಗತಿಗಳು ನಮಗೆ ಅನುಕೂಲವಾಗಿಯೂ ಹಲವು ಪ್ರತಿಕೂಲವಾಗಿಯೂ ಇವೆ. ದೇವರು ನಮಗೆ ಬೇಕಾದ ಎಲ್ಲಾ ಸಲಕರಣೆಗಳನ್ನೊದಗಿಸಿಕೊಟ್ಟಿದ್ದಾನೆ. ಅಭ್ಯಂತರಗಳು ಮನುಷ್ಯ ಕಲ್ಪಿತವಾಗಿವೆ. ಕೈಗಾರಿಕೆಗಳಿಗೆ ಅವಶ್ಯವಿರುವ ಸಾಮಾಗ್ರಿಗಳೆಲ್ಲಾ ನಮ್ಮಲ್ಲಿಯೇ ದೊರಕುವವು. ಈ ಭರತಖಂಡದಲ್ಲಿ ಶೀತ, ಸಮಧಾತು, ಉಷ್ಣ ಮೊದಲಾದ ಬೇರೆ ಬೇರೆ ವಾಯುಗುಣಗಳೂ, ಪರ್ವತ, ತಗ್ಗು ತಪ್ಪಲು, ಮರುಭೂಮಿ, ಕೆಂಪುಮಣ್ಣು, ಕರಿಮಣ್ಣು, ಸಾಳುಮಣ್ಣು, ಮುಂತಾದ ಅನೇಕ ಪ್ರಕೃತಿ ರೂಪಗಳೂ, ಇರುತ್ತಿರಲು, ಭಿನ್ನ ಪ್ರಕೃತಿ ಗುಣಗಳಿರುವ ಪ್ರದೇಶಗಳಲ್ಲಾಗುವ ಹತ್ತಿ, ಉಣ್ಣೆ, ಗೋಧಿ, ಭತ್ತ ಮೊದಲಾದ ಪದಾರ್ಥಗಳು ಇಲ್ಲಿಯೇ ದೊರಕುವವು. ಕಬ್ಬಿಣ ಇದ್ದಲು ಮೊದಲಾದ ಖನಿಜಗಳೂ ಸಾಕಷ್ಟು ಇವೆ. ಕೂಲಿ ಕೆಲಸವು ಎಲ್ಲಿಯೂ ಇಲ್ಲಿಯಷ್ಟು ಅಗ್ಗ ಸಿಕ್ಕದು. ಆದರೆ ನಾವು ಪರಿಶ್ರಮ ಪಟ್ಟು, ಈ ಅನುಕೂಲ್ಯಗಳಿಂದ ಪ್ರಯೋಜನ ಹೊಂದದಿದ್ದರೆ ಅವು ಕುರುಡನ ಕೈಯಲ್ಲಿಯ ಕನ್ನಡಿಯಂತಾಗುವವು.

ಈಗಿನ ಕಾಲವು ಯಂತ್ರದ ಕಾರ್ಖಾನೆಗಳ ಮತ್ತು ಧನಿಕ ಕಂಪೆನಿಗಳದ್ದಾಗಿರುತ್ತದೆ. ಯಂತ್ರದ ಮುಂದೆ ಕೈಕೆಲಸವೂ, ಕಂಪೆನಿಗಳ ಮುಂದೆ ಚಿಲ್ಲರೆ ವ್ಯಾಪಾರಸ್ಥರೂ ನಿಲ್ಲಲಾರರು. ಲೋಕದ ಜನಾಂಗಗಳೊಳಗೆ ವ್ಯಾಪಾರದ ಲಾಭಕ್ಕೋಸ್ಕರ ನಡೆಯುವ ಘೋರ ಕಲಹಗಳಲ್ಲಿ ಒಕ್ಕಟ್ಟೇ ಬಲವಾದ್ದರಿಂದ ಯುರೋಪಿಯರು ಲಕ್ಷ ಕೋಟಿ ಹಣ ಕೂಡಿಸಿ ಕಂಪೆನಿಗಳನ್ನು ಸ್ಥಾಪಿಸಿದ್ದಾರೆ. ಹಿಂದುಸ್ಥಾನದಲ್ಲಿ ಪರಸ್ಪರ ವಿಶ್ವಾಸವೂ ಐಕಮತ್ಯವೂ ವಿರಳವಾದ್ದು. ಇಬ್ಬರು ಪಾಲುಗಾರರು ಐದು ಆರು ವರುಷದೊಳಗೆ ಅಗಲುವರು. ಇಲ್ಲಿ ಬಂಡವಾಳಿಕರು ಕಡಿಮೆ. ಹಾಗೆ ಬಂಡವಾಳವಿದ್ದರೂ ಹಣವನ್ನು ಕೈಗಾರಿಕೆಗಳಲ್ಲಿ ವಿನಿಯೋಗಿಸುವ ಧೈರ್ಯವಿಲ್ಲದೆ ಅನೇಕ ಜನರು ಅರ್ಬತ್‌ನೋಟ್ ಮೊದಲಾದ ಕಂಪೆನಿಗಳಲ್ಲಿ ಭದ್ರತೆಗಾಗಿ ಅಲ್ಪ ಬಡ್ಡಿಗಾದರೂ ಇಡುವರು. ಅರ್ಬತನೋಟ್ ಆಗಲಿ ಬೇರೆ ಯಾವ ಕಂಪೆನಿಯವರಾಗಲಿ ನಮ್ಮ ಹಣವನ್ನು ಪೆಟ್ಟಿಗೆಯಲ್ಲಿಟ್ಟು ನಮಗೆ ಬಡ್ಡಿ ಕೊಡಲಾರರು. ಅವರು ಅದನ್ನು ವ್ಯಾಪಾರ ಉದ್ಯೋಗಗಳಲ್ಲಿ ವಿನಿಯೋಗಿಸಬೇಕು. ಹಾಗೆ ನಮ್ಮ ದುಡಿಮೆಯಿಂದ ಹೆಚ್ಚು ಪ್ರಯೋಜನ ಹೊಂದಿ ಆ ಲಾಭದಲ್ಲಿ ಒಂದು ಪಾಲನ್ನು ಬಡ್ಡಿಯಾಗಿ ನಮಗೆ ತೆರುವವರಿಗೆ ನಾವೇ ಒಂದು ಕಾಮಗಿರಿಯಲ್ಲಿ ಅದನ್ನು ಉಪಯೋಗಿಸಕೂಡದೆ? ಇಲ್ಲಿ ಕೆಲಸಗಾರರು ಹೊಸರೀತಿಗಳನ್ನು ಕಲಿಯಲೊಲ್ಲರು. ಹಳೇ ಮಗ್ಗಗಳಿಗಿಂತ ಸ್ವಲ್ಪ ಸಮಯದಲ್ಲಿ ವಸ್ತ್ರಗಳನ್ನು ನೇಯುವ ನವೀನ ಯಂತ್ರಗಳಲ್ಲಿ ನೇಯಲಿಕ್ಕೆ ಹೇಳಿದರೆ ತಮ್ಮ ತಂದೆ ಅಜ್ಜಂದಿರು ಮಾಡಿದ ರೀತಿಗಳು ತಮಗೆ ಸಾಕೆಂದು ಆಕ್ಷೇಪಿಸುವರು. ಕಾರ್ಖಾನೆಗಳ ಮಾಲೀಕರಲ್ಲಿ ಬೇಕಾದ ಧೈರ್ಯ ಸಾಹಸ, ಉದ್ಯೋಗದ ತಪಸೀಲುಗಳನ್ನು ಕೂಲಂಕುಶ ಗ್ರಹಿಸುವ ಪರಿಶ್ರಮ ಮೊದಲಾದ ಲಕ್ಷಣಗಳು ನಾವು ಇನ್ನೂ ಕಲಿಯಲಿಕ್ಕಿವೆ.

ಕೈಗಾರಿಕೆಗಳು ಬಾಲ್ಯಾವಸ್ಥೆಯಲ್ಲಿರುವ ಕಾಲದಲ್ಲಿ ಸರ್ಕಾರವು ಸಹಾಯ ಮಾಡುವದು [illegible]. ಪರದೇಶದಿಂದ ಬರುವ ಅಗ್ಗ ಸಾಮಾಗ್ರಿಗಳಿಂದ ಸ್ವದೇಶಿ ಕಾರ್ಖಾನೆಗಳು ಬಿದ್ದು ಹೋಗದಂತೆ ವಿದೇಶಿ ವಸ್ತುಗಳ ಮೇಲೆ ಸುಂಕವಿಟ್ಟು ಸರಕಾರದವರು ದೇಶದ ಕೈಗಾರಿಕೆಗಳನ್ನು ವೃದ್ಧಿಗೆ ತರುವರು. ಆದರೆ ನಮ್ಮ ದೇಶದ ವಿಷಯದಲ್ಲಿ ನಮ್ಮ ಅರಸರೇ ವ್ಯಾಪಾರಿಗಳೆಂದು ಹೇಳಬಹುದು. ಯಾಕಂದರೆ, ವಿಲಾಯತಿ ವ್ಯಾಪಾರಿಗಳಿಗೆ ಪಾರ್ಲಿಮೆಂಟಿನಲ್ಲಿ ಅಧಿಕಾರವದೆ. ನಮ್ಮ ಸರಕಾರವು ಪಾರ್ಲಿಮೆಂಟಿಗೆ ಅಧೀನವಾಗಿದೆ. ಹೀಗಿರುವಲ್ಲಿ ನಮ್ಮ ರಾಜ್ಯಾಧಿಪತ್ಯವು ವಿಲಾಯತಿಯಿಂದ ಬರುವ ಇಲ್ಲಿ ಬಹಳ ಅಗ್ಗವಾಗಿ ದೊರೆಯುವ ಮೆಂಚಸ್ಟರ್ ಮಲ್, ಮುಂತಾದ ಸಾಮಾನುಗಳ ಮೇಲೆ ಸುಂಕವಿಟ್ಟು ನಮ್ಮ ನೇಯಿಗಾರರನ್ನು ಸಾಕುವದು ಹ್ಯಾಗೆ? ಇದಕ್ಕೆ ಬದಲಾಗಿ ನಾವೇ ನಾಜೂಕು ನೂಲು ನೇಯದ್ದ ಹಾಗೆ ನಿರ್ಬಂಧವಿದೆ. ಹೀಗೆ ಸರಕಾರವು ಪ್ರತಿಕೂಲವಾದ್ದರಿಂದಲೇ ಇಲ್ಲಿ ಪೂರ್ವದಲ್ಲಿ ಖ್ಯಾತಿಗೊಂಡ ಉದ್ಯೋಗಗಳು ನಾಶವಾದವು. [illegible] ನೇಗಿಲು ಹಿಡಿಯ ಬೇಕಾಯಿತು. [illegible]

[illegible] ಜಾಗಗ ಳನ್ನು [illegible] ಈ ವ್ಯಾಪಾರದ [illegible] ತಿಳಿದಿದ್ದರಿಂದ ಕಾಣು ಬರುವದು. ಯುರೋಪಿನವರು [illegible] ಸಾಮುಗ್ರಿಗಳು ಅಫಘಾನಿಸ್ತಾನ ದೇಶದಿಂದ ತುರ್ಕದೇಶದ [illegible] ಐಗುಪ್ತಕ್ಕೆ ಹೋಗಿ ಅಲ್ಲಿಂದ ಮಧ್ಯಸಮುದ್ರದಿಂದ ಯುರೋಪ ಖಂಡವನ್ನು ಸೇರುತ್ತಿದ್ದವು. ಈ ವ್ಯಾಪಾರದಿಂದ ತುರ್ಕ, ಐಗುಪ್ತಗಳ ಸುಲ್ತಾನರಿಗೆ ಬಹಳ ಆದಾಯವು ದೊರೆಯು ತ್ತಿತ್ತು. ಪೋರ್ತುಗೀಸರು ಗುಡ್ ಹೋಪ್ ಭೂಶಿರ ಮಾರ್ಗವನ್ನು ಕಂಡು ಹಿಡಿಯಲು, ಸುಲ್ತಾನರ ಲಾಭವು ಇವರ ಕೈಸೇರಿದ್ದರಿಂದ ಮುಸಲ್ಮಾನರಿಗೂ ಪೋರ್ತುಗೀಸರಿಗೂ ಘೋರ ಯುದ್ಧ ನಡೆದು ಪೋರ್ತುಗೀಸರು ಗೆದ್ದರು. ಡಚ್ಚರು ಪ್ರಬಲಗೊಂಡು ಪೋರ್ತುಗೀಸರನ್ನು ಹಿಂದಕ್ಕಿಟ್ಟರು. ಕ್ರಮೇಣ ಇಂಗ್ಲಿಷರಿಗೂ ಡಚ್ಚರಿಗೂ ನಂತರ ಇಂಗ್ಲಿಷರಿಗೂ ಫ್ರೆಂಚರಿಗೂ ದೀರ್ಘಕಾಲ ಯುದ್ಧ ನಡೆದು, ಇಂಗ್ಲಿಷರೇ ಜಯಶಾಲಿಗಳಾಗಿ ತಮ್ಮ ರಾಜ್ಯವನ್ನೂ ವ್ಯಾಪಾರವನ್ನೂ ಸ್ಥಾಪಿಸಿದ್ದು ಎಲ್ಲರಿಗೂ ತಿಳಿದೇ ಇದೆ. ಇಷ್ಟು ಹೋರಾಟಗಳು ನಡೆಯಬೇಕಾದರೆ ಭರತಖಂಡದ ವ್ಯಾಪಾರಕ್ಕೆ ಬೆಲೆಯಿದ್ದಿರಬೇಕು.

ಹಿಂದೆ ಸ್ಥಾನದ ಕೈಗಾರಿಕೆ ಉದ್ಯೋಗಗಳು ನಾಶವಾಗಿ ಪ್ರಾಪ್ತವಾದ ದಾರಿದ್ರ್ಯದಿಂದ ದೇಶಕ್ಕೆ ಉಂಟಾದ ಆಪತ್ತು ಭಯಂಕರವಾಗಿದೆ. ಈ ವಿಪತ್ತನ್ನು ನಿವಾರಿಸಿದ್ದಲ್ಲದೆ ರಾಜ್ಯವು ಈಗಿನ ದ್ರವ್ಯಶೋಷಣೆಯನ್ನು ಬಹುಕಾಲ ತಾಳಲಾರದು. ಜನಾಂಗವೂ ಉನ್ನತಿಗೇರಲಾರದು. ಇಂತಹ ದುರವಸ್ಥೆಯ ಕಡೆಗೆ ದೇಶಾಭಿಮಾನಿಗಳೆಲ್ಲರೂ ಲಕ್ಷ್ಯ ಕೊಡತಕ್ಕದ್ದು.

ಸಮಾಜವೆಂಬ ದೇಹಕ್ಕೆ ರಕ್ತದಂತಿರುವ ವ್ಯಾಪಾರ ಉದ್ಯೋಗಗಳನ್ನು ಉದ್ಧರಿಸಿ ಪತಿತ [illegible] ರಕ್ಷಿಸುವ ಕಾರ್ಯವು ಜನಸಮುದಾಯಕ್ಕೇನೆ ಶಕ್ಯವಲ್ಲದೆ [illegible] ಪ್ರಯತ್ನಗಳಿಂದಾಗತಕ್ಕದ್ದಲ್ಲ. ಆನೆಯನ್ನು [illegible] [illegible] ಬೇಕು. ಸರ್ವಸಾಧಾರಣರು ದೇಶಾನುರಾಗದಿಂದ ಪ್ರೇರಿತರಾಗಿ ಸ್ವದೇಶಿ ವಸ್ತು [illegible] ಕೈಕೊಳ್ಳಬೇಕು. ಈ ಉದ್ದಿಷ್ಟಕ್ಕೆ ಬಂಡವಾಳಿಕರೂ ಕೆಲಸಗಾರರೂ, ವ್ಯಾಪಾರಿಗಳೂ, ಗಿರಾಕಿಗಳೂ ತಮ್ಮ ಧರ್ಮವನ್ನರಿತು ನಡೆಯಬೇಕು. ತಮ್ಮ [illegible] ವ್ಯವಸ್ಥಿತವಾದ ಸ್ವದೇಶಿ ಕೈಗಾರಿಕೆಗಳನ್ನು [illegible] [illegible] ತಮ್ಮ ಸುಧಾರಣೆಯನ್ನು ತೋರ್ಪಡಿಸುವೆ [illegible] ಬೇಗನೆ ಹಾಳಾಗುವದಾದರೂ ಅಗ್ಗ ಸಿಕ್ಕುವವೆಂಬ [illegible] "ವಿಲಾಯತಿ" (ವಿದೇಶಿ) ಸಾಮುಗ್ರಿಗಳನ್ನು ಕೊಳ್ಳುವದನ್ನು ಬಿಟ್ಟು ದೀನ ಸ್ಥಿತಿಯಲ್ಲಿರುವ ಸ್ವದೇಶಿಯನ್ನವಲಂಬಿಸಿದರೆ [illegible] [illegible] ವ್ಯಾಪಾರ [illegible] ಸ್ವದೇಶಿ [illegible] [illegible] ಲಾಭಾಪೇಕ್ಷೆಯಿಂದ ವ್ಯಾಪಾರ [illegible] ಸಾಮುಗ್ರಿ [illegible] ಅಥವಾ ವಿಲಾಯತಿ ಸಾಮಾನುಗಳನ್ನು [illegible] [illegible] ತಮ್ಮ ದೇಶದ್ರೋಹದಿಂದ [illegible] [illegible] ಕೆಲಸಗಾರರ [illegible] [illegible] ಬೇಕಾಗಿದೆ. ಯುರೋಪದಂತೆ [illegible] ಸ್ಥಾಪಿತವಾ[illegible]ಕ್ಕೆ ಜನರು ಪರಸ್ಪರ [illegible] ತೋರಿಸಲವಶ್ಯವಿದೆ.

[illegible] ಸ್ವದೇಶಿ ವಸ್ತುಗಳನ್ನು ಪ್ರತಿ [illegible] ಮನೋವಾಕ್ಕಾಯಗಳಿಂದ ಕೈಕೊಂಡು ತನ್ನ ದಿನ[illegible] ನಾವು ನಮ್ಮ ಪೂರ್ವೋನ್ನತಿಯನ್ನೇರುವದು ದುರ್ಲಭವೇನು?

ಮತಗಳ ಭ್ರಾತೃಸ್ನೇಹ

ಈ ವಿಷಯವನ್ನು ಕುರಿತು ಕಳೆದ ತಿಂಗಳಲ್ಲಿ ಎನ್ನಿಬಿಸೆಂಟ್ ದೊರೆಸಾನಿಯವರು ಮದ್ರಾಸಿನಲ್ಲಿ ಉಪನ್ಯಾಸ ಕೊಟ್ಟರು. ಮಹಾ ಧರ್ಮಿಷ್ಠೆಯಾದ ಈ ಹೆಂಗಸು [illegible] ಈ ದೇಶದ ಭಿನ್ನ ಮತಾವಲಂಬಿಗಳಿಗೆ ಪರಿಶೀಲಿಸ ಯುವಾಗಿದೆ. ಇವರ [illegible] ಸಾರಾಂಶವೇನೆಂದರೆ:—ಲೋಕದ ಮುಖ್ಯ ಮತಾಭಿಮಾನಿಗಳೊಳಗಿರುವ ಪರಸ್ಪರ ದ್ವೇಷವನ್ನು ನೋಡಿದರೆ "ಮತಗಳು ಭ್ರಾತೃಭಾವ [illegible] ಪೂರ್ವಾಪರ ವಿರುದ್ಧವೆಂದು ತೋರಬಹುದು. ಆದರೂ ಪೂರ್ವದ ಧರ್ಮಗಳಲ್ಲಿ ಪರಸ್ಪರ ಹಿಂಸೆ ಇರಲಿಲ್ಲ. ಹಿಂದು ರಾಜ್ಯದ ಪ್ರಜೆಗಳು ಛಂದ ಮತವನ್ನನುಸರಿಸುತ್ತಾ ಪರರಾಜ್ಯದವರ ಮತದ ಗೊಡವೆಗೆ ಹೋಗುತ್ತಿರಲಿಲ್ಲ. ಕ್ರಮೇಣ ಕ್ರಿಸ್ತಮತವು ಪ್ರಚಾರಕ್ಕೆ ಬರುತ್ತಾ ಹಿಂಸೆಯು ತಲೆದೋರಿತು. ಕ್ರೈಸ್ತರು ತಮ್ಮ ಮತವೇ ಸತ್ಯಧರ್ಮವೆಂದೂ ಇತರ ಮತಾವಲಂಬಿಗಳು ನರಕಭಾಜರೆಂದೂ ಬೋಧಿಸತೊಡಗಿದ್ದರಿಂದ ಈ ಮತವನ್ನು ಆ ಕಾಲದ ರಾಜರು ಮೊಳೆಯಲ್ಲಿಯೇ ಚಿಗುಟ ಯತ್ನಿಸಿದರು. ಘೋರ ಹಿಂಸೆಯನ್ನನುಭವಿಸಿ ಕಡೆಗೆ ಕ್ರೈಸ್ತಧರ್ಮವು ರಾಜಧರ್ಮವಾಯಿತು. ಅಂದು ಮೊದಲ್ಗೊಂಡು ಇವರು ಪರಮತಗಳು ಮಿಥ್ಯವಾದದ್ದರಿಂದ ನಾಶವಾಗಬೇಕು, ತಮ್ಮ ಧರ್ಮವು ಸರ್ವತ್ರ [illegible] ಆಸಕ್ತಿಯಿಂದ ಅನ್ಯಮತ ಹಿಂಸೆಯನ್ನು ಪಕ್ರಮಿಸಿದರು. [illegible] ಮುಸಲ್ಮಾನರಲ್ಲಿ ಭಿನ್ನ ಮತಗಳಲ್ಲಿ ಪರಸ್ಪರ ಔದಾರ್ಯ [illegible]. ಆದರೂ [illegible] ಈ ಹಿಂಸಾಭಾವ [illegible] ಕಾಣಿಸಿಕ್ಕುವದು. [illegible] ಅದ್ವಿತೀಯ [illegible] ಸಾರುವದರಿಂದ ಅವುಗಳೊಳಗೆ ಪರಸ್ಪರ ವ್ಯತ್ಯಾಸ ಸಹಜ. [illegible] ಮಾನ ಜ್ಯೋತಿಯು ಒಂದೊಂದು ಅಂಗವು ಒಂದೊಂದು ಧರ್ಮದಲ್ಲಿ ಹೊಳೆಯುವದರಿಂದ ಯಥಾರ್ಥ ಬಕ್ತನಿಗೆ ಎಲ್ಲವೂ [illegible] ಎಲ್ಲವೂ ಆವಶ್ಯಕವು. ಹಿಂದೂಮತವು ಧರ್ಮವನ್ನು ಅನುಪಮ ರೀತಿಯಲ್ಲಿ ಬೋಧಿಸುವದು. ದಯಾ ಸಾಗರನಾದ ಬುದ್ಧನು ಬೋಧಿಸಿದ [illegible] ನೈತಿಗಳನ್ನು ಮನೋವಾಕ್ಕಾಯಗಳಿಂದ ಉಪದೇಶಿಸಿದನು. ಕ್ರಿಸ್ತನು [illegible] ಗುರುವಾಗಿದ್ದ ಸರ್ವಶಕ್ತನು [illegible] ವಿಶ್ವವನ್ನು ವ್ಯಾಪಿಸಿ [illegible] ತ್ತದೆಂಬ ತತ್ವವು ಮಹಮ್ಮದನಲ್ಲಿ ಪ್ರಕಾಶಿಸುವದು. ಹೀಗಿರುತ್ತ ನಾವು ಪರಮತಗಳನ್ನು ದೂಷಿಸದೆ ಅವುಗಳ ರಹಸ್ಯಗಳನ್ನು ಒಳಕೊಳ್ಳಬೇಕು. ಇದಲ್ಲದೆ ಲೋಕದ ಪ್ರಧಾನ ಮತಗಳಾದ ಹಿಂದೂ ಬೌದ್ಧ, ಕ್ರೈಸ್ತ, ಮಹಮ್ಮದಿ ಮತಗಳಲ್ಲಿ ಅನೇಕ [illegible] ಸಮವಾಗಿವೆ.

ಒಂದು [illegible] ತ್ರಿಮೂರ್ತಿ [illegible] ನಂ ವರು ಕ್ರೈಸ್ತರು [illegible] ಬೌದ್ಧ [illegible] [illegible] ಕ್ರೈಸ್ತ [illegible] ಪರಿಪೂರ್ಣ [illegible] [illegible] ಎಲ್ಲ ಧರ್ಮಗಳಲ್ಲಿಯೂ ಸಕ್ಕವೇ ಪ್ರಕಾಶಿಸುವ [illegible] ಇಂತಹ [illegible] [illegible] ಅದೇ ಬ್ರಹ್ಮಜ್ಞಾನ [illegible] ನಮ್ಮ [illegible] ವಾಸಿಸುವನು. [illegible] ನಾವೆಲ್ಲರೂ ಅನುಭವಿಸ[illegible] ಪ್ರತಿ[illegible] ಪನ್ನ [illegible] ತಿವೇ [illegible] ಪ್ರೀತಿಸುವನು. [illegible] ಐಕ್ಯವಿರುವನು. ಈ ತತ್ವವನ್ನು [illegible] ಬ್ರಾಹ್ಮಣನು [illegible] ಬ್ರಾಹ್ಮಣನಿಕೆ [illegible] ಹೊಲೆಯನಿಗೆ ದಿವ್ಯ ಜ್ಞಾನವನ್ನು ಬೋಧಿಸುವದು ಸಾಧ್ಯವಿಲ್ಲದಿದ್ದರೂ ಅವನನ್ನು ದಯಾದೃಷ್ಟಿಯಿಂದ ಕಂಡು ಪಾರಮಾರ್ಥಿಕ ವಿಷಯ[illegible] ಬಾಲ್ಯಾವಸ್ಥೆಯಿಂದ ಕ್ರಮೇಣ ವಿವೇಚಿಸಬೇಕು. ಸರ್ವ ಜಗತ್ತು ವಿಷ್ಣುಮಯವೆಂಬ ಸಿದ್ಧಾಂತವು ಸರ್ವಮತ ಸಮ್ಮತವೇ. ಇದರ ಪ್ರಕಾರ ಭಿನ್ನ ಮತಾವಲಂಬಿಗಳು ಪರಸ್ಪರ ಸ್ನೇಹಭಾವವನ್ನು ತೋರಿಸಬೇಕಾಗುವದು. ಭಾರತಭೂಮಿಯಲ್ಲಿ ಎಲ್ಲಾ ಪ್ರಾಮುಖ್ಯ ಮತಗಳಿದ್ದದರಿಂದ ಇಂತಹ ಅನ್ಯೋನ್ಯ ಭಾವವನ್ನು ತೋರಿಸಲವಕಾಶವಿದೆ. ಒಬ್ಬನು ಇನ್ನೊಬ್ಬನ ಶಾಸ್ತ್ರವನ್ನು ಕಲಿತು ತಿಳಿಯ ಬಹುದು.

ನಾವು ಸಂಗ್ರಹವಾಗಿ ಇಲ್ಲಿ ಕೊಟ್ಟ ಉಪನ್ಯಾಸದ ತಾತ್ಪರ್ಯವನ್ನು ನಮ್ಮ ದೇಶದ ವಿವಿಧ ಮತಾನುಸಾರಿಗಳು ಪರ್ಯಾಲೋಚಿಸಿ ಬಿಸೆಂಟ ದೊರೆಸಾನಿಯವರು ಬೋ

[illegible] ಸ್ವರಾಜ್ಯಕ್ಕೆ ಅದ್ಭುತತರವ [illegible]

ಮಗ್ಗದ ನೇಯಿಗೆ.

ವಿಲಾಯತಿಯ ಸ್ಪರ್ಧೆಯಿಂದ ಹೆಚ್ಚು ಜಗ್ಗಿದ ಸ್ವದೇಶಿ ಕೈಗಾರಿಕೆ ನೇಯಿಗಾರರದ್ದೆಂದು ಎಲ್ಲರೂ ಬಲ್ಲರು. ಪೂರ್ವದಲ್ಲಿ ಕಂಪನಿ ಸಾಹುಕಾರರು ಇಲ್ಲಿ ಕೊಳ್ಳುತ್ತಿರುವಾಗ ಇಲ್ಲಿಂದ ಹತ್ತಿ ಬಟ್ಟೆ ಕಾಶ್ಮೀರ ಶಾಲು ಮೊದಲಾದವುಗಳು ಪರದೇಶಗಳಿಗೆ ರಫ್ತಾಗುತ್ತಿದ್ದವು. ಕಂಪನಿಗೆ ರಾಜಪ್ರಾಪ್ತಿಯಾಗುತ್ತಾ ಈ ಕೈಗಾರಿಕೆ ಕ್ಷೀಣವಾಯಿತು. ಇತ್ತಲಾಗೆ ವಿಲಾಯತಿಯಿಂದ ಬರುವ ಬಟ್ಟೆಗಳ ಮೇಲಿನ ಸುಂಕವು ತೆಗೆದು ಹಾಕಿದ್ದರಿಂದ ನೇಯಿಗಾರರು ಮಗ್ಗಗಳನ್ನು ಬಿಟ್ಟು ಗದ್ದೆ ಹೊಲಗಳನ್ನು ಸೇರಬೇಕಾಯಿತು. ಸ್ವದೇಶೀ ಪ್ರವರ್ತನವು ಈ ಬಡವರ ಸಹಾಯಕ್ಕೆ ಬಂದದೆ.

ನೇಯಿಗಾರರನ್ನು ಉದ್ಧರಿಸಲಿಕ್ಕೆ "ಸ್ವದೇಶಿ" ಯಾವ ಮಾರ್ಗವನ್ನನುಸರಿಸಬೇಕೆಂದು ಬಡೋದೆಯ ವ್ಯವಸಾಯ ವ ಕೈಗಾರಿಕೆಗಳ ಡಿರೆಕ್ಟರ್ ರಾವ್ಜಿ ಬಿ ಪಟೇಲ್ ಇವರ ಉಪನ್ಯಾಸದಿಂದ ತಿಳಿಯುವದು. ಈಗಿನ ಕೈಮಗ್ಗಗಳ ವೇಗವನ್ನು 2 ಪಟ್ಟಿನಷ್ಟು ಹೆಚ್ಚಿಸಿದರೆ ಹಿಂದುಸ್ಥಾನದಲ್ಲಿ ಖರ್ಚಾಗುವ ವಸ್ತ್ರವೆಲ್ಲಾ ನಮ್ಮಲ್ಲಿಯೇ ನೇಯಬಹುದೆಂಬುದು ಇವರ ಮತವಾಗಿದೆ. ಈ ಸಿದ್ಧಾಂತವನ್ನು ವಿಶದಪಡಿಸಲಿಕ್ಕೆ ಇಲ್ಲಿ ಖರ್ಚಾಗುವ ವಸ್ತ್ರಗಳನ್ನು ನಾಲ್ಕು ವರ್ಗಗಳಾಗಿ ವಿಭಾಗಿಸಿದ್ದಾರೆ.

1. ಇದು ಬಹಳ ದೊರಗಾದ ಜಾತಿ, ಈ ಬಟ್ಟೆ ಬಹಳ ದಪ್ಪವೂ ಕೀಳು ತರಗತಿಯದೂ ಆಗಿದೆ. ಇದನ್ನು ಯಂತ್ರದಿಂದ ತಯಾರಿಸಲಾಗುವದಿಲ್ಲ. ಈ ಬಟ್ಟೆಯು ಮಟ್ಟಿಗೆ ಕೈಮಗ್ಗಗಳಿಗೂ ಯಂತ್ರದ ಮಗ್ಗಗಳಿಗೂ [illegible]ವಿಲ್ಲ.

2. ಒಳಗಿನ ಶರ್ಟ ವಸ್ತ್ರಗಳಿಗಾಗುವ ಸಾಧಾರಣ ದೊರಗು ಜಾತಿಯು. ಈ ಜಾತಿ ವಸ್ತ್ರಗಳನ್ನು ಉಗಿಯಂತ್ರದ ಮಗ್ಗಗಳಲ್ಲಿ ಬಹಳ ಸುಲಭವಾಗಿ ನೇಯಲಾಗುವದರಿಂದ ಕೈಮಗ್ಗಗಳು ಇವುಗಳ ಎದುರು ನಿಲ್ಲಲಾರವು. ಇಂಥಾ [illegible] ಬೇಕಾದ ನೂಲು ಹಿಂದುಸ್ಥಾನದ ಹತ್ತಿಯಿಂದ ಮಾಡಲ್ಪಡುವದು. ಇಲ್ಲಿಯ ಉಗಿಯಂತ್ರಗಳ ಸಹಾಯದಿಂದ ಈ ಬಟ್ಟೆಯುಂಟಾಗಬಹುದಾಗ ಪರದೇಶಗಳ ಪೈಪೋಟಿಯನ್ನು ನಿಲ್ಲಿಸಬಹುದು.

3. ಈ ಜಾತಿಯಲ್ಲಿ ನಾವು ಉಡುವ ಧೋತಿಗಳೂ ಹೆಂಗಸರ ಸೀರೆಗಳೂ ಸೇರುತ್ತವೆ. ಈ ತರಗತಿಯ ವಸ್ತ್ರಗಳ ನೇಯಿಗೆಯಲ್ಲಿ ಪರದೇಶಿಯ ಯಂತ್ರಗಳಿಗೂ ನಮ್ಮಲ್ಲಿಯ ಮಗ್ಗಗಳಿಗೂ ಹೋರಾಟವದೆ. ಅಗ್ಗ ಕೂಲಿ ಕೆಲಸ, ಕ್ರಯ ಕಡಿಮೆಯ ಮಗ್ಗ ಮತ್ತು (ಕೈಮಗ್ಗದಿಂದಾಗುವ) ದೀರ್ಘಕಾಲ ಬಾಳುವ ಬಟ್ಟೆ ಈ ಪ್ರಯೋಜನಗಳು ನಮ್ಮ ನೇಯಿಗಾರರ ಸಹಾಯಕ್ಕಿವೆ. ಆದರೂ ವಿದೇಶಿ ಯಂತ್ರಗಳನ್ನು [illegible] ಎರಡು ವಿಧಾನಗಳವೆ. ಅವಾವೆಂದರೆ — ಮಗ್ಗಗಳ ವೇಗವನ್ನು ಎರಡೂವರೆ ಪಾಲಷ್ಟು ಏರಿಸಬೇಕು. ಮತ್ತು ಸ್ವದೇಶೀಯ ಸ್ವಾವಲಂಬಿಗಳು ಈ ತೆರದ ವಸ್ತ್ರಗಳನ್ನು ಕೊಂಡುಕೊಳ್ಳುವಾಗ ಊರ ಮಗ್ಗಗಳಿಂದಾಗಿದ್ದನ್ನೇ ತಕ್ಕೊಳ್ಳಬೇಕು.

4. [illegible] ತರದ [illegible] ಮೊದಲಾದವುಗಳು — ಕೈಗಾರಿಕೆಯ [illegible] ಯಂತ್ರಗಳನ್ನು ಹಿಂದೆ ಬಿಡುವದ. ಈ ಜಾತಿ ಬಟ್ಟೆ ಬೇಕಾದ ನಾಜೂಕು ಹತ್ತಿ [illegible] ಹಿಂದುಸ್ಥಾನದಲ್ಲಿ ಬೆಳೆಸ ತೊಡಗಿದ್ದಾರೆ. ನಮ್ಮ ನೇಯಿಗಾರರು ಈ ಬಟ್ಟೆಗಳಿಗೆ ಮಿಸಿನಿನಲ್ಲಿ [illegible] ರೀತಿಯು ಒಳ್ಳೇದಲ್ಲ. ಇದರಿಂದ ವಸ್ತ್ರ ನಯವಾಗುವದೂ ಇಲ್ಲ, ಬಾಳುವದೂ ಇಲ್ಲ. ಈ ಕೆಲಸಕ್ಕೆ ಪ್ರತ್ಯೇಕ ಕಾರಖಾನೆಗಳನ್ನು ನಾಜೂಕು ವಸ್ತ್ರಗಳನ್ನು ನೇಯುವ ಸೀಮೆಗಳಲ್ಲಿ ಬೆಳ್ಳಿಗೋದರಂತೆ ಇಡಬೇಕು.

ರಾವ್ಜಿ ಪಟೇಲರು ಇಲ್ಲಿಯ ಮಗ್ಗಗಳಲ್ಲಿ ಯಾವ ಕುಂದುಗಳಿವೆ ಮತ್ತು ಅವುಗಳನ್ನು ಹೋಗಲಾಡಿಸಲಿಕ್ಕೆ ಮಗ್ಗದ ಯಾವ ಸಾಮಗ್ರಿಗಳನ್ನು ಎಂತಹ ರೀತಿಯಲ್ಲಿ ಬದಲಾಯಿಸಬೇಕೆಂಬದನ್ನು ವಿವರಿಸಿದ್ದಾರೆ. ಇವು ಆ ಕಸಬುದಾರರಿಗೇನೇ ತಿಳಿಯತಕ್ಕವು. ಎರಡು ವರುಷಗಳ ಇತ್ತಲಾಗೆ ಅನೇಕ ಹೊಸ ನಮೂನೆಯ ಮಗ್ಗಗಳನ್ನು ತಯಾರಿಸಿದ್ದಾರೆ. ಆದರೂ ಇವುಗಳಲ್ಲಿ ಹಲವು ಕೆಲಸಕ್ಕೆ ಬಾರದವುಗಳಾ [illegible] ಮಗ್ಗಗಳನ್ನು [illegible] ಕಳೆದ [illegible] ಕಾನ್ಫರೆನ್ಸಿನಲ್ಲಿ ಪ್ರದರ್ಶನ ಮಾಡಿದರು.

ಉತ್ತಮವೆಂದು ನಿಶ್ಚಿತವಾದ ಮಗ್ಗಗಳು ಪ್ರಚಾರಕ್ಕೆ ಬರುವಂತೆ [illegible] ಉಪಾಯಗಳನ್ನು ಸೂಚಿಸಿದ್ದಾರೆ — ನೇಯಿಗೆ ಶಾಲೆಗಳು — ಈ ಶಾಲೆಗಳಲ್ಲಿ ನೇಯಿಗೆಯ ಬೇರೇ ಮರ್ಮಗಳನ್ನು ಕಲಿಸಿದರೆ ಸಾಲದು. ವಿದ್ಯಾರ್ಥಿಗಳು [illegible] ಪ್ರಯೋಗಗಳನ್ನು ಕಲಿಯುವಂತೆ ಪ್ರತಿ ಶಾಲೆಗೆ ಒಂದು ಕಾರಖಾನೆಯನ್ನು ಹಚ್ಚಿ ನೂತನ ರೀತಿಯ ಮಗ್ಗಗಳನ್ನಿಡಬೇಕು. ನಮ್ಮ ನೇಯಿಗಾರರು ವಸ್ತ್ರಗಳಿಗೆ ಅಗತ್ಯವಿರುವ ನಕ್ಷೆಗಳನ್ನು ಕಲಿಯಲಿದೆ. ನೇಯಿಗೆ ನಕ್ಷೆಗಳನ್ನು ಕಲಿಸುವರೆ ಉಪಾಧ್ಯಾಯರನ್ನು ತಕ್ಕ ಶಿಕ್ಷಣದಿಂದ ಸಿದ್ಧಪಡಿಸಲಿಕ್ಕೆ ಒಂದೊಂದು ಸಂಸ್ಥಾನಕ್ಕೆ ಒಂದೊಂದರಂತೆ ಟ್ರೈನಿಂಗ್ ಸ್ಕೂಲುಗಳನ್ನು ಇಡತಕ್ಕದ್ದು.

ವಸ್ತು ಭಾಂಡಾರಗಳು ಇಂಥಾ ಬೋಧಕರಿಂದ ಶಿಕ್ಷಣ ಹೊಂದಿದ ನೇಯಿಗಾರರನ್ನು ಜಾಡರ ಹಳ್ಳಿಗಳಲ್ಲಿ ಮಗ್ಗವಿಟ್ಟು ಇರಿಸಬೇಕು. ಹೊಸ ಮಗ್ಗ ಹೊಸ ಶಿಕ್ಷಣಗಳ ಪ್ರಭಾವದಿಂದ ಈ ನವೀನ ಕಸಬುದಾರರು ತಮ್ಮಿಂದ ಮಿಗಿಲೆನಿಸುವದನ್ನು ಕಂಡು ಅವರ [illegible] ತಮ್ಮಿಂದ ತಾವೇ ಈ ಹೊಸ ರೀತಿಗಳನ್ನನುಸರಿಸುವರು. ಸ್ವದೇಶೀಯ [illegible] ಇಂತಹ ಕಾರಖಾನೆಗಳನ್ನು ಸ್ಥಾಪಿಸಿದರೆ ಬಡ ಜನರಿಗೂ ದೇಶಕ್ಕೂ [illegible]ಗುವದಲ್ಲದೆ ತಾವು ಹಣ ಸಂಪಾದಿಸಲೂ ಬಹುದು.

ದ್ರವ್ಯಸಹಾಯ — ಧನಿಕರು ಬಡ ಜಾಡರಿಗೆ ಹಣ ಸುಲಭವಾಗಿ ಕೊಟ್ಟು ಅವರಿಂದ ಹೊಸ ಮಗ್ಗಗಳಲ್ಲಿ ಕೆಲಸ ಮಾಡಿಸಿ ಅವರ ಉತ್ಪತ್ತಿಯಿಂದ ತಮ್ಮ ಹಣವನ್ನು ಪಡೆಯಬಹುದು.

ಈ ವಿಷಯದಲ್ಲಿ ನಮ್ಮ ಸರಕಾರದವರೂ ತನಿಖೆ ನಡಿಸಿ ಆಯಾ ಮಧ್ಯಸ್ಥಳಗಳಲ್ಲಿ ನೇಯಿಗೆ ಶಾಲೆಗಳನ್ನು ಸ್ಥಾಪಿಸಲಿಕ್ಕಿರುವರೆಂದು ಪಟೇಲರು ತಿಳಿಸುತ್ತಾರೆ. [illegible] ಸರಕಾರದವರೂ ದೇಶಾಭಿಮಾನಿಗಳೂ ಕೂಡಿ ಪ್ರಯತ್ನಪಟ್ಟರೆ [illegible] ಈ ಕೈಗಾರಿಕೆಯು [illegible] ದೇಶದ ಅನೇಕ ಬಡಜನರ [illegible]

ಆನಂದ ಮೋಹನ ಬೋಸರ ಜೀವನ ಚರಿತ್ರೆ

(4ನೇ ಸಂಚಿಕೆಯ [illegible]ನೇ ಪುಟದಿಂದ ಮುಂದೆ ಸಾಗಿಸಲ್ಪಟ್ಟದ್ದು)

ತನ್ನ [illegible] ಕೆಲಸ [illegible] ಹೊಂದಲಿಕ್ಕೆಂತ 1897ರಲ್ಲಿ ವಿಲಾಯತಿಗೆ ಹೋದವರು ಅಲ್ಲಿ ಹಿಂದುಸ್ಥಾನದ ಪ್ರಜೆಗಳ ಸಂಕಷ್ಟಗಳನ್ನು ಪ್ರಕಟಿಸಿ [illegible] ಉದ್ದೇಶದಿಂದ ಅನೇಕ ಸಭೆಗಳ ಮುಂದೆ ಭಾಷಣ ಕೊಟ್ಟರು. ಇದರಿಂದ ಗುಣವಾದ ಕಾಹಿಲೆಯು ತಿರುಗಿತು. ಇಂಗ್ಲಾಂಡಿನಲ್ಲಿ ಇವರು ದೇಶ ಹಿತಾರ್ಥವಾಗಿ ಪಟ್ಟ ಕಷ್ಟಕ್ಕಾಗಿ ಇವರನ್ನು ಕಾಂಗ್ರೆಸ್ ಸಭೆಯ ಅಧ್ಯಕ್ಷರಾಗಿ ನೇಮಿಸಿದರು. ಆ ವರುಷ (1898) ಮದ್ರಾಸಿನಲ್ಲಿ ನೆರೆದ ಕಾಂಗ್ರೆಸ್ ಸಭೆಯಲ್ಲಿ ಅಧ್ಯಕ್ಷರಾಗಿ ಕೊಟ್ಟ ಭಾಷಣವೊಂದೇ ಅವರ ಮಹತ್ತಿಕೆಯನ್ನು ಸ್ಥಾಪಿಸುವದು. ದೇಶದಲ್ಲಿ ತನಗಿದ್ದ ಮಾತೃವಾತ್ಸಲ್ಯವೂ ಜನರ ಮೇಲಿನ ಭ್ರಾತೃಸ್ನೇಹವೂ ಈ ಎರಡಕ್ಕೂ ಮೂಲವಾದ ಪರಮಾತ್ಮನಲ್ಲಿದ್ದ ತತ್ಪರ ಶ್ರದ್ಧಾಭಕ್ತಿಗಳೂ ಈ ಉಪನ್ಯಾಸದಲ್ಲಿ ಬೆಳಗಿ ಅಲ್ಲಲ್ಲಿ ವಾಚಕರ ಹೃದಯವನ್ನು ಕರಗಿಸುವವು. ಇದರ ಅತೀ ಚಿಕ್ಕ ಅಂಶವನ್ನು ಕನ್ನಡಿಸುವೆವು. ಇದರ ಸೌಂದರ್ಯ ಮಾಧುರ್ಯಗಳನ್ನು ಭಾಷಾಂತರಿಸಲಸಾಧ್ಯ. "ಭ್ರಾತೃಪ್ರತಿನಿಧಿಗಳೇ! ನಾವು ಈ ಭೂಮಿಯನ್ನು ಪ್ರೀತಿಸುತ್ತೇವೋ? ಇದು ನಮ್ಮ ಜನ್ಮಭೂಮಿಯು. ಪೂರ್ವದಲ್ಲಿ ಲೋಕವು ಬಾಲ್ಯಸ್ಥಿತಿಯಲ್ಲಿದ್ದು ಅನೇಕ ಜನಾಂಗಗಳು ತೊಟ್ಟಿಲೆಯಲ್ಲಿರುವಾಗ ಈ ಭೂಮಿಯ ಮೇಲೆ ದೇವತೆಗಳಿಗೆ ಅನುರಾಗವಿತ್ತೆಂದು ಹೇಳುತ್ತಾರೆ. ನಮ್ಮ ಈ ದೇಶವು ವಿದ್ಯಾ ಸುಧಾರಣೆಗಳ ತೌರುಮನೆಯು. ಇಲ್ಲಿ ತತ್ವಜ್ಞಾನಿಗಳು ಪ್ರಪಂಚದ ಗೂಢಾರ್ಥವನ್ನರಿಯಲು ಅಗಾಧ ತಪವೆಸಗಿದರು. ಇನ್ನೂ ನಮ್ಮ ಹೃದಯದಲ್ಲಿ ನೆಲೆಗೊಂಡ ಆರ್ಯ ಧರ್ಮತತ್ತ್ವ ಗರ್ಭಿತವಾದ ಪ್ರಥಮ ಮಂತ್ರಗಳನ್ನು ಋಷಿಗಳು ಇಲ್ಲಿ ರಚಿಸಿದರು. ಪಾರಮಾರ್ಥಿಕ ವಿಷಯಗಳಿಗೆ ನಮ್ಮ [illegible] ಗೋಚರವಾದವು. * * * [illegible] ಸಾತ್ಮ್ಯವಾದದ್ದು. ನಮ್ಮ [illegible]

[illegible] ದೇವರೂ ನಮ್ಮ [illegible] ಯುದ್ಧಕ್ಕೆ ನಡೆದರು. ನಮ್ಮ [illegible] "ದೇವರೂ ಮಾತೃಭೂಮಿಯೂ" ಎಂಬ ಘೋಷದಿಂದ ನಮ್ಮ [illegible] ಪ್ರಜಾಭಿವೃದ್ಧಿಯನ್ನೂ, ರಾಜನಿಷ್ಠೆಯನ್ನೂ ವೃದ್ಧಿಸುವಾ. [illegible] ನಮ್ಮೆಲ್ಲವರ ಮಾತೆಯಾದ ಈ ಭಾರತಭೂಮಿಯಲ್ಲಿಯೂ ನಮ್ಮ ಮನಸ್ಸಾಕ್ಷಿಯಲ್ಲಿಯೂ, ನಮ್ಮಲ್ಲಿ ತಲೆದೋರುವ ಉದಾತ್ತ ಕಲ್ಪನೆಗಳಲ್ಲಿಯೂ ವಿಶ್ವಾಸವಿಟ್ಟು ನಡಿಯುವಾ. ನಾವು (ಈ ಸಭೆಯಿಂದ) ಮನೆಗೆ ತಿರುಗಿ ನಮ್ಮ ದಿನಚರ್ಯೆಗಳನ್ನು ನಡಿಸುವಾಗ ಮುಂಚಿಗಿಂತ ತಕ್ಕಷ್ಟು ಹೆಚ್ಚು ದೇಶವಾತ್ಸಲ್ಯದಿಂದಲೂ ನಮ್ಮ ಜೀವನವು ಸಮಾಪ್ತವಾಗುವದರೊಳಗೆ ಒಳ್ಳೇಯವರಾಗಬೇಕು, ಸತ್ಯವಂತರಾಗಬೇಕು ಪರೋಪಕಾರಿಗಳಾಗಬೇಕೆಂಬ ಆಸಕ್ತಿಯಿಂದಲೂ ನಡಿಸುವಾ".

ಈ ಮಹಾತ್ಮನ ಚರಿತ್ರೆಯ ಕಡೇ ಅಂಕವು ಎಂಥಾ ಹೃದಯವನ್ನೂ ಕರಗಿಸುವದು. ವಂಗಭಂಗದ ಕಾನೂನು ಜಾರಿಗೆ ಬಂತು. ಕೀರ್ತಿಯ ಎರಡು ಪಾಲಾದರೂ ತಾವು ಇನ್ನೂ ಒಂದೇ ಜನಾಂಗದವರು, ಒಕ್ಕಟ್ಟಾಗಿರುವೆವೆಂದು ಬಂಗಾಳಿಯವರು ನಿಶ್ಚಯಿಸಿದರು. ಈ ನಿರ್ಧಾರವನ್ನು ಸೂಚಿಸಲಿಕ್ಕೆ ಫಿಡರೇಶನ್ ಹಾಲ್ ಎಂಬ ಒಂದು ಮಂದಿರವನ್ನು ಗಡಿಯ ಆಚೆಯಿಂದ ಈಚೆಗೆ ಕಟ್ಟಿಸುವ ಮನಸ್ಸು ಮಾಡಿದರು. ಈ ಸದನಕ್ಕೆ ಅಸ್ತಿವಾರದ ಕಲ್ಲನ್ನಿಡಲಿಕ್ಕೆ ಬೋಸರನ್ನು ನೇಮಿಸಿದರು. ಹಾಸಿಗೆ ಹಿಡಿದ ಶೂರನು ದೇಶಾನುರಾಗದ ಕೃತ್ಯಕ್ಕಾಗಿ ಪಲ್ಲಕ್ಕಿಯಲ್ಲಿ ಕುಳಿತು [illegible] ದನು. ಆದರೆ ನಿಲ್ಲುವಷ್ಟಾಗಲಿ, ತಾನು ತಯ್ಯಾರಿಸಿದ ಉಪನ್ಯಾಸವನ್ನು ತಾನೇ ಓದುವಷ್ಟಾಗಲಿ ಶಕ್ತಿ ಇರಲಿಲ್ಲ. * * * ದೈವಯೋಗದಿಂದ ಕಷ್ಟದಿಂದಲೂ, ಒಳ್ಳೇದು ಹುಟ್ಟುವದು. ಕಾರ್ಮುಗಿಲಿನಿಂದ ಪ್ರಾಣಪ್ರದವಾದ ಮಳೆಯು ಸುರಿಯುವದು. ಹುದ್ದೇದಾರರಿಂದ ಮಾಡಲ್ಪಟ್ಟ ವಿಭಾಗದಿಂದ ನಮ್ಮ ಒಕ್ಕಟ್ಟು ಇನ್ನೂ ಬಲವಾಗಿದೆ. ನಮ್ಮಲ್ಲಿ ಬೇರೆ ಬೇರೆ ಮತಗಳಿದ್ದರೂ ಮಾತೃಭೂಮಿಯ ಕಡೆಗೆ ನಾವು ಆಚರಿಸಬೇಕಾದ ಧರ್ಮವು ಒಂದೇ ಆಗಿದ್ದು ಈ ಧರ್ಮವು ನಮ್ಮೆಲ್ಲರನ್ನೂ ಐಕ್ಯದಲ್ಲಿರಿಸುವದು. ಮಿತ್ರರೇ, ಮಾತೃಭೂಮಿಯ [illegible] ಸಂಘವೆಂಬ ಒಂದು ಸಮಾಜವನ್ನು ಸ್ಥಾಪಿಸಿರಿ, ಮತ್ತು ನಿಷ್ಕಳಂಕ [illegible] ದಲೂ, ಮಹೋದ್ದೇಶದಿಂದಲೂ, ಪರಿಶುದ್ಧ, ಉದಾತ್ತ, ನಿರಹಂಕಾರ ಭಾವದಿಂದಲೂ ದೇಶದ ಸೇವೆ ನಡಿಸಿರಿ. ನಿಮ್ಮ ಒನ್ನ ಭೂಮಿಗೋಸ್ಕರ [illegible] ಲಕ್ಷಾವಧಿ ಜನರು ಉಪವಾಸವಿರುವರು. ಇಂದು ನಮ್ಮ [illegible] ಇಲ್ಲ. ಆದರೆ ನಮ್ಮ ಹೃದಯದ ಜ್ವಾಲೆಯು ಉರಿಯಲಿ. ನಮ್ಮ ಜೀವವು ಶುದ್ಧೀಕರಿಸಲಿ. ಮಿತ್ರರೇ ನಿಮಗೆ ಒಳ್ಳೇದಾಗಲಿ. ಬಹುಶಃ ಈ [illegible] ಲೋಕದಲ್ಲಿ ನಿಮ್ಮ ಸಂಗಡ ಆಡುವ ಕಡೇ ಮಾತುಗಳು ಇವೇ. * * *

ನಮ್ಮ ಭೂಮಿಯು ಸೂರ್ಯನು ಮುಳುಗುವ ಭೂಮಿಯಲ್ಲ. ಯಾಕಂದರೆ ಆ ಅಬ್ಧಾನವು [illegible] ಸ್ವಾರ್ಥತ್ಯಾಗಿಯೂ [illegible] ಆದ ಒಬ್ಬನ ದೇಶದ ಸೊತ್ತಾಗಿದೆ. ಆದರೆ ನಮ್ಮ ದೇಶವು ಕಂತಿದ ಸೂರ್ಯನು ಪುನಃ ಉದಯಿಸುವ ಭೂಮಿಯೆಂದು ಹೇಳ ಕೂಡದೋ? ಇಲ್ಲಿ [illegible] ಕವಿದಿದ್ದ ಅಂಧಕಾರವು ಹೋಗಿ ಇಂಗ್ಲಂಡಿನ ಮತ್ತು ಇಂಗ್ಲಿಷ ಶಿಕ್ಷಣದ ಸಹಾಯದಿಂದ (ಇಂಗ್ಲಂಡಿನ ಈ ಉಪಕಾರವನ್ನು ಕೃತಜ್ಞತೆಯಿಂದ ಒಪ್ಪುತ್ತೇನೆ) ಪ್ರಜ್ವಲಿಸುವ ಬೆಳಕು ತಿರುಗಿ ಪಸರಿಸುವದು. ನಾವು ಹಿಂದ ಮಾರ್ಗವನ್ನು ಆಶೀರ್ವದಿಸಿ ನಮಗೆ ದಾರಿ ತೋರಿಸಿ ನಮ್ಮ ಧೈರ್ಯವನ್ನು ವೃದ್ಧಿ ಪಡಿಸೆಂದು ಕೃಪಾಸಾಗರನನ್ನು ಪ್ರಾರ್ಥಿಸುವಾ. (ಬರೇ) ಮಾತಲ್ಲ, ಕೃತ್ಯಗಳು ನಮ್ಮ ಉದ್ದಿಷ್ಟವಾಗಿರಲಿ. * * * *

* * * * [illegible] ದೇವ, ಈ ಪುರಾಣ ಭೂಮಿಪಾಲಕನೇ, ಆರ್ಯಾವರ್ತದ ರಕ್ಷಕನೇ (ಭಿನ್ನ ಮತಾವಲಂಬಿಗಳಿಂದ ನಮ್ಮಿಂದ) ಭಿನ್ನ ಹೆಸರುಗಳಿಂದ ಕರೆಯಲ್ಪಟ್ಟರೂ, ನಮ್ಮೆಲ್ಲರ ಕರುಣಾಳುತಾತನೇ, ಇಂದು ನಮ್ಮ ಸಂಗಡ ಇರು. ತಂದೆಯು ಮಕ್ಕಳನ್ನು ತೋಳುಗಳಲ್ಲಿ ಅಪ್ಪಿಡುವಂತೆ ನೀನು ನಮ್ಮನ್ನು ನಿನ್ನ ಪವಿತ್ರವಾದ ರಕ್ಷಣೆಯಲ್ಲಿಡು". ಇದು ಬೋಸರ ಅಂದಿನ ಉಪನ್ಯಾಸದ ಅಂಶವಾಗಿದೆ. ದಯಾನಿಧಿಯು ಈ ತನ್ನ ಭಕ್ತನ ಮೊರೆಯನ್ನು ಕೇಳಿ ಅವನನ್ನು ಇಹ ಕಷ್ಟಗಳಿಂದ ವಿಮೋಚಿಸಿ ತನ್ನ ರಕ್ಷಣೆಯಲ್ಲಿ ತಕ್ಕೊಂಡನು. ಕಳೆದ ಆಗೊಸ್ಟ 22ರಲ್ಲಿ ಗುಣಾಢ್ಯನು ಪರಮಪದವನೈದಿದನು.

[illegible] ಮಾತೆಯು ಸಕಲ [illegible] ಇವರ [illegible] ಕಣ್ಣೀರಿಂದ ತೋಯಿಸಿದರು. "ಭೂಲೋಕದ ಅತ್ಯಂತ ಉದಾತ್ತ ನಿಷ್ಕಳಂಕ ಮಹಾತ್ಮ ಪುರುಷರಲ್ಲೊಬ್ಬನ ಶವವು ಈ ಚಟ್ಟಿಯಲ್ಲಿ ಮಲಗಿರುವದೆ", ಎಂದು ಈ ಸಂದರ್ಭದಲ್ಲಿ ಸುರೇಂದ್ರನಾಥ ಬೆನರ್ಜಿಯವರು ಹೇಳಿದ ಮಾತು ಇವರ ಚರಿತ್ರೆಯನ್ನು ಚುಟುಕಾಗಿ ವರ್ಣಿಸುವದು. ಸರ್ವಶಕ್ತಿಯು ಇವರಿಗೆ ಧಾರಾಳವಾಗಿ ಇತ್ತ ಬುದ್ಧಿ ಕೌಶಲ್ಯಕ್ಕೆ ಅಭ್ಯಾಸದಿಂದ ಶಿಕ್ಷಣ ಕೊಟ್ಟು ದೇಶದ, ದೇಶೀಯರ, ಮತ್ತು ದೇವರ ಸೇವೆಗೆ ಜೀವನವನ್ನು ಅರ್ಪಿಸಿದರು. ತನ್ನ ಸತ್ಯ, ಔದಾರ್ಯ, ಶ್ರಮಶೀಲತೆ, ಧೈರ್ಯ, ವಿನಯ, ದೇಶಾಭಿಮಾನ, ಮುಂತಾದ ಸದ್ಗುಣಗಳಿಗೆಲ್ಲಾ ಇವರಲ್ಲಿ ಹೊಳೆಯುತ್ತಿದ್ದ ಭಕ್ತಿಯು [illegible] ಯಾಗಿತ್ತು. ಈ ಭಕ್ತಿಯ ಪ್ರಾಬಲ್ಯವು ಇವರು ಕೈಕೊಂಡ ಎಲ್ಲಾ ಕಾರ್ಯಗಳಲ್ಲಿಯೂ ತೋರುತ್ತಿತ್ತು. ಇಂತಹ ಪರಂಜ್ಯೋತಿರ್ಮಯವಾದ ಆತ್ಮವು ನಕ್ಷತ್ರದ ಹಾಗೆ [illegible] ನವರಿಗೆ ದಾರಿ ತೋರಿಸುವದು.

ಕನ್ಯಾವಿತಂತುಗಳ ವಿವಾಹ

———o———

ಹಿಂದೂ ಶಾಸ್ತ್ರಜ್ಞರು ಶಾಸ್ತ್ರಾಧಾರಗಳನ್ನು ಕಂಡು ಹಿಡಿದು ಬಾಲವಿಧವೆಯ ವಿವಾಹವು ಶಾಸ್ತ್ರಸಮ್ಮತವಾದರೆ ಅದನ್ನು ಪ್ರಚಾರ ತರುವದು ಸಮಾಜದ ಐಕ್ಯಕ್ಕೂ [illegible] ಹಿತಕಾರಿಯೆಂದು ಹಿಂದಿನ ಸಂಚಿಕೆಯಲ್ಲಿ ಸೂಚಿಸಿದೆವು. ಪೂರ್ವ ಬಂಗಾಳದ [illegible] ಒಬ್ಬ ಉಪಾಧ್ಯಾಯನು ಬಾಲವಿಧವೆಯಾದ [illegible] ಮಾಡಿಕೊಟ್ಟಿದ್ದಕ್ಕಾಗಿ ಮೂರು ವರುಷಕ್ಕೆ ಮೊದಲು ಅವನನ್ನು [illegible] ಕಳೆದ ಸೆಪ್ಟಂಬರ್ ಕೊನೆಯಲ್ಲಿ ಮುಂಬಯಿ [illegible] ಇವರಿಗೆ ಜಾತಿ ಸಿಕ್ಕಿತೆಂದು ತಿಳಿಯುತ್ತದೆ. ಬಾಲ ವಿಧವೆಯರ [illegible] ಪ್ರಕಾರಕ್ಕೆ ಬಂದರೆ ಭ್ರೂಣ ಹತ್ಯಾದಿ ಅನೇಕ ದುಷ್ಕರ್ಮಗಳು ನಿಲ್ಲುವವು. ಮತ್ತು ಈ ಕಟ್ಟಳೆಯು ಕ್ರಮೇಣ ಆಚರಣೆಗೆ ಬರುವದೆಂದು ನಿಸ್ಸಂದೇಹ. ಹೀಗಿರುವಾಗ ಈ ಮತವನ್ನವಲಂಬಿಸಿದವರನ್ನೆಲ್ಲಾ ಜಾತಿಯಿಂದ ತಳ್ಳಿ [illegible] ಜಾತಿಯನ್ನುಂಟುಮಾಡುವದಕ್ಕಿಂತ ಶಾಸ್ತ್ರಗಳಲ್ಲಿ ಇಂತಹ ಕಟ್ಟಳೆಗೆ ಆಧಾರವಿದ್ದರೆ ಅದನ್ನು ಜಾತಿಯಲ್ಲಿಯೇ ರೂಢಿಗೆ ತರುವದು ಉತ್ತಮ.

[illegible] ತಾ 22ನೇ ಶುಕ್ರವಾರ ನಮ್ಮ ಜಿಲ್ಲೆಯಲ್ಲಿ ಮೊದಲನೇ ವಿಧವಾ ವಿವಾಹ [illegible] ರಘುನಾಥಯ್ಯನವರ ಮೊಮ್ಮಗಳನ್ನು [illegible] ಕೃಷ್ಣರಾವ್ ಬಿ. ಎ., ಬಿ. ಎಲ್. ಇವರು ಪಾಣಿಗ್ರಹಣ ಮಾಡಿದರು. [illegible] ರಘುನಾಥಯ್ಯನವರೇ ನಮ್ಮ ಜಿಲ್ಲೆಯಲ್ಲಿ ಪ್ರಥಮ ಹೆಜ್ಜೆಯನ್ನು [illegible] ನಮ್ಮ ಮನಸ್ಸಿನ [illegible] ಗಳಿಗೆ ಸರಿಯಾಗಿ ಕಾರ್ಯತಃ ನಡೆಸುವ ಧೈರ್ಯ [illegible] ಇವರಲ್ಲಿದ್ದದನ್ನು ನೋಡಿ ತುಂಬಾ ಸಂತೋಷಿಸುತ್ತೇವೆ.

"ಆನೆಯ ಬಯಂಕರವಾದ ಮಾತ್ಸರ್ಯ."

ಬಂಗಾಳದ [illegible] ಎಂಬ ಒಂದು ಗ್ರಾಮದಲ್ಲಿ ಒಬ್ಬ ಶಿಕಾರಿಯವನಿದ್ದನು. ಅವನು ತನ್ನ ಹೊಲಕ್ಕೆ ಹೋಗಲು ಅಲ್ಲಿ ಅನೇಕ ಆನೆಗಳ ಪೈರನ್ನು ತಿನ್ನುತ್ತಿದ್ದವು. ಈತನು ಒಂದು ಏಕಾಂತವಾದ ಸ್ಥಳದಲ್ಲಿ ನಿಂತ ಅವುಗಳ ಮೇಲೆ ಅನೇಕ ಅಂಬುಗಳನ್ನು ಹಾಕಿದನು. ಅವುಗಳಲ್ಲಿ ಒಂದರ ಏಟು ತಗಲಿ ಒಂದು ಆನೆ ಮರಿಯು ಸತ್ತು ಹೋಯಿತು. ಕೂಡಲೇ ಈ ಆನೆಗಳೆಲ್ಲಾ ಅಂಬು ಎಲ್ಲಿಂದ ಬಂತೋ ಆ ಕಡೆಗೆ ಹೊರಟವು. ಅವನು ಅಲ್ಲಿಂದ ಓಡಿ ಹೋಗಿ ಸಮೀಪದಲ್ಲಿದ್ದ ಒಂದು ಗುಡಿಸಲನ್ನು ಸೇರಿದನು. ಇವುಗಳೆಲ್ಲಾ ಹೋಗಿ ಆ ಗುಡಿಸಲನ್ನು ನಾಶಮಾಡುವದಕ್ಕೆ ಉಪಕ್ರಮ ಮಾಡಿದವು. ಕೂಡಲೇ ಅವನು ಆ ಮನೆಯ ಹಿಂದೆಯಲ್ಲಿದ್ದ ಒಂದು [illegible] ಹತ್ತಿ ಬಹಳ ಎತ್ತರದಲ್ಲಿರತಕ್ಕ ಒಂದು ಕೊಂಬೆಯನ್ನು ಆಕ್ರಮಿಸಿ ಕೂತನು. ಆ ಗಿಡವು ಬಹಳ ಬಲವಾಗಿತ್ತು. ಆದಾಗ್ಯೂ ಸಲಗಗಳು ವಿಪರೀತ ರೋಷಾವೇಶದಿಂದ ಘರ್ಜಿಸುತ್ತಾ ಆ ಗಿಡವನ್ನು ಕಿತ್ತು ಹಾಕುವದಕ್ಕೆ ಪ್ರಯತ್ನ ಮಾಡಿದವು. ಸ್ವಲ್ಪ ದೂರ ಹೋಗಿ ಅಲ್ಲಿಂದ ಅತಿರಭಸದಿಂದ ಅನೇಕ ಆನೆಗಳು ಆ ಮರವನ್ನು ತಮ್ಮ ಕೊಂಬುಗಳಿಂದ ಘಾತಿಸುತ್ತಲೂ ಸೊಂಡಿಲುಗಳಿಂದ ಎಳೆಯುತ್ತಲೂ ಬಂದವು. ಕೂಡಲೇ ವರ್ತಮಾನವನ್ನು ಕೊಟ್ಟು ಇನ್ನೊಂದು ಆನೆಗಳ ಗುಂಪನ್ನು ಕರೆದುಕೊಂಡವು. ತರುವಾಯ ಗಿಡವನ್ನು ಕೀಳುವುದು ಕಷ್ಟವಾದುದರಿಂದ ಇವುಗಳೆಲ್ಲಾ ನೀರಿನ ಒಳಗೆ ಹೋಗಿ ಸೊಂಡಲುಗಳಲ್ಲಿ ನೀರನ್ನು ತೆಗೆದುಕೊಂಡು ಬಂದು ಗಿಡದ ಬುಡಕ್ಕೆ ನೀರನ್ನು ಹಾಕಿ ಸಡಲಿಸುವದಕ್ಕೆ ಉಪಕ್ರಮ ಮಾಡಿದವು. ಹೀಗೆಯೇ ಮಹನತ್ತು ಪಟ್ಟು ಕೊನೆಗೆ ಗಿಡವನ್ನು ಕೆಡವಿ ಆ ಮನುಷ್ಯನನ್ನು ಕೊಂದು ಕೊನೆಗೆ ತೃಪ್ತಿಯನ್ನು ಹೊಂದಿದವು. ಈ ಕಾಡುಮೃಗಗಳಿಗೆ ಆಶಾ [illegible] ವನ್ನು ಸಾಧಿಸುವ ಶಕ್ತಿಯು ಇಷ್ಟು ವಿಚಿತ್ರವಾಗಿರುತದೆ.

ಪ್ರಪಂಚದ ವರ್ತಮಾನಗಳು

ಚೀನಾ ದೇಶದ ಪುರಾತನ ನಾಗರೀಕತೆಯನ್ನೂ ಇತಿಹಾಸಗಳನ್ನೂ ಅದರ ಜನರ ಈಗಿನ ಸ್ಥಿತಿಗತಿಗಳನ್ನೂ ವಿಲಾಯತಿಯ ಜನರಿಗೆ ಗೊತ್ತುಪಡಿಸುವಂತೆ, "ಚೈನಾ ಸೊಸೈಟಿ" ಎಂಬದೊಂದು ಸಂಘವು ಲಂಡನಿನಲ್ಲಿ ಏರ್ಪಡಿಸಲ್ಪಟ್ಟಿದೆ. ವಿಲಾಯತಿಯಲ್ಲಿರುವ ಚೀನಾ ರಾಜ ಧೂತರಾದ ವಾಂಗ್ ಟಾಸ್ಯಯರೂ, ಕಿಂಗ್ಸ್ ಕಾಲೇಜ್ ಪ್ರೊಫೆಸರರಾದ ಸರ್ ರೋಬರ್ಟ ಡಗ್ಲಾಸ್ ಎಂಬವರೂ ಈ ಸಂಘದ ಅಧ್ಯಕ್ಷರಾಗಿರುತ್ತಾರೆ. ಅಮೇರಿಕದ ಮತ್ತು ಜಪಾನ, ಲಂಡನ್ ರಾಯಭಾರಿಗಳು ಇದರ ವ್ಯಾಯಿಸ್ ಪ್ರೆಸಿಡೆಂಟರಾಗಿರುತ್ತಾರೆ. ಈ ಸಂಘದ ಪ್ರಥಮ ಸಭೆಯು ವೆಸ್ಟ್ ಮಿನಿಸ್ಟರ್ ಕೆರ್ಸ್ಟನ್ ಹಾಲಿನಲ್ಲಿ ಜರಗಿತು. ಚೀನಾ ರಾಯಭಾರಿಗಳು ಈ ಸಮಯದಲ್ಲಿ ಕ್ರಿಸ್ತಶಕದ ಮುಂಚಿನ 1000 ವರುಷಗಳ ಹಿಂದೆ ಚೀನಾ ಸಾಮ್ರಾಜ್ಯವಿತ್ತೆಂದೂ ರಾಜಕಾರ ಕ್ರಮವು ಪ್ರಜಾ ಪ್ರತಿನಿಧಿಗಳ ಸಭೆ ಪದ್ಧತಿಯನ್ನನುಸರಿಸಿತ್ತೆಂದೂ ಇವೇ ಮೊದಲಾದ-ಅನೇಕ ಚೀನಾ ದೇಶದ ಪ್ರಾಚೀನ ನಾಗರಿಕತೆಯ ವಿಷಯವಾಗಿ ಒಂದು ಉಪನ್ಯಾಸವನ್ನೋದಿದರು.

ನಮ್ಮ ಮಾಜಿ ವ್ಯಾಸರಾಯ ಕರ್ಜನ್ ಪ್ರಭುಗಳು ಒಕ್ಸ್‌ಫರ್ಡ ವಿಶ್ವವಿದ್ಯಾಲಯದ (ಚೆನ್ಸಲರ್) ಪ್ರಧಾನ ಪದವಿಗೆ ಉಮೇದ್ವಾರರಾಗಿದ್ದಾರೆ.

ಹಿಂದುಸ್ಥಾನದಿಂದ ಚೀನಾ ದೇಶಕ್ಕೆ ರಫ್ತಾಗುವ ಅಫೀನ್ ತೆಗೆಯ ಕಾನೂನು ಮಸೂದೆಗಳನ್ನು ಬ್ರಿಟಿಷ ಪಾರ್ಲಿಮೆಂಟಿನವರಲ್ಲಿ ಹಲವರು ನ್ಯಾಯವಿರುದ್ಧವೆಂತ ಚರ್ಚಿಸಿದ್ದರಿಂದ ಈ ಅಫೀನಿನ ವ್ಯಾಪಾರದ ಕಾನೂನನ್ನು ಟೈಮ್ಸ್ ಪತ್ರಿಕೆಯ ಒಬ್ಬ ಪೆಕಿಂಗ್ ಬಾತ್ಮೀದಾರರು ಪಟ್ಟ ಅಭಿಪ್ರಾಯದ ಮೇರೆಗೆ ಇಂಡಿಯಾ ಗವರ್ನಮೆಂಟಿನವರು ತಮಗೆ ಯುಕ್ತಕಂಡ ರೀತಿ ಬದಲಾಯಿಸುವರೆಂದು ಮೆಚ್ಚೆ ದೊರೆಗಳು ಹೇಳಿರುವರು.

ಪ್ರಚಂಡವಾದ ಬಿರುಗಾಳಿ ದೆಸೆಯಿಂದ ಯುರೋಪ ಖಂಡದ ಪಶ್ಚಿಮ ಭಾಗದಲ್ಲಿಯೂ ಬ್ರಿಟನ್ನಲ್ಲಿಯೂ ತಂತೀ ಟಪ್ಪಾಲು ಅಲ್ಲಲ್ಲಿ ಕ್ಲಪ್ತಸಮಯದಲ್ಲಿ ಒಂದು ತಲ್ಪುವದೆ ಅಭ್ಯಂತರ ಉಂಟಾಗಿದೆ.

ತೆಹರಾನಿನಲ್ಲಿ ಜರ್ಮನ್ ಮಿಶನ್ ಪಾದ್ರಿಗಳಲ್ಲೊಬ್ಬನು ಕೊಲ್ಲಲ್ಪಟ್ಟನು. ಪರ್ಶಿಯನ್ ಸರಕಾರದವರು ಈ ವಿಷಯ ಆ ದೇಶದವರಿಂದ ಪರಿಹಾರ ಕೇಳಿರುತ್ತಾರೆ.

ಗ್ಲಾಸ್ಗೊ ಪಟ್ಟಣದಲ್ಲಿ ಅನೇಕ ಮಂದಿ ವಿಷಮ ಜ್ವರದಿಂದ ಸಾಯುತ್ತಿರುವರು. ಈ ಜ್ವರದ ಹೆದರಿಕೆಯು ಪಟ್ಟಣದಲ್ಲೆಲ್ಲಾ ಹರಡಿ ನಿವಾಸಿಕರೆಲ್ಲರೂ ಬಹಳ ಯೋಚನೆಯಲ್ಲಿರುವರು.

ಇನ್ನು ಕೆಲವು ದಿವಸಗಳಲ್ಲಿ ಕೂಡಲಿಕ್ಕಿರುವ ರುಸ್ಸ್ಯಾ ದೇಶದ ಡ್ಯೂಮಾ ಎಂಬ ಪ್ರಜಾಪ್ರತಿನಿಧಿ ಸಭೆಗೆ, ಈಗಿನ ರಾಜಭಾರ ಕ್ರಮಕ್ಕೆ ವಿರೋಧ ಪಕ್ಷದವರೇ ಹೆಚ್ಚಾಗಿ ಆರಿಸಲ್ಪಟ್ಟಿರುತ್ತಾರಂತೆ.

ನಿ ಚೀನಾ ದೇಶದಲ್ಲಿ ಇಂಗ್ಲೀಷ ಮತ್ತು ಜಪಾನಿಯರಿಂದ ತರಬೇತಾದ ಒಂದು ನಾವಿಕಸೈನ್ಯವನ್ನು ಏರ್ಪಡಿಸುವರೆ ನಿರ್ಧರಿಸಿರುತ್ತಾರಂತೆ. ಈ ಬಗ್ಗೆ ಚೀನಾದೇಶದಲ್ಲಿ ಅಲ್ಲಲ್ಲಿ ಶಾಲೆಗಳು ಸ್ಥಾಪಿಸಲ್ಪಡುವವು.

ಚೀನಾ ಸಾಮ್ರಾಜ್ಯದಲ್ಲಿ ಸ್ವಾಸ್ಥ್ಯಗಳನ್ನು ಸ್ಥಾಪಿಸಿರುವ ಅನ್ಯದೇಶೀಯರೆಲ್ಲರಿಗೂ ತಮ್ಮ ತಮ್ಮ ಸ್ವಾಸ್ಥ್ಯಗಳಲ್ಲಿರುವ ಚೀನಿಯರು ಅಫೀನನ್ನು ಅತಿರೇಕ ಉಪಯೋಗಿಸದ ಹಾಗೆ ಚೀನಾ ಸರಕಾರದವರು ಏರ್ಪಡಿಸಿದ ಕಾನೂನುಗಳನ್ನು ಈ ವಿದೇಶಸ್ಥರು ತಮ್ಮ ಸ್ವಾಸ್ಥ್ಯಗಳಲ್ಲಿ ಸಹಾ ಜಾರಿಗೆ ತರುವಂತೆ ಚೀನಾ ಸರಕಾರದವರು ವಿನಂತಿ ಮಾಡಿರುತ್ತಾರೆ. ಅಲ್ಲಿಯ ಬ್ರಿಟಿಷರು ಚೀನಿಯರ ಅಪೇಕ್ಷೆಯಂತೆಯೇ ವರ್ತಿಸುವರಂತೆ.

ಮಿ। ಥಿಯೋಡರ್ ಡೇವಿಸ್ ಎಂಬವರು ಥೀಬ್ಸ್ ಎಂಬಲ್ಲಿ ಈಜಿಪ್ತ ದೇಶದ ಪ್ರಖ್ಯಾತಿಗೊಂಡ ಪ್ರಾಚೀನ ರಾಣಿಯರ ಒಂದು ಘೋರಿಯನ್ನು ಅಗದು ನೋಡಲು ಅದರಲ್ಲಿ ಪರಿಮಳದ್ರವ್ಯಗಳಿಂದ ತುಂಬಿದ ಶವದ ಪೆಟ್ಟಿಗೆಯು ಸಿಕ್ಕಿತು. ಶವವು ಚಿನ್ನದ ತಗಡುಗಳಿಂದ ಮುಚ್ಚಲ್ಪಟ್ಟಿತ್ತು. ಶವದ ತಲೆಗೆ ಪ್ರಾಚೀನ ಈಜಿಪ್ತ ರಾಣಿಯರ ಸುವರ್ಣಖಚಿತ ಕಿರೀಟವಿತ್ತು. ಶವದ ಪೆಟ್ಟಿಗೆಯೂ ಸಹಾ ಅನೇಕ ಚಿನ್ನಾಭರಣಗಳಿಂದ ಅಲಂಕರಿಸಲ್ಪಟ್ಟಿ[illegible] ಅದರೊಳಗೆ ಈ ರಾಣಿಯ [illegible] ಸ್ಫಟಿಕ ಪ್ರತಿಮೆಗಳೂ ಇನ್ನೂ ಅನೇಕ ಅಪರೂಪ ವಸ್ತುಗಳು ಸಿಕ್ಕಿದವು. ಅನೇಕ ವರುಷಗಳ ಹಿಂದೆ ಹೂಳಿದ್ದ ಈ ರಾಣಿಯ ಶವವು ಏನೂ ಹಾಳಾಗದೆ ಒಳ್ಳೇ ಸ್ಥಿತಿಯಲ್ಲಿತ್ತು.

ಅಮೆರಿಕದ ಸಿನೆಟ್ ಸಭೆಯ [illegible] ಜಪಾನಿ[illegible] [illegible] United States (ಸಂಯುಕ್ತ ಸಂಸ್ಥಾನಗಳು) ಸಹಾ [illegible] ಕಾನೂ[illegible] [illegible] ಎಂದು ಈ [illegible] ಕಾಂಗ್ರೆಸ್ಸಿನೊಳಗಿನ [illegible] ಮತ್ಯವು [illegible]

ಉತ್ತರ ಹಿಂದುಸ್ಥಾನ.

ಅಮೀರರು ಕಲ್ಕತ್ತೆಯ ವಸ್ತುಪ್ರದರ್ಶನಕ್ಕೆ ಹೋದಾಗ್ಯೆ ಅಲ್ಲಿಯ ದೇವಾಲಯಗಳನ್ನು ನೋಡಿ ಆನಂದವನ್ನು ಪ್ರಕಾಶಪಡಿಸಿದರು. ಸುತ್ತಲಿರುವವರು ಒಂದು ಶಿರೋಭೂಷಣವನ್ನು ತೋರಿಸಿ ಇದು ಹೆಂಗಸರೂ ರಾಜರೂ ತೊಡುವ ಆಭರಣವೆಂದು ತಿಳಿಸಲು "ರಾಜರು ಹೆಂಗಸರೇ? ಎಂದು ಕೇಳಿದರಂತೆ. ತೊಡವುಗಳು ಸ್ತ್ರೀ ಸಹಜವಾದದ್ದು ಪುರುಷರಿಗೆ, ಅದರಲ್ಲಿಯೂ ಯೋದ್ಧರಾದ ರಾಜರಿಗೆ, ತಕ್ಕದಲ್ಲವೆಂದು ಅಮೀರರ ಮರ್ಮಭೇದಿಯಾದ ಈ ಮಾತುಗಳಿಂದ ನಮ್ಮ ರಾಜರು ತಿಳಿದು ವಸ್ತ್ರಾಭರಣಗಳ ಡಂಭವನ್ನು ತೆಗೆಯಬೇಕೆಂದು ಒಬ್ಬ ಪತ್ರಕರ್ತರು ಟೀಕೆ ಮಾಡುವರು.

ಮುಂಬಾಯಿಯ ಮನೋರಂಜಕ ಗ್ರಂಥಪ್ರಸಾರಕ ಮಂಡಳಿಯವರು ("Indian Worthies") ಹಿಂದುಸ್ಥಾನದ ಪುಣ್ಯ ಪುರುಷರು ಎಂಬ ಹೆಸರಿನಿಂದ ಒಂದು ಗ್ರಂಥಮಾಲೆಯನ್ನು ಪ್ರಕಟಿಸುತ್ತಿರುವರು. ಈ ಮಾಲೆಯಲ್ಲಿ ಮೊದಲನೇ ಗುಂಪು ಪ್ರಕಟವಾಗಿದೆ. ಇದರಲ್ಲಿ ಹಾಯಿಕೋರ್ಟ ಜಡ್ಜ ತೇಲಂಗ, ಮ॥ ಗೋಖಲೆ, ದಕ್ಷಿಣ ಸಂಸ್ಥಾನಾಧಿಪತಿ ಸರ್ ಟಿ. ಮಾಧವರಾವ್, ಜಿ. ಎಸ್. ತಾತಾ, ಎ. ಕೆ. ಚೆಟ್ಟುನ್ನರ, ಮತ್ತು ದಾದಾಭಾಯಿ ನವರೋಜಿ ಇವರುಗಳ ಜೀವನ ಚರಿತ್ರೆಗಳಿರುವವು. ದೇಶಾಭ್ಯುದಯ ತತ್ಪರರ ಈ ಚರಿತ್ರೆಯನ್ನು ಈ ಸಂಧಿಯಲ್ಲಿ ದೇಶಾಭಿಮಾನಿಗಳೆಲ್ಲರೂ ಓದತಕ್ಕದ್ದು.

ದೇಶೀಯ ಔಷಧದ ಗಿಡಮೂಲಿಕೆಗಳ ವಿಷಯ ತಿಳಿದಿರುವ ಸಂಗತಿಗಳನ್ನು ಸಂಗ್ರಹಿಸುವದಕ್ಕೆ ಇಂಡ್ಯಾ ಗವರ್ನಮೆಂಟನವರು ಏರ್ಪಾಡು ಮಾಡಿದ್ದಾರೆಂದು ತಿಳಿಯಬರುತ್ತದೆ.

ತಕ್ಕಾ—(ಪೂರ್ವ ಬಂಗಾಳೆ) ಇಲ್ಲಿ ಒಂದು ಸ್ವದೇಶಿ ಬಜಾರು ಸ್ಥಾಪಿಸಲ್ಪಟ್ಟಿತು. ಈ ಸಂತೆಯು ಪ್ರತಿ ಆದಿತ್ಯವಾರ ೩ ಘಂಟೆಯಿಂದ ಕತ್ತಲಾಗುವ ವರೆಗೆ ನೆರೆಯುವದು. ಇಲ್ಲಿ ಗೃಹಕೃತ್ಯಕ್ಕೆ ಬೇಕಾದ ಎಲ್ಲಾ ಸ್ವದೇಶಿ ಸಾಮಾಗ್ರಿ ಮಾರಾಟಕ್ಕೆ ಬರುತ್ತದೆ. ಇದೇ ಸಾರ್ಥಕವಾದ ಸ್ವದೇಶಿ.

ಬರೇಲಿ (ಉತ್ತರ ಹಿಂದುಸ್ಥಾನ) ಯ "ಬನಿಯಾ" ಜಾತಿಯವರು ವಿದೇಶಿ ಸಕ್ಕರೆ ಮಾರಲಿಕ್ಕಿಲ್ಲವೆಂದು ಕಟ್ಟುಮಾಡಿ ತಮ್ಮ ಜಾತಿಯ ಎಲ್ಲಾ ವರ್ತಕರಿಂದ ಸಕ್ಕರೆಯನ್ನು ಹಿಲಾಲು ಮಾಡಿದರು. ದಯಾರಾಮ ಎಂಬವನೊಬ್ಬನೇ ಮಾತು ಕೇಳದಿರಲು "ನಾವು ನಿನ್ನನ್ನು ಜಾತಿಯಿಂದ ತಳ್ಳಿದ್ದೇವೆ ಮತ್ತು 100 ರೂಪಾಯಿ ದಂಡ ಹೊರಿಸಿದ್ದೇವೆ, ನೀನು ಭಾಂಗಿ" ಎಂದು ಕೂಟದವರಲ್ಲೊಬ್ಬನು ಹೇಳಿದನು. ಈ ಸಂಗತಿ ಮೇಲೆ 8 ಜನರ ಮೇಲೆ ಕ್ರಿಮಿನಲ್ ವ್ಯವಹರಣೆ ನಡೆದು ಬರೇಲ ಮೇಜಿಸ್ಟ್ರೇಟರು ಪ್ರತಿ ಒಬ್ಬನಿಗೂ 25 ರೂಪಾಯಿ ಜುರುಮಾನೆ ವಿಧಿಸಿದರು. ಸೆಶನ್ ಕೋರ್ಟನವರು ಈ ಶಿಕ್ಷೆಯು ಅಕ್ರಮವೆಂದು ರದ್ದುಮಾಡಲಿಕ್ಕೆ ಹೈಕೋರ್ಟಿಗೆ ಶಿಫಾರಸು ಮಾಡಿದರು. ಮುದ್ದೆಯಾಳಿಗೆ ಶಿಕ್ಷೆ ಬಿಟ್ಟುಹೋಯಿತು.

ಇಡೀ ಹಿಂದುಸ್ಥಾನದಲ್ಲಿ ಫೆಬ್ರುವರಿ ತಾ 16ಕ್ಕೆ ಅಂತ್ಯವಾಗುವ ವಾರದಲ್ಲಿ ೨೩,೪೧೧ ಪ್ಲೇಗು ಮರಣಗಳಿದ್ದವು. ಪಂಜಾಬಿನಲ್ಲಿ ೯,೪೧೦, ಸಂಯುಕ್ತ ಸೀಮೆಗಳಲ್ಲಿ ೬,೫೭೬, ಬೊಂಬಾಯಿ ೨,೫೭೩, ಬಂಗಾಳದಲ್ಲಿ ೨,೦೭೧, ಮಧ್ಯ ಸಂಸ್ಥಾನಗಳಲ್ಲಿ ೧,೬೬೭, ಮಧ್ಯ ಹಿಂದುಸ್ಥಾನದಲ್ಲಿ ೩೮೩, ಮೈಸೂರಿನಲ್ಲಿ ೧೬೭, ಬರ್ಮಾ ದೇಶದಲ್ಲಿ ೪೧೯, ಮದ್ರಾಸಿನಲ್ಲಿ ೨೩ ಮರಣಗಳಿದ್ದವು.

ಕಲಿಕತ್ತೆಯಲ್ಲಿನ ಕೆಲವು 'ಸ್ವದೇಶಿ' ಪತ್ರಿಕೆಗಳು ವಿದೇಶಿ ವಸ್ತುಗಳ ಪ್ರಕಟಣೆಗಳನ್ನು ಛಾಪಿಸಿ, ಪ್ರಕಟಿಸಲಿಕ್ಕಿಲ್ಲೆಂಬ ನಿರ್ಣಯವನ್ನು ಮಾಡಿರುತ್ತಾರಂತೆ.

ಹೋದ ಸರ್ತಿಯ ಮಹಮ್ಮದೀಯರ ಬಕ್ರೀದ ಹಬ್ಬದ ಸಮಯ ಅಮೀರರ ಅಪೇಕ್ಷೆ ಮೇರೆಗೆ ಹಿಂದುಸ್ಥಾನದಲ್ಲಿ ಅನೇಕ ದಿಕ್ಕುಗಳಲ್ಲಿ ಗೋಹತ್ಯ ಮಾಡದ್ದರೂ ಕಲಿಕತ್ತೆಯ ಕಸಾಯಿ ಎಂಬ ಕೇರಿಯಲ್ಲಿ ಮಹಮ್ಮದೀಯರು ಗೋಹತ್ಯ ಮಾಡಿದರು. [illegible] ದಿನ ಕಲ್ಕತ್ತೆಯನ್ನು [illegible]

[illegible] ಸ್ಥಾನದಲ್ಲಿ [illegible] ಸ್ಥಾಪಿಸಿದರು. ಮಹಮ್ಮದೀಯರು [illegible] ಹೇಳಿ ದರೂ ಧನಗಳು ಅವರಿಗೆ ಸಿಕ್ಕದೆ ಹೋದವು. ಕಡೆಗೆ ಎರಡು ತಂಡಿನವರಿಗೂ ಜಗಳ ಹತ್ತಿ ಅನೇಕ ಮಂದಿ ಗಾಯ ಪಡೆದರು. ಅಷ್ಟರಲ್ಲಿಯೇ ಹಿಂದುಗಳಲ್ಲಿ ಒಬ್ಬ ನು ಸತ್ತು ಬಿದ್ದನೆಂಬ ವರ್ತಮಾನವು ಆ ಗೌಡಿಯಲ್ಲಿ ಹುಟ್ಟಿ ಹಿಂದುಗಳ ಮೇಲೆಯೂ ದೊಡ್ಡ ತಪ್ಪು ಸ್ಥಾಪಿ ಸಲಿಕ್ಕೆ ಮಹಮ್ಮದೀಯರು ತಮ್ಮ ತಮ್ಮ ಮನೆಗೆ ಬೆಂಕಿ ಕೊಟ್ಟರು. ಇಷ್ಟರಲ್ಲಿ ಪೋಲೀಸಿನವರು ಬಂದು ಎರಡು ಕಡೆಯುವರಲ್ಲಿ 15, 16 ಜನರನ್ನು ಕೈದು ಮಾಡಿದರು. ಈ ಮೊಕದ್ದಮೆಯು ಅಲ್ಲಿಯ ಸಬ್ ಡಿವಿಜನಲ್ ಆಫೀಸ ರರಲ್ಲಿ ತನಿಖೆಯಾಗುತ್ತದೆ.

ಬ್ರಿಟಿಷ ಮತ್ತು ಅನ್ಯದೇಶೀಯ ಬ್ಯಾಬಲ್ ಸಂಘದ ಕಲಿಕತ್ತೆಯ ಸಹಾಯಕ ಕಮ್ಮಿಟಿಯವರು ವಿದೇಶೀ ಬಹಿ ಷ್ಕಾರ ಮತ್ತು ಸ್ವದೇಶೀ ಚಳವಳಿಯಿಂದ, ಅನ್ಯದೇಶದಲ್ಲಿ ತಯಾರಿಸಲ್ಪಟ್ಟ ಬೈಬಲ್ ಪುಸ್ತಕಗಳು ಮಾರಿ ಹೋಗದೆ ಬಾಕಿ ಇರುತ್ತವೆಂತ ತಿಳಿಸುತ್ತಾರೆ.

ಸುಂದರಿಯಾ ಮತ್ತು ನಾರಾಯಣಿ ಎಂಬ ಇಬ್ಬರು ಸ್ತ್ರೀಯರು ಒಂದು ಹಬ್ಬದ ಸಮಯದಲ್ಲಿ ಕೊನಪುರ ಅ ಚ್ಛೇರಾ ರೈಲ್ವೆಯಲ್ಲಿ ಪ್ರಯಾಣ ಮಾಡುತ್ತಿರುವಾಗ ರೈಲ್ವೆ ಸಿಬಂದಿಯಲ್ಲಿರುವ ಬ್ರಾಯನ್ ಮತ್ತು ಗೋವ್ಸ್ ಎಂಬ ವರು ತಮ್ಮ ಇನ್ನು ಇಬ್ಬರು ಸ್ನೇಹಿತರೊಂದಿಗೆ ಆ ಇಬ್ಬರು ಸ್ತ್ರೀಯರಿರುವ ಕೋಣೆಯ ಹತ್ತರದ ಇನ್ನೊಂದು ಕೋ ಣೆಗೆ ಬಂದು, ರೈಲ್ವೆಗಾಡಿಯು ನಡಿಯುತ್ತಿರುವಾಗ ಸ್ತ್ರೀ ಯರಿರುವ ಕೋಣೆಯ ಮಾಡಿನ ಮೇಲೆ ಅವರಲ್ಲೊಬ್ಬನು ಏರಿ ಸ್ತ್ರೀಯರ ಕೋಣೆಯ ದೀಪವನ್ನು ನೊಂದಿಸಿದನು. ಇವರಲ್ಲಿ ಬ್ರಾಯನ್ ಮತ್ತು ಗೋವ್ಸ್ ಎಂಬವರು ದೀಪವು ನೊಂದಿದ ಕೂಡಲೇ ಸ್ತ್ರೀಯರಿರುವ ಕೋಣೆಗೆ ಬಂದು ಸ್ತ್ರೀಯರ ಬಾಯಿ ಮೇಲೆ ಕೈಮುಚ್ಚಿ ಬಲೋದ್ಬಂದಿ ನಡಿಸ ಪ್ರಯತ್ನಿಸಲು ಆ ಸ್ತ್ರೀಯರು ಮಾನಭಂಗವನ್ನು ತಾಳಲಾರದೆ ಘಟ್ಟಿಯಾಗಿ ಕೂಗಿ ರೈಲ್ವೆ ಗಾಡಿಯಿಂದ ಹೊರಗೆ ಹಾರ ಪ್ರಯತ್ನಿಸುವದನ್ನು ಅದೇ ರೈಲ್ವೆ ಕಾವಲುಗಾರನು ಕಂಡು ರೈಲ್ವೆ ಘಂಟೆಯನ್ನು ನಿಲ್ಲಿಸಿ ಮರುಸ್ಟೇಶನಿನಲ್ಲಿಯೇ ಈ ಇಬ್ಬರನ್ನೂ ಹಿಡಿದ್ದು ರೈಲ್ವೆ ಪ್ರೆಸಿಡ್ ಮೆನೇಜರರಿಗೆ ಈ ವಿಷಯವನ್ನು ತಂತೀ ಮೂಲಕ ತಿಳಿಸಿ ಈ ನಾಲ್ಕು ಜನ ಕೈದಿಯವರ ಮೇಲೆ ಮೆಜಿಸ್ಟ್ರೇಟರಲ್ಲಿ ರಿಪೋರ್ಟು ಮಾಡಿದನು. ಇವರಲ್ಲಿ ಬ್ರಾಯನನಿಗೆ ಮಾತ್ರ 100 ರೂಪಾಯಿ ಜುರುಮಾನೆ ಆಯಿತು. ಸರಕಾರದವರು ಈ ತಪ್ಪಿಗೆ ಸರಿಯಾದ ಶಿಕ್ಷೆಯನ್ನು ಕೊಡಲಿಲ್ಲವೆಂದು ಈ ಮೊಕದ್ದಮೆಯನ್ನು ಹೈಕೋರ್ಟಿನಲ್ಲಿ ತನಿಖೆ ನಡಿಸಿದ್ದಲ್ಲಿ ಹೈಕೋರ್ಟಿನವರು ಬ್ರಾಯನನಿಗೆ 12 ತಿಂಗಳ ಕಠಿಣ ಕಾಮಗಿರಿ ಶಿಕ್ಷೆಯನ್ನು ವಿಧಿಸಿದರು.

ಅಮೀರರು ಬೊಂಬಾಯಲ್ಲಿ ಅಧಿ ಮತ್ತು ಸೇವಿ ಸ್ಟೋರ್ಸ್ನಿಂದ ಹತ್ತು ಸಾವಿರ ರೂಪಾಯಿ ಕ್ರಯದ ಸಾಮಾ ನುಗಳನ್ನು ಕೊಂಡು ಕೊಂಡು ಹೊರಗೆ ಬರುತ್ತಿರುವಾಗ ಒಬ್ಬ ಮಹಮ್ಮದೀಯನು ಜನರ ಗುಂಪಿನಿಂದ ಅಮೀರರ ಹತ್ತಿರ ಹೋಗಿ ತನ್ನ ಹತ್ತರವಿರುವ 800 ವರುಷ ಹಿಂದಿನ ಕೋರಾನ್ ಪುಸ್ತಕಗಳ 22 ಸಂಚಿಕೆಗಳನ್ನು ಅಂಗೀಕರಿಸಬೇಕೆಂಬ ಅರ್ಜಿಯನ್ನು ಅಮೀರರ ಕೈಯಲ್ಲಿ ಕೊಟ್ಟನು. ಬೀಗೆ ಅಸಹ್ಯದಿಂದ ತಿಳುಹಿ ಕೊಟ್ಟ ಅರ್ಜಿಯನ್ನು ನೋಡಿ ಅಮೀರರು ಕೋಪಿಸಿದರಂತೆ.

ಇದೇ ದಿನದಲ್ಲಿ ಅಮೀರರು ಹಾರ್ಮಸ್ಟನ್ ಸರ್ಕಸಿಗೆ ಹೋಗಿದ್ದರು.

ಅಮೀರರು ಬರುವ ವರುಷದ ಅಂಗ್ಲೋ ಫ್ರೆಂಚ ವಸ್ತುಪ್ರದರ್ಶನದ ಸಮಯದಲ್ಲಿ ನಮ್ಮ ಎಡ್ವರ್ಡ ಮಹಾರಾಜರ ಅತಿಥಿಗಳಾಗಿ ವಿಲಾಯತಿಗೆ ಹೋಗುವ ಆಲೋಚನೆಯಲ್ಲಿರುತ್ತಾರೆ.

ಕಲಿಕತ್ತೆಯ ಆಯುರ್ವೇದ ಶಾಸ್ತ್ರಜ್ಞರಾದ ಕವಿರಾಜರು, ಮದ್ರಾಸ್ ಆಯುರ್ವೇದ ಪಂಡಿತ, ಡಿ. ಗೋಪಾಲಾಚಾರ್ಯರಿಗೆ ಭೀಷಕಮಣಿ ಎಂಬ ಬಿರುದನ್ನು ಅವರ ಆಯುರ್ವೇದ ನೈಪುಣ್ಯಕ್ಕಾಗಿ ಕೊಟ್ಟಿರುತ್ತಾರೆ.

ಅಮೀರರು ಕಳೆದ ತಿಂಗಳ ತಾರೀಕು 25ಕ್ಕೆ ಬೊಂಬಾಯಿಯಿಂದ ಹೊರಟಿರುತ್ತಾರೆ.

ಕಳೆದ ತಿಂಗಳ ತಾರೀಕು 21ರಲ್ಲಿ ಬೊಂಬಾಯಿಯಲ್ಲಿ ಮುನಿಸಿಪಲ್ ಆಫೀಸಿನಲ್ಲಿ ಕಾರ್ಪೊರೇಶನ್ ಮೆಂಬರರನ್ನು ಆರಿಸುವದರಲ್ಲಿ ಬಹಳ ಗದ್ದಲವಿತ್ತು. [illegible] ಫಿರೋಜ ಶಾ ಮೆಹತಾರವರನ್ನು ಆರಿಸದ ಹಾಗೆ ಕೆಲವು [illegible] ಪ್ರಮುಖರು ಪ್ರಯತ್ನಿಸಿದರು 'ಟೈಮ್ಸ್' ಪತ್ರಿಕೆಯ [illegible] ರಿಂದ ಬಾದ ಕೂಗಲೇ ಸುಮಾರು ನೂರು [illegible] ಓಯಸನು ತಾನು ತಮ್ಮ [illegible] ಮನೆಯಿಂದ ಸಹಿ [illegible] ತಂದ ಫಿರೋಜ ಶಾ ಮೆಹತಾರ ವಿರೋಧ ಪಕ್ಷಕ್ಕೆ [illegible] ನಾಮದಾರ್ [illegible] ನಿಸಿಫಲ್ [illegible] ದರು [illegible] ಫಲ್ ಕಮಿಶನರು ಈ [illegible] ವೆಂದರು ಯಾರಿಗ್ಯಾರ [illegible] ಇದೇ ದಿವ ತಿಳಿಯಲಿಲ್ಲ. ಆದರೆ ಮೆಹತಾರವರ ಪಕ್ಷ ಬೇರೆ ನಾಲ್ಕು ಜನರು ಸಹ [illegible] ಇದೆ.

ಲೋಕತೋರಿನಲ್ಲಿ ಪ್ರಕಟಿಸಲ್ಪಡುವ 'ಪಂಜಾಬಿ' ಎಂಬ ಪತ್ರಿಕೆಯ ಪತ್ರಿಕಾ ಕರ್ತ [illegible] ಪ್ರಕಟಿಸುವ ಅದರ ಧನಿಗೂ, ಇಂಗ್ಲೀಷರಿಗೂ, ಮಹಮ್ಮದೀಯರಿಗೂ ಪರಸ್ಪರ ಜನಾಂಗ ದ್ವೇಷವನ್ನುಂಟು ಮಾಡುವಂತೆ ಇವರು ಕೆಲವು ಸಂಗತಿಗಳನ್ನು ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಿದ್ದರಿಂದ ಲಾಹೋರು ಡಿಸ್ಟ್ರಿಕ್ಟ್ ಕೋರ್ಟಿನವರು ಪತ್ರಿಕಾ ಕರ್ತರಿಗೆ 200 ರೂಪಾಯಿ ಜುರುಮಾನೆ 6 ತಿಂಗಳ ಶಿಕ್ಷೆಯನ್ನೂ ಪತ್ರಿಕೆಯ ಮಾಲಿಕರಿಗೆ 1000 ರೂಪಾಯಿ ಜುರುಮಾನೆಯನ್ನೂ 2 ವರುಷದ ಶಿಕ್ಷೆಯನ್ನೂ ವಿಧಿಸಿದರು. ಸುರೇಂದ್ರನಾಥ ಬೆನರ್ಜಿ ಮೊದಲಾದ ಅನೇಕ ಜನ ಉತ್ತರ ಹಿಂದುಸ್ಥಾನದ ಪ್ರಜಾ ನಾಯಕರು ಈ ರೀತಿ ಕೊಡಲ್ಪಟ್ಟ ಶಿಕ್ಷೆಯ ಉದ್ದೇಶ್ಯವನ್ನು ನೆರವೇರಿಸುವ ಬದಲಿಗೆ, ಜನರನ್ನು ಸರಕಾರದ ವರಿಗೆ ವಿಮುಖರನ್ನಾಗಿ ಮಾಡುವದೆಂದು ಹೇಳುವರು. ಈ ಕಠಿಣ ಶಿಕ್ಷೆಯನ್ನು ಅಪೀಲು ಕೋರ್ಟಿನವರು ತೀರ ದುಹಾಕುವರೆಂದು ಎಲ್ಲರೂ ಕೋರುತ್ತಾರೆ.

ದಕ್ಷಿಣ ಹಿಂದುಸ್ಥಾನ.

ಕಳೆದ ತಿಂಗಳ 17ನೇ ತಾರೀಕು ಆದಿತ್ಯವಾರ ಬೆಳಗ್ಗೆ 7 ಘಂಟೆಗೆ Theosophical Society (ಬ್ರಹ್ಮಜ್ಞಾನ ಸಂಘ) ಯ ಸ್ಥಾಪಕರಾದ ಕರ್ನಲ್ ಎಚ್. ಎಸ್ ಒಲ್ಕಾಟ್ರವರು ಪರಮಪದಿಸಿದರು. ಈ ಮಹನೀಯರಿಂದ ನಮ್ಮ ಧರ್ಮಕ್ಕೆ ಹೊಸಚೇತನ ಉಂಟಾಗಿ ಧರ್ಮವು ಊರ್ಜಿತಕೆ ಬರುವಂಥಾಯಿತು. ಎನಿಬಿ ಸೆಂಟ್ ದೊರೆಸಾನಿಯನ್ನು ತನ್ನ ಉತ್ತರಾಧಿಕಾರಿಯಾಗಿ ನೇಮಿಸಿದ್ದಾರೆ.

ವಿಶಾಖ ಪಟ್ಟಣದಲ್ಲಿ ಸ್ವದೇಶೀ ನೂಲು ಮತ್ತು ವಸ್ತ್ರಗಳನ್ನು ತಯ್ಯಾರಿಸುವ ಕಾರಖಾನೆಯಲ್ಲಿ ಶೇಕಡಾ 8ರ ಮುನಾಫೆ ಸಿಕ್ಕಿರುತ್ತದೆಂದು ಈ ಕಾರಖಾನೆಯ ಡಿರೆಕ್ಟರರು ತಿಳಿಸಿರುತ್ತಾರೆ. ಶೇಕಡಾ 8ರ ಮುನಾಫೆಯು ಬೇರೆಯವರಿಂದ ಶೇಕಡಾ 12ರಂತೆ ಬಡ್ಡಿಗೆ ಋಣ ತರುವ ವ್ಯಾಪಾರಸ್ಥರಿಗೆ ಬಹಳ ಅಲ್ಪವೆಂದು ತೋರುವದು ಸಹಜವೇ. ಆದರೆ ಇಂತಹ ಉದ್ದಿಮೆಗಳು ಮಿತಘಂಡವಾಳ ಪ್ರಕ್ರಮದಿಂದ ಏರ್ಪಡಿಸಲ್ಪಟ್ಟವು. [illegible] ಶೇಕಡಾ 3, 4ರಂತೆ ವಿದೇಶಿ ಬೆಂಕುಗಳಲ್ಲಿಯೂ, ವಿದೇಶಿ ವ್ಯಾಪಾರಸ್ಥರಲ್ಲಿಯೂ ಹಣ ಠೇವಣಿಯಾಗಿರುವ ಧನಿಕರು ಸಹಕಾರದಿಂದ ಕೈಗಾರಿಕೆ ಕಾರಖಾನೆಗಳನ್ನು ಸ್ಥಾಪಿಸಿದ್ದಲ್ಲಿ ತಮ್ಮ ಹಣಕ್ಕೆ ಇಮ್ಮಡಿ ಲಾಭವೂ ಅನೇಕ ಬಡ ಜನರ ಉದರ ಪೋಷಣೆಯೂ ಆಗುವದು. ಅಂತವರಿಗೆ ಶೇಕಡಾ 8ರ ಮುನಾಫೆಯಾದರೆ ಸಹ ಪ್ರಯೋಜನ.

[illegible] ದೊರೆಯವರು ಬರುವ ಮೇ ತಿಂ [illegible] ಕ್ಕೆ ಹೋಗುವರು. ಅಮೇ [illegible] ಎರಡುವಾರ ಅಲ್ಲಿ ಇದ್ದು [illegible] ಕ್ಕೆ ಹೋಗುವರು. ಮು [illegible] ತಿಂಗಳಲ್ಲಿ ಹಿಂ [illegible] ನವೆಂಬರ ತಿಂಗಳಲ್ಲಿ ಮದ್ರಾಸಿಗೆ ಬರುವರು. ಅಲ್ಲಿಂದ ಕನ್ನೆವೆನಷನ್ ಕೆಶ್ಲೇಸ್ವರ ಬೆನಾರಸಿಗೆ ಹೋಗುವರು.

ಅರ್ಬತ್‌ನೋಟ್ ಕಂಪೆನಿಗೆ ಸಾಲ ಕೊಟ್ಟವರ ಕಾಮಿಟಿ ಮೊದಲಿನ ಸಭೆ ಕಳೆದ ಪ್ರಥಮ ಸಭೆಯು ಹೋದ ತಿಂಗಳಲ್ಲಿ ಜರಗಿತು. ಸಭೆಗಳ ಮೇಲೆ ಸಭೆಗಳು ಜರಗುವವು ವಿನಹಾ ಇಷ್ಟರ ವರೆಗೆ ಈ ಕಂಪೆನಿಯವರ ಲೆಕ್ಕಾಚಾರದ ಸ್ಥಿತಿಯು ಇನ್ನೂ ಅಂದಿನಂತೇ ಇದೆ. ಹಣ ಠೇವಣಿಯಾಗಿಟ್ಟವರಿಗೆ ರೂಪಾಯಿಯಲ್ಲಿ ಏನು ಸಿಕ್ಕುವದೆಂಬುದು ಯಾರಿಗೂ ತಿಳಿಯದು. ಲೆಕ್ಕ ಪರಿಶೋಧಕರ ಕೆಲಸವು ಇನ್ನೂ ತೀರದಿರುವದರಿಂದ ಈ ಸರ್ತಿಯ ಸಭೆಯು ಏನೊಂದು ಪ್ರಯೋಜನವನ್ನೆಸಗದೆ ಹೋಯಿತು. ಇದೇ ಮೀಟಿಂಗನ್ನು ಮಾರ್ಚಿ ತಾ. 11ಕ್ಕೆ, ದಿವಾಳಿ ಅರ್ಜಿಯನ್ನು ತನಿಖೆಗೆ ಅದೇ ತಿಂಗಳ ತಾ 18ಕ್ಕೆ ಇಟ್ಟಿರುತ್ತಾರೆ.

ರಾಜಮಹೇಂದ್ರಿಯ 'ವಂದೇ ಮಾತರಂ' ಮಹೋತ್ಸವ. ಕಳೆದ ಶಿವರಾತ್ರಿ ಸಮಯದಲ್ಲಿ 'ಬಾಲ

[illegible] ಒಂದು [illegible] ಬಹಿಷ್ಕಾರಗಳ [illegible] ಸ್ಥಾಪಿಸಲ್ಪಟ್ಟಿತು. ಶಿವರಾತ್ರಿ ಸಮಯದಲ್ಲಿ ಈ ಸಂಘದವರೂ ಬೇರೆ ಹಲವು ಜನ ಊರ ಪ್ರಮುಖ ನಿವಾಸಿಕರೂ ಒಟ್ಟು ಕೂಡಿ ದೊಡ್ಡ ಮೆರವಣಿಗೆಯಲ್ಲಿ ಕೋಟಿಲಿಂಗ ಕ್ಷೇತ್ರ ಎಂಬ ಸ್ಥಳಕ್ಕೆ ಹೋದರು. ಎಲ್ಲಾ ಜಾತಿಯವರೂ ಈ ಮೆರವಣಿಗೆಗೆ ಬಂದಿದ್ದರು. ಮೆರವಣಿಗೆಯು ನಡಿಯುತ್ತಿ ಹಾದಿಯಲ್ಲಿ ವಿದ್ಯಾರ್ಥಿಗಳು ಬಂಕಿ ಚಂದ್ರ ಚಟೋಪಾಧ್ಯಾಯರ 'ಆನಂದಮಠ' ಎಂಬ ಕಾದಂಬರಿಯಲ್ಲಿಯ 'ವಂದೇ ಮಾತರಂ' ಹಾಡನ್ನು ಅಲ್ಲಲ್ಲಿ ಹಾಡುತ್ತಿದ್ದರು. ಕೋಟಿಲಿಂಗ ಕ್ಷೇತ್ರದಲ್ಲಿ ಮೆರವಣಿಗೆಯು ಬಂದು ತಲುಪುತ್ತಲೇ ರಾ. ವೀರಭದ್ರರಾವ್ ಮತ್ತು ಹರಿಸರ್ವೋತ್ತಮ ರಾಯರೆಂಬ ಇಬ್ಬರು ಗೃಹಸ್ಥರು ಸ್ವದೇಶೀ ವಿಷಯ ಉಪನ್ಯಾಸವನ್ನು ಮಾಡಿದರು. ಸ್ವದೇಶೀ ಚಳವಳಿಯ ಪ್ರಾಬಲ್ಯವು ಹೀಗೆ ಮೆಲ್ಲ ಮೆಲ್ಲನೆ ಉತ್ತರ ಹಿಂದುಸ್ಥಾನದಿಂದ ದಕ್ಷಿಣ ಹಿಂದುಸ್ಥಾನದಲ್ಲಿ ಪ್ರಸರಿಸಿದ್ದನ್ನು ನೋಡಿ ತುಂಬಾ ಸಂತೋಷ ಪಡುತ್ತೇವೆ

ದಕ್ಷಿಣ ಕನ್ನಡ.

ಪ್ಲೇಗ್. ತಾರೀಕು 26ನೇ ಫೆಬ್ರವರಿಯಲ್ಲಿ ಅಂತ್ಯವಾಗುವ ವಾರದಲ್ಲಿ ಪ್ಲೇಗ್ ರೋಗದಿಂದ ೬ ಮರಣಗಳಿದ್ದವು. ೫ ಜನರು ರೋಗ ಹಿಡಿದವರಿದ್ದರು.

ಮಂಗಳೂರು. ಈ ಸರ್ತಿಯ ಮಹಮ್ಮದೀಯರ ಮೊಹರಮ್ ಹಬ್ಬವು ಕಳೆದ ಎರಡು ಮೂರು ವರುಷಗಳ ಹಬ್ಬಗಳಿಗಿಂತಲೂ ವಿಶೇಷ ವಿಜೃಂಭಣೆಯಿಂದ ನಡೆಯಿತು. ಮುನಿಸಿಪಲ್ ಆಫೀಸಿನವರು ಹುಲಿ ವೇಷಧಾರಿಗಳಿಗೆ ಕೊಟ್ಟ ಲೈಸನ್ಸಿನ ಸಂಖ್ಯೆಯು ಹೆಚ್ಚು ಕಡಿಮೆ 77ರಕ್ಕಿಂತ ಹೆಚ್ಚಿತ್ತು.

ಕ್ರಿಮಿನಲ್. ಗುರುಪುರದಲ್ಲಿ ಅಕ್ರಮ ಪ್ರವೇಶ ಮಾಡಿ ಸುಲಿಗೆ ಮಾಡಿದ ಕೈದಿಗಳ ಅಪೀಲನ್ನು ಹೈಕೋರ್ಟಿನವರು ತೆಗದು ಹಾಕಿರುತ್ತಾರೆ. ಆದರೆ ಇವರ ಪೈಕಿ 13ನೇ ಮತ್ತು 14ನೇ ಮುದ್ದಯಾಳಿಗಳ ಅಪೀಲು ತನಿಖೆ ಒಗ್ಯೆ ಬಾಕಿ ಇರುತ್ತದೆ

[illegible] ಕೋರ್ಟಿನವರು ಸ್ವೀಕರಿಸಿರುತ್ತಾರೆ, ಆದರೆ ಹೈಕೋರ್ಟಿನವರು ಮುದ್ದಯಾಳಿಗಳನ್ನು ಜಾಮೀನಿನ ಮೇಲೆ ಬಿಡಲಿಲ್ಲ. ಈ ಅಪೀಲು ಬೇಗನೇ ತೀರ್ಮಾನಗುವದು.

ಮೂಲಗೇಣಿ ಆಸ್ತಿಗಳ ತೀರ್ಪ. ನಮ್ಮ ಮಂಗಳೂರು ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ ಜಡ್ಜರು ಈ ವರೆಗ ತೀರ್ವೆಯನ್ನು ಮೂಲಗಾರರೇ ತೆರಲಿಕ್ಕೆ ಒದ್ದರೆಂದು ಅನೇಕ ಅಪೀಲುಗಳಲ್ಲಿ ತೀರ್ಪು ಕೊಟ್ಟಿರುತ್ತಾರೆ ನಮ್ಮಲ್ಲಿಯ ಉಡುಪಿ ತಾಲೂಕು ಕೋರ್ಟಿನ ಮುನ್ಸಿಫರಲ್ಲಿ ಹೆಚ್ಚಿನವರು ಸ್ವಾಭಾವಿಕವಾಗಿ ತಮ್ಮ ಶ್ರೇಷ್ಠಾಧಿಕಾರಿಗಳ ಮತವನ್ನೇ ಅನುಸರಿಸಿ ಭಯಭಕ್ತಿಯಿಂದಿರುವರು. ಆದರೆ ಶ್ರೇಷ್ಠಾಧಿಕಾರಿಗಳ ಮತವನ್ನವಲಂಬಿಸಿ, ಅವರು ತಪ್ಪಿದಲ್ಲಿಯೇ ತಪ್ಪುವದು ನ್ಯಾಯಾಧೀಶರ ಧರ್ಮವಲ್ಲವೆಂದು ತಿಳಿದು ನಮ್ಮಗಳೆಲ್ಲರ ಪ್ರೀತಿಪಾತ್ರರಾದ ಮಂಗಳೂರು ಡಿಸ್ಟ್ರಿಕ್ಟ್ ಕೋರ್ಟ ಮುನ್ಸೀಫರಾದ ರಾ। ನಂಜ [illegible] ನವರು ನ್ಯಾಯಶೀಲತೆಯ ಮರ್ಮವನ್ನರಿತು, ಸಕಲ ನೀತಿ ವಿಶಾರದರಾದ [illegible] ಹೈಕೋರ್ಟಿನವರ 'ರೂಲಿಂಗ' [illegible] ತೀರ್ವೆಯನ್ನು ಒಕ್ಕಲು [illegible] ಕೊಡಬೇಕೆಂದು [illegible] ಗೂಡವೆ ಇಲ್ಲದೇ [illegible] ತೀರ್ವೆಗಳ ವ್ಯಾಜ್ಯಗಳ ಅಪೀಲು [illegible] ಕೋರ್ಟಿನಲ್ಲಿ ನಡಿಯುತ್ತಿರುವದು.

ನ್ಯಾಯಾಧೀಶರ ತಾಳ್ಮೆ! ಸಾಧಾರಣವಾಗಿ [illegible] ವ್ಯಥೆಗೊಳಗಾಗುವವು. ಇದಕ್ಕೆ [illegible] ಕಾರಣಗಳ [illegible] ತಮ್ಮ ಅಧಿಕಾರವನ್ನು [illegible] ಪ್ರಜಾಪೀಡೆಗೆ ಉಪಯೋಗಿಸಲಿಚ್ಛಿಸಿ [illegible] ನೌಕರನೆಂಬ ಭಾವನೆಯನ್ನು, ತತ್ಕಾಲಕ್ಕೆ ತಾನೇ ಸರ್ವಾಧಿಕಾರಿ [illegible] ಸಾಧ್ಯ. ಇಲ್ಲಿಯ ಪ್ರಜಾ [illegible] ತಾಳ್ಮೆಯು [illegible] ಕಾರಣ ಪ್ರಜಾ [illegible] ಈ [illegible] ಧರಣಿದೇವಿಗಿಂತ ಇಮ್ಮಡಿ! ಜಾತಿ ಮತ ಭೇದಗಳಿಂದ, ಈ ಗುಣವು ಇನ್ನಷ್ಟು ಪ್ರಬಲಿಸಿ, ಹಲವು ಜಾತಿಗಳಿಂದ ಕೂಡಿಕೊಂಡು ಒಂದೇ ಬುದ್ಧಿಯೆಯನ್ನು

[illegible] ಅಧಿಕಾರಿಗಳು ತಮ್ಮ ಸನ್ಮಾನದಿಂದ [illegible] ಹಕ್ಕುಗಳನ್ನಾದರೂ, ಅಧಿಕಾರಿಯು [illegible] ಳ್ಳೆಂಬ ಮಹತ್ವಾಕಾಂಕ್ಷೆಯನ್ನು ಸುರುವ ಭಾವನೆಯ ಪ್ರಾಬಲ್ಯವು ಈ ಸಹನಾಗುಣದಿಂದ ಮಾಜಿ ಹೋಗಿಯದೆ. ಈ ಗುಣ ವಿಶೇಷತ್ವದಿಂದ ಒಕ್ಕಟೆಂಬದು ನಮ್ಮಲ್ಲಿ ಅಪರೂಪ. ಇತ್ತಲಾಗೆ ನಮ್ಮಲ್ಲಿ ಒಂದು ಸಿವಿಲ್ ವ್ಯವಹರಣೆಯಲ್ಲಿ ಒಬ್ಬ ವಕೀಲರು ತನ್ನ ಪಕ್ಷದ ಸಾಕ್ಷಿಗಾರನನ್ನು ವಿಚಾರಣೆ ಮಾಡ ವಾಗ ಒಂದೆರಡು ಪ್ರಶ್ನೆಗಳು ಅನಾವಶ್ಯಕವೆಂದು ನ್ಯಾಯಾಧೀಶರು ತಿಳಿದು ಸ್ಟೆನೋ ವಕೀಲರಿಗೆ ರಿಕಾರ್ಡು ಸಮನಾಗಿ ತಿಳಿದು ಬರಲಿಲ್ಲವೆಂಬದಾಗಿಯೂ ಇನ್ನೂ ತರತರದ ಅಸಹ್ಯ ಮಾತುಗಳನ್ನಾಡಿದರಂತೆ. ಇವರು ಈ ಜಿಲ್ಲೆಗೆ ಒಂದು ಒಹಳ ಕಾಲವಾಯಿತು. ತನ್ನಲ್ಲಿ ದಿವಸಾಗಲೂ ವ್ಯವಹರಿಸಲಿಕ್ಕೆ ಬರುವ ವಕೀಲರಕ್ಕಿ ಅನೇಕರಲ್ಲಿ ಮೇಲೆ ಹೇಳಿದ ಸಹನಾಗುಣ ವಿಶೇಷತ್ವದಿಂದ ಒಕ್ಕಟ್ಟು ಇವರಲ್ಲಿ ಕಷ್ಟಸಾಧ್ಯವೆಂದು ತಿಳಿಯಲು ಅವಕಾಶವಾಯಿತು. ನ್ಯಾಯಾಧೀಶರಿಗೆ ಇಂತಹ ತಾಳ್ಮೆಯೋ ವಿಪರೀತವೆಂದು ತಿಳಿದಿದ್ದಾರೋ ಏನೋ! ಹ್ಯಾಗೂ ನವೀನ ಸುಧಾರಣೆ ಹೊಂದಿದ ವಕೀಲರಲ್ಲಿ ನ್ಯಾಯಾಧಿಪತಿಗೆ ಅವರು ಜಿತೇಂದ್ರಿಯರಲ್ಲವೆಂತ ಹೇಳಲು ಬೇಕಾದ ಒಕ್ಕಟ್ಟಿನ [illegible] ಇಲ್ಲದಿದ್ದರೆ, ನಮ್ಮ ಜಿಲ್ಲೆಯ ಸರ್ವಸಾಧಾರಣರೆಲ್ಲರೂ ಏಕತ್ವದಿಂದ ಪ್ರಜಾವೃದ್ಧಿಯನ್ನು ಸಾಧಿಸುವ ಬಗೆಯಂತೋ?

ಬಂಟ್ವಾಳ. ಇಲ್ಲಿಯ ಸಬ್ ಮೆಜಿಸ್ಟ್ರೇಟರಲ್ಲಿ [illegible] ಕ್ರಿಮಿನಲ್ ಮೊಕದ್ದಮೆಗಳು ತನಿಖೆ ಒಗ್ಯೆ [illegible] ಈ ಮೊಕದ್ದಮೆ ನಡಿಯಬಾರದೆಂ[illegible] ಮೆಜಿಸ್ಟ್ರೇಟರು ಈ ವಿಷಯಗಳಲಿ [illegible] ಮಾಡುತ್ತಾರೆಂದೂ ಅರ್ಜಿ ದಾಖಲಾದ್ದ [illegible] ರಾ। ನಾರಾಯಣ [illegible] ತನಿಖೆ ಒಗ್ಯೆ ಕಳಿಸಿರುತ್ತಾರೆಂ[illegible]

ಮೂಡಬಿದ್ರೆ. [illegible] ಆಸ್ತಿಗಳು ಗವರ್ನಮೆಂಟಿನವರಿಂದ ಖಾಸಗಿ ಹರಾಜು ಹಾಕಲ್ಪಡುವದೆಂದೂ, [illegible] ಹಕ್ಕುದಾರನ ಮಗನಿಗೆ [illegible] ಪಾಲು ಆಸ್ತಿ ಬಿಟ್ಟು ಕೊಡುವದೆಂದೂ, ಆಸ್ತಿಗಳು 12 ವರುಷಗಳಿಂದ ಗವರ್ನಮೆಂಟಿನವರ ಸ್ವಾಧೀನದಲ್ಲಿದ್ದದ್ದರಿಂದ, ಕಡೇ ಹಕ್ಕುದಾರನ ಮಗನಾದ ಅಣ್ಣು ಶೆಟ್ಟಿಯೆಂಬವರು ಇನ್ನಷ್ಟು ಆಸ್ತಿಯ ಹೆಚ್ಚು ಪಾಲು ಸಿಕ್ಕಬೇಕೆಂತಲೂ ಮನವಿ ಮಾಡಿರುತ್ತಾರೆಂಬದಾಗಿಯೂ ತಿಳಿಯ ಬರುತ್ತದೆ. ಈ ಅಣ್ಣು ಶೆಟ್ಟಿಯವರಿಗೆ ಅವರ ಪ್ರಯತ್ನದಲ್ಲಿ ಜಯವನ್ನಪೇಕ್ಷಿಸುತ್ತೇವೆ.

ಉಡುಪಿ ಬೇಂಕಿಂಗ್ ಕೋರೊಪರೇಶನ್. ಈ ಸಂಘದವರ ಒಂದಕ್ಕು ತಿಂಗಳ ವರದಿಯನ್ನು ಇದರ ಸೆಕ್ರೆಟರಿಯವರಾದ ರಾ। ಸುಬೇರ ಆನಂದರಾಯರು ನಮಗೆ ಕಳುಹಿಸಿರುತ್ತಾರೆ. ಇದನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸುವೆವು.

ವಿವಿಧ ವಿಷಯ.

[illegible] ದಿಂದುಂಟಾಗುವ ಕ್ಷಯ ರೋಗಕ್ಕೆ ದನಗಳಲ್ಲಿ [illegible] ಇಂತಹ ದನಗಳ ಹಾಲನ್ನು ಪ್ರಯೋಗಿಸಿದ [illegible] ಗವು [illegible]

ಶಾಲಿವಾಹನ ಶಕ ೧೮೨೮ನೇ ಪರಾಭವ ಸಂವತ್ಸರದ ಫಾಲ್ಗುಣ ಬ ೧೫ ಶುಕ್ರವಾರದಾರಭ್ಯ ಪ್ಲವಂಗ ಸಂವತ್ಸರದ ಅಧಿಕ ಚೈತ್ರ ಶು. ೧ವು ಶುಕ್ರವಾರದ ವರೆಗಿನ ವಾರ ಪಂಚಾಂಗವು 1907 ಇಸವಿ ಮಾರ್ಚಿ ತಾರೀಕು 1ರಿಂದ 15ರ ವರೆಗೆ

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ತಾ.	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ
1	ಶುಕ್ರ	ಪಾಡ್ಯ	೧೫	ಹು	೩॥	9	ಶನಿ	ದಶ	೩೪॥	ಪೂಷಾ	೩೯॥
2	ಶನಿ	ಬಿದಿಗೆ	೧೩॥	ಉತ್ತ	೩॥।	10	ಆದಿ	ಏಕಾ	೨೯।	ಉಷಾ	೩೫॥।
3	ಆದಿ	ತದಿಗೆ	೧೧	ಹ	೩	11	ಚಂದ್ರ	ದ್ವಾ	೨೪॥	ಶ್ರ	೩೨॥।
4	ಚಂದ್ರ	ಚೌತಿ	೭॥	ಚಿ	೧	12	ಕುಜ	ತ್ರ	೨೦।	ಧ	೩೦।
5	ಕುಜ	ಪ	೩	ಪೂಭಾ	೪॥	13	ಬುಧ	ಚತು	೧೬॥।	ಶ್ವ	೨೮॥।
6	ಬುಧ	ಷ	೫೭।	ಅ	೫೮॥	14	ಗುರು	ಅಮ	೧೪॥।	ಪೂಭಾ	೨೮।
7	ಗುರು	ಅ	೪೩॥	ಜ್ಯೇ	೪೬॥	15	ಶುಕ್ರ	ಪಾಡ್ಯ	೧೩।	ಉಭಾ	೨೮
8	ಶುಕ್ರ	ನವ	೪೦॥	ಮೂ	೪೩॥						

WILLIAM & Co., 16 OAK LANE, FORT BOMBAY.

ಅಮೃತಾಂಜನ

ಬಾಟ್ಲಿ ಒಂದಕ್ಕೆ ಕಿಮ್ಮತು 0—8—0 ವಿ. ಪಿ 0—12—0

ಅಮೃತಾಂಜನ—ಸುಖಾಂಜನ.
ಅಮೃತಾಂಜನ—ದಿವ್ಯಾಂಜನ
ಅಮೃತಾಂಜನ—ಸಂಜೀವನ
ಅಮೃತಾಂಜನ—ಪರಮಾಂಜನ
ಅಮೃತಾಂಜನ—ಅಶೀತಭಂಜನಿ
ಅಮೃತಾಂಜನ—ಪ್ರಾಭಂಜನವಿಮರ್ದಿನಿ
ಅಮೃತಾಂಜನ ಅಪೂರ್ವದರ್ಶಿನಿ
ಅಮೃತಾಂಜನ - ತತ್ಕ್ಷಣ ಪರಿಹಾರಿಣಿ
ಅಮೃತಾಂಜನ ಗಂಟ್ಲು ಸೋವಿಗೆ
ಅಮೃತಾಂಜನ ವಾತದ ನೋವಿಗೆ
ಅಮೃತಾಂಜನ—ಎದೆ ನೋವಿಗೆ
ಅಮೃತಾಂಜನ—ತಲೆನೋವಿಗೆ

ಮನುಷ್ಯವರ್ಗಕ್ಕೆ ಬರುವ, ಸಂದಿವಾತ, ಶಿರೋಬಾಧ [illegible] ಈ ಔಷಧವು ಉತ್ತಮವಾಗಿರುತ್ತದೆ ಇದರಿಂದ ಗುಣವು ಕಂಡುಬರುವದಿಲ್ಲವಾದರೆ [illegible]

ಗಜಕರ್ಣದ ಮುಲಾಮು [illegible] 0 6 0 ವಿ. ಪಿ 0 10 0

ಗಜಕರ್ಣದ ಮುಲಾಮು—[illegible]
ಗಜಕರ್ಣದ ಮುಲಾಮು—[illegible]
ಗಜಕರ್ಣದ ಮುಲಾಮು—[illegible]
ಗಜಕರ್ಣದ ಮುಲಾಮು—[illegible]
ಗಜಕರ್ಣದ ಮುಲಾಮು [illegible]

	ರೂ	ಆ	ಪೈ
ಜೀರ್ಣರಸಾಯನ—ಹೊಟ್ಟೆಯಲ್ಲಿ [illegible]	1	4	0
ವಜ್ರಗುಟಿಕೆ—ಧಾತು ಪುಷ್ಟಿ [illegible]	1	[illegible]	0
ಜ್ವರಹಾರಿ—ಎಲ್ಲಾ ತರದ [illegible]	0	[illegible]	0
ಚೇಳುಕಡಿತದ ಮದ್ದು—[illegible]	0	[illegible]	0
ಒಜ್ಜೆ ಮುಲಾಮು—[illegible]	0	3	0
ದಂತಮಂಜನ—ಈ [illegible] ನಿಲ್ಲಿಸುವದು [illegible]	0	2	0
ರೋಮಹಾರಿ—[illegible]	0	[illegible]	0
ಕೇಶವರ್ಧಿನೀ ತೈಲ್ಯ—ಇದ [illegible]	1	0	[illegible]
ಜುಲಾಬು ಮಾತ್ರೆ—[illegible]	0	[illegible]	0
ಕಫಹಾರಿ—ಕೆಮ್ಮು [illegible]	1	4	0
ಸುಂದರೀ ತೈಲ್ಯ—ಈ ತೈಲ್ಯವನ್ನು [illegible] ರೂಪವನ್ನು ಕೊಡುತ್ತದೆ [illegible]	0	8	0

ನೇತ್ರಾಂಜನ 0 4 0 ಕುಸುಮಾರಿ ಗುಟಿಕೆ 1 0 0, ಪ್ರಮೇಹದ ಮಿಶ್ರಣ 1 0 0 ಜಂತುವಾತಹಾರಿ 0 8 0, ಕಫನಾಶಕ ಚೂರ್ಣ 0 8 0

ಎಲ್ಲಾ ತರದ ಔಷಧಗಳ ಇರುವದರಿಂದ ಕೆಟಲಾಗು ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರದು ತರಿಸಿಕೊಳ್ಳಬಹುದು

AMRUTANJAN CURES RHEUMATISAM

TRY OUR AMRUTANJAN AND YOU WILL LIKE IT

AMRUTANJAN IS VERY CHEAP AND EFFECTIVE

ವಿಳಾಸ—ವಿಲಿಯಂ ಮತ್ತು ಕಂಪೆನಿ, ಫೋರ್ಟ ಮುಂಬಯಿ.

Printed and published by V. S Kamath at the Mangalore Trading Association's "Sharada Press".

ಸ್ವದೇಶಾಭಿಮಾನಿ

ಎಂಬ

ಕನಡ ಪಕ್ಷ ಪತ್ರವು.

ಪುಸ್ತಕ 1. ಮಂಗಳೂರು, 16ನೇ ಮಾರ್ಚಿ 1907. ಸಂಚಿಕೆ 6.

ರಾಷ್ಟ್ರೀಯ ಶಿಕ್ಷಣ.

ರಾಜನೀತಿ ವಿಶಾರದರು ಪ್ರಸ್ತುತ ಹಲ್ಲೆಗಳ ಜನ ಸಮುದಾಯಕ್ಕೆ ರಾಷ್ಟ್ರೀಯ ವಿಷಯಗಳಲ್ಲಿ ಪರಚಿತಿಯು ಉಂಟಾಗುವ ಪದ್ಧತಿಯು ಹಿಂದ ಸ್ವಾದದಲ್ಲಿ ವಿಶಾಲ [illegible] ಪ್ರಚಾರಕ್ಕೆ ಬರಲಿಲ್ಲ ಎಂದು ಪೊಲಿಸ ಸೂಚಿಕೆ [illegible] ಈ ಕಾಲ ವಿದ್ಯಾವಂತರು ರಾಷ್ಟ್ರೀಯ ವಿಷಯಗಳಲ್ಲಿ [illegible] ಗಳು ಬಹುಜನ ಸಮ್ಮತ [illegible] ಇಂಗ್ಲೆಂಡ [illegible] ತೋರಿಸಿ [illegible] ಹೊಂದುವದಕ್ಕೆ [illegible]

ಈ ಮೊದಲು [illegible] ಆಫ್ ಇಂಡಿಯ [illegible] ನಮ್ಮ ವಾಚಕ [illegible] ಭಾಯಿಗಳು ಇದೇ [illegible] ದಿಂದ ಹೇಳುವದನ್ನು ಹಿಂದಿನ [illegible] ಯಾತಿಗೂ ಕಳುಹಿಸಿದರ [illegible] ಸಿದರು. ಈ ಸೂಚನೆಯನ್ನು [illegible] ತೋರುವದಿಲ್ಲ. ಇದರೂ ಕೊಂಗ್ರೆಸ್ಸಿನ ನಡೆದ [illegible] ಕಾರ್ಯವು [illegible] ಇದರ [illegible] ಎಂದು ತೋರುತ್ತದೆ. ಕೊಂಗ್ರೆಸ್ಸಿನಲ್ಲಿ ನವೀನ ಮತ್ತು ಪ್ರಾಚೀನ [illegible] ಎರಡು [illegible] ಪ್ರಾಪ್ತಿಸಿರುವದೆ. [illegible] ಪಕ್ಷದವರು [illegible] ವದೇನಂದರೆ [illegible] 22 ವರುಷಗಳ [illegible] ಮಾಡಿದರೂ [illegible] ನಮ್ಮ ಅಂಕೆಗಳನ್ನು [illegible] ನಮ್ಮ ಕಷ್ಟಗಳನ್ನು [illegible] ನಾವು ಸರಕಾರದವರ ದಿಕ್ಕಿಗೆ ಹೋಗದೆ ನಮ್ಮ [illegible] ಸರ್ವ ವಿಷಯಗಳಲ್ಲಿಯೂ ಸ್ವಾವಲಂಬಿಗಳಾಗಬೇಕು. ವಿಲಾಯತಿಯ ಯಾವ ವಸ್ತುವನ್ನೂ ಸ್ವೀಕರಿಸ ಬಾರದು. ಸರಕಾರದ ಹುದ್ದೆಗಳನ್ನೂ, ಸರಕಾರಿ ಯುನಿವರ್ಸಿಟಿ ವಿದ್ಯಾಭ್ಯಾಸವನ್ನೂ ತ್ಯಜಿಸಬೇಕು.

ಇದಕ್ಕೆ ಪ್ರತಿಯಾಗಿ ಪ್ರಾಚೀನ ಪಕ್ಷದವರು ಹೇಳುವದೇನಂದರೆ —"ಸ್ವಾವಲಂಬನವು [illegible] ಸರ್ಕಾರದ ಸಹಾಯವು ಅಗತ್ಯ. ಸರ್ಕಾರವು ನಮ್ಮ ಅರಿಕೆಗಳನ್ನು ಇಂದಲ್ಲ ನಾಳೆ ಮನ್ನಿಸೀತು. ಸರ್ಕಾರಿ ಹುದ್ದೆ ಮುಂತಾದವುಗಳನ್ನು ತ್ಯಜಿಸಿ [illegible] ಇಷ್ಟರ ವರೆಗೆ [illegible] ವ್ಯರ್ಥವಾಯಿತು. ವಿದೇಶಿಯ ಬಹಿಷ್ಕಾರವಲ್ಲ, ಸ್ವದೇಶಿಯನ್ನು ನಾವು ಕೈಕೊಳ್ಳಬೇಕು." ಸರ್ವಸಾಧಾರಣರು ಯಾವ ಮತವನ್ನು ಅವಲಂಬಿಸುವರೋ ಅದೇ ಉರ್ಜಿತಕ್ಕೆ ಬರುವದು. ಈ ಉದ್ದಿಶ್ಯ ಎರಡು ತಂಡದವರೂ ಜನರನ್ನು ಬೋಧಿಸಲಿಕ್ಕೆ ತೊಡಗಿದ್ದಾರೆ. ಪ್ರಾಚೀನ ಪಕ್ಷದವರು [illegible] ನವೀನ ಪಕ್ಷದವರ ಬಿಪಿನ್ ಚಂದ್ರಪಾಲರೂ [illegible]

[illegible] ಮೇಲೆ ಸಂಗ್ರಹವಾಗಿ ಹೇಳಿದ ಬುದ್ಧಿವಾದಗಳನ್ನು ಸೂಚಿಸಿದ [illegible] ಅಮೀರರು ಈ ವಿದ್ಯಾಲಯಕ್ಕೆ ವರುಷಂಪ್ರತಿ ಸರಕಾರದಿಂದ ಕೊಡಲ್ಪಡುವ 6000 ರೂಪಾಯಿಯನ್ನು 12 ಸಾವಿರಕ್ಕೆ ಏರಿಸಿದರು. ಇದರಲ್ಲಿ 6 ಸಾವಿರ ರೂಪಾಯಿಗಳನ್ನು ಅನಾಥ ಬಾಲ ಬಾಲಕೀಯರ ಪ್ರಯೋಜನಕ್ಕಾಗಿ ವಿನಿಯೋಗಿಸಬೇಕೆಂದು ಆಜ್ಞಾಪಿಸಿದರು. ಕಾಲೇಜು ಕಟ್ಟೋಣದ ಬಗ್ಗೆ 20,000 ರೂಪಾಯಿಗಳನ್ನು ದಯಪಾಲಿಸಿದರು. ಈ ದಾನದಲ್ಲಿ ವಿಶೇಷ ಸಂಗತಿ ಏನೆಂದರೆ— ಈ ಹಣವನ್ನು ತಾನು ದೇವರ ಹೆಸರಿನಲ್ಲಿ ಕೊಡುವೆನಲ್ಲದೆ ತನ್ನ ಹೆಸರಿನಲ್ಲಿ ಅಲ್ಲವೆಂದೂ ಇದಕ್ಕೋಸ್ಕರ ಯಾವ ವಿಧದಲ್ಲಿಯಾದರೂ ತನ್ನ ಸ್ಮಾರಕ ಚಿನ್ಹೆಗಳನ್ನು ನಿರ್ಮಿಸ ಕೂಡದೆಂದೂ ಇವರು ವಿಧಿಸಿದ್ದು. ಸಕಲ ಕಾರ್ಯಗಳನ್ನು ಪರಮೇಶ್ವರನಿಗೆ ಸಮರ್ಪಿಸಬೇಕೆಂದು ನಿಷ್ಕಾಮ ಕರ್ಮವನ್ನು ಬೋಧಿಸುವ ಸನಾತನಧರ್ಮ ವಾಕ್ಯವನ್ನು ಅಮೀರರು ಕಾರ್ಯತಃ ಕಲಿಸಿದಂತಾಯಿತು.

ಅಮೀರರು ನಮ್ಮ ದೇಶಕ್ಕೆ ಕಾಲಿಡುವ ಮೊದಲು ಇವರ ಬುದ್ಧಿ ಚಾತುರ್ಯಗಳ ಪರಿಚಿತಿ ನಮಗಿರಲಿಲ್ಲ. ಆದರೆ ಈ ರಾಜರ ಪ್ರವಾಸದಿಂದ ನಮ್ಮ ದೇಶಕ್ಕೆ ಅನೇಕ ಲಾಭವುಂಟಾಯಿತು. ನಮ್ಮ ಸರಕಾರಕ್ಕೂ ಅಫಘಾನ ಅಧಿಪತ್ಯಕ್ಕೂ ಇದ್ದ ಮಿತ್ರಭಾವವು ವೃದ್ಧಿಗೊಂಡಿತು. ಇವರು ಬಕ್ರೀದ ಕಾಲದಲ್ಲಿ ಗೋಹತ್ಯ ಕೂಡದೆಂದು ಹೇಳಿ ಮುಸಲ್ಮಾನರು ಹಿಂದುಗಳ ಕೂಡ ಹ್ಯಾಗೆ ನಡಕೊಳ್ಳಬೇಕೆಂದು ಸೂಚಿಸಿದರು. ತನ್ನ ಕಣ್ಣೆದುರು ಬಂದ ಸರ್ವ ವಿಷಯಗಳನ್ನು ಕೂಲಂಕುಷವಾಗಿ ತಿಳಕೊಳ್ಳಬೇಕೆಂದು ಇವರು ತೋರುವ ಕುತೂಹಲವನ್ನೂ, ತನ್ನ ಪ್ರಜೆಗಳನ್ನು ಉನ್ನತ ಸ್ಥಿತಿಗೆ ತರಬೇಕೆಂದು ಇವರಿಗಿರುವ ಕಾಂಕ್ಷೆಯನ್ನೂ, ಇವರ ಔದಾರ್ಯ, ತೀಕ್ಷ್ಣಬುದ್ಧಿಗಳನ್ನೂ ನೋಡಿದರೆ ಬರೋದೆಯ ಗಾಯಕವಾಡ ಮಹಾರಾಜರ ಚರಿತ್ರೆಯು ಜಾಗ್ರತೆ ನೆನಪಿಗೆ ಬರುವದು. ಅಮೀರರು ಇಲ್ಲಿ ಪರಿಶೀಲಿಸಿದ ಅನೇಕ ವಿಷಯಗಳಿಂದ ತನ್ನ ರಾಜ್ಯಭಾರದ ಶಾಖೆಗಳಲ್ಲಿ ಹೊಸ ಏರ್ಪಾಡುಗಳನ್ನು ಮಾಡುವದೆಂಬದು ನಿಸ್ಸಂಶಯ. [illegible] ಇವರು [illegible] ಹಿಂದೂ ದೇಶದ ರಾಜರೂ ಹೀಗೆಯೇ ಪ್ರಜಾ [illegible] ನಮ್ಮ ಪ್ರಾರ್ಥನೆ.

ಉಪ್ಪಿನ ಮೇಲಿನ ಸುಂಕವು.

ಉಪ್ಪಿನ ಮೇಲಿನ ಸುಂಕ [illegible] (ಬಂಗಾಳ) ಒಂದಕ್ಕೆ ಒಂದು ರೂಪಾಯಿ ಆಗಿ [illegible] ಎಂಬ ವರ್ತಮಾನವನ್ನು ನಮ್ಮ ವಾಚಕರೆಲ್ಲರೂ ಕೇಳಿರಬಹುದು. ಗವರ್ನ [illegible] ಸುಂಕವನ್ನು [illegible] ದ ಲಾಭ ಯಾವ [illegible] ಬಹುದೆಂಬು [illegible] ಈಗ ನಾವು ಹೀಗೆ ಚರ್ಚಿಸ [illegible] 1902-03ನೇ ಇಸವಿಯಲ್ಲಿ ಉಪ್ಪಿನ ತೆರಿಗೆಯು [illegible] ಕಡಿಮೆಯಾದ ಸಮಯದಲ್ಲಿ ಸರಕಾರಕ್ಕೆ ವರ್ಷಾವಧಿ ಉಪ್ಪಿನ ಸುಂಕದ ಹುಟ್ಟುವಳಿಯು ರೂ 9,27 066 ಆಗಿತ್ತು. ಇದೇ ವರ್ಷದಲ್ಲಿ ಉಪ್ಪಿನ ಮಾಂಡ ಒಂದಕ್ಕೆ 2 ರೂಪಾಯಿ ಸುಂಕವಾಯಿತು. ಹೀಗೆ ಸುಂಕವು ಕಡಿಮೆಯಾದ್ದರಿಂದ [illegible] ರೂ ಧಾರಾಳವಾಗಿ ಉಪ್ಪನ್ನು ಉಪಯೋಗಿಸ ತೊಡಗಿದರು. ಸರಕಾರದವರ ನಿರೀಕ್ಷಣೆಗಿಂತ ಉಪ್ಪು ಹೆಚ್ಚು ಖರ್ಚಾಯಿತು. ಇದಕ್ಕೆ ಸರಿಯಾಗಿ ಉಪ್ಪಿನ ಕಂದಾಯವೂ ಸಹಾ ನಿರೀಕ್ಷಿಸುವ ಮೊಬಲಗಿಂತ ರೂ 11,50,000 ಹೆಚ್ಚಾಯಿತು. ಈ ವರ್ಷ ಸಹಾ ಉಪ್ಪಿನ ಸುಂಕವು 'ಬಜೇಟ' ನಿರ್ಣಯಕ್ಕಿಂತ ರೂ. 17,47,000 ಮಿಕ್ಕಿರುವದು. ಒಟ್ಟಿನಲ್ಲಿ ಹಿಂದುಸ್ಥಾನದ ಕಂದಾಯವನ್ನು ಇಚ್ಛಾನುಸಾರ ವೆಚ್ಚ ಮಾಡಿದರೂ ಸರಕಾರದವರಿಗೆ ಇನ್ನು ಎಷ್ಟೋ ಉಳಿಯುವದರಿಂದ ಹೀಗೆ ಉಪ್ಪಿನ ತೆರಿಗೆಯನ್ನು ತಗ್ಗಿಸ ಕಾರಣವಾಯಿತು. ಈ ಮೊದಲು ಉಪ್ಪಿನ ಸುಂಕವು ಸೇಕಡಾ 1600 ವರದಕ್ಕಿತ್ತು.

ಇದೇ ಸಂದರ್ಭದಲ್ಲಿ ಈ ವರುಷದ 'ಬಜೆಟ್' ಯಾ ಹಿಂದುಸ್ಥಾನದ ಅಂದಾಜು ಖರ್ಚಿನ ಪಟ್ಟಿಯ ವಿಷಯ ನಾವೆಲ್ಲರೂ ಸ್ವಲ್ಪ ಮಟ್ಟಿಗೆ ಏನೇನೆಂಬದನ್ನು ತಿಳಕೊಳ್ಳುವಾ. ಉಪ್ಪಿನ ತೆರಿಗೆ ಎಂತೂ ಕಡಿಮೆಯಾಯಿತೆಂಬದೂ, ಲೆಟರ್ ಪೋಸ್ಟೇಜಿನಲ್ಲಿ ಅರ್ಧಾಣೆಗೆ ಒಂದು ತೊಲೆ ಭಾರದ ಟಪ್ಪಾಲು ಕಾಗದಗಳು ಹೋಗಬಹುದೆಂಬದೂ ಎಲ್ಲರಿಗೂ ಜನಜನಿತವಾಗಿ ಗೊತ್ತಿರುವದು. ಹೀಗೆ 'ಬಜೇಟ್' ನಿರ್ಣಯಗಳ ಉಪ್ಪಿನ ಬಾಬ್ತಿನಲ್ಲಿ 1¼ ಮಿಲಿಯ, ಟಪ್ಪಾಲು ಹಾಸಲಿನಲ್ಲಿ 79000 [illegible]

[illegible] ವರುಷಗಳ [illegible] ಆದಾಯವನ್ನು ಮಾಡಿರುತ್ತಾರೆ. [illegible] ಹೆಚ್ಚಾಗಿ ಅಮಲು ಕಟ್ಟೋಣದ [illegible] ಸ್ಥಳಗಳಲ್ಲಿ ಬೆಳಸಿ ಅಫೀನಿನ ಬೆಳೆಯನ್ನು ಕಡಿಮೆ ಮಾಡುವದರಿಂದ ಹಿಂಗಿಯಲ್ಲಿ ಇತರ ವರುಷಗಳಿಗಿಂತ 95 ಲಕ್ಷ ರೂಪಾಯಿ ಕಡಿಮೆ ಬರುತ್ತವೆ. ಇಂಡಿಯಾ ಗವರ್ನಮೆಂಟಿನವರೂ ಇವರ ಫಿನೆನ್ಸ್ ಯತ್ನ ಆಧಾಯಕರ್ತ್ರುಗಳ ಮೇಲ್ವಿಚಾರಕರಾದ ಮಿಸ್ಟರ್ ಇ. ಎನ್ ಬೇಕರ್ ಸಾಹೇಬರೂ ನಿಷ್ಪ್ರಯೋಜನವಾಗಿ ಹಾಕಲ್ಪಡುವ ರೈಲ್ವೆಗಳ ಮತ್ತು ಮಿತಿಯಿಲ್ಲದ ಸೇನಾಖರ್ಚಿನ ಅನಾವಶ್ಯಕತೆಯನ್ನು ತಿಳಿದಿದ್ದಾರೆಂಬದಾಗಿ ಈ ಬಜೆಟಿನಿಂದ ತಿಳಿಯ ಬರುತ್ತದೆ. ರೈಲ್ವೆಗಳ ಖರ್ಚಿಗೆ ಮೂರು ವರುಷಗಳಿಗೆ 13½ ಕೋಟಿ ರೂಪಾಯಿಗಳಿಗೆ ವಿಚಾರಕೊಡದ್ದಾಗಿ ಮಾಡಿರುತ್ತಾರೆ. ಸೇನಾಧಿಪರಾದ ಕಿಚಿನರ್ ಪ್ರಭುಗಳ ಹೊಸ ಏರ್ಪಾಡುಗಳಿಗೆ ಬೇಕಾದ ಖರ್ಚಿನಲ್ಲಿ ½ ಮಿಲಿಯು ಕಡಿಮೆ ಮಾಡಲ್ಪಟ್ಟಿದೆ. ಇತರ ಆಗಾಗ್ಯೆ ಬದಲಾಯಿಸಲ್ಪಡುವ ರಾಜಕಾರ್ಯಗಳನ್ನೆ ನಡೆಸುವ ಆಫೀಸುಗಳ ಸಿಬಂದಿಗೆ ಅವವುಗಳ ಯೋಗ್ಯತಾನುಸಾರ ಹೆಚ್ಚಿಗೆ ತಗಲುವ ಮೊಬಲಗುಗಳು ಪ್ರತ್ಯೇಕಿಸಲ್ಪಟ್ಟವೆ. ಹೀಗೆ ಪೋಲೀಸು ಇಲಾಖೆಗೆ 105 ಲಕ್ಷ, ವಿದ್ಯಾ ಇಲಾಖೆಗೆ 80 ಲಕ್ಷ, ವ್ಯವಸಾಯ ವೃದ್ಧಿಗೆ 24 ಲಕ್ಷ, ಡಿಸ್ಟ್ರಿಕ್ಟ್ ಮತ್ತು ಲೋಕಲ್ ಬೋರ್ಡುಗಳಿಗೆ 60 ಲಕ್ಷ, ಹೀಗೆ ಹಿಂದುಸ್ಥಾನದಲ್ಲಿ ಆಯಾ ಇಲಾಖೆಗಳಿಗೆ ಆಯಾ ಸ್ಥಳೀಯ ಗವರ್ನಮೆಂಟಿನವರ ಖರ್ಚಿನ ಮೊಬಲಗುಗಳ ವಿನಹಾ ಇಂಪೀರಿಯಲ್ ಅಂದರೆ ಚಕ್ರಾಧಿಪತ್ಯದ ಲೆಕ್ಕಗಳಲ್ಲಿ ಮೇಲೆ ವಿವರಿಸಿದ ಮೊಬಲಗುಗಳು ಪ್ರತ್ಯೇಕಿಸಲ್ಪಟ್ಟವೆ. ವಿದ್ಯಾ ಇಲಾಖೆಯ ಖರ್ಚಿನ ಬಗ್ಗೆ ಸ್ಥಳೀಯ ಮತ್ತು ಚಕ್ರಾಧಿಪತ್ಯದ ಗವರ್ನಮೆಂಟಿನವರು ಒಟ್ಟಿಗೆ 303 ಲಕ್ಷ ರೂಪಾಯಿ ಈ ಬಜೆಟಿನಲ್ಲಿ ನಿರ್ಣಯಿಸಿರುತ್ತಾರೆ. ಕಳೆದ ವರುಷಕ್ಕಿಂತ ಈ ವರುಷದಲ್ಲಿ ಪ್ರಜೆಗಳ ವಿದ್ಯಾವ್ಯಾಸಂಗದ ಬಗ್ಯೆ [illegible] ರೂಪಾಯಿಗಳನ್ನು ಹೆಚ್ಚು ವಿನಿಯೋಗಿಸಿದರು. ಈ ಮೊಬಲಗಿನ [illegible] ಜೊಂಬ್ಸಾ ಮತ್ತು ಮದ್ರಾಸ ಸಂಸ್ಥಾನಗಳ [illegible] ಗೈಯಾಗಿರುತ್ತದೆ. [illegible] ಪ್ರಜೆಗಳಿಗೆ ಉಚಿತವಾಗಿ ದೊರೆಯಬೇಕ್ಕಿರುವ ಪ್ರಾಥಮಿಕ ವಿದ್ಯಾಭ್ಯಾಸ [illegible] ವದಿಲ್ಲವೆಂತ ರಾ। ಗೋಖಲೆ ಮೊದಲಾದವರು ಹೇಳಿ [illegible] [illegible] ಈ ವರುಷದ ಬಜೆಟಿನಲ್ಲಿ ಈ ಉದ್ದಿಶ್ಯವಾಗಿ ಪ್ರತ್ಯೇಕ ಹಣ [illegible] ಮೂ, ವೇ [illegible] ಜೋನ್ ಮಾರ್ಲೆಯವರ [illegible] [illegible] ಕಾಣುವ ಅಡಚಣೆ ಇಲ್ಲವಾದರೆ [illegible] ಭ್ಯಾಸವು ಉಚಿತವಾಗಿ ಎಲ್ಲರಿಗೂ ದೊರೆಯುವದು.

— — —

“ಮಂಗಳೂರು ವಿಕಟಮಲ್ಲನಿಗೆ” ಪ್ರತ್ಯುಕ್ತಿ

ಸತ್ಯದೀಪಿಕೆಯ ಮಾರ್ಚಿ ತಾ 1ನೇ ಪ್ರತಿಯಲ್ಲಿ ಮಂಗಳೂರ ವಿಕಟ [illegible] ನಮ್ಮ ಪತ್ರ ರಚನೆಯ ಕುರಿತ [illegible] [illegible] ಹುಚ್ಚು ಮಾತೋ ನಿಂದೆಯೋ ಹಾಸ್ಯವೋ ತೋಕ್ತಿಯೋ [illegible] [illegible] ಪ್ಲೇಗ್ ರೋಗದಿಂದ ಬಡಜನಗಳ [illegible] ಸೊನೆಗಾರರ [illegible] ದಲ್ಲಿ ಇದ್ದವೆಂದು ನಗವನು [illegible] ಶಾಸ್ತ್ರಾಲಿಯನರಿಗೆ ಪರದಲ್ಲಿ ವಿಶ್ರಾಂತಿ ಸಿಕ್ಕಿತು [illegible] ಟೀಕೆ ಮಾಡವನ [illegible] ಗಸರ [illegible] ಲ್ಲಿಯೂ [illegible] ಗಾಂಭೀರ್ಯದಲ್ಲಿಯೂ ಸಹಾನುಭೂತಿಯಿಲ್ಲದ ಈ “ಛತ್ರಕರ ಮೂರ್ತಿಯ ಹೃದಯದಲ್ಲಿ ಸ್ವದೇಶಾಭಿಮಾನಿ [illegible] ವನ್ನು ನೋಡಿ [illegible] ಇದ್ದೀತೆಂದು [illegible] ವಿಕಟ [illegible] ಪುರುಷನ [illegible] ಮಧುರ ಭಾಷೆಯನ್ನು ನಾವೊಲ್ಲೆವು. ಈಗ ನಮ್ಮ [illegible] ನುಡಿ [illegible] ನಾವೇ ನಮ್ಮ ಪ್ರಥಮ ಸಂಚಿಕೆಯಲ್ಲಿ ಒಪ್ಪಿ ವಾಚಕರಿಂದ ನಮ್ಮ ಬಾಲ್ಯ ಕಾಲದಲ್ಲಿ ಕ್ಷಮೆ ಕೇಳಿದ್ದೇವೆ.

ಈ ಮಲ್ಲನ ಮಾತು ಪರ್ಯಾಲೋಚಿಸಲು ಇವನಿಗೂ ತೆನ್ನಾಲ ರಾಮಕೃಷ್ಣನಿಗೂ ಯಾವ ಸಮ್ಮಂಧವೂ ಇಲ್ಲವೆಂದು ತೋರುತ್ತದೆ. ತೆನ್ನಾಲ ರಾಮಕೃಷ್ಣನು ಚತುರವಿದೂಷಕನಾಗಿದ್ದನು. ಇವನು ದೂಷಕ ವಿಕಟನು. ನಿಂದೆಯು ಹಾಸ್ಯವಲ್ಲ.

“ಜೋಡುಮಠದ ಬಲರಾಮ ಭಟ್ಟನ” ಆಶ್ರಯೆಯಲ್ಲಿದ್ದು ನಿರಂತರ ‘ರಕ್ಷೆಯ’ ಪ್ರಯೋಜನವನ್ನು ಹೊಂದುತ್ತಿರುವ ಈ ವಿಕಟನನ್ನು ಸಂಸ್ಕೃತ ಪಿಶಾಚಿಯು ಬಿಟ್ಟಿಲ್ಲ. “ಬಲರಾಮ ಭಟ್ಟರು” ಮತಭ್ರಷ್ಟರಾಗಿ, ದೇಶಾಭಿಮಾನವನ್ನು ತೊರೆದು, ಅಲ್ಲ ಆಕೆಯಿಂದ ತನ್ನ ರಕ್ಷೆಯಲ್ಲಿರುವ ವಿಕಟನೊಂದಿಗೆ ಪರಮತವನ್ನು ಕೈಕೊಳ್ಳಲು ಈ ಭಟ್ಟರ [illegible] ಮಂತ್ರಗಳು, ಕ್ಷತ್ರಿ [illegible] ವಿಕಟನುಳ್ಳಯ [illegible] ಯಂತೆ ಆಲೆದಾಡಿ ಅನರ್ಥಗಳಲ್ಲಿ ತನ್ನ ಪ್ರೌಢತ್ವವನ್ನು ತೋರಿಸುವನು. ಹೀಗಿರುತ್ತಾ ಸ್ವದೇಶಾಭಿಮಾನಿಗೆ “ಬಲರಾಮ ಭಟ್ಟನ” ‘ರಕ್ಷೆಯು’ ಆಗತ್ಯವಿಲ್ಲ.

ನಮ್ಮನ್ನು ಕುರಿತು “ಮಗುವಿನ ಪ್ರವೇಶಕಾಲವು ಸ್ವಲ್ಪ ದೋಷಕರದ್ದಾದರೂ ಸುಕಾಲವೇ ಸರಿ” ಎಂದು ಹೇಳುವನು. ಇದರಲ್ಲಿ ನಾಲ್ಕು ಸಂಸ್ಕೃತ ಶಬ್ದಗಳಿಗೆ ಎರಡು ಕನ್ನಡವಿವೆ. ವಿಕಟನ ಈ ಚತುರೋಕ್ತಿಯ ಅರ್ಥವಾದರೋ ನಮ್ಮ ಬಾಲ ಬುದ್ಧಿಗೆ ಹೊಳೆಯದು. ಮಾರ್ಚ ತಿಂಗಳ ತಾರೀಕು 22ರ ಸತ್ಯದೀಪಿಕೆಯು ವಿಕಟಮಲ್ಲನ ಕುಟುಂಬದ “ವಟವಟ ಸಂಗಯ್ಯನು” ವಿಕಟನ ಸವಾರಿಯು ಕಲಿಕತ್ತೆಗೆ ಹೋಗಿರುವದೆಂದು ತಿಳಿಸುವನು. ಪುರೋಹಿತರಾದ ‘ಬಲರಾಮ ಭಟ್ಟರು’ ಈ ಮಲ್ಲರ ಜೊತೆಯಲ್ಲಿರಬೇಕ. ಪುರೋಹಿತ ಮ. ಯಜಮಾನನೂ ಇದೇ ಸಂದರ್ಭದಲ್ಲಿ ಪವಿತ್ರ ಗಂಗಾಸ್ನಾನವನ್ನು ಮಾಡಿ ಶಾಸ್ತ್ರೋಕ್ತವಾದ ಪ್ರಾಯಶ್ಚಿತ್ತ ಹೊಂದುವನ್ನಾಗಿ ಇಲ್ಲಿಗೆ ಹಿಂತಿರುಗುವದು ಲೇಸು. ಇನ್ನು ಮುಂದೆ ವಿಕಟನು ತನ್ನ ಪೌರುಷವನ್ನು ದುಃಖಿತರು ದೀನರು ಅಬಲೆಯರ ಗಳಲ್ಲಿ ತೋರದೆ ಜನರನ್ನು ನಿಂದೆಯಿಂದ ನೋಯಿಸದೆ [illegible] ವಿಷಯಗಳ ಸ್ತುತಿ ನಗಾಡಿಸುವದೇ ಮಲ್ಲನ ಕೆಲಸವೆಂದು ನಂಬಿದ್ದೇವೆ. ಇದೇ ಅವನಿಗೆ ನಮ್ಮ [illegible] ರ್ಥವಾದ ಹಿತೋಕ್ತಿ.

ಪತ್ರವ್ಯವಹಾರ

[illegible] “ದೇಶಾಭಿಮಾನಿ” ಪತ್ರಿಕಾ ಕರ್ತರಿಗೆ —

[illegible]

ದುಃಶೀಲರನ್ನು ತಿದ್ದುವದು ಅಸಾಧ್ಯ

ಬಿಚೆಗೋಲಂ ಸಮ ಮಾಡಲು
ಕ್ಕಳೆಯೊಳು ಕೂಪಂಗಳಂ ತೋಡ
ಕ್ಕಿಡಿದುಕ್ಕಂ ಮೃದು ಮಾಡಲಕ್ಕು
ಮ ಅಲೋಲ್ಮೃಲಂಗಳಂ, ತೋರ
ಕ್ಕಡವೀಸಿಂಗನ ತಿದ್ದಲಕ್ಕು,
ಕರೆಯಲ್ಕಕ್ಕುಗ್ರ ವ್ಯಾಘ್ರಂಗಳಂ,
ಕಡು ಮೂರ್ಖಂ ಮತಿ ಗೇಳನೈ!
ಹರಹರಾ! ಶ್ರೀ ಚೆನ್ನಸೋಮೇಶ್ವರಾ!

[illegible]

[illegible] ಪಾರ್ಲಿಮೆಂಟಿನ [illegible] ಪ್ರತಿನಿಧಿ ಸಭೆಯಲ್ಲಿ [illegible] ಯಂದ ಸುಮಾರು 27 ಘಂಟೆಗಳವರೆಗೆ ಸಭೆಯ [illegible] ನಡೆಯಿತು. ಕೆಲವು ವ ರ್ಷಗಳಿಂದೀಚೆಗೆ ಪಾರ್ಲಿಮೆಂಟು ಹೀಗೆ ವರ್ತಿಸಲಿಲ್ಲ.

ಐಗುಪ್ತ ದೇಶದಲ್ಲಿಯ 'ನೈಲ' ನದಿಗೆ ಕಟ್ಟಿರುವ ಅಣೆಕಟ್ಟಿನ [illegible] ನದೀ ನೀರನ್ನು ಒಂದು ಮಿಲಿಯ ಎಕ್ರೆಗಳಿಗೆ ಹಾಯು ಅಲ್ಲಿ ಈ ಹೊಡಕೋ ನಡಿಯುತ್ತಿರುವ ಹತ್ತಿ ವ್ಯವಸಾಯವನ್ನು ವೃದ್ಧಿಸುವರು. ಹೀಗೆ ಆಣೆಕಟ್ಟಿಗೆ $1\frac{1}{2}$ ಮಿಲಿಯ ಪವನು ಗಳು ಖರ್ಚು ತಗಲುವವು. 4 ಮಿಲಿಯ ಕ್ರಯಬಾಳುವ ಹತ್ತಿ ಬೆಳೆಯು ವರುಷಂಪ್ರತಿ ಇದರಿಂದಾಗುವದು.

ಮೆ|| ಎಸ್. ಎಮ್ ಮಿತ್ರರು ವ್ಯಾಸರಾಯರಾದ ಮಿಂಟೋ ಪ್ರಭುಗಳಿಗೆ 'ಪಂಜಾಬಿ ಕೇಸಿನ ಹಾಗೆ ಇನ್ನು ಮುಂದೆ ಆಗದ ಹಾಗೆ ವರ್ತಮಾನ ಪತ್ರಗಳಿಗಾಗಿ ಬ್ಬ ಕವಿಶನರನ್ನು ನೇಮಿಸಿದರಾದೀತೆಂಬದಾಗಿ ಬರೆದಿರುತ್ತಾರೆ.

'ಕೊಲೋನಿಯಲ್ ಕೊನ್ಫರೆನ್ಸ್' ಎಂಬ ಬ್ರಿಟಿಷ ಸಾಮ್ರಾಜ್ಯದ ವಸಾಹತಿಗಳ ಸಭೆಯಲ್ಲಿ ಹಿಂದುಸ್ಥಾನದ ವಿಷಯಗಳನ್ನು ಚರ್ಚಿಸುವದಕ್ಕಾಗಿ ರಾ|| ಮೊರ್ಲೆ ಧೊರೆಗಳು, ಸರ್ ಜೇಮ್ಸ್ ಮೆಕೇ ಎಂಬವರನ್ನು ನೇಮಿಸಿರುತ್ತಾರೆ.

ರುಸ್ಯಾ ದೇಶದ 'ಡ್ಯೂಮಾ' ಎಂಬ ಪ್ರಜಾಪ್ರತಿನಿಧಿ ಸಭೆಯ ಅಭಿಪ್ರಾಯದ ಮೇರೆಗೆ ರುಸ್ಯಾ ಗವರ್ನಮೆಂಟಿನವರು ಕ್ಷಾಮನಿವಾರಣೆಗಳ ಮೇಲ್ವಿಚಾರಣೆಗೆ ಒಂದು ಕಮಿಟಿಯನ್ನು ನೇಮಿಸಿರುವರು. ಡ್ಯೂಮಾ ಸಭಿಕರ ಅಭಿಪ್ರಾಯವನ್ನು ಹೀಗೆ ಮನ್ನಣೆಯಿಂದ ನಡಿಸಿದ್ದು ರುಸ್ಯಾ ದೇಶಕ್ಕೆ ಒಂದು ಶುಭಕರ ಚಿಹ್ನೆ ಎಂದು ಹಲವು ಪತ್ರಿಕಾಕರ್ತರು ಟೀಕೆ ಮಾಡುವರು.

ಇಟಲೀ ದೇಶದ ದಕ್ಷಿಣದಲ್ಲಿರುವ ಸಿಸಲಿ ದ್ವೀಪದಲ್ಲಿ ಕೆಲವು ತಿಂಗಳುಗಳ ಹಿಂದೆ ಭೂಕಂಪವು ಸಂಭವಿಸಿ ಈ ದ್ವೀಪದ ಕೆಲಬ್ರಿಯಾ ಎಂಬ ಶಹಾರಿನಲ್ಲಿ ಬಹಳ ಹಾನಿಯುಂಟಾಗಿ 50,000 ಕುಟುಂಬಿಕರು ಮನೆಮಾರೂ ಜೀವನೋಪಾಯಗಳೂ ಇಲ್ಲದೆ ಬಹಳ ಸಂಕಷ್ಟ ಪಡುತ್ತಲಿರುವರು. ಅಂಥವರ ಪೋಷಣಾದ ಬ್ಬೇ ತಕ್ಕ ಏರ್ಪಾಡುಗಳನ್ನು ಮಾಡಲಿಕ್ಕೆ ಆ ದ್ವೀಪದ ಮಾಜಿ ವಿದವೆ ರಾಣಿಯು ಫ್ರಾನ್ಸ್ ದೇಶದ ಪಾರೀಸ್ ನಗರದಲ್ಲಿ ಖರ್ಚಾ ಗತಕ್ಕ ನಮೂನೆಯ ಗೋಟುಗಳನ್ನೂ ಅವರಿಂದ ತಯಾರಿಸಿ ಅನ್ನಗಳನ್ನು ವಿಕ್ರಯಿಸಲಿಕ್ಕೆ ಅಂಗಡಿಗಳನ್ನು ಸ್ಥಾಪಿಸಿರುವರು. ಅಂಗಡಿಗಳಲ್ಲಿ ಈ ಗೋಟು ಮುಂತಾದವುಗಳು ಸ್ತ್ರೀಯರಿಂದಲೇ ಮಾರಲ್ಪಡುವವು. ಪಾರೀಸ್ ಪಟ್ಟಣದ ಶ್ರೀಮಂತ ಯುವತಿಯರೆಲ್ಲರೂ ಈ ಅಂಗಡಿಗಳಿಂದಲೇ ಸಾಮಾನುಗಳನ್ನು ಕ್ರಯಕ್ಕೆ ಪಡಿಯುವರು.

M G P

ಮದ್ರಾಸ್ ಮಾಜಿ ಗವರ್ನರರಾದ ಎಮ್ಪಿಹಿಲ್ ಪ್ರಭುಗಳು ಭಾರತೀಯರಿಗೆ ಬ್ರಿಟಿಷ ವಸಾಹತಿಗಳಲ್ಲಿರುವ ಹಲವು ತರದ ಸಂಕಷ್ಟಗಳನ್ನು ನೀಗುವ ಏರ್ಪಾಡುಗಳನ್ನು ಕೊಲೋನಿಯಲ್ ಕೊನ್ಫರೆನ್ಸಿನಲ್ಲಿ ಚರ್ಚಿಸಬೇಕೆಂ [illegible] ಪ್ರಭುಗಳ ಆಸಕ್ತಿಯಿಂದ ಕ್ರಿಸ್ ಟ್ರಾನ್ಸ್ ವಾಲ್ ರಿಲ್ಲಿ [illegible] ಎಲ್ಗಿನ್ ಪ್ರಭುಗಳು [illegible] ನಿಗೆ ತರಲಿಲ್ಲ.

ಉತ್ತರ ಹಿಂದುಸ್ಥಾನ.

ಇತ್ತಲಾಗೆ ಪರವಶ್ಯರಾದ ಬಂಗಾಳೆಯ ಮಾಜಿ ಲೆಫ್ಟಿನೆಂಟ್ ಗವರ್ನರರಾದ ಸರ್ ಜೋನ್ ವುಡ್‌ಬರ್ನರ ಸ್ಮರಣಾರ್ಥವಾಗಿ ಅವರ ಶಿಲಾಮೂರ್ತಿ ಪ್ರತಿಷ್ಠಾಪನವು ಕಳೆದ ತಿಂಗಳ ತಾ 29ನೇ ಶುಕ್ರವಾರ ನಡೆಯಿತು. ಕಲಿಕತ್ತೆಯಲ್ಲಿ ಪ್ಲೇಗ್ ಶುರುವಾದಾಗ ಇವರು ರೋಗದ ಸೋಂಕು ತಗಲಿದ ಮನೆಗಳನ್ನು ನಾಶ ಪಡಿಸುವದು ವೈ ಕೂಲಿಯುವದು, ಮತ್ತು ಪ್ಲೇಗಾದ ಮನೋ ನಿವಾಸಿಗಳನ್ನು ಪ್ರತ್ಯೇಕಿಸಿ ಜನವತ್ತಿಲ್ಲದ ಸ್ಥಳಗಳಲ್ಲಿ ವಾಸಮಾಡುವ ಕ್ರಮಗಳನ್ನು ಪ್ಲೇಗು ಡೆಗ್ಯುಲೇಶನುಗಳ ಮೇರೆಗೆ ಪತ್ಯಾಯದಿಂದ ಜಾರಿಗೆ ತರುವದು ಬರೇ ಹುಚ್ಚುತನವೆಂತ [illegible] ವೊದಲನೆಯವರಾಗಿದ್ದರು. [illegible] ಸಹಾನುಭೂತಿಯುಳ್ಳವ [illegible] ಪ್ರತಿಕೂಲಗಳಿಗೆ [illegible] ಪ್ಲೇಗ ರೆಗ್ಯು [illegible] ಕಲಿಕತ್ತೆ [illegible] ಆದ ಮಹಾನುಭಾವರ [illegible] ಸೇವಾಗಳು [illegible] ಹೋಂಗ ಹೇಳಿ [illegible] ಇಲ್ಲಿ [illegible] ಎಂಬ ಕಟ್ಟಡವನ್ನು [illegible] ಪ್ರಕಾರ [illegible] ಪುರುಷಾರ್ಥ [illegible] ನಿವಾರಣೆ.

ಕಲಿಕತ್ತೆಯಲ್ಲಿ ಶಿತುಜ್ವರೋಗದ ಉಪದ್ರವು ವಿಶೇಷವಾಗಿರುತ್ತದೆ. ಒಂದೇ ಒಂದು ಆಸ್ಪತ್ರಿಯಲ್ಲಿ 90 ಜನ ರೋಗಿಗಳಿರುತ್ತಾರೆ. ಇವರಲ್ಲಿ 30 ಜನರು ಯುರೋಪಿಯನ್ ಮತ್ತು ಯುರೇಶಿಯನರಾಗಿರುತ್ತಾರೆ.

'ಪಂಜಾಬಿಯ' ಅಪೀಲು ಈ ತಿಂಗಳ ತಾರೀಕು 6ಕ್ಕೆ ಹ್ಯಾಕೋರ್ಟಿನಲ್ಲಿ ಬೈರುತ್ತದೆ.

ಬರೋಡಾ ಗೈಕ್ವಾರರ ಮಂತ್ರಿಯಾದ ರೋಮೇಶ ಚಂದ್ರದತ್ತರು ತಮ್ಮ ಮಂತ್ರಿ ಪದವಿಗೆ ರಾಜಿನಾಮೆ ಕೊಟ್ಟರೆಂದು ವರ್ತಮಾನವಿತ್ತು. ಆದರೆ ಇದು ನಿಜವರ್ತಮಾನವಲ್ಲವೆಂದು ಕೆಲವು ಇಂಗ್ಲೀಷ್ ಪತ್ರಿಕೆಗಳಿಂದ ತಿಳಿಯ ಬರುತ್ತದೆ.

ಪಂಜಾಬು ಗವರ್ನಮೆಂಟಿನವರು ಶಾಲೆಗಳಿಗೆ ಹೋಗುವ ಹುಡುಗರು ಬೀಡಿ ಚುಟ್ಟಾ, ಸಿಗರೆಟ್ ಮುಂತಾದ ನ್ನು ಸೇದಕೂಡದೆಂಬ [illegible]

ವರ್ತಮಾನವುಂಟು [illegible]

ಗಿಂಬಾಡ್ ಕೆಂಪಾರ್ ಕಾರ್ಖಾನೆ ಮತ್ತು ಕಂಪೆನಿ ಕಂಪ್ಲ [illegible] ಸ್ವದೇಶಿ ಹಂಡ್ಸ ಗಳನ್ನು [illegible] ಕಾರ್ಖಾನೆಯು [illegible] ಶಬ್ದೀಗತಿಗೆ ಬೀಡ ಒಬ್ಬ ಇಂಜಿನಿಯರ ಮೇಲ್ವಿಚಾರಣೆಯಲ್ಲಿ ನಡಿಸಲ್ಪಡುತ್ತದೆ.

ಅಮೇರಿಕದ ಚಿಕಾಗೊ ಪಟ್ಟಣಗಳ 'ಪಾರ್ಲಿಮೆಂಟ್' ಸಭೆಯ ಪಾದಿಯಲ್ಲಿ ಪಂಜಾಬಿನಲ್ಲಿ ಹಲವು ಜಾತಿಗಳ ಪ್ರತಿನಿಧಿಗಳ ಒಂದು ಸಭೆಕೂಡಿತು. ಒಂದು ಸಾವಿರ ಆಯಾ ಸ್ಥಳಗಳ 'ಡೆಲಿಗೇಟರೂ' ನಾಲ್ಕು ಸಾವಿರ ಇತರ ಜನರೂ ಈ ಸಭೆಗೆ ನೆರೆದಿದ್ದರು. ಅಮೇರಿಕದ ಹೂಪರ ಮತ್ತು ಹೆರಿಸ್ ಎಂಬವರೂ ಇನ್ನೂ ಅನೇಕ ಯುರೋಪಿಯನರೂ ಕ್ರೈಸ್ತ ಮತದ ಪ್ರತಿನಿಧಿಗಳಾಗಿಯೂ ಪರ್ಷ್ಯಾ ದೇಶದಿಂದ ಇಬ್ಬರೂ ಪಾರ್ಸಿಗಳ ಮತ ಪ್ರತಿನಿಧಿಗಳಾಗಿಯೂ ಬಂದಿದ್ದರು. ಹಿಂದುಸ್ಥಾನದ ಮಹಮ್ಮದೀ ಮತದ ಪ್ರಮುಖರಾದ ಅನೇಕ ಜನ ಮೌಲ್ವಿಗಳೂ, ಆರ್ಯ ಬ್ರಹ್ಮ ಸಮಾಜಗಳ ಪ್ರತಿನಿಧಿಗಳೂ ಅನೇಕ ಮಂದಿ ಹಿಂದೂ ಮತದವರೂ ಈ ಸಭೆಯಲ್ಲಿದ್ದರು. ಏನೂ ವೈಷಮ್ಯಗಳಿಲ್ಲದೆ ಸಭಿಕರೆಲ್ಲರೂ ಭ್ರಾತೃಭಾವದಲ್ಲಿಯೇ ತಮ್ಮ ತಮ್ಮ ಮತಗಳನ್ನು ಪ್ರತಿಪಾದಿಸಿದರು. ಭಿನ್ನ ಮತಾವಲಂಬಿಗಳು ಹೀಗೆ ಒಟ್ಟುಗೂಡಿ ಸ್ನೇಹಭಾವದಿಂದಲೇ ತಮ್ಮ ತಮ್ಮ ಅಭಿಪ್ರಾಯಗಳನ್ನು ಬದಲಾಯಿಸಿಕೊಳ್ಳುವದು ಭಾರತೀಯ [illegible] ಪ್ರಸಂಗ [illegible] ಇದರ ಅಧ್ಯಕ್ಷರಾಗಿದ್ದರು.

ದಕ್ಷಿಣ ಹಿಂದೂಸ್ಥಾನ.

ಕಳೆದ ತಿಂಗಳಲ್ಲಿ ಮದ್ರಾಸಿನಲ್ಲಿ ಬೋರ್ಡ್ ಆಫೀಸಿನ [illegible] ಪೋಸ್ಟಲ್ [illegible] ಹೋಯಿತು. ಸರ್ [illegible] ಟೆಲ್ಲಿಗಳಲ್ಲಿರುವವಂತೆ

ಮದ್ರಾಸು ಸಂಸ್ಥಾನದ ಫೊರೆಸ್ಟ್ ಕನ್‌ಸರ್‌ವೇಟರವರು ಈ ರೀತಿ ರಿಪೋರ್ಟ್ ಮಾಡಿರುತ್ತಾರೆ. ಇಡೀ ಸಂಸ್ಥಾನದಲ್ಲಿ ಸರಾಸರಿ 100 ಎಕ್ರೆಗಳಿಗೆ ಸಾಧಾರಣ 14 ಎಕ್ರೆಗಳ ವಿಸ್ತೀರ್ಣವುಳ್ಳ ಕಾಡುಗಳಿರುವವು. ಯುರೋಪ ಖಂಡದಲ್ಲಿ ಬ್ರಿಟಿಷ ದ್ವೀಪಗಳ ವಿನಹಾ ಸರಾಸರಿ 100 ಎಕ್ರೆಗಳಿಗೆ 30 ಎಕ್ರೆಗಳ ಪ್ರಕಾರ ಕಾಡುಗಳಿರುವವು. ವಿಲಾಯತಿಯಲ್ಲಿ ಸೇಕಡಾ 3ರ ಪ್ರಕಾರ ಕಾಡಿರುವದು. ಹೀಗೆ ರುಸ್ಯಾ ದೇಶದಲ್ಲಿ ಸೇಕಡಾ 40 ಫ್ರಾನ್ಸಿನಲ್ಲಿ ಸಹಾ ಸೇಕಡಾ 17ರಂತಿರುವವು. ಕಾಡುಗಳು ಮಳೆಗಳನ್ನು ವೃದ್ಧಿಸುವವಾದ್ದರಿಂದ ಮದ್ರಾಸು ಗವರ್ನಮೆಂಟಿನವರು ಇನ್ನು ಕಾಡುಗಳನ್ನು ಹೆಚ್ಚಿಸಬೇಕೆಂದು ಅಭಿಪ್ರಾಯ ಪಟ್ಟಿರುವರು. ಫೊರೆಸ್ಟ್ ಸೆಟ್ಲ್‌ಮೆಂಟಿನ ತರುವಾಯ ಸಾಧಾರಣ $12\frac{1}{4}$ ಮಿಲಿಯ ಎಕ್ರೆಗಳು ವಿಸ್ತೀರ್ಣವುಳ್ಳ ಮದ್ರಾಸು ಸಂಸ್ಥಾನದ ಕಾಡುಗಳೆಲ್ಲವೂ ಪೂರ್ಣ ಸ್ಟೇಟ್ ಯಾ ಸರ್ಕಾರಿ ಫೊರೆಸ್ಟ್‌ಗಳಾಗಿ ಮಾಡುವರು.

[illegible] ಡಿಸ್ಟ್ರಿಕ್ಟಿನ [illegible] ದನಕರ [illegible]

ದಕ್ಷಿಣ ಕನ್ನಡ.

ಮಂಗಳೂರು. ಈ ವರುಷದ ಬೇಸಿಗೆಯು ಹವಾಗುಣ [illegible] ವಿಶೇಷತರದ್ದೇ. ಹಗಲೆಲ್ಲಾ ಬಿಸಿಲಿನ ಶಖೆ [illegible] ಬೆಳಗಿನ ಝಾಮುಗಳಲ್ಲಿ ಛಳಿಕಾಲದಂತೆ ಛಳಿ ಇರುವದು. ಕ್ಷೀಣ ತಲೆನೆಗಡಿಯ ಬಾಧೆಯು ಊರೆಲ್ಲಾ ಇರುವದು. ಮಂಗಳೂರು ಪ್ಲೇಗ್ ರೋಗದಿಂದ ಪೂರ್ಣ ಬಿಡುಗಡೆಯಾಗುವ ಸಂಭವವಿಲ್ಲ. ಅಲ್ಲಲ್ಲಿ ಒಂದೆರಡು ಪ್ಲೇಗ್ ಮರಣಗಳು ಆಗುತ್ತಲಿವೆ.

ಕಳೆದ ತಿಂಗಳಲ್ಲಿ ಡಿಸ್ಟ್ರಿಕ್ಟ್ ಎಗ್ರಿಕಲ್ಚರಲ್ ಸೊಸ್ಯಾಟಿಯ ಮೆಂಬರುಗಳ ಮೀಟಿಂಗ್ ಇತ್ತು. ಸಭೆಯು ವ್ಯವಹಾರಿಕ ಕ್ರಮಗಳನ್ನು ತಿದ್ದುವದು ಇವರ ಉದ್ದಿಶ್ಯವಾಗಿತ್ತು. ಆಯಾ ತಾಲೂಕಿಗಳಲ್ಲಿರುವ ಮೆಂಬರುಗಳಿಗೆ ಆಮಂತ್ರಣವಿದ್ದರೂ, ಹೆಚ್ಚು ಕಡಿಮೆ 25 ಜನ ಮೆಂಬರರು ಮಾತ್ರ ಈ ಸಭೆಗೆ ದಯಮಾಡಿಸಿದ್ದರು.

ರಸ್ತೆ ಮುಹೂರ್ತ ಎಂಬ ವಾಡಿಕೆ ಪ್ರಕಾರ ನಮ್ಮ ಜಿಲ್ಲೆಯಲ್ಲಿ ಕಿಸ್ತು ಹಣದ ಸ್ಥಿತಿ ಪ್ರತಿ ವರ್ಷದ ಜನವರಿ ತಿಂಗಳಲ್ಲಿ ಎರಡು ಮೂರು ಲಕ್ಷ ರೂಪಾಯಿ ವಸೂಲಾಗುತ್ತಿತ್ತು. ರಸ್ತೆ ಮುಹೂರ್ತಗಳ ಸಮಾರಂಭಕ್ಕೋಸ್ಕರ ಪ್ರತಿ ಒಂದು ತಾಲೂಕು ಆಫೀಸಿಗೆ [illegible] ನವರಿಂದ ಎರಡು ಯಾ ಮೂರು ರೂಪಾಯಿಗಳ ಸಂಸ್ಥಾನಿತ್ತು. ಇದಕ್ಕೆ ಹೆಚ್ಚಿದ ಖರ್ಚು ಆಯಾ ಗ್ರಾಮಾಧಿಕಾರಿಗಳ ಪಾಲಿಗೆ ಬೀಳುತಿತ್ತು. ಜನವರಿ [illegible] ತಿಂಗಳುಗಳಲ್ಲಿ ಕಿಸ್ತು ಹಣವು ವಸೂಲಾಗುವವಾಡಿಕೆ ಇರುವಾಗ ಇದರಿಂದ ಪಟೇಲರಿಗೆ [illegible] ವಸೂಲಿಯ ಅಡಚಣೆ ಬೀಳುತ್ತಿದ್ದಲ್ಲ. [illegible] ತೆರಿಗೆಯು ಮಾರ್ಚ ತಿಂಗಳಿನಿಂದ ವಸೂಲಿಗೆ [illegible] ಬ ಎರಡು ತಿಂಗಳ ಮುಂಚೆ [illegible] ವಸೂಲು ಮಾಡುವದು ಬಡಪಟೇಲರಿಗೆ [illegible] ಪ್ರಯಾಸವೇ ಆಗಿತ್ತು. ಹೀಗೆ ಜಮೆಯಾಗುವ [illegible] ಲಕ್ಷ ರೂಪಾಯಿಗಳ ಎರಡು ತಿಂಗಳ [illegible] ರೈತರಿಗೆ ನಷ್ಟವಾಗುತ್ತಿತ್ತು. [illegible] ದ ಈ ಹಳೇ ವಾಡಿಕೆಯನ್ನು ನಮ್ಮ ಕಲೆಕ್ಟರ್ ದೊರೆ [illegible] ಪರ್ಯಾಲೋಚಿಸಿ ತೆಗದು ಹಾಕಿರುತ್ತಾರೆ. [illegible] ಪಟೇಲ ವರ್ಗವೆಲ್ಲವೂ ಈ ಬಗ್ಗೆ ಕಲೆಕ್ಟರ್ ದೊರೆಗೆ [illegible] ಕೃತಜ್ಞರಾಗಿರುತ್ತಾರೆ.

ಮಂಗಳೂರು ಡಿಸ್ಟ್ರಿಕ್ಟ್ ಕೋರ್ಟು ಈ ತಿಂಗಳ ತಾರೀಕು [illegible] ರಿಂದ ರಜೆಕಾಲದ [illegible] ಕ್ಲೋಸಾಗವದು. ಮುನ್ಸಿಫ್ ಕೋರ್ಟುಗಳೂ ಸಹಾ ಇದೇ ದಿನ ಕ್ಲೋಜ್ ಆಗುವವು.

ನಮ್ಮ ಸೆಷನ್ [illegible] ರಾದ ರಾ. ಎಚ್. ಓ. ಡಿ. ಹಾರ್ಡಿಂಗ್ ದೊರೆಗಳಿಗೆ ಜೂನ್ ತಿಂಗಳ ತಾರೀಕು 17 [illegible] ಒಂದು ತಿಂಗಳ ಪ್ರಿವಿಲೇಜ್ ರಜೆ ಸಿಕ್ಕಿರುವದು. ಈ ರಜೆಯು ಕೋರ್ಟಿನ ರಜೆಕಾಲದ ರಜೆಯ ಅಂತ್ಯದಲ್ಲಿ ಸಿಕ್ಕಿದ್ದರಿಂದ ಜಡ್ಜರು ತಮ್ಮ ಪತ್ನಿಯ ಸಮೇತ ವಿಲಾಯತಿಗೆ ತೆರಳುವರಂತೆ. ಕೋರ್ಟು ಸುರುವಿಗೆ ನಮ್ಮಲ್ಲಿಗೆ ಯಾವ ದೊರೆಗಳು ಜಡ್ಜರಾಗಿ ಬರುವರೆಂಬದು ತಿಳಿಯಲಿಲ್ಲ. ರಾ. ಹಾರ್ಡಿಂಗ್ ದೊರೆಗಳು ತಾನು ಇಲ್ಲಿಗೆನೇ ಹಿಂತಿರುಗಿ ಬರುವ ಸಂಭವವು ಅಷ್ಟೊಂದಿಲ್ಲದ ಕಾರಣ ಮಂಗಳೂರಿನ ಮತ್ತು ದಕ್ಷಿಣ ಕನ್ನಡದ ಆಯಾ ಸಾಮಾನ್ಯ ಗೃಹಸ್ಥರಿಗೂ, ಮುನ್ಸೀಫರಿಗೂ ಒಂದು ಗಾರ್ಡನ್ ಪಾರ್ಟಿಗೆ ಕಳೆದ ತಿಂಗಳಲ್ಲಿ ತಾ. 24 ಆಮಂತ್ರಣ ಕೊಟ್ಟಿದ್ದರು. ಈ ಗಾರ್ಡನ್ ಪಾರ್ಟಿಗೆ ಕಾರ್ಕಳ ಪುತ್ತೂರ ಮುನ್ಸಿಫರೂ ಮ. ರಾ. ರಾ. ಕಾಸರಗೋಡು ವಕೀಲ್ ಕೆ. ಪಿ. ಅಚ್ಚುತಯ್ಯನವರೇ ಮೊದಲಾದ ಹಲವು ಸಂಭಾವಿತ ಗೃಹಸ್ಥರು ತಮ್ಮ ತಮ್ಮ ಊರುಗಳಿಂದ ಚಿತ್ತೈಸಿದ್ದರು. ಮಂಗಳೂರಿನ ಎಲ್ಲಾ ಡಿಸ್ಟ್ರಿಕ್ಟ್ ಕೋರ್ಟು ವಕೀಲರೂ ಹ್ಯಾಕೋರ್ಟು ವಕೀಲರೂ ಅನೇಕ ಜನ ಸರ್ಕಾರಿ ನೌಕರರೂ ಬಂದಿದ್ದರು. ನಮ್ಮ ಡಿಸ್ಟ್ರಿಕ್ಟ್ ಕಲೆಕ್ಟರವರ ಸವಾರಿ ಸಹಾ ಚಿತ್ತೈಸಿತ್ತು.

ಮಂಗಳೂರು ಗವರ್ನಮೆಂಟ್ ಕೊಲೇಜ್ ಗವರ್ನಮೆಂಟ್ ಕೊಲೇಜಿನ ಪ್ರಥಮ ಸಹಾಯಕ ಉಪಾಧ್ಯಾಯರಾದ ರಾ| ಎಂ. ಸೇಷಗಿರಿ ಪ್ರಭು ಎಂ. ಎ. ಗಳವರೂ ರಾ| ವೆಂಕಟೇಶ್ವರಯ್ಯರರೂ ಪ್ರಮೋಶನಾಗಿ ಪ್ರಭುಗಳು 175 ರೂಪಾಯಿ ಹುದ್ದೆಯಲ್ಲಿಯೂ ರಾ| ವೆಂಕಟೇಶ್ವರಯ್ಯರು 125 ರೂಪಾಯಿ ಹುದ್ದೆಯಲ್ಲಿಯೂ ಅದೇ ಕೊಲೇಜಿನಲ್ಲಿರುವರು. ರಾ| ಟಿ. ಮಂಗೇಶರಾವ್ ಬಿ. ಎ. ಎಲ್. ಟಿ. ಇವರಿಗೆ ಪ್ರಮೋಶನ್ನಾಗಿ ಬಳ್ಳಾರಿಯಲ್ಲಿ ಸಬ್ ಅಸಿಸ್ಟಾಂಟ್ ಇನ್ಸ್‌ಪೆಕ್ಟರ್ ಕೆಲಸಕ್ಕೆ ಮೊಕ್ರುರಾಗಿರುವರು.

ಮಂಗಳೂರ ಹಜೂರ ಖಚೇರಿ ಇಲ್ಲಿಯ [illegible] ಗ್ ವನಾ ಕ್ಲರ್ಕ್ ಹೆಡ್ ಕ್ಲಾರ್ಕರಾದ ಮ. ರಾ. ರಾ| [illegible] ಮಂಜುನಾಥ ಬಾಳಿಗ [illegible] ಇವರಿಗೆ ಮಂಗಳೂರು ತಾಲೂಕು ಸಬ್ ಮೆಜಿಸ್ಟ್ರೇಟರ [illegible] ಕೆಲಸವಾದದ್ದು [illegible] ಗೊತ್ತಿರುವದು. ರಾ| ಎಂ. ಅಚ್ಚುತಯ್ಯನವರು—[illegible] ಅಸಿಸ್ಟಾಂಟ್ ಕಲೆಕ್ಟರವರ ಆಫೀಸಿನ [illegible] ಹೆಡ್‌ಕ್ಲಾರ್ಕ್—ರೂಪಾಯಿ 70 ತಲಬು ಸದ್ಯ [illegible] ಸಬ್ ಮೆಜಿಸ್ಟ್ರೇಟ್ [illegible] ರಾ. ಸಿಬಾರಾ [illegible] ರಾವ್ [illegible] ಹೆಡ್ [illegible] ಕ್ಲರ್ಕ್ [illegible] ಆಫೀಸ್ ತಲಬು 60, [illegible] ಮಂಗಳೂರ [illegible] ಆಫೀಸ್ ಹೆಡ್‌ಕ್ಲಾರ್ಕ [illegible] ಟಿ. ಬೆನಗಿನ್‌ಕರ ರಾವ್ [illegible] ಹೆಡ್ [illegible] ಡಿಸ್ಟ್ರಿಕ್ಟ್ [illegible] 10 [illegible] ಹೆಡ್‌ಕ್ಲಾರ್ಕ [illegible] ಆಫೀಸು ಮಂಗಳೂರ ತಲಬು 1 [illegible] ಬಾಬುರಾಯರು [illegible] ಆಫೀಸ್ [illegible] ಲಿಕ್ವಿಡ್ 1 [illegible] ಕೃಷ್ಣಯ್ಯ—ಅಕ್ಟಿಂಗ್ ಡೆಪ್ಯುಟಿ [illegible] ಕಲೆಕ್ಟರ್ ಆಫೀಸು ತಲಬು ಅಕ್ಟಿಂಗ್ 70.

ಕಳೆದ ತಿಂಗಳಲ್ಲಿ ಮಂಗಳೂರ ಡಿಸ್ಟ್ರಿಕ್ಟ್ ಜೈಲಿನಲ್ಲಿ ಒಬ್ಬ ಕೊಲೆಪಾತಕಿಯನ್ನು ಫಾಸಿಗೆ ಕೊಟ್ಟರು [illegible] ದಾರೆ ಬಿಟ್ಟ ಈ ಕೊಲೆಪಾತಕಿ [illegible] ವರೇಗೆ [illegible] ವಿನೋದಾದಿಯಲ್ಲಿ ಈತನ ಹತ್ತರ [illegible] ಮೈಮೇಲೆ ಬೀಳುತ್ತಿದ್ದನು.

ಉಡುಪಿಯಿಂದ ಸನಾತನಧರ್ಮ ಬೋಧಕರಾದ ಒಬ್ಬ ಮೈಸೂರು ಸ್ವಾಮಿಯವರು ಇಲ್ಲಿಗೆ ಬರುವ ಸಂಭವವುಂಟು. ಇವರು ಇಲ್ಲಿಗೆ ಬರುವರೆ ಮಂಗಳೂರು ಥಿಯೋಸಫಿಕಲ್ ಸೊಸ್ಯಾಟಿಯವರು ಇವರಿಗೆ ಆಮಂತ್ರಣ ಕೊಟ್ಟಿರುತ್ತಾರೆ.

ಕಳೆದ ತಿಂಗಳಲ್ಲಿ ನಮ್ಮ ಜಿಲ್ಲಾ ಕೋರ್ಟಿನಲ್ಲಿ ಡ್ಯೂಕ್ ಧೊರೆಗಳವರಿಂದ ಅನ್ಯಾಯ [illegible] ಒಂದು ರಿವಿಜನ್ ಮೊಕದಮೆ ತನಿಖೆ ನಡೆಯಿತು. ಇದರಲ್ಲಿ ಮುದ್ದೆಯಾಳಿಯು ಏಕ್ಸ್‌ಪ್ಲೋಸೀವ್ ಆಕ್ಟಿನ ಮರಿಗೆ ಸಾಕಷ್ಟು ಬಂದೋಬಸ್ತಿಯುಂಟು ಮಾಡಲ್ಪಡದ ಒಂದು ಪಾರ್ಸೆಲನ್ನು ಪಡಕೊಂಡನು.' ಪಾರ್ಸೆಲ ಕಳುಹಿಸಿದವನಿಗೆ ಶಿಕ್ಷೆಯಾಗುವ [illegible] ದಲಿಗೆ ಪಾರ್ಸೆಲು ಪಡಕೊಂಡವನಿಗೆ ಶಿಕ್ಷೆಯಾದ್ದು ಅನ್ಯಾಯವೆಂತ ಜಡ್ಜರು ಈ ಶಿಕ್ಷೆ ತೆಗದು ಹಾಕುವ ಹಾಗೆ ಹ್ಯಾಕೋರ್ಟಿನವರಿಗೆ ಶಿಫಾರಸು ಮಾಡಿರುತ್ತಾರೆ.

ಮರ್ಚಂಟ್ಸ್ ಸೊಸ್ಯಾಟಿ.— ಈ ಸೊಸ್ಯಾಟಿಯವರು ಕಳೆದ ತಾರೀಕು [illegible] ನೇ ಮಂಗಳವಾರ ಸಾಯಂಕಾಲ [illegible] ಘಂಟೆ ಹೊತ್ತಿಗೆ ಸಭೆ ಕೂಡಿದರು. ಕಾಟ್ಯಾವಾಡ್ ಸಂಸ್ಥಾನದ ಜಾಮನಗರ ರಾಜ್ಯದ ಜಾಮ ಸಾಹೇಬ "ರಣಜಿತ್‌ಸಿಂಗ್ ಜೀ" ಬಹದೂರರವರ ಪಟ್ಟಾಭಿಷೇಕ ಆನಂದಾತಿಶಯಗಳನ್ನು [illegible] ಗೆ ತಂತೀ ಮೂಲಕ ಸೂಚಿಸುವದು ಇದರ ಮುಖ್ಯ ಉದ್ದಿಶ್ಯವಾಗಿತ್ತು. ಅನೇಕ ಸಂಭಾವಿತ ಗೃಹಸ್ಥರೂ ಜಾಮನಗರ ನಿವಾಸಿಗಳೂ ಸೊಸ್ಯಾಟಿಯ ಸೆಕ್ರೆಟರಿಗಳಾದ ರಾ. ರಾ. ಮಾವಜೀ ಜೆರಾ ವಾಯೇಡಾ ಇವರ ಜಾಹೀರಾತಿಗೆ ಮಾನ ಕೊಟ್ಟು ನೆರದಿದ್ದರು. ಗ್ರಹಮ್ ಕಂಪೆನಿಯ ಏಜಂಟರಾದ ಮಿ| ಸ್ಯಾಮುವೆಲ್ ಜಲ್ಲಿಯಸ್ ಇವರು ಸಭಾಧ್ಯಕ್ಷರಾಗಿದ್ದರು. ರಾ. ಪು [illegible] ಮನಂದರಾಮದಸೀ ಜಾಮನಗರ ನಿವಾಸಿಗಳಾದ ಇವರು ರಾಜರವರ ಜೀವನ ಚರಿತ್ರೆಯನ್ನು ಯೋಗ್ಯವಾದ ರೀತಿಯಲ್ಲಿ ವಿವರಿಸಿ, ಮಹಾರಾಜರು ಕ್ರಿಕೇಟು ಆಟದಲ್ಲಿ ಭೂಲೋಕದಲ್ಲೆಲ್ಲಾ ಪ್ರಖ್ಯಾತಿ ಪಟ್ಟಂತೆ ತಮ್ಮ ರಾಜ್ಯಭಾರವನ್ನು ಸಾಂಗ್ಯವಾಗಿ ನಡಿಸಿ ಹಿಂದುಸ್ಥಾನದ ಇತರ ರಾಜರುಗಳಂತೆ— ಅಂದರೆ ಗಾಯಕವಾಡ ಸಯ್ಯಾಜಿ ರಾವ್ ಬರೋಡಾ, ಮಹಿಸೂರ ರಾಜರುಗಳಂತೆ— ಪ್ರಜಾ ಪಂಜ್ಯಾಗೆ ಏರ [illegible] ತಪ್ಪಿಂದ [illegible] ಮಕ್ಕಳಿಗೆ ಸಮರ್ಥರಾಗಲಿ ಎಂದು ಕೋರಿದರು. ನಂತರ ಪೋವನ್ [illegible] ಸೇಟ್ ಇವರು ಮಹಾರಾಜರಿಗೆ [illegible] ಇಷ್ಟಿಸಿ ರಾಜ್ಯಭಾರವನ್ನು ಹಕ್ಕು ಪ್ರಕಾರ [illegible] ದಲ್ಲೂ ಅವರ ವಿಕಸಿತವಾದ ಆಂಗ್ಲದೇಶಾದಿ ಪಾಶ್ಚಾತ್ಯ ದೇಶಗಳ ಜ್ಞಾನದಿಂದ ಪ್ರಜೆಗಳನ್ನು ಸುಖಿಗಳಾಗ ಮಾಡಲಿಕ್ಕೆ ಜಗತ್ಕರ್ತನು ಸಹಾಯ ಮಾಡಲಿ ಎಂದು [illegible] ಸಿದರು.

ಇನ್ಶೂರ ಕಂಪೆನಿಯ ಏಜಂಟರಾದ ಜಿ. ಎಮ್. [illegible] ಜಾ, ಇವರ ಪ್ರೊಪೋಜಾಲ್ [illegible] ಮಹಾರಾಜರಿಗೆ ತಂತಿಯ ದ್ವಾರ [illegible] ಅರ್ಪಿಸಿದರು. ಸಭಾಸ್ಥಾನದಲ್ಲಿ ಇಟ್ಟಿದ್ದ ಮಹಾರಾಜರವರ ಪರಕ್ಕೂ [illegible] ಯನ್ ನೇಶನಲ್ ಕೊಂಗ್ರೆಸ್ಸಿನ ಹಿತಚಿಂತಕರಾದ [illegible] ದಾದಾಭಾಯಿ ನವರೋಜಿ, ನಾವ [illegible] ಲಾ. ಸುರೇಂದ್ರನಾಥ ಬೆನರ್ಜಿ, ಮಿಸ್ಟರ್ ಬಿ. ಜಿ. ತಿಲಕ ಮ ಇತರರ ಪರಕ್ಕೂ ಪುಷ್ಪವೃಷ್ಟಿಯನ್ನು ಸುರಿಸಿ ಮೂರಾವರ್ತಿ ಜಯಘೋಷವನ್ನು ಮಾಡಿ ತಾಂಬೂಲಾದಿಗಳನ್ನು ಸ್ವೀಕರಿಸಿ ಅಂದಿನ ಸಭೆಯು ಮುಗಿಯಿತು. *M. G. Pai.*

ನಾನು ಮಂಗಳೂರ ಬಂದರಿಂದ ಇತ್ತಲಾಗೆ [illegible] ತ್ತಾ ದಾಹಗೊಂಡು ಒಂದು ಸೋಡಾ ಓಟರ್ ಕಾರ್ಖಾನೆಗೆ ಬಂದು ಅರ್ಧಾಣೆಯ ಬಾಬ್ತು 'ಗುಲಾಬು' ಸೋಡಾ ಬಾಟ್ಲ ಒಂದನ್ನು ಕುಡಿಯುವರೆ ಒಡದೆ. ನೀರಿಗೆ ಕೊಳೆತ ವಾಸನೆಯು ಬರುತ್ತಿತ್ತು. ಕುಡಿಯುವರೆ ಆಗಲೇ ಇಲ್ಲ.

ಸೋಡಾ ಓಟರ್ ಕಾರ್ಖಾನೆಗಳಲ್ಲಿ ನೀರನ್ನು ಶುದ್ಧ ಮಾಡುವದು ಉಚಿತ ಕೇಳಬಲ್ಲೆನು. [illegible] ಜನರಿಗೆ ಈ ಶೀತಳಿತ ನೀರಿನ ಸೋಡ ಓಟರ್ ಕುಡಿಯುಲಿಕ್ಕೆ ಕೊಟ್ಟರೆ ಪ್ಲೇಗಿನೊಂದಿಗೆ ಕಾಲೆರಾ ಸುರು ಆಗಲಿಕ್ಕೆ ಸಂಶಯವಿಲ್ಲ. ಜಿಲ್ಲಾ ಡಾಕ್ಟ್ರರಿಗಾಗಲಿ ಮುನ್ಸಿಪಲ್ ಛೈರಮೆನರಿಗಾಗಲಿ ಇದನ್ನು ತಪಾಸಿ ನೋಡುವ ಅಧಿಕಾರ ಉಂಟೋ ಇಲ್ಲವೊ ಎಂಬದಾಗಿ ಗೊತ್ತಿಲ್ಲ. ಗೊತ್ತಿದ್ದರೂ ಕನ್ನಡದಲ್ಲಿ ಬರೆದು ತಮಗೆ ಕಳುಹಿಸಿದರೆ ಇಂಗ್ಲೀಷ್ ಕಲಿತ ಅಧಿಕಾರಿಗಳಿಗೆ ತಿಳಿಯಲಸಾಧ್ಯ ಎಂದು ನನಗೆ ಗೊತ್ತೇ ಉಂಟು. ತಮಗೆ ಯುಕ್ತ ಕಂಡರೆ ತಾವು ಇದನ್ನು ಪ್ರಕಟಿಸ ಬಹುದು.

ವಾಚಕರಲ್ಲೊಬ್ಬ.

ಉಡುಪಿ. ಅದ್ಮಾರ ಮಠದ ಶ್ರೀಸ್ವಾಮಿಗಳವರು ಮದ್ರಾಸ್ ವಿಶ್ವ ವಿದ್ಯಾಲಯದ ಫೆಲೊಗಳನಡಾದ ನಮ್ಮ ಜಿಲ್ಲಾ ಕಲೆಕ್ಟರ್ ಧೊರೆಗಳ ಮುಖಾಂತರ ಒಂದು ಬಂಗಾರ ಪದಕ ವ ಸರಪಣಿಯನ್ನು ರಾ| ಪಿ. ಸಂಜೀವ ಎಂ, ಎ ಬಿ. ಎಲ್ ಇವರಿಗೆ ಕಳೆದ ಕನ್ವೊಕೇಶನ್ ಸಮಯದಲ್ಲಿ ಬಹುಮಾನಾರ್ಥವಾಗಿ ಉಡುಗಿರೆ ಮಾಡುವರೆ ಯುನಿವರ್ಸಿಟಿಯ ರೆಜಿಸ್ಟ್ರಾರವರಿಗೆ ಕಳುಹಿಸಿಕೊಟ್ಟಿದ್ದರು. ಇಂಗ್ಲೀಷಿನಲ್ಲಿ ಎಂ, ಎ. ಪರೀಕ್ಷೆ ಪಾಸಾದವರು ನಮ್ಮ ಜಿಲ್ಲೆಯಲ್ಲಿ ಇವರೊಬ್ಬನೇ ಈ ಪರೀಕ್ಷೆಯಲ್ಲಿ ಇವರು ಪ್ರಥಮ ತರಗತಿಯಲ್ಲಿ ಮೊದಲನೆಯವನಾಗಿ ಉತ್ತೀರ್ಣರಾಗಿರುತ್ತಾರೆ ತಮ್ಮ ಎಫ್ ಎಲ್ ಪರೀಕ್ಷೆಯಲ್ಲಿ ಸಹಾ ಇದೇ ಸ್ಥಾನವನ್ನು ಇವರು ಬಿಡಲಿಲ್ಲ. ಕಳೆದ ಬಿ ಎಲ್ ಪರೀಕ್ಷೆಯಲ್ಲಿ ಸಹಾ ಪ್ರಥಮ ತರಗತಿಯಲ್ಲಿ ಪಾಸಾಗಿರುತ್ತಾರೆ ಹೀಗೆ ಕೀರ್ತಿಗೊಂಡು ಪ್ರತಿ ಪರೀಕ್ಷೆಯಲ್ಲಿಯೂ ಪ್ರಸಾದ ರಾ ಸಂಜೀವರು ಸರ್ವವಿಧದಲ್ಲಿಯೂ ಶ್ರೀ ಸ್ವಾಮಿಗಳವರ [illegible] ಪಾತ್ರರಾಗಿರುತ್ತಾರೆ ಇವರಿಗೆ ದೀರ್ಘಾಯುಷ್ಯವನ್ನೂ ವೃತ್ತಿಯಲ್ಲಿ ಜಯವನ್ನೂ ಬಯಸುವೆವು

ಬಡಕ ಬೈಲು. ಕಳೆದ ತಿಂಗಳ ತಾ 1[illegible]ನೇ ದಿವಸ ಹಗಲು ಸುಮಾರು 3 ಘಂಟೆ ಸಮಯಕ್ಕೆ [illegible] ಗ್ರಾಮದ ಚಿಕ್ಕಲಿಪಾಡಿಯಲ್ಲಿ 1ನೇ ಉಗ್ಗ ಭಂಡಾರಿ, 2ನೇ ಮುಯ್ಯ ಭಂಡಾರಿ 3ನೇ ಅಣ್ಣಪ್ಪ ಶೆಟ್ಟಿ, 4ನೇ ಮೋನಪ್ಪಶೈ ಎಂಬ 4 ಜನರ ಮನೆಗೆ ಏಕಕಾಲದಲ್ಲಿ ಆಕಸ್ಮಾತ್ ಬೆಂಕಿ ತಾಗಿ ಉರಿಯ ಹತ್ತಿತು ಸುಮಾರು [illegible] ಕಡದರೂ ಸಮಾಜ ನೀರಿಲ್ಲದ ದೆಸೆಯಿಂದ ಒಂದು ಕಟ್ಟೋಣವನ್ನೂ ಉಳಿಸಲಿಕ್ಕೆ ಆಗಲಿಲ್ಲ. ಈ ಪೈಕಿ 1ನೇಯವನ ಅಳಿಯನಾದ ಪಕೀರ ಶೆಟ್ಟಿ ಎಂಬವನು ಜೀವದಾಶೆ ಬಿಟ್ಟನೋ ಎಂಬ ಹಾಗೆ ಯಾರೂ ಬೊಬ್ಬಿಟ್ಟರೂ ಕೇಳದೆ ಒಳನುಗ್ಗಿ 12 ಮುಡಿ ಅಕ್ಕಿಗಳನ್ನು ಹೊರಗೆ ಹಾಕಿದನು. ಅಷ್ಟರಲ್ಲಿ ಅವನ ತಂಗಿ ಮತ್ತೊಂದು ಕಡೆ ಒಳಹೊಕ್ಕಿದ್ದನ್ನು ಕಂಡು ಓಡಿ ಅವಳನ್ನು ಹೊರಗೆ ದೂಡಿ ತಾನು ಹೊರಡುವಷ್ಟರಲ್ಲೇ ಮಾಡು ಜಾರಿ ಬಾಗಲು ಮುಚ್ಚಿತು. ಆತನು ಹ್ಯಾಗಾದರೂ ಮತ್ತೊಂದು ಕಡೆ ಗೋಡೆ ಎಡೆಯಿಂದ ಬೈಹುಲ್ಲಿನ ಮುಚ್ಚಿಯ ಮೇಲಕ್ಕೆ ಹಾರಿದನು ಅಷ್ಟರಲ್ಲಿ ತುಂಬಾ ಬೊಕ್ಕೆ ತಾಗಿತ್ತು ಅಲ್ಲಿಂದ ಕೆಳಗೆ ಬಿದ್ದವನನ್ನು ಬಾಕಿದ್ದವರು ಎತ್ತಿಕೊಂಡು ಹೋದರು. ತಾ. 19ನೇ ದಿವಸ 4 ಘಂಟೆಗೆ ಮೃತಪಟ್ಟನು ಆತನ ತಂಗಿ ಸೇಸು ಎಂಬವಳು ಬದುಕುವದು ಕಷ್ಟ ಮತ್ತೊಬ್ಬ ಸಂಕಪ್ಪಶೈ ಎಂಬವನು ಬೆಂಕಿಯಲ್ಲಿ ಬಹಳ ಜಖಮಾಗಿದ್ದಾನೆ. ಒಟ್ಟಾರೆ ಕಟ್ಟೋಣ ಸಾಂದಿಗೆಗಳ ನಷ್ಟವು ನಾಲ್ಕು ಸಾವಿರವಾದೀತು

ಕಳೆದ ತಿಂಗಳ 18ನೇ ದಿನ ಮಲ್ಲೂರು ಪಠಾರಿ ಗುತ್ತ ಶೆಟ್ಟಿ ಎಂಬವನು ಗುರುಪುರಕ್ಕೆ ಹೋಗುವಾಗ್ಯೆ ಒಂದು ಹುಚ್ಚನಾಯಿ ಆತನನ್ನು ಅಟ್ಟಿಕೊಂಡು ಬಂತು ಆತನ ಘಾಬರಿಯಿಂದ ಕೂಗಿಕೊಂಡು ಓಡುವಷ್ಟರಲ್ಲೇ ನಾಯಿ ಒಂದು ಕಚ್ಚಲು ಹೆದರಿ ಬಿದ್ದು ಹೋದನು ಕೂಡಲೇ ಅದು ಮೈಯೆಲ್ಲಾ ಕಚ್ಚಿ ಕಚ್ಚಿ ಘಾಯ ಮಾಡುತ್ತಿರುವಾಗ್ಯೆ ದೂರದವರು ಓಡಿ ಬಂದು ಬಿಡಿಸಿ ತಂದು ಔಷಧಿ ವಗೈರೆ ಮಾಡಿರುತ್ತಾರೆ ಆದರೂ ಬಚಾವಾಗುವದು ಕಷ್ಟವೆಂತ ನೋಡಿದವರೆಲ್ಲರೂ ಹೇಳುತ್ತಾರೆ ನಾಯಿಗಳನ್ನು ಸಾಕುವವರು ತಮ್ಮ ತಮ್ಮ ನಾಯಿಗಳನ್ನು ತಕ್ಕ ಬಂದೋಬಸ್ತಿಯಲ್ಲಿಟ್ಟರೆ ಇಂಥಾ ವಿಪತ್ತುಗಳೂ ಸಂಭವಿಸಲಿಕ್ಕಿಲ್ಲ

ಗುರುಪುರ ಶಾಲೆಯ ಕಡವಿನ ಬಾಗಲಲ್ಲಿರುವ ಮುಕ್ರಿಬ್ಯಾರಿ ಮಕ್ಕಳು ಕೆಲವು ದಿವಸಗಳ ಕೆಳಗೆ 14 ವರಹಕ್ಕೆ ಕ್ರಯಕ್ಕೆ ಪಡಕೊಂಡ ಗಾಡಿ ಎತ್ತುಗಳನ್ನು ಕೆಲವು ಜನ ವಾಹಿಲಿಯವರು ಕೂಡಿ ಇದೇ ತಾ 21ನೇ ರಾತ್ರಿ ಗುರುಪುರ ಹೊಳೆಯಲ್ಲಿ ಚೂರಿ ಹಾಕಿ ಚರ್ಮ ಮತ್ತು ಕೊಂಬುಗಳನ್ನು ಕೊರಳ ಸರಪಣಿ ಕೂಡಾ 4½ ರೂಪಾಯಿ ಕ್ರಯವಾದಿ ಕುದ್ರೋಳಿಯ ಒಬ್ಬ ವಾಹಿಲಿಯವನಿಗೆ ವಿಕ್ರಯಿಸಿದರು, ಆತನು ಅದನ್ನು ತೆಗದುಕೊಂಡು ಹೋಗುವದನ್ನು ಸದರಿ ಮಾಲಿಕರು ತಿಳಿದು ಆತನನ್ನು

ಶಾಲಿವಾಹನ ಶಕ ೧೮೨೯ನೇ ಪ್ಲವಂಗ ಸಂವತ್ಸರದ ಅಧಿಕ ಚೈತ್ರ ಬ ೩ಯು ಚಂದ್ರವಾರದಾರಭ್ಯ ನಿಜ ಚೈತ್ರ ಶು ೩ಯು ಚಂದ್ರವಾರದ ವರೆಗಿನ ವಾರ ಪಂಚಾಂಗವು. 1907ನೇ ಇಸವಿ ಎಪ್ರಿಲ್ ತಾರೀಕು 1ರಿಂದ 15ರ ವರೆಗೆ

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ತಾ.	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ
1	ಚಂದ್ರ	ತ	೩೮	ಸ್ವಾ	೧೮|||	9	ಕುಜ	ದ್ವಾ	೫೧||	ಶ್ರ	೪೮|||
2	ಕುಜ	ಚೌ	೩೩	ವಿ	೧೫||	10	ಬುಧ	ತ್ರೆ	೪೯	ಪೂಭಾ	೪೮
3	ಬುಧ	ಪ	೨೭|	ಅ	೧೨	11	ಗುರು	ಚತು	೪೭|||	ಉಭಾ	೪೮|||
4	ಗುರು	ಷ	೨೧||	ಜ್ಯೆ	೮|	12	ಶುಕ್ರ	ಅಮಾ	೪೭|||	ರೇ	೫೦
5	ಶುಕ್ರ	ಸ	೧೫|||	ಮೂ	೪|	13	ಶನಿ	ಪಾ	೪೯	ಅ	೫೩
6	ಶನಿ	ಅ	೯|||	ಪೂಷಾ	|	14	ರವಿ	ಬಿದಿಗೆ	೫೧||	ಭ	೫೭|
7	ರವಿ	ನ	೪	ರೆ	೩೨	15	ಚಂದ್ರ	ತದಿಗೆ	೫೫	ಕೃ	೬೦
8	ಚಂದ್ರ	ಯೋ	೫೫|||	ಧ	೫೦||						

ಕಡದು ಗುರುಪುರ [illegible] ಒಪ್ಪಿಸಿದ್ದಾರೆ.

[illegible] ಈ ವರುಷದ ಉತ್ಸವವು ಇದೇ ಎಪ್ರಿಲ್ ತಾ. 9ನೇ ಪ್ಲವಂಗ ಸಂ|ವರದ ಅಧಿಕ ಚೈತ್ರ ಬ [illegible] ಮಂಗಳವಾರ ದಿವಸ ಜರಗುವದು. [illegible] ಜಡ್ಜರವರು ಹೋದ ವರ್ಷದಂತೆಯೇ ಈ ವರುಷದ ಉತ್ಸವಕ್ಕೆ ಸಹಾ ಬರುವರೆಂಬ ವರ್ತಮಾನ ಉಂಟು. ಈ ವರುಷದ ಉತ್ಸವವು ಬಹು ವಿಶೇಷವಾಗಿ ನಡೆಯುವದೆಂತ ತೋರುತ್ತದೆ. ಬಹುಕಾಲದಿಂದ 60 ರೂಪಾಯಿ ಬಾಡಿಗೆಗೆ ವಹಿಸಿಕೊಳ್ಳುತ್ತಿದ್ದ ಏಲಾಮು ಅಂಗಡಿಯನ್ನು ಈ ಕಾಲ 110 ರೂಪಾಯಿಗೆ ವಹಿಸಿಕೊಂಡದ್ದೇ ಇದರ ಕುರುಹು.

B. S. P.

ವಿವಿಧ ವಿಷಯ.

ಹಿಂದುಸ್ಥಾನದ 300,000,000 ಜನಸಂಖ್ಯೆಯಲ್ಲಿ ವ್ಯವಸಾಯ ವೃತ್ತಿಯು ವಿನಹಾ ಬೇರೆ ಕೈಗಾರಿಕೆಗಳಲ್ಲಿಂದ ಜೀವನ ಗೈಯ್ಯುವ ಜನರ ಸಂಖ್ಯೆಯು ಅತ್ಯಲ್ಪವಾದದ್ದೆಂತ ಈ ಕೆಳಗಿನ ಪಟ್ಟಿಯಿಂದ ತೋರಿ ಬರುವದು —

	ಜನಸಂಖ್ಯೆ
ಹತ್ತೀ ಕಾರ್ಖಾನೆಗಳಲ್ಲಿ	197,000
ನೂಲುಗಿರಿಣಿಗಳಲ್ಲಿ	185,000
ಗೋಣಿ ನೆಯ್ಯುವ ಕಾರ್ಖಾನೆಗಳಲ್ಲಿ	133,000
ನೀಲಿ ಕಾರ್ಖಾನೆಗಳಲ್ಲಿ	123,000
ಕಲ್ಲಿದ್ದಲಿನ ಗಣಿಗಳಲ್ಲಿ	82,000
ಕಬ್ಬಿಣದ ಮತ್ತು ಹಿತ್ತಾಳಿ ಕಾರ್ಖಾನೆಗಳಲ್ಲಿ	24,000
ಭತ್ತದಿಂದ ಅಕ್ಕಿ ಮಾಡುವ ,,	18,000
ಛಾಪಖಾನೆಗಳಲ್ಲಿ	14,000
ಹಂಚು ಕಾರ್ಖಾನೆಗಳಲ್ಲಿ	14,000
ಹಡಗ ಕಟ್ಟುವ ಧಕ್ಕೆಗಳಲ್ಲಿ	10,000
ಉಣ್ಣೆಯ ಕಾರ್ಖಾನೆಗಳಲ್ಲಿ	3,600
ಕಾಗದ ಕಾರ್ಖಾನೆಗಳಲ್ಲಿ	4,250

ಈ ಸಂಖ್ಯೆಗಳನ್ನು ನೋಡಿದರೆ ಸ್ವದೇಶೀ ಚಳವಳಿಯು ಇನ್ನೂ ನಮ್ಮ ದೇಶ ಎಲ್ಲಾ ಕಡೆಗಳಲ್ಲಿಯೂ ಸಮವಾಗಿ ಬೇರೂರಲಿಲ್ಲ ಎಂತ ಹೇಳಬಹುದು.

ಡಿ. ವಾಸ್ ಎಂಡ್ ಸನ್ಸ್ ಸ್ಯಾಕಲ್ ಎಜಂಟ್ಸ್ ಮತ್ತು ರಿಪೇರರ್ಸ್ ಇವರ ಜಾಹಿರಾತು. ಈ ಮೂಲಕ ನಾವು ಸರ್ವರಿಗೂ ತಿಳಿಯಪಡಿಸುವದೇನಂದರೆ.— ನಮ್ಮ ಸ್ಯಾಕಲ್ ರಿಪೇರಿ ಕೆಲಸಕ್ಕಿದ್ದ ಮಡಿಕೇರಿಗುತ್ತೆ ಮಿಶನ್ ಶಾಲೆಯ ರಾ| ಬಾರ್ನಬಾಸ್ ಕೊತೊಟ್ ಇವರ ಮಗ ರಾ| ಈ ಬಿ. ಕೊತಟಾಂ ವರಿನ್ನು ನಮ್ಮ ಕೆಲಸದಿಂದ ಬಿಟ್ಟಿರುತ್ತೇವೆ. ಯಾವದೊಂದು ತರದ ರಿಪೇರಿಯಾ ಇತರ ಕೆಲಸಗಳನ್ನು ಕಂಪೆನಿಯವರಿಗೆಂತ ಸದರಿಯವರ ಮುಖಾಂತರ ಕೊಟ್ಟಲ್ಲಿ ಇದರಿಂದುಂಟಾಗ ಬಹುದಾದ ಲಾಭ ನಷ್ಟಗಳಿಗೆ ಕಂಪೆನಿಯವರು ಜವಾಬದಾರರಾಗಿರುವದಿಲ್ಲ. ನಮ್ಮಲ್ಲಿ ಮಾಡಿಸಬಹುದಾದ ಸ್ಯಾಕಲ್ ರಿಪೇರಿ ಮೊದಲಾದ ಇತರ ಕೆಲಸಗಳನ್ನು ನಮ್ಮ ರೂಪರೂಪ ಮಾತಾಡಿ ವ ಕಾಗದ ಮುಖಾಂತರ ನಡಿಸ ಬೇಕಾಗಿರುವದು. ನಮ್ಮ ಪೈಕಿ ಸ್ಯಾಕಲ್ ರಿಪೇರಿಂಗ್ ಮೊದಲಾದ ಸ್ಯಾಕಲುಗಳ ಯಂತ್ರಜ್ಞಾನವುಳ್ಳವರಿಂದ ನಮ್ಮಲ್ಲಿ ಕೆಲಸವು ನಡಿಸಲ್ಪಡುವದಾದ್ದರಿಂದ ಗಿರಾಕಿಗಳೆಲ್ಲರೂ ನಮ್ಮಲ್ಲಾಗುವ ಕೆಲಸದ ವಿಷಯ ಪೂರ್ಣ ಭರವಸದಿಂದಿರಬಹುದು. ಕೆಲಸವನ್ನು ಬಹಳ ನಾಜೂಕು ರೀತಿಯಲ್ಲಿಯೂ ಅಷ್ಟು ಕಡಿಮೆ ದರದಲ್ಲಿಯೂ ಮಾಡಿಕೊಡುವೆವು.

D. VAZ & SONS.
CYCLE AGENTS,
Hampankatte Mangalore.

Mangalore,
1st March, '07.

WILLIAM & Co., 16 OAK LANE, FORT BOMBAY.

ಅಮೃತಾಂಜನ

ಬಾಟ್ಲಿ ಒಂದಕ್ಕೆ ಕಿಮ್ಮತ್ತು 0—8—0 ವಿ. ಪಿ. 0—12—0.

ಅಮೃತಾಂಜನ—ಸುಖಾಂಜನ.
ಅಮೃತಾಂಜನ—ದಿವ್ಯಾಂಜನ.
ಅಮೃತಾಂಜನ—ಸಂಜೀವನ.
ಅಮೃತಾಂಜನ—ಪರಮಾಂಜನ.
ಅಮೃತಾಂಜನ—ಶೀತಭಂಜನಿ.
ಅಮೃತಾಂಜನ—ಪ್ರಾಭಂಜನವಿಮರ್ದಿನಿ

ಅಮೃತಾಂಜನ—ಅರ್ಧಶಿರೋವೇದನಹಾರಿಣಿ.
ಅಮೃತಾಂಜನ—ತಕ್ಷಣ ಪರಿಹಾರಿಣಿ.
ಅಮೃತಾಂಜನ—ಗಂಟ್ಲು ನೋವಿಗೆ
ಅಮೃತಾಂಜನ—ವಾತದ ನೋವಿಗೆ.
ಅಮೃತಾಂಜನ—ಎದೆ ನೋವಿಗೆ
ಅಮೃತಾಂಜನ—ತಲೆನೋವಿಗೆ

ಜಕಮ್ ಮತ್ತು ಘಾಯ, ಸಂಧಿವಾತ, ಶಿರೋಭಾರ, ಶಿರೋವೇದನೆ ಎಲ್ಲಾ ತರದ ರೋಗಗಳಿಗೆ ಈ ಔಷಧವು ಉತ್ತಮವಾಗಿರುತ್ತದೆ. ಇದರಿಂದ ಗುಣವು ಕಂಡುಬರುವದಿಲ್ಲವಾದರೆ ಹಣವು ಹಿಂತಿರುಗಿ ಕೊಡಲ್ಪಡುವದು. ತ್ವರೆಮಾಡಿರಿ! ಕೊಂಡುಕೊಳ್ಳಿರಿ!!

ಗಜಕರ್ಣದ ಮುಲಾಮು ಡಬ್ಬಿ 1ಕ್ಕೆ 0 6 0 ವಿ. ಪಿ. 0 10—0.

ಗಜಕರ್ಣದ ಮುಲಾಮು—ಇದನ್ನು ಹಚ್ಚುವದರಿಂದ ಎಲ್ಲಾ ತರದ ಗಜ್ಜಿಯು ಸಹಿತ ಹೋಗುವದು
ಗಜಕರ್ಣದ ಮುಲಾಮು—ಮೂರು ಸಾರೆ ಹಚ್ಚುವದರೊಳಗೆ ಗಜಕರ್ಣವು ಹೋಗುವದು
ಗಜಕರ್ಣದ ಮುಲಾಮು—ಇದನ್ನು ಹಚ್ಚಿದಲ್ಲಿ ಉರಿಯು ಬರುವದಿಲ್ಲ, ಇದರಿಂದ ಚರ್ಮವು ಕಪ್ಪಾಗುವದಿಲ್ಲ
ಗಜಕರ್ಣದ ಮುಲಾಮು—ಇದನ್ನು ಒಂದು ಸಾರೆ ಪರೀಕ್ಷಿಸಿ ನೋಡಿರಿ, ಕ್ರಯ ಬಹಳ ಕಮ್ಮಿ ಗುಣ ಹೆಚ್ಚು
ಗಜಕರ್ಣದ ಮುಲಾಮು—ಇದರಿಂದ ಗುಣ ಕಂಡುಬರುವದಿಲ್ಲವಾದರೆ ಹಣವು ಹಿಂತಿರುಗಿ ಕೊಡಲ್ಪಡುವದು

	ರೂ	ಆ	ಪೈ
ಜೀರ್ಣರಸಾಯನ—ಹೊಟ್ಟೆಯಲ್ಲಿ ಹಸಿವೆ ಉಂಟಾಗುವದಕ್ಕೆ ಮತ್ತು ನಾಲಿಗೆಗೆ ರುಚಿ ಬರುವದಕ್ಕೆ ಉತ್ತಮವಾದದ್ದು	1	4	0
ವಜ್ರಗುಟಿಕ—ಧಾತು ಪುಷ್ಟಿ, ಸ್ವಪ್ನಸ್ಖಲನ ಮೊದಲಾದದ್ದು ನಿಲ್ಲುತ್ತದೆ. ಶಿಘ್ರವಾಗಿ ಶಕ್ತಿ ಕೊಡುತ್ತದೆ	1	0	0
ಜ್ವರಹಾರಿ—ಎಲ್ಲಾ ತರದ ಜ್ವರಗಳ ಮೇಲೆ ರಾಮಬಾಣದಂತಿರುವ ದಿವ್ಯವಾದ ಔಷಧವಾಗಿರುತ್ತದೆ. ಬಾಟ್ಲಿ 1ಕ್ಕೆ	0	12	0
ಚೇಳುಕಡಿತದ ಮದ್ದು—ಚೇಳುವಿನ ಕಡಿತದ ಮೇಲೆ ಈ ಔಷಧವು ಅಮೃತವಾಗಿರುತ್ತದೆ	0	[illegible]	0
ಖಜ್ಜಿ ಮುಲಾಮು—ಈ ಮುಲಾಮು ಅತಿಶಯ ಅಗ್ಗವೂ ಗುಣದಾಯಕವೂ ಆಗಿರುತ್ತದೆ	0	3	0
ದಂತಮಂಜನ—ಈ ಮಂಜನದಿಂದ ಹಲ್ಲುಗಳನ್ನು ದಿನಾಲು ತಿಕ್ಕುವದರಿಂದ ಹಲ್ಲುಗಳು ಶುಭ್ರವಾಗಿ ಹಲ್ಲುಗಳಿಂದ ರಕ್ತ ಸುರಿಯುವದು ನಿಲ್ಲುತ್ತದೆ. ಕ್ರಯ ಬಹಳ ಕಮ್ಮಿ ಡಬ್ಬಿ 1ಕ್ಕೆ	0	2	0
ರೋಮಹಾರಿ—ಈ ಚೂರ್ಣವನ್ನು ತಾಗಿಸುವದರಿಂದ ರೋಮವನ್ನು ಪೂರ್ಣವಾಗಿ ತೆಗೆಯುತ್ತದೆ	0	8	0
ಕೇಶವರ್ಧಿನೀ ತೈಲ—ಇದು ತಲೆಯ ಮೆದುಳನ್ನು ತಂಪು ಮಾಡಿ ಕೂದಲನ್ನು ಬೆಳೆಸುತ್ತದೆ ಮತ್ತು ಇದಕ್ಕೆ ಚಲೋ ಪರಿಮಳವು ಬರುತ್ತದೆ. ಮೂರು ಔನ್ಸು ಬಾಟ್ಲಿಗೆ ಕ್ರಯ	1	0	0
ಜುಲಾಬು ಮಾತ್ರೆ—ಜುಲಾಬಿಗೆ ಉತ್ತಮವಾದದ್ದು.	0	4	0
ಕಫಹಾರಿ—ಕೆಮ್ಮು, ದಮ್ಮು, ಕ್ಷಯ ರೋಗಗಳಲ್ಲಿ ಕಫ ನಿಲ್ಲಿಸುವದಕ್ಕೆ ಇದು ಅಮೂಲ್ಯವಾಗಿರುತ್ತದೆ	1	4	0
ಸುಂದರೀ ತೈಲ—ಈ ತೈಲವನ್ನು ಮೋರೆಯ ಮೇಲೆ ತಾಗಿಸಿದರೆ, ಮೊಡವೆಗಳು ಹೋಗಿ ಕಪ್ಪು ಕಲೆಗಳನ್ನು ತೆಗೆದು ಶಾಂತವಾದ ಮತ್ತು ಮನೋಹರವಾದ ರೂಪವನ್ನು ತರಿಸುತ್ತದೆ. ಗಡ್ಡಿ 1ಕ್ಕೆ	0	8	0

ನೇತ್ರಾಂಜನ 0-4-0 **ಕುಸುಮಾರಿ ಗುಟಿಕ** 1 0 0 **ಪ್ರಮೇಹದ ಮಿಶ್ರಣ** 1 0-0, **ಜಂತುವಾತಹಾರಿ** 0 [illegible] 0, **ಕಫನಾಶಕ ಚೂರ್ಣ** 0 [illegible] 0
ಕಸ್ತೂರಿ ಮಾತ್ರೆಗಳು 0-10-0, **ತಾಂಬೂಲ ಗುಟಿಕೆ** 0-8-0.

ಎಲ್ಲಾ ತರದ ಔಷಧಗಳು ಇರುವದರಿಂದ ಕೆಟಲಾಗು ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು.

AMRUTANJAN CURES RHEUMATISAM.

TRY OUR AMRUTANJAN AND YOU WILL LIKE IT

ವಿಳಾಸ:—ವಿಲಿಯಂ ಮತ್ತು ಕಂಪೆನಿ, ಫೋರ್ಟ ಮುಂಬಯಿ.

Printed and published by V. S. Kamath at the Mangalore Trading Association's "Sharada Press".

ಸ್ವದೇಶಾಭಿಮಾನಿ

ಎಂಬ

ಕನ್ನಡ ಪಾಕ್ಷಿಕ ಪತ್ರವು.

ಪುಸ್ತಕ 1. ಮಂಗಳೂರು, 16ನೇ ಎಪ್ರಿಲ್ 1907. ಸಂಚಿಕೆ 8.

ವಿಷಯಗಳು.

1. ಹಿಂದುಸ್ಥಾನದ ಜನಾಂಖಿರ್ತನ ಅಂದಾಜು ಪ[illegible]
2. ಕೆಳಗಿನ ಪರಿಷದ ಕ್ರಿಮಿನಲ್ ಮೊಕದಮೆಗಳು
3. ಜಾತಿ ವಿಚಾರವು
4. ಮಹಾಭಾರತದೊಳಗಿನ ಉಪಕಥೆ
5. 15 ರೂಪಾಯಿ ತಲಪಿಸಿ ಸರಕಾರಿ ಉದ್ಯೋಗ
6. ಪತ್ರವ್ಯವಹಾರ
7. ಕಣ್ಣಾನೂರ ವಸ್ತು ಪ್ರದರ್ಶನ
8. ವರ್ತಮಾನ ಸಂಗ್ರಹ ಇತ್ಯಾದಿ

ಸ್ವದೇಶಾಭಿಮಾನಿಯಲ್ಲಿ ಪ್ರಕಟನೆಗಳನ್ನು ಪ್ರಕಟಿಸುವದರ ದರ.

	೧ ಸಾರಿ	೪ ಸಾರಿ	೧೨ ಸಾರಿ	೨೪ ಸಾರಿ
ಇಡೀ ಪಾನು	ರೂ. ೬	ರೂ ೧೬	ರೂ ೪೦	ರೂ. ೭೫
ಅರ್ಧ ಪಾನು	,, ೩ ೮	,, ೧೨	,, ೨೪	,, ೪೦
ಕಾಲು ಪಾನು	,, ೨ ೮	೮	,, ೧೮	, ೩೦
ಅರೆಕಾಲು ಪಾನು	, ೧ ೮	,, ೫	,, ೧೩	, ೨೨

ಅರೆಕಾಲು ಪಾನುಗಳಿಗಿಂತಲೂ ಸಣ್ಣದಾದ ಪ್ರಕಟಣೆಗಳ ದರವನ್ನು ಮೆನೇಜರಿಗೆ ಬರದು ತಿಳಕೊಳ್ಳಬೇಕ.

ಸ್ವದೇಶಾಭಿಮಾನಿಯ ಚಂದಾಹಣ.

	ರೂ	ಆ
ಟಪ್ಪಾಲು ಹಾಸಲು ಇಲ್ಲದೆ ೧ ವರ್ಷಕ್ಕೆ	೧	೦
ಟಪ್ಪಾಲು ಹಾಸಲು ಸಹಿತ ೧ ವರ್ಷಕ್ಕೆ	೧	೨
,, ,, ಅರ್ಧ ವರ್ಷಕ್ಕೆ	೦	೯

ಚಂದಾಹಣವನ್ನು ಮುಂದಾಗಿ ತೆರತಕ್ಕದ್ದು. ಪ್ರಕಟಣೆಗಳನ್ನೂ ಚಂದಾಹಣವನ್ನೂ ಕುರಿತ ಈ ಕೆಳಗಿನ ವಿಳಾಸಕ್ಕೆ ಬರೆಯುವದು.

ವಿಳಾಸ — ಮೆನೇಜರ್ ಶಾರದಾ ಛಾಪಖಾನೆ, ಮಂಗಳೂರು.

ಶಾಲಿವಾಹನ ಶಕ ೧೮೨೯ನೇ ಪ್ಲವಂಗ ಸಂವತ್ಸರದ ಸಿಜ ಚೈತ್ರ ಶುದ್ಧ ೪ ಮಂ ಕುಜವಾರವಾರಭ್ಯ ನಿಜಚೈತ್ರ ಬಹುಳ ೩ಯು ಕುಜವಾರದ ವರೆಗಿನ ವಾರ ಪಂಚಾಂಗವು. 1907ನೇ ಇಸವಿ ಎಪ್ರಿಲ್ ತಾರೀಕು 16ರಿಂದ 30ರ ವರೆಗೆ.

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ
16	ಕುಜ	ಚೌ	[illegible]	ಕೃ	[illegible]	21	[illegible]	ಏಕಾ	[illegible]	ಪೂ	[illegible]
17	ಬುಧ	ಪ	[illegible]	ರೋ	[illegible]	25	ಗುರು	ದ್ವಾ	[illegible]	ಉತ್ತ	[illegible]
18	ಗುರು	ಷ	[illegible]	ಮೃಗ	[illegible]	26	ಶುಕ್ರ	ತ್ರ	[illegible]	ಹಸ್ತ	[illegible]
19	ಶುಕ್ರ	ಸ	[illegible]	ಆರ್ದ್ರಾ	[illegible]	27	ಶನಿ	ಚತು	[illegible]	ಚಿ	[illegible]
20	ಶನಿ	ಸ	[illegible]	ಪು	[illegible]	28	ರವಿ	ಪೌ	[illegible]	ಸ್ವಾ	[illegible]
21	ರವಿ	ಅ	[illegible]	ಪು	[illegible]	29	ಚಂದ್ರ	ಪಾ	[illegible]	ವಿ	[illegible]
22	ಚಂದ್ರ	ನ	[illegible]	ಆಶ್ಲೇ	[illegible]	30	ಕುಜ	ಬಿದಿಗೆ	[illegible]	ಅನು	[illegible]
23	ಕುಜ	ದಶ	[illegible]	ಮ	[illegible]						

THE MANGALORE TRADING ASSOCIATION.

Formerly **S. NAGAPPA NAYAK & CO,**

ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್.

(ಮೊದಲು ಸುಜೀರ ನಾಗಪ್ಪ ನ್ಯಾಕ ಎಂಡ್ ಕೊ.)

ಈ ಕಂಪನಿಯಲ್ಲಿ ಅನೇಕ ನಮೂನೆಯ ವಿಲಾಯತಿ ಔಷಧಗಳು, ಒಳ್ಳೇ ಪರಿಮಳ ದ್ರವಗಳು, ಚಾ, ಕೋಕೋ, ಬಿಸ್ಕತ್ತು, [illegible] ಕಾಗದ ವಗೈರೆ [illegible] ಸಾಮಾನುಗಳು, ಕೋರ್ಟಿನ [illegible] ಫೋರ್ಮುಗಳು ಕ್ರಯಕ್ಕೆ ದೊರೆಯುತ್ತವೆ. ಇದೇ ಕಂಪನಿಗೆ ಸಂಬಂಧಪಟ್ಟ [illegible] ವಿವಾಹ ಪತ್ರಿಕೆಗಳು, ಎಲ್ಲಾ ನಮೂನೆಯ ಫೋರ್ಮುಗಳು, ಸ್ಟೇಟ್ಮೆಂಟುಗಳು, ಕನ್ನಡ ಮತ್ತು ಇಂಗ್ಲಿಷ ಪುಸ್ತಕಗಳು, [illegible] ಅಂಗಡಿ, ಭಂಡಸಾಲೆ ವಗೈರೆ ವ್ಯಾಪಾರಸ್ಥರ ಬಗ್ಗೆ ತಯಾರಿಸಿದ ವರ್ಗ ಉಳಿಗದ ಪುಸ್ತಕಗಳು, ಯಾವಾಗಲೂ ಕ್ರಯಕ್ಕೆ ದೊರೆಯುತ್ತವೆ. ಇತರ ಪುಸ್ತಕಗಳನ್ನು [illegible] ಯಲ್ಲಿ ಬ್ಯಾಂಡ್ ಮಾಡಿಸಲಾಗುತ್ತದೆ.

ಸ್ವದೇಶಾಭಿಮಾನಿ.

ಮಂಗಳೂರು, ತಾರೀಖು 16ನೇ ಎಪ್ರಿಲ್ 1907.

ಹಿಂದುಸ್ಥಾನದ ಜಮಾಖರ್ಚಿನ ಅಂದಾಜು ಪಟ್ಟಿ ಯಾನೆ ಬಜೆಟ್.

ಕಳೆದ ತಿಂಗಳ ಅಂತ್ಯದಲ್ಲಿ ಇಂಡ್ಯಾ ಸರ್ಕಾರದ ಕಾಯಿದೆ ಕೌನ್ಸಿಲ ಮುಂದೆ ಮ। ಬೇಕರ ಸಾಹೇಬರು ಇಟ್ಟ ಜಮಾಖರ್ಚಿನ ಪಟ್ಟಿಯಲ್ಲಿಯೂ ಆ ಸಂದರ್ಭದಲ್ಲಿ ನಡೆದ ಉಪನ್ಯಾಸಗಳಲ್ಲಿಯೂ ಜನರು ಲಕ್ಷ್ಯಕ್ಕೆ ತರತಕ್ಕ ಹಲವು ಅಂಶಗಳಿವೆ. ಈ ಬಜೆಟನ್ನು ತಯ್ಯಾರಿಸುವದರಲ್ಲಿ ಬೇಕರ ಸಾಹೇಬರು ತೋರಿಸಿದ ವಿವೇಕವನ್ನೂ ಮಿಂಟೊ ಪ್ರಭುಗಳ ಉದಾರ ಭಾಷಣವನ್ನೂ ನೋಡಿದರೆ ಪ್ರಜೆಗಳಲ್ಲಿ ಹೆಚ್ಚಿನ ಸಹಾನುಭೂತಿಯನ್ನು ತೋರಿಸುವದು ರಾಜ್ಯಭಾರಕ್ಕೆ ಶ್ರೇಯಸ್ಕರವೆಂದು ಯುವರಾಜರು ಕೊಟ್ಟ ಬುದ್ಧಿವಾದವು ನಮ್ಮ ಇಂಡ್ಯಾ ಅಧಿಕಾರಿಗಳಲ್ಲಿ ನಾಟಿತೆಂದು ಊಹಿಸ ಬಹುದು. ಯಾಕಂದರೆ ದೇಶಹಿತಕಾರಿಯಾದ ಅನೇಕ ಏರ್ಪಾಡುಗಳು ಇವರು ಇನ್ನೂ ಮಾಡಲಿಕ್ಕಿದ್ದಾಗ್ಯೂ ಆ ದಿಕ್ಕಿಗೆ ಮುಖ ತಿರುಗಿಸಿ ಅಡಿಯಿಟ್ಟಿದ್ದಾರೆಂದು ಕಂಡುಬರುತ್ತದೆ.

ಕೆಲವು ವರುಷಗಳಿಂದೀಚೆಗೆ ಸರ್ಕಾರಕ್ಕೆ ಖರ್ಚು ಕಳೆದು ವರುಷಂಪ್ರತಿ ಸುಮಾರು ೧೦ ಕೋಟಿ ರೂಪಾಯಿ ಉಳಿಯುತ್ತದೆ. ಅಂದರೆ ರಾಜ್ಯಭಾರಕ್ಕೆ ಅಗತ್ಯವಿರುವದಕ್ಕಿಂತ ೧೦ ಕೋಟಿ ರೂಪಾಯಿ ವರುಷಂಪ್ರತಿ ಹೆಚ್ಚಿಗೆ ಪ್ರಜೆಗಳ ಕೈಯಿಂದ ಸರ್ಕಾರಕ್ಕೆ ಸಲ್ಲುತ್ತದೆ. ಇದರಿಂದ ಅನಾವಶ್ಯಕವಾಗಿ ಹಣ ಖರ್ಚು ಮಾಡಲಿಕ್ಕೆ ಸರ್ಕಾರಕ್ಕೆ ಒಂದು ಇಂಬು ದೊರೆಯುತ್ತದೆ. ಪ್ರಜೆಗಳು ಇಷ್ಟನ್ನು ಸರ್ಕಾರಕ್ಕೆ ಕೊಟ್ಟ ನಂತರ ಕ್ಷಾಮಕಾಲಗಳನ್ನು ತಡೆಯುತಾರರು. ಪ್ರಜೆಗಳಿಂದ ಪಡೆದ ಈ ಹೆಚ್ಚಿನ ಹಣವನ್ನು ಪ್ರಜೆಗಳಿಗೆನೇ ನ್ಯಾಯಪ್ರಕಾರ ಎರಡು ರೀತಿಯಲ್ಲಿ ಸೇರಿಸಬಹುದು. ಕಂದಾಯವನ್ನು ತಗ್ಗಿಸ ಬಹುದು ಅಥವಾ ಹಣವನ್ನು ಪ್ರಜಾಹಿತಕಾರಿಯಾದ ವಿಷಯಗಳಲ್ಲಿ ವಿನಿಯೋಗಿಸ ಬಹುದು. ಈ ಹಣವನ್ನು ಬಿಟ್ಟು ಇನ್ನು ಕಾಲಾಂತರದಲ್ಲಿ ಯುರೋಪೀಯ ಭಂಡವಾಳಿಕರ ಪ್ರಯೋಜನಾರ್ಥವಾಗಿ ಸೈನ್ಯಗಳನ್ನೂ ಹೆಚ್ಚಿಸ ಬಹುದು. ದಿವಸ್ಥದ ಭದ್ರತೆಯ ಸಲುವಾಗಿ ಸೈನ್ಯವನ್ನು ಹೆಚ್ಚಿಸ ತಕ್ಕವರಲ್ಲಿಯೂ ಹೆಚ್ಚು ಪಾಲು ತಿನ್ನುವವರು ಇದ್ದರು. ಮೊಗಲ ಸಾಮ್ರಾಜ್ಯದಲ್ಲಿ ಭೂಕಂದಾಯವು ಸೈನ್ಯದ ಖರ್ಚನ್ನು ತೆತ್ತು ಮಿಗುತ್ತಿತ್ತು. ಈಗಲಾದರೋ ಸುಮಾರು ೨೦ ಕೋಟಿ ರೂಪಾಯಿ ಕಂದಾಯವು ಸೈನ್ಯದ ರಕ್ಷಣೆಗೆ ಸಾಲದೆ ಉಪ್ಪಿನ ಮೇಲೆ ಸುಂಕವಿಡ ಬೇಕಾಗಿದೆ. ಸರ್ ಕಿಚ್ನರ ಸಾಹೇಬರು ಕೌನ್ಸಿಲಿನಲ್ಲಿ ಸೂಚಿಸಿದಂತೆ ಯೋಗ್ಯರಾದ ಯೌವನಸ್ಥರಿಗೆ ಯುದ್ಧದ ವಿದ್ಯೆಯಲ್ಲಿ ತರಬೇತು ಮಾಡಿಟ್ಟರೆ ಸೈನ್ಯವನ್ನು ಕಡಿಮೆ ಮಾಡಬಹುದು. ಈ ಸತಿ ಸೈನ್ಯದ ಖರ್ಚಿನಲ್ಲಿ ೭೫ ಲಕ್ಷ ರೂಪಾಯಿ ಕಡಿಮೆ ಮಾಡಿದ್ದಾರೆ ಮತ್ತು ಪ್ಲೇಗಿನ ಖರ್ಚನ್ನು ತಗ್ಗಿಸಿ ೧೮ ಕೋಟಿಗೆ ತಂದು ನಿಲ್ಲಿಸಿದ್ದಾರೆ.

ಉಪ್ಪಿನ ಸುಂಕವನ್ನು ಮಣಕ್ಕೆ ೧ ರೂಪಾಯಿ ಪ್ರಕಾರ ಇಳಿಸಿದ್ದು ಬಡವರಿಗೆ ಬಹಳ ಪ್ರಯೋಜನಕರವಾದ ಏರ್ಪಾಡು. ಕಳೆದವರ್ಷ ಮೋರ್ಲೆ ಸಾಹೇಬರು ಈ ಸುಂಕವನ್ನು ಪೂರಾ ತೆಗೆದು ಹಾಕಲಾಗುವದಿಲ್ಲವಾದರೂ ತಕ್ಕಷ್ಟು ಮಟ್ಟಿಗೆ ಕಡಿಮೆ ಮಾಡುವೆವೆಂದು ಹೇಳಿದ್ದರು. ಪಾರ್ಲಿಮೆಂಟಿನಲ್ಲಿಯೂ ರಿಯಾಯತಿಯನ್ನು ತೋರಿಸಿದ್ದಾರೆ. ಚೀನಾ ದೇಶಕ್ಕೆ ರಫ್ತಾಗುವದಕ್ಕೆ ಹಿಂದು ಸ್ಥಾನದಲ್ಲಿ ಸರ್ಕಾರದ ಕೈಕೆಳಗೆ ಬೆಳೆಸುವ ಅಫೀಮು ಸಾಗುವಳಿಯನ್ನು ಸಂಕೋಚಪಡಿಸಿದ್ದು ಇನ್ನೊಂದು ಶ್ಲಾಘ್ಯವಾದ ಏರ್ಪಾಡು. ಇದರಿಂದ ಹಿಂದುಸ್ಥಾನಕ್ಕೆ ಸುಂಕ ಮೊದಲಾದ ರೀತಿಯಲ್ಲಿ ಸಿಕ್ಕುವ ಲಾಭವು ತಪ್ಪಿದರೂ ಚೀನಿ ಜನರನ್ನು ಮಾದಕ ಪದಾರ್ಥಗಳಿಂದ ಕೆಡಿಸಿ ದ್ರವ್ಯ ಕೂಡಿಸುತ್ತಾರೆಂಬ ಕಳಂಕವು ಈ ವ್ಯಾಪಾರವು ಕ್ರಮೇಣ ನಾಶವಾದರೆ ನಮ್ಮ ಸರ್ಕಾರಕ್ಕೆ ಇನ್ನು ತಗಲದು.

ಪ್ರೈಮರಿ ವಿದ್ಯಾಭ್ಯಾಸವನ್ನು ಉಚಿತವಾಗಿ ಕೊಡಲಿಕ್ಕೆ ಸರ್ಕಾರದವರು ತಯ್ಯಾರಿಸಿದ ಏರ್ಪಾಡು ಪ್ರಜೆಗಳಲ್ಲಿ ಕೃತಜ್ಞತೆಯನ್ನುಂಟುಮಾಡುವದು. ಈ ವಿಷಯ ಗೋಖಲೆಯವರು ಸರ್ಕಾರದವರನ್ನು ಪದೆ ಪದೆ ಎಚ್ಚರಿಸುತ್ತಿದ್ದರು. ಈಗಲಾದರೋ ದೇಶದಲ್ಲಿ ಬಡತನದಿಂದ ಶೇಕಡ ಎಂಭತ್ತರಷ್ಟು ಹುಡುಗರು ಓನಾಮವು ತಿಳಿಯದವರಾಗಿದ್ದಾರೆ. ಸರ್ಕಾರದವರು ಶಾಲೆಗಳಲ್ಲಿ ವೈದ್ಯಶಾಸ್ತ್ರಾಂಗವನ್ನು ಮುಂದರಿಯಲಿಕ್ಕೆ ಉಪಾಯವಿಲ್ಲದ ಬಡ ಹುಡುಗರಿಗೆ ಪ್ರಪಂಚದಲ್ಲಿ ಪ್ರಯೋಜನಕ್ಕೆ ಬೀಳುವ ವ್ಯವಸಾಯ, ನೇಯಿಗೆ ಮುಂತಾದವುಗಳ ವಿಷಯಗಳನ್ನು ದೇಶಭಾಷೆಯಲ್ಲಿ ಕಲಿಸುವದು ಯುಕ್ತ ಕೆಲಸ.

ಇಂಡ್ಯಾ ಸರ್ಕಾರಕ್ಕೆ ರಾಕ್ಷಸ ಪ್ರಾಣಿಯಾದ ಪ್ಲೇಗ್ ಉಳಿದಿದ್ದೂ ಮ್ಯುನಿಸಿಪಾಲಿಟಿಗಳು ಸಾಲದಲ್ಲಿ ಬಿದ್ದು ಪಟ್ಟಣಗಳ ಆರೋಗ್ಯ ಸಂಬಂಧವಾದ ಮಾರ್ಗಕ್ಕೆ ತಾಂದ್ದರೆ ಪ್ಲೇಗು ಮೊದಲಾದ ವ್ಯಾಧಿಗಳು ಹರಡುವವು. ಅದ್ದರಿಂದ ಮುನಿಸಿಪಾಲಿಟಿಗಳಿಗೆ ದ್ರವ್ಯ ಸಹಾಯವನ್ನು ಕೊಟ್ಟು ಜನರ ಸೌಖ್ಯವನ್ನು ಹೆಚ್ಚಿಸಬೇಕೆಂದು ಗೋಖಲೆಯವರು ಒಲವಾಗಿ ವ್ಯವಹರಿಸಿದರು. ರಾಜ್ಯಾಧಿಕಾರಕ್ರಮದಲ್ಲಿ ದೇಶೀಯರಿಗೆ ಹೆಚ್ಚಿನ ಪಾಲು ಕೊಡುವ ವಿಷಯಗಳಲ್ಲಿ ಸಿವಿಲ್ ಸರ್ವಿಸಿನಲ್ಲಿರುವ ಇಂಗ್ಲಿಷ ಹುದ್ದೆದಾರರು ಮಾಡುವ ಆತಂಕಗಳನ್ನು ಸರಿಯಾಗಿ ಖಂಡಿಸಿದರು. ಸಿವಿಲ್ ಸರ್ವಿಸ್ ಪಾಸಾದವರನ್ನು ಹಿಂದೂ ದೇಶದ ಕಾನೂನು ತಿಳಿಯದ್ದರೂ ಜಡ್ಜಿಯರನ್ನಾಗಿ ಮಾಡಿ ಅನುಭವಶಾಲಿಗಳಾಗಿ ಕಾನೂನು ತಿಳಿದ ಮುನ್ಸಿಫ, ಸಬ್‌ಜಡ್ಜರುಗಳ ಮೇಲಾಧಿಕಾರರನ್ನಾಗಿ ಮಾಡುವದರಿಂದ ಉಂಟಾಗುವ ಅನರ್ಥಗಳನ್ನು ವಿವರಿಸಿ ಜಡ್ಜಿ ಕೆಲಸಗಳನ್ನು ವಕೀಲರಿಗೆ ಹೆಚ್ಚಾಗಿ ಕೊಡುವ ಏರ್ಪಾಡು ಮಾಡಬೇಕೆಂದು ರಾಸಬಿಹಾರಿ ಘೋಷರು ವಾದಿಸಿದರು.

ಜಿ. ಎಮ್. ಚಿತ್ನಾವೀಸರು ಸೂಚಿಸಿದ ಇನ್ನೊಂದು ಉಪಯುಕ್ತ ವಿಷಯವೇನಂದರೆ: ವಿಲಾಯತಿಯ ನೇಯಿಗಾರರ ಪ್ರೀತ್ಯರ್ಥ ನಮ್ಮಲ್ಲಿ ಆಗುವ ಬಟ್ಟೆಗಳ ಮೇಲೆ ಸುಂಕವಿಟ್ಟದ್ದರಿಂದ ನಮ್ಮ ನೇಯಿಗೆ ಕಸಬು ಹಾಳಾಗುವದು. ಈ ಸುಂಕವನ್ನು ವಜಾ ಮಾಡಬೇಕು. ಸರ್ಕಾರದವರು ಈ ಸೂಚನೆಯನ್ನು ನೆರವೇರಿಸಿದರೆ ಸ್ವದೇಶಿಗೆ ಕ್ಕೆ ಕೈಮುಟ್ಟು ಹಾಗಾಗುವದು. ಹಣದ ಅಡಚಣೆ ಇಲ್ಲದ್ದರಿಂದ ಈ ಏರ್ಪಾಡಿಗೆ ಆಕ್ಷೇಪವೂ ಇರಲಾರದು.

ಮೈಸೂರಾಪ ದೊರೆಗಳು ಈ ಸಮಯದಲ್ಲಿ ಮಾಡಿದ ಭಾಷಣದಿಂದ ಇವರಿಗೆ ಪ್ರಜೆಗಳ ಸಂಗಡದಲ್ಲಿ ಕಾಂಕ್ಷೆಯುಂಟೆಂದು ತಿಳಿಯುವದು. ಪ್ರಜೆಗಳಲ್ಲಿ ವಿದ್ಯಾಬುದ್ಧಿಗಳ ಪ್ರಚಾರಣೆಯಿಂದ ನೂತನ ಕೋರಿಕೆಗಳು ಹುಟ್ಟುಯವೆಂಬದು ನಿಜವೆಂದು ಒಪ್ಪಿದರು. ಈ ಕೋರಿಕೆಗಳನ್ನು ತೃಪ್ತಿಪಡಿಸ ಬೇಕಲ್ಲದೆ ಅದನ್ನು ಅಲಕ್ಷ್ಯ ಮಾಡುವದು ಸರ್ಕಾರಕ್ಕೆ ಅಮಂಗಲಕರವೆಂದು ಹೇಳಿದರು. ಜನರಿಗೆ ರಾಜಕೀಯ ವಿಷಯಗಳಲ್ಲಿ ಹೆಚ್ಚಿನ ಸ್ವಾತಂತ್ರ್ಯಗಳನ್ನು ಕೊಡುವ ವಿಷಯ ತನಿಖೆ ನಡಿಸಿ ಸೆಕ್ರೆಟರಿ ಒಫ್ ಸ್ಟೇಟ್ ಇವರಿಗೆ ರಿಪೋರ್ಟು ಮಾಡುವ ಸಂಕಲ್ಪವು ತಮ್ಮಲ್ಲಿಯೇ ಹುಟ್ಟಿದ್ದಲ್ಲದೆ ಅನ್ಯರ ಉತ್ತೇಜನದಿಂದಾದ್ದಲ್ಲವೆಂದು ಹೇಳಿದ್ದರಿಂದ ಇವರ ಔದಾರ್ಯವೂ ವ್ಯಕ್ತವಾಗುವದು. ಮತ್ತು ಈ ಸುಧಾರಣೆಗಳನ್ನು ಮಂಜೂರು ಮಾಡುವ ಮೊದಲು ಈ ವಿಷಯದಲ್ಲಿ ಲೋಕಾಭಿಪ್ರಾಯವೇನೆಂದು ತಿಳಿದ ಹೊರತು ಅದನ್ನು ನ್ಯಾಯವಿಧಾಯಕ ಸಭೆಯಲ್ಲಿ ಪಾಸ್ ಮಾಡುವದಿಲ್ಲವೆಂದು ಸಹಾ ಅಪ್ಪಣೆ ಕೊಟ್ಟರು. ತನ್ನ ಸುತ್ತಲಿರುವ ಸಿವಿಲ್ ಸರ್ವೀಸಿನವರ ಆತಂಕಗಳನ್ನು ಮೀರಿ ಇವರು ಜನರಿಗೆ ನಿಜವಾದ ಉಪಕಾರವನ್ನು ಮಾಡಿದರೆ ರಿಪನ್ ಪ್ರಭುಗಳ ಆಳಿಕೆಯು ರಿಪನ್ ದೊರೆಗಳ ಆಳಿಕೆಯಂತೆ ಪ್ರಜೆಗಳ ಹೃದಯದಲ್ಲಿ ನೆಲೆಗೊಳ್ಳುವದು.

ಕಳೆದ ವರ್ಷದ ಕ್ರಿಮಿನಲ್ ಮೊಕದ್ದಮೆಗಳು.

ದಕ್ಷಿಣ ಕನ್ನಡದ ಜಿಲ್ಲಾ ಕೋರ್ಟಿನಲ್ಲಿ 1906ನೇ ವರುಷದ ಕ್ರಿಮಿನಲ್ ಮೊಕದ್ದಮೆಗಳು ಅತಿರೇಕ ಹೆಚ್ಚಾಗಿ ಕ್ರಮ ಅಪೀಲುಗಳ ತನಿಖೆಗೆ ಸಮಯವು ಬಹಳ ಅಪ್ಪವೇ ಇತ್ತು. ಜನರೆಲ್ಲರೂ ಸೆಶನ್ಸ್ ಕೋರ್ಟು ಮಂಗಳೂರಿಗೆ ಹಿಂತಿರುಗುವದೆಂದು ಕುತೂಹಲದಲ್ಲಿದ್ದರು. ಆದರೆ ರಾ। ಹಾರ್ಡಿಂಗ್ ಸಾಹೇಬರವರ ನಿಪುಣತೆಯು ನಮಗಿನ್ನೂ ಪೂರ್ಣ ತಿಳಿದಿರುವದಿಲ್ಲ. ಇಷ್ಟರವರೆಗೆ ನಮ್ಮ ಜಿಲ್ಲೆಗೆ ದಯಮಾಡಿಸಿದ ಅನೇಕ ಜನ ಡಿಸ್ಟ್ರಿಕ್ಟ್ ಜಡ್ಜಿರಿಗಾದರೋ ಒಂದೇ ಒಂದು ಅಪೀಲನ್ನು ಹಲವು ದಿನಗಳಲ್ಲಿ ಮುಗಿಸುವದು ಕಷ್ಟಸಾಧ್ಯವಿತ್ತು. ವಕೀಲರುಗೂ ಈ ಅಪೀಲು ನಂಬರುಗಳ ರಿಕಾರ್ಡನ್ನು ದಿನಂಪ್ರತಿ ಶೋಧಿಸಿ ತಮ್ಮ ಕಕ್ಷಿಗಾರರಿಗೆ ಜಯವನ್ನು ಸಾಧಿಸುವ ತೊಂದರೆಯೂ ಅಧಿಕವಿತ್ತು. ಕಕ್ಷಿಗಾರರೂ ತಮ್ಮ ವಕೀಲರುಗಳಿಗೆ ಆಗಾಗ್ಯೆ ಅನುಭವ ಕೊಡುವರೆ ತಮ್ಮ ಊರುಗಳಿಂದ ಬಂದು ಮಂಗಳೂರಿನಲ್ಲಿ ಕೆಲವು ದಿವಸಗಳ ವರೆಗೆ ಉಳಕೊಂಡು ಹಣ ವೆಚ್ಚಮಾಡಬೇಕಿತ್ತು. ಈ ಎಲ್ಲಾ ಅನನುಕೂಲತೆಗಳನ್ನು ಹೋಗಗೊಡಿಸಲಿಕ್ಕೆ ನಮ್ಮ ಈಗಿನ ಜಡ್ಜರು ಸುಲಭೋಪಾಯಗಳನ್ನು ಕಂಡು ಹಿಡಿದು ದಿನ ಒಂದಕ್ಕೆ ನಾಲ್ಕೈದು ಅಪೀಲುಗಳನ್ನು ತೀರ್ಮಾನಿಸ ಬರಹತೊಡಗಿದರು. ಹೀಗಿ

ರುತ್ತಾ, ಜನರೆಲ್ಲರೂ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ ಅಪೀಲುಗಳನ್ನು ದಾಖಲು ಮಾಡುವರೆ ಹಿಂಜರಿಯುವದಕ್ಕೇಕೆ? ಜನರಿಗೆ ನ್ಯಾಯವನ್ನೇ ಮಾಡಬೇಕೆಂಬ ಅತ್ಯಾಸಕ್ತಿಯಿಂದ ನಂಬರುಗಳನ್ನು ವಿಳಂಬವಿಲ್ಲದೆ ಮುಗಿಸುವರು. ನ್ಯಾಯ ವಿಮರ್ಶೆಯಲ್ಲಿ ಇವರನ್ನು ಇನ್ನಷ್ಟು ಹೆಸರುವಾಸಿಯಾಗಿ ಮಾಡುವರೆಂಬ ಹಾಗೆ ಕಳೆದ ವರುಷದ ಕ್ರಿಮಿನಲ್ ನಂಬರುಗಳ ಸಂಖ್ಯೆಯು ಸಹಾ ಅತ್ಯಧಿಕವಾಗಿತ್ತು.

ಪ್ರತಿ ವರುಷಕ್ಕೆ ಸರಾಸರಿ ಸೆಶ್ಯನ್ಸ್ ನಂಬರುಗಳು 24 ಇರುತ್ತಾ ಕಳೆದ ವರುಷದಲ್ಲಿ ಈ ಸಂಖ್ಯೆಯು 60ಕ್ಕೆ ಸ್ವಲ್ಪ ಕಡಿಮೆಯಾಗಿತ್ತು. ಇದರಲ್ಲಿ ಕೊಲೆಪಾತಕದವುಗಳು ಎಲ್ಲಾ ವಿಧದ್ದು ಕೂಡಿ 28. ಈ ಕೊಲೆಪಾತಕಗಳು ಹೆಚ್ಚಾಗಿ ಅಳಿಯಸಂತಾನದ ಸಂಪ್ರದಾಯದವರಲ್ಲಿ ಸಂಭವಿಸಿರುವವು. ತಂದೆಯ ಪಿತ್ರಾರ್ಜಿತ ಆಸ್ತಿ ಎಲ್ಲವನ್ನೂ ಆತನ ಪ್ರೀತಿ ಪಾತ್ರರಾದ ಮಕ್ಕಳು ಅನುಭವಿಸದೆ ಅಳಿಯಂದಿರು ಅನುಭವಿಸುವದೆಂದರೆ ಸ್ವಭಾವವಿರುದ್ಧವಲ್ಲವೇ? ಈ ಅಳಿಯ ಸಂತಾನ ಸಂಪ್ರದಾಯವೇ ಅನೇಕ ಅನರ್ಥಗಳ ಕಾರಣವಾಗಿದೆ. ಮದವೆಗಳ ವಿಶೇಷತ್ವವು ದೂಢಮೂಲವಾಗಿ ಪ್ರಬಲಿಸುವ ಮೊದಲು ಈ ಸಂಪ್ರದಾಯವು ನೆಲೆಗೊಂಡಿತ್ತೆಂತ ಹಲವರು ಅಭಿಪ್ರಾಯಪಡುತ್ತಾರೆ. ಈಚೆಗೆ ಮೆಲ್ಲ ಮೆಲ್ಲನೆ ಅಳಿಯಸಂತಾನ ಸಂಪ್ರದಾಯದವರಲ್ಲಿ ಮಕ್ಕಳ ಸಂತಾನದ ಸಂಪ್ರದಾಯವು ವಾಡಿಕೆಗೆ ಬರುತ್ತಲಿರುವದು. ಆದರೂ ಸದ್ಯಕ್ಕೆ ಈ ಅಳಿಯ ಸಂತಾನದವರಲ್ಲಿ ಕೊಲೆಪಾತಕಗಳು ಕಡಿಮೆಯಾಗುವ ಸಂಭವವು ಅಷ್ಟೊಂದಿಲ್ಲ.

ಕೊಂಡವರಿಗೆ ಕೊಲೆತಪ್ಪದೆಂಬ ನಾಣ್ಣುಡಿಯಿದ್ದರೂ, ಕೊಲೆಪಾತಕವನ್ನು ರುಜು ಪಡಿಸುವದು ಬಹಳ ಮಟ್ಟಿಗೆ ಕಷ್ಟವಾದ್ದರಿಂದಲೂ, ಹಾಗೆ ರುಜು ಪಡಿಸಿದರೂ ಮೇಲು ಕೋರ್ಟಿನವರ ಅಪ್ಪಣೆಯಿಲ್ಲದೆ ಫಾಸಿಗೆ ಕೊಡಲಿಕ್ಕೆ ಕೂಡದೆಂಬುದು ದುಸ್ಸಾಧನೆಗಳಿಂದ ಪ್ರವೀಣರಾದ ಕುತಂತ್ರಿಗಳಿಗೆ ಗೊತ್ತಿರುವದರಿಂದ ಈ ಕುಹಕರು ಕೊಲೆಪಾತಕಕ್ಕೆ ಹೇಸರು. ಈ ಕೊಲೆಪಾತಕಗಳು ಹೆಚ್ಚಿದ ಇನ್ನೊಂದು ಕಾರಣವೆಂತ ಊಹಿಸಬೇಕು.

ಕಳೆದ ವರುಷದಲ್ಲಿ ಅಕ್ಕಿಗೆ 5 ರೂಪಾಯಿ ಕ್ರಯವಾಗಿ ಇತರ ದವಸಗಳ ಕ್ರಯವು ಇದೇ ದರದಲ್ಲಿ ಹೆಚ್ಚಿರುವದರಿಂದ ಕಳವಿನ ನಂಬರುಗಳೂ ಕಡಿಮೆ ಇರಲಿಲ್ಲ. ಬಿಕ್ಷೆ ಮತ್ತು ಪರ ಪುರದಲ್ಲಿ ವ್ಯರ್ಥ ಸಂಚಾರ ಮಾಡುವದು ಎಲ್ಲರಿಗೂ ತಿಳಿದಿರುವದು. ಪರಸ್ಪರ ವೈರಗಳು ಈ ಕೊಂದಿ ಸುಲಿಗೆಗಳ ಮುಖ್ಯ ಕಾರಣವಾದರೂ ಅನೇಕ ಜನ ಬಡವರು ದ್ರವ್ಯಾಶೆಯಿಂದಲೇ ಇವುಗಳಲ್ಲಿ ಸೇರಿದ್ದರು. ಅಕ್ಕಿಗೆ 5 ರೂಪಾಯಿ ಕ್ರಯವಿರುವಾಗ್ಯೆ ಇಂಥಾ ಕೆಲಸಗಳು ನಡೆದವಾದರೆ ಈ ವರ್ಷದ ಮಳೆಗಾಲದಲ್ಲಿ ಅಕ್ಕಿ ಧಾರಣೆಯು 5½ಗೆ ಏರುವ ಸಂಭವಿರುವದರಿಂದ ಏನೇನು ಸಂಭವಿಸುವದೋ?

ಚಲಾವಣೆಯ ರೂಪಾಯಿಗಳಂತೆಯೇ ಪ್ರತಿರೂಪ ರೂಪಾಯಿಗಳನ್ನು ತಯ್ಯಾರಿಸುವವರ ಬಳಗವು ಮಧ್ಯ ಹಿಂದುಸ್ಥಾನದಿಂದ ಇಲ್ಲಿಗೆ ಬಂದಿತ್ತು. ನಕಲಿ ನಾಣ್ಯಗಳನ್ನು ತಯ್ಯಾರಿಸುವದು ಇವರಲ್ಲಿ ಪಾರಂಪರ್ಯವಾಗಿ ಮಾಡಿ ಬಂದ ಕುಟುಂಬದ ವೃತ್ತಿಯಾಗಿರುವದು. ಇವರಲ್ಲಿ ಅನೇಕ ಜನರು ಪದೇ ಪದೇ ಶಿಕ್ಷೆ ಹೊಂದಿ ಮರಣಾಂತಕ ಸೈರಿನ ಜೀವನವನ್ನು ಅನುಭವಿಸಿದರೂ ಈ ಸಂತತಿಯವರು ಇನ್ನೂ ಈ ವೃತ್ತಿಯಲ್ಲಿಯೇ ಉದ್ಯುಕ್ತರಾಗಿರುವರು. ಹೋದ ವರುಷದ ಸೆಶ್ಯನ್ಸ್ ಮೊಕದಮೆಗಳಲ್ಲಿ ಇಂಥವರ ಮೂರು ಮೊಕದಮೆಗಳಿದ್ದವು. ಈಗ ಚಲಾವಣೆಯಲ್ಲಿರುವ ಒಂದು ಸಾವಿರ ರೂಪಾಯಿಗಳಲ್ಲಿ ಸರಾಸರಿ ಇಂಥಾ ಐದು ರೂಪಾಯಿಗಳಿರುವವಂತೆ.

ಕಳೆದ ವರುಷದಲ್ಲಿ ನಾಲ್ವರು ಫಾಶಿಗೆ ಕೊಡಲ್ಪಟ್ಟರು. 12 ಜನರಿಗೆ ಟಾಪು ಶಿಕ್ಷೆಯಾಯಿತು.

— —0— —

ಜಾತಿ ವಿಚಾರವು.

—0—

ಜಾತಿಹೀನರ ಮನೆಯ
ಜ್ಯೋತಿ ತಾ ಹೀನವೇ
ಜಾತಿ ವಿಜಾತಿಯೆನಬೇಡ
ದೇವನೊಲಿದಾತನೇ ಜಾತ-ಸರ್ವಜ್ಞ

ಜಾತಿಭೇದವು ಹಿಂದೂ ಸಮಾಜದ ದೊಡ್ಡ ಕೊರತೆಯೆಂದು ಜನಸ್ಸುಧಾರಣೆಯವರು ಎಣಿಸುತ್ತಾರೆ. ಎಲ್ಲಾ ಮನುಷ್ಯರನ್ನು ಒಂದೇ ಜಾತಿಯಾಗಿ ನಿರ್ಮಿಸಲು ಮನುಷ್ಯನು ಈ ನಿಯಮಕ್ಕೆ ವಿರೋಧವಾಗಿ ಭೇದಗಳನ್ನು ಮಾಡಿದ್ದರಿಂದ ಪರಸ್ಪರ ಕಲಹ ಮತ್ಸರಗಳಿಗೆ ಇಂಬಾಗಿ ಪ್ರಜಾಸೌಖ್ಯವು ಕೆಡುವದು. ಆದ್ದರಿಂದ ಈ ಹಾನಿಕರ ನಿಬಂಧನೆಯನ್ನು ತೆಗೆದು ಹಾಕಬೇಕೆಂದು ಅವರು ವಾದಿಸುವರು. "ಮನು ಮುಂತಾದ ಋಷಿಗಳೇ ವರ್ಣಭೇದವನ್ನು ಕಲ್ಪಿಸಿದ ಬ್ರಹ್ಮನಿರ್ಮಿತವಾದ ವರ್ಣಭೇದವನ್ನು ಅಳಿಸಲಾದೀತೇ? ಸುಧಾರಣೆಯವರಿಂದ ಬ್ರಾಹ್ಮಣರಲ್ಲಿ ಕೂಡ ಮಾಂಸಾಹಾರ ಮದ್ಯಪಾನಗಳು ಪಸರಿಸುವದಕ್ಕಿಂತ ಈಗಿನ ಸ್ಥಿತಿಯೇ ವಾಸಿ" ಎಂದು ಪ್ರಾಚೀನ ಪಕ್ಷದವರು ಕಾದಾಡುವರು. ಇದೇ ಹಿಂದೂ ಸಮಾಜದ ಹಾನಿ ವೃದ್ಧಿಗೆ ಕಾರಣವಾದ ಈ ವಿಷಯದಲ್ಲಿ ಬಹಳ ಜಾಗರೂಕತೆಯಿಂದ ನಡೆಯತಕ್ಕದ್ದು. ವಿಚಾರ ಮಾಡಿ ಕೊಂಡರೆ ಒಮ್ಮೆಯೇ ಎಲ್ಲಾ ಭೇದಗಳನ್ನು ಕಳೆದು ಬಿಡುವದು, ಸಾಧ್ಯವೂ ಅಲ್ಲ, ಕ್ಷೇಮಕರವೂ ಅಲ್ಲವೆಂದೂ ಆದರೆ ಈಗಿನ ಸಾವಿರಾರು ಜಾತಿಭೇದಗಳಿಂದ ಪ್ರಜೆಗಳ ಅಳಲು ಹೆಚ್ಚುವದೆಂದೂ ಕಾಣುವದು.

ಪೂರ್ವದಲ್ಲಿ ಜಾತಿನಿಯಮಗಳು ಈಗಿನಷ್ಟು ಕಠಿಣವಾಗಿರಲಿಲ್ಲವೆಂದು ಕಾಣುತದೆ. ಯೋಗ್ಯತಾನುಸಾರವಾಗಿ ಬ್ರಾಹ್ಮಣನು ಕ್ಷತ್ರಿಯನಾಗಬಹುದಿತ್ತು. ಕ್ಷತ್ರಿಯನು ಬ್ರಾಹ್ಮಣರನ್ನು ಸೇರುತ್ತಿದ್ದನು. ಅಂದರೆ ಜಾತಿಭೇದಕ್ಕೆ ಈಗಿರುವ ಕೊರತೆ ಇರಲಿಲ್ಲ. ಸುಧಾರಣೆಯು ಬಾಲ್ಯಾವಸ್ಥೆಯಲ್ಲಿರುವಾಗ ಪ್ರತಿಯೊಬ್ಬನು ಚಿಪ್ಪಿಗ, ಒಕ್ಕಲಿಗ, ಶಿಪಾಯಿ, ಪೂಜಾರಿಗಳ ಕೆಲಸ ತಾನೇ ಮಾಡುತಲಿದ್ದನು. ಕ್ರಮೇಣ ಆಯಾ ಕೆಲಸಕ್ಕೆ ಯೋಗ್ಯವಾದ ಜನರನ್ನು ಪ್ರತ್ಯೇಕಿಸಿದ್ದರಿಂದ ಕಸುಬುಗಳು ನಾಲ್ಕಾಗಿ ಸಾಗುವಹಾಗಾಯಿತು. ಈ ವರ್ಗೀಕರಣವು ಸಮಾಜದ ಅಭಿವೃದ್ಧಿಯ ಚಿಹ್ನವಾಯಿತು. ಇದೇ ವಿಭಾಗವು ಪಾರಂಪರ್ಯವಾಗಿ ಬಂದದ್ದರಿಂದ ಜಾತಿಗಳು ಹುಟ್ಟಿಕೊಂಡವು. ವಿಲಾಯತಿಯಲ್ಲಿ ಜೀವನಾರ್ಥಕಲಹದಿಂದ ಉಂಟಾದ ಹಲವು ತರದ ಸಮಾಜ ಕ್ಷೋಭೆಯನ್ನು ಜಾತಿಭೇದವು ನಮ್ಮಲ್ಲಿ ಬರಗೊಡಲಿಲ್ಲ. ಆದರೂ ಮನುಷ್ಯಕಲ್ಪಿತವಾದ ಯಾವದೊಂದು ಸಂಸ್ಥೆಯೂ ಮನುಷ್ಯನಂತೆ ವೃದ್ಧಿಕ್ಷಯಗಳಿಗೊಳಗಾಗಿರುವದು. ಮತ್ತು ಸಮಯೋಚಿತವಾಗಿ ಮಾರ್ಪಡದಿದ್ದರೆ ಹಾನಿಕರವಾಗುವದು. ಈ ಬಿನಾಮವಿಲ್ಲದಿದ್ದರೂ ಬ್ರಾಹ್ಮಣನ ಮಗನಾದರೆ ದ್ವಿಜನೆನಿಸಿಕೊಳ್ಳುವನು. ನಂದ ವಾಲ್ಮೀಕಿಗಳಂತೆ ಹೀನ ಕುಲದಲ್ಲಿ ಮಹಾತ್ಮರು ಹುಟ್ಟಿದರು. ಬ್ರಾಹ್ಮಣಿಕೆ ಇದ್ದಲ್ಲಿ ಜಾತಿಯಿಲ್ಲ. ಜಾತಿಯಿದ್ದಲ್ಲಿ ಯೋಗ್ಯತೆಯಿಲ್ಲ. ನಾಲ್ಕು ವರ್ಣಗಳಿಂದ ನಾನೂರು ಜಾತಿಗಳಾಗಿ ಪರಸ್ಪರ ಮತ್ಸರತೆ ಸ್ವಾಭಾವಿಕವಾಗಿಯದೆಂದು ಹೇಳಲೂಬಹುದು. ಬಹಳ ಅಲ್ಪಕಾರಣಕ್ಕಾಗಿಯೂ ಏನೂ ಕಾರಣವಿಲ್ಲದೆಯೂ ಒಂದಕ್ಕೆರಡು ಜಾತಿಯಾಯಿತು. ಜಾತಿಭೇದಗಳನ್ನು ನಿರ್ಮೂಲ ಮಾಡಬೇಕೆಂದು ಕೆಲವರು ಕೂಡಿನಡೆದರೆ ಅವರನ್ನು ಬೇರೆಯವರು ಅಗಲಿ ಬಹಿಷ್ಕಾರ ಪಟ್ಟವರದೊಂದು ಬೇರೆ ಜಾತಿಯಾಗುವದು. ಇಂತಹ ಸಾವಿರ ಗೋಳುಗಳು ಸಮಾಜಕ್ಕೆ ಸುಖಕಾರಿಯೆಂದು ಯಾರು ಹೇಳ್ಯಾರು?

ಆದರೆ ಈ ಭೇದಗಳು ಹ್ಯಾಗೆ ಕ್ರಮವಾಗಿ ಹೆಚ್ಚುತ್ತಾ ಬಂದವೋ ಹಾಗೆಯೇ ಮೆಲ್ಲ ಮೆಲ್ಲನೆ ನೀಗಬೇಕು. ಮೊತ್ತಮೊದಲು ಪ್ರತಿಯೊಂದು ವರ್ಣದಲ್ಲಿ ಒಳಜಾತಿಗಳನ್ನು ಕೂಡಿಸಬೇಕು. ಬ್ರಾಹ್ಮಣರಲ್ಲಿಯೇ ಅನೇಕ ಭೇದಗಳಿರುವವು. ಕಾಯಿಪಲ್ಯಗಳನ್ನು ತಿಂದು ಕೋಳಿ ಮುಂತಾದವುಗಳನ್ನು ಬಾಗಿಲಿಗೆ ಬರಗೊಡದವನು ಮಾಂಸಹಾರಿಗಳ ಸಂಪರ್ಕವನ್ನು ಬೆಳೆಸುವದು ಅಪೇಕ್ಷಣೀಯವಲ್ಲದಿದ್ದರೂ ಒಂದೇ ಭಾಷೆಯನ್ನಾಡುವ ಒಂದೇ ಕುಲ ಸಂಪ್ರದಾಯದ ಬ್ರಾಹ್ಮಣ ಜಾತಿಗಳು ಕೂಡಬಹುದು. ಇದರಿಂದ ಅನೇಕ ತರದ ಪ್ರಯೋಜನಗಳು ದೊರೆಯುವದಲ್ಲದೆ ಅನರ್ಥ ಸಂಭವಿಸಲಾರದು.

ಈಗಿನ ಪದ್ಧತಿಯ ಪ್ರಕಾರ ಪ್ರೌಢವಿವಾಹವು ನಿಷಿದ್ಧವಾದ್ದರಿಂದಲೂ ಜಾತಕ ಮಿಶ್ರತ್ವಗಳ ಅವಶ್ಯಕತೆಯಿಂದಲೂ ಅನೇಕಸಾರಿ ತಂದೆಯು ಮಗಳನ್ನು ಮನಸ್ಸಿಲ್ಲದಿದ್ದರೂ ಯೋಗ್ಯ ವರನು ದೊರಕುವ ಮೊದಲೇ ಮದುವೆ ಮಾಡಿ ಕೊಡಬೇಕಾಗುತ್ತದೆ. ನಂತರ ಅವಳ ಸಂಕಷ್ಟಗಳನ್ನು ನೋಡಿ ಕರಗುವನು. ಎರಡು ಮೂರು ಜಾತಿಗಳು ಒಂದಾದರೆ ವರಾನ್ವೇಷಣಕ್ಕೆ ಹೆಚ್ಚಿನ ಇಂಬು ದೊರಕುವದು. ಒಂದಲ್ಲದಿದ್ದರೆ ಇನ್ನೊಂದು ಕುಟುಂಬದಲ್ಲಿ ತಕ್ಕ ಹುಡುಗನು ಸಿಕ್ಕುವನು. ಈ ಸಂಯೋಗದಿಂದ ಮನೆಗಳು ಹೆಚ್ಚಿ ವರದಕ್ಷಿಣೆಯ ದರ ಕಡಿಮೆಯಾಗಬಹುದೆಂದು ಊಹಿಸಬಹುದು.

ಮಹಮ್ಮದೀಯರ ಸಮಾಜದ ಶಕ್ತಿಯ ಸುಖಗಳ ವಿಷಯ ಮಾತಾಡುವಾಗ ಗೋಖಲೆಯವರು ಮುಸಲ್ಮಾನರಲ್ಲಿ ಜಾತಿ ಭೇದಗಳಿಲ್ಲದ್ದರಿಂದ ಅವರ ಸುಧಾರಣೆ [illegible] ಪ್ರಸಿದ್ಧಿಯು

[illegible] ಜಾತಿಗಳು ಕೂಡಿ ನೀರಿನ ಹಟಕುಗಳಂತೆ ಒಂದರಲ್ಲೊಂದು ಬೆರಸಿ ಹೋಗುವವು. ಇದರಿಂದ ಅಂತಃಕಲಹದಲ್ಲಿ ಸವೆದು ಹೋಗುವ ಬುದ್ಧಿಬಲಗಳು ದೇಶೋನ್ನತಿಗೆ ನೆರವಾಗುವವು.

ನಮ್ಮ ದೇಹಪ್ರಕೃತಿಯು ಕೆಡಲಿಕ್ಕೆ ಜಾತಿಭೇದಗಳು ಒಂದು ಕಾರಣವೆನ್ನಬೇಕು. ಜಾತಿಯನ್ನು ಬಿಟ್ಟು ಹೊರಗೆ ಹೋಗಲಾರದಾಗಿ ಅನೇಕ ಸಾರಿ ಒಂದೇ ಕುಟುಂಬದಲ್ಲಿ—ಗೋತ್ರನಲ್ಲಿಲ್ಲ—ಸಂಬಂಧಗಳು ಬೆಳೆಯುವವು. ಇದರಿಂದ ಹುಟ್ಟುವ ಮಕ್ಕಳು ಕೃಷ್ಣವಾದ ಪ್ರಕೃತಿಯವುಗಳಾಗಿರುವವು. ಬ್ರಿಟಿಷರು, ಅಮೇರಿಕನರು ದೃಢಕಾಯರಾಗಿ ಬೆಳೆದು ಜಯಶಾಲಿಗಳಾಗಲಿಕ್ಕೆ ಅವರಲ್ಲಿ ಬೇರೆ ಬೇರೆ ಕುಲಗಳು ಕೂಡಿ ಒಂದೇ ಜನಾಂಗವಾಗಿ ಪರಿಣಮಿಸಿದ್ದೇ ಕಾರಣವೆಂದು ಹೇಳುವರು. [illegible] ರಾಜಪುತ್ರರಲ್ಲಿ ಬೆಳಸಿದ ರಕ್ತಸಂಬಂಧದಿಂದ ಮೊಗಲ ಬಾದಶಾಹಿ [illegible] ವಂತವಾಯಿತೆಂದು ಒಬ ಚರಿತ್ರಕರ್ತನು ಹೇಳುತ್ತಾನೆ.

ಈ ಲೋಕದಲ್ಲಿ ಬೆಳೆಯುತ್ತಿರುವ ಜನಾಂಗಗಳ [illegible] ಅವಶ್ಯವಿರುವದರಿಂದ ನಮ್ಮ ಮುಖಂಡರು ಇಂಥಾ ವಿಷಯ [illegible] ನೆರವೇರಿಸಿದರೆ ದೇಶಕ್ಕೆ ಶಾಶ್ವತ ಮೇಲಾಗುವದು. ಜಾತಿಭೇದಗಳಿಂದ ಹಾನಿಯುಂಟೆಂದು ಬುದ್ಧ, ನಾನಕ, ಕಬೀರ ಮೊದಲಾದ ಮಹಾತ್ಮರು [illegible] ಬೋಧಿಸಿದ್ದಾರೆ. ವ್ಯವಹಾರಿಕ ಜ್ಞಾನಭರಿತನಾದ ಸರ್ವಜ್ಞನು ಹೇಳುವಂತೆ

"ಯಾತರದು ಹೂವೇನು
ನಾತರದ ಸಂಬಂಧ
ಜಾತಿ ವಿಜಾತಿಯೆನಬೇಡ
ದೇವನೊಲಿದಾತನೇ ಜಾತ ಸರ್ವಜ್ಞ"

ಆತ್ಮಸಂಯಮ.

ಮಹಾಭಾರತದೊಳಗಿನ ಉಪಕಥೆ.

[illegible]

ಚತುರ್ವೇದಗಳಷ್ಟೇ ಅವು ಮೌಲ್ಯವಾಗಿ ಪಂಚಮವೇದವೆನಿಸುವ ಮಹಾಭಾರತವು ಈ ಪುರಾಣ ಇತಿಹಾಸಗಳಲ್ಲಿ ಅತ್ಯಂತ ಪ್ರಮಾದದ್ದು. ಧರ್ಮದೇವತೆಯ ಅವತಾರನಾದ ಯುಧಿಷ್ಠಿರ ಮಹಾರಾಜನ ಮಾತು ಕಥೆಗಳು ಸಕಲ ಧರ್ಮಪರಿಪೂರ್ಣವಾದ್ದರಿಂದ ಯಾವ ಯುಗದಲ್ಲಿಯೂ ವಾಚಕರಿಗೆ ಸುಫಲಗಳನ್ನೀಯುವವು. ಅಧರ್ಮಿಗಳಾದ ಕೌರವರಿಂದ ಜೂಜಿನಲ್ಲಿ ಸೋಲಿಸಲ್ಪಟ್ಟ ಪಾಂಡವರು ಅರಣ್ಯವಾಸವನ್ನು ಕಳೆಯುತ್ತಾ ಒಂದಾನೊಂದು ದಿನ ತಮ್ಮ ಪರಿವಾರದೊಡನೆ ತೃಷೆಯಿಂದ ಕಂಗೆಟ್ಟು ಒಂದು ಘೋರಾರಣ್ಯವನ್ನು ಸೇರಿರಲು ಹತ್ತರದಲ್ಲೆಲ್ಲಾದರೂ ನೀರು ತೋರುವದೋ ಏನೆಂಬದನ್ನು ಒಂದು ಮರವೇರಿ ನಿಶ್ಚಯಿಸಲಿಕ್ಕೆ ಮಾದ್ರಿ ಸುತನಾದ ನಕುಲನಿಗೆ ಧರ್ಮನು ಆಜ್ಞೆ ಕೊಟ್ಟನು. ನೀರು ಸ್ವಲ್ಪ ದೂರದಲ್ಲಿದ್ದದ್ದನ್ನು ನಕುಲನು ನೋಡಿ [illegible] ಪಾತ್ರವನ್ನು [illegible] ಒಂದು ನೀರಿರುವ ಕೊಳದೆಡೆಗೆ ಬಂದನು. ಇಷ್ಟರಲ್ಲೇ, ಒಂದು ಅಶರೀರ

[illegible] ವಾಣಿಯು—[illegible] ನನಗೆ ಕೇಳುವ ಪ್ರಶ್ನೆಗಳಿಗೆ ಉತ್ತರ ಕೊಟ್ಟು ತದನಂತರ ನೀರನ್ನು ಉಪಯೋಗಿಸಿಕೊ ಎಂದಿತು. [illegible] ಯಲು, ತಕ್ಷಣವೇ ಆತನು ನಿರ್ಜೀವನಾಗಿ [illegible] ವರೆಗೆ ಬಾರದಿರುವದನ್ನು ನೋಡಿ ಸಹದೇವನನ್ನು ಈ ತಟಾಕದೆಡೆಗೆ ಬಂದು ಅಶರೀರವಾಣಿಯನ್ನು ಗೊಡವೆಗೆ ತಾರದೆ ನೀರನ್ನು ಕುಡಿದದ್ದರಿಂದ ನಕುಲನಂತೆಯೇ ಮಡಿದು ಬಿದ್ದನು. ಭೀಮಾರ್ಜುನರು ಸಹಾ ನಕುಲ ಸಹದೇವರಂತೆಯೇ ಅಲ್ಲಿಗೆ ಬಂದು ಈ ಮಾತುಗಳನ್ನು ಮೀರಿ ನಡೆದು ತಮ್ಮಂದಿಯರ ಗತಿಯನ್ನೇ ಹೊಂದಿದರು. ನೀರನ್ನು ತರಲಿಕ್ಕೆ ಹೋದ ತಮ್ಮಂದಿಯರ ಹಾದಿಯನ್ನು ಬಹಳ ಹೊತ್ತು ಕಾದು ಕೊಂಡಿದ್ದರೂ ಇವರು ಬಾರದಿರುವದನ್ನು ಧರ್ಮರಾಜನು ಕಂಡು ದುಃಖಿತನಾಗಿ ನೀರಿನ ಕೊಳವನ್ನು ಹುಡುಕುತ್ತಾ ತಮ್ಮಂದಿಯರು ನಿರ್ಜೀವವಾಗಿ ಬಿದ್ದಲ್ಲಿಗೆ ಬಂದು, ಬಾಹುಬಲ ಪರಾಕ್ರಮದಲ್ಲಿ ದೇವತೆಗಳನ್ನು ಮೀರುವ ಭೀಮಾರ್ಜುನ ನಕುಲ ಸಹದೇವರು ಯಾವ ಕಾರಣದಿಂದ ಈ ಗತಿಯನ್ನು ಹೊಂದಿರುವರೆಂಬದನ್ನು ತಿಳಿಯಲಾರದೆ [illegible] ಉಪಾಯವೇನೂ ಕಾಣದೆ, ಕೊಳದ ನೀರಿನಲ್ಲಿ ಏನಾದರೂ ದೋಷವಿರುವದೆಂತ ಊಹಿಸಿ ನೀರಿನ ಪರೀಕ್ಷಾರ್ಥವಾಗಿ ಕೊಳಕ್ಕಿಳಿಯಲು ಅಷ್ಟರಲ್ಲಿಯೇ ಅದೇ ಅಶರೀರವಾಣಿಯು ಅಯ್ಯಾ, ಮಹಾರಾಯನೇ, ನನ್ನಿಂದ ನಿನ್ನ ಸಹೋದರರು ಸ್ವರ್ಗಸ್ಥರಾದರು. ನಾನು ಒಂದು ಬಕ ಪಕ್ಷಿ, ನೀನು ಸಹಾ ನಾನು ಕೇಳುವ ಪ್ರಶ್ನೆಗಳಿಗೆ ಉತ್ತರವನ್ನು ಕೊಡದಿದ್ದರೆ ನಿನಗೂ ಮರಣ ಸಂಭವಿಸುವದು. [illegible] ಧರ್ಮರಾಯನು [illegible] ಕಂಡು ಬೆದರಿದನು. [illegible] ಪ್ರತ್ಯಕ್ಷವಾಗಿ [illegible] ಭೀಮಾರ್ಜುನರೆಲ್ಲರೂ [illegible] ನನ್ನ ಪ್ರಶ್ನೆಗಳಿಗೆ ಉತ್ತರ ಕೊಟ್ಟು ಕೊಳಕ್ಕೆ ಇಳಿ, ಅಂದಿತು. [illegible] ಯಾವದೆಂದು ಕೇಳಲು [illegible] ಪ್ರಶ್ನೆಗಳನ್ನು [illegible] ಕೇಳಿದನು.

[illegible] ಯಾವನು? [illegible] ಯಾರು ಯಾವರು?

[illegible] ಕಾಲಕಳೆಯುತ್ತಾ [illegible] ಕ್ಷಣವಾತ್ರ [illegible] ಮಾಡುವ ಧೀರರಾದ [illegible] ಅತ್ಯಾಶ್ಚರ್ಯವು, ಈ [illegible] ಸಕಲ ಕಾರ್ಯಗಳನ್ನು ಸಾಧಿಸಿದ [illegible] ತಮ್ಮ ರಾಜ್ಯವನ್ನು ಪಡೆದ. ಸುಖಿಯಾಗಿರುವವ ಯಾರು [illegible] ಮೇಲಿನ ಪ್ರಶ್ನೆಗಳಿಗೆ ಯೋಗ್ಯವಾದ ಉತ್ತರಗಳಂತ [illegible] ಕಾರಿಯಾದ ಧರ್ಮರಾಯನಿಗೆ ತೋರಲಿಲ್ಲ. ಆತನ ಉತ್ತರಗಳಾವವೋ ಧರ್ಮರಾಯನು [illegible] ಸಮರ್ಪಿಸುವವು. ಜಗತ್ತಿನಲ್ಲಿ ಸುಖದುಃಖಗಳನ್ನು ಅನುಭವಿಸುವ [illegible] ಕಾಲವು [illegible] ಇದೇ ಪರ್ವ [illegible] ಪ್ರತ್ಯಕ್ಷದಲ್ಲಿಯೂ ಪ್ರಾಣಿಗಳು ಸಾಯುತ್ತಿರುವದನ್ನು ಕಂಡವರು ಕೂಡ ದರೂ ಸ್ಥಿರಂಜೀವಿಗಳಂತೆ ಎಲ್ಲರೂ ವರ್ತಿಸುವರು, ಇದಕ್ಕಿಂತ ಬೇರೆ ಆಶ್ಚರ್ಯ ಯಾವದು? ಹಲವು ವೇದಗಳಿವೆ ಧರ್ಮಶಾಸ್ತ್ರಗಳೂ ಅನೇಕವಿರುವವು. ಮಹರ್ಷಿಗಳಾದರೋ ಬಿನ್ನ ಮತಗಳನ್ನು ಪ್ರತಿಪಾದಿಸುವರು. ಆದರೆ ಎಲ್ಲರೂ ಧರ್ಮಮಾರ್ಗದಿಂದ ಸತ್ಯವನ್ನು ತಿಳಿಯುವರು, ಇದೇ ದಾರಿ. [illegible] ಕಾಲಹರಣ ಮಾಡದೆ [illegible] ಸಾಯಂಕಾಲದಲ್ಲಿ ತನ್ನ ಕೂಳನ್ನು ತಾನೇ ಅಟ್ಟು ಸಂತುಷ್ಟಿಯಿಂದ ಉಂಡು, ಸಾಲವಿಲ್ಲದಾತನು ಯಾವಾಗಲೂ ಸುಖಿಯು. ಧರ್ಮರಾಯನ ಈ ಮಾತುಗಳನ್ನು ಕೇಳಿ ಇವನ ಧರ್ಮನಿರತೆಯನ್ನು ಶಾಶ್ವತ [illegible] ಯಕ್ಷನು—ಮಹಾರಾಯನೇ ನಿನ್ನ ಉತ್ತರಗಳನ್ನು ಕೇಳಿ ಬಹಳ ಸಂತೋಷಪಟ್ಟೆನು ನಿನ್ನ ತಮ್ಮಂದಿಯರಲ್ಲಿ ನೀನಪೇಕ್ಷಿಸುವವನು ಯಾವನಾಗಲಿ ಒಬ್ಬನು ಪುನಃ ಸ್ಮೃತಿಯನ್ನು ಹೊಂದಿ ಜೀವಿಸಲಿ ಎಂದೆನಲು, ಧರ್ಮಜನು—ಯಕ್ಷನೇ ನನ್ನ ಪ್ರಿಯ ನಕುಲನು ಜೀವಿಸಲೆಂದನು. ಯಕ್ಷನು ಧರ್ಮರಾಯನ ನಿಷ್ಪಕ್ಷಪಾತವನ್ನು [illegible] ಬೇಗನೆ ನಿನ್ನ ಒಡಹುಟ್ಟಿ ಪರಾಕ್ರಮದಲ್ಲಿ ನಕುಲನನ್ನು ಮೀರಿರುವ ಭೀಮಾರ್ಜುನರನ್ನು ಅಲ್ಲಿಯೇ ಬಿಟ್ಟು ನಕುಲನು ಜೀವಿಸಲು [illegible] ಧರ್ಮರಾಜನು ಈ ಸಂದರ್ಭದಲ್ಲಿ ಯಕ್ಷನಿಗೆ ಕೊಟ್ಟ ಉತ್ತರವನ್ನು ಭಾರತೀಯ

ರಲ್ಲ ಯಾವಾಗಲೂ ತಪ್ಪದೆ ಸತತವಾಗಿ. "ಧರ್ಮನಾಶಕ್ಕೆ ಯಾವಾತನು ಉದ್ಯುಕ್ತನಾಗುವನೋ ಆತನು ಅಧರ್ಮದಿಂದಲೇ ನಾಶಹೊಂದುವನು. ಧರ್ಮವನ್ನು ಕಾಪಾಡುವವನು ಆ ಧರ್ಮದಿಂದಲೇ ರಕ್ಷಿಸಲ್ಪಡುವನು. ಆದ್ದರಿಂದ ನಾನು ಎಂದೂ ಅಧರ್ಮಿಯಾಗಲಿಕ್ಕಿಲ್ಲ. ನಮ್ಮ ತಂದೆಯಾದ ಪಾಂಡು ಚಕ್ರವರ್ತಿಗೆ ಕುಂತಿ ಮಾದ್ರಿಯರೆಂಬ ಇಬ್ಬರು ಹೆಂಡಂದಿಯರು. ಕುಂತಿಯ ಪುತ್ರನಾದ ನಾನೊಬ್ಬನು ಜೀವದಿಂದಿರುತ್ತಾ ಮಾದ್ರಿಯು ಸುತನಿಲ್ಲದಿರುವದು ಯೋಗ್ಯವಲ್ಲ. ಹೀಗಿರುತ್ತಾ ನಕುಲನು ಜೀವಿಸಲಿ"

ಯುಧಿಷ್ಠಿರನ ಧರ್ಮಸರಳತೆಯನ್ನು ಮೆಚ್ಚಿ ಆ ಯಕ್ಷನು ಧರ್ಮರಾಯನ ತಮ್ಮಂದಿಯರೆಲ್ಲರನ್ನೂ ಮರಣದಿಂದೆಬ್ಬಿಸಿದನು. ಈ ಯಕ್ಷನು ಸಾಧಾರಣ ಪುರುಷನಲ್ಲ. ತನ್ನ ಮಗನಾದ ಧರ್ಮರಾಯನನ್ನು ಸಂದರ್ಶಿಸಲಿಕ್ಕೆ ಬಂದ ಸಕಲ ಧರ್ಮಪರಿಪಾಲಕನಾದ ಯಮಧರ್ಮನೇ. ಮಗನಿಗೆ ಆಶೀರ್ವಾದವನ್ನಿತ್ತು ಅಂತರ್ಧಾನವನ್ನೈದಿದನು.

15 ರೂಪಾಯಿ ತಲಬಿನ ಸರಕಾರಿ ಉದ್ಯೋಗ.

—o—

ಕೋರ್ಟು ಕಚೇರಿಗಳಲ್ಲಿ 15 ರೂಪಾಯಿ ತಲಬಿನಿಂದ ಕುಟುಂಬವನ್ನು ಸಾಕುವ ಬಡ ಗುಮಾಸ್ತರ ಗೋಳನ್ನು "ಹಿಂದೂ" ಪತ್ರಿಕೆಕರ್ತರು ಹಲವು ಸಿದದಲ್ಲಿ ಬಣಿಸಿ ಈ "ಮೇಲು" ನೌಕರರಿಗೆ (Superior servants) ಹೊಟ್ಟೆ ತುಂಬ ಇಕ್ಕಬೇಕೆಂದು ಸರ್ಕಾರಕ್ಕೆ ಅರಿಕೆ ಮಾಡುತಿದ್ದರು. ಈ ಲೇಖನಗಳನ್ನು ಓದಿ ಕನಿಕರಪಟ್ಟು ನ್ಯಾಯವಿಧಾಯಕ ಸಭೆಯ ಒಬ್ಬ ಮೆಂಬರರು ಕೌನ್ಸಿಲಿನಲ್ಲಿ ಈ ಬಡ ಗುಮಾಸ್ತರ ದೀನಸ್ಥಿತಿಯನ್ನು ನಿವಾರಿಸುವ ಏರ್ಪಾಡು ಮಾಡಲಿಕ್ಕಾಗದೋ ಎಂದು ಸರಕಾರದವರಿಗೆ ಕೇಳಲು ಸಾಧ್ಯವಿಲ್ಲವೆಂಬ ಉತ್ತರ ದೊರೆಯಿತು. ಅದರೂ ಪತ್ರಿಕೆಗಳು ತಮ್ಮ ಕೆಲಸವನ್ನು ಬಿಡಲಿಲ್ಲ. ಮದ್ರಾಸ್ ಕಲೆಕ್ಟರ ಮತ್ತು ಸ್ಟೇಷನ್ ಸುಪರಿಂಟೆಂಡೆಂಟರ ಆಫೀಸುಗಳ ಗುಮಾಸ್ತರು ಇಂಡ್ಯಾ ಗವರ್ನಮೆಂಟಿಗೆ ಮೆಮೋರಿಯಲ್ ಬಿನ್ನವತ್ತಳೆಗಳನ್ನು ಬರಕೊಂಡರು. ಅದರಲ್ಲಿ ತಮಗೆ ... ಪಟ್ಟಿ ತೋರಿಸಿ 30 ರೂಪಾಯಿ ಕಮ್ಮಿ ಉದರನಿರ್ವಾಹ ಮದ್ರಾಸು ಪಟ್ಟಣದಲ್ಲಿ ಸಾಗದೆಂದು ರುಜು ಪಡಿಸಿದ್ದಾರೆ. ಮದ್ರಾಸು ಗವರ್ನಮೆಂಟಿನವರು ಈ ಮೆಮೋರಿಯಲ್‌ಗಳನ್ನು ಇಂಡ್ಯಾ ಗವರ್ನಮೆಂಟಿಗೆ ಕಳಿಸಿದ್ದಾರೆಂತಲೂ ಮತ್ತು ಅರ್ಜಿದಾರರ ಇಸಮುಗಳನ್ನು 20 ರೂಪಾಯಿಗೆ ಏರಿಸಿದ್ದಾರೆಂತಲೂ ತಿಳಿದು ಬರುತ್ತದೆ.

ಈ ಸಂದರ್ಭದಲ್ಲಿ ಮದ್ರಾಸಿನಲ್ಲಿ ನೌಕರರಿಗೆ 30 ರೂಪಾಯಿಯನ್ನೂ ಹೊರಪ್ರಾಂತ್ಯಗಳಲ್ಲಿ 25 ರೂಪಾಯಿಗಳನ್ನೂ ನಿಕೃಷ್ಟ ಸಂಬಳವಾಗಬೇಕೆಂದು ಚರ್ಚಿಸುವರು. ಮಂಗಳೂರ ಪಟ್ಟಣದಲ್ಲಿ ಒಂದು ಸಣ್ಣ ಕುಟುಂಬಕ್ಕೆ ಮನೆ ಬಾಡಿಗೆ (ಹ್ಯಾಗು ಬಾಡಿಗೆ) ಸೇರಿಸಿ ತಿಂಗಳಿಗೆ 25 ರೂಪಾಯಿ ಬೇಕೆಂಬುದು ನಮ್ಮ ಅನುಭವಸಿದ್ಧವೇ. 30 ವರ್ಷದ ಈಚೆಗೆ ದವಸಧಾನ್ಯಗಳ ಬೆಲೆ ಏರಿಯದೆಂಬ ಆಧಾರದ ಮೇಲೆ ಸೆಟ್ಲ್‌ಮೆಂಟ್ ತೀರ್ವೆ ಏರಿಸಿದ ಸರ್ಕಾರದವರು ಈ ಬಡ ನೌಕರರಿಗೆ ಅಕ್ಕಿ ಮುಡಿಗೆ $1\frac{1}{2}$ ಯಾ 2 ರೂಪಾಯಿ ಇರುವಾಗ ನೇಮಕ ಮಾಡಿದ ಸಂಬಳವನ್ನು ಮುಡಿಗೆ $5\frac{1}{2}$ ರೂಪಾಯಿ ಆದರೂ ಯಾಕೆ ಅದೇ ಸಂಬಳ ಮೇಲೆ ಏರಿಸುವದಿಲ್ಲ ಎಂದು "ಹಿಂದೂ" ಎಡಿಟರರು ಕೇಳುವ ಪ್ರಶ್ನೆಗೆ ಸರ್ಕಾರದವರು ಯಾವ ಸಮಾಧಾನ ಹೇಳುವರೋ? ನಮ್ಮ ದೇಶದ ಯುವಕರು ತಮ್ಮ ಯೌವನವನ್ನೂ ಸ್ವಾತಂತ್ರ್ಯವನ್ನೂ ಸರ್ಕಾರಕ್ಕೆ ಮಾರಿದರೂ ಸೌಖ್ಯ ಕಾಣದೆ ನರಳುವದಕ್ಕೆ ಮುಖ್ಯ ಕಾರಣ ನಮ್ಮಲ್ಲಿ ಉತ್ಸಾಹ, ಸಾಹಸಗಳಿಲ್ಲದಿರುವದೇ. ಕೆಲವು ಬಂಡವಾಳಿಕರು ಕೂಡಿ ಕೈಗಾರಿಕೆ ಕಾರ್ಖಾನೆಗಳನ್ನೂ ಭಂಡಸಾಲೆಗಳನ್ನೂ ಸ್ಥಾಪಿಸಿದರೆ ಇಂತಹ ಗುಮಾಸ್ತರಾಗಿ ಬಳಲಿ ಹೋಗುವವರನೇಕರಿಗೆ ಮೈಗೆ ಪುಷ್ಟಿ ಮನಸ್ಸಿಗೆ ತುಷ್ಟಿಯು ಪ್ರಾಪ್ತಿಸುವದು. ಯಾವಾಗ ನಮ್ಮಲ್ಲಿ ಸ್ವಾತಂತ್ರ್ಯದ ಪ್ರೇಮ ಹೆಚ್ಚಿ ಯುವಕರು ಕೂಡಿದಷ್ಟು ಸ್ವತಂತ್ರದ ಜೀವನವನ್ನು ಹುಡುಕ ತೊಡಗುವರೋ ಅದೇ ನಮಗೆ ಶುಭ ದಿನ.

ಪತ್ರವ್ಯವಹಾರ.

ಬಂಟ್ವಾಳ ತಾ. 9-4-07.

ಅಯ್ಯಾ ಸ್ವದೇಶಾಭಿಮಾನಿ ಪತ್ರಿಕಾಕರ್ತರೇ,—

ದಯೆಯಿಟ್ಟು ಈ ಪತ್ರವನ್ನು ತಮ್ಮ ಪ್ರಧಾನವಾದ ಪತ್ರಿಕೆಯಲ್ಲಿ ಉದಾರಮನಸ್ಸಿನಿಂದ ಪ್ರಕಟಿಸುವಿರಾದರೆ ಉಪಕೃತನಾಗುವೆನು.

ನಮ್ಮ ಊರಾದ ವೀರಪುರದಲ್ಲಿ ... ಹಾರಿಗಳಿಗೆ ಧೂರ್ತಾಚಾರವನ್ನು ಅತ್ಯುತ್ತಮರಿಗೆ ಭ್ರಷ್ಟಾಚಾರವನ್ನೂ ... ಮಾಡಿ ಇತ್ತಲಾಗೆ ಹತ್ತಿಪ್ಪತ್ತು ದಿವಸಗಳಾಗುತ್ತವೆ. "ಪತ್ರಿಕೆ ನೋಡಲು ಅತ್ಯುಗ್ರಕಬಿಟ್ಟು ಅತ್ಯುನ್ನತ ಶಾಂತಿತೊಟ್ಟು ಮುಟ್ಟದ ವಿಷ್ಣುವಿಗೆ ಕಲ್ಪಿತವಾದ ಕುಷ್ಟಗೊಟ್ಟು ಕ್ಲೇಷವೆಂಬ ಬಿರುದಾನದಿಂ ಕರೆಯಲ್ಪಟ್ಟು ಇಷ್ಟರವರೆಗೆ ಇದ್ದು ಅಷ್ಟಷ್ಟಕ್ಕೆ ಮುಂದಕ್ಕೆ ಪುತ್ರಷ್ಟು ಶಾಂತಿತೊಟ್ಟು ಕೃಪಾವೃಷ್ಟಿಸುರಿಯಲೆಂದು ಸೃಷ್ಟಿಕರ್ತನ ಕೂಡೆ ಇಷ್ಟೆ ನಮ್ಮ ಪ್ರಾರ್ಥನೆ. ಇದೇ ನವ ಕ್ಕಾರ ವದಂತಿ.

ಸಿಕ್ಕಿದವರೆಲ್ಲಾ ನರಿಯ ಇಕ್ಕಲವು ಬಹಿರ್ದೇಶಕ್ಕೆ ತಕ್ಕದಾದ ಪಕ್ಕವಂದಣಿಸಿ ದಕ್ಕಿಸಿಕೊಳ್ಳುವ ಮಕ್ಕಳಾಟಿಕೆ ನಿಲ್ಲಿಸಲು ಪಕ್ಕದಲ್ಲಿರುವ ಪಕ್ಕಡಿಯವರಿಗೆ ಹಕ್ಕಿಲ್ಲವೇನೋ? ನರಿಯಾದರೋ ಬರಿಯಲ್ಲಾಗುತ್ತ ಅಧರ್ಮ ನೋಡಿ ಹೃದಯದಲ್ಲಿಯುದ್ಭವಿಸಿದ ಅಧಿಕತರ ಚಿಂತೆಯಿಂದ ಪದೇ ಪದೇ ಕುಂದುತ್ತಾ ಬರುವಳು. ಈ ಮಾಸನೆಯನ್ನು ಮೂಸುವದಕ್ಕಿಂತ ನೀರಲ್ಲಿ ಮಾಸಿಸುವದೇ ಲೇಸೆಂದಿದ್ದ ಸಾಸಿರ ಕಲ್ಲುಗಳು ಶ್ವಾಸಗೆಟ್ಟು ಹತಾಶರಾಗಿ ಆಕಾಶ ಮಂಡಲವನ್ನು ನಿರೀಕ್ಷಿಸುವಂತೆ ದಿನೇ ದಿನೇ ಕಂಗೊಳಿಸುವವು. ಇದು ಸತ್ಯವೋ ಮಿಥ್ಯವೋ ಎಂಬುದು ಕಚ್ಚೇರಿ ಬತ್ತಿಗಿರುವ ಬತ್ತಿದನರಿಯ ಬರಿಯಲ್ಲಾ ಸುತ್ತಿ ನೋಡಲು ಚಿತ್ರಕ್ಕೆ ಗೊತ್ತಾದೀತು. ಇದೇ ನಮ್ಮೂರ ವಿಶೇಷ. ಸಶೇಷ ವಿದ್ದಲ್ಲಿ ಹಿಂದಿನಿಂದ ಬರಕೊಳ್ಳುತ್ತೇನೆ.

P K B

ಕಣ್ಣಾನೂರಿನ ವಸ್ತುಪ್ರದರ್ಶನವು.

—o—

ಉತ್ತರ ಮಲಬಾರಿನ ಕಣ್ಣಾನೂರಿನಲ್ಲಿ ಕೆಲವು ಜನ ಪ್ರಮುಖರಿಂದ ಏರ್ಪಡಿಸಲ್ಪಟ್ಟ ವಸ್ತುಪ್ರದರ್ಶನವು ಕಳೆದ ತಿಂಗಳ ತಾರೀಖು 27ಕ್ಕೆ ಎಗ್ರಿಕಲ್ಚರಲ್ ಕಮಿಷನರಾದ ಕೆಸಲ್ ಸ್ಟವರ್ಟ ಸ್ಟವಾರ್ಟರಿಂದ ತೆರೆಯಲ್ಪಟ್ಟಿತು. ಪ್ರದರ್ಶನಾ ಮಂಟಪವು ಆಯಾ ನಾಡುಗಳಿಂದ ಕಳುಹಿಸಲ್ಪಟ್ಟ ನೂತನ ವಸ್ತುಗಳಿಂದ ಅಲಂಕರಿಸಲ್ಪಟ್ಟಿತ್ತು. ಸಾಧಾರಣ ೫೦೦ ಮಂದಿ ಜನರಿಂದ ೪೦೦ಕ್ಕಿಂತ ಹೆಚ್ಚು ವಸ್ತುಗಳು ಆ ಪ್ರದರ್ಶನದ ದೇಖಾವೆಗಳಲ್ಲಿರುವವು. ಇವುಗಳೆಲ್ಲವನ್ನೂ ಬೇರೆ ಬೇರೆ ೧೩ ಭಾಗ ಯಾ ಸೆಕ್ಷನುಗಳಾಗಿ ವಿಂಗಡಿಸಿರುತ್ತಾರೆ. ಕಣ್ಣಾನೂರಿನ ಜೈಲಿನಲ್ಲಿ ನಾನಾ ವಿಧದಲ್ಲಿ ಕೆತ್ತಲ್ಪಟ್ಟ ಬೆಳ್ಳಿಯಿಂದ ಅಲಂಕರಿಸಲ್ಪಟ್ಟ ತೆಂಗಿನಕಾಯಿಗೆರಟೆಗಳ ವಿಚಿತ್ರ ಕರಡಿಗೆಗಳು, ನಾಜೂಕು ಕಾಮಗಿರಿಯ ಕುರ್ಚಿ ಮೇಜು ಮೊದಲಾದ ಅಜಬಾಜುಗಳು, ಜನರಿಗೆ ಆಯಾ ನಾರುಳ್ಳ ವನಸ್ಪತಿಗಳಿಂದ ಒಳ್ಳೇ ನಾರನ್ನು ತೆಗೆಯಲು ಸಾಧ್ಯವೆಂಬುದನ್ನು ತಿಳಿಯಪಡಿಸುವಗೋಸುಗ, ಲೋಳಸರ, ಬಾಳೆಗಿಡ, ಅಗಸೆ, ತೆಂಗು, ತಾಳೆಮರ ಮುಂತಾದ ಅನೇಕ ವನಸ್ಪತಿಗಳಿಂದ ತೆಗೆದಿಟ್ಟ ನಾರೂ, ಇವುಗಳಿಂದ ತಯಾರಿಸಲ್ಪಟ್ಟ ತರತರದ ಹಗ್ಗಗಳೇ ಮೊದಲಾದ ಇತರ ಬಗೆಗಳು, ಯುರೋಪಿಯ ಮತ್ತು ದೇಶೀಯ ಸ್ತ್ರೀಯರುಗಳ ಹಸ್ತಕೌಶಲವನ್ನು ತೋರುವ ಜರಿಗೊಂಡೆ ಊಲನ್ ದಾರದಿಂದ ನೇಯಲ್ಪಟ್ಟ ಮನೋರಂಜಕ ವಸ್ತ್ರಗಳು, ಕೈಯಿಂದ ಬಿಡಿಸಿದ ನಕ್ಷೆಪಟಗಳು ಆಯಾ ಸೆಕ್ಷನುಗಳ ದೇಖಾವೆಗಳಲ್ಲಿದ್ದವು. ಈ ಸ್ತ್ರೀಯರ ಸೆಕ್ಷನಿನಲ್ಲಿ ಮಿಸಿಸ್ ಕೃಷ್ಣನ್ ಎಂಬವರಿಂದ ಊಲನಿನ ವಸ್ತ್ರದ ಮೇಲೆ ನೇಯಲ್ಪಟ್ಟ ಸೇಕ್ಸ್‌ಪಿಯರ್ ಎಂಬ ಇಂಗ್ಲೀಷ ಮಹಾಕವಿಯ ಅಮೂಲ್ಯವಾದ 'ಕಿಂಗ್ ಲಿಯರ್' ಎಂಬ ನಾಟಕದಲ್ಲಿ ವರ್ಣಿಸಲ್ಪಟ್ಟ 'ಕೋರ್ಡಿಲಿಯಾ' ಮತ್ತು 'ಕಿಂಗ್‌ಲಿಯರ್' ಎಂಬ ಸ್ತ್ರೀ ಪುರುಷರ ಬಿಂಬಗಳು ನೋಟಕರಲ್ಲಿ ವಿಸ್ಮಯಾನಂದಗಳನ್ನುಂಟುಮಾಡುವವು. ವಿಶಾಖಪಟ್ಟಣ, ತಂಜಾವೂರು, ಮೈಸೂರು, ಪಾಲ್ಘಾಟ ಈ ಊರುಗಳ ವಿಶೇಷ ಸಾಮಾನುಗಳು ಈ ಪ್ರದರ್ಶನಾಮಂಟಪದಲ್ಲಿರುವವು. ಮಯ್ಯೆಲಿ ಕುಟುಂಬದ ಎಮ್. ಕೆ. ದಾಮನ್ ಎಂಬವರು ಮೂರು ಅಕ್ಕಿ ಕಾಳುಗಳಲ್ಲಿ ಅತೀ ಸೂಕ್ಷ್ಮವಾದ ಲಿಪಿಗಳನ್ನು ಬರೆದು ಪ್ರದರ್ಶನೆಗೆ ಇಟ್ಟಿರುತ್ತಾರೆ. ಒಂದು ಕಾಳಿನಲ್ಲಿ ಇಂಗ್ಲೀಷ ಭಾಷೆಯಿಂದ ಕೆಸಲ್ ಸ್ಟವಾರ್ಟ ಸಾಹೇಬರಿಂದ ತೆರೆಯಲ್ಪಟ್ಟ ಈ ವಸ್ತುಪ್ರದರ್ಶನಕ್ಕೆ ಮಂಗಳವಾಗಲೆಂದೂ ಇನ್ನೊಂದರಲ್ಲಿ "ಶ್ರೀ ನಾರಾಯಣ ಧರ್ಮಪರಿಪಾಲನ ಸಭೆಗೆ ಶುಭವಾಗಲೆಂದೂ, ಮತ್ತೊಂದರಲ್ಲಿ ಗ್ರೇಸ್ ಎಲಿಬ ಎಂಬ ಇಂಗ್ಲೀಷ ಪದ್ಯದ ನಾಲ್ಕು ಪಂಕ್ತಿಗಳನ್ನು ಕಪ್ಪು ಮಸಿಯಿಂದ ಅತೀ ಸೂಕ್ಷ್ಮವಾಗಿ ಬರೆದಿರುವರು. ಒಟ್ಟಿನಿಂದಲೇ ನೂರು ವಿಧಗಳಲ್ಲಿ ಬರೆಯಲ್ಪಟ್ಟ ಬರಹವೂ ಆ ದೇಖಾವೆಗಳಲ್ಲಿರುತ್ತದೆ.

ವಸ್ತುಪ್ರದರ್ಶನವು ತೆರೆಯಲ್ಪಟ್ಟ ಕೆಲವು ದಿವಸಗಳ ಮೇಲೆ ಯುರೋಪಿಯನ್ ಮತ್ತು ದೇಶೀಯ ಗೃಹಸ್ಥರು ಭರತಖಂಡದ ಪ್ಲೇಟಿಗೆ ಉಪಯುಕ್ತವಾದ ... ವಿಷಯಗಳನ್ನೆತ್ತಿ ಪ್ರದರ್ಶನಾಮಂಟಪದಲ್ಲಿ ಭಾಷಣ ಕೊಟ್ಟರು. ... ಸ್ವಾರ್ಟ ಸಾಹೇಬರ ಆಗಮನವನ್ನು ಅಭಿನಂದಿಸಿ ಪ್ರದರ್ಶನ ಕಮಿಟಿಯ ಪ್ರೆಸಿಡೆಂಟರು

ಪ್ರದರ್ಶನವನ್ನು ಏರ್ಪಡಿಸಲಿಕ್ಕೆ ಮಲಬಾರಿನಲ್ಲಿರುವ ಹಲವು [illegible] [illegible] [illegible] ಸಂದರ್ಭಗಳಲ್ಲಿ [illegible] [illegible] [illegible] ಎಂಬ ಊಹನೆಯಿಂದ ಅನೇಕ ಜನರು ಏನೂ [illegible] ಮಾಡಲಿಲ್ಲವೆಂಬುದಾಗಿ ತಿಳಿಸಿದರಂತೆ. ಭರತಖಂಡದ ಸರ್ವಸಾಧಾರಣ ಎಲ್ಲಾ ಕಡೆಗಳಲ್ಲಿಯೂ ಸ್ವದೇಶಿ ಕೋಲಾಹಲವು ಹಬ್ಬುತ್ತಿರುತ್ತಾ, ಸ್ವದೇಶಿ ಕೈಗಾರಿಕೆಗಳನ್ನೂ ದೇಶದ ವ್ಯವಸಾಯ ಅಭಿವೃದ್ಧಿಯನ್ನೂ ಸಾಧಿಸುವದೇ ಈ ಪ್ರದರ್ಶನಗಳ ಮುಖ್ಯ ಉದ್ದೇಶ. ಮಕ್ಕಳಿಗೆ ಬಾಲಕರ ದರ್ಜೆಗಳಲ್ಲಿ ವಸ್ತುಪಾಠಗಳಿಂದ ತಾವು ದಿನಂಪ್ರತಿ ಉಪಯೋಗಿಸುವ ವಸ್ತುಗಳ ಗುಣಾವಗುಣಗಳನ್ನು ಕಲಿಸುವಂತೆ ಕೈಗಾರಿಕೆ ವ್ಯವಸಾಯಗಳ ಮರ್ಮಗಳನ್ನು ಈ ಪ್ರದರ್ಶನಗಳು ಸಾಧಾರಣವು[illegible] ವ್ಯಕ್ತಪಡಿಸುವವು. ಹೀಗಿರುತ್ತಾ ಸರಕಾರದವರು ತೆರಿಗೆಗಳನ್ನು ಹೆಚ್ಚಿಸುವ ಉದ್ದೇಶ್ಯ ಪ್ರದರ್ಶನಗಳನ್ನು ಏರ್ಪಡಿಸುವರೆಂಬ ಊಹನೆಯು ಆಧಾರವಿಲ್ಲದ್ದು. ವ್ಯಾಪಾರದಿಂದ ಭರತಖಂಡದ ಎಲ್ಲವನ್ನೂ ಕೂಲಂಕಷವಾಗಿ ತಿಳಿದು ತಮ್ಮ ರಾಜ್ಯವನ್ನು ಇಲ್ಲಿ ಸ್ಥಿರವಾಗಿ ಸ್ಥಾಪಿಸಿದ ಬ್ರಿಟಿಷರಿಗೆ ತೆರಿಗೆಗಳನ್ನು ಹೆಚ್ಚಿಸಲಿಕ್ಕೆ ಪ್ರದರ್ಶನಗಳು ಆಗಬೇಕ್ಕವೇ? [illegible] ಗೊತ್ತಿಲ್ಲದ ಮಲಬಾರು ಮಾಪಿಳೆಗಳು ಒಂದು ವೇಳೆ ಪ್ರದರ್ಶನದ ತೆರಿಗೆಗಳನ್ನು ಹೆಚ್ಚಿಸಲಿಕ್ಕಂತ ಬಾವಿಸಿರಲಿಕ್ಕೂ ಸಾಕು. ಅವರೆ ಸ್ವತಂತ್ರರಂಥಾ ಮಾಪಿಳೆಗಳ ಮಾತಿಗೆ ವಿಶೇಷ ಅರ್ಥವನ್ನು ಕೊಟ್ಟು ಕೋಪಿಸಲಿಕ್ಕೆ ತಕ್ಕದಾದ ಕಾರಣಗಳಿರಲಿಲ್ಲ. ಕೋಪಿಸಿದರೂ [illegible]. [illegible] ಮದ್ರಾಸ್ ಸಂಸ್ಥಾನದ ಪತ್ರಗಳಲ್ಲಿ ರಾಜದ್ರೋಹಗಳನ್ನು [illegible] ಮಾಡುವವಾಗಿ ಕೇಳಿದ್ದ ಕೇವಲ ಅನ್ಯಾಯವೆಂದು [illegible] ಇಂಗ್ಲೀಷ ಪತ್ರಿಕೆಯು [illegible] [illegible] ಸ್ಟೇಟ್ಸ್‌ಮನ್ [illegible] [illegible] ದಂತೆಯೇ [illegible] [illegible] [illegible] ಅಧಾರದಿಂದ ಅವರು [illegible] ಆಧಾರವೋ?

ಕೈಗಾರಿಕೆ [illegible] [illegible] [illegible] ಕೈಗಾರಿಕೆಗಳನ್ನು ಕಲಿಯು[illegible] ಗಳನ್ನು ಪರದೇಶಗಳಿಗೆ ಕಳುಹಿಸುವದು [illegible] ಬೇಕಾಕಷ್ಟು ಮುಂತಾದವುಗಳ ಕಾರ್ಖಾನೆಗಳನ್ನು ಇಲ್ಲಿ ಸ್ಥಾಪಿಸಿದರೆ ಅಷ್ಟು ಒಂದೂ ಬಾಳ ಲಾಭವು. ಯಾಕೆಂದರೆ [illegible] ಇಲ್ಲಿ ಸ್ವದೇಶೀ ಸಾಮಾನುಗಳಿಗೆ [illegible] [illegible] [illegible] ದುಕೊಳ್ಳುವರು [illegible] ಪ್ರಾಂತಗಳಲ್ಲೆಲ್ಲ [illegible] ದೇಶಾಭಿಮಾನ [illegible] ವಹಿಸುವದು ಪತ್ರಿಕ್ಯವಲ್ಲವೆ?

[illegible] ಕೊಲೇಜಿನ ಪ್ರಿನ್ಸಿಪಾಲ್ ಮತ್ತು ಪ್ರೊಫೆಸರ [illegible] [illegible] [illegible] ಕೈಗಾರಿಕೆಗಳನ್ನು ಪಾಠಶಾಲೆಗಳ ಒಂದು ಅಂಗವಾಗಿ ಏರ್ಪಡಿಸಿ [illegible] ತಮ್ಮ ಪುಸ್ತಕ ಪಾಠಗಳನ್ನು ಕಲಿಯುತ್ತಿರುವಾಗ್ಯೆ ಕೈಗಾರಿಕೆ [illegible] ಅಭ್ಯಾಸಿಸಬೇಕು. ಹಿಂದುಸ್ಥಾನದಲ್ಲಿ ಇನ್ನೂ ವಿದ್ಯೆಯು [illegible] ಅಭಿವೃದ್ಧಿಗೆ ಬಾರದಿರುವದೇ ಭರತಖಂಡದ ಬಡತನಕ್ಕೆ ಒಂದು ಕಾರಣ. ಆಯಾ ದೇಶಗಳಿಗೆ ಹೋಗಿ ಕೈಗಾರಿಕೆ ಉದ್ದಿಮೆಗಳನ್ನು ಕಲಿಯುವರೆ ಭಾರತೀಯ ಸಾಮಾಜಿಕ ಪ್ರತಿಬಂಧಕಗಳು ಅನೇಕವಿರುವವು. ಡಾ। ಬೊರ್ಡ್ವಯವರು ಇನ್ನೂ ಅನೇಕ ಹಿಂದು ಸಮಾಜದ ಕೊರತೆಗಳನ್ನು ಸೂಚಿಸಿ, ಈ ಕುಂದುಕಗಳೆಲ್ಲವೂ ಸಮಯಾನುಸಾರ ಕಡಿಮೆಯಾಗಿ ಭರತಖಂಡವು ಕೈಗಾರಿಕೆ ಉದ್ದಿಮೆಗಳಲ್ಲಿ ಹೆಸರು ವಾಸಿಯಾಗಲೆಂದು ಕೋರಿದರು.

ಹೀಗೆ ಕಣ್ಣಾನೂರಿನ ವಸ್ತು ಪ್ರದರ್ಶನವು ಸಾಂಗವಾಗಿ ನೆರವೇರಿತು.

R. M. KAMATH'S

SWADESHI BLUE BLACK INK POWDER.

ಆರ್. ಯಂ. ಕಾಮತ್.

ಇವರ ಸ್ವದೇಶಿ ಕಪ್ಪುಶಾಯಿ ಪುಡಿ, ಕಟ್ಟು 1ಕ್ಕೆ 3ಪೈ.

ಸ್ಥಳಗಳಲ್ಲಿ ಅತ್ಯಂತ ಜನಸಂದಣಿಯಾಗುತ್ತಿತ್ತು. ಈ ಚಕ್ರವರ್ತಿಯ ಬಹುಮಾನವನ್ನು ಹೊಂದಿದಲ್ಲಿ ವಂದೇ ಮಾತರಂ ಎಂದು ಅರ್ಭಟಿಸಿ ಉಚ್ಚರಿಸುತ್ತಿತ್ತು. ಪೋಲೀಸ್ ಸುಪರಿಂಟೆಂಡೆಂಟರು ಈ ಧ್ವನಿಯ ರಭಸವನ್ನು ತಾಳಲಾರದೆ ಕೆಲಬದಿಯ ಜನರನ್ನು ಹೊಡಿಯ ಪ್ರಾರಂಭಿಸಿದರು. ಜನರು ಸುಪರಿಂಟೆಂಡೆಂಟರ ಗುಮಾನವಿಲ್ಲದೆ ಇವರಿಗೆ ಸರಿಯಾಗಿ 'ಧನ್ಯಪೂಜೆಯನ್ನು' ಮಾಡಿದರಂತೆ.

ಒಂದಾಣೆಯ ನಿಕಲ್ ನಾಣ್ಯವು ಎಡ್ವರ್ಡ್ ಮಹಾ ಚಕ್ರವರ್ತಿಯವರ ಸಮ್ಮತಿಯನ್ನು ಹೊಂದಿರುವದು ಅದು ಇನ್ನು ಸದ್ಯದಲ್ಲಿಯೇ ಚಲಾವಣೆಯಾಗುವದು.

—o—

ಬರೋಡಾ ಗೈಕ್ವಾರರು ದಕ್ಷಿಣ ಹಿಂದುಸ್ಥಾನದ ಸಂಚರಣೆಗೆ ಬರುವರೆಂಬ ವರ್ತಮಾನ ಉಂಟು.

ಕಲಿಕತ್ತೆಯಲ್ಲಿ ಚಿಕ್ಕ ಮಗುವಿನ ಕಾಲಡಿಗಳಷ್ಟೇ ಪಾದಗಳುಳ್ಳ ಚೀನಾ ದೇಶದ ಸ್ತ್ರೀಯರಿಬ್ಬರೂ ಕಲಿಕತ್ತಾ ಪಟ್ಟಣದ ರಸ್ತೆಗಳ ಪೂರ್ಣ ಮಾಹಿತಿಯಿಲ್ಲದಿದ್ದರೂ ಚೀನಾದೇಶದ ಬರಗಾಲವನ್ನು ಸೂಚಿಸುವ ಧ್ವಜಗಳನ್ನು ಹಿಡಿದುಕೊಂಡು ತಮ್ಮ ದೇಶದಲ್ಲಿ ಕ್ಷಾಮದಿಂದ ಬಳಲುವ ಸಂಟರಿನ್ನೂರ ಒಗ್ಗೆ ಚಂದಾಹಣವನ್ನು ಕೂಡಿಸುವರು ಚೀನಾದೇಶದಲ್ಲಿ ಬರಗಾಲವು ಇನ್ನೂ ಶಾಂತವಾಗಲಿಲ್ಲ ಕಲಿಕತ್ತೆಯಲ್ಲಿ ಈ ಕ್ಷಾಮ ನಿವಾರಣೆಗೋಸ್ಕರ ಒಂದು ಸಂಘವು ಏರ್ಪಡುವ ಸಂಭವವುಂಟು

ಬೊಂಬಾಯಿ ಪ್ರೆಸಿಡೆನ್ಸಿ ಮೆಜಿಸ್ಟ್ರೇಟರಲ್ಲಿ ಒಂದು ಸ್ವರಾಜ್ಯ ಎಂಬ ಗುಜರಾತಿ ವಾರ ಪತ್ರಿಕಾಕರ್ತರಾದ ಚಂಗಲ್ ಲಾಲ್ ಲಾಲುಬಾಯಿ ಧಾನಾವಾಲಾ ಇವರ ಮೇಲೆ ಒಂದು ಕ್ರಿಮಿನಲ್ ಮೊಕದ್ದಮೆಯನ್ನು ನಡಿಸಿರುತ್ತಾರೆ ಇವರ ಮೇಲ್ಯ ತಪ್ಪು ತಮ್ಮ ಪತ್ರಿಕೆಯಲ್ಲಿ ರಾಜದ್ರೋಹದ ವಿಷಯಗಳನ್ನು ಪ್ರಕಟಿಸಿದ್ದೇ

ಡಾಕ್ಟರ್ ಜೋನ್ಸ್ ಪೊಲ್ಲಿನ್ ಎಂಬವರು ಅರಿಸರ್ ಪಟ್ಟದ ನಿವಾಸಿಕರಿಗೆ ಪ್ಲೇಗಿನ ವಿಷಯ ಈ ರೀತಿ ಸಲಹೆ ಮಾಡಿ ಕೊಟ್ಟಿರುತ್ತಾರೆ "ನಾನು ಬೊಂಬಾಯಿ ಪಟ್ಟದಲ್ಲಿ ಈ ರೋಗದ ಹೆಚ್ಚಿನ ಅನುಭವವನ್ನು ಪಡೆದಿರುವೆನು ಈ ವರೆಗೆ ಗವರ್ನಮೆಂಟಿನವರು ಈ ರೋಗದ ಮದ್ದನ್ನು ಶೋಧಿಸಲಿಕ್ಕೆ ಅನೇಕ ಹಣ ವೆಚ್ಚ ಮಾಡಿದರು ಆದರೂ ಏನೂ ಪ್ರಯೋಜನವಿಲ್ಲದೆ ಹೋಯಿತು ಪ್ಲೇಗ ರೋಗವು ತಗಲದಂತೆ ಎಚ್ಚರದಿಂದಿರುವದೇ ಇದರ ಮುಖ್ಯ ನಿವಾರಣೆ ಇಲಿಗಳಾಗಲಿ ಹೆಗ್ಗಣಗಳಾಗಲಿ ಮನೆಗಳಲ್ಲಿ ಸತ್ತು ಬೀಳುತ್ತಿರುವಂತೆ ಕಂಡು ಬಂದ ಕೂಡಲೇ ಒಮ್ಮೆ ಮಾತ್ರಕ್ಕೂ ಆಸ್ಪದವಿಲ್ಲದೆ ಮನೆ ಬಿಟ್ಟು ಹಳ್ಳೀ ಪಳ್ಳಿಗಳಿಗೆ ಹೋಗಿ ಅಲ್ಲಿ ವಾಸಿಸ ಬೇಕು ಒಳ್ಳೆ ಗಾಳಿ ಸೂರ್ಯನ ಪ್ರಕಾಶವಿರುವ ಮನೆಗಳಲ್ಲಿ ಈ ರೋಗದ ಹಾವಳಿಯು ಬಹಳ ಕಡಿಮೆ". ಪೊಲ್ಲಿನ್ ಡಾಕ್ಟರರ ಈ ಅಭಿಪ್ರಾಯವು ಯುಕ್ತವಾದದ್ದೇ.

ನಮ್ಮ ಸಂಸ್ಥಾನದಂತೆಯೇ ಬಂಗ್ಗಾಳದಲ್ಲಿ ದವಸ ಧಾನ್ಯಗಳ ಬೆಲೆಯೂ ಹೆಚ್ಚುತ್ತಾ ಇರುವದು. ನಮ್ಮಲ್ಲಿ ಹೆಚ್ಚಾಗಿ ಅಕ್ಕಿ ಕ್ರಯವು ಬಂಗಾಳ ಅಕ್ಕಿಯ ಮೇಲೆ ಆಧರಿಸಿದೆ ಎಂತ ಹೇಳುವರು. ಬಂಗಾಳದಲ್ಲಿ ಬೆಲೆಯು ಅಷ್ಟೊಂದು ನಿಕೃಷ್ಟ ಸ್ಥಿತಿಯಲ್ಲಿಲ್ಲ. ಆದರೂ ಅಕ್ಕಿ ಕ್ರಯವು ಬಹಳ ವಿಪರೀತವಾಗಿರುವದು. ಇದಕ್ಕೆ ಬೇರೆ ಕಾರಣಗಳನ್ನು ಕೊಡುತ್ತಾರೆ. ಅಗಸೆನಾರಿನ ವ್ಯವಸಾಯದಿಂದ ರೈತರಿಗೆ ಬಹಳ ಹಣ ಸಿಕ್ಕುವದರಿಂದ ಅಕ್ಕಿ ವ್ಯವಸಾಯವು ಸ್ವಲ್ಪ ಮಟ್ಟಿಗೆ ಕಡಿಮೆಯಾಗಿ ಅಕ್ಕಿ ಬೆಲೆಯು ಏರಿರಬಹುದೆಂದೂ, ಅಗಸೆ ಪೈರಿನಿಂದ ರೈತರ ಕೈಯಲ್ಲಿ ರೊಕ್ಕ ಒದಗುವದರಿಂದ ರೈತರು ಅಕ್ಕಿಯನ್ನು ಕಡಿಮೆ ಕ್ರಯಕ್ಕೆ ಮಾರದೆ ಅದಷ್ಟು ಕ್ರಯ ಹೆಚ್ಚಿಸಿ ಮಾರಾಟ ಮಾಡಲಿಕ್ಕೆ ಇಂಬು ಇರುವದೆಂದೂ ವಿಧವಿಧವಾದ ಕಾರಣಗಳನ್ನು ಹಲವು ಪತ್ರಿಕಾಕರ್ತರು ಕೊಟ್ಟಿರುವರು.

ದಕ್ಷಿಣ ಹಿಂದುಸ್ಥಾನ.

—o—

ಬಿ. ಸಿ. ಪಾಲರು ಗೋದಾವರಿ ಜಿಲ್ಲೆಗೆ ಬಂದಿದ್ದರು. ರಾಜಮಹೇಂದ್ರಿಯಲ್ಲಿ ರಾ। ಕೆ ನಾಗೇಶ್ವರರಾವ್ ಇವರ ಹೊಸ ಸ್ವದೇಶಿ ಸಾಮಾನುಗಳ ಭಂಡಸಾಲೆಗೆ ಪಾಲರವರು ಮುಹೂರ್ತ ಮಾಡಿದರು. ನಾಗೇಶ್ವರರಾಯರು ಈ ಸಂದರ್ಭದಲ್ಲಿ ಪಾಲರಿಗೆ ಒಂದು ಜೋಡಿ ಸ್ವದೇಶಿ ದೋತ್ರಿಗಳನ್ನೂ, ಉತ್ತರೀಯವನ್ನೂ ಬಹುಮಾನಾರ್ಥವಾಗಿ ಉಡುಗಿರೆ ಮಾಡಿದರು ಈ ದಿವಸವು ಶ್ರೀರಾಮನವಮಿ ದಿವಸವಾದ್ದರಿಂದ ಊರೆಲ್ಲಾ ಹರಿಕೀರ್ತನೆಗಳಿಗೆ ಪಾಲರಿಗೆ ಆಮಂತ್ರಣವಿತ್ತು ಪಾಲರು ರಾಜಮಹೇಂದ್ರಿಗೆ ಕೊಟ್ಟ ಭೇಟಿಯ ಸ್ಮರಣಾರ್ಥವಾಗಿ ರಾಜಮಹೇಂದ್ರಿಯ ಕೆಲವು ಜನ ಶ್ರೀಮಂತ ಸ್ತ್ರೀಯರು, ಅಲ್ಲಿ ಸ್ಥಾಪಿಸಲಿಕ್ಕಿರುವ ನೇಷನಲ್ ಹೈಸ್ಕೂಲಿಗೆ ೧೦೦೦೦ ರೂಪಾಯಿ ಚಂದಾ ಕೊಟ್ಟಿರುತ್ತಾರೆ ಈ ಹೈಸ್ಕೂಲು ಬಂಗಾಳ ನೆಷನಲ್ ಕಾಲೇಜಿಗೆ ಅನುಸರಿಸಿರುವದು

ಪಾಲರು ರಾಜಮಹೇಂದ್ರಿಯಲ್ಲಿ ಬಹಿಷ್ಕಾರ, ರಾಷ್ಟ್ರೀಯ ಶಿಕ್ಷಣ, ಸ್ವದೇಶಿ ಮೊದಲಾದವುಗಳ ಕುರಿತು ಭಾಷಣಗಳನ್ನು ಕೊಟ್ಟರು ರಾಜಮಹೇಂದ್ರಿ ಕೋಲೇಜಿನ ವಿದ್ಯಾರ್ಥಿಗಳೆಲ್ಲರೂ ಪಾಲರ ಭಾಷಣಗಳಿಂದ ಪ್ರೋತ್ಸಾಹಿತರಾಗಿ 'ವಂದೇ ಮಾತರಂ' ಬಿರುದುಗಳನ್ನು ಧರಿಸಿ ಕಾಲೇಜಿಗೆ ಹೋಗುವರಂತೆ ಇದನ್ನು ನೋಡಿ ಅಲ್ಲಿಯ ಕೋಲೇಜಿನ ಪ್ರಿನ್ಸಿಪಾಲರಾದ ಮಾರ್ಕ ಹಂಟರ್ ದೊರೆಗಳು ಹೆಚ್ಚು ಕಡಿಮೆ ೨೦೦ ಜನ ವಿದ್ಯಾರ್ಥಿಗಳನ್ನು ಶಾಲೆಯಿಂದ ತೆಗೆದುಹಾಕಿದ್ದಾರೆಂಬ ವರ್ತಮಾನ ಉಂಟು.

ಪಾಲರ ರಾಜಮಹೇಂದ್ರಿಯಲ್ಲಿ ಕೊಟ್ಟ ಕಡೇ ಭಾಷಣದ ಫಲವು ವಾಚಕರಲ್ಲಿ ವಿಸ್ಮಯಾನಂದಗಳನ್ನುಂಟು ಮಾಡುವದು. ಈ ಭಾಷಣದನಂತರ ರಾಜಮಹೇಂದ್ರಿಯಲ್ಲಿ ನೇಷನಲ್ ಶಾಲೆಯನ್ನು ಸ್ಥಾಪಿಸಲಿಕ್ಕೆ ಅನೇಕರು ದೊಡ್ಡ ದೊಡ್ಡ ಚಂದಾ ಮೊಬಲಗುಗಳನ್ನು ಕೊಟ್ಟರು ೫೦ ಜನ ಶಾಲಾ ಹುಡುಗರು ೭೦೦ ರೂ ಕೊಟ್ಟಿರುತ್ತಾರೆ ಚಿಕ್ಕ ಪ್ರಾಯದ ಒಬ್ಬ ಹುಡುಗನು ಒಂದು ಚಿನ್ನದ ಉಂಗುರವನ್ನೂ ೧೦ ರೂಪಾಯಿಗಳನ್ನೂ ಕೊಟ್ಟಿರುವನು.

ರಾಜಮಹೇಂದ್ರಿಯನ್ನು ಬಿಟ್ಟು ಪಾಲರು ಬೆಜ್ವಾಡಕ್ಕೆ ಬಂದಿರುವರು. ಅಲ್ಲಿ ಇವರಿಗೆ ಕೊಟ್ಟ ಸ್ವಾಗತವು ಪಾಲರ ಮೇಲೆ ಜನರಿಗಿರುವ ಅಭಿಮಾನವನ್ನು ತೋರಿಸುವದು. ರಸ್ತೆಗಳ ಎರಡು ಕಡೆಗಳಲ್ಲಿಯೂ "ಸ್ವದೇಶಿಗೆ ಜಯವಾಗಲಿ" 'ಸ್ವರಾಜ್ಯಕ್ಕೆ ಜಯವಾಗಲೆಂಬ' ಬಿರುದುಗಳ ತೋರಣಗಳನ್ನು ಕಟ್ಟಿದ್ದರು. ಜನರು ಉಲ್ಲಾಸದಿಂದ ಅಲ್ಲಲ್ಲಿ ಕುಣಿದಾಡುತ್ತಿದ್ದರು. ಪಾಲರು ಈ ದಿವಸ ಸ್ವಾತಂತ್ರ್ಯದ ವಿಷಯ ಭಾಷಣವನ್ನು ಕೊಟ್ಟರು.

ಮಂಗಳೂರು ಪೆಸ್ಸೆಂಜರ್ ಟ್ರೈನಿನಲ್ಲಿ ವನಿಯಂಬಾಡಿಗೆ ಒಬ್ಬ ಮುಸಲ್ಮಾನಿಯ ಸ್ತ್ರೀಯಳು ಒಂದು ಮಗು ಸಮೇತ ಪ್ರಯಾಣಮಾಡುತ್ತಿದ್ದಳು. ವನಿಯಂಬಾಡಿಯನ್ನು ಸಮೀಪಿಸುವಾಗ್ಯೆ ಮಗು ಟ್ರೈನಿನ ಕಿಟಿಕಿಯಿಂದ ಕೆಳಕ್ಕೆ ಬಿತ್ತು. ತಾಯಿ ಎಷ್ಟು ಬೊಬ್ಬಿಟ್ಟರೂ ಟ್ರೈನ್ ನಿಲ್ಲಲಿಲ್ಲ. ವನಿಯಂಬಾಡಿಗೆ ಬಂದು ತಲ್ಪಿದೊಡನೆಯೇ ಈ ಹೆಂಗಸಳ ಗೋಳಾಟವನ್ನು ಕೇಳಿ ರೈಲ್ವೆಯವರು ಒಂದು ಇಂಜಿನ್ ಸಮೇತ ಮಗುವನ್ನು ಹಿಂತಿರುಗಿ ಹುಡುಕಿ ಬಂದರು. ಮೂರು ಮೈಲುಗಳು ಆಗುವಷ್ಟರಲ್ಲಿಯೇ ಮಗು ಸಿಕ್ಕಿತು. ಮಗುವು ಸ್ಮೃತಿಯಿಲ್ಲದೆ ಬಿದ್ದಿತ್ತು ವನಿಯಂಬಾಡಿಗೆ ತಕ್ಕೊಂಡು ಹೋಗಿ ನೋಡಲು ಅದರ ತಲೆಬುರುಡೆಯು ಒಡೆದು ಹೋಗಿತ್ತು.

ಬಳ್ಳಾರಿಯ ಹಗ್ಗನಹಳ್ಳಿ ಎಂಬಲ್ಲಿ ಒಂದು 'ಸ್ವದೇಶೀ' ಸಭೆ ನೆರದಿತ್ತು ಸಭೆಯಲ್ಲಿ ನೆರದ ವಿದ್ಯಾರ್ಥಿಗಳೂ, ಬೇರೆ ಮಾನ್ಯ ಗ್ರಹಸ್ಥರೂ ಸ್ವದೇಶೀ ವಿಷಯ ಭಾಷಣಗಳನ್ನು ಮಾಡಿದರು ಈ ಸಭೆಗೆ ಬಂದಿದ್ದ ರಾ। ಗುಂಡುರಾವ್ ಎಂಬವರು ಸುಲ್ತಾನಪುರ ಎಂಬಲ್ಲಿಗೆ ಹೋಗಿ ಸಕ್ಕರೆ ಕಾರಖಾನೆಗಳಲ್ಲಿ ತಾವು ಕಲಿತ ಅನುಭವವೆಲ್ಲವನ್ನೂ ಸಭಿಕರಿಗೆ ಹೇಳಿ ಬೇರೆ ಬೇರೆ ನಮೂನೆಯ ಸ್ವದೇಶಿ ಸಕ್ಕರೆಗಳನ್ನು ಜನರಿಗೆ ತೋರಿಸಿದರು ಅಲ್ಲಿ ನೆರೆದವರಲ್ಲಿ ಕೆಲವರಿಗೆ ಹಗ್ಗನಹಳ್ಳಿಯಲ್ಲಿ ಒಂದು ಸಕ್ಕರೆ ಕಾರಖಾನೆಯನ್ನು ಗುಂಡುರಾಯರ ಮೇಲ್ವಿಚಾರಣೆಯಲ್ಲಿಡುವ ಆಲೋಚನೆಯುಂಟು.

ಹೈದರಾಬಾದಿನ ನೈಜಾಮರು ಇತ್ತಲಾಗೆ ಕೂನೂರಿನಲ್ಲಿ ಸ್ಥಾಪಿಸಲ್ಪಟ್ಟ ಪೆಸ್ಟರ್ ಇನ್‌ಸ್ಟಿಟ್ಯೂಟ್ ಎಂಬ ಹುಚ್ಚುನಾಯಿ ಕಚ್ಚಿದವುಗಳ ಕಡಿತಗಳನ್ನು ಚಿಕಿತ್ಸೆ ಮಾಡುವ ಆಸ್ಪತ್ರೆಗೆ ವರುಷ ಒಂದಕ್ಕೆ ಸಾವಿರ ರೂಪಾಯಿಗಳ ಮೇರೆಗೆ ಹತ್ತುವರುಷಗಳ ವರೆಗೆ ಸಹಾಯದ್ರವ್ಯವನ್ನು ಕೊಡುವರು ಇವರ ಪ್ರಜೆಗಳೂ ಇದೇ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಹೊಂದುವರು

ಸಿ. ಶಂಕರನ್ ನಾಯರರನ್ನು ಮದ್ರಾಸು ಹೈಕೋರ್ಟಿನಲ್ಲಿ ಎಡ್ವಕೇಟ್ ಜನರಲರಾಗಿ ನೇಮಿಸಿರುತ್ತಾರೆ.

ಮಾಯಾವರಂ ಎಂಬಲ್ಲಿ ಹತ್ತು ವರುಷದ ಒಂದು ಹುಡುಗಿಯು ಬೆಳಗ್ಯೆ 11 ಘಂಟೆ ಸಮಯಕ್ಕೆ ಮನೆಯಿಂದ ಹಿಂದಣ ಅಂಗಳಕ್ಕೆ ಬಂದಳು. ಅಲ್ಲಿ ನಾಲ್ಕು ಜನ ಹೊಲೆಯರು ಅಡಗಿ ಕುಳಿತುಕೊಂಡಿದ್ದರು. ಹುಡುಗಿಯು ಈ ಅಂಗಣಕ್ಕೆ ಬಂದೊಡನೆಯೇ ಹೊಲೆಯರು ಈ ಹುಡುಗಿಗೆ ತಮ್ಮ ಕೈಯಲ್ಲಿರುವ ವಸ್ತ್ರದಿಂದ ಮುಸುಕಿ ಹಾಕಿ ಕೂಗದಂತೆ ಅವಳ ಬಾಯನ್ನು ಗಟ್ಟಿಯಾಗಿ ಹಿಡಿದು

[illegible] ಅವನನ್ನು ತಮ್ಮ ಗುಡಿಸಲಿಗೆ [illegible] ಯ್ದರು. ಗುಡಿಸಲನ್ನು ತಲ್ಪುತ್ತಲೆ ಅವಳ ಮೇಲೆ ಹಾಕಿದ್ದ ವಸ್ತ್ರವನ್ನು ತೆಗೆದು ಅವಳ ಮೈಮೇಲಿರುವ ಆಭರಣಗಳೆಲ್ಲವನ್ನೂ ಕಿತ್ತು ತೆಗೆದರು. ಹುಡುಗಿಯು ಇನ್ನಾದರೂ ತನ್ನನ್ನು ಹೊರಗೆ ಹೋಗಲಿಕ್ಕೆ ಬಿಡುವರೆಂದು ಯೋಚಿಸಿ ಎದ್ದು ನಿಲ್ಲಲು ಹೊಲೆಯರು ಅವಳನ್ನು ಹೊಡೆದು ಮಲಗಿಸಿದರು. ರಾತ್ರಿಯಾಗುತ್ತಲೇ ಹುಡುಗಿಯನ್ನು ಕೊಂದು ಬಿಸಾಡುವ ಆಲೋಚನೆಯು ಆ ಹೊಲೆಯರಿಗಿತ್ತು. ಹುಡುಗಿಯು ಸಾಯಂಕಾಲವಾಗುತ್ತಲೇ ಕೂಗ ತೊಡಗಿದಳು. ಗುಡಿಸಲಿನ ಹತ್ತಿರದಿಂದ ಹೋಗುವ ಒಬ್ಬ ಕೂಲಿಯವನು ಈ ಆರ್ತ ಧ್ವನಿಯನ್ನು ಕೇಳಿ ಅಜುಬಾಜಿನಲ್ಲಿರುವವರನ್ನು ತನ್ನ ಸಹಾಯಕ್ಕೆ ಕರೆದು ಆ ಹುಡುಗಿಯ ಪ್ರಾಣವನ್ನು ರಕ್ಷಿಸಿ ಆಕೆಳನ್ನು ಅವಳ ಮನೆಗೆ ತಂದು ಬಿಟ್ಟನು. ಈ ನಾಲ್ಕು ಜನ ಹೊಲೆಯರನ್ನು ಕೈದು ಮಾಡಿರುತ್ತಾರೆ.

ದಕ್ಷಿಣ ಕನ್ನಡ.

ಕಳೆದ ವಾರ ಮಂಗಳೂರ ಪೇಟೆಯಲ್ಲಿ ೩ ಪ್ಲೇಗು ಮರಣಗಳಾದವು. ಪ್ಲೇಗ್‌ರೋಗದ ಉಪದ್ರವು ಬಹಳಮಟ್ಟಿಗೆ ಶಾಂತವಾಗಿರುತ್ತದೆ. ಆದರೆ ಇಲಿಗಳು ಸಾಯುವದು ಇನ್ನೂ ನಿಲ್ಲಲಿಲ್ಲ.

ಮಂಗಳೂರು ಹಜೂರು ಕಚೇರಿಯಲ್ಲಿ ಕಳೆದ ತಿಂಗಳ ತಾರೀಕು 29ನೇ ಸೋಮವಾರ ಪ್ಲೇಗ್ ವಿಜಿಲೆನ್ಸ್ ಕಮಿಟಿಯವರ ಸಭೆ ಜರಗಿತ್ತು. ಸಭಾಧ್ಯಕ್ಷರಾದ ಖಾನ್ ಸಾಹೇಬ ಮಹಮ್ಮದ್ ಅಲೀಯುದ್ದಿನ್ ಸಾಹೇಬರು [illegible] ಮೆಂಬರರೆಲ್ಲರಿಗೂ ಹಿಂದಿನ 15 ದಿವಸಗಳಲ್ಲಿ ಸಂಭವಿಸಿದ ಪ್ಲೇಗ್ ಮರಣಗಳನ್ನೂ ಆಗ್ಯಾಗ್ಯ ಪ್ಲೇಗ್ [illegible] ಈ ರೋಗನಿವಾರಣೆ ಬಗ್ಯೆ [illegible] ತಿಳಿಸಿದರು. [illegible] ತಿಂಗಳ ಸಾಯ [illegible] ನವರೆಲ್ಲರೂ ಮುಂ [illegible] ಕಂಕ್ರದರೊರೆಗಳೂ [illegible] 1 [illegible]

[illegible]

[illegible] ಆಫೀಸಿನಲ್ಲಿ ಟ್ರಾನ್ಸ್‌ಲೇಟರ್ [illegible] ಎಸ್ ಎಸ್ ಸಾಲ್ವಾನರ [illegible] ಡಿಸ್ಟ್ರಿಕ್ಟ್‌ರಾಗಿ [illegible] [illegible] ತಿಂಮಾ ಸಿರ [illegible]

[illegible] ಪಾಸಾದ [illegible] ಕಲಿಯುತ್ತಿದ್ದ ವಿದ್ಯಾರ್ಥಿ [illegible] ಕೇಶವರಾಯರು ತಮ್ಮ [illegible] ಎಮ್ ಎಸ್ ಪರೀಕ್ಷೆಯಲ್ಲಿಯೂ [illegible] ಸಂಜೀವಯ್ಯಗಳೂ, ಮ. ಅಣ್ಣಪ್ಪ ಕಮ್ತಿಯವರೂ ಎಮ್ ಸಿ ಎಸ್ ಪರೀಕ್ಷೆಯಲ್ಲಿಯೂ ಪಾಸಾಗಿರುತ್ತಾರೆಂಬ ವರ್ತಮಾನವನ್ನು ಕೇಳಿ ತುಂಬಾ ಸಂತೋಷ ಪಡುತ್ತೇನೆ. ಈ ವರ್ತಮಾನವನ್ನು ತಮ್ಮ ಅಮೂಲ್ಯ ಪತ್ರಿಕೆಯಲ್ಲಿ ಪ್ರಕಟಿಸುವಿರೆಂಬುದಾಗಿ ಕೋರುತ್ತೇನೆ.

S L D

ಅರ್ಬತ್‌ನೋಟ್ ಕಂಪೆನಿಯವರು ದಿವಾಳಿಯಾಗುವ ಒಂದು ದಿವಸಕ್ಕೆ [illegible] ನಾಂಡಿಸ್ ಎಂಬವರೊಬ್ಬರು ಆ ಕಂಪೆನಿಯಲ್ಲಿಟ್ಟ ತನ್ನ ಹಣ [illegible] ಕಂಪೆನಿಯವರಿಂದ ಮದ್ರಾಸ್ ಬೇಂಕಿನವರ ಮೇಲೆ ಒಂದು ಚೆಕ್ ಪಡಕೊಂಡಿದ್ದರು. ಇವರು ಆ ಚೆಕ್ಕನ್ನು ವಟಾಯಿಸುವರೊಳಗೆ ಆ ದಿವಸ ಬೇಂಕು ಕೈದಾಯಿತು. ಮರುದಿವಸ ಅರ್ಬತ್‌ನೋಟರ ಕಂಪೆನಿಯು ದಿವಾಳಿಯಾದ್ದರಿಂದ ಫರ್ನಾಂಡೀಸರಿಗೆ ಹಣ ಬೇಂಕಿನವರು ಕೊಡಲಿಲ್ಲ. ತನ್ನ ಹಣವು ತನಗೆ ನ್ಯಾಯಪ್ರಕಾರ ಸಿಕ್ಕಬೇಕೆಂದು ಹೈಕೋರ್ಟಿನಲ್ಲಿ ದಾವೆದಾಖಲು ಮಾಡಿದರು. ಆ ಕಂಪೆನಿಯರ ಮೇಲೆ ಸಾಧಾರಣ ಇದೇ ಸ್ವಭಾವದ ಕೇಸಿ ಎಲ್ಲಾ ವ್ಯಾಜ್ಯಗಳು ವಾದಿಗಳಿಗೆ ಅನುಕೂಲವಾದರೂ, ಫರ್ನಾಂಡೀಸರು ಈ ದಾವೆಯಲ್ಲಿ ಜಯವನ್ನು ಹೊಂದಿದರು. ಥಾವೆಯನ್ನು ನಮ್ಮ ಜಿಲ್ಲೆಯವರಾದ ಮ। ರಾ। ರಾ। ಕೆ. ರಘುನಾಥ ಶ್ಯಾನಭಾಗ ಎಡ್ವಕೇಟ್, ಇವರು ತಮ್ಮ ಬುದ್ಧಿ ಚಾತುರ್ಯದಿಂದ ಗೆದ್ದು ಫರ್ನಾಂಡೀಸರಿಗೆ ತಮ್ಮ ಹಣವನ್ನು ಉಳಿಸಿ ಕೊಟ್ಟರು.

ಮುಲ್ಕಿ. ಅಯ್ಯಾ ಪತ್ರಿಕಾಕರ್ತರೇ,

ವಿದ್ಯಾ ಇಲಾಖೆಯ ಹೊಸ ನಿಬಂಧನೆಗಳು ಮಂಜೂರು ಮಾಡಲ್ಪಟ್ಟಂದಿನಿಂದ ನಮ್ಮಲ್ಲಿಯ ಉಪಾಧ್ಯಾಯ ವರ್ಗಕ್ಕೆ ರಾತ್ರಿಯಲ್ಲಿ ನಿದ್ರೆ ಬೀಳುವದು ಕಡಿಮೆ. ನಮ್ಮೂರಲ್ಲಿ ಬೋರ್ಡಿನವರ ಪ್ರೈಮರಿ ಶಾಲೆಯೂ ಲೋವರ್ ಸೆಕಂಡರಿ ದರ್ಜೆಗಳು ಮಾತ್ರವಿರುವ ಮಿಶನರಿಗಳ ಶಾಲೆಯೂ ಇರುವವು. ಮಿಶನರಿಗಳು ಒಂದು ಸಲ ಈ ಲೋವರಿಸೆಕಂಡರಿ ಶಾಲೆಯನ್ನು ತೆಗೆಯುತ್ತಾರೆಂಬ ವರ್ತಮಾನ ಉಂಟಾಯಿತು. ಕೂಡಲೇ ಮಿಶನರಿಗಳ ಶಾಲೆಯ ಉಪಾಧ್ಯಾಯರಲ್ಲಿ ಕೆಲವರ ಮುಲ್ಕಿಯ ಹಲವು ಜನ ಗೃಹಸ್ಥರನ್ನು ಪ್ರೇರೇಪಿಸಿ ಮಿಶನಿನವರಿಗೆ ಶಾಲೆಯನ್ನು ತೆಗೆಯಬಾರದಾಗಿ ಅರ್ಜಿ ಮಾಡಿಸಿದರಂತೆ. ಈ ಅರ್ಜಿ ಪ್ರಕಾರ ಮುಲ್ಕಿಯಲ್ಲಿ ಮಿಶನಿನವರು ಶಾಲೆಯನ್ನು ಇಟ್ಟಿರುವರು. ಈ ಲೋವರ್ ಸೆಕಂಡರಿ ಇಲಾಖೆಗೆ ಬೇಕಾದ ಪ್ರೈಮರಿ ಇಲಾಖೆಯನ್ನೂ ಇದಕ್ಕೆ ಹೊಸತಾಗಿಯೂ ಕೂಡಿಸಿರುವರು.

ಬೋರ್ಡ್ ಶಾಲೆಯನ್ನು ಮಿಶನರಿಗಳಿಗೆ ಬಿಟ್ಟುಕೊಡಬೇಕಾಗಿ ಊರಿನವರು ಬೋರ್ಡಿಗೆ ಮನವಿ ಮಾಡಿಕೊಂಡಿದ್ದಾರೆ. ಇನ್ನೊಂದು ವರ್ತಮಾನ. ಈ ಗೃಹಸ್ಥರು ಯಾರೋ ಪ್ರೈಮರಿ ವಿದ್ಯಾಭ್ಯಾಸದ ನಂತರ ಕಲಿಸುವ ಹುಮ್ಮಸಿನವರಾಗಿ ತಮ್ಮ ಮಕ್ಕಳನ್ನು ಪರಊರುಗಳಿಗೆ ಕಳುಹಿಸಬೇಕಾದ ಕಾರಣದಿಂದ ಒಂದು ಲೋವರ್ ಸೆಕಂಡರಿ ಶಾಲೆಯ ಆಗತ್ಯವಿರುವದು ನಿಜವೇ. ಆದರೆ ಬೋರ್ಡ್ ಪ್ರೈಮರಿ ಶಾಲೆಯನ್ನು ತೆಗೆದು ಇದನ್ನು ಇಡುವದು ಅಗತ್ಯವಲ್ಲ. ಬೋರ್ಡ್ ಶಾಲೆಗಳಲ್ಲಿ ಮಕ್ಕಳ ಕೊಡುವ ಸಂಬಳವು ಮಿಶನಿವರ ಶಾಲೆಗಿಂತಲೂ ಕಡಿಮೆಯಾಗಿರುವದರಿಂದ ಅನೇಕ ಜನ ಬಡವರ ಈ ಶಾಲೆಯಲ್ಲಿ ಕಲಿಯಬಹುದು. ಇನ್ನು ಸದ್ಯದಲ್ಲಿ ಪ್ರೈಮರಿ ಶಾಲೆಗಳ ಸಂಬಳವು ಪೂರ್ಣ ಮಾಫಿಯಾಗಿ ಶಾಲೆಗೆ ಬರುವ ಬಡಹುಡುಗರೆಲ್ಲರೂ ಪ್ರೈಮರಿ ವಿದ್ಯಾಭ್ಯಾಸಹೊಂದುವ ಸಂಭವವುಂಟು. ಹೀಗಿರುತ್ತಾ ಬೋರ್ಡಿನವರ ಶಾಲೆಯನ್ನು ತೆಗಿಸಲಾಲೋಚಿಸಿದ ಪುಣ್ಯಪುರುಷರ ಯಾರೊ ಇವರ ಮಕ್ಕಳು ಸದ್ಯ ಲೋವರ್ ಸೆಕೆಂಡರಿ ದರ್ಜೆಗಳಲ್ಲಿ ಕಲಿಯುತ್ತಾರೆಂತ ಕಾಣುತ್ತದೆ, ಆದಕಾರಣ ಇವರಿಗೆ ಮಿಶನ್ ಶಾಲೆಗಳ ಮೇಲೆ ಇಷ್ಟು ಪ್ರೀತಿ. ಪ್ರೈಮರಿ ಶಾಲೆಯೂ ಮಿಶನ್ ಲೋವರ್ ಸೆಕೆಂಡರಿ ಶಾಲೆಯೂ ಮುಲ್ಕಿಗೆ ಆಗತ್ಯವೆಂತ ನನ್ನ ಅಭಿಪ್ರಾಯ. ಇದನ್ನು ತಾವು ಪ್ರೀತಿಯಿಟ್ಟು ತಮ್ಮ ಹೆಸರುವಾಸಿಯಾದ ಪತ್ರಿಕೆಯಲ್ಲಿ ಪ್ರಕಟಿಸುವಿರಾಗಿ ನಂಬಿದ್ದೇನೆ.

M N R

ವಿವಿಧ ವಿಷಯ.

ಕಿಂಡರ್ ಗಾರ್ಟನ್ ಕೃಷಿ.

ಮಕ್ಕಳಿಗೆ ಶಾಲೆಯನ್ನು ಮನೆಯಂತೆಯೂ ವಿದ್ಯೆಯನ್ನು ವಿನೋದದಂತೆಯೂ ಸಂತೋಷಕರವಾಗಿ ತೋ[illegible] [illegible] ಮಕ್ಕಳ ಮನಸ್ಸು ಸಹಜವಾಗಿ [illegible]ಗಳಲ್ಲಿಯೂ [illegible]ಲ್ಲಿಯೂ ಆಟಗಳಲ್ಲಿಯೂ ಹರಿಯುತ್ತದೆಂದು ತಿಳಿದು ತನ್ಮೂಲಕ ಶಿಕ್ಷಣವಾಗುವ ರೀತಿಗಳನ್ನು ಫ್ರೋಬೆಲ್‌ರು ವಿರಚಿಸಿದರು. ಅಂದರೆ ಚಿಕ್ಕವರು ಪ್ರೀತಿಯ ಆವರಣದಲ್ಲಿ ಬೆಳೆಯಬೇಕೆಂದೂ ಅವರಿಗೆ ಪ್ರೀತಿ ಆನಂದಗಳನ್ನು ತೋರಿ ಪಾಠಗಳಲ್ಲಿ ರುಚಿ ಹುಟ್ಟಿಸಬೇಕೆಂದೂ ಇದಕ್ಕೋಸ್ಕರ ಕನ್ಯೆಯರನ್ನು ಚಿಕ್ಕ ದರ್ಜೆಗಳ ಉಪಾಧ್ಯಾಯರನ್ನಾಗಿ ಮಾಡಬೇಕೆಂದೂ ಆ ಜರ್ಮನ್ ಗುರುವು ಬೋಧಿಸಿದನು. ಕಿಂಡರ್‌ಗಾರ್ಟನ್ ಪದ್ಧತಿಯು ಸಫಲವಾಗಲಿಕ್ಕೆ ಉಪಾಧ್ಯಾಯರು ಈ ಭಾವದಲ್ಲಿ ಅದನ್ನು ಕೈಕೊಳ್ಳತಕ್ಕದ್ದು. ಆಗ ಮಕ್ಕಳ ಬಾಲ್ಯವು ಮಾಸ್ತರನ ಹೆದರಿಕೆಯಲ್ಲಿಯೂ ಶಿಕ್ಷೆಯ ಕಣ್ಣೀರುಗಳಲ್ಲಿಯೂ ಸಂದುಹೋಗದೆ ಸ್ವಾಭಾವಿಕ ಸಂತುಷ್ಟಿ ಹುಟ್ಟಿ ಅವರ ಬೆಳವಣಿಗೆಯು ತಕ್ಕ ರೀತಿಯಲ್ಲಿ ಸಾಗುವದು.

ಮಕ್ಕಳಲ್ಲಿ ಧೀಶಕ್ತಿಯು ಬೆಳೆಯುವ ಮೊದಲು ಕಲ್ಪನಾಶಕ್ತಿಯು ತಲೆದೋರುವದರಿಂದ ಅವರಿಗೆ ನೀತಿಮಾರ್ಗವನ್ನೂ ವಸ್ತುಜ್ಞಾನವನ್ನೂ ಕಥಾರೂಪವಾಗಿಯೂ ಗೀತರೂಪವಾಗಿಯೂ ಹೇಳಿಕೊಟ್ಟರೆ ಬೇಗನೆ ಮನಸ್ಸಿಗೆ ಹತ್ತುವದು. ಮತ್ತು ಚಿಕ್ಕವರ ಎಳೇ ಬುದ್ಧಿಯಲ್ಲಿ ಊರಿದ ಚಿತ್ರಗಳ ಕಡೆ ವರೆಗೆ ನಿಲ್ಲುವವು. ಸತ್ಯಮಾರ್ಗದ ಮಹಿಮೆ [illegible] ಉಪನ್ಯಾಸ ಹೇಳಿದರೆ ಬಾಲರು ಗ್ರಹಿಸ್ಯಾರೇ? ಆದರೆ [illegible] ಹುಡುಗ ಮತ್ತು ಹ[illegible] ಕಥೆಯು ಮಕ್ಕಳಿಗೆ ಕೇಳಲಿಕ್ಕೆ ರಮ್ಯವಾಗಿ ತೋರುವದಲ್ಲದೆ [illegible] ತತ್ವ ತನ್ನಷ್ಟಕ್ಕೆ ಮಕ್ಕಳ ಮನಸ್ಸಿಗೆ ಹೊಳೆಯುವದು.

ಈ ಸಿದ್ಧಾಂತಕ್ಕನುಸಾರವಾಗಿ ಕಿಂಡರ್‌ಗಾರ್ಟನ್ ಕೈಪಿಡಿಗಳು ಬರೆದಿವೆ. ಕನ್ನಡ ಭಾಷೆಯಲ್ಲಿ ಈ ಪದ್ಧತಿಯು ಇನ್ನೂ ಪ್ರಾರಂಭಕ್ಕೆ ಬಾರದ್ದರಿಂದ ಮ। ರಾ। ರಾ। ಮಂಗೇಶರಾಯರು ಮೊದಲು ಮಾಡಿದ ಈ ಪ್ರಯತ್ನಗಳು ಶ್ಲಾಘನೀಯವೇ. ಕಥೆಗಳನ್ನೂ ಗೀತಗಳನ್ನೂ ಸುಲಭ [illegible] ಮಕ್ಕಳ ಬುದ್ಧಿಶಕ್ತಿಗ ತಕ್ಕಂತೆ ಬರೆದಿರುವರು. [illegible] ಸಹ ಮಕ್ಕಳಿಗೆ ತಕ್ಕವುಗಳೇ. ಬೋಧಪರವಾದ [illegible] ಕಥೆಗಳು ಎರಡು ಭಾಗಗಳಲ್ಲಿಯೂ ಇರುವವು. ಮೊದಲನೇ ಭಾಗದಲ್ಲಿನ 6ನೇ 8ನೇ 10ನೇ ಪಾಠಗಳು ಮಕ್ಕಳಿಗೆ ರಮ್ಯವಾಗಿ ತೋರುವವು. 7ನೇ ಪಾಠದಿಂದ ತಿಳುವಳಿಕೆ ದೊರೆಯುವದು. ಹಕ್ಕಿ, ಡ್ರಿಲು, ಮನೆಗೆಲಸ ಮುಂತಾದ ಗೀತಗಳು ಚಲೋದಾಗಿವೆ. ಹಾಗೆಯೇ 2ನೇ ಭಾಗದಲ್ಲಿ 1, 2, 7ನೇ ಪಾಠಗಳು ವಿನೋದಕರವಾಗಿಯೂ ನೀತಿಪರವಾಗಿಯೂ ಇವೆ. 6ನೇ ಪಾಠದಿಂದ ಮಕ್ಕಳಲ್ಲಿ ಲಕ್ಷ್ಯಕೊಟ್ಟು ನೋಡುವ ಶಕ್ತಿಯು ಬೆಳೆಯಲಿಕ್ಕೆ ಅವಕಾಶದೊರೆಯುವದು. ಗೀತಗಳಲ್ಲಿ ಹೊತ್ತು ಕಳೆಯಬೇಡ, ಜತೆ ಹಿಣಿಯುವದು, ಬಾಳೆಗಿಡಕ್ಕೂ ಹಲಸಿನ ಮರಕ್ಕೂ ಆದ ಸಂವಾದ ಇವು ಚನ್ನಾಗಿವೆ. ಪುಸ್ತಕಗಳು ಬಾಸೆಲ್ ಮಿಶನ್ ಪ್ರೆಸ್ಸಿನಲ್ಲಿ ಅಚ್ಚು ಹಾಕಲ್ಪಟ್ಟದ್ದರಿಂದ ಇವುಗಳ ಮುದ್ರಣ ಮುಂತಾದವು ನಿರ್ದೋಷವಾಗಿ ಏರ್ಪಟ್ಟಿವೆ.

ಒಟ್ಟಾರೆ ಮೇಲೆ ಈ ಪುಸ್ತಕಗಳು ಪಾಠಶಾಲೆಗಳಲ್ಲಿ ಉಪಯೋಗಕ್ಕೆ ತಕ್ಕವೆಂದು ನಾವು ಯಥಾರ್ಥವಾಗಿ ಶಿಫಾರಸು ಮಾಡುವೆವು. ಮತ್ತು ರಾ. ಮಂಗೇಶರಾಯರಿಗೆ ಈ ಮಾರ್ಗದಲ್ಲಿ ತಕ್ಕ ಪ್ರೋತ್ಸಾಹ ಸಿಕ್ಕುವದೆಂದು ಕೋರುತ್ತೇವೆ.

[illegible]IAM & Co., 16 OAK LANE, FORT BOMBAY.

ಅಮೃತಾಂಜನ

ಬಾಟ್ಲಿ ಒಂದಕ್ಕೆ ಕಿಮ್ಮತು 0—8—0 ವಿ. ಪಿ 0—12—0.

ಅಮೃತಾಂಜನ—ಸುಖಾಂಜನ.
ಅಮೃತಾಂಜನ—ದಿವ್ಯಾಂಜನ.
ಅಮೃತಾಂಜನ—ಸಂಜೀವನ
ಅಮೃತಾಂಜನ—ವರವಾಂಜನ.
ಅಮೃತಾಂಜನ—ಶೀತಭಂಜನಿ.
ಅಮೃತಾಂಜನ—ಪ್ರಾಭಂಜನವಿಮರ್ದಿನಿ

SAFE ★ EFFICACIOUS ★ SURE ★ POWDERS ★ OINTMENTS ★ PILLS — WILLIAM & Co. BOMBAY

ಅಮೃತಾಂಜನ—ಉಪೂರ್ವದರ್ಶಿನಿ
ಅಮೃತಾಂಜನ—ತಕ್ಷಣ ಪರಿಹಾರಿನಿ
ಅಮೃತಾಂಜನ—ಗಂಟ್ಲು ನೋವಿಗೆ
ಅಮೃತಾಂಜನ—ವಾತದ ನೋವಿಗೆ
ಅಮೃತಾಂಜನ—ಎದೆ ನೋವಿಗೆ
ಅಮೃತಾಂಜನ—ತಲೆನೋವಿಗೆ

ಜ್ವರ ಮತ್ತು ಘೂಯಿ, ಸಂಧಿವಾತ, ಶಿರೋಂಬಾರ, [illegible], ಎಲ್ಲಾ ತರದ ರೋಗಕ್ಕೂ ಈ ಔಷಧವು ಉತ್ತಮವಾಗಿರುತ್ತದೆ ಇದರಿಂದ ಗುಣವು ಕಂಡುಬರುವದಿಲ್ಲವಾದರೆ ಹಣವು ಹಿಂದಕ್ಕೆ ಕೊಡಲ್ಪಡುವದು [illegible]

ಗಜಕರ್ಣದ ಮುಲಾಮು ಡಬ್ಬಿ 1ಕ್ಕೆ 0-6-0 ವಿ. ಪಿ. 0-10-0

ಗಜಕರ್ಣದ ಮುಲಾಮು—ಇದನ್ನು [illegible]
ಗಜಕರ್ಣದ ಮುಲಾಮು—[illegible]
ಗಜಕರ್ಣದ ಮುಲಾಮು—ಇದನ್ನ [illegible]
ಗಜಕರ್ಣದ ಮುಲಾಮು—ಇದನ್ನು [illegible]
ಗಜಕರ್ಣದ ಮುಲಾಮು [illegible] ಕೊಡಲ್ಪಡುವದು

	ರು.	ಆ.	ಪೈ.
ಜೀರ್ಣರಸಾಯನ—ಹೊಟ್ಟೆಯ [illegible]	1	1	0
ವಜ್ರಗುಟಿಕ—ಧಾತು ಪುಷ್ಟಿ, [illegible]	1	0	0
ಜ್ವರಹಾರಿ—ಎಲ್ಲಾ ತರದ ಜ್ವರಗಳ [illegible] 1ಕ್ಕೆ	0	12	0
ಚೇಳುಕಡಿತದ ಮದ್ದು—ಚೇಳುವಿನ ಕಡಿತದ [illegible]	0	4	0
ಖುಜ್ಜಿ ಮುಲಾಮು—ಈ [illegible]	0	3	0
ದಂತಮಂಜನ—ಈ ಮಂಜನದಿಂದ ಹಲ್ಲುಗಳ [illegible] ರಕ್ತ ಸುರಿಯುವದು [illegible] 1ಕ್ಕೆ	0	2	0
ರೋಮಹಾರಿ—ಈ ಚೂರ್ಣವನ್ನು ಹಾಗಿಸುವದರಿಂದ ರೋಮ ವನ್ನು [illegible]	0	4	0
ಕೇಶವರ್ಧಿನೀ ತೈಲ್ಯ—ಇದು ತಲೆಯ ಮೇಲಿನ [illegible] ಚಲೋ ಪರಿಮಳವು ಬರುತ್ತದೆ [illegible] ಬಾಟ್ಲಿಗೆ	1	0	0
ಜುಲಾಬು ಮಾತ್ರೆ—ಜುಲಾಪಿಗ ಉತ್ತಮವಾದದ್ದು	0	5	0
ಕವಹಾರಿ—ಕೆಮ್ಮು, ದಮ್ಮು, ಕ್ಷಯ, ಕೊ [illegible] ಕಫ ಮುಂತಾದ್ದಕ್ಕೆ ಇದು ಅಮೂಲ್ಯವಾಗಿರುತ್ತದೆ	1	4	0
ಸುಂದರೀ ತೈಲ್ಯ—ಈ ತೈಲ್ಯವನ್ನು ಮೋರೆಯ ಮೇಲೆ ಹಾಗಿಸಿದರೆ, ಮೊಡಿವೋಲು ತಾಗೇಗಿ ಕಪ್ಪಾದ ಕಲೆಗಳನ್ನು ತೆಗದು ಶಾಂತವಾದ ಮತ್ತು ಮನೋಹರವಾದ ರೂಪವನ್ನು ತರಿಸುತ್ತದೆ ಡಬ್ಬಿ 1ಕ್ಕೆ	0	8	0

ನೇತ್ರಾಂಜನ 0-4-0, ಕುಸುಮಾರಿ ಗುಟಿಕ 1-0-0, ಪ್ರಮೇಹಘ್ನ ಮಿಶ್ರಣ 1-0-0, ಜಂತುಘಾತಹಾರಿ 0-8-0, ಕಫನಾಶಕ ಚೂರ್ಣ 0-[illegible]-0 ಕಸ್ತೂರಿ ಮಾತ್ರೆಗಳು 0-10-0, ತಾಂಬೂಲ ಗುಟಿಕೆ 0-8-0.

ಎಲ್ಲಾ ತರದ ಔಷಧಗಳು ಇರುವದರಿಂದ ಕಟಲಾಗು ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರದು ತರಿಸಿಕೊಳ್ಳಬಹುದು.

AMRUTANJAN CURES RHEUMATISAM.

TRY OUR AMRUTANJAN AND YOU WILL LIKE IT

ವಿಳಾಸ:—ವಿಲಿಯಮ್ ಮತ್ತು ಕಂಪೆನಿ, ಫೋರ್ಟ್ ಮುಂಬಯಿ.

Printed and published by V. S. Kamath at the Mangalore Trading Association's "Sharada Press"

ಸ್ವದೇಶಾಭಿಮಾನಿ

ಎಂಬ

ಕನ್ನಡ ಪಕ್ಷ ಪತ್ರವು.

ಪುಸ್ತಕ 1. ಮಂಗಳೂರು, ತಾರೀಕು 16ನೇ ಮೇ 1907. **ಸಂಚಿಕೆ 10.**

ವಿಷಯಗಳು.

1. ಸ್ವರಾಜ್ಯೋದಯ.
2. ಗ್ರಾಮ ಉದ್ಯೋಗಸ್ಥರ ನೇಮಕಗಳ ಕುರಿತು ಹೊಸ ಸರ್ಕ್ಯುಲಾರ್
3. ಪತಿತ ಶುದ್ಧಿ
4. ಸ್ತ್ರೀ ವಿದ್ಯಾಭ್ಯಾಸದ ಸ್ಥಿತಿ.
5. ಸರ್ ಫಿರೋಜ ಷಹಾ ಮೆಹ್ತಾಂಜಿ ಮೇಧಾ
6. ಉತ್ತರ ಹಿಂದುಸ್ಥಾನದ ದುಃಸ್ಥಿತಿ
7. ಜಪಾನ ಚರಿತ್ರೆಯಲ್ಲಿ ಭಾರತೀಯರು ಕಲಿಯತಕ್ಕ ಪಾಠಗಳು
8. ಪತ್ರವ್ಯವಹಾರ
9. ವರ್ತಮಾನ ಸಂಗ್ರಹ

ಸ್ವದೇಶಾಭಿಮಾನಿಯಲ್ಲಿ ಪ್ರಕಟಣೆಗಳನ್ನು ಪ್ರಕಟಿಸುವದರ ದರ.

	೧ ಸಾರಿ	೪ ಸಾರಿ	೧೨ ಸಾರಿ	೨೪ ಸಾರಿ
ಇಡೀ ಪಾನು	ರೂ ೬	ರೂ ೨೩	ರೂ. ೪೮	ರೂ. ೭೨
ಅರ್ಧ ಪಾನು	,, ೩ ೮	,, ೧೨	,, ೨೪	,, ೪೦
ಕಾಲು ಪಾನು	,, ೨ ೮	,, ೮	,, ೧೮	,, ೩೦
ಅರೆಕಾಲು ಪಾನು	,, ೧ ೮	,, ೫	,, ೧೩	,, ೨೨

ಅರೆಕಾಲು ಪಾನುಗಳಿಗಿಂತಲೂ ಸಣ್ಣದಾದ ಪ್ರಕಟಣೆಗಳ ದರವನ್ನು ಮೆನೇಜರರಿಗೆ ಬರೆದು ತಿಳಕೊಳ್ಳಬೇಕು.

ಸ್ವದೇಶಾಭಿಮಾನಿಯ ಚಂದಾಹಣ.

	ರೂ	ಆ
ಟಪ್ಪಾಲು ಹಾಸಲು ಇಲ್ಲದೆ ೧ ವರ್ಷಕ್ಕೆ	೧	೦
ಟಪ್ಪಾಲು ಹಾಸಲು ಸಹಿತ ೧ ವರ್ಷಕ್ಕೆ . . .	೧	೬
,, ,, ಅರ್ಧ ವರ್ಷಕ್ಕೆ .	೦	೧೨

ಚಂದಾಹಣವನ್ನು ಮುಂದಾಗಿ ತೆರತಕ್ಕದ್ದು. ಪ್ರಕಟಣೆಗಳನ್ನೂ ಚಂದಾದಾರಿಕೆಯನ್ನೂ ಕುರಿತ ಈ ಕೆಳಗಿನ ವಿಳಾಸಕ್ಕೆ ಬರೆಯುವದು.

ವಿಳಾಸ —ಮೆನೆಜರ್ ಶಾರದಾ ಛಾಪಖಾನೆ, ಮಂಗಳೂರು

ಶಾಲಿವಾಹನ ಶಕ ೧೮೨೯ನೇ ಪ್ಲವಂಗ ಸಂವತ್ಸರದ ವೈಶಾಖ ಶುದ್ಧ ೪ಯು ಗುರುವಾರದಾರಭ್ಯ ವೈಶಾಖ ಬಹುಳ ೪ಯು ಶುಕ್ರವಾರದ ವರೆಗಿನ ವಾರ ಪಂಚಾಂಗವು 1907ನೇ ಇಸವಿ ಮೇ ತಾರೀಕು 16ರಿಂದ 31ರ ವರೆಗೆ

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ
16	ಗುರುವಾರ	ಚೌತಿ	೪೧	ಆರ್ದ್ರ	೩೯।	24	ಶುಕ್ರವಾರ	ದ್ವಾದಶಿ	೫೧	ಹಸ್ತಾ	೩।
17	ಶುಕ್ರವಾರ	ಪಂಚಮಿ	೪೬	ಪುನರ್ವಸು	೪೫।	25	ಶನಿವಾರ	ತ್ರಯೋದಶಿ	೪೭	ಚಿತ್ರಾ	೨
18	ಶನಿವಾರ	ಷಷ್ಠಿ	೫೦।	ಪುಷ್ಯ	೫೧।	26	ರವಿವಾರ	ಚತುರ್ದಶಿ	೪೨॥	ಸ್ವಾತಿ	।
19	ರವಿವಾರ	ಸಪ್ತಮಿ	೫೯।	ಆಶ್ಲೇಷ	೫೬	27	ಚಂದ್ರವಾರ	ಪೂರ್ಣಿಮಿ	೩೭॥	ಅನುರಾಧಾ	೫೩॥
20	ಚಂದ್ರವಾರ	ಅಷ್ಟಮಿ	೫೫।	ಮಘಾ	೫೯।	28	ಕುಜವಾರ	ಪಾಡ್ಯ	೩೨॥	ಜ್ಯೇಷ್ಠ	೪೯॥
21	ಕುಜವಾರ	ನವಮಿ	೫೬	ಹುಬ್ಬಾ	೬೦	29	ಬುಧವಾರ	ಬಿದಿಗೆ	೨೫॥	ಮೂಲಾ	೪೫॥
22	ಬುಧವಾರ	ದಶಮಿ	೫೫॥	ಹುಬ್ಬಾ	೨	30	ಗುರುವಾರ	ತದಿಗೆ	೧೯॥	ಪೂರ್ವಾಷಾಢ	೪೧॥
23	ಗುರುವಾರ	ಏಕಾದಶಿ	೫೪	ಉತ್ತರ	೩।	31	ಶುಕ್ರವಾರ	ಚೌತಿ	೧೩॥	ಉತ್ತರಾಷಾಢ	೩೭॥

THE MANGALORE TRADING ASSOCIATION.

(*Formerly* **S. NAGAPPA NAYAK & CO.**)

ಮಂಗಳೂರು ಟ್ರೇಡಿಂಗ್ ಎಸ್ಸೋಸಿಯೇಶನ್.

(ಮೊದಲು ಸುಜೀರ ನಾಗಪ್ಪ ನ್ಯಾಕ ಎಂಡ್ ಕೊ.)

ಈ ಕಂಪೆನಿಯಲ್ಲಿ ಅನೇಕ ನಮೂನೆಯ ವಿಲಾಯಿತಿ ಔಷಧಗಳು, ಒಳ್ಳೇ ಪರಿಮಳ ದ್ರವಗಳು, ಚಾ, ಕೋಕೋ, ಬಿಸ್ಕೂಟು, ಸಾಬೂನು, ಚಾಕುಚೂರಿ ಮುಂತಾದವುಗಳು ಕಾಗದ ವಗೈರೆ ಲಿಖಾವಟಿದ ಸಾಮಾನುಗಳು, ಕೋರ್ಟಿನ ಎಲ್ಲಾ ನಮೂನೆಯ ಫೋರ್ಮುಗಳು ಕ್ರಯಕ್ಕೆ ದೊರೆಯುತ್ತವೆ. ಇದೇ ಕಂಪೆನಿಗೆ ಸಮ್ಬಂಧಪಟ್ಟ ಶಾರದಾ ಛಾಪಖಾನೆ [illegible] ಲಯದಲ್ಲಿ ವಿವಾಹ ಪತ್ರಿಕೆಗಳು, ಎಲ್ಲಾ ನಮೂನೆಯ ಫೋರ್ಮುಗಳು, ನೋಟೀಸುಗಳು, ಕನ್ನಡ ಮತ್ತು ಇಂಗ್ಲಿಷ ಪುಸ್ತಕಗಳು, ಯೋಗ್ಯರೀತಿಯಲ್ಲಿ ಮುದ್ರಿಸಲ್ಪಡುತ್ತವೆ. [illegible] ಅಂಗಡಿ, ಭಂಡಸಾಲೆ ವಗೈರೆ ವ್ಯಾಪಾರಸ್ಥರ ಬಗ್ಗೆ ತಯಾರಿಸಿದ ವರ್ಗ ಊಳಿಗದ ಪುಸ್ತಕಗಳು, ಯಾವಾಗಲೂ ಕ್ರಯಕ್ಕೆ ದೊರೆಯುತ್ತವೆ. ಇತರ ಪುಸ್ತಕಗಳನ್ನು ಒಳ್ಳೇ ನಮೂನೆಯಲ್ಲಿ ಬ್ಯಾಂಡ್ ಮಾಡಿಸಲಾಗುತ್ತದೆ.

ಸ್ವದೇಶಾಭಿಮಾನಿ.

ಮಂಗಳೂರು, ತಾರೀಖು 16ನೇ ಮೇ 1907.

ಸ್ವರಾಜ್ಯೋದಯ.

ಕೊಂಗ್ರೆಸ್ ಸಭೆಯಲ್ಲಿ ನೇಮಸ್ಥಪಕ್ಷದವರು ಮತ್ತು ವಿಪರೀತ ಪಕ್ಷದವರೆಂಬ ಎರಡು ತಂಡ ಹುಟ್ಟಿದ್ದನ್ನೂ ಅವರೊಳಗಿರುವ ಭೇದಾಭೇದಗಳನ್ನೂ ಹಿಂದಿನ ಸಂಚಿಕೆಯಲ್ಲಿ ಸಂಕ್ಷೇಪವಾಗಿ ಸೂಚಿಸಿದ್ದೆವು. ಈ ಶಾಖೆಗಳು ಹುಟ್ಟಿದ್ದರಿಂದ ಕೊಂಗ್ರೆಸ್ ವೃಕ್ಷವು ಬೆಳೆದು ವೃದ್ಧಿ ಹೊಂದಿದೆಂತ ಊಹಿಸಬೇಕು. ನೇಮಸ್ಥಪಕ್ಷದಲ್ಲಿ ಗೋಖಲೆ ಬೆನರ್ಜಿ, ಉಪೇಂದ್ರನಾಥ ಬೋಸ, ಮುಂತಾದವರೂ ವಿಪರೀತರಲ್ಲಿ ಬಿಪಿನ ಚಂದ್ರ ಪಾಲ, ಲಾಲಾ ಲಾಜಪತರಾಯ, ಬಾಲಗಂಗಾಧರ ತಿಲಕ ಮೊದಲಾದವರೂ ದೇಶವಾತ್ಸಲ್ಯ ಪ್ರೇರಿತ ವಿದ್ವಾಂಸರಿರುವರು. ಇತ್ತಂಡದವರ ಉದ್ದೇಶವು ದೇಶೋದ್ಧಾರವಾಗಿದ್ದರೂ ಅದನ್ನು ಸಾಧಿಸುವ ಉಪಾಯವ್ಯಾವದೆಂಬ ವಿಷಯದಲ್ಲಿ ಭಿನ್ನಾಭಿಪ್ರಾಯಗಳಿವೆ. ಸರಕಾರವನ್ನು ನಮಗೆ ಹಾನಿಕರವ [illegible] ಮಾರ್ಗದಿಂದ ತಿದ್ದಿ ಅವರ ಸಹಕಾರ ಮೂಲಕ ನಾವು ಏಳಿಗೆಗೆ ಬರಬೇಕೆಂದು ನೇಮಸ್ಥಪಕ್ಷದವರೂ ಸರಕಾರದ ಕಡೆಗೆ ನಾವು ಉದಾಸೀನರಾಗಿ ನಮ್ಮಲ್ಲೇ ನಾವು [illegible] ನಮ್ಮ ಕಾರ್ಯ ಸಾಧಿಸಬೇಕೆಂದು ವಿಪರೀತ ಪಕ್ಷದವರೂ [illegible] ಯಾವ ಮತವನ್ನು ಒಳಕೊಂಡು [illegible] ಕೆಲವು ಕಾಲಕ್ಕೆ ಮುಂಚೆ ತಿಲಕರೂ ಗೋಖಲೆ [illegible] ಅನೇಕ ಭಾಷಣಗಳನ್ನು ಕೊಟ್ಟರು. ಬಿಪಿನ ಚಂದ್ರಪಾಲ [illegible] ದಲ್ಲಿ ಈ ವಿಷಯ ಉಪನ್ಯಾಸಗಳನ್ನು ಕೊಡುತ್ತಾರೆ. [illegible] ಜ್ಯವನ್ನು ಕುರಿತು ಕೊಟ್ಟ ಭಾಷಣವು [illegible]

ಬ್ರಿಟಿಷರಿಂದ ಅವರ ಸಾಮ್ರಾಜ್ಯಕ್ಕೆ [illegible] ಕೊಳ್ಳಬೇಕೆಂದು ಗೋಖಲೆಯವರು [illegible] ಯಾವ ಸಂಬಂಧವೂ ಇಲ್ಲದೆ ಸ್ವತಂತ್ರ [illegible] ತಕ್ಕದ್ದೆಂದು ಪಾಲರು ಪ್ರತಿಪಾದಿಸುವರು. [illegible] ಸಾಧ್ಯವಲ್ಲವೆಂದು ಪರಪಕ್ಷದ [illegible] ಸತ್ಯಕ್ಕೆ ಆದೀನವಾಗಿ ನಾವು ಸ್ವರಾಜ್ಯವನ್ನು ಸ್ಥಾಪಿಸುವದೆಂದರೆ [illegible] ಮಾತೆಂದು ತೋರಿಸಿದರು. ಸ್ವರಾಜ್ಯಪದ್ಧತಿಯು [illegible] ಜನರಿಗೆ ಅಂದರೆ ಅವರ ಪ್ರತಿನಿಧಿಸಭೆಗೆ ದೇಶದ [illegible] ಕತೆಗಳಲ್ಲಿ ಪೂರ್ಣ ಸ್ವತಂತ್ರವಿರಬೇಕು [illegible] ಬೇಕು. [illegible] ಹಣವನ್ನು ಹ್ಯಾಗೆ ವಿನಿಯೋಗಿಸಬೇಕು. ಯಾವ [illegible] ದೇಶವು ಒಳಪಡಬೇಕು, ಯಾವವು ರದ್ದಾಗಬೇಕು, ದೇಶದ [illegible] ರೀತಿಯಲ್ಲಿ ವ್ಯವಸ್ಥಿತವಾಗಬೇಕು ಈ ಮೊದಲಾದ ವಿಷಯಗಳು [illegible] ಸಾರವಾಗಿ ನಿಶ್ಚಯಿಸಲ್ಪಡಬೇಕು. [illegible] ದೇಶದಲ್ಲಿ ಸ್ವರಾಜ್ಯವಿದೆ [illegible] ಇಂತಹ ಅಧಿಕಾರವು ಪ್ರಜೆಗಳಿಗೆ ದೊರಕಿದರೆ [illegible] ಬ್ರಿಟಿಷ ಸಾಮ್ರಾಜ್ಯಕ್ಕೆ ಹಿಂದ ಸಾಮ್ರಾಜ್ಯಕ್ಕೆ ಬೇಕಾದಷ್ಟು [illegible] ವಿಪರೀತವಾಗುವದು. ಅರ್ಮ್ಸ್ ಆಕ್ಟ್ (ಆಯುಧಗಳ ಕಾನೂನು) ರಜಾ ಆಗಿ ಪ್ರತಿಯೊಬ್ಬನು ಲೈಸನ್ಸ್ ಇಲ್ಲದೆ ಆಯುಧಧಾರಿಯಾಗುವ ಹಕ್ಕು ಪಡೆಯುವನು. ಸ್ಟೇಟ್ ಸೆಕ್ರೆಟರಿಯ ಸಂಬಳವು ಇಲ್ಲಿಯ ಖಜಾನೆಯಿಂದ ಸಲ್ಲದು. ಮಿಲಿಟರಿ ಮತ್ತು ಸಿವಿಲ್ ಇಲಾಖೆಗಳಲ್ಲಿಯ ದೊಡ್ಡ ಹುದ್ದೆಗೆ ಅಂದರೆ ಹೆಚ್ಚು [illegible] ನೌಕರಿಗೆ ದೇಶೀಯರೇ ನೇಮಕವಾಗುವರು. ದೇಶದ ಕೈಗಾರಿಕೆಗಳಿಗೆ ಪ್ರತಿಕೂಲವಾದ ಸುಂಕಗಳು ರದ್ದಾಗಿ ಅವುಗಳಿಗೆ ಅನುಕೂಲವಾದ ಸುಂಕಗಳು ಏರ್ಪಟ್ಟು ನಮ್ಮ ದೇಶವು ಉನ್ನತ ಸ್ಥಿತಿಗೆ ಬರುವದು. ಅದರೆ ಇದಕ್ಕೆ ಸರಿಯಾಗಿ ವಿಲಾಯತಿ ಉದ್ದಿಮೆಗಳು ಕ್ಷೀಣವಾಗಿ ಅಲ್ಲಿಯ ಸಂಪತ್ತು ಕುಂದುವದು. ನೂರಾರು ರೀತಿಯಲ್ಲಿ ಇಲ್ಲಿಂದ ವಿಲಾಯತಿಗೆ ಹರಿದುಹೋಗುವ ದ್ರವ್ಯಕ್ಕೆ ಕಟ್ಟೆ ಕಟ್ಟಿದಂತಾಗುವದು ಮಾತ್ರವಲ್ಲ, ದೊಡ್ಡ ಹುದ್ದೆಗಳಲ್ಲಿ ನಮ್ಮವರೇ ನೇಮಿಸಲ್ಪಟ್ಟರೆ ಅವರಿಗೆ ದೊರಕುವ ಅನುಭವವು ಅವರ ಸಂಗಡ ಇಲ್ಲೇ ಉಳಿದು ದೇಶಕ್ಕೆ ಪ್ರಯೋಜನಕಾರಿಯಾಗುವದು. ಇನ್ನೇಕು? ನಮಗೆ ಆಫ್ರಿಕಾ ಅಮೇರಿಕಾ ದೇಶಗಳಿಗೆ ಹೋಗಿ [illegible] ಅವರನ್ನು ಇಲ್ಲಿ ಬಂದು ನಮ್ಮ ದೇಶದ ಧನವನ್ನು ವ್ಯಯಿಸುವ ಹಾಗೆ [illegible] ಡುವದು. ಇದೇ ಸ್ವರಾಜ್ಯದ ಪರಿಣಾಮ, ಸ್ವರಾಜ್ಯ ದೊರಕಿದರೆ ನಮ್ಮ ದೇಶವೇಳಿಗೆ ಪಡುವದು. ವಿಲಾಯತಿಯ ಸಂಪತ್ತು ಅಷ್ಟರಮಟ್ಟಿಗೆ ಕೆಳಗಿಳಿಯುವದು. ಉಭಯ ದೇಶಗಳ ಸ್ವಾರ್ಥಗಳಿಗಿರುವ ಈ ವೈಷಮ್ಯವೇ ಇಷ್ಟು ಅನರ್ಥಕ್ಕೆ ಕಾರಣ.

ಸ್ವರಾಜ್ಯವೆನ್ನಬೇಕಾದರೆ ಪ್ರಜೆಗಳಿಗೆ ಹಿಂದೆ ಹೇಳಿದ ಸ್ವಾತಂತ್ರ್ಯಗಳಿರಬೇಕು. ಇಂತಹ ಹಕ್ಕುಗಳನ್ನು ಪ್ರಜೆಗಳಿಗಿತ್ತರೆ ಇಂಗ್ಲಿಷರಿಗೆ ಅಧಿಕಾರವೆಲ್ಲಿ ಉಳಿಯಿತು? ನಿಜವಾದ ಅಧಿಪತ್ಯವನ್ನು [illegible] ಕೊಟ್ಟು ಹಿಂದುಸ್ಥಾನವು ತಮ್ಮ ಅಧೀನ [illegible] ತೋರಿಕೆಗಾಗಿ ಇಂಗ್ಲೀಷರು ನಮ್ಮ ದೇಶವನ್ನು ಪರರಾಜನಿಂದ ಕಾಪಾಡುವ ಕೆಲಸವನ್ನು ಕೈಕೊಳ್ಳುವರೋ? ಅಂದರೆ ಬ್ರಿಟಿಷ ಚಕ್ರಾಧಿಪತ್ಯದಲ್ಲಿ ಸ್ವರಾಜ್ಯವನ್ನು ನಡೆಯಲಾಗದು. ಆದ್ದರಿಂದ ಚಕ್ರಾಧಿಪತ್ಯಕ್ಕಾಧೀನವಾದ ಸ್ವರಾಜ್ಯ ಕಾರ್ಯತಃ ಸಾಧ್ಯವಲ್ಲ.

ಇಂಗ್ಲೀಷರು ಥಟ್ಟನೆ ಪರಾರ್ಥಪರರಾಗಿ ಅನೇಕ ರೀತಿಗಳಲ್ಲಿ ತಮ್ಮ ಸಂಪತ್ತಿಗೆ ಕಾರಣವಾದ ಹಿಂದೂ ದೇಶವನ್ನು ಪ್ರಜೆಗಳಿಗೆ ಒಪ್ಪಿಸಿ ಸ್ವರಾಜ್ಯವನ್ನು ಸ್ಥಾಪಿಸಗೊಡುವರೇ? ಇಂಗ್ಲೀಷರು ಮನುಷ್ಯರು. ಮನುಷ್ಯಮಾತ್ರರಿಂದ ಈ ಅಮಾನುಷ ಕೃತ್ಯವನ್ನು ಅಪೇಕ್ಷಿಸಲಾಗದು. ಒಂದು ವೇಳೆ ಈ ದುರ್ಲಭವಾದ ಸಂಗತಿಯು ಸಾಧ್ಯವಾದರೂ ನಮ್ಮ ಧೊರೆಗಳು ಈ ದಾನಕ್ಕೆ ಸಿದ್ಧವಾಗಿದ್ದರೂ ನಮ್ಮ ಜನರು ತಕ್ಕ ಶಿಕ್ಷಣದಿಂದ ಸ್ವರಾಜ್ಯಪದ್ಧತಿಗೆ ಯೋಗ್ಯರೆನಿಸಿದ ಹೊರತು ಸ್ವರಾಜ್ಯವೆಂಬುದು ಬಾಳಲಾರದು. ಆದ್ದರಿಂದ ಸ್ವರಾಜ್ಯವೆಂಬ ಕಲ್ಪನೆಯನ್ನು ನಿರಂತರ ಪ್ರಜೆಗಳ ಮುಂದಿಟ್ಟು ಅಗಾಧ [illegible] ರಾಜ್ಯಭಾರವನ್ನು ಸಂಪಾದಿಸುವ ಉದ್ದೇಶ್ಯವನ್ನು [illegible] ನಡೆಸಬೇಕು. ಈ ಕಾರ್ಯಕ್ಕನುಸಾರವಾಗಿ ಸಾಧಾರಣ ಜನರಲ್ಲಿ ಶಿಕ್ಷಣ, ಐಕ್ಯ, ಸ್ವದೇಶಿ ಮೊದಲಾದವುಗಳನ್ನು ಊರ್ಜಿತಕ್ಕೆ ತರಬೇಕು.

ಮೇಲೆ ಸಂಗ್ರಹವಾಗಿ ಕೊಟ್ಟ ಪಾಲರ ದೇಶವಾತ್ಸಲ್ಯಭರಿತ ಭಾಷಣವು ಅನೇಕ [illegible] ವಾಗಿದೆ. ಸರ್ವಸಾಧಾರಣರ ಶಿಕ್ಷಣವೇ ಸ್ವರಾಜ್ಯಕ್ಕೆ [illegible] ಯೋಗ್ಯರೆನಿಸಿದ ವಿನಾ ಸ್ವರಾಜ್ಯ ದೊರೆಯದು [illegible] ನಾವು [illegible] ಈ [illegible] ದೊರೆಯದು. [illegible] ಯೋಗ್ಯತೆ [illegible] ಇಲ್ಲವೆಂಬುದು [illegible] ಯೋಗ್ಯತೆ [illegible] ಸ್ವರಾಜ್ಯವೋ [illegible] ಹೊಂದುವ [illegible] ಪತ್ರಿಕೆ [illegible] ಅವರ [illegible] ವೃದ್ಧಿ [illegible]

ಗ್ರಾಮ ಉದ್ಯೋಗಸ್ಥರ ನೇಮಕಗಳ ಕುರಿತು ಹೊಸ ಸರ್ಕ್ಯುಲಾರ್.

[illegible] ಗ್ರಾಮ ಉದ್ಯೋಗಗಳನ್ನು [illegible] ಮನೆತನದ ಹಕ್ಕನ್ನು [illegible] ಅನುಸರಿಸಬೇಕಾಗಿ ರೆವಿನ್ಯು ಬೋರ್ಡಿನವರು [illegible] ನಿರ್ಣಯವನ್ನು ಪ್ರಕಟಿಸಿದ್ದರು. ಈ [illegible] ಲಾರ್ ಏನಂದರೆ:—"ಈ ಜಿಲ್ಲೆಯಲ್ಲಿಯೂ ಬೇರೆ ಕೆಲವು ಜಿಲ್ಲೆಗಳಲ್ಲಿ ಕೂಡಾ ಗ್ರಾಮ ಉದ್ಯೋಗಗಳಿಗೆ [illegible] ಮಾಡುವಾಗ್ಯೆ ಮನೆತನದ ಹಕ್ಕನ್ನು [illegible] ಸುವ ನಿಯಮವನ್ನು ಕೂಡುವಷ್ಟು ಮಟ್ಟಿಗೆ ಒಪ್ಪಿಕೊಳ್ಳಬೇಕಾಗಿಯ [illegible] ಮಾಡಲ್ಪಟ್ಟ ಮನುಷ್ಯನು ಘೋರ ಸ್ವಭಾವದ ದುರ್ನಡತೆಯವನೆಂತ ತಪ್ಪು ಸಾಬೀತಾಗಿದ್ದ ವಿನಹಾ ಅಂದರೆ, ಘೋರ ಸ್ವಭಾವದ ಕ್ರಿಮಿನಲ್ ತಕ್ಸೀರು ಸಾಬೀತಾಗಿದ್ದ ವಿನಹಾ ಅಥವಾ ಮೋಸಕರವಾದ ಅಪ್ರಮಾಣಿಕತೆಯ ಯಾ ದುರ್ನೀತಿಯ ನಡತೆಯವನೆಂತ ಆತನ ಮೇಲೆ ತಪ್ಪು ಸಾಬೀತಾಗಿದ್ದ ವಿನಹಾ ಅಂಥಾ ಡಿಸ್‌ಮಿಸ್ ಮಾಡಲ್ಪಟ್ಟ ಗ್ರಾಮ ಉದ್ಯೋಗಸ್ಥನ ಕುಟುಂಬವು ಆಂಥಾ ಹಕ್ಕನ್ನು ಸಾಧಾರಣವಾಗಿ ಕಳಕೊಳ್ಳುವದಿಲ್ಲವಾಗಿ ರೆವಿನ್ಯು ಬೋರ್ಡಿನವರು 1907ನೇ ಇಸವಿ ಮಾರ್ಚ 28ನೇ

...ಪ್ರ ೨೦ L ನೇ ಸೆಕ್ಷನ್ನಿನಲ್ಲಿ ನಿರ್ಣಯಿಸಲ್ಪಟ್ಟಿರುತ್ತದೆ ... ಕೊಂಡು ಕುಟುಂಬದ ಪೋಷಣೆಯ ಉದ್ದೇಶದಿಂದ ಡಿಸ್‌ಮಿಸ್ ಮಾಡಲ್ಪಟ್ಟ ... ಅಪರಾಧ ಮಾಡಿದ್ದಕ್ಕೆ ಅವನಿಗೆ ತಪ್ಪದೆ ... ಶಿಕ್ಷೆಗೆ ... ನಿರ್ಣಯವು ಲಗಾವಾಗುತ್ತದೆ. ಹೊರತು ಡಿಸ್‌ಮಿಸ್ ಮಾಡಲ್ಪಟ್ಟ ಆಫೀಸರನ ವಾರಿಸ್ದಾರರನ್ನು ಹಂಗಾಮಿಯಾಗಿ, ಆತನ ಜೀವಿತಾವಧಿಯಲ್ಲಿ ಕೆಲಸದಿಂದ ನಿಷೇಧಿಸುವದಕ್ಕೆ ಲಗಾವಾಗುವದಿಲ್ಲ.

ಅತ್ಯಲ್ಪವಾದ ವೇತನವನ್ನು ಹೊಂದುವ ಗ್ರಾಮಾಧಿಕಾರಿಗಳೆಲ್ಲರಿಗೂ ಈ ಹೊಸ ಸರ್ಕ್ಯುಲರ್ ತಮ್ಮ ಉದ್ಯೋಗ ನಿರ್ವಾಹಗಳಲ್ಲಿ ಪ್ರೋತ್ಸಾಹವನ್ನುಂಟು ಮಾಡುವದು. ಗ್ರಾಮಾಧಿಕಾರಿಗಳನ್ನು ವಾರಿಸ ಹಕ್ಕಿನನುಸರಿಸಿ ನೇಮಕ ಮಾಡುವ ಕಾನೂನು ಹಲವು ಜಿಲ್ಲೆಗಳಲ್ಲಿ ಜಾರಿಯುಳ್ಳದು. ನಮ್ಮ ಜಿಲ್ಲೆಯಲ್ಲಿ ಇದು ಕಾನೂನು ಅಲ್ಲ, ಮಾಮೂಲಾಗಿರುತ್ತದೆ. ಆಯಾ ಗ್ರಾಮಾಧಿಕಾರಿಗಳ ಸಂತಾನ ಪಟ್ಟಿ ರಜಿಸ್ತ್ರಿಯನ್ನು ನಮ್ಮ ಜಿಲ್ಲೆಯ ಡಿವಿಜನಲ್ ಆಫೀಸರರಲ್ಲಿ ಇಟ್ಟಿರುತ್ತಾರೆ. ಒಂದು ಸಲ ರೆವಿನ್ಯು ಬೋರ್ಡಿನವರು ... ನಿಯಮಿಸುವ ಕಾನೂನು ಈ ಜಿಲ್ಲೆಗೆ ಲಗಾವಾಗುವದಿಲ್ಲವಾದ್ದರಿಂದ ಇಂಥಾ ರಿಜಿಸ್ತ್ರಿಗಳನ್ನು ಇಡುವದು ಬೇಕೆಂತ ಅಪ್ಪಣೆ ಕೊಟ್ಟಿದ್ದರೂ ತಿರಿಗಿ ಪುನರಾಲೋಚನೆ ಮೇಲೆ ಈ ರಿಜಿಸ್ತ್ರಗಳನ್ನು ತಿರಿಗಿ ಇಡಬೇಕೆಂತ ಮಾಡಿರುತ್ತಾರೆ. ಸರ್ಕ್ಯುಲರ್ ... ಗಳ ... ರಿಕಾರ್ಡು ... ಕೆಲಸವು ಇಮ್ಮಡಿಯಾಗಿರುತ್ತದೆ. ಗ್ರಾಮಾಧಿಕಾರಿಗಳ ಸಂಬಳವನ್ನು ... ಗೆ ಏರಿಸಿದ್ದರೆಂಬುದು ನಿಜವೇ. ಆದರೆ ಇವರು ಈ ಅಲ್ಪ ವೇತನಕ್ಕಾಗಿ ಮಾತ್ರ ತಮ್ಮ ಕೆಲಸಗಳನ್ನು ನಿರ್ವಹಿಸುವದಲ್ಲ. ಈ ವೇತನವಲ್ಲದೆ ... ತಮ್ಮ ಕುಟುಂಬ ಪಾರಂಪರ್ಯವಾಗಿ ದೊರಕುವದೆಂಬ ... ಉದ್ಯೋಗವನ್ನು ವಹಿಸಿಕೊಂಡಿರುವರು. ... ಬೋರ್ಡಿನವರ ... ಯುಕ್ತಿ ಯುಕ್ತವಾದದ್ದೇ. ಆದರೆ ಈ ಸರ್ಕ್ಯುಲರ್ ... ವಿಧಾಯಕ ಸಭೆಯ ... ಬೋರ್ಡಿನ ... ಬೋರ್ಡ ... ತಮ್ಮ ... ಇವನ್ನು ... ಪರ್ಯಾಲೋಚನೆ ಮಾಡಬೇಕು ... ಕ್ಕೆ ಪರ್ಯಾಲೋಚನೆ ಮಾಡಬೇಕೆಂತ ...

ಪತಿತ ಶುದ್ಧಿ.

ರಹಮದಾಬಾದಿನಲ್ಲಿಯ ಆರ್ಯ ಸಮಾಜದ ಪತಿತ ಶುದ್ಧಿ ... ಸ್ವಾಮಿ ಶ್ರೀ ನಿತ್ಯಾನಂದ ಜೀ ಎಂಬುವರು ಕ್ರೈಸ್ತ ಮತವನ್ನು ಸೇರಿದ ಮೋತಿಭಾಯಿ ... ಇವರ ಹೆಂಡತಿ ಮಗಳು, ಮತ್ತು ... ಮತಕ್ಕೆ ತೆಗೆದುಕೊಂಡರೆಂದು ತಿಳಿದು ಬರುತ್ತದೆ. ಇದೇ ಸ್ವಾಮಿಗಳು ಪಶ್ಚಾತ್ತಾಪ ಪಟ್ಟ ಮಹಮ್ಮದೀಯರನ್ನು ಹಿಂದು ಮತಕ್ಕೆ ತೆಗೆದುಕೊಳ್ಳಲಿಕ್ಕೆ ಶಾಸ್ತ್ರಾಧಾರವಿದೆ ಎಂದು ಪ್ರತಿಪಾದಿಸಿ ಉಪನ್ಯಾಸ ಕೊಟ್ಟರು. ಇವರು ಹೇಳಿದ್ದೇನಂದರೆ, ಪ್ರಪಂಚವೆಲ್ಲವೂ ಸನಾತನ ಧರ್ಮವನ್ನು ... ಪೂರ್ವದಲ್ಲಿ ನಮ್ಮ ದೇಶದಿಂದ ಜನರು ಯುರೋಪು ಅಮೇರಿಕಾ ಖಂಡಗಳಿಗೆ ಹೋಗಿ ನಮ್ಮ ಮತವನ್ನು ಅವರಿಗೆ ಬೋಧಿಸಿದ್ದು ಅವರ ... ಹಲವು ವಿಷಯಗಳಲ್ಲಿ ಬೋಧನೆ ಹೊಂದಿದ್ದು ಶಾಸ್ತ್ರಗಳಿಂದ ತೋರುವದು. ... ಜಾತಿಭೇದವಿರಲಿಲ್ಲ, ಪರಸ್ಪರ ವಿವಾಹ ಭೋಜನಗಳು ಇದ್ದವು. ... ಅಂತ್ಯಜನ ಕನ್ಯೆಯನ್ನು ಮದುವೆಯಾದನೆಂದು ತಿಳಿಯ ಬರುತ್ತದೆ. ಪೂರ್ವದಲ್ಲಿ ಆರ್ಯರು ತಮ್ಮ ಮತವನ್ನು ಪರಜನರಲ್ಲಿ ಪ್ರಸರಿಸುತ್ತಿದ್ದರಿಂದಲೇ ದ್ರಾವಿಡರಲ್ಲಿ ಹಿಂದು ಮತವು ನೆಲೆಗೊಂಡಿತು. ಗೋಮಾಂಸವನ್ನು ಭಕ್ಷಿಸಿದರೂ ಹೀನ ಜಾತಿಯ ಅನ್ನವನ್ನು ಪರಿಗ್ರಹಿಸಿದರೂ ಪ್ರಾಯಶ್ಚಿತ್ತ ಮೂಲಕ ಜನರನ್ನು ಸ್ವೀಕರಿಸೆಂದು ಮನು ಹೇಳಿರುವನು.

ಕಾಶ್ಮೀರದ ರಾಜ ರಣವೀರಸಿಂಹನ ಕಾಲದಲ್ಲಿ ... ಬ್ರಾಹ್ಮಣರು ... ಮಹಮ್ಮದೀಯರ ಮತಕ್ಕೆ ಸೇರಿಸಲ್ಪಟ್ಟರು ... ಹೇಳಲು ಇವರನ್ನು ತಿರಿಗಿ ಹಿಂದೂ ಮತಕ್ಕೆ ಸ್ವೀಕರಿಸಬಹುದೋ ... ನ್ನು ಕಾಶಿಯಲ್ಲಿ ಪಂಡಿತರ ... ಆಧವರನ್ನು ಅಂಗೀಕರಿಸ ...

... ಮತೀಯ ... ಇದು ... ತಿಳಿದು ಬರುತ್ತದೆ. ವೇದವನ್ನು ... ಬೋಧಿಸದೇ ... ರುವದು. ಮೋತಿಭಾಯಿಗಳನ್ನು ಶುದ್ಧೀಕರಿಸಿ ಮತಕ್ಕೆ ಸೇರಿಸಿಕೊಂಡಾಗ ಇವನು ಬೈಬಲಿನ ಎಲ್ಲಾ ಪುಸ್ತಕಗಳನ್ನು ಓದಿದೆ. ಕಡೆಗೆ ವೇದಗಳೇ ಸತ್ಯವೆಂದು ತಿಳಿದುಕೊಂಡೆನೆಂದೂ ಕ್ಷಾಮಕಾಲದಲ್ಲಿ ಹೊಟ್ಟೆಗಿಲ್ಲದೆ ಕ್ರೈಸ್ತ ಮತವನ್ನು ಸೇರಿಬಡವರು ಕ್ಲೇಶ ಪಡದ ಹಾಗೆ ನೋಡುವದು ನಮ್ಮ ಕರ್ತವ್ಯವೆಂದೂ ಹೇಳಿದರು. ಈ ಸಮಯದಲ್ಲಿ ಅಧ್ಯಕ್ಷರು ಹೇಳಿದ್ದೇನಂದರೆ — ಪರಮತಗಳು ಲಕ್ಷಕಷ್ಟಿಯಲ್ಲಿ ಹಣ ವೆಚ್ಚ ಮಾಡಿ ಜನರನ್ನು ಮತಕ್ಕೆ ಸೇರಿಸುವಾಗ ನಾವು ನಮ್ಮ ಮತವನ್ನು ಅಂಗೀಕರಿಸಲಿಕ್ಕೆ ತಾವಾಗಿ ಬರುವವರನ್ನು ಸ್ವೀಕರಿಸದಿದ್ದರೆ ಹಿಂದು ಮತದ ಶ್ರೇಷ್ಠತ್ವವೆಲ್ಲಿ ಉಳಿಯಿತು. ಬೇರೆಯವರು ತಮ್ಮ ಧರ್ಮಗಳನ್ನು ಪ್ರಸರಿಸುತ್ತಿರುವಾಗ ನಾವು ತಟಸ್ಥರಾಗಿದ್ದರೆ ಹಿಂದೆ ಬೀಳುವೆವು.

ಕೆಲವು ಕಾಲಗಳ ಮುಂಚೆ ಸನಾತನ ಧರ್ಮವು ಒಡೆದು ಒಳೆದ ಕೆಡದರಿಂದಾಗ ಶಾಸ್ತ್ರಾಧ್ಯಯನವೂ ಹೀನ ಸ್ಥಿತಿಗೆ ಬಂದಿತ್ತು. ಆಗ್ಯೆ ಅನೇಕರು ಕ್ರೈಸ್ತರಾದರು. ಆದರೆ ಈಗ ಹಿಂದು ಮತದ ಮಹಿಮೆಯು ಸ್ಥಾಪಿಸಲ್ಪಟ್ಟಿದ್ದರಿಂದ ಅಂಥವರಲ್ಲನೇಕರು ತಮ್ಮ ಪೂರ್ವಧರ್ಮವನ್ನವಲಂಬಿಸಲಿಚ್ಛಿಸಬಹುದು. ಆ ಪತಿತರನ್ನು ಸಂಸ್ಕಾರಪೂರ್ವಕ ತೆಗೆದುಕೊಳ್ಳುವ ಆಚಾರವು ಬಹು ಪ್ರಯೋಜನಕಾರಿಯಾಗುವದು. ಇನ್ನೊಂದು ಯಾವ ಧರ್ಮವೂ ಲೋಕೋಪಕಾರವನ್ನೇ ಬೋಧಿಸುವದು. ಜನರಿಗೆ ಸತ್ಯವನ್ನು ಬೋಧಿಸುವದೇ ಪರಮ ಪ್ರಕಾರ. ಹೀಗಿರುತ್ತಾ ಹಿಂದುಧರ್ಮದ ... ವಾದ ತತ್ವಗಳನ್ನು ಜನರಿಗೆ ಬೋಧಿಸಿ ಸತ್ಯಮಾರ್ಗಕ್ಕೆ ತರುವದು ಯಥಾರ್ಥವಾದ ... ಕರ್ತವ್ಯ. ಈ ಸಲುವಾಗಿ ಹಿಂದೂ ... ಸಂಘವೇರ್ಪಡಿಸಿ ಸನಾತನಧರ್ಮ ... ತಮ್ಮ ... ಮಹತ್ವವೂ ಬೇರೆ ಮತದವರಿಗೆ ಸತ್ಯಮಾರ್ಗವೂ ತಿಳಿಯುವಂತಾಗುವದು.

ಸ್ತ್ರೀ ವಿದ್ಯಾಭ್ಯಾಸದ ಸ್ಥಿತಿ

— ೦ —

ನಮ್ಮ ದೇಶದಲ್ಲಿ ಸ್ತ್ರೀಯರ ವಿದ್ಯಾಭ್ಯಾಸವು ಹೆಚ್ಚಾಗಿ ರೂಢಿಗೆ ಬರಲಿಲ್ಲ. ನಮ್ಮ ... ಬೇಗನೆ ಕಲಿಯ ... ಆವರು ವಿದ್ಯೆಯನ್ನು ... ಆದರೆ ಹುಡುಗಿಯರಿಗೆ ವಿದ್ಯೆಯನ್ನು ಕಲಿಸಲಿಕ್ಕೆ ನಮ್ಮ ಅಸ್ಥೆ ... ತೋರಿಸಿದಿಲ್ಲ. ಸ್ತ್ರೀ ವಿದ್ಯಾಭ್ಯಾಸವು ಈಗಿನ ದುರ್ದಶೆಯಲ್ಲಿ ಇರಲಿಕ್ಕೆ ಅನೇಕ ಕಾರಣಗಳಿವೆ. ಬಾಲವಿವಾಹವು ಸ್ತ್ರೀಯರ ವಿದ್ಯಾಭ್ಯಾಸಕ್ಕೆ ಒಂದು ಬಲವಾದ ಆತಂಕವಾಗಿದೆಯೆಂದು ನಮ್ಮ ಅಭಿಪ್ರಾಯ. ಅವರಿಗೆ ಬಾಲ್ಯಾವಸ್ಥೆಯಲ್ಲಿಯೇ ವಿವಾಹವಾಗಿ, ವಿವಾಹವಾದೊಡನೆಯೇ ವಿದ್ಯಾಸಂಪಾದನೆಯು ನಿಂತು ಹೋಗುತ್ತದೆ. ಸಣ್ಣ ಪ್ರಾಯದಲ್ಲಿಯೇ ದೊಡ್ಡ ಚಿಂತೆಗಳು ಅವರನ್ನು ಹಿಡಿಸಲಾರಂಭಿಸುತ್ತವೆ. ಧನದ ಚಿಂತೆ, ಗೃಹಕೃತ್ಯದ ಚಿಂತೆ, ಯೌವನ ಚಿಂತೆಯೇ ಮೊದಲಾದವು ಸಮಯಕ್ಕೆ ಮೊದಲೇ ಬಂದು ಜರಗಿ, ವಿದ್ಯಾವೃಕ್ಷವನ್ನು ಅಂಕುರದಲ್ಲೇ ಕಿತ್ತು ಹಾಕುತ್ತವೆ. ಆದ್ದರಿಂದ ಸ್ತ್ರೀ ವಿದ್ಯಾಭ್ಯಾಸವು ಪ್ರಚಾರವಾಗಬೇಕೆಂದು ನಮ್ಮ ಮನಸ್ಸಿನಲ್ಲಿದ್ದರೆ ಬಾಲಿಕಾ ವಿವಾಹ ಪದ್ಧತಿಯನ್ನು ನಾವು ಕ್ರಮೇಣವಾಗಿ ನಿಲ್ಲಿಸಬೇಕು. ನಮ್ಮ ಅಜ್ಜಂದಿರ ಕಾಲದಲ್ಲಿ ಹುಡುಗಿಯರಿಗೆ, ಏಳು ಎಂಟು ವರ್ಷದಲ್ಲಿಯೇ ಮದುವೆ ಮಾಡಿಕೊಡುತ್ತಿದ್ದರು. ಆದರೆ ಈಗ ಹತ್ತು ವರ್ಷದ ಮೊದಲು ಕೊಡುವದು ಕಡಿಮೆ. ಸದ್ಯಕ್ಕೆ ವಿವಾಹ ಪ್ರಾಯವನ್ನು ಎರಡು ಮೂರು ವರ್ಷ ಹೆಚ್ಚಿಸಿ ಕ್ರಮೇಣವಾಗಿ ಹದಿನೈದು ಹದಿನಾರು ವರ್ಷಗಳಿಗೆ ತಂದಿಟ್ಟರೆ ಅತ್ಯುತ್ತಮವೆಂದು ತೋರುತ್ತದೆ. ಈ ಬದಲಾವಣೆಯನ್ನು ನಾವು ಸ್ವೀಕರಿಸಿದರೆ ಬಾಲವಿವಾಹವು ನಿಂತುಹೋಗಿ, ಬಾಲಿಕೆಯರಿಗೆ ವಿದ್ಯೆಯನ್ನು ಹೊಂದಲಿಕ್ಕೆ ಹೇರಳವಾಗಿ ಸಮಯವು ದೊರಕುವದು. ಅವರದೇಹಪುಷ್ಟಿಯೂ ಯೋಗ್ಯವಾಗಿದ್ದು ಅವರಿಂದ ಜನಿಸುವ ಸಂತತಿಯು ಒಳ್ಳೆದಾಗದೇ ಇರಲಿಕ್ಕಿಲ್ಲ.

"ಸ್ತ್ರೀ ವಿದ್ಯಾಭ್ಯಾಸ ... ಜನರು ಮನಸ್ಸು ಕೊಡದೇ ಇರಲಿಕ್ಕೆ ... ಸ್ತ್ರೀಯರಿಗೆ ವಿದ್ಯೆಯನ್ನು ಕಲಿಸಿದರೆ ... ವೆಂದು ಅನೇಕರು ಭಾವಿಸುತ್ತಾರೆ. ... ಸಂಘಟಿಸ ... ವರು ಊಹಿಸುತ್ತಾರೆ. ... ಭಾವನೆಗಳು ...

ಹೊಂದುವದರಿಂದ ನಮ್ಮ ಹೆಂಗಸರಿಗೆ ದೊಡ್ಡ ಹುದ್ದೆಗಳು ಶಿಕ್ಕುವದಿಲ್ಲವೆಂಬ [illegible] ಪಂಡಿತಸಭೆಗಳಲ್ಲಿ ಅವರ ವಿದ್ಯಾಪ್ರಕಾಶವು ಮೆರೆಯುವದು ಅಸಾಧ್ಯ. ಆದರೆ ವಿದ್ಯೆಯಿಂದ ಅವುಗಳಿಗಿಂತಲೂ ಉತ್ತಮವಾದ ಇತರ ಪ್ರಯೋಜನಗಳು ಶಿಕ್ಕುವದಿಲ್ಲವೇ? "ವಿದ್ಯಾವಿಹೀನಃ ಪಶುಃ." ವಿದ್ಯೆಯಿಲ್ಲದಿದ್ದರೆ ಗಂಡಸರಾದರೂ, ಹೆಂಗಸರಾದರೂ ಪಶುಸಮರು. ವಿದ್ಯೆಯನ್ನು ಪಡೆಯುವ ಮುಖ್ಯ ಉದ್ದೇಶ್ಯ ಜ್ಞಾನ ಹೊಂದುವದೇ. ಜ್ಞಾನಸಂಪಾದನೆಗೆ ಗಂಡಸರಷ್ಟೇ ಹೆಂಗಸರೂ ಅರ್ಹರು. ವಿದ್ಯೆಯಿಂದ ಅವರ ಬುದ್ಧಿಶಕ್ತಿಯೂ ಮನಸ್ಸಿನ ಚಾತುರ್ಯವೂ ಹೆಚ್ಚುವವು. ಅವರು ಸನ್ಮಾರ್ಗದಲ್ಲಿಯೇ ಪ್ರವರ್ತಿಸುವರು, ನೀತಿಪರರಾಗುವರು. ವಿದ್ಯೆಯನ್ನು ಹೊಂದಿದ ಗಂಡಂದಿರಿಗೆ ಸಹಾಯಕರಾಗಿ ಪಡೆದ ಮಕ್ಕಳನ್ನು ಸನ್ಮಾರ್ಗದಲ್ಲಿ ನಡಿಸುವರು. ದೇಶೋನ್ನತಿಯಾಗಬೇಕಾದರೆ ಒಂದೇ ಭಾಗವು ಮುಂದರಿಸಿ ಇನ್ನೊಂದು ಬಹಳ ಹಿಂದೆ ಉಳಿಯ ಬಾರದು. ದೇಶವತ್ಸಲರಲ್ಲಿ ಕೆಲವರಾದರೂ ಸ್ತ್ರೀವಿದ್ಯಾಪ್ರಚಾರದಲ್ಲಿ [illegible]ರಾಗಿ ಸ್ತ್ರೀವಿದ್ಯಾಭ್ಯಾಸಕ್ಕೆ ತಕ್ಕ ಉತ್ತೇಜನವನ್ನು ಕೊಟ್ಟರೆ ನಮ್ಮ ದೇಶಕ್ಕೆ ಒಳ್ಳೇ ಪ್ರಯೋಜನಗಳು ಲಭಿಸದೇ ಇರಲಿಕ್ಕಿಲ್ಲ.

M. B. R.

ಸರ್ ಫಿರೋಜಷಹಾ ಮೆರ್ವಾಂಜಿ ಮೇಥಾ.

(೪ನೇ ಸಂಚಿಕೆಯಿಂದ ಮುಂದೆ ಸಾಗಿದ್ದು)

[illegible] ಜಿಜೀಭಾಯಿ [illegible]ವರು ವಿದ್ಯಾರ್ಥಿಗಳ ಅಶನಕ್ಕೋಸ್ಕರ ಕೆಲವು [illegible], ತಿಂಗಳ [illegible] ವಿದ್ಯಾರ್ಥಿಗಳಿಗೆ [illegible] ಕೊಡುವ ಪದ್ಧತಿಯನ್ನು [illegible]. [illegible] ಒಂದು [illegible]ಶಿಪ್ ಪಡೆದು ಇಂಗ್ಲಂಡಕ್ಕೆ [illegible]. [illegible] ಪ್ರಯೋಜನವನ್ನು [illegible] ಇಂಗ್ಲಂಡಕ್ಕೆ [illegible] 1865 [illegible] ಇಂಗ್ಲಂಡದಲ್ಲಿ [illegible] ಕ್ರಮಗಳಲ್ಲಿ [illegible] ಸಾಯಿಟಿ [illegible] ಪತ್ರವನ್ನು [illegible] ಪ್ರಾಯದಲ್ಲಿಯೇ [illegible] ತ್ತದೆ.

1868ನೇ ಇಸವಿಯಲ್ಲಿಯೇ [illegible] ಕ್ಕೆ ತೆರಳಿದರು, ಒಡನೆಯೇ ತಮ್ಮ ಉದ್ಯೋಗದಲ್ಲಿ [illegible] ಮಾಡಿದರು. 1873ನೇ ಇಸವಿಯಲ್ಲಿ [illegible]ಗಳು ಮೇಥರನ್ನು ತಮ್ಮ ಉದ್ಯೋಗದಲ್ಲಿ ಬಹಳ ಪ್ರಸಿದ್ಧಿ [illegible]. ಇದರಲ್ಲಿ ಇವರು ತೋರಿಸಿದ ಬುದ್ಧಿಚಾತುರ್ಯವೂ, ವಾಕ್ಚಾತುರ್ಯವೂ, [illegible] ಸಾಮರ್ಥ್ಯವೂ ಎಲ್ಲರಿಗೂ ತಿಳಿದು ಮೇಥರು ತಮ್ಮ ವೃತ್ತಿಯಲ್ಲಿ [illegible]ನವನ್ನು ಹೊಂದಲಿಕ್ಕೆ ಎಡೆಯಾಯಿತು. [illegible], ಬೊಂಬಾಯಿ [illegible] ಸ್ಥಾನದಲ್ಲಿಯ ದೊಡ್ಡ ದೊಡ್ಡ ವ್ಯವಹರಣೆಗಳನ್ನು ನಡಿಸಲಿಕ್ಕೆ [illegible] ಇದ್ದಾರೆ.

1871ನೇ ಇಸವಿಯಿಂದ ಮೇಥರು ಬೊಂಬಾಯಿ ಮುನಿಸಿಪಾಲಿಟಿಯಲ್ಲಿಯ ಕೆಲಸಕ್ಕೆ ಕೈಹಾಕಿದರು. 1872ನೇ ಇಸವಿಯಲ್ಲಿ ಇವರು ಮುನಿಸಿಪಾಲಿಟಿಯಲ್ಲಿ ಮೆಂಬರರಾಗಿ ನೇಮಿಸಲ್ಪಟ್ಟು ಮುನಿಸಿಪಾಲಿಟಿಯ ಕೆಲಸಗಳಲ್ಲಿ ಬಹಳ ಶ್ರಮಪಟ್ಟು, ಅದು ಒಳ್ಳೇ ರೀತಿಯಿಂದ ನಡೆಯಲಾರಂಭವಾಯಿತು. ಮೇಥರ ಪ್ರೇರಣೆಯಿಂದ, ಅವಶ್ಯವಾದ ಕೆಲವು ಬದಲಾವಣೆಗಳು ಬೊಂಬಾಯಿ ಮುನಿಸಿಪಾಲಿಟಿಯಲ್ಲಿ ಏರ್ಪಾಡಾದವು. ಮುನಿಸಿಪಾಲಿಟಿಯಲ್ಲಿ ಇವರು ನಡಿಸಿದ ಪ್ರಯೋಜನಕರವಾದ ಕೆಲಸಗಳಿಂದ, 1884ನೇ ಇಸವಿಯಲ್ಲಿ ಅದರ ಚೇರ್‌ಮನ್ ಪದವಿಯು ಇವರಿಗೆ ದೊರಕಿತು. ಅದೇ ಸ್ಥಾನಕ್ಕೆ ಅವರಿಗೆ ಇನ್ನೂ ಎರಡು ಸರ್ತಿ ನೇಮಕವಾಗಿದೆ. ಚೇರ್‌ಮನ್ ಆಗಿರುವಾಗ ಇವರಿಗೆ ಜಾಕಮ್ಮ ಕೆಲಸಗಳಿದ್ದರೂ ಅವೆಲ್ಲವನ್ನೂ ಶ್ರದ್ಧೆಯಿಂದ ನಡೆಸಿ, ಎಲ್ಲರ ಹೇಳಿಕೆ ಮೆರೆಯೂ, ಮೇಥರಷ್ಟು ಒಳ್ಳೇ ಚೇರ್‌ಮನ್‌ರು ಯಾರೂ ಇಲ್ಲವೆಂದು, ಬೊಂಬಾಯಿಯಲ್ಲಿ ಎಲ್ಲರೂ ಭಾವಿಸುತ್ತಾರೆ. ನಮ್ಮ ಯುವರಾಜರಾದ ಪ್ರಿನ್ಸ್ ಆಫ್ ವೇಲ್ಸರು ಹಿಂದುಸ್ಥಾನಕ್ಕೆ ಕಳೆದ ವರುಷ ದಯಮಾಡಿದ್ದಾಗ ಮೇಥರು ಮುನಿಸಿಪಾಲ್ ಪತ್ರವನ್ನು ಓದಿದರು. [illegible] ಬಹಳ ಮೆಚ್ಚಿದರು. [illegible]

ರಾಜ್ಯನೀತಿಯಲ್ಲಿ ಮೇಥರವರ್ಷ್ಟು ವಿಶಾರದರು ಇರುವದಲ್ಲಿ [illegible]. [illegible]ರೀಯವರು ಬೊಂಬಾಯಿಯಲ್ಲಿ ಗವರ್ನರರಾಗಿರುವಾಗ, ಬೊಂಬಾಯಿ ನ್ಯಾಯವಿಧಾಯಕಸಂಘದಲ್ಲಿ ಮೇಥರು ಮೆಂಬರರಾಗಿ ನೇಮಿಸಲ್ಪಟ್ಟಿರು. ಅಲ್ಲಿ ಮುನಿಸಿಪಾಲ್ ಆಕ್ಟು ಜನರಿಗೆ ಪ್ರಯೋಜನವಾಗುವಂತೆ ಇವರು ಪ್ರಯತ್ನಿಸಿದು, ಆ ಆಕ್ಟಿನಲ್ಲಿ ಅನೇಕ ಮುಖ್ಯವಾದ ಬದಲಾವಣೆಗಳನ್ನು ಏರ್ಪಾಡಿಗೆ ತಂದರು. ತದನಂತರ ವೈಸರಾಯರ ಲೆಜಿಸ್ಲೆಟಿವ್ ಕೌನ್ಸಿಲ್‌ನಲ್ಲಿಯೂ ನೇಮಕವಾಗಿ ಅಲ್ಲಿ ಗವರ್ನಮೆಂಟಿನವರ ನಿಬಂಧನೆಗಳಲ್ಲಿ ಸೂಕ್ಷ್ಮವಾದ ವಿಚಾರದಿಂದ ಗುಣದೋಷಗಳನ್ನು ತೋರಿಸಿದರು. ಗವರ್ನಮೆಂಟಿನವರ ಕಾರ್ಯಗಳಲ್ಲಿಯೂ ನಿಬಂಧನೆಗಳಲ್ಲಿಯೂ ದೋಷಗಳಿದ್ದರೆ, ಅವುಗಳನ್ನು ಧೈರ್ಯದಿಂದ ತೋರಿಸಲಿಕ್ಕೆ ವೈಸರಾಯರ ನ್ಯಾಯಸಂಘದಲ್ಲಿ ಸುರುಮಾಡಿದ್ದು ಮೇಥರೇ. ಜನರ ಪ್ರಯೋಜನಾರ್ಥವಾಗಿ ಗವರ್ನಮೆಂಟಿನವರ ಹತ್ತರ ಅನೇಕ ಸರ್ತಿ ಮೇಥರು [illegible]. ಅನೇಕ ಸರ್ತಿ ಜಯ [illegible]ವಾದರೂ [illegible], [illegible] ಎಳೆಯದೆ ಮೇಥರು ಹಿತಕಾರಿಯೂ ಹಿತಬೋಧಿಯೂ ಆಗಿದ್ದಾರೆ. ಇಂಡಿಯನ್ ನೆಷನಲ್ ಕೊಂಗ್ರೆಸ್ [illegible] ನಮ್ಮ ರಾಷ್ಟ್ರೀಯ [illegible]ವನ್ನು ಜನ್ಮಕ್ಕೆ ತಂದು ಅದನ್ನು ಇಷ್ಟರವರೆಗೆ [illegible] ಮಾಡಿದವರಲ್ಲಿ ಮೇಥರು [illegible]. ಮೇಥರಂಥ ಮಹಾನುಭಾವರು ಅನೇಕರು ನಮ್ಮ ಹಿಂದುಸ್ಥಾನದಲ್ಲಿ [illegible] ನಮ್ಮ ದುರ್ದೆಸೆಯನ್ನು [illegible] ನಮ್ಮ ದೇಶಕ್ಕೆ ಉನ್ನತಿಯನ್ನು [illegible] ಪ್ರಾರ್ಥಿಸುವೆವು.

M. B. R.

ಉತ್ತರ ಹಿಂದುಸ್ಥಾನದಲ್ಲಿಯ ದುಃಸ್ಥಿತಿ.

[illegible] ಹಿಂದುಸ್ಥಾನದ ವರ್ತಮಾನಗಳನ್ನು [illegible] ಪ್ರಜೆ [illegible] ಕರವಾದ [illegible] ಪ್ರಜೆಗಳ [illegible] ಪೂರ್ವ ಬಂಗಾಲ [illegible] ಉತ್ತರ ಹಿಂದುಸ್ಥಾನದಲ್ಲಿ [illegible] ಅನೇಕ [illegible] ದುಃಸ್ಥಿತಿಗಳನ್ನು [illegible] ಪ್ರಜೆಗಳಿಗೂ [illegible] ಇಂದ [illegible] ನೀತಿಯನ್ನು [illegible] ತಾವರೆ ತಮ್ಮ ತಮ್ಮ [illegible] ಮಾಡುವುದು [illegible] ಗಳೆಲ್ಲ [illegible] ಜಮಾಲಪುರದಲ್ಲಿ ನಡೆದ ಘೋರ ಹಿಂದು ಮುಸಲ್ಮಾನರ ಕಲಹಗಳು ಬ್ರಿಟಿಷ ರಾಜ್ಯಪಾಲನೆಗೆ ಕುಂದುಕಾರಕ [illegible] ಮುಸಲ್ಮಾನರು ಹಿಂದುಗಳ ಮನೆಗಳನ್ನೂ ಅಂಗಡಿಗಳನ್ನೂ ಲೂಟಿಮಾಡಿದರಂತೆ. ಹಿಂದೂ ಸ್ತ್ರೀಯರು ಮಾನಭಂಗವನ್ನು ತಾಳಲಾರದೆ ಕೆರೆ ನದಿಗಳಲ್ಲಿ ಆತ್ಮಹತ್ಯೆ [illegible] ತಮ್ಮ ಎದ್ದೆಯಾದ ವಸ್ತ್ರಗಳ ಸಹಿತ ಹತ್ತರವಿರುವ ಹಳ್ಳಿಗಳಿಗೆ ಓಡಿದರು. ಹಿಂದುಗಳ ಕಾಳಿ [illegible] ವಿಗ್ರಹವನ್ನು ಒಡೆದಿರುವರು. ಮುಸಲ್ಮಾನರು ಮಾಡಿದ ಪ್ರಮಾಣ [illegible]. ಈ ಭಯಂಕರ ಕಲಹಗಳನ್ನು ವಿವರಿಸುವರೆ ಸಾಧ್ಯವಲ್ಲ. ಶಾಲೆಗಳೆಲ್ಲಾ ಈ ಗದ್ದಲಗಳಿಂದ ಮುಚ್ಚಿರುವವು. ಆಯಾ ಪ್ರಾಂತ್ಯಗಳ ವರ್ತಮಾನ ಪತ್ರಗಳ ಮುಖಾಂತರ ತಿಳಿದಂಥಾ ಈ ವರ್ತಮಾನಗಳೆಲ್ಲವೂ ಪೂರ್ಣ ನಿಜವಲ್ಲವೆಂತಂದರೂ, ಅನೇಕ ತರದ ಅಕೃತ್ಯಗಳು ನಡೆದಿರುವವೆಂಬುದು ನಿಜವು. ಸರಕಾರದವರು ಹೀಗೆ ದಂಗೆಗಳನ್ನು ಮಾಡುವ ಮುಸಲ್ಮಾನರ ಪಕ್ಷದಲ್ಲಿರುವರೆಂಬ ಭಾವನೆಯು ಹಿಂದುಗಳೊಳಗೆ ದಿನೇ ದಿನೇ ಹೆಚ್ಚಾಗಿ ವ್ಯಾಪಿಸುವದು. ಈ ವರ್ತಮಾನವೆಲ್ಲವೂ ಬರೇ ವರ್ತಮಾನವಾಗುತ್ತಿದ್ದರಾಗಬಹುದಿತ್ತು! ಇವೆಲ್ಲವೂ ನಡದಂಥಾ ಸಂಗತಿಗಳಾದ ಪಕ್ಷಕ್ಕೆ ಈ ಕಲಹಗಳೆಲ್ಲಾ ಹ್ಯಾಗೆ ಪರಿಣಮಿಸುವವು?

ರಾವಲ್ ಪಿಂಡಿಯಲ್ಲಿ ನಡದ ಸಂಗತಿಗಳು ದೇಶಾಭ್ಯುದಯವನ್ನು ಸಾಧಿಸುವ ಅಭಿಮಾನಿಗಳೆಲ್ಲರನ್ನೂ ತಲ್ಲಣಗೊಳಿಸುವವು. ಲಾಲಾ ಲಾಜಪತ್‌ರೈ ಇವರನ್ನು ಗವರ್ನರಜನರಲರಾದ ಲೋರ್ಡ ಮಿಂಟೋ ಪ್ರಭುಗಳ ಅಪ್ಪಣೆ ಮೇರೆಗೆ ಗಡಿಪಾರು ಮಾಡಿರುವರು. ಯಾವ ಸದ್ಕಾರ್ಯ ಇವರಿಗೆ ಈ ಶಿಕ್ಷೆಯು ವಿಧಿಸಲ್ಪಟ್ಟಿತೆಂಬದು ಯಾರಿ

[illegible] ಅವರನ್ನು ಪತ್ರವನ್ನು ವಹಿಯಿಂದ [illegible] ಜೆಸ್ಟೆರು [illegible] ಅವರಿಗೆ ಓದಿ ಹೇಳಿ ಅವರನ್ನು ಏಲ್ಲಿಗೆ ಗಡಿಪಾರು ಮಾಡಿದರೆಂಬದು ಯಾರಿಗೂ ತಿಳಿಯದು. ಸನ್ನಾಗರಿಕರೂ ಶೀಲಿನ್ಯಾಯಪ್ರಿಯರೂ ಎಂದು ಈ ವರೆಗೆ ಹೆಸರುಗೊಂಡ ಬ್ರಿಟಿಷರ ಹಿಂದುಸ್ಥಾನದ ರಾಜ್ಯಾಧಿಪತ್ಯದ ಚರಿತ್ರೆಯಲ್ಲಿ ಇಂತಹ ಕ್ರೂರ ಕೃತ್ಯವು ಈ ವರೇಗೆ ಸಂಭವಿಸಲಿಲ್ಲ. ಒಂದು ಸಲ ಫ್ರೈಯಿಂದ ನಾಥು ಅಣ್ಣಾ ವರ್ಮೊಂದಿಯರಿಗೆ ಈ ತರದ ಶಿಕ್ಷೆಯನ್ನು ವಿಧಿಸಿದ್ದರೂ ಇದು ಬೇರೆ ಸಬಬುಗಳ ಮೇಲೆ ಆಗಿತ್ತು. ಇನ್ನು ಹೀಗೆ ಎಷ್ಟು ಜನ ಪ್ರಜಾನಾಯಕರನ್ನು ಶಿಕ್ಷಿಸುವರೋ? ಅಧಿಕಾರವು ಬಲಹೀನರನ್ನು ರಕ್ಷಿಸುವದಕ್ಕೋಸ್ಕರ ಹೊರತು ಪೀಡಿಸುವದಕ್ಕೋಸ್ಕರ ಅಲ್ಲ. ಪ್ರಜೆಗಳು ತಮ್ಮ ಸಂಕಷ್ಟಗಳನ್ನು ಎಷ್ಟು ಸಲ ಸರಕಾರದವರ ಗೊತ್ತಿಗೆ ತಂದರೂ ಈ ಸಂಕಷ್ಟಗಳನ್ನು ಗವರ್ನಮೆಂಟಿನವರು ಲಕ್ಷ್ಯಿಸದೆ ಕೇವಲ ಸ್ವಾರ್ಥಪರರಾಗಿ ಹೀಗೆ ವರ್ತಿಸುವದು ದಾವರಿಗೆ ಶ್ರೇಯಸ್ಕರವಲ್ಲ.

ಪಂಜಾಬ ನ್ಯಾಯವಿಧಾಯಕ ಸಭೆಯಲ್ಲಿ 'ಲೆಂಡ ಕೊಲೊನಿಜೇಷನ್ ಬಿಲ್' ಎಂಬ ಹೊಸ ಕಾನೂನನ್ನು ಜಾರಿಗೆ ತಂದಿರುವರು. ಪ್ರಜೆಗಳು ಆ ಹೊಸ ಕಾನೂನು ತಮಗೆ ಕ್ಲೇಶಕರವಲ್ಲವೆಂತ ಎಷ್ಟು ವಾದಿಸಿದರೂ ಜನರ ಅಭಿಪ್ರಾಯವನ್ನು ಲಕ್ಷ್ಯಕ್ಕೆ ತರಲಿಲ್ಲ. ಪ್ರಜೆಗಳು ಆ ಅಂಶದಿಂದ ಈ ಬಿಲನ್ನು ವಜಾಮಾಡಬೇಕೆಂದು [illegible] ಸಭೆ ಕೂಡಿ ಈ ವಿಷಯ ಕಳಕಳಿಸುವರು. ಕಳೆದ ತಿಂಗಳ ತಾರೀಖು 21ರಲ್ಲಿ ಕೂಡಿದ ಸಭೆಯಲ್ಲಿ ಅನೇಕ ಜನ ಪ್ರಜಾನಾಯಕರು [illegible] ಸರಕಾರದವರು ಹೆಚ್ಚಿಸಿರುವರೆಂಥೂ ಇನ್ನೂ ಹಲವು ವಿಷಯ [illegible] ಗಳನ್ನು ಕೊಟ್ಟರು. ತಾರೀಖು 30ಕ್ಕೆ ಅಲ್ಲಿಯ ಡಿಪ್ಯುಟಿ ಕಮಿಶನರು ಈ [illegible] ಲ್ಲಿ ನೆರೆದ ಜಮೀನುದಾರರಿಗೂ ವಕೀಲರಿಗೂ ಅಲ್ಲಿ ಮಾಡಿದ ಭಾಷಣಗಳು [illegible] ಹಪರವಾದ್ದರಿಂದ ಈ ತಿಂಗಳ ತಾ 2ಕ್ಕೆ ತನ್ನ ಆಫೀಸಿನಲ್ಲಿ [illegible] ಕೆಂತ ನೋಟೀಸು ಕೊಟ್ಟರು. ಪ್ರಜಾ ಮುಖಂಡರ ಡಿಸ್ಟ್ರಿಕ್ಟ ಮೆಜಿಸ್ಟ್ರೇಟ [illegible] ಪ್ರಕಾರ ಹಾಜರಾದರು. ಅಂಗಡಿಗಾರರೂ ಕಾಯಿಪಲ್ಯ ಮಾರುವವರೂ [illegible] ಸರವರೂ [illegible] ಕೆಲಸದವರೂ ತಮ್ಮ ತಮ್ಮ ಕೆಲಸಗಳನ್ನು ಬಿಟ್ಟು [illegible] ಟಿನಲ್ಲಿ ನೆರೆದಿದ್ದರು. ಎಲ್ಲಾ ಕಡೆಗಳಲ್ಲಿಯೂ [illegible] ತರದ ವ್ಯಾಪಾರಗಳೂ ಆ ದಿವಸ ನಡೆಯಲಿಲ್ಲ. ಹೆಚ್ಚು ಕಡಿಮೆ [illegible] ಆ ದಿವಸ ಕೋರ್ಟಿನಲ್ಲಿ ನೆರೆದಿದ್ದರು. ಡಿಸ್ಟ್ರಿಕ್ಟ ಮೆಜಿಸ್ಟ್ರೇಟರು ಆಫೀಸಿಗೆ ಬಂದೊಡನೆಯೇ 'ವಂದೇ ಮಾತರಂ' ಎಂದು ನೆರೆದವರೆಲ್ಲರೂ [illegible] ಆ ದಿವಸ ತನಖಿ ನಡಿಸುವದಿಲ್ಲವೆಂತ ಹೇಳಿದರೂ ಆ ಜನಸಮೂಹ [illegible] ಅದೇ ಸಾಯಂಕಾಲ ಲಾಲಾ ಲಾಜಪತರಾಯರವರು ಈ [illegible] ರೆಂಬ ಸಿಥ ರವನ್ನು ಅವರಿಗೆ ಹೇಳಿದ ಮೇಲೆ ಜನರೆಲ್ಲರೂ [illegible] ಅದೇ ದಿವಸ ಯುರೋಪಿಯನ್ ಸಿವಿಲ್ ಆಫೀಸರರ ವಸ್ತಿಗಳಲ್ಲಿ [illegible] ರಂತೆ ಕೂಡಲೇ ಮಿಲಿಟರಿಯ ಸಹಾಯದಿಂದ ಪ್ರಜಾನಾಯಕರಲ್ಲಿ ಅನೇಕರನ್ನು ಕೈದುಮಾಡಿರುತ್ತಾರೆ. ತದನಂತರ ಲಾಲಾ ಲಾಜಪತರಾಯರ ಮೇಲೆ ವಿಧಿಸಿದ ಶಿಕ್ಷೆಯು ಮೊದಲೇ ತಿಳಿಸಿರುತ್ತೇವೆ. ಇನ್ನೇನು ಆಗಲಿಕ್ಕಂದಿದೆಯೊ?

ಜಪಾನ ಚರಿತ್ರೆಯಲ್ಲಿ ಭಾರತೀಯರು ಲಕ್ಷ್ಯಕ್ಕೆ ತರಬೇಕಾದ ಅಂಶಗಳು.

ಹೆಚ್ಚು ಕಡಿಮೆ ನಾಲ್ವತ್ತು ವರುಷಗಳ ಮೊದಲು [illegible] ಇತ್ತೆಂದು ಭೂಗೋಳ ಶಾಸ್ತ್ರವನ್ನು ಕಲಿತವರಿಗೆ ಗೊತ್ತಿತ್ತು ವಿನಹಾ ಬೇರೆ ಯಾರಿಗೂ ಜಪಾನವೆಂದರೆ ಏನೆಂದು ಗೊತ್ತಿರಲಿಲ್ಲ. 35 ವರುಷಗಳ ಮೊದಲು ಅದು ಕೆಲವು ಜನ ತುಂಡು ಪಾಳೆಗಾರರ ಒಂದು ಊರಾಗಿತ್ತು. ಈ ತುಂಡು ಪಾಳೆಗಾರರು ಹೇರಳ ಐಸ್ತಿವಂತರಾಗಿದ್ದರು. ಕ್ರಮೇಣ ಇವರು ಈ ತಮ್ಮ ಜೀವನವು ಸಾರ್ಥಕವಲ್ಲವೆಂತ ತಿಳಿದು ತಮ್ಮ ಪಾಳೆಗಾರರ ವೃತ್ತಿಯನ್ನು ಬಿಟ್ಟು [illegible] ಸರ್ವಸಾಧಾರಣರೇ ಎಂಬ ಭಾವನೆಯಿಂದ [illegible] ತಮ್ಮನ್ನು ಆಧರಿಸಿದ [illegible] ಅಭಿವೃದ್ಧಿಯನ್ನು ಸಾಧಿಸಿದರು. ಆಯಾ [illegible] ಕೈಕೆಳಗೆ [illegible] ಅವರವರು [illegible] ಕೊಟ್ಟರು. 1872ರ ವರೇಗೆ ಈ ದೇಶದಲ್ಲಿ [illegible] ವರುಷದಿಂದ ಪ್ರತಿ ಒಬ್ಬ [illegible] ರ್ಥವಾಗಿ ಯಾವ ಕಾಲದಲ್ಲಿಯೂ ಯುದ್ಧಕ್ಕೆ ಸನ್ನದ್ಧನಾಗುವ ಹಾಗೆ ಸೇನಾವೃತ್ತಿಯನ್ನು ಕಡ್ಡಾಯವಾಗಿ ಮಾಡಿದರು. ಪ್ರಸ್ತುತ ಪ್ರತಿಯೊಬ್ಬ ಜಪಾನೀಯನು ತನ್ನ ದೇಶವನ್ನು ವೈರಿಗಳಿಂದ ರಕ್ಷಿಸ ಬಲ್ಲನು. 1870ನೇ ಇಸವಿಯ ಮೊದಲು ಜಪಾನಿನಲ್ಲಿ ರೈಲು ಮಾರ್ಗಗಳು ತಂತೀ ಟಪ್ಪಾಲು ಇರಲಿಲ್ಲ. ಸುರುವಿನಲ್ಲಿ ತಂತೀ ಟಪ್ಪಾಲಿನ ಸರಿಗೆಗಳನ್ನು ಸೋಡಿ ಮೂಢತನದಿಂದ ಕಡಿದು ಬಿಟ್ಟರು. 1879ನೇ ಇಸವಿಯೊಳಗೆ ತಂತೀ ಟಪ್ಪಾಲು ಹಾಗೂ ರೈಲ್ವೆ ಮಾರ್ಗವು ಹೊಸ್ತಾಗಿ ರಚನೆಗೆ ಬಂದವು. ವ್ಯಾಪಾರವು ಸಹಾ ಕ್ರಮೇಣ ಹೆಚ್ಚುತ್ತಾ ಬಂತು. ಹತ್ತಿಪ್ಪತ್ತು ವರುಷಗಳ ಮೊದಲು ಚೀನಾದೇಶದ ಭಾಷೆಯನ್ನು ಕೆಲವರು ಕಲಿತುಕೊಂಡಿದ್ದರು. ಜಪಾನದೇಶದಲ್ಲಿ ಈಗ ಸಾಧಾರಣ 100ರಲ್ಲಿ 90 ಜನರಿಗೆ ಬರಹ ಗೊತ್ತಿರುವದು. ಸ್ತ್ರೀ ವಿದ್ಯಾಭ್ಯಾಸವು ಸಹಾ ವಿಶೇಷ ಪ್ರಚಾರಕ್ಕೆ ಬಂದಿರುವದು. ಸರ್ವಸಾಧಾರಣರೆಲ್ಲರೂ ವಿದ್ಯಾವಂತರಾಗಿರುವದರಿಂದ ಕೀಳು ಮೇಲು ಜಾತಿಗಳ ಪರಸ್ಪರ ದ್ವೇಷವು ಜಪಾನದೇಶದಲ್ಲಿಲ್ಲವೆನ್ನಬಹುದು. ಪ್ರಜೆಗಳು ತಮಗೆ ಯುಕ್ತಕಂಡ ಮತವನ್ನನುಸರಿಸಬಹುದು. 1869ರಲ್ಲಿ ಜಪಾನ ದೇಶದಲ್ಲಿ ವರ್ತಮಾನಪತ್ರಗಳು ಪ್ರಚಾರಕ್ಕೆ ಬಂದವು. ಅಂದಿನಿಂದ ಪ್ರಜೆಗಳೆಲ್ಲರೂ ರಾಷ್ಟ್ರೀಯ ಶಿಕ್ಷಣವನ್ನು ಈ ಪತ್ರಗಳ ಮುಖಾಂತರ ಹೊಂದಿ ಎಲ್ಲರೂ ದೇಶಾಭಿವೃದ್ಧಿಯಲ್ಲಿ ನಿರತರಾಗಿರುವರು.

1877ರಲ್ಲಿ ಜಪಾನ ದೇಶೀಯರು ತಮಗೆ ಸಹಾ ರಾಜ್ಯಭಾರದಲ್ಲಿ ಪಾಲು ಕೊಡಬೇಕೆಂತ ಚಕ್ರವರ್ತಿಯವರನ್ನು ಬೇಡಿದರು. 1881ರಲ್ಲಿ ಪ್ರಜಾಪ್ರತಿನಿಧಿ ಸಭೆಯು ಸ್ಥಾಪಿಸಲ್ಪಟ್ಟಿತು. ಕ್ರಮೇಣ ರಾಜ್ಯಾಧಿಕಾರಕ್ರಮವೆಲ್ಲವೂ ಪಾಶ್ಚಾತ್ತ ರಾಜ್ಯಗಳಂತೆಯೇ ಜಪಾನದಾಯಿತು. 1853ನೇ ವರುಷದ ವರೇಗೆ ಅನ್ಯ ದೇಶಸ್ಥರನ್ನು ಜಪಾನೀಯರು ಸೇರಿಸುತ್ತಿರಲಿಲ್ಲ. ಇತ್ತಲಾಗೆ ಈ ಚಕ್ರವರ್ತಿಯ ಆಳುವಿಕೆಯಲ್ಲಿಯೇ ಅನ್ಯದೇಶಸ್ಥರು ಜಪಾನಿನಲ್ಲಿ ಬಳಕೊಂಡು ವ್ಯಾಪಾರ ಮುಂತಾದವುಗಳನ್ನು ಮಾಡಬಹುದೆಂತಾಯಿತು. ಜಪಾನೀಯರೂ ಸಹ ಪಾಶ್ಚಾತ್ತ ದೇಶಗಳಿಗೆ ಹೋಗಿ ಅಲ್ಲಿಯ ಕಲಾಕೌಶಲಗಳನ್ನು ಕಲಿತು ತಮ್ಮ ದೇಶದಲ್ಲಿ ಸಹಾ ಪಾಶ್ಚಾತ್ತ ದೇಶದ ಉಪಾಧ್ಯಾಯರನ್ನು ತಂದು ನಿಲ್ಲಿಸಿ ಅವರಿಂದ ಸರ್ವವನ್ನೂ ಕಲಿತು, ಈಗ ಪಾಶ್ಚಾತ್ತರ ಸಮಬಲಗಳಾಗಿರುತ್ತಾರೆ. ಪೌರ್ವಾತ್ಯ ಜನಾಂಗಗಳು ಪಾಶ್ಚಾತ್ತರೊಡನೆ ಹೋರಾಡಲಶಕ್ತರೆಂಬ ಯುರೋಪಿಯ ಬುದ್ಧಿವಂತರ ಸಿದ್ಧಾಂತವನ್ನು ಜಪಾನೀಯರು ಅಲ್ಲಗಳೆದರು.

ಪೌರ್ವಾತ್ಯ ಜನಾಂಗಗಳೆಲ್ಲರೂ ಜಪಾನೀಯರ ಪೌರುಷವನ್ನು ರುಶ್ಯ ಜಪಾನ ಯುದ್ಧದಲ್ಲಿ ನೋಡಿ ತಾವು ಸಹಾ ಕ್ರಮೇಣ ಜಪಾನರನ್ನನುಸರಿಸಿ ತಮ್ಮ ತಮ್ಮ ದೇಶ ಏಳ್ಗೆಯನ್ನು ಸಾಧಿಸಬೇಕೆಂಬ ಕುತೂಹಲವು ಇವರೆಲ್ಲರಲ್ಲಿಯೂ ಉದಯಿಸಿರುವದು. ಜಪಾನ ದೇಶದ ಚರಿತ್ರೆಯನ್ನು ಪೌರ್ವಾತ್ಯ ಜನಾಂಗಗಳ ಆಯಾ ಭಾಷೆಗಳಲ್ಲಿಯೂ ಇಂಗ್ಲೀಷ ಭಾಷೆಯಲ್ಲಿಯೂ ತರ್ಜುಮೆ ಮಾಡಿ ಪುಸ್ತಕಗಳನ್ನು ರಚಿಸಿ ಆಯಾ ಜನಾಂಗದವರೆಲ್ಲರೂ ಪಠಿಸುತ್ತಿರುವರು.

ಪ್ರತಿಯೊಬ್ಬ ಭಾರತೀಯನು ಈ ಜಪಾನೀಯರ ಚರಿತ್ರೆಯನ್ನು ತಮ್ಮ ಮೇಲು ಪಂಕ್ತಿಯಾಗಿಟ್ಟುಕೊಂಡು ಅವರು ನಡೆದಂತೆಯೇ ನಡೆದರೆ ಹಿಂದುಸ್ಥಾನದ ಏಳಿಗೆಯು ತನ್ನಷ್ಟಕ್ಕೇನೇ ಮುಂದುವರಿಯುವದು! ಜಪಾನೀಯರಂತೆಯೇ ನಾವು ಸಹಾ ನಮಗೆ ನಮ್ಮ ಜೀವನಾಂಶದಲ್ಲಿ ಪ್ರಯೋಜನಕ್ಕೆ ಬೀಳುವ ವಿದ್ಯಾಭ್ಯಾಸಂಗಳನ್ನು ಮಾಡಬೇಕು. ಕೈಗಾರಿಕೆ ವ್ಯವಸಾಯಗಳನ್ನು ಕುರಿತು ನಾವು ಚಿಕ್ಕಂದಿನಿಂದಲೇ ಕಲಿಯಬೇಕು. ಜಪಾನೀಯರು ವ್ಯಾಪಾರ ಕೈಗಾರಿಕೆಗಳಿಂದ ದೇಶಗಳನ್ನು ಜಯಿಸುವದು ಸುಲಭವೆಂದು ತಿಳಿದು ಪ್ರಥಮದಲ್ಲಿಯೇ ಈ ಸೂತ್ರಕ್ಕೆ ಅನುಸಾರವಾಗಿ ವರ್ತಿಸಿದರು.

ಸ್ತ್ರೀ ವಿದ್ಯಾಭ್ಯಾಸವನ್ನು ಸಹಾ ಜಪಾನೀಯರಂತೆಯೇ ನಾವು ಹೆಚ್ಚಾಗಿ ಕೈಕೊಳ್ಳಬೇಕು. ಯಾಕಂದರೆ ಮುಂದಿನ ಜನಾಂಗದ ಅಭ್ಯುದಯವು ಮಾತೆಯರನ್ನನುಸರಿಸಿರುವದು. ಪ್ರಜೆಗಳಲ್ಲಿ ಐಕತ್ವವೂ ಪರಸ್ಪರ ಅನುರಾಗವೂ ಉಂಟಾಗಬೇಕಾದರೆ ನಾವು ಮೂಲದಲ್ಲಿ ಜಪಾನೀಯ ಜಮೀನದಾರರು ಹ್ಯಾಗೆ ತಮ್ಮ ರೈತವರ್ಗವನ್ನು ಬಲಪಡಿಸಿದರೋ ಹಾಗೆಯೇ ನಮ್ಮ [illegible] ಕೀಳು ವರ್ಗದವರನ್ನೂ ನಮ್ಮ ಕೈಕೆಳಗಿರುವವರನ್ನೂ ತುಚ್ಛೀಕರಿಸದೆ, ಅವರು ಕೀಳು [illegible] ದವರಲ್ಲಿ ಉಂಟಾಗದ [illegible] ಳುವರ್ಗದವರೆಲ್ಲರಿಗೂ ಒಳ್ಳೇ ಶಿಕ್ಷಣವನ್ನು [illegible] [illegible]

...ಪ್ರತ್ಯಕ್ಷವಾಗಿ ಸಾಧಿಸದ ಸರ್ವತ್ರವೂ ಕೈಗೊಳ್ಳಲು ... ಸವೆಲ್ಲದ ಅಧಿಕಾರಗಳಿಗೆ ನಿವಾರಣೆ.

ಪತ್ರವ್ಯವಹಾರ.

ಅಧ್ಯಕ್ಷ ಮಹಾಶಯರೇ,

ಆಂಗ್ಲೆಯರ ವಿದ್ಯಾ ವಿಚಾರ ನಡತೆ ಮೊದಲಾದವುಗಳೇ ಕಾರಣವಾಗಿ ನಮ್ಮ ದೇಶ ಬಾಂಧವರಲ್ಲಿ ಈಚೇಚೆಗೆ ಸ್ವದೇಶಾಭಿಮಾನದ ಕುರಿತು ಒಂದು ವಿಧದ ವಿಚಾರ ಪರಾಮರ್ಶೆ ಉಂಟಾಗಿರುವದು ನ್ಯಾಯವಾದದ್ದೇ. ಇದಕ್ಕನುಸಾರವಾಗಿ ನಾವು ಈ ವರೇಗೆ ಉಪಯೋಗಿಸುತ್ತಿದ್ದ ನಮ್ಮ ನಿತ್ಯಕಟ್ಟಳೆಯ ಅವಶ್ಯಕತೆಗಳಾದ ಸಾಮಗ್ರಿಗಳನ್ನು ಪರದೇಶಗಳಿಂದ ತರಿಸಿಕೊಳ್ಳುವ ಬದಲಿಗೆ ನಮ್ಮ ದೇಶದೊಳಗೇನೇ ಅಂಥವುಗಳ ಕೈಗಾರಿಕೆಗೆ ಉತ್ತೇಜನ ಪಡಿಸುವದರಿಂದ ಅನ್ಯಥಾ ಪರದೇಶದ ಜನಗಳಿಗೆ ದೊರಕುವ ಲಾಭವು ನಮ್ಮ ದೇಶದವರಲ್ಲಿಯೇ ಉಳಿಯುವದು. ಹಿಂದುಸ್ಥಾನದ ಎಲ್ಲಾ ಭಾಗಗಳಲ್ಲಿಯೂ ಸ್ವದೇಶಿ ಎಂತಲೂ ಸ್ವದೇಶಾಭಿಮಾನ ಸೂಚಕ ಇತರ ಅನೇಕ ಹೆಸರುಗಳಿಂದಲೂ ಪ್ರಸಿದ್ಧಿ ಹೊಂದಿದ ಈ ಹೊಸ ಆಲೋಚನೆಯು ಕ್ರಮೇಣ ಜನರ ಮನಸ್ಸಿನಲ್ಲಿ ನೆಲೆಗೊಳ್ಳುತ್ತಲಿದೆ.

ಈ ಸಮಯ ಚಿರಕಾಲ ನೆನಪಿನಲ್ಲಿ ಇರಲಿಕ್ಕಾಗಿ ನಮ್ಮ ಪರಸ್ಪರ ಕಾಗದ ಪತ್ರವ್ಯವಹಾರಗಳಲ್ಲಿ ಈ ವರೇಗೆ ಉಪಯೋಗಿಸುತ್ತಿದ್ದ ವಿನಂತಿ, ನಮಸ್ಕಾರ, ಸಲಾಂ, ಇತ್ಯಾದಿ ಶಬ್ದಗಳ ಬದಲಿಗೆ ವಂದೇ ಮಾತರಂ ಎಂಬ ಸ್ವದೇಶಾಭಿಮಾನ ಸೂಚಕವಾದ ಶಬ್ದವನ್ನು ಉಪಯೋಗಿಸುವದು ಯೋಗ್ಯವೆಂತ ತೋರುತ್ತದೆ. ವಾಚಕ ಮಹಾಶಯರು ಇದರ ಯುಕ್ತಾಯುಕ್ತತೆಗಳನ್ನು ಗ್ರಹಿಸಿಕೊಳ್ಳುವರಾಗಲಿ.

ಪಾಣೆಮಂಗಳೂರು, ತಾ. 10–5–'07. — ವಂದೇ ಮಾತರಂ

ಒಳ್ಳೇ ಸಂದರ್ಭ! ಬಿಡಬೇಡಿರಿ!! ಬಿಡಬೇಡಿರಿ!!!

ಕುಂಬಳೆ ಕೆನರಾ ವೀವಿಂಗ್ ಕಂಪೆನಿಗೆ ಒಬ್ಬ ಶೀಘ್ರ ... ಮತ್ತು ಕರೆಸ್ಪೊಂಡೆನ್ಸ್ ಮಾಹಿತಿಯುಳ್ಳ ಒಬ್ಬ ಗುಮಾಸ್ತನು ಬೇಕಾಗಿರುವನು. ತಲಬು 10ರಿಂದ 15ರ ರೂಪಾಯಿ ವರೇಗೆ ದೊರೆಯಬಹುದು. ಅಪೇಕ್ಷೆ ಇದ್ದವರು ಕೆಳಗಿನ ವಿಳಾಸಕ್ಕೆ ಬರೆದು ಎಲ್ಲಾ ವಿಷಯ ತಿಳಕೊಳ್ಳಬಹುದು. ಗೌಡಸಾರಸ್ವತರು ಸಿಕ್ಕಿದರೆ ಅತ್ಯುತ್ತಮ.

ವಿಳಾಸ —

ಮೆನೇಜರ್,
ಕೆನರಾ ವೀವಿಂಗ್ ಕಂಪೆನಿ
ಕುಂಬಳೆ
ದಕ್ಷಿಣ ಕನ್ನಡಾ

R. M. KAMATH'S

SWADESHI BLUE BLACK INK POWDER

ಆರ್. ಯಂ. ಕಾಮತ್.

ಇವರ ಸ್ವದೇಶಿ ಕಪ್ಪುಶಾಯಿ ಹುಡಿ, ಕಟ್ಟು 1ಕ್ಕೆ 3ಪೈ

ಈ ಹುಡಿ ಬಿಸೀ ನೀರಿನಲ್ಲಿ ಹಾಕಿದ ಕೂಡಲೇ ಉತ್ತಮವಾದ ಶಾಯಿ ಆಗುತ್ತದೆ. ಹೆಚ್ಚಿಗೆ ತರಿಸಿಕೊಳ್ಳುವವರಿಗೆ ಒಳ್ಳೇ ಕಮ್ಮಿಶನ್ ಸಿಕ್ಕುವದು. ಈ ಶಾಯಿಯ ಕಟ್ಟುಗಳನ್ನು ಒಂದೇ ಸಲ 250ಕ್ಕೆ ಕಡಿಮೆಯಾಗದಂತೆ ತರಿಸಿಕೊಳ್ಳುವವರಿಗೆ ಬಹಳ ಕಮ್ಮಿ ಕ್ರಯಕ್ಕೆ ಸಿಕ್ಕುವದು.

ಬೇಕಾದವರು ಕೆಳಗಿನ ವಿಳಾಸಕ್ಕೆ ಬರದ್ದಲ್ಲಿ ಕ್ರಯದ ವಿಲೇವಾರಿ ತಿಳಿಸಲಾದೀತು.

ಸುಗಂಧನಾಶಿಕ ಚೂರ್ಣ—ಶೀಸೆ 1ಕ್ಕೆ 0–4–0. 12ಶೀಸೆ ಒಂದೇ ಸಲ ತರಿಸಿಕೊಳ್ಳುವವರಿಗೆ ರೂ. 2–4–0ಕ್ಕೆ ಸಿಕ್ಕುವವು. ಇದು ತಲೆಶೂಲಿ ಇತ್ಯಾದಿಗೆ ಅತೀ ಉತ್ತಮವಾದದ್ದು.

ಗಂಡಮಾಲೆಗೆ ಸೌಗಂಧೀ ತೈಲ ಬಹಳ ಉತ್ತಮವಾದದ್ದು. ಗುಳ್ಳೆಗಳು ಇದ್ದರೂ ಇರಲಿ, ಅಥವಾ ವ್ರಣ ಉಂಟಾದಿದ್ದರೂ ಇರಲಿ, ಹೊರಗಿನಿಂದ ಹಚ್ಚಿಸಿಕೊಂಡಲ್ಲಿ ಗುಣವಾಗುತ್ತದೆ. ಈ ಎಣ್ಣೆ ಉಪಯೋಗಿಸಿಕೊಂಡವರಲ್ಲಿ ಗಂಡಮಾಲೆ ಗುಣವಾಗದೇ ಇದ್ದವರು ಒಬ್ಬರೂ ಇಲ್ಲ. ಶೀಸೆ 1ಕ್ಕೆ 0–12–0 ಒಂದೇ ಸಲ 6 ಶೀಸೆ ತರಿಸಿಕೊಳ್ಳುವವರಿಗೆ 1 ಶೀಸೆ ಉಚಿತವಾಗಿ ಸಿಕ್ಕುವದು.

ಪುಯಿಂಕೇಲ್ ತೈಲ—ಶೀಸೆ 1ಕ್ಕೆ 1–0–0 ಅರ್ಧ ಶೀಸೆಗೆ 0–8–0. ಇದು ಮುಖ್ಯವಾಗಿ ಮೇಹ ಇತ್ಯಾದಿಗಳಿಂದ ಉಂಟಾದ ಸಕಲ ತರದ ವ್ರಣಗಳಿಗೆ ಶ್ರೇಷ್ಠವಾದ ಮದ್ದು ಅಲ್ಲದೆ ವಾತದ ನೋವು, ಪೆಟ್ಟು ತಾಗಿದ ನೋವು ಉಳುಕು ಇತ್ಯಾದಿಗಳಿಗೆ ಸಹಾ ಉಪಯೋಗಿಸ ಬಹುದು.

ಸುಗಂಧಕಲಾವಿಲಾಸ—ಡಬ್ಬಿ 1ಕ್ಕೆ ರೂ. 0–4–0 12 ಡಬ್ಬಿಗಳಿಗೆ ರೂ 2–4–0 ಇದು ಒಳ್ಳೇ ಪರಿಮಳವುಳ್ಳದ್ದಾಗಿ ಗಂಧದ ಸಂಗಡ ಸೇರಿಸಲಿಕ್ಕೂ, ವಸ್ತ್ರ ಇತ್ಯಾದಿಗಳಿಗೆ ಹಚ್ಚಿಕೊಳ್ಳಲಿಕ್ಕೂ ಆಗುತ್ತದೆ.

ಕಜ್ಜಿನಾಶಕ ಚೂರ್ಣ—ಶೀಸೆ 1ಕ್ಕೆ 0–2–0. ಉಪಯೋಗಿಸುವ ವಿವರ ಡಬ್ಬಿಯ ಸಂಗಡ.

ಈ ಮೇಲಿನ ಸಾಮಾನುಗಳನ್ನು ಟಪ್ಪಾಲ ದ್ವಾರಾ ತರಿಸಿಕೊಳ್ಳುವವರಿಗೆ ಕ್ರಯದ ಹೊರತು ವಿ. ಪಿ ಖರ್ಚು ಪ್ರತ್ಯೇಕ ಬೀಳುವದು.

ವಿಳಾಸ —ಆರ್. ಯಂ. ಕಾಮತ್	Address —**R M. Kamath**
ಪಂಚಮ್ಹಾಲ್,	*Panchamahal*
ಮುಲ್ಕಿ, ದ. ಕನ್ನಡ	*Moolky, S Canara*

ಓರಿಯುಂಟಲ್ ಗವರ್ನಮೆಂಟ್ ಸೆಕ್ಯೂರಿಟಿ.

ಲೈಫ್ ಎಶ್ಯೂರೆನ್ಸ್ ಕಂಪನಿ. ಲಿಮಿಟೆಡ್

ಎಂಬ

ಹಿಂದುಸ್ಥಾನದ ಅಗ್ರಗಾಮಿ ಸ್ವದೇಶಿ ಜೀವ ವಿಮೇ ಉತ್ತರಿಸುವ ಸಂಘ.

1874ರಲ್ಲಿ ಸ್ಥಾಪಿಸಲ್ಪಟ್ಟಿತು.

ಹಿಂದುಸ್ಥಾನದಲ್ಲಿ ಸ್ಥಾಪಿಸಲ್ಪಟ್ಟ ಸಂಘಗಳಲ್ಲಿ ಇದೇ ಮೊದಲಿನದು.

ಸಂಘದ ಕೂಡಿಟ್ಟ ಧನವು 2 ಕೋಟಿ 75 ಲಕ್ಷ ರೂಪಾಯಿಗಿಂತಲೂ ಮೀರಿರುತ್ತದೆ.

ಇಷ್ಟರ ವರೆಗೆ 2,0000,000 ರೂಪಾಯಿಗಿಂತಲೂ ಹೆಚ್ಚಿನ ಹಣವನ್ನು ವಿಮೇದಾರರಿಗೆ ಸಲಾಯಿಸಿರುತ್ತದೆ. 1882ನೇ ಇಸವಿ ಮಾರ್ಚಿ 29ನೇ ತಾರೀಕಿನಲ್ಲಿ ಈ ಸಂಘದವರು ಮುಂಬಾಯಿ ಸರಕಾರದವರೊಡನೆ ಮಾಡಿಕೊಂಡ ಕರಾರಿನ ಶರ್ತಗಳಿಗನುಸಾರವಾಗಿ ವಿಮೇದಾರರ ಭದ್ರತೆಗಾಗಿ ಅವರು ತೆರುವ ಎಲ್ಲಾ ಹಣದಲ್ಲಿ ಸೇಕಡಾ 80ರ ಮೇರೆಗೆ ಮೊಬಲಗು ಸರಕಾರದ ಭದ್ರತಾಪತ್ರಗಳಲ್ಲಿ ಠೇವಣಾತಿಯಾಗಿಟ್ಟು, ಮುಂಬಾಯಿ ಸರಕಾರದ ಹುದ್ದೇದಾರರಾಗಿರುವ "ಟ್ರಸ್ಟಿ" ಎಂಬ ಮೊಕ್ತೇಸರರ ವಶದಲ್ಲಿರುತ್ತದೆ. ಆ ಮೊಬಲಗನ್ನು ವಿಮೇ ಹಕ್ಕು ತೀರಿಸುವ ಕಾಲದಲ್ಲಿ ವಿನಹಾ ಇತರ ಕಾಲದಲ್ಲಿ ಕಂಪನಿಯ ಮೇಲ್ವಿಚಾರಕರು ಪಡಕೊಳ್ಳದ ಹಾಗೆ ನಿರ್ಬಂಧ ಉಂಟು. ಈ ದೇಶದ ಜನರ ಸ್ಥಿತಿಗತಿಗೆ ಅನುಕೂಲವಾಗುವಂತೆ ಈ ಸಂಘವು ಲೋಕಮಾನ್ಯವಾದ ಸೂತ್ರಗಳ ಮೇಲೆ ಸ್ಥಾಪಿಸಲ್ಪಟ್ಟಿರುತ್ತದೆ.

ವಿಮೇ ಉತ್ತರಿಸಲುಳ್ಳವರು ಸಂಘದ ಸೂಚನಾಪತ್ರಗಳನ್ನೂ ಮಸೂದೆಗಳನ್ನೂ ಕುರಿತು ಕೆಳಗೆ ನಮೂದಿಸಿದ ಯಾವುದಾದರೊಂದು ವಿಳಾಸಕ್ಕೆ ಬರೆದುಕೊಳ್ಳುವುದು.

ರಾ ರಾ. ಡಿ. ವಾಸ್ ಮತ್ತು ಮಗಂದಿರು.	ಮೆ. ಆರ್. ಪೆಟರ್ಸನ್ ಬ್ರೌನ್,
ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ	ಕಾರಭಾರಿ.
ಜಿಲ್ಲೆಗಳಿಗೆ ಮುಖ್ಯ ಏಜಂಟರು,	ಓರಿಯುಂಟಲ್ ಲೈಫ್ ಆಫೀಸು,
ಮಂಗಳೂರು.	ಓರಿಯೆಂಟಲ್ ಬಿಲ್ಡಿಂಗ್ಸ್.
	ಮುಂಬಾಯಿ.

ವಿದೇಶ ವೃತ್ತಾಂತ.

ಜಪಾನ ಮತ್ತು ರುಶ್ಯದೇಶದ ಎಲ್ಲಾ ಒಪ್ಪಂದಗಳು ಈ ತಿಂಗಳ ಅಂತ್ಯದೊಳಗೆ ಪೂರ್ಣ ತೀರ್ಮಾನವಾಗುವವು.

ಇಂಡಿಯಾ ಸರಕಾರದ ಮಂತ್ರಿಗಳಾದ ಮೊರ್ಲೆ ಸಾಹೇಬರವರು ಹಿಂದುಸ್ಥಾನದ ಪ್ಲೇಗಿನ ವಿಷಯ ಮಾತಾಡುವಾಗ್ಯೆ ಪ್ಲೇಗಿನ ನಿವಾರಣೆಗೆ ಬಗ್ಗೆ ಯಾವದಾದರೊಂದು ನಿರ್ಧರವಾದ ಮಾರ್ಗವು ನಿರ್ಣಯಿಸಲ್ಪಲ್ಲವಾದರೂ ಸನಿಟರಿ ಆಫೀಸರರಾಗಳಾಗಿ ನೇಟೀವರಲ್ಲಿ ಅನೇಕರನ್ನು ನೇಮಿಸುವದಾಗಿ ಹೇಳಿದವರು

ರುಶ್ಯಾದೇಶದ ಸೈನ್ಯಗಳಲ್ಲಿ ದಂಗೆ ಉಂಟಾಗಿದೆ ಎಂದು ವರ್ತಮಾನ ಪತ್ರಗಳಿಂದ ತಿಳಿದು ಬರುತ್ತದೆ

ಕರ್ಜನ್ ಪ್ರಭುಗಳು ಶೀಕಜ್ವರದಿಂದ [illegible] ಹೊಂದಿ ಹವೆ ಬಗ್ಗೆ ಬೆಸಿಂಗ್‌ಸ್ಟೋಕ್ ಎಂಬಲ್ಲಿ ಹೋಗಿರುವರು

ಮದ್ರಾಸ್ ಮಾಜಿ ಗವರ್ನರರಾದ ಎಮ್ಟಹಿಲ್ ಪ್ರಭುಗಳು ಟ್ರಾನ್ಸವಾಲಿನಲ್ಲಿರುವ ಭಾರತೀಯರ ದೀನ ಸ್ಥಿತಿಯನ್ನು ಹೋಗಲಾಡಿಸುವದಕ್ಕೆ [illegible] ಜನರಲ್ ಬೋಥರ ಕರ್ತ ಇವರು ಏಶಿಯಾಟಿಕ್ ಆರ್ಡಿನೆನ್ಸ್ ಎಂಬ ಹೊಸ ಕಾನೂನನ್ನು ಟ್ರಾನ್ಸವಾಲಿನಲ್ಲಿ ಜಾರಿಗೆ ತಂದರೆ ಭಾರತೀಯರಿಗೆ ಸಂಕಷ್ಟಗಳು ಒದಗುವವು ಎಂದು ವಾದಿಸಿ, ಭಾರತೀಯರು ಸೂಚಿಸಿರುಂಥಾ ಉಭಯತರಿಗೂ ಒಳ್ಳೇದಾಗ ಮಾರ್ಗವನ್ನು ಟ್ರಾನ್ಸವಾಲ ಸರಕಾರದವರು ಕೈಕೊಳ್ಳಬೇಕೆಂದು ತರ್ಕಿಸಿದರು. ಜನರಲ್ ಬೋಥರವರು ಭಾರತೀಯರಿಗೆ ಅನ್ಯಾಯ ಮಾಡುವ ಆಲೋಚನೆಯಿಲ್ಲವೆಂತ ಹೇಳಿ ಹಾಗೆ [illegible] ಗುವ ಪಕ್ಷಕ್ಕೆ ತಾನು ತಪ್ಪಿಂದ ಆಗುವಷ್ಟು ಮಟ್ಟಿಗೆ ನ್ಯಾಯವಾಗದ ಹಾಗೆ ಪ್ರಯತ್ನಿಸುವೆನೆಂದು ಹೇಳಿರುವರು.

ರುಶ್ಯದೇಶದ ಡ್ಯೂಮಾ ಪ್ರಜಾಪ್ರತಿನಿಧಿ ಸಭೆಯಲ್ಲಿ ಸೇನಾ ಮಂತ್ರಿಯವರು 459,000 ಜನರ ಒಂದು ಸೈನ್ಯವನ್ನು ತಯಾರಿಸಬೇಕೆಂಬ ನಿರ್ಣಯವನ್ನು ಮಾಡಿರುತ್ತಾರೆ. ಜಪಾನ ಯುದ್ಧದಲ್ಲಾದ ಅನುಭವವನ್ನು ಪರ್ಯಾಲೋಚಿಸಲು ಈ ಸೈನ್ಯವು ಅವಶ್ಯವೆಂತ ಇವರು ಹೇಳುವರು. ಡ್ಯೂಮಾದ ಮೆಂಬರರೆಲ್ಲರೂ ಇದನ್ನು ಅನಾವಶ್ಯಕವೆಂದು ಹೇಳಿ ಈ ನಿರ್ಣಯವನ್ನು ಮಂಜೂರು ಮಾಡಲಿಲ್ಲ. ಇವರು ಮಂಜೂರು ಮಾಡದಿದ್ದರೂ ಸೇನಾಮಂತ್ರಿಗಳು ತಾನು ಈ ಸೈನ್ಯವನ್ನು ಸಿದ್ಧಪಡಿಸುವೆನೆಂಬ ಹಟ ಹಿಡಿದಿರುವರು. ಸಭೆಯಲ್ಲಿ ಬಹಳ ಕೋಲಾಹಲವುಂಟಾದ್ದರಿಂದ ಸಭೆಯು ಹಿಂದಿರುತ್ತದೆ. ಡ್ಯೂಮಾ ಪ್ರತಿನಿಧಿ ಸಭೆಯ ಅದೃಷ್ಟವು ಸದ್ಯದಲ್ಲಿ ತಿಳಿಯುವದು.

ಸ್ಟ್ರೋಂಬೋಲಿ ಎಂಬಲ್ಲಿ ಜ್ವಾಲಾಮುಖಿಗಳ ಕಾರುವಿಕೆಯಿಂದ ಐದು ನಿಮಿಷದವರೆಗೆ ಕಲ್ಲುಗಳ ಮಳೆಯಿತ್ತು. ಇದರಿಂದ ಸುತ್ತಲಿರುವ ದ್ರಾಕ್ಷಿಬಳ್ಳಿಗಳ ಬನಗಳಿಗೂ ಪೈರಿರುವ ಗದ್ದೆಗಳಿಗೂ ಹೆಚ್ಚು ಹಾನಿಯುಂಟಾಗಿದೆ.

ಮೇಲೆ ಪ್ರಸ್ತಾಪಿಸಿದ ರುಶ್ಯದೇಶದ ಸೇನಾ ಮಂತ್ರಿಯ ನಿರ್ಣಯವನ್ನು ಡ್ಯೂಮಾ ಸಭೆಯವರು ಮಂಜೂರು ಮಾಡಿರುತ್ತಾರೆ.

ಜಪಾನದೇಶದ ಯುವರಾಜ ಪ್ರತಿನಿಧಿಯವರು ಲಂಡನ್ ಪಟ್ಟಣಕ್ಕೆ ಬಂದು ತಲ್ಪಿರುವರು. ಪ್ರಿನ್ಸ್ ಆಫ್ ವೇಲ್ಸರೇ ಮೊದಲಾದ ರಾಜ ಮನೆತನದವರು ಇವರನ್ನು ಎದುರುಗೊಳ್ಳಲಿಕ್ಕೆ ಹೋಗಿದ್ದರು. ಬಕಿಂಗ್‌ಹಾಮ್ ರಾಜಾಲಯದಲ್ಲಿ ಎಡ್ವರ್ಡ ಮಹಾರಾಜರೊಂದಿಗೆ ಇವರಿಗೆ ಟೀಪಾರ್ಟಿಯಾಯಿತು.

ಜಪಾನ ದೇಶಕ್ಕೂ ಫ್ರಾನ್ಸ್ ದೇಶದವರಿಗೂ ಬ್ರಿಟಿಷ ಒಪ್ಪಂದಕ್ಕೆ ಅನುಗುಣವಾಗಿ ಒಂದು ಒಪ್ಪಂದವು ಆಗಿಯದೆ.

ಕೊರಿಯಾ ದೇಶದಲ್ಲಿ ಹೊಗೆಸೊಪ್ಪಿನ ಚುರುಟು ಸಿಗರೇಟ ವಸ್ತುಗಳನ್ನು ಸೇದದ ಹಾಗೆ ಒಂದು ಸಂಘವನ್ನು ಏರ್ಪಡಿಸಿರತ್ತಾರೆ

ಸಿಂಹಳ ಪ್ರಭುಗಳ ಪತ್ನಿಯವರು ಹಿಂದ್ಲಕ್ಕೆ ಬರುವ ಆಗೋಸ್ಟ ತಿಂಗಳಲ್ಲಿ ಬಂದು ತಲ್ಪುವರೆಂಬ ವರ್ತಮಾನ [illegible]

ಉತ್ತರ ಹಿಂದುಸ್ಥಾನ.

ಈ ತಿಂಗಳ ತಾರೀಕು 9ಕ್ಕೆ ಸಿಮ್ಲಾದಲ್ಲಿ ಒಂದು ಭೂಕಂಪನಾಯಿತು

ಲಾಲಾ ಲಜಪತರಾಯರ [illegible] ಇಲ್ಲಿ [illegible] ಸರಕಾರದವರು ತನ್ನ ಪರ್ಮಿಷನ್ ಇಲ್ಲದೆ ಎಲ್ಲಿಯೂ ಹೋಗಕೂಡದೆಂಬದಾಗಿ ತಾಕೀತು ಮಾಡಿರುತ್ತಾರಂತೆ. ಇವರು ಹೋದಲ್ಲಿ ಕಲಹಗಳುಂಟಾಗುವದರಿಂದ ಇವರಿಗೆ ಈ ರೀತಿ ಅಪ್ಪಣೆ ಕೊಟ್ಟಿರುತ್ತಾರೆ

ಸ್ಯಾಂಗ್ಲಿ ಎಂಬಲ್ಲಿ ಸಾಧಾರಣ ಜನರನ್ನು ಬಿಳೇ ಜನರು ಹೊಡೆದ ಹಾಗೆ ಈ ಸಾಧಾರಣ ಜನರಿಗೆ ಈ ಬಗ್ಗೆ ತಕ್ಕದಾದ ಶಿಕ್ಷಣವನ್ನು ಕೊಡಲಿಕ್ಕೆ ಒಂದು ಸಂಘವು ಏರ್ಪಡಿಸಲ್ಪಟ್ಟಿರುವದು. ಈ ಸಂಘದವರು ಸಲಾಂ, ನಮಸ್ಕಾರವೆನ್ನುವ ಬದಲಿಗೆ ವಂದೇ ಮಾತರಂ ಎಂಬದನ್ನು ರೂಢಿಗೆ ತರಬೇಕಾಗಿ ನಿರ್ಣಯಿಸಿರುವರು.

ಅಮೀರರವರು ಹಿಂದುಸ್ಥಾನಕ್ಕೆ ದಯಮಾಡಿದಾಗ ಅವರೊಂದಿಗೆ ಬಹಳ ಜನ ಆಫಘಾನರು ಬಂದಿದ್ದರು ಇವರು ಇಲ್ಲಿಯ 'ಸ್ವದೇಶಿ' ಮತ್ತು ಬಹಿಷ್ಕಾರಗಳ ಚಳವಳವನ್ನು ನೋಡಿ ತಮ್ಮಲ್ಲಿಗೆ ಹೋದ ಕೂಡಲೆ ಭವ್ಯ ರೀತಿಯಿಂದ ತಯ್ಯಾರಿಸಲ್ಪಡುವ ವಿದೇಶಿ ಸಕ್ಕರೆಯನ್ನು ಉಪಯೋಗಿಸಲ್ಲಿಲ್ಲ. ಅನ್ಯದೇಶಗಳ ವಸ್ತುಗಳನ್ನು ಸಹಾ ಸ್ವೀಕರಿಸಬಾರದಾಗಿ ನಿರ್ಧರಮಾಡಿದರು. ಹೀಗೆ ಬ್ರಿಟಿಷ ಸಾಮ್ರಾಜ್ಯ ಕೋಡುಕೊಂಡ ಅಮೀರರ ಮೇಲೆ ಕೆಲವರಿಗೆ ವೈಮನಸ್ಸುಂಟಾಯಿತು. ಅಮೀರರವರು ಇದನ್ನು ತಿಳಿದು ಜಾಥಾ ವಿಷಯಗಳನ್ನು ತರ್ಕಿಸುವರ [illegible] ಹಿಂದುಸ್ಥಾನದಲ್ಲಿ [illegible] ಕಾಬೂಲಿಗೆ ಬಿಡ್ಡುಲಿಕ್ಕೆ 12 ಆನೆಗಳನ್ನು ಕಳುಹಿಸಿರುವರು.

ಅಮೀರರವರ ಸರದಾರರ ಪೈಕಿ ಒಬ್ಬರು ಅಮೀರರ ಆಜ್ಞಾಪ್ರಕಾರ ವ್ಯಾಸ್‌ರಾಯ ಪ್ರಭುಗಳಿಗೆ ನಾಲ್ಕು ಕುದುರೆಗಳನ್ನೂ ಕಲಿಕತ್ತೆಯ ಕಮಿಷನರ ಮಗಳಿಗೆ ಒಂದು ಕುದುರೆಯನ್ನೂ ಉಚಿತವಾಗಿ ಕೊಡುವರೆ ಅಫಘಾನದೇಶದಿಂದ ಬಂದಿರುವರು.

ಖಾಂಡೇಶ ಎಂಬಲ್ಲಿ ಸರ್ಕಸ್ ಕಂಪೆನಿಯ ಮಾಲಿಕರಾದ ಛತ್ರೆಯವರಿಗೆ ಒಂದು ಬಂಗಾರದ ಪದಕ ಇನಾಮಾಗಿ ಸಿಕ್ಕಿರುತ್ತದೆ.

ಸರಕಾರದವರು ದಿಲ್ಲಿಯಲ್ಲಿ [illegible] ದೇವಾಲಯದಲ್ಲಿರುವ ಅಮೂಲ್ಯ ರತ್ನಗಳನ್ನು ತೆಗೆಯುವ ಆಲೋಚನೆಯಲ್ಲಿದ್ದಾರೆಂದು ತಿಳಿದು ದಿಲ್ಲಿ ಹಿಂದುಮುಸಲ್ಮಾನರದೊಂದು ಸಭೆಯು ಈ ತಿಂಗಳ ಒಂದನೇ ತಾರೀಕಿನಲ್ಲಿ ನಡೆಯಿತು. ಈ ರತ್ನಗಳು ಷಹಾಜಹಾನ ಕಾಲದಿಂದಲೂ ಈ ದೇವಸ್ಥಾನದಲ್ಲಿ ಅನೇಕ ವರುಷಗಳಿಂದ ಇರುತ್ತವೆ. ಹಿಂದುಗಳೂ ಮುಸಲ್ಮಾನರೂ ಒಟ್ಟುಗೂಡಿ ಈ ವಿಷಯ ಮನವಿ ಮಾಡಿರುತ್ತಾರೆ.

ಉತ್ತರ ಹಿಂದುಸ್ಥಾನದಲ್ಲಿ [illegible] ಎಂಬಲ್ಲಿ ಕಲಿಕತ್ತೆಯಿಂದ ಕಳುಹಿಸಿದ್ದ ವರ್ತಮಾನ ಪತ್ರಗಳು ಎರಡು ಮೂರು ದಿವಸಗಳವರೆಗೆ ಜನರ ಕೈಸೇರಲಿಲ್ಲವೆಂಬ ವರ್ತಮಾನವುಂಟು

ಈ ತಿಂಗಳ ತಾರೀಕು 10ಕ್ಕೆ ಅಂತ್ಯವಾಗುವ ವಾರದಲ್ಲಿ ಇಡೀ ಹಿಂದುಸ್ಥಾನದಲ್ಲಿ 77,776 ಪ್ಲೇಗು ಮರಣಗಳಿದ್ದವು.

ಶಾಲಾ ಹುಡುಗರೂ ಉಪಾಧ್ಯಾಯರೂ ಕಾಲೇಜ ವಿದ್ಯಾರ್ಥಿಗಳೂ ಪ್ರೊಫೆಸರರೂ ಈಗ ಹಿಂದುಸ್ಥಾನದಲ್ಲಿ ಎದ್ದಿರುವ ರಾಜಕೀಯ ಚಳವಳದ ಗೊಡವೆಗೆ ಹೋಗಬಾರದಾಗಿಯೂ ಹೋದ ಪಕ್ಷಕ್ಕೆ ಅಂಥಾ ತರಗತಿಯವರಿಗೆ ತಕ್ಕದಾದ ಶಿಕ್ಷೆಯನ್ನು ವಿಧಿಸಬೇಕಾಗಿಯೂ ಸರ್ ಹರ್ಬರ್ಟ ರಿಸ್ಲೆ ಎಂಬವರು ಸ್ಥಳೀಯ ಸರಕಾರದವರಿಗೆ ಬರೆದಿರುತ್ತಾರೆ

ದಕ್ಷಿಣ ಬೆತ್ತಿಗೊರ್ ಎಂಬಲ್ಲಿಯ ಆಗಸೆ ಕಾರ್ಖಾನೆಯಲ್ಲಿ ದೊಡ್ಡ ಹುದ್ದೆದಾರನಾಗಿರುವ ಒಬ್ಬ ಯುರೋಪಿಯನು ಒಬ್ಬ ಕೂಲಿಯವನನ್ನು ತುಳಿದು ಕೊಂದಿರುವನು. ಈ ಮೊಕದಮೆಯು ಕಲಿಕತ್ತೆಯ ಕೋರ್ಟಿನಲ್ಲಿ ನಡೆಯುತ್ತಿರುವದು.

ಕಲಿಕತ್ತೆಯಿಂದ [illegible] ಕೈಗಾರಿಕೆ ರಸಾಯನ [illegible]

[illegible] ನಿಂದ [illegible] ವರು ತಮ್ಮ ಆಸ್ವ [illegible] ದಿರುತ್ತಾರೆ. [illegible] ಹೋದ [illegible] ಕ್ಕೆ ಹೋಗುವರು.

ದಿಲ್ಲಿಯಲ್ಲಿ ಅಫ್ಜಾಲಿಯೆಂಬ ಮುಹಮ್ಮದೀಯ ವರ್ತಮಾನ ಪತ್ರಕರ್ತರ ಮೇಲೆ ತಮ್ಮ ವರ್ತಮಾನ ಪತ್ರಿಕೆಯಲ್ಲಿ ರಾಜದ್ರೋಹಪರವಾದ ಸಂಗತಿಗಳನ್ನು ಪ್ರಕಟಿಸಿದಕ್ಕೆ ಸರಕಾರದವರು ಕ್ರಿಮಿನಲ್ ಮೊಕದ್ದಮೆ ನಡಿಸುವರೆಂಬ ವರ್ತಮಾನವುಂಟು. ಮುಹಮ್ಮದೀಯ ಪತ್ರಗಳೇ ಹಿಂದುಸ್ಥಾನದಲ್ಲಿ ಬಹಳ ಕಮ್ಮಿ. ಇಂತಹ ಮುಹಮ್ಮದೀಯ ಮೊಕದ್ದಮೆಯು ಸಹ ಹಿಂದುಸ್ಥಾನದಲ್ಲಿ ಒಂದನೇದಾಗಿರುತ್ತದೆ. ಈ ವಿಷಯ ಡಿಲ್ಲಿಯಲ್ಲಿ ಹೆಚ್ಚಿನ ಕಳವಳವಿರುವದು.

ಅಫಘಾನಿಸ್ಥಾನದಲ್ಲಿ ಈ ವರೇಗೆ ಪ್ಲೇಗರೋಗವಿರಲಿಲ್ಲ. ಇತ್ತಲಾಗೆ ಖೈಬರ್ ಖಿಣಿವೆಯ ಹತ್ತರವಿರುವ ಕೆಲವು ಹಳ್ಳಿಗಳಲ್ಲಿ ಈ ರೋಗವು ಉಲ್ಬಣವಾಗಿರುವದು.

ಈಸ್ಟ್ ಇಂಡಿಯಾ ರೈಲ್ವೆಯ ಹೌರಾ ಎಂಬ ಸ್ಟೇಶನಿನಲ್ಲಿ ಹಲವು ಜನ ಸ್ಟ್ರೈಕು ಗುಮಾಸ್ತರಾಗಿರುವರು. ಇವರ ವಾ[illegible]ದ ಬಗ್ಗೆ ಕಂಪೆನಿಯವರು ವಸೆಗಳನ್ನು ಕಟ್ಟಿಕೊ[illegible]ವರು

ಹಿಂದುಸ್ಥಾನದಲ್ಲಿ ನೈತರಾಗಿ ವಾಸಿಸಿ ನೈತರ ಕಸನ್ನು ಮಾಡ[illegible] ಮನಸ್ಸುಳ್ಳ ಯುರೋಪಿಯರಿಗೆ [illegible]ಕಾರದವರು ಬೇಕಾದ ಸಹಾಯ ಮಾಡುವರೆಂ[illegible] ವರ್ತಮಾನ ಉಂಟೆಂದು ಒ[illegible] ಕಲಿಕತ್ತಾ ಪತ್ರಿಕೆಯ ಬಾತ್ಮಿದಾರನು ಬರೆಯುವನು.

ಬೊಂಬಾಯಿಯಲ್ಲಿ ವಿಕ್ಟೋರಿಯಾ ಜುಬಿ[illegible] ಕ[illegible]ಲ್ ಇನ್ಸ್ಟಿಟ್ಯೂಟ್ ಎಂಬಲ್ಲಿ ಮೋಟರ್ ಗಾಡಿಗ[illegible] ನಡಿಸುವವರಿಗೆ ತಕ್ಕದಾದ ಶಿಕ್ಷಣವನ್ನು ಕೊಡಲಿಕ್ಕೆ [illegible]ದು ಕ್ಲಾಸನ್ನ ಏರ್ಪಡಿಸಬೇಕೆಂತಲೂ ಇವರು ಈ ಶಿಕ್ಷಣವನ್ನ ಹೊಂದಿದ ಮೇಲೆ ಇವರನ್ನು ಪರೀಕ್ಷಿಸಿ ಇವರಿಗೆ ಆ ವಿಷಯ ಸರ್ಟಿಫಿಕೇಟು ಕೊಡಬೇಕೆಂತಲೂ ಏರ್ಪಡಿಸಿರುವರು ಈ ಬಗ್ಗೆ ಸರಕಾರದವರು 7000 ರೂಪಾಯಿ ಗ್ರೇಂಟನ್ನು ಕೊಟ್ಟಿರುವರು

ಕಲಿಕತ್ತೆಯಲ್ಲಿ ಸರ್ಜನ್ ಪರೀಕ್ಷೆಯನ್ನು ಕಲಿಯುವ ವಿದ್ಯಾರ್ಥಿಗಳಿಗೆ ಆದಿತ್ಯವಾರ ಪರೀಕ್ಷೆಯಾಯಿತು. ಇಡೀ ಹಿಂದುಸ್ಥಾನದಲ್ಲಿ ಈ ವರೇಗೆ ಇಂಥಾ ಪರೀಕ್ಷೆಗಳು ಆದಿತ್ಯವಾರದಾಗಲಿಲ್ಲ.

ಕಲಿಕತ್ತೆಯ ಒಂದು ವರ್ತಮಾನ ಪತ್ರದ ಮಾಲಿಕರು ಜಮಾಲಪುರ ಕಲಹದಲ್ಲಿ ಮುಹಮ್ಮದೀಯರು ಒಡೆದು ಹಾಕಿದ ಕಾಳೀ ದೇವತೆಯ ಪ್ರತಿಮೆಯ ಅನೇಕ ನಕ್ಷೆಗಳನ್ನ ತೆಗಿಸಿ ಎಲ್ಲರಿಗೂ ಹಂಚುತ್ತಿರುವರೆಂಬ ವರ್ತಮಾನವಿರುವದು

ಲಾಲಾ ಲಾಜಪತ್ ರೈಯವರನ್ನು ವಿಚಾರಣೆಯಿಲ್ಲದೆ ಗಡಿಪಾರು ಮಾಡಿರುತ್ತಾರೆಂಬದನ್ನು ಹಿಂದಿನ ಪತ್ರಗಳಲ್ಲಿ ತಿಳಿಸಿರುತ್ತೇವೆ. ಲಾಲಾ ಅಜಿತ್ ಸಿಂಗರನ್ನು ಸಹಾ ಗಡಿಪಾರು ಮಾಡುವರೆಂಬದಾಗಿ ವರ್ತಮಾನವುಂಟು. [illegible]

ಲಾಹೋರಿನಲ್ಲಿ ನಾಲ್ಕು ದಿವಸಗಳ ವರೆಗೆ ಶ್ರೀ ಲಾಲಾ ಲಾಜಪತ್ ರೈಯವರ ಗಡಿಪಾರಿನ ವಿಷಯ ಯಾವ ತರದ ಸಭೆಯಾದರೂ ಕೂಡಬಾರದಾಗಿ ಅಲ್ಲಿಯ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರು ಅಪ್ಪಣೆ ಕೊಟ್ಟಿರುತ್ತಾರೆ.

ಮಿಲಿಟರಿಯ ಯುರೋಪಿಯ ಸವಾರರು ರಸ್ತೆಗಳಲ್ಲಿ ಪಟ್ಟಣ ಜತನಕ್ಕೋಸ್ಕರ ತಿರುಗುವರು. ಎಲ್ಲಾ ಬಗೆಯ ಜನರಲ್ಲಿಯೂ ಬಹಳ ಚಳವಳ ಹುಟ್ಟಿರುತ್ತದೆ.

ಅಂಗ್ಲೋ ಇಂಡಿಯಾ ಪತ್ರಿಕಾಕರ್ತರು ಲಾಜಪತರೈಯಂಥವರನ್ನು ಗಡಿಪಾರು ಮಾಡಿ ಅಂದಮಾನದ್ವೀಪಕ್ಕೆ ಕಳುಹಿಸಿಕೊಡಬೇಕಲ್ಲದೆ ಹತ್ತರ ಊರುಗಳಲ್ಲಿ ಎಲ್ಲಾದರೂ ಇವರನ್ನು ಇಡಕೂಡದಾಗಿ ಸೂಚಿಸುವರು.

ಲಾಲಾ ಲಾಜಪತರೈಯವರನ್ನು ಗಡಿಪಾರು ಮಾಡಿದ ವರ್ತಮಾನವು ಕಲಿಕತ್ತೆಯಲ್ಲಿ ವಿಶೇಷ ಕೋಲಾಹಲವನ್ನುಂಟುಮಾಡಿರುತ್ತದೆ. ಅನೇಕ ಜನ ಪ್ರಜಾನಾಯಕರು ಇದು ರುಶ್ಯಾ ಗವರ್ನಮೆಂಟಿನವರ ರೀತಿಗಳನ್ನನುಸರಿಸಿರುವದೆಂದು ಹೇಳುವರು

ಕಲಿಕತ್ತೆಯ 'ವಂದೇ ಮಾತರಂ' ಎಂಬ ಪತ್ರಕ್ಕೆ ಈ ದಿವಸ (ಮೇ ತಾ 9) ಅಸಂಖ್ಯಾತ ಗಿರಾಕಿಗಳಿದ್ದರು ಈ ಪತ್ರಿಕಾಕರ್ತರು ಲಾಜಪತರೈ[illegible] ಗಡಿಪಾರಿನ ವಿಷಯ ಏನೇನು ಒರೆದಿರುವ[illegible] ರಿಗಿರುವ ಕು[illegible] ಇದರ ಮುಖ್ಯ[illegible] ಮಂಗಳೂರಿಂದ ಸಹಾ ಕೆಲವ[illegible] ಮೂಲಕ ಈ ಸಂದರ್ಭದಲ್ಲಿ [illegible] ಎಂಬ [illegible] ಪತ್ರಿಕೆಯ [illegible]ದರು ಈ ಪತ್ರಿಕಾಕರ್ತರ ಅಭಿಪ್ರಾಯ[illegible] ಲಾಜಪತರೈಯವರ ಗಡಿಪಾರಿನ ವಿಷಯ ಪಂಜಾಬಿನಲ್ಲಿ ಸಭೆ ಕೂಡಬಾರದೆಂಬ ವರ್ತಮಾನವನ್ನು ಕೇಳುತ್ತೇವೆ ಸಭೆ ಕೂಡುವ ಮತ್ತು ಭಾಷಣಗಳನ್ನು ಕೊಡುವ ಸಮಯವು ಕಳೆದು ಹೋಯಿತು ಸಿಂಹಗಳೋಪಾದಿಯಲ್ಲಿರುವ ಪಂಜಾಬಿಗಳಲ್ಲಿ ಒಬ್ಬ ಲಾಜಪತನು ಹೋದರೂ ಅಂತಹ ನೂರಾರು ಮಂದಿ ರಾಜಪುತರಿರುವರು

ಡಾಕ್ಕಾದಲ್ಲಿಯ ಮುಹಮ್ಮದೀಯರ ಕೊನ್ಫರೆನ್ಸ ಎಂಬ ಸಂಘದವರು ಸಭೆ ಕೂಡಿ ಈ ಕೆಳಗಿನ ನಿರ್ಣಯಗಳನ್ನು ಮಾಡಿರುತ್ತಾರೆ. ಮುಸಲ್ಮಾನರು ಮತ್ತು ಹಿಂದುಗಳೊಳಗಾದ ಅತಿ ವಿಶೇಷ ಕಲಹಗಳು ಉಭಯತರ ವೃದ್ಧಿಗೆ ಹಾನಿಕರವಾಗಿರುವದರಿಂದ ಈ ಎರಡು ಜಗಡವನ್ನೂ ಸಮಜಾಯಿಸಿ ಇವರನ್ನು ಪರಸ್ಪರ ವೈರವನ್ನು ಸಾಧಿಸದ ಹಾಗೆ ಏರ್ಪಡಿಸಬೇಕು. ಈ ಬಗ್ಗೆ ಆರು ಜನ ಮುಹಮ್ಮದೀಯ ಪ್ರತಿನಿಧಿಗಳನ್ನು ಆರಿಸಿ ತೆಗದು ಹಿಂದುಗಳ ಸಭಾನಾಯಕರಿದ್ದೆಡೆಗೆ ಕಳುಹಿಸಿ ಹಿಂದು ಮುಸಲ್ಮಾನರೊಳಗಿರುವ ವಿವಾದಗಳನ್ನು ತೀರ್ಮಾನಿಸ ಬೇಕು. ಈ ಪ್ರತಿನಿಧಿಗಳು ಹಿಂದು ಪ್ರಜಾನಾಯಕರ ಈ ವಿಷಯದ ಅಭಿಪ್ರಾಯಗಳನ್ನು ಮುಹಮ್ಮದೀಯರ ಕೊನ್ಫರೆನ್ಸಿಗೆ ತಿಳಿಸಬೇಕು. ಪ್ರತಿಯೊಂದು ಊರಿನಿಂದಲೂ ಒಬ್ಬೊಬ್ಬ ಮುಹಮ್ಮದೀಯ ಪ್ರತಿನಿಧಿಯನ್ನು ಆರಿಸಬೇಕು. ಹೀಗೆ ಆರಿಸಿದ ನಾಲ್ವತ್ತು ಜನ ಪ್ರತಿನಿಧಿಗಳು ಸಭೆ ಕೂಡಿ ಹಿಂದುಗಳ ಹತ್ತರ ತಮಗಿರುವ ವಿವಾದಗಳನ್ನು ತೀರಿಸುವದು ಹ್ಯಾಗೆಂದು ತೀರ್ಮಾನಿಸಬೇಕು.

ಪೂನೆಯಲ್ಲಿಯ ಹಿಂದೂ ವಿಧವಾ ಶ್ರಮದ 11ನೇ ವರುಷಾವಧಿ ವರದಿಯನ್ನು ಪ್ರಕಟಿಸಿರುವರು. ಈ ವರದಿಯಲ್ಲಿ ವಿಧವೆಗಳು ಹಿಂದೂ ಧರ್ಮಶಾಸ್ತ್ರಗಳ ಪ್ರಕಾರ ತಮ್ಮ ತಮ್ಮ ಜೀವನಗಳನ್ನು ಸಾರ್ಥಕವಾಗುವ ರೀತಿ ನಡಿಸುವಂತೆ ಒಳ್ಳೇ ವಿದ್ಯಾಭ್ಯಾಸಂಗ ಮಾಡುವರಾಗಿ ಕಂಡುಬರುತ್ತದೆ.

ದಕ್ಷಿಣ ಹಿಂದುಸ್ಥಾನ.

ಬೇಪಿನ್ ಚಂದ್ರಪಾಲರು ದಕ್ಷಿಣ ಹಿಂದುಸ್ಥಾನದಲ್ಲಿ ಭಾಷಣಗಳನ್ನು ಮುಗಿಸಿ ಕಲಿಕತ್ತೆಗೆ ಹೊರಡಿರುವರೆಂಬ ವರ್ತಮಾನ ಉಂಟು

ಶ್ರೀ ವೈಕುಂಠ ಎಂಬಲ್ಲಿ ಲಾಹೋರಿನ ಥಾಕೂರ ಚಂದ್ರವರ್ಮ ಎಂಬವರು ಸ್ವದೇಶಿ ವಿಷಯ ಉಪನ್ಯಾಸಗಳನ್ನು ಕೊಡ[illegible]ರು.

ಮದ್ರಾಸು ಯುನಿವರ್ಸಿಟಿಯ ಬಿ ಎ ಬಿ ಎಲ್ ಪರೀಕ್ಷೆ ಪಾಸಾಗಿ ಹೈಕೋರ್ಟಿನ [illegible]ಕೇಟೆಂಬ ಉಮೇದ್ವಾರರ ಪರೀಕ್ಷೆ ತೀರ್ಗಡೆ [illegible]ವರಿಗೆ ಮೆಜಿಸ್ಟ್ರೇಟ ಮುಂತಾದ ಕೆಲಸಗಳಾದರೆ ಇವರು ಪುನಃ ಕ್ರಿಮಿನಲ್ ಪ್ರೊಸಿಜ್ಯೂರಿನಲ್ಲಿ ಪರೀಕ್ಷೆ ಕೊಡುವ ಆಗತ್ಯವಿಲ್ಲನೆಂತ ಮದ್ರಾಸು ಗವರ್ನಮೆಂಟಿನವರು ನಿರ್ಣಯಿಸಿರುವರು.

ವಿಜಯನಗರದ ಪರ್ಲ ರಾಮ ಮೂರ್ತಿ ಚೆಟ್ಟಿ ಎಂಬ ಶ್ರೀಮಂತ ಸಾವ್ಕಾರರು ಸಾಧಾರಣ ೩೦೦೦ ರೂಪಾಯಿ ಕ್ರಯಬಾಳುವ ಲ್ಯಾಬ್ರರಿ ಯಾ ಪುಸ್ತಕ ಸಂಗ್ರಹವನ್ನು ವಿಜಯನಗರದ ನಿವಾಸಿಗಳ ಪ್ರಯೋಜನಾರ್ಥವಾಗಿ ಕೊಟ್ಟಿರುತ್ತಾರೆ. ಈ ಪುಸ್ತಕಾಲಯವನ್ನು ಅಲ್ಲಿಯ ಕಲೆಕ್ಟರವರಾದ ಕೆಂಬಲ್ ಧೊರೆಗಳವರ ಹೆಸರಿನಲ್ಲಿ ತೆರದಿರುತ್ತಾರೆ.

ಮಧುರಾ ಜಿಲ್ಲೆಯಲ್ಲಿ ಒಂದು ದನಕರುಗಳ ಪ್ರದರ್ಶನವು ಏರ್ಪಡಿಸಲ್ಪಟ್ಟಿತು. ಒಳ್ಳೇ ದನಕರುಗಳನ್ನು ದೇಖಾವೆಗೆ ತಂದವರಿಗೆ ಬಹಳ ಇನಾಮು ಶಿಕ್ಕಿತು. ಈ ಸಂದರ್ಭದಲ್ಲಿ ಮೋಜರ್‌ಗನ್ ಎಂಬ ಪಶು ವೈದ್ಯ ಶಾಸ್ತ್ರಜ್ಞರು ಪಶುಗಳನ್ನು ಸಾಕುವ ಕ್ರಮಗಳನ್ನೂ ಪಶುವೃದ್ಧಿಯಿಂದ ಜನರಿಗಾಗುವ ಪ್ರಯೋಜನವನ್ನೂ ತಮ್ಮ ಭಾಷಣದಿಂದ ವ್ಯಕ್ತ ಪಡಿಸಿದರು.

ಬರೋಡಾ ದೇಶದ ಮಹಾರಾಜ ಶ್ರೀ ಸಯ್ಯಾಜಿರಾವ್ ಗ್ವಯಕ್ವಾಡರು ಬೆಂಗಳೂರಿಗೆ ಕೆಲವು ದಿವಸಗಳ ಹಿಂದೆ ದಯ ಮಾಡಿಸಿದ್ದರು. [illegible]

ಬರುವ ತಿಂಗಳ ತಾರೀಖು [illegible] ವಿಶಾಖ ಪಟ್ಟಣದಲ್ಲಿ ಒಂದು ಕೈಗಾರಿಕೆ ವಸ್ತು ಪ್ರದರ್ಶನವನ್ನು ಏರ್ಪಡಿಸುವರು. [illegible]

ಈ ವರುಷದ ಪ್ರೊವಿನ್ಸಿಯಲ್ ಕೊನ್ಫರನ್ಸು ವಿಶಾಖ ಪಟ್ಟಣದಲ್ಲಿ ಜರಗುವದು.

ಉತ್ತರ ಸರಕಾರದ ಜಿಲ್ಲೆಯ ವಿದ್ಯಾರ್ಥಿಗಳ ಮೂರನೇ ವಾರ್ಷಿಕ ಸಭೆಯು ಕೋಕನಾಡಿನಲ್ಲಿ ಇದೇ ತಿಂಗಳ ತಾರೀಕು 16, 17, 18ರಲ್ಲಿ ಜರಗುವದು

ಗುಂಟೂರಿನಲ್ಲಿ ಭಾರತೀಯ ವೈಶ್ಯರ ಸಭೆಯು ಜರಗಿತು ಈ ಸಭೆಗೆ ತೆಲುಗು ಜಿಲ್ಲೆಗಳಿಂದಲೂ ನೈಜಾಮರ ಸೀಮೆಗಳಿಂದಲೂ ವೈಶ್ಯರ ಪ್ರತಿನಿಧಿಗಳು ಬಂದಿದ್ದರು ಈ ಸಭೆಯವರು ವೈಶ್ಯ ಸಮುದಾಯವನ್ನು ಪುನರುಜ್ಜೀವಿಸಲು ಸಂಘಿಸುವರು

ಮ[illegible]ಸಿನಲ್ಲಿ ಧರ್ಮರಕ್ಷಣೆ ಸಭೆ ಎಂಬದೊಂದು [illegible] ಏರ್ಪಡಿಸಿದ್ದಾರೆ ಈ ಸಂಘದ [illegible] ಉದ್ದೇಶ್ಯಗಳು ಯಾವವೆಂದರೆ—ಹಿಂದು ದೇವ[illegible]ಗಳಿಗೂ ವ ಇತರ ಧರ್ಮಶಾಲೆಗಳಿಗೂ [illegible]ಪತ್ರಗಳಿಗೂ ಭಿಟ್ಟಿಂಥ ಸಹಾಯ[illegible]ವನ್ನು [illegible]ಗಿ ವಸೂಲು[illegible] ಅಲ್ಲಲ್ಲಿ ನಡೆಯು[illegible]ರ್ಥಕ ಕೆಲಸಗಳನ್ನು [illegible] ನವಿ[illegible] ನಡಿಸುವದು ಈ ದ್ರವ್ಯವು ಒಳ್ಳೆ[illegible] ಪಡಿಯೂ ಗಿಸ್ಸು[illegible] ತೆ ಮೇಲೆ [illegible] ತುವದು ಈ ದ್ರವ್ಯಸಹಾಯದಿಂದ [illegible] ದ [illegible]ಸ್ತ್ರವನ್ನೂ ಇನ್ನೂ ಅನೇಕ [illegible] ಪೂರ್ವ[illegible]ಕತೆಯನ್ನೂ [illegible] ಕ್ಕೆ ತ [illegible] ಅಭಿವೃದ್ಧಿಯನ್ನು [illegible] ಸುವದು [illegible] ವಸ್ಥೆ ಮೊದಲಾದವುಗಳ ಪ್ರಯೋಜನಾರ್ಥವಾಗಿ ಈಗ ಇರುವ ಕಾನೂನು ಮೊತ್ತಂದವುಗಳನ್ನು ವ್ಯಾಪಡಿಸುವದೆ ಸಾಧಿಸುವದು ಇವೇ ಈ ಸಂಘದವರ ಮುಖ್ಯ ಉದ್ದೇಶ್ಯಗಳಾಗಿರುತ್ತವೆ

ದಕ್ಷಿಣ ಕನ್ನಡ.

ನಮ್ಮ ಜಿಲ್ಲೆಗೆ ಮುಖ್ಯ ಪಟ್ಟಣವಾದ ಮದ್ರಾಸ ನಗರದಲ್ಲಿರುವ ಪಾರ್ಕ್ ಎಂಬ ಮೃಗಾಲಯದಲ್ಲಿ ಹುಲಿಯು ಇಲ್ಲದೆ ಇರುವದರಿಂದಲೋ ಏನೋ ನಮ್ಮ ಜಿಲ್ಲೆಗೆ ಸಧ್ಯದಲ್ಲಿ ಚಿತ್ತೈಸುವ ಮದ್ರಾಸ ಗವರ್ನರ ದೊರೆಗಳವರಿಗೆ ಕಾಣಿಕೆಯಾಗಿ ಕೊಡುವ ಬಗ್ಗೆ ಒಂದು ಕರಿಪುಳ್ಳಿ ಹುಲಿ ಮರಿಯು [illegible] ನಮ್ಮ ತಹಶೀಲದಾರರು ತಲಾಷಿ ಮಾಡುವವರಲ್ಲಿದ್ದರು. ಮೊನ್ನೆ ದಿವಸ ಯಾರೋ ಒಬ್ಬರು ಒಂದು ಕಾಡು ಬೆಕ್ಕನ್ನು ಹಿಡಿದು ಒಂದು ಬಲೆಯಲ್ಲಿ ಹಾಕಿ ಹುಲಿಮರಿ ಎಂಬದಾಗಿ ತಹಶೀಲದಾರರಿಗೆ ತಂದು ಒಪ್ಪಿಸಿದರು. ಅದು ಸಣ್ಣ ತರದ ನಾಯಿಯಷ್ಟು ಗಾತ್ರವಿತ್ತು. ಅದಕ್ಕೆ ಸರಿಯಾಗಿ ಆಹಾರ ಶಿಕ್ಕದೆ ಇದ್ದದರಿಂದ ಆ ಬೆಕ್ಕು ಬಲೆಯಲ್ಲಿರುವಾಗ್ಯೆ ಹಸಿವು ರೋಷದಿಂದ [illegible] ರು ಎನ್ನುತ್ತಾ ತನ್ನ ಸಮೀಪಕ್ಕೆ ಬಂದವರ ಕಡೆಗೆ ಹಾರಿಬೀಳುತ್ತಾ [illegible] ರೋಷವನ್ನೂ ಭಯಂಕರ ಸ್ವರೂಪವನ್ನೂ ಸರ್ವಾಂಗದಲ್ಲಿ [illegible]

[illegible] ಹೊಸ ಮನೆಯೊಂದು ತಹಶೀಲುದಾರರು [illegible] ಅದನ್ನು ಒಂದು ದೊಡ್ಡದಾದ ಮರದ ಗೂಡಿನಲ್ಲಿ ಹಾ[illegible] ಕಂಡುಬಂದು ಅದು ಕುಡುಬಿಕ್ಕಿನ ಮರಿಯೆಂಬದು ಸ್ಪಷ್ಟವಾಯಿತು. ಕೂಡಲೇ ಅದನ್ನು ಹೊರದು ಕೊಲ್ಲಿಸಿ ಇಂಥಾ ಮೋಸದಲ್ಲಿ ಬಿದ್ದದ್ದಕ್ಕೆ ತಹಶೀಲುದಾರರು ಬಹಳ ಬೇಜಾರದಲ್ಲಿರುತ್ತಾರೆ.

ಈ ಪ್ರಕೃತದಲ್ಲಿ ಮತವನ್ನು ಮತಸ್ಥರು ಇತ್ತಲಾಗೆ ಸ್ಥಾಪಿಸಿದ ಅಜೀಜಿಯಾ ಮಸ್ಲಿಮ್ ವಿದ್ಯಾಸಂಘವು ದಿನೇದಿನೇ ಕ್ಷಯಿಸುತ್ತಾ ಬರುತ್ತದಂತೆ. ಕಳೆದ [illegible] ಗಿನಲ್ಲಿ ಕೇವಲ 6 ಜನರೇ ಇದ್ದರಂತೆ. ಊ ವಂತಿಗೆಗಳು ಸರಿಯಾಗಿ ವಸೂಲಾ[illegible] ಗುವದಿಲ್ಲವೆಂದೂ ತಿಳಿದುಬಂದಿದೆ. ಸದರೀ ಸಂಘಕ್ಕೆ ಸಂಬಂಧಿಸಿದ ಅಜೀಜಿಯಾ ಮಸ್ಲಿಮ್ ಸ್ಕೂಲ್ ಎಂಬ ಶಾಲೆಯು ವೃದ್ಧಿಗೆ ಬರುತ್ತದೆಂಬದನ್ನು ತಿಳಿಸುವದಕ್ಕೆ ಸಂತೋಷಪಡುತ್ತೇನೆ. ವಿದ್ಯಾರ್ಥಿಗಳ ಸಂಖ್ಯೆಯು [illegible] 40ರ ವರೆಗೆ [illegible] ಟ್ರೇನ್ ಉಪಾಧ್ಯಾಯರನ್ನು ನೇಮಿಸಿದರೆ ಸಂಖ್ಯೆಯು ಇನ್ನಷ್ಟು ಹೆಚ್ಚಾಗ[illegible] ಸದ್ರಿ ಶಾಲೆಯ ವಿದ್ಯಾರ್ಥಿಗಳಿಗೆ ನೇಯಿಗೆಯ ಮರ್ಮವನ್ನು [illegible] ಉದ್ದೇಶದಿಂದ 2 ವಸ್ತ್ರದ ಮಗ್ಗಗಳನ್ನು ಕೊಂಡುಕೊಳ್ಳುವದರಲ್ಲಿದ್ದಾರೆ. ಬೇರೆ ವಿಷಯ[illegible] ಪಾಠಕಲಿಸುವ ಹಾಗೆಯೇ ನೇಯಿಗೆ ವಿಷಯದಲ್ಲಿ ಕೂಡಾ ದಿವಸಕ್ಕೆ [illegible] ಪಾಠಕೊಡಿಸುವ ಅಭಿಪ್ರಾಯದಲ್ಲಿರುತ್ತಾರೆ.

ಮದ್ರಾಸ ಗವರ್ನರ ದೊರೆಗಳವರು ಮಂಗಳೂರಿಗೆ ಹೋಗುವ [illegible] ಇಲ್ಲಿಗೆ ತಮ್ಮ ಸ್ಪೆಶಲ್ ಇಲ್ಲಿಯ ರೈಲ್ವೆ ಸ್ಟೇಶನಿನಲ್ಲಿ ಇಳಿದು ಒಂದು ಘಂಟೆ ತನಕ ತಾಮಸಮಾಡಿ ಈ ನಮ್ಮ ಚಿಕ್ಕ ತಾಲೂಕಿನ ಸ್ಥಿತಿಗತಿಯನ್ನು ತಿಳಿಯುವದಕ್ಕೆ ಅಪೇಕ್ಷೆಪಟ್ಟಿರುವರು. ಇದರ ಬಗ್ಗೆ ಇಲ್ಲಿಯ ಆಫೀಸರರೂ ವಕೀಲರೂ ಕೂಡಿ ಕೆಳಗೆ ಸೂಚಿಸಿದ ಕೆಲವು ಏರ್ಪಾಡುಗಳನ್ನು ಮಾಡಿರುವರು.

(1) ಸುಂದರವಾದ ಒಂದು ಚಿಕ್ಕ ಚಪ್ಪರದಲ್ಲಿ ಸವಾರಿಯನ್ನು ಅಂಗೀಕರಿಸಿ ರಾಜಭಕ್ತಿ ಪರವಾದ ಒಂದು ಬಿನ್ನವತ್ತಳೆ ಕೊಡಲಿಕ್ಕಿರುವರು.

(2) 60 ಜನ ಉಪಾಧ್ಯಾಗಳಿಗೆ ಪೋಲೀಸರ ಹಾಗೆಯೇ "ಯೂನಿಫಾರ್ಮ್" ಅಂದರೆ ಪಟ್ಟಿ ಮೊದಲಾದ ಉಡಿಗೆಗಳನ್ನು ತೊಡಿಸಿ ಅಪ್ಪಾರಿ ಪೋಲೀಸಿನವರ ಹತ್ತರ ಇರುವ ಕೋವಿಯಂತೆ ಒಂದೊಂದು ಕೋವಿಯನ್ನು ಕೊಟ್ಟು ಸರಿಯಾಗಿ ಸಾಲಿನಲ್ಲಿ ನಿಲ್ಲಿಸಿ ದೊರೆಗಳಿಗೆ ಗಾರ್ಡ್ ಕೊಡಿಸುವರು. ಇದಕ್ಕೋಸ್ಕರ [illegible] 2 ತಿಂಗಳ [illegible] 60 [illegible]

(3) [illegible]

[illegible]

ವಿದೇಶ ವೃತ್ತಾಂತ.

ಪಾಶ್ಚಾತ್ಯದೇಶಗಳಲ್ಲಿ ಗೋಧಿ ಬೆಳೆಯು ಹಾಳಾದ್ದರಿಂದ ಗೋಧಿಗೆ ವಿಶೇಷ ಬೆಲೆ ಏರಿರುವದು. ಜರ್ಮನಿಯವರು ವಿಲಾಯತಿ ಮುಂತಾದ ದೇಶಗಳಿಗೆ ಗೋಧಿಯನ್ನು ರಫ್ತುಮಾಡುತ್ತಿದ್ದರು. ಈ ವರುಷ ಇಲ್ಲಿ ಸಹಾ ಬೆಳೆಯು ಹಾಳಾಗಿ ಅಲ್ಲಿಯ ಸಾವುಕಾರರು ವಿಲಾಯತಿಗೆ ಬಂದು ಅಲ್ಲಿಂದ ಗೋಧಿ ತಕ್ಕೊಳ್ಳುತ್ತಿರುವರು.

ತಾಮ್ರಕ್ಕೆ ಕ್ರಯ ತಗ್ಗಿದ್ದರಿಂದ ಅಮೇರಿಕದಲ್ಲಿ ಅನೇಕ ಈ ವ್ಯಾಪಾರದ ಕಂಪಿನಿಗಳು ದಿವಾಳಿ ತೆಗೆದಿರುವರು. ಈ ದಿವಾಳಿಗಳ ದೆಸೆಯಿಂದ ಲೆಟಿತೆನೋಟಿರ ದಿವಾಳಿ ಕಾಲದಲ್ಲಿ ಇಲ್ಲಿ ಉಂಟಾದ ಗಲಿಬಿಲಿಯಂತೆ ಅಲ್ಲಿ ಸಹಾ ಜನರೆಲ್ಲರೂ ಬೇಂಕುಗಳಲ್ಲಿಟ್ಟಿರುವ ಹಣಗಳನ್ನು ಒಂದೇ ಸಲ ವಾಪಸು ಪಡಿಯುತ್ತಿರುವರು.

ಕೆನಡಾ ಗವರ್ನರ್ಮೆಂಟಿನವರು ಹಿಂದೂಗಳು ತಮ್ಮ ದೇಶದಲ್ಲಿ ಒಂದು ಊಳಕೊಳ್ಳದ ಹಾಗೆ ಇಂಡಿಯಾ ಗವರ್ನಮೆಂಟಿನವರಿಗೆ ತಿಳಿಸಬೇಕೆಂದಿದ್ದಾರೆ.

ಪಂಜಾಬಿನ ಕೆನಾಲ್ ಲೆಗಿಸ್ಲೇಶನನ್ನು ವಜಾಮಾಡಿ, ಅಜೀತ್‌ಸಿಂಗರನ್ನೂ ಲಾಲಾ ಲಜಪತರಾಯರನ್ನೂ ಕೈದು ಮಾಡಬೇಕು ಇಲ್ಲವೆ ತಾನು ರಾಜೀನಾಮೆ ಕೊಡುವೆನೆಂದು, ಕಿಚ್ಚನರ್ ಸಾಹೇಬರು ಛಲ ಹಿಡಿದದ್ದರಿಂದ ಮಿಂಟೊ ಪ್ರಭುಗಳು ಆ ರೀತಿ ವರ್ತಿಸಿದರೆಂಬ ವರ್ತಮಾನವು ನಂಬತಕ್ಕದ್ದಲ್ಲವೆಂದಾಗಿ ಇಂಡಿಯಾ ಆಫೀಸಿನವರಿಂದ ತಿಳಿದುಬರುತ್ತದೆ.

ಸಿಕ್ಕ್ [illegible] ಯೂ ಪಾಕ್ಕಾ [illegible] ಮಂಜೂರು ಮಾಡತಕ್ಕದ್ದಲ್ಲ [illegible] ತಿದ್ದಿ ಅವರಲ್ಲಿ [illegible] ಕೆಂದೂ ಹೇಳಿದರು.

ನಾಗಪುರದಲ್ಲಿ [illegible] ಬೇಂಕಿನ [illegible] ಪ್ರಸಿದ್ಧನಾದ [illegible] ಗ್ರಸಿ [illegible] ಜಾಮೀ[illegible] ಲೆಂದೂ [illegible]

ಕಲಿಕತ್ತೆಯ [illegible] ವಾನ ಬ್ರಹ್ಮಬಾಂಧವ ಉಪಾಧ್ಯಾಯರ [illegible] ರಾದರೆಂ [illegible] ನೀಲಿ ಬಾರಿ [illegible] ವ ಹೊಕನಿಯ [illegible] ನ್ನು ತೆಗೆದು [illegible]

ಸಿ. ಕೆ. ಯರ್ [illegible] ವರು ಮಂಗಳೂರಿಗೆ ಹೋಗಿರುವರು.

ಕಳೆದ ವರ್ಷ ಬೆನಾರಸಿನ ಮುಸಾಫಿರ [illegible] ತ್ರಿಭುವನ ಎಂಬಲ್ಲಿಗೆ [illegible] ರೂಪಾಯಿ ಕ್ರಯದ ಆಭರಣಗಳು ಕಳವಾಗಿ ಕಳ್ಳರು ಯಾರೆಂದು ಇದುವರೆಗೂ ಪತ್ತೆ ಯಾಗಲಿಲ್ಲವಿತ್ತು. ಕೆಲವು ದಿವಸಗಳ ಹಿಂದೆ ಪೋಲೀಸಿನವರು ಆ ಕಳ್ಳರನ್ನು ಹಿಡಿದು ಒಂದೆರಡು ಉಂಗುರಗಳ ಹೊರತು ಬಾಕಿ ಎಲ್ಲಾ ಆಭರಣಗಳೂ ಸಿಕ್ಕಿರುವವು.

ದಾವ [illegible] ಅವರ [illegible] ಆಲಯವನ್ನು ಕಟ್ಟಿಸುವ [illegible] ರೂಪಾಯಿ ವಸೂಲ ಸ್ಯಾಂಕ್ಷನ್ ಮಾಡಿರುತ್ತಾರೆ.

ಮದ್ರಾಸು ಹೈಕೋರ್ಟಿನಲ್ಲಿ ಸೆಷನ್ಸ್ [illegible] ಅಡ್ವೊಕೇಟ್ ಜನರಲ್ [illegible] ಸ್ಥಾನಕ್ಕೆ [illegible] ಮಿಸ್ಟರ್ [illegible] ದೊರೆಯವರನ್ನು ನಮ್ಮ ಚಕ್ರವರ್ತಿ [illegible] ಇವರು [illegible] 20 [illegible]

[illegible]

ದಕ್ಷಿಣಕನ್ನಡ.

ಬಾಕ್ಕಿದಾರರಿಗೆ ನೋಟೀಸು—[illegible] ಕ್ರಮವಾಗಿ ಪ್ರಕ[illegible]

ಮಂಗಳೂರು ಕಳೆದ ತಿಂಗಳ [illegible] ಸಾಯಿ ಪನ್ನದಲ್ಲ [illegible] ಬಂದರ [illegible] ಇವರು [illegible] ಇಲ್ಲಿ ಒಬ್ಬರಿಂದ ತೋರಿಸಿದ ಒಂದು ಆಸಾಮಿಯು [illegible] ಗೆಯಿಂದ ಪತ್ತೆಪಟ್ಟಿರುವನು.

ನಮ್ಮ ಕಲೆಕ್ಟರ್ ದೊರೆಗಳವರು ಗವರ್ನರರ [illegible] ನಕ್ಕೋಸ್ಕರ ಮೂಡಬಿದ್ರೆ ಮತ್ತು ಕಾರ್ಕಳದಲ್ಲಿ ಸರ್ವವೂ ತಯ್ಯಾರಿಯಲ್ಲಿರುವದೋ ಎಂಬದನ್ನು ನೋಡಲಿಕ್ಕೆ ಹೋಗಿರುವರು. ಈ ಮೊದಲು ಮಂಗಳೂರು ತಹಸಿಲ್ದಾರರವರು ಈ ಬಗ್ಗೆ ಮೂಡಬಿದ್ರೆಗೆ ಹೋಗಿದ್ದರು.

ಉತ್ತರ ಹಿಂದುಸ್ಥಾನ.

ಸಿಡಿಸಿಯಸ್ ಮೀಟಿಂಗ್ಸ ಬಿಲ್ ಯಾನೆ ರಾಜದ್ರೋಹಕರವಾದ ಸಭೆಗಳ ಕುರಿತು ಮೀಟಿಂಗನ್ನು ಈ ತಿಂಗಳ [illegible] ದಿವಸ [illegible] ಇಟ್ಟಿರುವರು. ಈ ಬಗ್ಗೆ ಆರಿಸಲ್ಪಟ್ಟ

ದಕ್ಷಿಣ ಹಿಂದುಸ್ಥಾನ.

ಮೈಸೂರು ಸರಕಾರದವರು ಜಿಯಾಲೊಜಿಕಲ್ ಎಕ್ಸಿಬಿಶನ್ ಹೊಳೆಂಬ ಭೂಮಿಯಲ್ಲಿ ಅಗಿದು ಸಿಕ್ಕಬಹು

ಇಲ್ಲಿಯ ಕೆಲವು ದೇವಸ್ಥಾನಗಳಲ್ಲಿಯೂ, ಇತರ ಮನೆಗಳಲ್ಲಿಯೂ ವಿದೇಶಿ ಸಕ್ಕರೆಯನ್ನೂ ಕರ್ಪೂರವನ್ನೂ ಬಹಿಷ್ಕರಿಸಿರುವರು.

ಇಲ್ಲಿ ಮೇಣದ ಬತ್ತಿಗಳನ್ನೂ ಸ್ವದೇಶಿ ಸಾಬೂನುಗಳನ್ನೂ ತಯ್ಯಾರಿಸಲಿಕ್ಕೆ ಕಲಿತು ಬಂದ ಮ| ಶೇಷಗಿರಿ ಮಲ್ಯ ಎಂಬವರು ಈ ಎರಡನ್ನೂ ತಯ್ಯಾರಿಸಲಿಕ್ಕೆ ಸದ್ಯದಲ್ಲಿ ಕಾರಖಾನೆ ಇಡುವದಾಗಿ ಕೇಳುತ್ತೇವೆ

ದೇಶ ಹಿತಕಾ[illegible] ಸಭೆಯು ವಿಷಯ ಈ ಮೊದಲು ಒದಗಿದೆವು. ಈ ಸಂಘದವರು ಸ್ವದೇಶಿ ವಸ್ತುಗಳ ಪ್ರಚಾರವನ್ನು ವೃದ್ಧಿಸಲಿಕ್ಕೆ ಪ್ರಯತ್ನಿಸುತ್ತಿರುವ[illegible] ಕಡೆಗಳಲ್ಲಿರುವ ಸ್ವದೇಶಿ ಕಾರಖಾನೆಗಳಿಂದ [illegible]

[illegible]

ಹಲವು ವರುಷಗಳ ಹಿಂದೆ [illegible] ಹಿಂದೆ [illegible] ಗೌರವಾರ್ಥ [illegible] ಈ ಕೆನರಾ ಹ್ಯಾಯಸ್ಕೂಲ್ [illegible]

ಈ ಶಾಲೆಯ ವಿದ್ಯಾರ್ಥಿ ಜನರ ಯಾ ಹೊಸ್ಟೆಲಿನಲ್ಲಿ ವಿದ್ಯಾರ್ಥಿಗಳ ಸಂಖ್ಯೆಯು ಅಧಿಕವಾಗುತ್ತಿರುವದರಿಂದ ಈಗಿರುವ ಈ ಕಟ್ಟೋಣಗಳಿಗೆ ಉಪ್ಪರಿಗೆಗಳನ್ನು ಹಾಕಿಸುವ ಆಲೋಚನೆಯುಳ್ಳವರು. ವಿದ್ಯಾರ್ಥಿಗಳ ಈ ಜನವಸತಿ ದಿನೇ ದಿನೇ ಹೆಚ್ಚುತ್ತಿರ ವರುದರಿಂದ ಜನವಸದ ಪ್ರಯೋಜನವನ್ನು ಕಣ್ಣಾರೆ ಕಂಡಂತಾಯಿತು. ವಿದ್ಯಾರ್ಥಿಗಳು ಯೋಗ್ಯವಾದ ರೀತಿಗಳಲ್ಲಿಯೇ ಇರುವ ಹಾಗೆ ಶಾಲಾಧಿಕಾರಿಗಳು ಹೆಚ್ಚಿನ ಮೇಲ್ವಿಚಾರಣೆಯನ್ನು ತೆಗದುಕೊಳ್ಳುವರು. ವಿದ್ಯಾರ್ಥಿಗಳು ಅನ್ಯೋನ್ಯ ಭಾವದಿಂದಿರುವಂತೆ ಈ ಹೊಸ್ಟೆಲಿನಲ್ಲಿ ಒಂದು ವಿದ್ಯಾರ್ಥಿ ಸಂಘವಿರುವದು. ಈ ಸಂಘದ ಎರಡನೇ ವರ್ಧಂತಿಯು ನಾಳೆ ದಿನ ನೆರವೇರುವದಾಗಿ ಕೇಳುತ್ತೇವೆ.

ಕುಂದಾಪುರದ ಹೆಡ್ ಅಸಿಸ್ಟಾಂಟ ಕಲೆಕ್ಟರಾದ ಮೇ ಡೊಮಿಂಗ್ ದೊರೆಗಳು ತನ್ನ ಛಾರ್ಜಯನ್ನು ಇಲ್ಲಿಯ ಡಿವಿಜನಲ್ ಆಫೀಸರರಾದ ನಾರಾಯಣ ಮೇನನವರಿಗೆ ವಹಿಸಿಕೊಟ್ಟು ಮಲಬಾರಿಗೆ ಹೋಗಿ ಅಲ್ಲಿಯ ಹೆಡ್ ಅಸಿಸ್ಟಾಂಟ ಕಲೆಕ್ಟರೊಂದಿಗೆ, ಅಮಿನ್ ದೀವಿ ದ್ವೀಪಗಳಿಗೆ ಹೋಗುವರು

ಇಂಡಿಯಾ ಗವರ್ನಮೆಂಟಿನವರು ಮದ್ರಾಸ ಆದಿಪತ್ಯದಲ್ಲಿರುವ ಲೋಕಲ ಫಂಡ್ ಬೋರ್ಡಿನವರಿಗೆ ರೈತರಿಗೆ ಉಪಯೋಗವಾಗುವ ಹಾಗೆ ಮಾಡ[illegible] ರೂ. 1380,000 ರೂಪಾಯಿಗಳನ್ನು [illegible] ಸೆಂಕ್ಷನ್ ಮಾಡಿರುವರು. ಈ ಮೊತ್ತ [illegible]

[illegible]

ಈ ವರ್ಷ [illegible] ಮೆಟ್ರಿಕ್ಯುಲೇಶನ್ ಪರೀಕ್ಷೆ [illegible] ಕೆನರಾ ಹ್ಯಾಯಸ್ಕೂಲ್ ಜುಬಿಲೀ [illegible] ಡಿವಿಜನಲ್ ಆಫೀಸರರಾದ [illegible] ಕೆನರಾ ಹ್ಯಾಯಸ್ಕೂಲಿನವರು

ಇಂಡಿಯಾ ಸರಕಾರದವರು ಪ್ಲೇಗು ರೋಗದ ಹಾವಳಿಯನ್ನು ಸಾಧ್ಯವಾದ ಮಟ್ಟಿಗೆ ಕಡಿಮೆ ಮಾಡುವರೆ ಪ್ಲೇಗಿಗೆ ದಾಕು ಹಾಕುವ ಕ್ರಮವನ್ನು ಜಾರಿಗೆ ತರುವರು. ಇದರಿಂದ ಪ್ಲೇಗು ರೋಗದಿಂದ ಪೂರ್ಣ ಬಿಡುಗಡೆ [illegible] ದಾಕು ಹಾಕಿಸದಿರುವವರಿಗೆ ರೋಗ ತಗಲುವ ಸಂಭವವು ಕಡಿಮೆಯಾಗಿ ಒಂದು ವೇಳೆ ಹಾಗೆ ತಗಲಿದರೂ ದಾಕು ಇದ್ದವರು ಮೃತಪಡುವದು ಕಡಿಮೆ. ಈ ಬಗ್ಗೆ [illegible] ಪರೀಕ್ಷೆ ಪಾಸಾದವರನ್ನು ರೂಪಾಯಿ [illegible] ಮೇಲೆ ನೇಮಕಮಾಡುವರು. ನಮ್ಮ ಜಿಲ್ಲೆಗೂ ತಲಚೇರಿಗೂ ಇಬ್ಬರು ಮೊಕ್ತೆಸರಾಗಿ ಸದ್ಯದಲ್ಲಿ ಬರುವರು

"ಕೆನರಾ ಹ್ಯಾಯಸ್ಕೂಲ್ ಮೆಗಜೀನ್" ಎಂಬ ಕೆನರಾ ಹ್ಯಾಯಸ್ಕೂಲಿನವರಿಂದ ರಚಿತವಾದ ಮಾಸ ಪತ್ರಿಕೆಯು ಕಳೆದ ತಿಂಗಳಲ್ಲಿ ಪ್ರಕಟಿಸಲ್ಪಟ್ಟಿದೆ. ಈ ಮಾಸ ಪತ್ರಿಕೆಯು ವಿದ್ಯಾರ್ಥಿ ಸಮುದಾಯಕ್ಕೂ ಇತರರಿಗೂ ಪ್ರಯೋಜನಕಾರಿಯಾದ ಹಲವು ವಿಷಯಗಳನ್ನು ಪ್ರಕಟಿಸಿರುವದು.

[illegible] ಮದ್ರಾಸ ಕಲಾಶಾಲೆಯ [illegible] ಮಾತ್ರವಲ್ಲ ಸಾಹಸದ ಉಪಾಧ್ಯಾಯ ವರ್ಗ [illegible] ಲೆಯಿಂದ ಪಾಸಾಗಿ ಹೋದ ವಿದ್ಯಾರ್ಥಿಗಳೂ, ಕೆನರಾ ಹ್ಯಾಯಸ್ಕೂಲೆಂಬ ಸಂಸ್ಥೆಯನ್ನು ಸ್ವಾರ್ಥತ್ಯಾಗದಿಂದಲೂ ಪರಾರ್ಥ ಪರತೆಯಿಂದಲೂ ಹ್ಯಾಗ ಎಲ್ಲಾ ವರ್ಗಗಳಿಗೂ ಪ್ರಯೋಜನಕಾರಿಯಾಗಿ ಮಾಡಿದ್ದಾರೋ ಹಾಗೆಯೇ ಈ ಮಾಸ ಪತ್ರಿಕೆಯನ್ನು ಸಹ ತಮ್ಮ ಪ್ರನಮ ಸಂಚಿಕೆಯಂತೆಯೇ ಸಾರ್ಥಕವೆಣಿಸಲು ಪ್ರಯತ್ನಿಸುವರಾಗಿ ಕೋರುತ್ತೇವೆ. ಇದು ದೀರ್ಘ ಕಾಲ ಬಾಳಲಿ ಎಂಬದು ನಮ್ಮ ಕಾಂಕ್ಷೆ

— —

ಹೊಸದುರ್ಗ ಬೆಳ್ಳಂಗನೆಬೊಟ್ಟು ಬಿಲ್ಲರವನು ಮುಂಚಿನ ದಾನಪ್ಪಯ್ಯ ನವ್ವೆರ ಮೇಲೆ ಕೊಟ್ಟ ಪಿರ್ಯಾದಿಯಲ್ಲಿ ಹೊಸದುರ್ಗ ಸಬ್ ಮೆಜಿಸ್ಟ್ರೇಟರು [illegible] ದಂಡನೆ ವಿಧಿಸಿದರೆಂದು ಈ ಮೊದಲು ಪ್ರಕಟಿಸಿದ್ದೆವು. ಈ ತೀರ್ಪಿನ ಮೇಲೆ ಮುದ್ದೈಯಾಳು [illegible] ಅಪೀಲು [illegible] ಎಂದು ತಿಳಿಸಲಿಕ್ಕೆ ಸಂತೋಷಪಡುತ್ತೇವೆ

ಈ ಮೊದಲು ಪ್ರಬಲವಾಗಿದ್ದ ಶಾಂತಿಜ್ವರ ರೋಗವು ಸ್ವಲ್ಪ ಶಾಂತವಾಯಿತೆಂದು ನಾವು ಧೈರ್ಯಪಡುತ್ತಿರುವಾಗ ಈ ವ್ಯಾಧಿಯು ಕಳೆದೋರಿ ಹೆಚ್ಚು ಹಾವಳಿಯನ್ನು ಮಾಡಲಿಕ್ಕೆ ತೊಡಗಿದೆ

ಈ [illegible] ಕಾಸರಗೋಡು [illegible] ಹೊಸದುರ್ಗ [illegible] ನರ ಸಾಮಾನುಗಳನ್ನು [illegible] ಈ ಕಾಯ[illegible] ಹೊಸದುರ್ಗ ಮಿಷನ್ ಶಾಲೆಯಲ್ಲಿ ಒಂದು ಸಭೆಯು ಕೂಡಿ ರೂಪಾಯಿ [illegible] ವಂತಿಗೆ ಕೂಡಿಸಲ್ಪಟ್ಟಿತು

M T K

ಇಲ್ಲಿ ಒಂದು ಸ್ವದೇಶಿ ಸಾಬೂನು ಕಂಪೆನಿಯು "ಕೆನರಾ ಸೋಪವರ್ಕ್ಸ ಹೊಸದುರ್ಗ" ಎಂಬ ಹೆಸರಿನಿಂದ ಶುರು ಆಗಿಯದೆ. ಅದನ್ನು ಮ ರಾ ರಾ ಗಣೇಶರಾಯರು ಶುರುಮಾಡಿದ್ದಾಗಿರುತ್ತದೆ. ಸಾಬೂನು ನಾಜೂಕ ತರದ್ದಾಗಿರುವದು. ಇದಕೆ ಉತ್ತೇಜನ ಎಲ್ಲರೂ ಕೊಡಲಿ.

ಇಲ್ಲಿಯ ಪೋಸ್ಟ ಆಫೀಸಿನ ಬಗ್ಗೆ ಹೊಸದುರ್ಗ ಸಾಹುಕಾರ ಮ ರಾ. ರಾ. ನಾರಾಯಣ ಭಂಡಾರಿ ಎಂಬವರು ಹೊಸ ಕಟ್ಟೋಣ ಕಟ್ಟಿಕೊಡುವರೆ ಒಪ್ಪಿರುತ್ತಾರೆ. ಕಟ್ಟೋಣವು ಮಾರ್ಗಕ್ಕೆ ಸಮೀಪ ಕಟ್ಟುತ್ತಾರೆ.

ಇಲ್ಲಿಂದ ಮಂಗಳೂರು ವರೇಗೆ ಮದ್ರಾಸ್ ಸ್ಟೆಂಡಾರ್ಡ ಪತ್ರಿಕೆಗಳನ್ನು ಚಂದಾಹಣ ಕೊಟ್ಟವರಿಗೆ ಕೊಡುವರೆ ಮ ರಾ. ರಾ. ಯಲ್ಲೂರ ರಾಮರಾಯರನ್ನು ಏಜಂಟರಾಗಿ ನೇಮಿಸಿರುತ್ತಾರೆ.

ತಾರೀಕು 24-10-07.

ಕಾಸರಗೋಡು ತಾಲೂಕು ಓವರ್ಸಿಯರರವರು [illegible] ಆಫೀಸಿನ ಪ್ಯಾದೆ ಲಕ್ಷ್ಮಣನನ್ನು ಒಂದು [illegible] ಹಣವನ್ನೂ ತರುವ ಬಗ್ಗೆ ಮಂಗಳೂರಿಗೆ [illegible] ಫಂಡ್ ಇಂಜಿನಿಯರ ಆಫೀಸ [illegible]

[illegible] ನಮಗೆ [illegible] ಸ್ಟೇಶನಿಗೆ ಕಂದು [illegible] ಒಂದು ರೂಪಾಯಿ ಚಾರ್ಜು ಕೊಡಬೇಕಾಯಿತು. ಆ ಬಗ್ಗೆ ಒಂದು ರೂಪಾಯಿಯ ರಶೀದಿಯನ್ನು ಸಹ ಈತನಿಗೆ ಕೊಟ್ಟರು. ಸದರೀ ರಶೀದಿಯನ್ನು ಕಾಸರಗೋಡಿಗೆ ತೆಗದುಕೊಂಡು ಬಂದು ಅದರಲ್ಲಿ ಹೆಚ್ಚಿಗೆ ೮ ಅಣೆಯ ಅಂಕೆಯನ್ನು ಶೇರಿಸಿ ಫೋರ್ಜರಿ ಮಾಡಿ ಓವರ್ಶಿಯರರು ಈ ರಶೀದಿಯು ನಿಜವಾದ ರಶೀದಿ ಎಂದು ನೆನಸಿ ಅದನ್ನು ತನ್ನ ಇತರ ಲೆಖ್ಖಗಳ ಮತ್ತು ರಶೀದಿಗಳ ಸಂಗಡ ಇಂಜಿನಿಯರರ ಆಫೀಸಿಗೆ ಎಂದಿನಂತೆ ರವಾನಿಸಿದರು. ಅಲ್ಲಿ ಈ ರಶೀದಿಯು ಫೋರ್ಜರಿ ರಶೀದಿ ಎಂದು ಹ್ಯಾಗೋ ಕಂಡ ಹಿಡಿದು ಸದರೀ ಪ್ಯೂನಿನ ಮೇಲೆ ಫೋರ್ಜರಿ ಚಾರ್ಜು ಏರ್ಪಡಿಸಿ ಮೇಜಿಸ್ಟ್ರೇಟರ ಮುಂದೆ ಈತನನ್ನು ಹಾಜರುಪಡಿಸಬೇಕೆಂತ ಇಂಜಿನಿಯರರು ಹುಕುಂ ಓವರ್ಶಿಯರಿಗೆ ತಲ್ಪಿದ ಮೇರೆಗೆ ಸದರೀ ಸಂಗ್ರವು ಮೇಜಿಸ್ಟ್ರೇಟರ ಮುಂದೆ [illegible] ಕ್ಲಾಸು ಪುತ್ತೂರು ಡಿವಿಜನು ಮೇಜಿಸ್ಟ್ರೇಟರ ಬಳಿಗೆ ರವಾನಿಸಿರುತ್ತಾರೆ

ಇಚ್ಲಂಪಾಡಿ ದೊಡ್ಡವನೆ [illegible] ಇದೇ ತಿಂಗಳ ತಾರೀಕು [illegible] ಮಾಡಿದ ಮಾಪಿಳೆಯನ್ನು [illegible] ದಿನ [illegible] ಒಂದನೇ ಕ್ಲಾಸ್ ಮೇಜಿಸ್ಟ್ರೇಟರ ಮುಂದೆ ಹಾಜರುಪಡಿಸಿದರೆ ಇಲ್ಲಿಯ ಪೋಲೀಸಿನವರು [illegible] ಈ ತಸ್ಕೀರನ್ನು [illegible] ಇದಲ್ಲದೆ [illegible] ಸದರಿ ಮಾಪಿಳೆಯನ್ನು ತಸ್ಕೀರಿ [illegible] ದಲು ಸದರಿ [illegible] ಚೆನ್ನಾಗಿ ಹೊಡಿಸಿ [illegible] ಜನಜನಿತವಾ [illegible] ರದೆ ಎಲೆ ಪಂದಾದ ನದೇ? [illegible] ವರೂ, ಹೆರಲುನವರೂ, [illegible] ಕೆಲವರಲ್ಲಿ ವಿಶೇಷವಾಗಿ [illegible] ಬರುತ್ತದೆ

ಕಾಸ್ರಗೋಡು [illegible] ದೂರ [illegible] ಲಿಬ್ಯಾರಿ ಎಂಬ [illegible] ದಾಗಿ ಸಗ್ಗಿ ಬೇಸಾಯದ [illegible] ದು ಗದ್ದೆಯಲ್ಲಿ ಬೆಳಿಸಿದ್ದರು. ಇವರ [illegible] ನು ತಾನು [illegible] ವಡಿಸಿ ನಡುವ [illegible] ಹಿರೇ [illegible] ಕೂಡಿ ಹಿರೇ [illegible] ಕುಡಿಯನ್ನು ಕತ್ತಿ [illegible] ಗುಡಿಗೆಗಳಿಂದಲೂ ಇತ್ತಂಡಿನವರು [illegible] ಹೊಡಕೊಂಡಿರುತ್ತಾರೆ. ಜಖಂ ಪಟ್ಟವನು [illegible] ವರ ಮೇಲೆ ಪಿರ್ಯಾದು ಮಾಡಿರುತ್ತಾನೆ. ಬೇಸಾಯದ ಕಾಲದಲ್ಲಿ ಅನೇಕ ಕಾರಣಗಳಿಂದ ಜಗಳಗಳುಂಟಾಗಿ ಮರಣಗಳ ಉಂಟಾಗುತ್ತವೆ

ಸದರೀ ಬೇವಿಂಜೆ ಗ್ರಾಮದಲ್ಲಿ ಮೇಲೆ ಪ್ರಸ್ತಾಪಿಸಿದ ಕಳವು ನಡಿಯುವ ಸ್ವಲ್ಪ ದಿವಸದ ಮೊದಲು ಮತ್ತೊಂದು ಭಾರಿ ಕಳವು ನಡದಿತ್ತು. ಇದರಲ್ಲಿ ಸುಮಾರು ೮೦೦ ರೂಪಾಯಿ ವರೇಗಿನ ಚಿನ್ನಾಭರಣಗಳೂ ನಗದಿ ಹಣವೂ ಕಳವಾಗಿಯದಂತೆ. ಈ ತಸ್ಕೀರು ನಡಿಸಿದವರು ಇನ್ನೂ ಪತ್ತೆಯಾಗದಿದ್ದದ್ದು ಬಹಳ ಆಶ್ಚರ್ಯವೇ ಸರಿ.

ಕಾಸರಗೋಡು ಕಸಬೆಯಲ್ಲಿ ಕಂತೇಕೋರ ಎಂಬ ಒಬ್ಬ ಬಿಲ್ಲವನು ತನ್ನ ಹಿತ್ತಲಲ್ಲಿ ಸುಮಾರು ೩ ವರುಷ ಪ್ರಾಯದ ತೆಂಗಿನ ಸಶಿಗಳು ೨೫ನ್ನು ೩ ಜನ ಕಳ್ಳರು ಒಂದು ದಿವಸ ರಾತ್ರಿ ಕದ್ದು ಒಬ್ಬ ಮಾಪಿಳೆಗೆ ಮಾರಿ ಬಿಟ್ಟಿದ್ದರು. ಈ ಸಂಗ್ರವು ಕೆಲವು ಕಾಲದಿಂದ ಪೋಲಿಸಿನವರ ಹತ್ತರಲೂ ಮೆಜಿಸ್ಟ್ರೇಟ್ ಖಚೇರಿಯಲ್ಲಿಯೂ ತನಿಖಿಯಲ್ಲೇ ಇತ್ತು. ಇದರ ವಿಚಾರಣೆಯು ಈಚೆಗೆ ತೀರಿತು. ಪರಿಣಾಮವಾಗಿ ಮೆಜಿಸ್ಟ್ರೇಟರು ಇಬ್ಬರು ಮಾಪ್ಪಿಳೆಯಾಳಿಗೆ ಎರಡೆರಡು ತಿಂಗಳ ಕಠಿಣ ಸಜವನ್ನು ವಿಧಿಸಿದರು. 3ನೇ ಮಾಪ್ಪಿಳೆಯಾಳಿಯು ಪರಾರಿಯಾದ್ದರಿಂದ ಇನ್ನೂ ಶಿಕ್ಕಲಿಲ್ಲ.

ಮುಲ್ಕಿ—ಮುಲ್ಕಿ ಕ್ಷೇತ್ರದಲ್ಲಿ ಎಲ್ಲಾ [illegible] ಕ್ರಮ ವರಿ [illegible] ದಿನ ತೆ [illegible] [illegible] ದರಿಂದ [illegible] ಬಹಳ [illegible] ಕೊಡುವ ಕೆಲಸಗಳಿಂದ ದಿನಕರಣೆ [illegible] ಆದರೆ [illegible] ನೌಕರರ ಗತಿ [illegible] ಅನೇಕ ನೌಕರರಿಗೆ [illegible] ಈಗ ಕಡ [illegible] ಕೇಳ [illegible] ಪ್ರತೀತಿ [illegible]

ಇದೇ [illegible] ಮುಲ್ಕಿ [illegible] ದೊಡ್ಡ [illegible] ತಮ್ಮ [illegible] ಆ ದಿನ [illegible] ಒಂದು [illegible] ಕಾಂಗ್ರೆಸ್ [illegible] ಕೂಡಿದ [illegible] ಪ್ರಸ್ತಾಪ [illegible] ಸ್ಥಾಪನ [illegible] ಸನ್ನಿವೇಶ [illegible] ಸ್ನ ಬದ್ಧ [illegible] ಮಾಡಿದರು [illegible] ರಾತ್ರಿ 11-0 ಗಂಟೆ [illegible] [illegible] ಲೋಕದ [illegible] ಒಂದು ದೊಡ್ಡ [illegible] ದರಲ್ಲಿ ಸ್ವದೇಶಿ [illegible] ಕೆಲವು [illegible] ಇದೆ [illegible] ಹೇಳುವವರು ಇಲ್ಲಿಗೆ ಬಂದು ಧರ್ಮ ಪ್ರಸಂಗ [illegible] ಹರಿಕಥೆಯನ್ನು ಹೇಳುತ್ತಾ ಇದ್ದಾರೆ.

ಉಡುಪಿ. ಚಿತ್ತಾ ನಕ್ಷತ್ರದಲ್ಲಿಯೂ ಮಳೆಯು ವರ್ಷಿಸುತ್ತಾ ಇದ್ದುದರಿಂದ ಕಡಿವಿಗೆ ಅಲ್ಪಸ್ವಲ್ಪ ಉಪದ್ರವಾದರೂ ಸುಗ್ಗಿ ಸಾಗುವಳಿಗೆ ಅನುಕೂಲವಾಯಿತು. ಅಕ್ಕಿಗೂ ಎಣ್ಣೆಗೂ ಕ್ರಯವು ಇಳಿತರವಾಗುತ್ತಾ ಬರುತ್ತದೆ.

ಕಳೆದ ತಾ 5ರಂದು ಈ ಪ್ರಾಂತ್ಯದ ಉಪಾಧ್ಯಾಯರ ಸಂಘವು ಜರಗಿತು. ಆಕ್ಟಿಂಗ್ ಅಸಿಸ್ಟಾಂಟ್ ಇನ್ಸಪೆಕ್ಟರಾದ ಮ ರಾ ವಿಶ್ವೇಶ್ವರಾಯರವರು ಅಗ್ರಸ್ಥಾನವನ್ನು ವಹಿಸಿ ಕಲಿಸುವದರಲ್ಲಿ ಹೊಸ ಕ್ರಮವನ್ನು ಉಪಾಧ್ಯಾಯರುಗಳಿಗೆ ಬೋಧಿಸಿದರು

ಮಂಗಳೂರಿಂದ ಬಂದಿರುವ ವೇ ಮ ರಾ ರಾಮಚಂದ್ರಾಚಾರ್ಯರವರ ನವರಾತ್ರಿ ಕಾಲದಲ್ಲಿ ಇಲ್ಲಿಯ [illegible] ಕಟ್ಟೆ [illegible] ದೇವಸ್ಥಾನದಲ್ಲಿ ಐದು ದಿವಸಗಳ ವರೆಗೆ "ಶ್ರೀನಿವಾಸ ಕಲ್ಯಾಣ" ಹರಿಕಥೆಯನ್ನು ಮರಾಠಿ ಭಾಷೆಯಲ್ಲಿ ಬಹು ರಸವತ್ತಾಗಿ ಮಾಡಿದರು. ಇವರು [illegible] ತತ್ವೋಪದೇಶವನ್ನು ಬೋಧಿಸ [illegible] ತ್ತು.

ಇಲ್ಲಿಯ ವೆಂಕಟರಮಣ ದೇವಸ್ಥಾನದಲ್ಲಿ ಕೆಲವು ಕಾಲ ನಡಿಯುತ್ತಿದ್ದ ವೇದ ಪಾಠಶಾಲೆಯು ಈಗ ನಿಲ್ಲಿಸಿರುವಂತೆ ತಿಳಿದು ವ್ಯಸನವಾಗುತ್ತದೆ

ಮದ್ರಾಸಿನಲ್ಲಿ ಚಾತುರ್ಮಾಸ ಸಂಕಲ್ಪಕ್ಕೆ ಕೂತಿದ್ದ ಇಲ್ಲಿಯ ಪೇಜಾವರ ಶ್ರೀಪಾದಂಗಳವರು ಈ ತಿಂಗಳು ತಾ ೫ಕ್ಕೆ ಮದ್ರಾಸಿನಿಂದ ಹೊರಟು ಕುಂಭಕೋಣದ [illegible] ಕಡೆಗೆ ಪ್ರಯಾಣ ಬೆಳಸಿದರು.

[illegible] ಹಳ್ಳಿ [illegible] ಸೂಳೆ [illegible] ಮಂದ [illegible] ಕಳವಾದ್ದು. [illegible] ಇನ್ನೂ ಪತ್ತೆಯಾಗಲಿಲ್ಲ

ಈ ತಾಲೂಕಿನ ಕೃಷಿ [illegible] ಸಬ್ ರಿಜಿಸ್ಟ್ರಾರ್ [illegible] ಕಲ್ಲೋಳಿ [illegible] ರವರು [illegible] ಪರಡು ಕಾವಲು ಸ್ಥಳದಲ್ಲಿ [illegible] ಸ್ಥಾಪನೆ [illegible] ಇದರಿಂದ [illegible] ವಿಷಯ [illegible] ಪ್ರಯೋಜನವಾಗುವದು

ಕೃಷಿ ಸಂಘದವರು ಈ ತಾಲೂಕಿನಿಂದ ಇಬ್ಬರನ್ನು ಕೃಷಿ ಅಭ್ಯಾಸದ ಬಗ್ಗೆ ಪಾಲೂರು ಮಾದರಿ ಹೊಲಕ್ಕೆ ಕಳುಹಿಸಿರುತ್ತಾರಾಗಿ ತಿಳಿಯಬರುತ್ತದೆ.

ಶಾಲಿವಾಹನ ಶಕ ೧೮೨೯ನೇ ಪ್ಲವಂಗ ಸಂವತ್ಸರದ ಆಶ್ವೀಜ ಬ ೧೧ಯು ಶುಕ್ರವಾರದಾರಭ್ಯ ಕಾರ್ತಿಕ ಶು ೧೦ಯು ಶುಕ್ರವಾರದ ವರೆಗಿನ ವಾರ ಪಂಚಾಂಗವು 1907ನೇ ಇಸವಿ ನವಂಬರ ತಾರೀಕು 1ರಿಂದ 16ರ ವರೆಗೆ

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ತಾ.	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ
1	ಶುಕ್ರ	೧೧	೫೯॥	ಹುಬ್ಬಾ	೫೪॥	9	ಶನಿ	೪	೬೯	ಮೂಲಾ	೯೭
2	ಶನಿ	೧೨	೬೦	ಉತ್ತರಾ	೫೭॥	10	ರವಿ	೫	೩೩॥	ಪೂ।ಷಾ	೪೩
3	ರವಿ	೧೨	೧!	ಹಸ್ತಾ	೫೯	11	ಚಂದ್ರ	೬	೨೭॥	ಉ।ಷಾ	೩೯
4	ಚಂದ್ರ	೧೩	೧೧	ಸ್ವಾತಿ	೫೦।	12	ಕುಜ	೭	೨೨	ಶ್ರವಣ	೩೫
5	ಕುಜ	೩೦	೫೭॥	ಸ್ವಾತಿ	೫೮॥	13	ಬುಧ	೮	೧೬।	ಧನಿಷ್ಠಾ	೩೧
6	ಬುಧ	೧	೫೪।	ವಿಶಾಖಾ	೫೭	14	ಗುರು	೯	೧೧।	ಶತಭಿಷಾ	೨೬।
7	ಗುರು	೨	೫೦	ಅನುರಾಧಾ	೫೫	15	ಶುಕ್ರ	೧೦	೬	ಪೂ।ಭಾ	೨೬
8	ಶುಕ್ರ	೩	೪೪॥	ಜ್ಯೇಷ್ಠಾ	೫೧						

Please Patronise Indigenous Industry.

DIARIES FOR 1908

IN TWO SIZES.

Note-Book Size As. 8.

4 × $5\frac{3}{4}$ Size As. 6.

Containing various practical information of ready reference specially useful to lawyer's clerk.

FOR COPIES APPLY TO—

THE MANAGER,

Sharada Press, Mangalore

THE HINDU SOAP MANUFACTURING CO.

ಹಿಂದೂ ಸೋಪ್‌ಮೆನ್ಯುಫೆಕ್ಚರಿಂಗ್ ಕಂಪೆನಿ.

ಕುಂದಾಪುರ, ದಕ್ಷಿಣ ಕನ್ನಡ.

ಈ ಕಂಪೆನಿಯಲ್ಲಿ ನಾನಾ ವಿಧಧ ಸಾಬೂನುಗಳು ತಯಾರಾಗುತ್ತವೆ. ಸಾಬೂನು ಅತ್ಯುತ್ತಮವಾದದ್ದು. ಕ್ರಯ ಸುಲಭ, ಚರಬಿ ವಿರಹಿತವಾದದ್ದು. ಮಾದರಿಗಳೂ, ವಿಶೇಷಮಾಹಿತಿಯೂ ಮೆನೇಜಿಂಗ್ ಏಜಂಟರಿಂದ ದೊರಕುವವು. ವ್ಯಾಪಾರಕ್ಕೆ ಏಜಂಟರಾಗ ಅಪೇಕ್ಷಿಸುವವರು ಬರಕೊಳ್ಳಬಹುದು.

ಬಿ. ದತ್ತ್ ಎಂಡ್ ಬ್ರದರ್ಸ್, ಮೆನೇಜಿಂಗ್ ಏಜಂಟ್ಸ್.

ಈಗಲೇ ಸೀಮೆಯಿಂದ S. S. ಕ್ರೊಸ್ಟಪೆಲ್ಸ್ ಸ್ಟೀಮರಿನಲ್ಲಿ

ಎಣ್ಣೆಕೆಂಪು, ಮತ್ತು ಕಾಜು ಕಪ್ಪು ಸುಪೀರಿಯರ್

ಹಾಸನ್ ವೂಲನ್ ದಾರಗಳು

ಬಂದಿವೆ, ನೋಡಿರಿ,

	ರೂ.	ಆ.	ಪೈ.
ಒಂದು ಪೌಂಡು ವೂಲನ್ ದಾರಕ್ಕೆ W. W.	3	0	0
ಹತ್ತು ಟೋಪಿಯಾಗುವ ಬಂಡಲ್ S. W.	3	9	0
ಒಂದು ಟೋಪಿಯಾಗುವ ದಾರಕ್ಕೆ	0	8	0
ಈ ದಾರದಲ್ಲಿ ಆದ ಟೋಪಿ ಡಜನ್ 1ಕ್ಕೆ	13	2	0
ಕೊಕ್ಕೆಸೂಜಿ ಡಜನ್ 1ಕ್ಕೆ	0	14	0
,, ,, 1ಕ್ಕೆ	0	1	6
30 ಇಂಚಿನ ಬನಿಯನ್ 1ಕ್ಕೆ	0	9	0
ಪೇನ್ಸಿ ಪೋಸ್ಟ್‌ಕಾರ್ಡ್ 100ಕ್ಕೆ	0	4	0

ವಿ. ಪಿ. ಯಿಂದಲೂ ರವಾನಿಸುತ್ತೇವೆ.

ವಿಳಾಸ:— ದಿ ವೂಲನ್ ಮಾರ್ಟ್, ಬೋಳಾರ, ಮಂಗಳೂರು.

N. B, ಬೇಕು ಉತ್ತಮ ತರಗತಿಯಲ್ಲಿ ಹಾಸನ್‌ಟೋಪಿ ಹೊಲಿಯುವವರು.

R. M. KAMATH'S

SWADESHI BLUE BLACK INK POWDER.

ಆರ್. ಯಂ. ಕಾಮತ್.

ಇವರ ಸ್ವದೇಶಿ ಕಪ್ಪುಶಾಯಿ ಹುಡಿ, ಕಟ್ಟು 1ಕ್ಕೆ 3ಪೈ.

ಈ ಹುಡಿ ಬಿಸೀ ನೀರಿನಲ್ಲಿ ಹಾಕಿದ ಕೂಡಲೇ ಉತ್ತಮವಾದ ಶಾಯಿ ಆಗುತ್ತದೆ. ಹೆಚ್ಚಿಗೆ ತರಿಸಿಕೊಳ್ಳುವವರಿಗೆ ಒಳ್ಳೇ ಕಮ್ಮಿಶನ್ ಶಿಕ್ಕುವದು. ಈ ಶಾಯಿಯ ಕಟ್ಟುಗಳನ್ನು ಒಂದೇ ಸಲ 250ಕ್ಕೆ ಕಡಿಮೆಯಾಗದಂತೆ ತರಿಸಿಕೊಳ್ಳುವವರಿಗೆ ಬಹಳ ಕಮ್ಮಿ ಕ್ರಯಕ್ಕೆ ಶಿಕ್ಕುವದು.

ಬೇಕಾದವರು ಕೆಳಗಿನ ವಿಳಾಸಕ್ಕೆ ಬರದ್ದಲ್ಲಿ ಕ್ರಯದ ವಿಲೇವಾರಿ ತಿಳಿಸಲಾದೀತು.

ಸುಗಂಧನಾಶಕ ಚೂರ್ಣ—ಶೀಸೆ 1ಕ್ಕೆ 0–4–0. 12 ಶೀಸೆ ಒಂದೇ ಸಲ ತರಿಸಿಕೊಳ್ಳುವವರಿಗೆ ರೂ. 2–4–0ಗೆ ಶಿಕ್ಕುವವು. ಇದು ತಲೆಪಾಕಿ ಇತ್ಯಾದಿಗೆ ಅತೀ ಉತ್ತಮವಾದದ್ದು.

ಗಂಡಮಾಲೆಗೆ ಸೌಗಂಧೀ ತೈಲ್ಯ ಬಹಳ ಉತ್ತಮವಾದದ್ದು. ಗುಳ್ಳೆಗಳು ಇದ್ದರೂ ಇರಲಿ, ಅಥವಾ ವ್ರಣ ಉಂಟಾಗಿದ್ದರೂ ಇರಲಿ, ಹೊರಗಿನಿಂದ ಹಾಸಿಕೊಂಡಲ್ಲಿ ಗುಣವಾಗುತ್ತದೆ. ಈ ಎಣ್ಣೆ ಉಪಯೋಗಿಸಿಕೊಂಡವರಲ್ಲಿ ಗಂಡಮಾಲೆ ಗುಣವಾಗದೇ ಇದ್ದವರು ಒಬ್ಬರೂ ಇಲ್ಲ. ಶೀಸೆ 1ಕ್ಕೆ 0–12–0 ಒಂದೇ ಸಲ 6 ಶೀಸೆ ತರಿಸಿಕೊಳ್ಳುವವರಿಗೆ 1 ಶೀಸೆ ಉಚಿತವಾಗಿ ಸಿಕ್ಕುವದು.

ಪುಯಿಂತೇಲ್ ತೈಲ್ಯ—ಶೀಸೆ 1ಕ್ಕೆ 1–0–0 ಅರ್ಧ ಶೀಸೆಗೆ 0–8–0. ಇದು ಮುಖ್ಯವಾಗಿ ಮೇಹ ಇತ್ಯಾದಿಗಳಿಂದ ಉಂಟಾದ ಸಕಲ ತರದ ವ್ರಣಗಳಿಗೆ ಶ್ರೇಷ್ಠವಾದ ಮದ್ದು ಅಲ್ಲದೆ ವಾತದ ನೋವು, ಪೆಟ್ಟು ತಾಗಿದ ನೋವು ಉಳುಕು ಇತ್ಯಾದಿಗಳಿಗೆ ಸಹಾ ಉಪಯೋಗಿಸ ಬಹುದು.

ಸುಗಂಧಕಲಾವಿಲಾಸ—ಡಬ್ಬಿ 1ಕ್ಕೆ ರೂ. 0–4–0. 12 ಡಬ್ಬಿಗಳಿಗೆ ರೂ 2–4–0. ಇದು ಬಹಳ ಪರಿಮಳವುಳ್ಳದ್ದಾಗಿ ಗಂಧದ ಸಂಗಡ ಸೇರಿಸಲಿಕ್ಕೂ ವಸ್ತ್ರ ಇತ್ಯಾದಿಗಳಿಗೆ ಹಚ್ಚಿಕೊಳ್ಳಲಿಕ್ಕೂ ಆಗುತ್ತದೆ.

ಕಜ್ಜಿನಾಶಕ ಚೂರ್ಣ—ಶೀಸೆ 1ಕ್ಕೆ 0–2–0. ಉಪಯೋಗಿಸುವ ವಿವರ ಮದ್ದಿನ ಸಂಗಡ.

ಈ ಮೇಲಿನ ಸಾಮಾನುಗಳನ್ನು ಟಪಾಲಿನ ದ್ವಾರಾ ತರಿಸಿಕೊಳ್ಳುವವರಿಗೆ ಕ್ರಯದ ಹೊರತು ವಿ. ಪಿ. ಖರ್ಚು ಪ್ರತ್ಯೇಕ ಬೀಳುವದು.

ವಿಳಾಸ:—ಆರ್. ಯಂ. ಕಾಮತ್
ಪಂಚಮ್ಹಾಲ್,
ಮುಲ್ಕಿ, ದ. ಕನ್ನಡ.

Address:—**R. M. Kamath**
Panchamahal
Moolky, S. Canara.

ಓರಿಯಂಟಲ್ ಗವರ್ನ್‌ಮೆಂಟ್ ಸೆಕ್ಯೂರಿಟಿ.

ಲೈಫ್ ಎಶ್ಯೂರನ್ಸ್ ಕಂಪನಿ, ಲಿಮಿಟೆಡ್

ಎಂಬ

ಹಿಂದುಸ್ಥಾನದ ಅಗ್ರಗಾಮಿ ಸ್ವದೇಶಿ

ಜೀವ ವಿಮೇ ಉತ್ತರಿಸುವ ಸಂಘ.

1874ರಲ್ಲಿ ಸ್ಥಾಪಿಸಲ್ಪಟ್ಟಿತು.

ಹಿಂದುಸ್ಥಾನದಲ್ಲಿ ಸ್ಥಾಪಿಸಲ್ಪಟ್ಟ ಸಂಘಗಳಲ್ಲಿ ಇದೇ ಮೊದಲಿನದು.

ಕಳೆದ ವರುಷದಲ್ಲಿ ಹೊಸದಾಗಿ ಸೇರಿದವರ ವಾರ್ಷಿಕ ವಿಮೇ ಮುಂಗಡ

ರೂಪಾಯಿ 3,92,999–10–0.

ಸಂಘದ ಕೂಡಿಟ್ಟ ಧನವು 2 ಕೋಟಿ 75 ಲಕ್ಷ ರೂಪಾಯಿಗಿಂತಲೂ ಮಿಾರಿರುತ್ತದೆ.

ಇಷ್ಟರ ವರೆಗೆ 2,2700,000 ರೂಪಾಯಿಗಿಂತಲೂ ಹೆಚ್ಚಿನ ಹಣವನ್ನು ವಿಮೇದಾರರಿಗೆ ಸಲಾಯಿಸಿರುತ್ತದೆ. 1882ನೇ ಇಸವಿ ಮಾರ್ಚಿ 29ನೇ ತಾರೀಕಿನಲ್ಲಿ ಈ ಸಂಘದವರು ಮುಂಬಾಯಿ ಸರಕಾರದವರೊಡನೆ ಮಾಡಿಕೊಂಡ ಕರಾರಿನ ಶರ್ತಗಳಿಗನುಸಾರವಾಗಿ ವಿಮೇದಾರರ ಭದ್ರತೆಗಾಗಿ ಅವರು ತೆರುವ ಎಲ್ಲಾ ಹಣದಲ್ಲಿ ಸೇಕಡಾ 80ರ ಮೇರೆಗೆ ಮೊಬಲಗು ಸರಕಾರದ ಭದ್ರತಾಪತ್ರಗಳಲ್ಲಿ ಠೇವಣಾತಿಯಾಗಿಟ್ಟು, ಮುಂಬಾಯಿ ಸರಕಾರದ ಹುದ್ದೇದಾರರಾಗಿರುವ "ಟ್ರಸ್ಟಿ" ಎಂಬ ಮೊಕ್ತೇಸರರ ವಶದಲ್ಲಿರುತ್ತದೆ. ಸದರಿ ಮೊಬಲಗನ್ನು ವಿಮೇ ಹಕ್ಕು ತೀರಿಸುವ ಕಾಲದಲ್ಲಿ ವಿನಹಾ ಇತರ ಕಾಲದಲ್ಲಿ ಕಂಪನಿಯ ಮೇಲ್ವಿಚಾರಕರು ಪಡಕೊಳ್ಳದ ಹಾಗೆ ನಿರ್ಬಂಧ ಉಂಟು. ಈ ದೇಶದ ಜನರ ಸ್ಥಿತಿಗತಿಗೆ ಅನುಕೂಲವಾಗುವಂತೆ ಈ ಸಂಘವು ಲೋಕಮಾನ್ಯವಾದ ಸೂತ್ರಗಳ ಮೇಲೆ ಸ್ಥಾಪಿಸಲ್ಪಟ್ಟಿರುತ್ತದೆ.

ವಿಮೇ ಉತ್ತರಿಸಲುಳ್ಳವರು ಸಂಘದ ಸೂಚನಾಪತ್ರಗಳನ್ನೂ ಮಸೂದೆಗಳನ್ನೂ ಕುರಿತು ಕೆಳಗೆ ನಮೂದಿಸಿದ ಯಾವುದಾದರೊಂದು ವಿಳಾಸಕ್ಕೆ ಬರೆದುಕೊಳ್ಳುವುದು.

ರಾ. ರಾ. ಡಿ. ವಾಸ್ ಮತ್ತು ಮಗಂದಿರು.
ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ
ಜಿಲ್ಲೆಗಳಿಗೆ ಮುಖ್ಯ ಏಜಂಟರು,
ಮಂಗಳೂರು.

ಮಿ. ಆರ್. ಪೆಟರ್ಸನ್ ಬ್ರೌನ್,
ಕಾರಭಾರಿ.
Oriental Life Office,
Oriental Buildings,
[illegible]

Messrs. WILLIAM & Co., BOMBAY.

ಗಜಕರ್ಣದ ಮುಲಾಮು

ಈ ಗಜಕರ್ಣದ ಮುಲಾಮು ಹಾಗಿಸುವದರಿಂದ ಎಲ್ಲಾ ತರದ ಖಜ್ಜಿಯು ನಾಶವಾಗಿ ಹೋಗುವದು. ಮೂರು ಸಾರಿ ಹಾಗಿಸುವದರೊಳಗೆ ಗಜಕರ್ಣವು ಹೋಗುವದು. ಇದರಿಂದ ಚರ್ಮವು ಕಪ್ಪಾಗುವದಿಲ್ಲ. ಮತ್ತು ಉರಿಯುವದಿಲ್ಲ. ಇದರಿಂದ ಗುಣವು ಕಂಡುಬರುವದಿಲ್ಲವಾದರೆ ಹಣವು ಪರತು ರವಾನಿಸಲ್ಪಡುವದು. ಲಕ್ಷಾನುಲಕ್ಷ ಜನರಿಗೆ ನಮ್ಮ ಈ ಗಜಕರ್ಣವು ಜೀವದಾನ ಕೊಟ್ಟಿರುತ್ತದೆ. ಬಿಡ ಬೇಡಿರಿ! ಇಂಥಾ ಸಮಯ ಎಂದಿಗೂ ದೊರಕಲಾರದು. ತ್ವರೆ ಮಾಡಿರಿ!

SAFE ★ EFFICACIOUS ★ SURE ★ POWDERS ★ OINTMENTS ★ PILLS
WILLIAM & Co.
BOMBAY

ಡಬ್ಬಿ ಒಂದಕ್ಕೆ ಕಿಮ್ಮತು 0—6—0. ವಿ. ಪಿ. 0—10—0. 12 ಡಬ್ಬಿ ತರಿಸಿಕೊಂಡವರಿಗೆ ಒಂದು ಡಬ್ಬಿ ಉಚಿತ.

ಸುಂದರೀತೈಲ್ಯ 0-8-0. ವಜ್ರಗುಟಿಕ 1-0-0. ಜೀರ್ಣರಸಾಯನ 1-4-0. ಜ್ವರಹಾರಿ 0-12-0. ಖಜ್ಜಿಮುಲಾಮು 0-3-0. ದಂತಮಂಜನ 0-2-0. ಕೇಶವರ್ಧಿನೀ ತೈಲ್ಯ 1-0-0. ಜೇಳುಕಡತದ ಮದ್ದು 0-8-0. ಕಫಹಾರಿ 1-4-0. ಕಫನಾಶಕ ಚೂರ್ಣ 0-8-0. ಮೂಲವ್ಯಾಧಿ ತೈಲ್ಯ 0-12-0. ಹೇನುನಾಶಕ ತೈಲ 0-4-0. ಜುಲಾಬು ಮಾತ್ರೆ 0-8-0. ವಿರೇಚನ ಗುಟಿಕೆ 0-8-0. ಕುಸುಮಾರಿ ಗುಟಿಕ 1-0-0. ಮೇಹದ ಮಿಶ್ರಣ 1-0-0.

ಈ ಕಂಪೆನಿಯವರು ಹೆಚ್ಚು ನಮೂನೆಯ ಔಷಧಗಳನ್ನು ತಯಾರಿಸುವದರಿಂದ ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರದಲ್ಲಿ ಒಂದು ಹೊಸ ಕೆಟಲಾಗು ರವಾನಿಸಲ್ಪಡುವದು.

ವಂದೇ ಮಾತರಂ.

ಅಮೃತಾಂಜನ

ಬಾಟ್ಲಿ ಒಂದಕ್ಕೆ ಕಿಮ್ಮತು 0—8—0. ವಿ. ಪಿ. 0—12—0.

ಅಮೃತಾಂಜನ—ಸುಖಾಂಜನ.
ಅಮೃತಾಂಜನ—ಪರಮಾಂಜನ
ಅಮೃತಾಂಜನ—ದಿವ್ಯಾಂಜನ
ಅಮೃತಾಂಜನ—ಸಂಜೀವನ.

ಜಖಮ್ ಮತ್ತು ಘಾಯ, ವಾತ, ಎದೆನೋವು, ಗಂಟ್ಲುನೋವು, ಸಂಧಿವಾತ, ಶೀತ, ಕೆಮ್ಮು, ಮೊದಲಾದ ರೋಗಗಳಿಗೆ ಈ ನಮ್ಮ ಅಮೃತಾಂಜವವು ಅತೀ ಉತ್ತಮವಾದದ್ದು. ಒಂದು ಸಾರಿ ಪರೀಕ್ಷಿಸಿರಿ! ಇದರಿಂದ ಗುಣ ಕಂಡುಬರುವದಿಲ್ಲವಾದರೆ ಹಣ ತಿಂತಿರುಗಿ ಕೊಡಲ್ಪಡುವದು. ಬಿಡ ಬೇಡಿರಿ!

ಅಮೃತಾಂಜನ—ಶೀತಭಂಜನಿ.
ಅಮೃತಾಂಜನ—ತಕ್ಷಣ ಪರಿಹಾರಿನಿ.
ಅಮೃತಾಂಜನ—ಅಪೂರ್ವದರ್ಜಿನಿ.
ಅಮೃತಾಂಜನ—ಭಂಜಿನಿ ವಿಮರ್ಧಿನಿ.

ತಲೆನೋವು, ಶಿರೋಭಾರ, ಅರ್ಧಾಂಗವಾಯು, ಶಿರೋವೇಧನ, ಆನೆಗಾಲು, ಈ ಎಲ್ಲಾ ತರದ ರೋಗಗಳಿಗೆ ಇದು ಒಂದು ಸಂಜೀವನ ಎಂಬದಾಗಿ ಕರೆಯಲ್ಪಡುವದು. ಕೃಪು ಕಮ್ಮಿ ಗುಣ ಹೆಚ್ಚು ನಮ್ಮ ಅಮೃತಾಂಜನವು ಇಡೀ ಹಿಂದುಸ್ಥಾನದಲ್ಲಿ ಪ್ರಚುರಗೊಂಡಿರುತ್ತದೆ. ಲಕ್ಷಾನುಲಕ್ಷ ಜನರಿಗೆ ಗುಣಕೊಟ್ಟ ಈ ನಮ್ಮ ಅಮೃತಾಂಜನವನ್ನು ಪ್ರತಿ ಒಬ್ಬರೂ ತರಿಸಿಕೊಳ್ಳುವಿರಾಗಿ ನಂಬಿದ್ದೇವೆ.

Messrs. William & Co.,
GENERAL MERCHANTS,
16 Oak Lane,
Fort, BOMBAY.

Agent, Mangalore:
N. Nowrojee,
Chemist
HAMPANKATTE.

ವಿಳಾಸ:—ವಿಲಿಯಮ್ ಮತ್ತು ಕಂಪೆನಿ, 16 ಓಕ್ ಲೇನ್, ಫೋರ್ಟು, ಮುಂಬಯಿ.

ಟೆಲಿಗ್ರಾಫ್ ಎಡ್ರೆಸು—"ಅಮೃತಾಂಜನ", ಮುಂಬಯಿ.

Printed and published by V. S. Kamath at the Mangalore Trading Association's "Sharada Press".

ಸ್ವದೇಶಾಭಿಮಾನಿ

ಎಂಬ

ಕನ್ನಡ ಪಕ್ಷ ಪತ್ರವು.

ಪುಸ್ತಕ 1. ಮಂಗಳೂರು, ತಾರೀಕು 10ನೇ ನವೆಂಬರ 1907. ಸಂಚಿಕೆ 22.

THE

MANGALORE TRADING ASSOCIATION.

ಮಂಗಳೂರು ಟ್ರೇಡಿಂಗ್ ಎಸ್ಸೋಸಿಯೇಶನ್.

ಈ ಕಂಪೆನಿಯಲ್ಲಿ ಅನೇಕ ನಮೂನೆಯ ವಿಲಾಯತಿ ಔಷಧಗಳು, ಒಳ್ಳೇ ಪರಿಮಳ ದ್ರವಗಳು, ಚಾ, ಕೋಕೋ, ಬಿಸ್ಕೂಟು, ಸಾಬೂನು, ಚುರುಟು ಮುಂತಾದವುಗಳು ಕಾಗದ ವಗೈರೆ ಲಿಖಾವಟದ ಸಾಮಾನುಗಳು, ಕೋರ್ಟಿನ ಎಲ್ಲಾ ನಮೂನೆಯ ಫೋರ್ಮುಗಳು ಕ್ರಯಕ್ಕೆ ದೊರೆಯುತ್ತವೆ ಇದೇ ಕಂಪೆನಿಗೆ ಸಮ್ಮಂಧಪಟ್ಟ, ಶಾರದಾ ಮುದ್ರಾಲಯದಲ್ಲಿ ವಿವಾಹ ಪತ್ರಿಕೆಗಳು, ಎಲ್ಲಾ ನಮೂನೆಯ ಫೋರ್ಮುಗಳು, ನೋಟೀಸುಗಳು, ಕನ್ನಡ ಮತ್ತು ಇಂಗ್ಲಿಷ ಪುಸ್ತಕಗಳು, ಯೋಗ್ಯರೀತಿಯಲ್ಲಿ ಮುದ್ರಿಸಲ್ಪಡುತ್ತವೆ ಅಂಗಡಿ, ಧಂಡಸಾಲೆ ವಗೈರೆ ವ್ಯಾಪಾರಸ್ಥರ ಬಗ್ಗೆ ತಯಾರಿಸಿದ ವರ್ಗಊಳಿಗದ ಪುಸ್ತಕಗಳು, ಯಾವಾಗಲೂ ಕ್ರಯಕ್ಕೆ ದೊರೆಯುತ್ತವೆ. ಇತರ ಪುಸ್ತಕಗಳನ್ನು ಚಲೋನಮೂಯಲ್ಲಿ ಬ್ಯಾಂಡ್‌ಮಾಡಿಸೋಣಾಗುತ್ತದೆ

ಸ್ವದೇಶಾಭಿಮಾನಿಯಲ್ಲಿ ಪ್ರಕಟಣೆಗಳನ್ನು ಪ್ರಕಟಿಸುವದರ ದರ.

	೧ ಸಾರಿ	೪ ಸಾರಿ	೧೨ ಸಾರಿ	೨೪ ಸಾರಿ
ಇಡೀ ಪಾನು ..	ರೂ. ೬	ರೂ. ೨೩	ರೂ. ೪೮	ರೂ. ೭೨
ಅರ್ಧ ಪಾನು ..	,, ೩ ೮	,, ೧೨	,, ೨೪	,, ೪೦
ಕಾಲು ಪಾನು ...	,, ೨.೮	,, ೮	,, ೧೮	,, ೩೦
ಅರೆಕಾಲು ಪಾನು	,, ೧.೮	,, ೫	,, ೧೩	,, ೨೩

ಅರೆಕಾಲು ಪಾನುಗಳಿಗಿಂತಲೂ ಸಣ್ಣದಾದ ಪ್ರಕಟಣೆಗಳ ದರವನ್ನು ಮೆನೇಜರರಿಗೆ ಬರದು ತಿಳಕೊಳ್ಳಬೇಕು.

ಸ್ವದೇಶಾಭಿಮಾನಿಯ ಚಂದಾಹಣ.

	ರೂ.	ಆ
ಟಪ್ಪಾಲು ಹಾಸಲು ಇಲ್ಲದೆ ೧ ವರ್ಷಕ್ಕೆ..	೧	೦
ಟಪ್ಪಾಲು ಹಾಸಲು ಸಹಿತ ೧ ವರ್ಷಕ್ಕೆ	೧	೬
,, ,, ,, ಅರ್ಧ ವರ್ಷಕ್ಕೆ	೦	೧೨

ಚಂದಾಹಣವನ್ನು ಮುಂದಾಗಿ ಕೊಡತಕ್ಕದ್ದು. ಪ್ರಕಟಣೆಗಳನ್ನೂ ಚಂದಾದಾರಿಕೆಯನ್ನೂ ಕುರಿತು ಈ ಕೆಳಗಿನ ವಿಳಾಸಕ್ಕೆ ಬರೆಯುವದು.

ವಿಳಾಸ —ಮೆನೇಜರ್ ಶಾರದಾ ಛಾಪಖಾನೆ, ಮಂಗಳೂರು.

ಲೆಖ್ಖವಿಲ್ಲದ ಆರ್ಡರ ಬರುತ್ತವೆ ಎಚ್ಚರ!

ಪ್ರಪಂಚವೇ ಬೆರಗಾಗಿದೆ.

ಇಂಡ್ಯದ ವ್ಯಾಪಾರವೆಲ್ಲವೂ ಪ್ರಕಟಣೆಯಿಂದ ತುಂಬಿದೆ ಕೆಲವು ಗ್ರಹಸ್ಥರು ಕೆಲ ವ್ಯಾಪಾರಿಗಳಿಂದ ಮೋಸ ಹೋಗಿರುವರು. ಇದರಿಂದ ಪ್ರಕಟಣೆಗಳನ್ನೇ ಹೀನ್ಯೆಸಿಕಸದಲ್ಲಿ ಸೇರಿಸುವರು ಆದರೆ ದೇವರು 5 ಬೆರಳುಗಳನ್ನೂ ಒಂದೇ ಸಾರಿ ಮಾಡಿಲ್ಲ, ಲೋಕವು ಪ್ರಮಾಣಿಕರನ್ನೂ ನಂಬುವದಿಲ್ಲ ಅಂಥವರ ಪ್ರಕಟಣೆಗಳೂ ಇತರ ಪ್ರಕಟಣೆಗಳಂತೆ ಮದ್ದಿನ ಶಾಪಿಗೆ ಔಷಧದ ಬಾಟ್ಲು ಮಡಚಲಿಕ್ಕೆ ಹೋಗುವವು.

ಮಹಾಶಯರೇ! ಒಮ್ಮೆ ನಮ್ಮನ್ನ ಪರೀಕ್ಷಿಸಿದರೆ ನಮ್ಮನ್ನು ಎಂದಿಗೂ ಬಿಡಲಿಕ್ಕಿಲ್ಲ ಈ ಜಾಹೀರಾತು ಅಪೂರ್ವವೂ ಆಶ್ಚರ್ಯಕರವೂ ಆಗಿದೆ. ಕೆಳಗೆ ಕಾಣಿಸಿದ 514 ಸಾಮಾನುಗಳನ್ನೂ ಒಂದು ಸಾರಿ ತಿರುಗಿಸಿದರೆ 30 ತಾಸು ನಡಿಯುವ ಒಂದು ಚಲೋ ಬಲವಾದ ಎಂದಿಗೂ ಕೆಡದ ಹಿಂದಗಡೆ ಎರಡು ಮುಚ್ಚಳವುಳ್ಳ ಲಿವರ್, ವಾಚನ್ನೂ (5 ವರುಷದ ಜಾಮೀನು ಸಹಿತ) ಕಳುಹಿಸುವೆವು. ವಾಚಿಗೆ ಎನೆಮಲ್ ಡಾಯಲ್, ಬಲವಾದ ಮುಳ್ಳುಗಳು ಕಂಗೊಳಿಸುವ ಅಂಕೆಗಳು.

ಈ ನೋಟೀಸಿನ ಮುಖ್ಯ ಉದ್ದಿಶ್ಯವು. ವಂಚನೆಯಿಲ್ಲದ ಕಂಪೆನಿಗೆ ಹೆಸರು ಬರಬೇಕೆಂಬದೇ ಒಂದು ಸಾರಿ ನೋಡಿ ನಮ್ಮ ಪ್ರಮಾಣಿಕತೆಯನ್ನು ಪರೀಕ್ಷಿಸಬಹುದು ನಮ್ಮ ಚಲೋ ವಾಚಿನ ಸಂಗಡ ಕಳುಹಿಸುವ ವಸ್ತುಗಳ ಪಟ್ಟಿ ಮೇಲೆ ಹೇಳಿದ ಚಲೋ ವಾಚ್, ಇದಕ್ಕೆ ಸೊಗಸಾದ ಸರಪಣಿ ಮತ್ತು ಪೆಟ್ಟಿಗೆ, ಖಣಗಳಿರುವ ಅಂದವಾದ ಬಲವಾದ ವೀಳದ ಇಂಗ್ಲಿಷ ಖಜಾನೆ ಪೆಟ್ಟಿಗೆ ದೊಡ್ಡದೊಂದು ಇಜಾರು, ದೊಡ್ಡದೊಂದು ಅಂಗಿ, ಒಂದು ಆಣೆ ಎಣ್ಣೆಯಿಂದ ಒಂದು ತಿಂಗಳ ವರೆಗೆ ಉರಿಯುವ ಹೊಸ ಮಾದರಿಯ ಬಲವಾದ ದೀಪ, ಒಂದು ಸಾರಿ ಶಾಯಿ ತುಂಬಿಸಿದರೆ ಎಷ್ಟು ಕಾಲವೂ ಬರೆಯ ಬಹುದಾದ ಊಟು ಫೌಂಟನ್ ಪೆನ್, ದೊಡ್ಡದೊಂದು ಕಾಲುಚೀಲದ ಜೋಡು, ದಂತದ ಹಿಡಿಯ ಒಂದು ಗಟ್ಟಿಯಾದ ಚೂರಿ, ಚಲೋದಾದ ಕತ್ತರಿ, ಚರ್ಮದ ದೊಡ್ಡ ಹಣದ ಚೀಲ, ಚಲೋ ಬಾಚಣಿಗೆ, ದಂತದ [illegible] ಕನ್ನಡಿ, ಕೂದಲು ಬಾಚುವ ಬುರುಸು, ಶರ್ಟ ಗುಂಡಿಗಳ ಸೆಟ್, ಚಲೋ ಕನ್ನಡಕ, ಸಾಬೂನು, ಸಾಬೂನು ಡಬ್ಬಿ, ಒಂದು ಚಲೋ ಟುವಾಲ್, ಎರಡು ಮಸಿಯಾಗದ ದೊಡ್ಡ ಚಪ್ಪು, ರಬ್ಬರು, ಅಂದವಾದ ದೊಡ್ಡದೊಂದು ಶಾಯಿ ಬಾಟ್ಲಿ, ಚೊಕ್ಕದಾದ ಒಂದು ಪೆನ್ಸಿಲ್ ಕಟ್ಟರ್, 12 ಲೇಖಣಿಗಳು, ಅರು ಸೀಸದ ಕಡ್ಡಿ, 150 ಚಲೋ [illegible], 150 ಲೆಟರ್ ಪೇಪರು, (ಪೋಸ್ಟು ನಿಬಂಧನೆಗಳಿಗನುಸಾರವಾಗಿ ಮಾಡಿದ) 100 ಪೋಸ್ಟು ಕಾರ್ಡು, 73 ಸ್ಟೀಲ್‌ಪೆನುಗಳು. ಕ್ರಯ ರೂ. 7—[illegible].

ಅರ್ಧಕ್ರಯವನ್ನು ಮನಿಆರ್ಡರ್ ಮೂಲಕ ಮುಂಚಿತವಾಗಿ ಕಳುಹಿಸಬೇಕು. ಬಾಕಿ ಹಣ ವಿ. ಪಿ. ಮೂಲಕ ವಸೂಲು ಮಾಡುವೆವು.

ವಿಳಾಸ:— ಎಮ್. ಎ. [illegible] ಮತ್ತು ಕಂಪೆನಿ. [illegible]

[illegible]

[illegible] ಪುದು, ಸುಖಿಯಾಗುವಿರಿ.

[illegible]ಯುವರ ಟೋನಿಕ್ (ಬಲಕಾರಿ) ಗುಳಿಗೆಗಳು

(ವೀರ್ಯದುರ್ಬಲ್ಯಕ್ಕೆ).

ಸ್ವಪ್ನೇಂದ್ರಿಯ, ವೀರ್ಯಪಾತ, ಮತ್ತು ಯುವಕರ ಇತರ ರೋಗಗಳಿಗೆ ಇದೊಂದೇ ಸಿದ್ಧೌಷಧವೆಂದು ಹೆಸರ್ಗೊಂಡಿದೆ. ಸ್ತ್ರೀಪುರುಷರ ಮೆದುಳಿಗೆ ಪುಷ್ಟಿ ಕೊಟ್ಟು ಕ್ಷೀಣವಾದ ದೇಹವನ್ನು ಬಲಪಡಿಸುತ್ತದೆ.

ಇದು ವಾತ, ಸೊಂಟ ನೋವು, ತಲೆ ತಿರುಗುವಿಕೆ, ವಾಯು, ಕೈಕಾಲು ಮರಕಟ್ಟುವದು, ಇದೇ ಮುಂತಾದ ಅನೇಕ ರೋಗಗಳನ್ನೂ ವಾಸಿ ಮಾಡುವದು. ಮೆದುಳುಶಕ್ತಿಯನ್ನು ಹೆಚ್ಚಿಸುವದರಿಂದ ವಿದ್ಯಾರ್ಥಿಗಳಿಗೆ ಅತ್ಯುಪಯೋಗಕರವಾದದ್ದು. ಈ ಗುಳಿಗೆಗಳು ಹೆಂಗಸರ ದುರ್ಬಲತೆಯನ್ನು ಹೋಗಲಾಡಿಸಿ ಗರ್ಭಕೋಶವನ್ನು ಬಲಪಡಿಸಿ ಬಂಜೆಯೆನಿಸಿದವರಿಗೆ ಗರ್ಭದಾನ ಮಾಡುವವು. ಇವುಗಳಿಂದ ಅಸ್ಥಿಜ್ವರ, ಕ್ಷಯರೋಗಗಳು ಗುಣವಾಗುವವು.

ಚಿಕಿತ್ಸೆ. ದಿನಕ್ಕೆ ಎರಡಾವರ್ತಿ ಒಂದು ಯಾ ಎರಡು ಗುಳಿಗೆಗಳನ್ನು ಹಾಲು ಯಾ ನೀರಿನಲ್ಲಿ ಸೇವಿಸುವದು. ಆಹಾರವು ಆರೋಗ್ಯಕರವೂ ಪುಷ್ಟಿಕರವೂ ಆಗಿರಬೇಕು

ಕ್ರಯ—೩೭ ಗುಳಿಗೆಗಳ ಒಂದು ಬಾಟ್ಲಿಗೆ ರೂ. 1–0–0 ಎಲ್ಲಾ ವೈದ್ಯಶಾಲೆಗಳಲ್ಲಿ ದೊರಕುವದು.

ಏಜೆಂಟರು:—**ವಾಸನ್ಜಿ ನಾಥೂ ಎಂಡ್ ಕೊ,**

ವಿನ್ಸರ ಸುವರ್ಣ ಬಿಂದುಗಳು.

ಸ್ತ್ರೀ ಪುರುಷರ ಮೂತ್ರವ್ಯಾಧಿಗಳನ್ನು ಶೀಘ್ರವಾಗಿ ಗುಣ ಮಾಡುವವು

ಸೇವನಾಕ್ರಮ, ದಿನಕ್ಕೆ ಮೂರಾವರ್ತಿ ಒಂದು ಟೀಸ್ಪೂನ (ಸಣ್ಣ ಚಮ್ಚ)ನ್ನು ಹಾಲು ಯಾ ನೀರಿನಲ್ಲಿ ತಕ್ಕೊಳ್ಳುವದು. ಕ್ರಯ ರೂ 1—8—0,

ವಿಕ್ರಯಿ—**ವಾಸನ್ಜಿ ನಾಥೂ ಎಂಡ್ ಕೊ**

ಮಾಣಿಕ ಎಗ್ಯೂ ಮಿಕ್ಸ್ಚರ

ಸರ್ವ ಜ್ವರ ವಿನಾಶಕ

ಅಗ್ನಿಮಾಂದ್ಯ, ಪಿತ್ತ, ಮುಂತಾದ ಕಾರಣಗಳಿಂದುಂಟಾದ ಯಾವ ಜ್ವರವನ್ನಾದರೂ ಒಂದೇ ಸೇವನೆಯಿಂದ ಇಳಿಸುವದು, ಮೂರು ಸಾರಿ ಸೇವಿಸಿದನಂತರ ಜ್ವರವು ಪೂರ್ಣ ನಾಶವಾಗುವದಲ್ಲದೆ ಎಂದಿಗೂ ಮರಳದು

ಶೀತಜ್ವರ, ಉಷ್ಣಜ್ವರ ಮೂರು, ನಾಲ್ಕು ದಿವಸಕ್ಕೊಮ್ಮೆ ಬರುವ ಜ್ವರ ಗಟ್ಟಿದಜ್ವರ ಇತ್ಯಾದಿ ಎಲ್ಲಾ ಜ್ವರಗಳೂ, ತತ್ಕಾಲವೇ ಉಪಯೋಗಿಸುವದರಿಂದ ಪ್ಲೇಗುಜ್ವರವೂ ಕೂಡ ಗುಣವಾಗುವದು, ಮಲೆನಾಡುಗಳಲ್ಲಿರುವವರಿಗೂ ಪ್ರಯಾಣಿಕರಿಗೂ ಆವಶ್ಯಕರವಾದ್ದು ಕ್ರಯ 12 ಆಣೆ. ಎಲ್ಲಾ ವೈದ್ಯಾಲಯಗಳಲ್ಲಿ ದೊರಕುತ್ತವೆ

ಏಜೆಂಟರು:—**ವಾಸನ್ಜಿ ನಾಥೂ ಎಂಡ್ ಕೋ.**

ವಿನ್ಸ್ ಗಜಕರ್ಣದ ಮುಲಾಮು ರಿಜಿಸ್ಟರ್ಡ ನಂಬ್ರ 106/1895

ಗಜಕರ್ಣಕ್ಕೆ ಸಿದ್ಧೌಷಧ ರೋಗ ನಿರ್ಮೂಲವಾಗುವದು, ಮೂರೇ ಸಲ ಹಚ್ಚುತ್ತಲೇ ಗುಣವಾಗುತ್ತದೆ ಮರಳಿ ಮೊಳೆಯುವದೇ ಇಲ್ಲ ಜ್ವಾಲೆ ಇಲ್ಲ ಇಂಡ್ಯಾದಲ್ಲಿಯೂ ಹೊರಪ್ರದೇಶಗಳಲ್ಲಿಯೂ ವರುಷಂಪ್ರತಿ ಸಾವಿರಾರು ಪೆಕೇಟು ಬಿಕರಿಯಾಗುತ್ತದೆ. ತಯಾರು ಮಾಡುವ ಒಂದೇ ಕಾರ್ಖಾನೆ

ವಾಸನ್ಜಿ ನಾಥೂ ಎಂಡ್ ಕೋ, ಮುಂಬಯಿ

ಏಜೆಂಟರು. **Mangalore Trading Association, Mangalore.**

ಮೆಸರ್ಸ್. **ಕೂಬಾಜಿ ಭೋಜಾ ಎಂಡ್ ಕೊ, ಬಾರಾಬಜಾರ್ ಕಲ್ಕತ್ತ**

ಬಹಿರುಪಯೋಗಕ್ಕೆ ಮಾತ್ರ ವಿನ್ಸರ ಎಂಬ್ರೋಕೇಶನ

ವಾತ, ನರಗಳ ಬೇನೆ, ಸಂದುವಾತ, ಉಳುಕು, ಘಾಯ, ಸೊಂಟ ನೋವು, ಮೈಬೇನೆ, ಕೈಕಾಲು ನೋವು, ಎದೆ ನೋವು, ಶೀತ, ಗಂಟು ಹಿಡಿಯುವದು, ಮುಂತಾದ ಶರೀರದ ಎಲ್ಲಾ ತರದ ನೋವುಗಳಿಗೆ ಸಿದ್ಧೌಷಧ. ನೋವಿದ್ದಲ್ಲಿ ದಿನಕ್ಕೆ ಒಂದು ಯಾ ಎರಡು ಸಾರಿ ಹಚ್ಚುವದು. ಕ್ರಯ 8 ಆಣೆ.

ವಿಕ್ರಯಿಕರು:—**Vasanjee Nathu & Co.**

111—113 Market Bom[illegible]

ಅಶ್ವಿನಿ ಗವರ್ನಮೆಂಟ್ ಸೆಕ್ಯೂರಿಟಿ ಜೀವ ವಿಮೇ ಕಂಪೆನಿ ಲಿಮಿಟೆಡ್

ಹೆಡ್ ಆಫೀಸು—ವಿಶಾಖ ಪಟ್ಣ, ಮದ್ರಾಸು ಸಂಸ್ಥಾನ.

ಫಕ್ತ ದೇಶೀಯ ಸಂಘ.

ಮಂಡು ರೂಪಾಯಿ 100,000.

ಪ್ರೊವಿಡೆಂಡ್ ಕಂಪೆನಿಗಳಲ್ಲಿ ಈ ತರದ ಕಂಪೆನಿ ಬೇರೆ ಇಲ್ಲ. ನಡುತರದವರಿಗೂ ಬಡವರಿಗೂ ಎಂದೂ ಕೇಳದ ಪ್ರಯೋಜನವೀಯುತ್ತದೆ. ಪ್ರಬಲರೂ ಸಾಹಸಿಕರೂ ಆದ ಸಬ್ ಏಜೆಂಟರೂ ಫಾಯಿಷ್ ಮಾಡುವವರೂ **ಕಂಪೆನಿಗೆ ಬೇಕು.**

ಕಂಪೆನಿಯು ಆದಷ್ಟು ಕಮ್ಮಿ ದರದಲ್ಲಿ ೧೦೦ ರೂಪಾಯಿಗಳಿಂದ ೧೦೦೦ ರೂಪಾಯಿ ವರೇಗಿನ ಮೊಬಲಗುಗಳಿಗೆ ಜೀವ ಉತ್ತರಾಯಿಸುವದು ಕಮಿಶನ್ ಧಾರಾಳ ದೊರಕುವದು ಹೊಸ್ಪಿಟಲ್ ಅಸಿಸ್ಟಾಂಟರೂ ವಿಮೇದಾರರನ್ನು ಪರೀಕ್ಷಿಸಬಹುದು

ಬರುವ ಜನ್ಮ ದಿನಕ್ಕಾಗುವ ಪ್ರಾಯ	ಲಾಭ ಸಮೇತ ಸಿಕ್ಕುವ ವಿಮೇಗೆ 100 ರೂಪಾಯಿಯ ವರ್ಷಂಪ್ರತಿ ಕಂತು ದರ		ಲಾಭ ಸಮೇತ ಸಿಕ್ಕುವ ವಿಮೇಗೆ 1000 ರೂಪಾಯಿ ಮೇಲಿನ ವರ್ಷಂಪ್ರತಿ ಸ್ಕೇಲ್ ದರಗಳು	
	ಮರಣಾಂತ	ಹತ್ತು ವರ್ಷದಲ್ಲಿ ಹಣ ಸಿಕ್ಕುವದು	ಮರಣಾಂತ	ಹತ್ತು ವರುಷದಲ್ಲಿ ಹಣ ಸಿಕ್ಕುವದು
20	2– 8 0	9–15–0	21– 8–6	99– 0 0
25	2–13 0	10– 4 0	24– 0–0	99– 8–0
30	3- 4–0	10 –9 0	27– 2–0	100– 1–0
35	3 10–0	10–14–0	31 4–0	100 15 0
40	4– 2–0	11– 3–0	36 10–0	102 5–0
45	4 14–0	11 8–0	43–12 0	104– 7–0
50	6– 8–0	11–13–0	50 10–0	107–12–0

200ರೂಪಾಯಿ ಯಾ 900ರ ವರೇಗಿನ ಮೊಬಲಗಿನ ದರಗಳು 100 ರೂಪಾಯಿಯ ದರಗಳನ್ನು 2ರಿಂದ ಮುಂತಾಗಿ 9ರ ವರೇಗೆ ಗುಣಿಸಿ, ದಾಮಾಶಾಯದಲ್ಲಿ ಕಂಡುಹಿಡಿಯುವದು. ಪ್ರಕಟಣೆಗೆ ತಪಸೀಲುಗಳನ್ನು ಕೆಳಗಿನ ವಿಳಾಸಕ್ಕೆ ಬರದು ತರಿಸಿಕೊಳ್ಳುವದು.

ಎಲ್ಲೂರ ರಾಮರಾವ್,
ಉತ್ತರ ದಕ್ಷಿಣಕನ್ನಡ ಜಿಲ್ಲೆಗಳ ಜನರಲ್ ಏಜೆಂಟ್,
ಅಶ್ವಿನಿ ಲ್ಯಾಪ್ ಎಸ್ಸೂರನ್ಸ್ ಕಂಪೆನಿ
ಕಾಸರಗೋಡು, ದ ಕನ್ನಡ

ಜೆ. ಎಸ್. ಸೋಜ ಎಂಡ್ ಕಂಪೆನಿ

ದೃಷ್ಟಿಚಕ್ರಗಳನ್ನು ಮಾಡಿ ವಿಕ್ರಯಿಸುವ ನಂಬಿಕೆಯುಳ್ಳ ಫರ್ಮಿನ ಏಜೆಂಟರು.

ಪ್ರಖ್ಯಾತಿಪಟ್ಟ ಸಂಪೂರ್ಣ ಪೆಬ್ಲ್ ಎಂಬ ಗುರುಸು ಕಲ್ಲು ಕನ್ನಡಿಯಿಂದ ಮಾಡಿಟ್ಟ ದೃಷ್ಟಿಚಕ್ರಗಳನ್ನು ಹೆಚ್ಚಿನ ಸಂಗ್ರಹವಿಟ್ಟು, ದೃಷ್ಟಿ ಶಕ್ತಿಯನ್ನು ಸರಿಯಾಗಿ ಪರೀಕ್ಷಿಸಿ ವಿಕ್ರಯಿಸುತ್ತಾರೆ ದೃಷ್ಟಿಯ ಅಶಕ್ತಿಯುಳ್ಳವರು ತಮ್ಮ ದೃಷ್ಟಿಯನ್ನು ಪರೀಕ್ಷಿಸಗೆ ಆಸಡ್ಡ ಮಾಡಿ ಬಾಜಾರಿನಲ್ಲಿ ಶಿಕ್ಕುವ ಕಮ್ಮಿ ಕ್ರಯದ ಕನ್ನಡಕಗಳನ್ನು ತಕ್ಕೊಂಡು ಉಪಯೋಗಿಸಿದರೆ ಕಣ್ಣಿನ ತ್ರಾಣವು ಕುಂದಿಹೋಗುವಂಥಾ ಅಪಾಯದಲ್ಲಿ ಬೀಳುತ್ತಾರೆ. ಹೆಚ್ಚಾಗಿ ಅನೇಕ ಮನುಷ್ಯರ ಕಣ್ಣುಗಳ ದೃಷ್ಟಿಯು ಒಂದಕ್ಕೊಂದು ಸರಿ ಇಲ್ಲದರಿಂದ ಅದನ್ನು ಜಾಗ್ರತೆಯಾಗಿ ಪರೀಕ್ಷಿಸಿ ಅದಕ್ಕೆ ತಕ್ಕದ್ದಾದದನ್ನು ಆರಿಸಿ ತೆಗಿಯುವಂಥಾದ್ದು ಮುಖ್ಯ ಸಂಗತಿಯಾಗಿರುತ್ತದೆ ಬಾಜಾರಿನಲ್ಲಿ ಶಿಕ್ಕುವ ದೃಷ್ಟಿಚಕ್ರಗಳು ನಿಜವಾದ ಪೆಬ್ಲ್ ಅಲ್ಲವಾದ್ದರಿಂದಲೂ, ದೃಷ್ಟಿಯ ತಾರತಮ್ಯ ಅನುಭವ ಮಾಡಿ ಆರಿಸಿಕೊಡುವರೆ ತಿಳಿಯದವರಾದರಿಂದಲೂ, ಅವುಗಳ ಉಪಯೋಗವು ಸ್ವಲ್ಪ ಸಮಯದೊಳಗೆ ಕಣ್ಣುಗಳಿಗೆ ಕೆಡಕು ಉಂಟು ಮಾಡುವದು.

ಶರ್ತ:—ತಮ್ಮ ದೃಷ್ಟಿಯನ್ನು ಪರೀಕ್ಷಿಸಲಪೇಕ್ಷಿಸುವವರು ಪ್ರತಿ ದಿನ ಮಧ್ಯಾನ್ಹ ಘಂಟೆ 2ರಿಂದ ಶ್ಯಾಮ ಘಂಟೆ 6ರ ವರೇಗೆ ನಮ್ಮ ಆಫೀಸಿಗೆ ಬಂದಲ್ಲಿ ಚಾರ್ಜು ಇಲ್ಲದೆ ದೃಷ್ಟಿ ಪರೀಕ್ಷಿಸಿ ಆಲೋಚನೆ ಹೇಳಲಾಗುವದು ಮುನಿಸಿಪಾಲಿಟಿಯೊಳಗೆ ಗಿರ್ಹಾಕಿಯವರ ಮನೆಗೆ ಬರಬೇಕಾದರೆ ಪ್ರತಿಸಾರಿ ರೂ. 1 ಫೀಸು ಕೊಡಬೇಕಾದೀತು.

ಜೆ. ಎಸ್ ಸೋಜ ಎಂಡ್ ಕಂಪೆನಿ,
ಮೂಲ ಬಾಬು ಬುಡಾನ್ಗಿರಿ ಕಾಫಿ ಪುಡಿ ತಯಾರಿಸುವವರು,
ಗಂಪನಕಟ್ಟೆ ಮಂಗಳೂರು, ದಕ್ಷಿಣ ಕನ್ನಡಾ.

ಸ್ವದೇಶಾಭಿಮಾನಿ.

ಮಂಗಳೂರು, ತಾರೀಕು 10ನೇ ನವಂಬರ 1907.

ಗವರ್ನರ ದೊರೆಗಳವರ ಆಗಮನ.

ಕಳೆದ ಸಂಚಿಕೆಯಲ್ಲಿ ನಾವು ಪ್ರಕಟಿಸಿದಂತೆ ಚಂದ್ರವಾರ ತಾ 4ಕ್ಕೆ ಬಹುಮಾನಪಟ್ಟ ಮದ್ರಾಸು ಗವರ್ನರ ಸರ್ ಆರ್ಥರ್ ಲೋಲೆಯವರೂ ಅವರ ಪತ್ನಿಯವರೂ ಕುಮಾರಿಯರಿಬ್ಬರೂ ನಮ್ಮ ಜಿಲ್ಲೆಗೆ ಚಿತ್ತೈಸಿದರು. ನಮ್ಮ ರಾಜಪ್ರತಿನಿಧಿಯವರಿಗೆ ಜಿಲ್ಲೆಯ ಸರ್ವಸಾಧಾರಣರೂ, ಹಲವು ಶ್ರೀಮಂತ ಜನರೂ ಯಾವ ಬಗೆಯ ಸತ್ಕಾರಗಳನ್ನಿತ್ತರೆಂಬದನ್ನೂ ಪ್ರಜೆಗಳು ತಮ್ಮ ಸಂಕಷ್ಟ ನಿವಾರಣ ಒಪ್ಪೈ ಮಾಡಿದ ಬಿನ್ನವತ್ತಳೆಗಳೂ, ಇದೇ ಉದ್ದಿಶ್ಯದ ದೊರೆಗಳವರಿಂದ ಪಡದ ಭೇಟಿಗಳು ಯಾ ಡಿಪ್ಯುಟೇಶನುಗಳೂ ಯಾವ ರೀತಿ ಪರಿಣಮಿಸಿದವೆಂಬದನ್ನೂ ಈ ಮೊದಲು ಪ್ರಕಟಿಸಿದ ಪ್ರೊಗ್ರೆಮ್ ಯಾ ಸೂಚನೆಯ ಪಟ್ಟಿ ಪ್ರಕಾರ ಸಂಕ್ಷೇಪವಾಗಿ ವಿವರಿಸಿರುವೆವು

ಗವರ್ನರ ದೊರೆಗಳವರ ಸಾಲಂಕೃತವಾದ ರೈಲ್ವೆಯ ಗಾಡಿಯು ಮಲಬಾರ ಜಿಲ್ಲೆಯನ್ನು ದಾಟಿ ನಮ್ಮ ಜಿಲ್ಲೆಯನ್ನು ಪ್ರವೇಶಿಸಿ ಕಾಸರಗೋಡಿನಿಂದ 8 ಮೈಲು ದೂರಕ್ಕಿರುವ ಬೇಕಲಿಂಬ ಊರಿನ ಹತ್ತಿರವಾಗಲು, ಈ ಊರಿನಲ್ಲಿ 1625 1670 ಇಸವಿಗಳ ಮಧ್ಯಕಾಲದಲ್ಲಿ ಬಿದ್ನೂರ ಶಿವಪ್ಪನಾಯಕ ಎಂಬವನಿಂದ ಕಟ್ಟಲ್ಪಟ್ಟು ಈಗ ಜೀರ್ಣ ಸ್ಥಿತಿಯಲ್ಲಿರುವ ಕೋಟೆಯಿಂದ 17 ತೋಪುಗಳನ್ನು ಬಹುಮಾನಾರ್ಥವಾಗಿ ಹಾರಿಸಿದರು. ಗವರ್ನರರ ರೈಲ್ವೆಯ ಗಾಡಿಯು ಕಾಸರಗೋಡಿಗೆ ಮಧ್ಯಾಹ್ನ 2 ಘಂಟೆಗೆ ಬಂದು ತಪ್ಪಿತು ಜಿಲ್ಲೆಯ ಕಲೆಕ್ಟರವರು ಇಲ್ಲಿ ಇವರ ಸ್ವಾಗತವನ್ನು ಸ್ವೀಕರಿಸಿ ಮ|ರಾ| ದಿವಾನ ಬಹದೂರ ಆ ವೆಂಕಟರಮಣ ಶೈ ಮ|ರಾ|ರಾ| ರಗತೆ ರಾಮರಾವ್, ತಹಸೀಲ್ದಾರರಾದ ಮ| ರಾ| ನೋ ಟಿ ಫೆರ್ನಾಂಡಿಸ್ ಮೊದಲಾದ ಪ್ರಮುಖ ಉದ್ಯೋಗಸ್ಥರಿಗೂ, ಮ| ರಾ| ರಾ| ಕೆ ಉಚ್ಚುತ್ತಯ್ಯ ರಾ| ಪಡಕೋಣ ದೇವರಾವ್ ಮೊದಲಾದ ವಕೀಲರಿಗೂ, ಸಾಹುಕಾರ ಮಂಜೇಶ್ವರ ನಸ್ಸಿಶ್ಯ ಶ್ಯಾನುಭಾಗರವರಿಗೂ, ವೈಕುಂಠ ಜಸ್ತರವರೇ ಮೊದಲಾದ ಜಮೀನುದಾರರಿಗೂ ಭೇಟಿಕೊಡಿಸಿದರು ದೊರಗಳವರ ಆಗಮನವನ್ನು ಅಭಿವಂದಿಸಿ, ಮದ್ರಾಸ್ ನ ಂಗಳೂರು ರೈಲ್ವೆಗಳನ್ನಿತ್ತ ಉಪಕಾರಸ್ಮರಣೆಯನ್ನೂ ಕಾಸರಗೋಡು ತಾಲೂಕಿನ ಪುರಾತನ ಕೆಲವು ಚರಿತ್ರಾಂಶಗಳನ್ನೂ ಕೂಡಿದ್ದ ಮದ್ರಾಸು ಗವರ್ನರರವರ ಭೇಟಿಯು ಇದೇ ಪ್ರಥಮವೆಂಬದಾಗಿಯೂ ತಮ್ಮ ರಾಜಭಕ್ತಿಯನ್ನು ಅನೇಕ ವಿಧಾನಗಳಲ್ಲಿ ವ್ಯಕ್ತಪಡಿಸುವ ಈ ತಾಲೂಕಿನವರ ಬಿನ್ನವತ್ತಳೆಯನ್ನು ಸ್ವೀಕರಿಸಿದರು ಖಾವಂದರವರು ಕಾಸರಗೋಡಿನಲ್ಲಿ ತಮ್ಮ ನಿಲುಕಾಲವು ಅತಿಸ್ವಲ್ಪವಾದ್ದರಿಂದ ಅಲ್ಲಿಯ ನವೀನ ಪ್ರಾಚೀನ ಸುಧಾರಣಾ ಸ್ಮಾರಕ ಚಿಹ್ನೆಗಳನ್ನು ಶ್ರೀಮಂತ ಕುಟುಂಬಿಕರನ್ನೂ ಕಂಡು ಸಂತೋಷಿಸುವ ಸಂದರ್ಭ ಕೈತಪ್ಪಿತೆಂದೂ ಹೊಸ ರೈಲ್ವೆಯಿಂದ ಜಿಲ್ಲೆಯ ಐಶ್ವರ್ಯ ವೃದ್ಧಿಯಾದೀತೆಂದೂ ಪಶ್ಚಿಮ ಕರಾವಳಿಯ ಜನರು ರಾಜನಿಷ್ಠೆಯಲ್ಲಿ ಸಾಮ್ರಾಜ್ಯದ ಇತರ ಯಾವ ಜನರಿಗಿಂತಲೂ ಹಿಂದಲ್ಲವೆಂದೂ ಅಪ್ಪಣೆಕೊಟ್ಟರು

ರೈಲ್‌ಗಾಡಿಯು ಅಲ್ಲಿಂದ ಮಂಗಳೂರಿಗೆ ತಲ್ಪುತ್ತಲೇ ಬಹುಮಾನದ (17) ತುಪಾಕಿಗಳನ್ನು ಹಾರಿಸಿದರು ತದುದ್ದಿಶ್ಯ ಜಪ್ಪಿನಲ್ಲಿ ನಿರ್ಮಿಸಿದ ಪ್ಲಾಟ್ ಫೋರ್ಮಿನಲ್ಲಿ (ಜಗಲಿ) ಪಟ್ಟಣದ ಮಾನ್ಯಗೃಹಸ್ಥರಿಗೆ ಖಾವಂದರವರ ಭೇಟಿ ಮಾಡಿಸಿದರು. ನಂತರ ಇಡೀ ಪಂಗಡವು ಅಲ್ಲಿಯ ದರ್ಬಾರ್ ಚಪ್ಪರವನ್ನು ಸೇರಲು ಮಂಗ್ಳೂರು ಮುನಿಸಿಪಾಲಿಟಿಯವರ ಕಡೆಯಿಂದ ಚೆಯರ್ಮೆನರಾದ ರಾವ್ ಸಾಹೇಬ ಸುಬ್ಬಾರಾಯರೂ ಡಿಸ್ಟ್ರಿಕ್ಟ್ ಬೋರ್ಡ್ ಕಡೆಯಿಂದ ವೈಸ ಪ್ರೆಸಿಡೆಂಟ ಕೆ| ವಸಂತರಾಯರೂ ಬಿನ್ನವತ್ತಳೆಗಳನ್ನೋದಿದರು ಮುನಿಸಿಪಾಲ್ ಕೌನ್ಸಿಲರಿಗೂ ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರರಿಗೂ ಯಥಾವಿಧಿಯಾಗಿ ಖಾವಂದರ ಭೇಟಿ ಮಾಡಿಸಿದರು ಮುನಿಸಿಪಾಲಿಟಿಯವರೂ, ಡಿಸ್ಟ್ರಿಕ್ಟ್ ಬೋರ್ಡಿನವರೂ ಸಮರ್ಪಿಸಿದ ವಿಜ್ಞಾಪನಾ ಪತ್ರಗಳನ್ನೂ ಅವೆರಡಕ್ಕೂ ಖಾವಂದರು ದಯಪಾಲಿಸಿದ ಅಪ್ಪಣೆಯನ್ನೂ ಪ್ರತ್ಯೇಕವಾಗಿ ಇನ್ನೊಂದು ಕಡೆಯಲ್ಲಿ ಪರಿವರ್ತಿಸಿದ್ದೇವೆ. ಚಪ್ಪರದ ಪಡು ಅಂಚಿನಲ್ಲಿ ಒಂದು ಜಗಲಿಯು ಏರಿಸಿ ಅಲ್ಲಿ ಖಾವಂದರ ಆಸನವು ಅಲಂಕರಿಸಲ್ಪಟ್ಟಿತ್ತು. ಮೂರು ದಿಕ್ಕಿನಲ್ಲಿಯೂ ನೆರೆದಿದ್ದ ಜಿಲ್ಲೆಯ ಸಂಭಾವಿತ ಗೃಹಸ್ಥರು ಎಲ್ಲರೂ ಸ್ಪಷ್ಟವಾಗಿ ಕೇಳುವಂತೆ ಗವರ್ನರ್ ಸಾಹೇಬರು [illegible]

ಮೋಹಕ ಭಾಷಣವನ್ನು ಮಾಡಿದರು. ಮ| ರಾ| ರಾ| [illegible] ಸಾಹೇಬ್ ಶಕ್ಷದನ್ನು ಪೆವರೆಂಡ ಫಾದರ್ ಮುಲ್ಲರ್ ದೊರೆಗಳ [illegible] ಪದಕವನ್ನು ದಯಪಾಲಿಸುವಾಗ ಖಾವಂದರು ಹೇಳಿದ ಮಾತುಗಳು ಬುದ್ಧಿ ಚಾತುರ್ಯವನ್ನೂ ದಯಾ ಭಾವವನ್ನೂ ಪ್ರಕಟಗೊಳಿಸಿ ಸಭಿಕರಲ್ಲಿ ಪರೋಪಕಾರ ಭಾವವನ್ನು ಉದ್ದೀಪಿಸುವಂಥಾದ್ದಾಗಿದ್ದವು. ರಾವ್ ಸಾಹೇಬರು ಮುನಿಸಿಪಾಲಿಟಿಗೋಸ್ಕರ ಮಾಡಿದ ಸ್ವಾರ್ಥ ತ್ಯಾಗವನ್ನು ಫಾದರ್ ಮುಲ್ಲರವರು ಕುಷ್ಟರೋಗಿಗಳ ಪಾಲನೆಯಲ್ಲಿ ಪ್ರದರ್ಶಿಸಿದ ಅಸಾಧಾರಣ ದಯಾರ್ದ್ರ ಚಿತ್ತವನ್ನೂ ಶ್ಲಾಘಿಸಿ ಅವರನ್ನು ಸಭೆಗೆ ಮಾದರಿಯಾಗಿ ತೋರಿಸಿದರು. ಈ ಭಾಷಣಗಳನ್ನು ಬೇರೆ ಕಡೆಯಲ್ಲಿ ಸಂಗ್ರಹವಾಗಿ ಪ್ರಕಟಿಸಿರುವೆವು ಸಾಯಂಕಾಲ ಖಾವಂದರವರು ಆಡಕಲ್ ಮಂಗ್ಳೂರ ರೈಲ್ವೆಯ ಮಂಗಲೋತ್ಸವವನ್ನು ನೆರವೇರಿಸಿದರು ಈ ಕಾಲದಲ್ಲಿ ಸ್ಮಾರಕ ವಿಷಯವನ್ನು ಉಳ್ಳಾಲ ಸಂಕದಲ್ಲಿ ನೆಲೆಗೊಳಿಸಿ ಒಂದು ಬೆಳ್ಳಿಯ ಮೊಳೆಯನ್ನು ಸಂಕದಲ್ಲಿ ಸೇರಿಸಿದರು ಸಂಕದ ಬಳಿ ಸುಪರಿಂಟೆಂಡಿಂಗ್ ಇಂಜಿನಿಯರ ತೊಮಸರವರು ಖಾವಂದರನ್ನು ಎದುರ್ಗೊಂಡು ಮಂಗಲಕಾರ್ಯವು ಕೊನೆ ಹೊಂದಿದ ನಂತರ ನೇತ್ರಾವತಿ ನದಿಯ ಪಾಯರ್ ವ ಅದರ ಅಡಿಯ ಅಷ್ಟಕೋಣಾಕಾರವಾದ ಭಾವಿಯ ಆಕಾರದಲ್ಲಿ ತಯ್ಯಾರಿಸಿದ ಬೆಳ್ಳಿಯ ಶಾಯಿ ಬುರುಡೆಯನ್ನು ಖಾವಂದರಿಗೆ ಸಮರ್ಪಿಸಿದರು ಖಾವಂದರು ಮದ್ರಾಸು ರೈಲ್ವೆ ಕಂಪೆನಿಯವರ ಉತ್ಕೃಷ್ಟ ಆಡಳಿತೆಯನ್ನು ತೊಮ್ಸನ ಸಾಹೇಬರೇ ಮೊದಲಾದ ಇಂಜಿನೀಯರ ಇಲಾಖೆಯವರ ಸಾಹಸವನ್ನು ಹೊಗಳಿ ಈ ರೈಲ್ವೆಯಿಂದ ಜಿಲ್ಲೆಗೆ ಸಂಪತ್ತಿಯು ವರ್ಷಿಸಲೆಂದು ಪ್ರಾರ್ಥಿಸಿ ಭಾಷಣವನ್ನು ಮುಗಿಸಿದರು ರಾತ್ರೆ 9 30 ಲಾಗಾಯಿತು 11ರ ವರೆಗೆ ಜಪ್ಪು ಬ್ರಿಟಿಷ ಕಚ್ಚೋಣದಲ್ಲಿ ಅಬ್ದುಲ್ಲ ಹಾಜಿಕಾಸಿಮ್ ಸಾಹೇಬ್ ಬಹದ್ದೂರವರ ಸತ್ಕಾರಗಳು ನಡೆದವು ಹೆಬ್ಬಾಗಲಿನ ಮುಂದೆ ಬಹು ಸುಂದರವಾದ ಒಳ್ಳಿಗಳಿಂದಲೂ ಲಾಂದ್ರಗಳಿಂದಲೂ ಬುರುಡೆಗಳಿಂದಲೂ ಅಲಂಕರಿಸಲ್ಪಟ್ಟ ಸ್ವಾಗತವನ್ನು ಹೇಳುವ ಮನೋಹರವಾದ ಎರಡು ಕಂಬಗಳು ಕಟ್ಟಲ್ಪಟ್ಟಿದ್ದವು ಒಳಗಡೆ ವಿಶಾಲವಾದ ಉದ್ಯಾನದ ಮಧ್ಯದಲ್ಲಿ ಅಸಂಖ್ಯಾತ ದೀಪಾವಳಿಯಿಂದ ಪ್ರಕಾಶಿಸುವ ಆ ಬಂಗಲೆಯು ತರತರದ ಪುಷ್ಪವಲ್ಲರಿಗಳಿಂದಲಂಕೃತವಾದ ಮೆಟ್ಲುಕಟ್ಟಿನಿಂದಲೂ ರೇಷ್ಮೆಯ ಪರದೆಗಳಿರುವ ಬಾಗಲುಗಳಿಂದಲೂ ವಿದ್ಯುಲ್ಲತೆಯ ಜ್ವಾಲಾ ಗೋಲಗಳಿಂದಲೂ ಇಂದ್ರ ಭವನದಂತೆ ಪ್ರಕಾಶಿಸುತ್ತಿತ್ತು. ನಡು ಕೋಣೆಯನ್ನು ಖಾವಂದರ ಬಗ್ಗೆ ಅಮೂಲ್ಯ ಸಾಮಗ್ರಿಗಳಿಂದ ಸಜ್ಜುಮಾಡಿತ್ತು ಜಿಲ್ಲೆಯ ಶ್ರೀಮಂತ ಗೃಹಸ್ಥರಿಗೆ ತಕ್ಕ ವಿಲೆವಾರಿ ಮಾಡಿತ್ತು ಆ ವೇಳೆಯ ಸನ್ಮಾನ ಸತ್ಕಾರಗಳು ಮೊಗಲಸಾಮ್ರಾಜರ ಐಶ್ವರ್ಯವನ್ನು ನೆನಪಿಗೆ ತಂದವು ಅಂಗಣದಲ್ಲಿ ಏರ್ಪಟ್ಟ ವಿಚಿತ್ರನಾಟಕ ಶಾಲೆಯಲ್ಲಿ ಇಂದ್ರ ಸಭಾನಾಟಕ ಪ್ರದರ್ಶನವು ಸಭೆಯನ್ನು ಮೋಹಿಸಿತು ರಾಜನಿಷ್ಠೆಗೆ ಹೆಸರುಗೊಂಡ ನಮ್ಮ ಮುಸಲ್ಮಾನ ಭ್ರಾತೃಗಳು ಗವರ್ನರ್ ಸಾಹೇಬರ ವಾಹನದ ಕುದುರೆಗಳನ್ನು ಬಿಡಿಸಿ ಅದನ್ನು ಹೆಬ್ಬಾಗಲಿಂದ ಬಂಗ್ಲೆಗೆ ತಾವೇ ಎಳದರು ಆನಂದವಿಸ್ಮಯಜನಕವಾದ ಮದ್ದಿನ ಸಾಮಾನುಗಳು ಅಗ್ನಿ ಪುರಸ್ಸರವಾಗಿ ಸ್ವಾಗತವನ್ನು ಪ್ರದರ್ಶಿಸಿದವು ಅಗಲುವಾಗಲೂ Good Night ಶುಭರಾತ್ರೆ ಇರಲಿ ಎಂಬ ವಚನವನ್ನು ಮದ್ದಿಯಿಂದಲೇ ಸಮರ್ಪಿಸಿದರು. ಅನೇಕ ಆನಂದೋತ್ಸವಗಳನ್ನು ಅನುಭವಿಸಿದ ಖಾವಂದರಿಗೆ ಈ ಸಂಸ್ಕಾರದಿಂದ ನವೀನ ಆಹ್ಲಾದವಾಗದಿರದು

ಮಂಗಳವಾರ ತಾ. 5ನೇ ನವಂಬರ ಈ ದಿವಸ ಬೆಳಿಗ್ಯೆ 7·50ಕ್ಕೆ ಫಾದರ್ ಮುಲ್ಲರವರ ಕುಷ್ಟರೋಗಿಗಳ ಧರ್ಮಾಸ್ಪತ್ರೆ ಸಂದರ್ಶನೆಯಾಯಿತು. ಫಾದರ್ ಮುಲ್ಲರವರು ಖಾವಂದರವರ ಸವಾರಿಯನ್ನು ಸ್ವೀಕರಿಸಿ ತನ್ನ ಸಹಕಾರಿಯಾದ ಡಾಕ್ಟರ್ ಫರ್ನಾಂದಿಸರನ್ನು ಭೇಟಿ ಮಾಡಿಸಿದರು. ಕುಷ್ಟರೋಗಿಗಳ ಆಸ್ಪತ್ರೆಯಲ್ಲಿ ಹೆಂಗಸರಿರುವ ಕೋಣೆಗಳನ್ನು ಪ್ರಥಮತಾ ತೋರಿಸಿ ಗಂಡಸರ ಕೋಣೆಗಳಿಗೂ ಇವೆರಡಕ್ಕೂ ನಡುವೆ ಇರುವ ಚಿಕ್ಕ ದೇವ ಮಂದಿರದಿಂದ ಗಂಡಸರಿರುವ ಕೋಣೆಗಳಿಗೆ ಗವರ್ನರರನ್ನು ಕರೆದೊಯ್ದರು ಈ ಸಂದರ್ಭದಲ್ಲಿ ಗವರ್ನರರ ಸಂದರ್ಶನೆಯ ಸ್ಮರಣಾರ್ಥವಾಗಿ ಮ| ರಾ| ರಾ| ನಮ್ಮ ಪ್ರಖ್ಯಾತಿ ಪಟ್ಟ ಮಾರ್ಟಿನ್ ಪ್ಯಾಯಸರು ರೋಗಿಗಳಿಗೆ ಕೊಡುವರೆ ತಕ್ಕ ಉಡಿಗೆಗಳನ್ನೂ ಬಿಚ್ಚಾಯಿಗಳನ್ನೂ ಸಿದ್ಧಪಡಿಸಿದ್ದರು. ದೊರೆಗಳವರೂ ದೊರೆಸಾನಿಯರೂ ಪ್ಯಾಯಸರವರ ಔದಾರ್ಯವನ್ನು ಶ್ಲಾಘಿಸಿ, ಮಾರ್ಟಿನ್ ಪ್ಯಾಯಸರಿಗೂ ಅವರ ಪತ್ನಿಯರಿಗೂ ಕೈಕೊಟ್ಟು ಭೇಟಿ ಕೊಟ್ಟರು. [illegible] ನಂತರ ಇಲ್ಲಿಯ ಪ್ಲೇಗು ಆಸ್ಪತ್ರೆಯನ್ನು ಹೆಂಗಸರ ಚಿಕಿತ್ಸೆಯ [illegible] ರಿಸಿ ಈ ಶಾಲೆಯ ಕೆಲಸಕ್ಕೆನೆ ತಮ್ಮ ಜೀವವನ್ನು [illegible] [illegible]

ರಿಯವರಿಗೆ ಭೇಟಿ ಕೊಟ್ಟರು. ಈ ಸೀಯರ ಆಸ್ಪತ್ರೆಯನ್ನು ದಾಟಿ ಮಧ್ಯದಲ್ಲಿರುವ ದೇವಪೀಠಸ್ಥಾನದಿಂದ ಗಂಡಸರ ಆಸ್ಪತ್ರೆಗೆ ಖಾವಂದರವರು ಚಿತ್ತೈಸಿದರು. ಇಲ್ಲಿಂದ ಔಷಧಿಗಳನ್ನು ತಯ್ಯಾರಿಸುವ ಕಾರಖಾನೆಯೂ ಇವುಗಳನ್ನು ಪರವೂರಿಗೆ ಕಳುಹಿಸುವ ಬಗ್ಗೆ ತಯ್ಯಾರಿಸುವ ವಿಧಾನಗಳೂ ತೋರಿಸಲ್ಪಟ್ಟವು. ಈ ಕುಷ್ಟರೋಗಿಗಳ ಧರ್ಮಾಸ್ಪತ್ರೆಯು ಮೊದಲು ಜಪ್ಪು ಅನಾಥಲಯಕ್ಕೆ ಸೇರಿತ್ತು. 1890ನೇ ಇಸವಿಯಲ್ಲಿ ಫಾದರ್ ಮುಲ್ಲರವರು ಇದರ ಆಡಳಿತೆಯನ್ನು ವಹಿಸಿಕೊಂಡರು. ಜಪ್ಪಿನಲ್ಲಿರುವ ಈ ಸ್ಥಳವು ಮುನಿಸಿಪಾಲ್ ಮಾರ್ಗಗಳ ನಡುವೆ ಇದ್ದು ಕುಷ್ಟರೋಗಿಗಳಿರುವರೆ ಯೋಗ್ಯಸ್ಥಳವಲ್ಲವೆಂದರಿತು 1892ನೇ ಇಸವಿಯಲ್ಲಿ ಈಗಿನ ಹೊಸ ಕುಷ್ಟರೋಗಿಗಳ ಆಸ್ಪತ್ರೆಯನ್ನು ಕಟ್ಟಿಸಿದರು. ರೋಗಿಗಳ ಸಂಖ್ಯೆಯು ಹೆಚ್ಚಿ ಸ್ಥಳ ಸಾಲದೆ ಹೋದ್ದರಿಂದ 1896ನೇ ಇಸವಿಯಲ್ಲಿ ಇದನ್ನು ಇನ್ನಷ್ಟು ದೊಡ್ಡದಾಗಿ ಮಾಡಿದರು. ಇಲ್ಲಿ ಸರಾಸರಿ ಮೇಲೆ ದಿವಸ ಒಂದಕ್ಕೆ 32 ಜನ ರೋಗಿಗಳಿಗೆ ಚಿಕಿತ್ಸೆಯು ದೊರೆಯುವದು. ಡಿಸ್ಟ್ರಿಕ್ಟ್ ಬೋರ್ಡಿನವರ ಪ್ರೊಸಿಡಿಂಗ್ ಪ್ರಕಾರ ಇಲ್ಲಿ ನಮ್ಮ ಜಿಲ್ಲೆಯ ಹೊರಗಿನವರಿಗೆ ಚಿಕಿತ್ಸೆಯು ದೊರಕದು. ಡಿಸ್ಟ್ರಿಕ್ಟ್ ಬೋರ್ಡಿನವರು ವರುಷಾವಧಿಗೆ 250 ರೂಪಾಯಿಗಳನ್ನೂ ಮುನಿಸಿಪಾಲಿಟಿಯವರು ತಿಂಗಳಿಗೆ 15 ರೂಪಾಯಿ ಪ್ರಕಾರ ಈ ಆಸ್ಪತ್ರೆಗೆ ಧರ್ಮಸಹಾಯವನ್ನು ಕೊಡುತ್ತಿರುವರು.

ಜಪ್ಪಿನಲ್ಲಿರುವ ಅನಾಥಗೃಹ ಸಂದರ್ಶನೆಯು ತದನಂತರದಲ್ಲಿ ನಡೆಯಿತು. ಘನವುಳ್ಳ ಬಿಷೋಪ ಕವಿಯಸಿ ಪ್ರಭುಗಳು ಖಾವಂದರವರನ್ನು ಈ ಆಲಯದ ದೇವಮಂದಿರ ಹೆಬ್ಬಾಗಿಲಲ್ಲಿ ಉಪಚರಿಸಿ, ಇಲ್ಲಿಯ ರೆಕ್ಟರರಾದ ಫಾದರ್ ಬುಜ್ಜೊನಿಯವರಿಗೆ ಭೇಟಿ ಕೊಡಿಸಿದರು. ಫಾದರ್ ಬುಜ್ಜೊನಿಯವರು ಗವರ್ನರ್ ದೊರೆಗಳವರಿಗೆ ಈ ಸೊಗಸಾದ ದೇವಮಂದಿರವನ್ನೂ ಇಲ್ಲಿಯೇ ಇರುವ ಸೈಂಟ್ ಗ್ರಿಷಿಯಾನಸ್ ಎಂಬ ದೇವಭಕ್ತನ ಸಮಾಧಿಯನ್ನು ತೋರಿಸಿದರು. ಈ ದೇವಭಕ್ತನು ತನ್ನ ಒಬ್ಬೇ 15 ವರುಷ ಪ್ರಾಯದಲ್ಲಿ ಕ್ರೈಸ್ತಮತ ಪ್ರತಿಪಾದನೆಯಲ್ಲಿ ತನ್ನ ಪ್ರಾಣವನ್ನು ಕ್ರಿ. ಶ. ಮೂರನೇ ಶತಮಾನದಲ್ಲಿ ಅರ್ಪಿಸಿದನು. ಈ ಪರಿಶುದ್ಧಾತ್ಮನ ಗ್ರಂಥಗಳು ಅಂದವಾದ ಗಾಜಿನ ಪೆಟ್ಟಿಗೆಯಲ್ಲಿಟ್ಟು ಅದರ ಮೇಲೆ ಈತನನ್ನು ಸರಿಹೋಲುವ ಒಬ್ಬ ಯುವಕನ ಪ್ರತಿಮೆಯು ಪವಡಿಸಿರುವದು.

ಅನಾಥಗೃಹದ ಬಾಲ ಬಾಲಕಿಯರಿಂದಲೂ ಇತರರಿಂದಲೂ ತಯ್ಯಾರಿಸಲ್ಪಟ್ಟ ಸಾಮಗ್ರಿಗಳ ವಸ್ತುಪ್ರದರ್ಶನಾಲಯವು ಖಾವಂದರವರಿಗೆ ತೋರಿಸಲ್ಪಟ್ಟಿತು. ವಸ್ತುಪ್ರದರ್ಶನದಲ್ಲಿಟ್ಟ ಹಲವು ವಸ್ತುಗಳಲ್ಲಿ ಆವೆಮಣ್ಣಿನಿಂದ ತಯಾರಿಸಿದ ವಿಟ್ಟೋರಿ, ಸರ್ ಆರ್ಥರ್ ಲೋಲಿ, ನಮ್ಮ ಜಿಲ್ಲಾ ಕಲೆಕ್ಟರ್ ಅಜೀಜುದ್ದೀನ್ ಸಾಹೇಬ ಬಹದೂರ, ಎಡ್ವರ್ಡ್ ಮಹಾಚಕ್ರವರ್ತಿ, ಇಟಲಿಯಲ್ಲಿರುವ ಪೋಪ ಸಾಹೇಬ ಇವರ ಎದೆವರೆಗಿನ ಪ್ರತಿರೂಪವನ್ನು ತೋರಿಸುವ ಪ್ರತಿಮೆಗಳು ನೋಡುವರ ಕಣ್ಣುಗಳಿಗೆ ವಿಸ್ಮಯಾನಂದವನ್ನುಂಟುಮಾಡಿದವು. ಕಲಾಶಾಸ್ತ್ರವನ್ನು ಕಲಿಯಲಿಕ್ಕೆ ಪ್ರಾರಂಭಿಸಿರುವ ಬಾಲಕರ ಚಿತ್ರಪಟಗಳೂ ಇದೇ ಆಲಯದಲ್ಲಿ ತಯ್ಯಾರಿಸಿದ ಚರ್ಮದ ಕೆಲವು ವಸ್ತುಗಳೂ, ಒಳ್ಳೇ ಉಲ್ಲನಿನ ನಾಜೂಕು ವಸ್ತುಗಳೂ ಈ ಚಿಕ್ಕ ವಸ್ತುಪ್ರದರ್ಶನಾಲಯದಲ್ಲಿ ಶೋಭಿಸಿದವು.

ಜಪ್ಪಿನಲ್ಲಿರುವ ಅನಾಥಗೃಹದ ಸಿಸ್ಟರ್ಸ್ ಆಫ್ ಚೆರಿಟಿ ಯಾ ಸರ್ವತ್ಯಾಗವನ್ನು ಮಾಡಿ ವೈರಾಗಿಗಳಾಗಿರುವ ಸ್ತ್ರೀ ಸಹೋದರಿಯರ ಆಲಯವನ್ನು ಸಂದರ್ಶಿಸಿದರು. ಇಲ್ಲಿ ಪೂಜ್ಯ ಮದರ್ ಇಷ್ಟರವರಿಗೂ ಇವರ ಸಹಕಾರಿಣಿಯವರಿಗೂ ದೊರೆಗಳವರ ಭೇಟಿಯಾಯಿತು. ಅನಾಥ ಹುಡುಗಿಯರ ಹೊಲಿಗೆ ಕೆಲಸವನ್ನೂ ಉಲ್ಲನಿನ ಬಟ್ಟೆಗಳನ್ನು ತಯ್ಯಾರಿಸುವದನ್ನೂ ಗೋಟುಗಳನ್ನು ಮಾಡುವದನ್ನೂ ಅವಲೋಕಿಸಿ ಅಲ್ಲಿ ಆ ಸಮಯಕ್ಕೆ ಕೂಡಿದ ಜನರ ವಂದನೋಕ್ತಿಗಳ ರಭಸದಲ್ಲಿ ಅನಾಥಗೃಹವನ್ನು ಬಿಟ್ಟು ಜಪ್ಪು ಬಾಸೆಲ್ ಮಿಶನ್ ಹಂಚು ಕಾರಖಾನೆಗೆ ಹೊರಟರು. ಈ ಅನಾಥಗೃಹವು 1878ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟು ಪ್ರಥಮತಾ ಇದರಲ್ಲಿ ನಾಲ್ಕು ಜನರೇ ಇದ್ದು ಈ ದಿವಸ ಇವರ ಸಂಖ್ಯೆಯು 688 ಆಗಿರುವದು. ಈ ಆಲಯದಲ್ಲಿ ರೋಗಿಗಳಾಗಿದ್ದವರು ತಮ್ಮ ಅವಸಾನಕಾಲದಲ್ಲಿ ಮಕ್ಕಳನ್ನು ಈ ಅನಾಥಗೃಹದ ಮಾಲಿಕರಿಗೆ ಸಂರಕ್ಷಣೆ ಬಗ್ಗೆ ಬಿಟ್ಟು ಬಿಡುವದರಿಂದ ಈ ಮಕ್ಕಳಿಗೆ ಯೋಗ್ಯ ಶಿಕ್ಷಣವನ್ನು ಕೊಟ್ಟು ತಮ್ಮ ಜೀವನವನ್ನು ಸಾರ್ಥಕವೆಸಗಲು ಇಲ್ಲಿ ಹಲವು ತರದ ಕೈಗಾರಿಕೆಗಳನ್ನು ಸ್ಥಾಪಿಸಿದ ಈ ಜೆಸುಯಿಟ್ ಮಿಶನರಿಗಳ ಕೆಲಸವು ಲೋಕಮಾನ್ಯವೂ ಸರ್ವಜಾತಿಮತಸ್ಥರಿಂದ ಅನುಸರಣೀಯವೂ ಆಗಿರುವದು.

ಜಪ್ಪು ಹಂಚಿನ ಕಾರಖಾನೆಯಲ್ಲಿ ಬಾಸೆಲ್ ಮಿಶನಿನ ಹಿರೇ ಅಧಿಕಾರಿಗಳಾದ ಮಿ| ಅಲ್ಬನ್ ಮುಲ್ಲರ್ ದೊರೆಗಳವರು ಖಾವಂದರವರಿಗೆ ಸ್ವಾಗತವಿತ್ತು ಇಲ್ಲಿಯ ಇಬ್ಬರು ಮೇನೇಜರರಿಗೆ ಭೇಟಿ ಕೊಡಿಸಿದರು. ಕೂಡಲೇ ಗವರ್ನರವರನ್ನು ಅವರ ಪತ್ನಿ ವ ಇಬ್ಬರು ಕುಮಾರಿಯರೊಂದಿಗೆ ಕಾರಖಾನೆಯ ಕೆಲಸ ನಡಿಯುವ ಸ್ಥಳಗಳಿಗೆ ಕೊಂಡು ಹೋಗಿ ಅಲ್ಲಿ ಪ್ರಸಮತಾ ರಂಗಿನ ಇಟ್ಟಿಗೆಗಳನ್ನು ತಯ್ಯಾರಿಸುವ ಕ್ರಮವು ತೋರಿಸಲ್ಪಟ್ಟಿತು. ತದನಂತರ ಕ್ರಮವಾಗಿ ಆವೆಮಣ್ಣನ್ನು ಹದಮಾಡುವ ಯಂತ್ರಗಳನ್ನೂ ಹಂಚುಗಳನ್ನು ತಯ್ಯಾರಿಸುವ ರೀತಿಯನ್ನೂ ಅವುಗಳನ್ನು ಒಣಗಿಸುವ ವಿಧಾನವನ್ನೂ ಪ್ರದರ್ಶಿಸಿದರು. ಕುಲಾಲ ಚಕ್ರಗಳ ಸೂತ್ರಗಳನ್ನನುಸರಿಸಿ ಅನೇಕ ವಿಧ ವಿಧದ ಮಣ್ಣಿನ ಗಡಿಗೆಗಳನ್ನೂ ಪಂಚಪಾತ್ರೆ ಮೊದಲಾದ ಮನೆ ಸಾಮಾನುಗಳನ್ನೂ ತಯ್ಯಾರಿಸುವದು ಈ ಕಾರಖಾನೆಯ ಆಸ್ಪತಿಗಳಲ್ಲಿ ನಡಿಯುತ್ತಿತ್ತು. ಇದೆಲ್ಲವನ್ನೂ ನೋಡಿ ಖಾವಂದರವರು ಸಂತೋಷಚಿತ್ತರಾಗಿ ಕಾರಖಾನೆಯ ಮೇನೇಜರರನ್ನೂ ಆಲ್ಬನ್ ಮುಲ್ಲರ್ ದೊರೆಗಳನ್ನೂ ವಂದಿಸಿ ಕಲೆಕ್ಟರವರ ಬಂಗ್ಲೆಗೆ ತೆರಳಿದರು.

ಮಧ್ಯಾಹ್ನದ ಮೇಲೆ 2 30ರಿಂದ 4 30ರ ವರೆಗೆ ಎಲ್ಲಾ ಡಿಪ್ಯುಟೇಶನುಗಳಿಗೆ ಯಾ ಜಿಲ್ಲೆಯ ಆಯಾ ತಾಲೂಕಿನ ಜನರು ತಮ್ಮ ತಮ್ಮ ಸಂಕಷ್ಟಗಳನ್ನು ದೊರೆಗಳ ಮುಂದೆ ಹೇಳಿಕೊಳ್ಳುವರೆ ಪ್ರತಿನಿಧಿಗಳಿಗೆ ಭೇಟಿಕೊಡುವದಾಗಿ ನಿಶ್ಚಯಿಸಿತ್ತು. ಆದರೆ ಕೆಲವು ಡಿಪ್ಯುಟೇಶನುಗಳಿಗೆ ಹೆಚ್ಚು ಸಮಯ ತಗಲಿದ್ದರಿಂದ ಈ ಡಿಪ್ಯುಟೇಶನುಗಳು ಈ ದಿವಸವೇ ಪೂರ್ಣ ಮುಗಿಯದೆ ಮಾರಣೆ ದಿವಸ ಬೆಳಿಗ್ಯೆ ಘಂಟೆ 11ಕ್ಕೆ ಇಟ್ಟರು. ಡಿಪ್ಯುಟೇಶನುಗಳೆಲ್ಲವೂ ಏಕಾಂತವಾಗಿ ನಡೆದದ್ದರಿಂದ ಈ ವಿಷಯ ಖಾವಂದರ ಉತ್ತರಗಳನ್ನು ಸಮಗ್ರವಾಗಿ ಕೆಳಗೆ ಪ್ರಕಟಿಸುವರೆ ಅನುಕೂಲವಾಗಲಿಲ್ಲ.

ಸಾಯಂಕಾಲ ಗವರ್ನರ ಸಾಹೇಬರು ಪತ್ನಿಸಮೇತ ಅಲೋಸಿಯಸ್ ಕೋಲೇಜಿನಲ್ಲಿ ಕಥೋಲಿಕರ ಸತ್ಕಾರಗಳನ್ನು ಸ್ವೀಕರಿಸಿದರು. ಅವಾದಮುಕ್ತಕವಾಗಿ ವಿವಿಧ ವರ್ಣಗಳ ದೀಪಗಳಿಂದಲಂಕೃತವಾದ ವಿಶಾಲವಾದ ಕೋಲೇಜ ಕಟ್ಟೋಣವು ಆ ಎತ್ತರವಾದ ಗುಡ್ಡೆಯಿಂದ ಬಹು ಶೋಭಾಯಮಾನವಾಗಿತ್ತು. ನಾಟಕಶಾಲೆಯಲ್ಲಿ ನೆರೆದಿದ್ದ ಸಭೆಗೆ ಇಂಪಾಗುವಂತೆ ಹುಡುಗರ ಮೇಳವೂ ಎರಡು ಇಂಗ್ಲೀಷು ಹಾಡುಗಳನ್ನು ಹಾಡಿತು. ನಂತರ ಮ| ರಾ| ರಾ| ಎ ಪಿ ಪಿ ಸಾಲ್ಡಾಂಞರು ಸ್ವಾಗತವನ್ನು ಓದಿದರು. ಇದರಲ್ಲಿ ಮುಖ್ಯವಾಗಿ ತಮಗೆ ಹಿರಿಯರಿಂದ ಪಾರಂಪರ್ಯವಾಗಿ ಬಂದ ರಾಜನಿಷ್ಠೆಯ ಭಾವವನ್ನು ಪ್ರಕಾಶಗೊಳಿಸಿ ದಂಪತಿಗಳಿಗೆ ಸ್ವಾಗತವನ್ನು ಹೇಳಿದರು. ಖಾವಂದರವರು ಉಚಿತವಚನಗಳಲ್ಲಿ ಬಿನ್ನವತ್ತಳೆಯನ್ನು ಸ್ವೀಕರಿಸಿ ಕಥೋಲಿಕರನ್ನು ಅವರ ಸತ್ಕಾರಕ್ಕಾಗಿಯೂ ರಾಜಭಕ್ತಿಗಾಗಿಯೂ ಅಭಿವಂದಿಸಿದರು. ಈ ಸಂದರ್ಭದಲ್ಲಿ ರೋಮನ್ ಕಥೋಲಿಕರು ಅರ್ಪಿಸಿದ ಬಿನ್ನಹ ಪತ್ರ ಯಾ ಖಾವಂದರವರ ಉತ್ತರದ ಗೋಷ್ಠಿಯನ್ನು ಮೇಲೆ ಹೇಳಿದ್ದರಿಂದ ಅದನ್ನು ಬೇರೆ ಪ್ರಕಟಿಸಲಿಲ್ಲ. "ಲೋಂಬಿ" ಎಂದು ಇಂಗ್ಲೀಷು ವಿನೋದಕರ ನಾಟಕವನ್ನು ಆ ಸಜ್ಜುಗೊಳಿಸಿದ ನಾಟಕಶಾಲೆಯಲ್ಲಿ ಪ್ರದರ್ಶಿಸಿದರು. ತರುವಾಯ ಮೇಳದಲ್ಲಿ ಎರಡು ಹಾಡುಗಳನ್ನು ಹಾಡಿದರು. ಸಭೆ ವಿಸರ್ಜಿಸುವಾಗ ರಾಷ್ಟ್ರೀಯ ಗೀತವು ಹಾಡಲ್ಪಟ್ಟಿತು.

ರಾತ್ರಿಯಲ್ಲಿ ಜಷ್ಟಿಯವರಲ್ಲಿ ಗವರ್ನರ ಸಾಹೇಬರಿಗೆ ಭೋಜನವಾಯಿತು.

ನವಂಬರ 6ನೇ ಬುಧವಾರ. ನಮ್ಮ ಜಿಲ್ಲೆಗೆ ಕೈಗಾರಿಕೆಗಳಿಗೆ ತವರುಮನೆಯಾದ ಬಾಸೆಲ್ ಮಿಶನ್ ಇವರ ಮುದ್ರಾಲಯಕ್ಕೆ ಖಾವಂದರವರ ಸವಾರಿ ಬೆಳಿಗ್ಯೆ ಘಂಟೆ 7 30ಕ್ಕೆ ದಯಮಾಡಿಸಿತು. ಕಲೆಕ್ಟರ್ ದೊರೆಗಳವರು ಮಿಶನಿನ ಸೀನಿಯರ್ ಯಾ ಹಿರೇ ಮಿಶನರಿಗಳಾದ ಘನವುಳ್ಳ ರಿಟ್ಟರ್ ದೊರೆಗಳವರಿಗೆ ಭೇಟಿಕೊಡಿಸಿದರು. ರಿಟ್ಟರ್ ದೊರೆಗಳು ಮುದ್ರಾಲಯದ ಮೇನೇಜರರಾದ ಬಾಯಿಂ ಬೇಗ ದೊರೆಗಳಿಗೆ ಭೇಟಿಕೊಡಿಸಿ ಗವರ್ನರವರನ್ನು ಮುದ್ರಾಲಯದ ಅಕ್ಷರಗಳನ್ನು ಜೋಡಿಸುವ ಕೋಣೆಯಿಂದ ಛಾಪಾ ಯಂತ್ರಗಳು ಇರುವ ಕೋಣೆಗೆ ಒಯ್ದರು. ಇಲ್ಲಿರುವ ಯಂತ್ರಗಳು ಲೋಕಪ್ರಸಿದ್ಧವಾಗಿರುವ ಇವರ ಸುಂದರವಾದ ಮುದ್ರಣಕ್ಕೆ ಸಾಕ್ಷಿಭೂತಗಳಾಗಿರುತ್ತವೆ. ಎಲ್ಲಾ ಕೆಲಸವೂ ಸೀಮೆ ಎಣ್ಣೆಯಿಂದ ನಡಿಯುವ ಉಗಿಯಂತ್ರದಿಂದ ನಡಿಯುತ್ತಿರುವದು. ಕೆಲವು ಸಸ್ಯಾದಿಗಳ ಭಾವ ಚಿತ್ರಗಳನ್ನು ಮೂರು ತರದ ರಂಗಿನ ಶಾಯಿಯಿಂದ ಮುದ್ರಿಸುತ್ತಿದ್ದರು. ಅಕ್ಷರಗಳನ್ನು ಹೊಯ್ಯುವ ಕೋಣೆಯು ನಂತರ ಪ್ರದರ್ಶಿಸಲ್ಪಟ್ಟಿತು. ಇಲ್ಲಿ ಬೇರೆ ಬೇರೆ ನಮೂನೆಯ ಅಕ್ಷರ ಹೊಯ್ಯುವ ಐದಾರು ಯಂತ್ರಗಳಲ್ಲಿ ಕೆಲಸ ನಡಿಯುತಿತ್ತು. ಖಾವಂದರವರಿಗೆ ಛಾಪಖಾನೆ ಮೇನೇಜರವರು ಸ್ಟೀರಿಯೋ ಟೈಪ್ ಯಾ ಅಕ್ಷರಗಳು ಜೋಡಿಸಿದ ಪುಟಗಳನ್ನು ಹೊಯ್ಯುವ ರೀತಿಯನ್ನು ತೋರಿಸಿಕೊಟ್ಟರು. ಇಲ್ಲಿಂದ ಛಾಪಖಾನೆಯ ಆಫೀಸು ಕೋಣೆಯಲ್ಲಿಟ್ಟಿರುವ ಬ್ಯಾಂಡರ್ ಜೋಕ್ಸ್‌ರವರಿಂದ ಬ್ಯಾಂಡಾದ ಪುಸ್ತಕಗಳನ್ನು ನೋಡಿ,

...ಶನ ಹರ್ಮೆಲಿಂಕ್ ದೊರೆಗಳವರ ವಂದನೋಕ್ತಿಗಳನ್ನು ಸ್ವೀಕರಿಸಿ ಅವರಿಗೆ ಯೋಗ್ಯವಾದ ಪ್ರತ್ಯುತ್ತರವಿತ್ತು ಇಲ್ಲಿಂದ ಮಿಶನಿನವರ ಕಬ್ಬಿಣದ ಕಾರ್ಖಾನೆಗೆ ಹೊರಟರು.

ದೊರೆಗಳವರ ಮೋಟರ್ ಭಂಡಿ ಹೊಡೆಯುವವನಿಗೆ ಮಂಗಳೂರು ಮಾರ್ಗಗಳ ಗೊತ್ತು ಇಲ್ಲದ್ದರಿಂದ ಮೋಟರ್ ಗಾಡಿಯು ಕಬ್ಬಿಣದ ಕಾರ್ಖಾನೆಯ ಮಾರ್ಗವನ್ನು ಬಿಟ್ಟು ಹೆಂಗಸರ ಮತ್ತು ಮಕ್ಕಳ ಆಸ್ಪತ್ರೆಗೆ ಹೋಯಿತು. ಇಲ್ಲಿ ಎಲ್ಲವನ್ನೂ ನೋಡಿ ಇಲ್ಲಿಂದ ವೆನ್‍ಲೋಕ್ ಯಾ ನಮ್ಮ ಧರ್ಮಾಸ್ಪತ್ರೆಗೆ ಸವಾರಿಯು ದಯಪಾಲಿಸಿತು ಇಲ್ಲಿ ಸಹಾ ಗವರ್ನರ ದೊರೆಗಳವರು ಹೆಚ್ಚು ಸಮಯವಿರಲಿಲ್ಲ ಇಡೀ ಆಸ್ಪತ್ರೆಯನ್ನೂ ರೋಗಿಗಳಿರುವ ಕೋಣೆಗಳನ್ನು ಒಂದೊಂದಾಗಿ ಸಂದರ್ಶಿಸಿ ರಾವ್ ಸಾಹೇಬ್ ನ. ಸುಬ್ಬರಾವರು ಜಾತಿಗಳಿಗೆ ಪ್ರತ್ಯೇಕವಾಗಿ ತಮ್ಮ ಪ್ರಥಮ ಹೆಂಡತಿಯ ಹೆಸರಲ್ಲಿ ಕಟ್ಟಿಸಿದ ಕೋಣೆಗಳನ್ನು ಖಾವಂದರವರು ನೋಡಿದರು ಈ ಆಸ್ಪತ್ರೆಯಲ್ಲಿ ಒಳ ರೋಗಿಗಳಿಗೆ ಚಿಕಿತ್ಸೆ ಕೊಡುವರೆಂದೂ ದಿನ ಒಂದಕ್ಕೆ ಸರಾಸರಿ ಔಷಧಿ ತೆಕ್ಕೊಳ್ಳುವವರ ಹಾಜರಿಯು ಗಳಿಕೆ ಆಗಿರುವದೆಂದೂ ತಿಳಿದು ಬರುತ್ತದೆ ಕೆಪ್ಟನ್ ಬೋಸರ ಕೈಕೆಳಗೆ ಆಸ್ಪತ್ರೆಯು ಬಹಳ ಯೋಗ್ಯಸ್ಥಿತಿಯಲ್ಲಿಯೂ ಎಲ್ಲವೂ ನಿರ್ಮಲವಾಗಿಯೂ ಇರುವದೆಂದು ಖಾವಂದರವರು ಬಹಳ ಶಿಫಾರಸು ಬರೆದಿರುವರು

ಬಾಸೆಲ್ ಮಿಶನಿನವರ ಕಬ್ಬಿಣದ ಕಾರ್ಖಾನೆಗೆ ಆ ಬಳಿಕ ದಯೆಮಾಡಿದರು ಆಲ್ಫ್ರೆನ್ ಮುಲ್ಲರ್ ದೊರೆಗಳವರು ದಂಪತಿಗಳನ್ನು ಸ್ವೀಕರಿಸಿ ಕಾರ್ಖಾನೆಯ ಮೇನೇಜರವರಾದ ಮಿ| ಸ್ಟೋಕ್ಸ್ ದೊರೆಗಳಿಗೆ ಭೆಟ್ಟಿಕೊಡಿಸಿದರು

ಕಬ್ಬಿಣದ ಖಜಾನೆ ಪೆಟ್ಟಿಗೆಗಳು ಈ ಕಾರ್ಖಾನೆಯಲ್ಲಿ ಮೊದಲು ತೋರಿಸಲ್ಪಟ್ಟವು. ಕಳ್ಳರಿಂದ ತೆಗಿಯಲಿಕ್ಕಾಗದ ಬೀಗಗಳಿದ್ದು ಬಾಗಿಲು ಹಾಕಿದಾಗ್ಯೆ ಒಳಗೆ ವಾಯು ಸಂಚರಣೆಯನ್ನು ತಡೆಯುವ ಬೆಂಕಿ ಬಿದ್ದರೂ ಹಾಳಾಗದ ಖಜಾನೆ ಪೆಟ್ಟಿಗೆಗಳು ಒಂದೊಂದಾಗಿ ಸಾಲಿನಲ್ಲಿ ಇಟ್ಟಿದ್ದವು. ನೀರನ್ನು ತೆಗಿಯುವ ಒಂದು ಯಂತ್ರದ ಸಣ್ಣ ಮಾದರಿಯು ಇವುಗಳೊಳಗಿತ್ತು ಕಬ್ಬಿಣ ಕೆಲಸಮಾಡುವವನ್ನು ನೋಡಿ ಈ ಕಾರ್ಖಾನೆಯನ್ನು ಬಿಟ್ಟು ಗವರ್ನಮೆಂಟು ಕೊಲೇಜಿಗೆ ಚಿತ್ತೈಸಿದರು

ಗವರ್ನಮೆಂಟು ಕೊಲೀಜಿನ ಪ್ರಿನ್ಸಿಪಲರಾದ ಮಿ| ಕಾರ್ಟರವರಿಗೆ ದಂಪತಿಗಳಿಬ್ಬರ ಭೇಟಿ ಸಿಕ್ಕಿತು ಕ್ಲಾಸ ಕೋಣೆಗಳನ್ನು ಒಂದೊಂದಾಗಿ ನೋಡಿ ಆ ಸಮಯದಲ್ಲಿ ಅಲ್ಲಿ ವಿದ್ಯಾರ್ಥಿಗಳಿಗೆ ಪಾಠಗಳನ್ನು ಕಲಿಸುತ್ತಿರುವ ಉಪಾಧ್ಯಾಯರೆಲ್ಲರಿಗೂ ಖಾವಂದರವರು ಭೇಟಿಕೊಟ್ಟರು ಹುಡುಗರ ಕೆಲವು ಕುಸ್ತಿ ಆಟಗಳನ್ನು ನೋಡಿ ಹೊಸ್ಟೆಲ್ ಯಾನೆ ವಿದ್ಯಾರ್ಥಿಭವನಕ್ಕೆ ಸರಕಾರಿ ಸಹಾಯ ದಯಪಾಲಿಸಬೇಕೆಂಬ ಮೊರೆ ಯಾ ಬೇರೆ ಹಲವು ವಿಷಯಗಳಿಂದ ಕೂಡಿರುವ ವಿದ್ಯಾರ್ಥಿಗಳ ಬಿನ್ನವತ್ತಳಿಕೆಯನ್ನು ಸ್ವೀಕರಿಸಿದರು ವಿದ್ಯಾರ್ಥಿಗಳಿಗಿತ್ತ ಉತ್ತರವನ್ನು ಬೇರೊಂದು ಕಡೆಯಲ್ಲಿ ಪ್ರಕಟಿಸಿರುವೆವು

ತರುವಾಯ ಬೆಳಿಗ್ಯೆ 11 ಘಂಟೆಯಿಂದ 1 ಘಂಟೆ ವರೆಗೆ ರೋಮನ್ ಕೆಥೊಲಿಕ್ ಮಹಮ್ಮದೀಯ, ಉಡುಪಿಯವರ ವ ಮೊದಲಿದಿವಸನಬಾಕಿಉಳಿದ ಡಿಪ್ಯುಟೇಶನ್ ಯಾ ಪ್ರತಿನಿಧಿಗಳ ಅರಿಕೆಗಳನ್ನೆಲ್ಲಾ ಕೇಳಿದರು ಇದೆಲ್ಲಾ ಏಕಾಂತವಾಗಿ ನಡೆದಿರುವದರಿಂದಲೂ ಪ್ರಕಟಣೆಗೆ ಯೋಗ್ಯವಾದ ಇವರ ವಿಷಯಗಳು ಸರಿಯಾಗಿ ನಮಗೆ ತಿಳಿದು ಬರಲಿಲ್ಲವಾದ್ದರಿಂದಲೂ ಈ ವಿಷಯಗಳನ್ನು ನಮ್ಮ ಮುಂದಿನ ಸಂಚಿಕೆಗಳಲ್ಲಿ ಪ್ರಸ್ತಾಪಿಸುವೆವು

ಮಧ್ಯಾನ್ಹದಲ್ಲಿ ಮೊದಲೇ ನಿರ್ಣಯಿಸಲ್ಪಟ್ಟ ಮೇರೆಗೆ 3 40ಕ್ಕೆ ಜೈಲುಸಂದರ್ಶನೆಯಾಯಿತು ಡಿಸ್ಟ್ರಿಕ್ಟ್ ಜೈಲು ಬಹಳ ನಿರ್ಮಲವಾಗಿದ್ದು ಕೈದಿಗಳ ಆರೋಗ್ಯವೂ ಒಳ್ಳೇದಾಗಿ ಸರ್ವವೂ ಒಳ್ಳೇ ಆಡಳಿತೆಯನ್ನು ವ್ಯಕ್ತಪಡಿಸುವದಾಗಿ ಒಳ್ಳೇ ಶಿಫಾರಸು ಮಾಡಿರುವರು ಜೈಲನ್ನು ದಾಟುತ್ತಿರುವಾಗ್ಯೆ ಮಾರ್ಟಿನ್ ಪ್ಯಾಸರವರು ದೊರೆಗಳವರ ಭೇಟಿಯ ಸ್ಮರಣಾರ್ಥವಾಗಿ ಬಡಜನರೆಲ್ಲರಿಗೂ ಅಕ್ಕಿಯನ್ನು ಹಂಚಿದರು

ಜೈಲಿಗೆ ಬರುತ್ತಾ ಲೇಡಿ ದೊರೆಸಾನಿಯವರು ಗವರ್ನರರೊಂದಿಗೆ ಇರಲಿಲ್ಲ, ಇವರು ತಮ್ಮ ಇಬ್ಬರು ಕುಮಾರಿಯರೊಂದಿಗೆ ಎರಡು ಕುದುರೆ ಗಾಡಿಯಲ್ಲಿ ಸ್ಯೆಂಟ್ ಅಲೋಸಿಯಸ್ ಕೊಲೇಜ ಬಳಿ ಬಂದು ಪತಿ ಪತ್ನಿಯರೂ ಕುಮಾರ್ತೆಯರೂ ಸ್ಯೆಂಟ್ ಅಲೋಸಿಯಸ್ ಕೊಲೇಜಿನ ಎಲ್ಲಾ ಭಾಗಗಳಲ್ಲಿಯೂ ತಿರುಗಾಡಿ ಕೊಲೇಜ ದೇವಮಂದಿರದ ಗೋಡೆಗಳಲ್ಲಿಯೂ ಸಿಲ್ಲಿಂಗಿನಲ್ಲಿಯೂ ಇಡೀ ಬ್ಯಾಬಲನ್ನು ಉದಹರಿಸುವ ಚಿತ್ರಪಟಗಳನ್ನು ನೋಡಿ ವಿಸ್ಮಯಪಟ್ಟರು. ದೈವವತರಾದ ಬ್ರದರ್ ಮೋಶನಿಯರವರು ಎಲ್ಲರಲ್ಲಿಯೂ ನೆನವರಿಕೆಗೆ ಬಂದರು. ಆ ಮೇಲೆ ಕೊಲೇಜು ಹೋಲಿನಲ್ಲಿ ಕೊಲೇಜು ಪಂಡಿತರೂ ವಿದ್ಯಾರ್ಥಿಗಳೂ ಕೂಡಿ ತಮ್ಮ ಸ್ವಾಗತ ಭಿನ್ನವತ್ತಳಿಕೆಯನ್ನು ಓದಿದರು. ಇವರಿಗೆ ಯೋಗ್ಯ ಉತ್ತರವಿತ್ತಿರುವರು.

ಇಷ್ಟರಲ್ಲಿ ಸ್ಯೆಂಟ್ ಅಲೋಸಿಯಸ್ ಸಂದರ್ಶನೆಯು ತೀರಿತು. ನಗರ ಸಂಚರಣೆಗೆ ಇಲ್ಲಿಂದ ಹೊರಟರು. ಬಾವುಟಗುಡ್ಡೆಯ ಮಾರ್ಗವಾಗಿ ಹಂಪನಕಟ್ಟೆ, ಮಾಡಾಬಜಾರ, ಕೆಂಟೋನ್‍ಮೆಂಟ್ ಮಾರ್ಗ ಈ ದಾರಿಯಿಂದ ಮುನಿಸಿಪಾಲ್ ಕಚೇರಿಗೆ ಬಂದು, ಬಂದರದಲ್ಲಿರುವ ಕಸ್ಟಮ್ಸ್ ಆಫೀಸಿನ ಎದುರಿನಿಂದ ಸರಾಫಕಟ್ಟೆ, ಗೋಳಿಕಟ್ಟೆ ಬಜಾರ, ನವಾಯಿತರ ಪೇಟೆ, ಪಂಚಮಹಲ, ಹೊಸಮಾರ್ಗ ಡೊಂಗರಕೇರಿ, ಕೊಡಿಯಾಲಬೈಲ ರಸ್ತೆ, ತಿರುಗಿ ಹಂಪನಕಟ್ಟೆಯಿಂದ ಕಲೆಕ್ಟರವರ ಬಂಗ್ಲೆಗೆ ಹಿಂತಿರುಗಿದರು. ಅಲ್ಲಲ್ಲಿ ಶ್ರೀಮಂತ ಸಾವುಕಾರರೂ ಇತರರೂ ಖಾವಂದರವರಿಗೂ ಇವರ ಪರಿವಾರಕ್ಕೂ ಅಲ್ಲಲ್ಲಿ ಹೂಮಾಲಿಕೆಗಳನ್ನು ತೊಡಿಸಿ ಪುಷ್ಪಗುಚ್ಛಗಳನ್ನು ಕೊಟ್ಟರು.

ಸಾಯಂಕಾಲ ಕಲೆಕ್ಟರವರು ಇತರ ಸರದಾರರವರನ್ನು ಆಮಂತ್ರಿಸಿ ಗವರ್ನರ್ ದೊರೆಗಳವರಿಗೆ ಭೋಜನವಿತ್ತರು 10 ಘಂಟೆಗೆ ಭೋಜನವನ್ನು ತೀರಿಸಿ ಜಿಲ್ಲೆಯ ಜನರ ಸತ್ಕಾರಗಳನ್ನು ಸ್ವೀಕರಿಸುವರೆ ಗವರ್ನಮೆಂಟು ಕೊಲೇಜಿಗೆ ಬಂದರು. ಕೊಲೇಜುಹೋಲು ನಾನಾ ವಿಧದ ತೋರಣಗಳಿಂದಲೂ ಹೂಮಾಲೆಗಳಿಂದಲೂ ಅಲಂಕರಿಸಲ್ಪಟ್ಟಿತ್ತು ದೊರೆಗಳು ಕ್ಲಪ್ತಸಮಯಗಿಂತ ಅರ್ಧ ಘಂಟೆ ನಂತರ ಬಂದದ್ದರಿಂದ ಮೈದಾನಿನಲ್ಲಿಯೂ ರಸ್ತೆಗಳಲ್ಲಿಯೂ ಬೆಳಗಿಸಿದ ದೀಪಾವಳಿಗಳು ನಂದಿಹೋಗಿದ್ದವು ಗವರ್ನಮೆಂಟು ಕೊಲೇಜು ಹೋಲಿನಲ್ಲಿ ಬಾಲಕಿಯರ ಇಂಗ್ಲೀಷ್ ಮರಾಟಿ ಪದಗಳನ್ನೂ, ಕೊಳಲಿನಿಂದ ನಡಿಸಿದ ಗೀತಗಳನ್ನೂ ಕೊಲೇಜು ಹುಡುಗರಿಂದ ಏರ್ಪಟ್ಟ ಇಂಗ್ಲೀಷ್ ಶಕುಂತಲ ನಾಟಕದ ಒಂದು ಅಂಕವನ್ನು ನೋಡಿ ಆನಂದಭರಿತರಾದರು ಈ ಎಲ್ಲಾ ಸತ್ಕಾರಗಳ ಬಗ್ಯೆ ಜಿಲ್ಲೆಯ ಜನರೆಲ್ಲರಿಗೂ ರಿಸೆಪ್ಶನ್ ಕಮಿಟಿಯ ಮೆಂಬರರಿಗೂ ಬಹಳವಾಗಿ ವಂದಿಸಿ ತನಗೆ ಇತರ ಕಡೆಯಲ್ಲಿ ಕೊಟ್ಟ ಸತ್ಕಾರಗಳಲ್ಲಿ ದಕ್ಷಿಣಕನ್ನಡ ಜಿಲ್ಲೆಯವರದು ಉತ್ಕೃಷ್ಟವಾಗದ್ದೆಂದೂ ಜಿಲ್ಲೆಯ ಜನರಲ್ಲಿ ಪ್ರತಿಜಾತಿಯವನೂ ಪ್ರತಿಮತಸ್ಥನೂ ಸರ್ವರೂ ಒಟ್ಟುಕೂಡಿ ತನ್ನ ಪ್ರಿಯ ಪತ್ನಿಗೂ ತನಗೂ ಮಾಡಿದ ಉಪಚಾರಗಳಿಗೆ ತಾನು ಕೃತಜ್ಞನಾಗಿರುವೆನೆಂದು ಎರಡೆರಡಾವರ್ತಿ ಹೇಳಿದರು ಜಿಲ್ಲೆಯ ಮುಖಂಡರ ಪ್ರಯತ್ನಗಳೂ ಕಲೆಕ್ಟರವರ ಅನುಪಮ ಸಾಹಸಗಳೂ ಸಾರ್ಥಕವಾದವು ಮೈದಾನಿನಲ್ಲಿ ಬೆಳಗಿಸಿದ ಕಾಗದದಿಂದ ತಯಾರಿಸಿದ ಚಿತ್ರಪಟಗಳಿಂದ ತುಂಬಿರುವ ಲಾಂದ್ರಗಳೂ ಸಹಸ್ರ ಸಂಖ್ಯೆಯ ದೀಪಾವಳಿಗೂ, ವಿಚಿತ್ರ ನೂತನದ ಮಜ್ಜೆ ಇವೆಲ್ಲವೂ ಇದ್ದ ಈ ಮಹೋತ್ಸವು ಇಷ್ಟರವರೆಗೆ ಇಲ್ಲಿ ಆಗಲಿಲ್ಲವೆಂತಲೂ ಹೇಳಬಹುದು ಇಲ್ಲಿಗೆ ಬುಧವಾರದ ಪ್ರೋಗ್ರೆಮು ತೀರಿತು

ನವಂಬರ 7ನೇ ಗುರುವಾರ. ಮಾರನೇ ದಿನ ಬೆಳಿಗ್ಯೆ ಗವರ್ನಮೆಂಟು ಕೊಲೇಜಿನಲ್ಲಿ ಜಿಲ್ಲೆಯ ಉತ್ಪತ್ತಿಗಳ ವಸ್ತುಪ್ರದರ್ಶನ ವಸ್ತುಪ್ರದರ್ಶನದ ಶುರುವಿನ ಕೋಣೆಯಲ್ಲಿ ಜಪ್ಪು ಜೆಸುವಿಟರ ಸೆಂಟ್ ಜೊಸೇಫ್ ಎಸ್ಯಾಲಮ್ಮಿನಲ್ಲಿ ತಯಾರಿಸಿದ ಆವೆಮಣ್ಣಿನ ವಿವಿದ ಪ್ರತಿಮೆಗಳು, ಊಲನಿನ ಮತ್ತು ಚರ್ಮದ ಇತರ ವಸ್ತುಗಳು ಇವರ ಎಡಪಾರ್ಶ್ವದ ಕೋಣೆಯಲ್ಲಿ ಬಾಸೆಲ್ ಮಿಶನರಿಗಳ ಜಪ್ಪು ಹಂಚಿನ ಕಾರಖಾನೆಯ ಆವೆಮಣ್ಣಿನ ರಂಗಾಯಿಸಿದ ನಾನಾ ವಸ್ತುಗಳ ಪ್ರತಿರೂಪಗಳು, ಕಬ್ಬಿಣದ ಕಾರಖಾನೆಯ ಖಜಾನೆ ಪೆಟ್ಟಿಗೆಗಳು, ಮಿಶನ್ ಮಗ್ಗದ ಕಾರಖಾನೆಯ ಪಟ್ಟೆ ವಸ್ತ್ರಗಳು, ಮಿಶನ್ ಹೆಂಗಸರಿಂದ ತಯ್ಯಾರಿಸಿದ ಊಲನಿನ ಉಡಿಗೆಗಳು, ಎಡಪಾರ್ಶ್ವದಲ್ಲಿ ಕಾಡುತ್ಪತ್ತಿ, ನಾನಾ ತರದ ಮರಗಳ ತುಂಡುಗಳು, ಗಂಧದ ಎಣ್ಣೆ ಮೊದಲಾದ ಕಾಡು ಉತ್ಪತ್ತಿಗಳ ಎಣ್ಣೆಗಳನ್ನು ತಯ್ಯಾರಿಸುವ ಸಾಮಗ್ರಿಗಳು ಫೊರೆಸ್ಟ್ ಆಫೀಸರರಿಂದ ಪ್ರದರ್ಶಿಸಲ್ಪಟ್ಟಿದ್ದವು ಮತ್ತೊಂದು ಕಡೆ ಸಾವುಕಾರ ನಗರದ ಸರಾಫ ದಾಮೋದರ ಶ್ಯಾನುಭಾಗರವರು ಈಗಿನ ಮತ್ತು ಪುರಾತನ ನಮೂನೆಗಳ ಬೆಳ್ಳಿಭಂಗಾರದ ಆಭರಣಗಳನ್ನು ದೇಖಾವೆಗ ಇಟ್ಟಿದ್ದರು. ಇನ್ನೊಂದು ಕಡೆಯಲ್ಲಿ ಕುಂಬಳೆ ವಿವಿಂಗ್ ಕಂಪೆನಿಯವರ ವಸ್ತ್ರಗಳನ್ನು ಇಟ್ಟಿದ್ದರು. ಬೇರೆ ಕಡೆಗಳಲ್ಲಿ ನಮ್ಮ ಜಿಲ್ಲೆಯಲ್ಲಿ ಮೀನು ಶಿಖಾರಿ, ವ್ಯವಸಾಯಗಳ ಸಾಮಗ್ರಿ, ಊರ ಗಾಯನದ ಸಾಹಿತ್ಯ ಕಂಚಿನ ಪಾತ್ರದ ಮತ್ತು ಕುಂಬಾರರ ಪಾತ್ರಗಳು, ನಾನಾ ತರದ ಪುಷ್ಪಗಳು, ವಿವಿಧ ತರದ ಭತ್ತ ವ ಅಕ್ಕಿ, ಇಲ್ಲಿ ಪೈದಾಸಾಗುವ ಗೆಡ್ಡೆಗೆಣಸು ವ ಇತರ ಫಲಗಳು, ಕಾಯಿಪಲ್ಯ ಮುಂತಾದ ಸರ್ವ ಸ್ಥಳೀಯ ಉತ್ಪತ್ತಿಗಳೆಲ್ಲವೂ ಆ ಪ್ರದರ್ಶನಾಲಯದಲ್ಲಿಟ್ಟಿದ್ದರು. ಖಾವಂದರವರು ಇವೆಲ್ಲವನ್ನೂ ಒಂದೊಂದಾಗಿ ನೋಡುತ್ತಾ ಲೇಡಿ ಲೊಲಿಯವರು ಗೊನ್ಸು ಬೆಳ್ಳಿಯ ಲವಂಗದಾನಿ ಈ ಎರಡನ್ನು ತನಗೆ ಬೇಕೆಂಬದಾಗಿ ಇಳ್ಳಿಸಿರುವರು.

ವಸ್ತುಪ್ರದರ್ಶನವು ಮುಗಿದ ಮೇಲೆ ಆ ಸಮಯಕ್ಕೆ ಅಲ್ಲಿ [illegible]
ಪ್ರ್ಯಮೆರಿ ಶಾಲೆಗಳ ಬಾಲ ಬಾಲಕಿಯರೆಲ್ಲರಿಗೂ ದಸ್ತುಬು ಕಕ್ಕು [illegible]

ಕೊಟ್ಟು ಅವರವರ ಗೀತಗಳನ್ನು ಕೇಳಿ ಸಂತೋಷಚಿತ್ತರಾಗಿ ಕೊಲೇಜು ಹೋಲಿಗೆ ಬಂದು ಅಲ್ಲಿ ಕಳೆದ ಇಂಟರ್‌ಸ್ಕೂಲ್ ಜಮ್ನ್ಯಾಸದಲ್ಲಿ ಗೆದ್ದವರಿಗೆಲ್ಲರಿಗೆ ಕಪ್ ಯಾನೆ ಬೆಳ್ಳಿಯ ಪಾತ್ರೆಗಳನ್ನು ಕೊಟ್ಟರು. ಈ ಸಂದರ್ಭದಲ್ಲಿ ಕೊಟ್ಟ ಭಾಷಣವನ್ನು ಬೇರೊಂದು ಕಡೆಯಲ್ಲಿ ಪ್ರಕಟಿಸಿರುವೆವು.

ಗವರ್ನಮೆಂಟು ಕೊಲೇಜಿನಲ್ಲಿ ಇದೆಲ್ಲಾ ಮುಗಿದ ಮೇಲೆ, ಸೈಂಟ್ ಎನ್ಸ್ ಹ್ಯಾಸ್ಕೂಲಿಗೆ ಹೋಗಿ ಅಲ್ಲಿಯ ಬಾಲಕಿಯರ ನರ್ತನಗೀತಗಳನ್ನು ಕೇಳಿ ಹುಡುಗಿಯರ ಹೊಲಿಗೆ ಚಿತ್ರ ಪಠ ಮೊದಲಾದವುಗಳನ್ನು ನೋಡಿ ಅಲ್ಲಿಯ ಮದರ್ ಮಾತೃಯೋಗಿನಿಗೆ ಭೇಟಿಕೊಟ್ಟು ಹಜೂರುಕಚೇರಿ ಸಂದರ್ಶನೆಗೆ ಹೋದರು. ಮ|ರಾ|ರಾ| ಪಿ. ನಾರಾಯಣ ಮೇನನ್, ಹೆಡ್‌ಕ್ವಾರ್ಟರ್ಸ್ ಡಿಪ್ಯುಟಿ ಕಲೆಕ್ಟರವರು ಖಾವಂದರವರು ಸವಾರಿಯನ್ನು ಸ್ವೀಕರಿಸಿದರು. ಕಚೇರಿಯ ಇಂಗ್ಲೀಷು ಬ್ರೇಂಚ, ಕಲೆಕ್ಟರವರ ಆಫೀಸು ಕೋಣೆ, ಟ್ರೆಜರಿ ಡಿಪ್ಯುಟಿ ಕಲೆಕ್ಟರವರ ಆಫೀಸು ರಿಕಾರ್ಡು ಕೋಣೆ ಇವುಗಳನ್ನು ಅವಲೋಕಿಸಿ ಗವರ್ನರವರು ಕಲೆಕ್ಟರವರ ಬಂಗ್ಲೆಗೆ ತೆರಳಿದರು.

ಬೆಳಗ್ಗೆ 11 ಘಂಟೆಯಿಂದ ಮಧ್ಯಾಹ್ನ 1 ಘಂಟೆವರೆಗೂ, ಮ| ರಾ| ರಾ| ರವಿವರ್ಮ ನರಸಿಂಹ ರಾಜ ವಿಟ್ಲದ ರಾಜರವರು, ರಾ| ವಸಂತರಾಯರು, ರಾ| ನಾರಾಯಣ ಮೇನನ್, ರಾ| ನಂಜಡಯ್ಯನವರು, ರಾ| ರಾವ್ ಸಾಹೇಬ ಸುಬ್ಬರಾಯರವರು, ರಾ| ರಗತಿ ರಾಮರಾಯರು, ರಾ| ಹಾರ್ಡಿಂಗ್ ಸಾಹೇಬರವರು, ಮಿಶನ ಹರ್ಮಲಿಂಕ್ ದೊರೆಗಳವರು, ಫೊರೆಸ್ಟ್ ಆಫೀಸರ ಬಾಲೊಪೂಲ ಇವರೆಲ್ಲರಿಗೂ ಏಕಾಂತ ಭೇಟಿಕೊಟ್ಟರು.

ಮಧ್ಯಾಹ್ನ 3 30—4 45ರ ವರೆಗೆ ಸ್ಥಳೀಯ ಯುರೋಪೀಯ ಹಿಂದು, ಕ್ರೈಸ್ತ ಸ್ತ್ರೀಯರಿಗೆಲ್ಲಾ ಭೇಟಿ ಇತ್ತು. ಇಲ್ಲಿ ನೆರೆದ ಸ್ತ್ರೀಯರೆಲ್ಲರ ಒಟ್ಟಿಗೆ, ದಂಪತಿ ಮಹಾಮಾತೆಗಳ ಸಹಾ ಫೊಟೊಗ್ರಾಫ್ ಯಾ ಛಾಯಾಚಿತ್ರಗಳನ್ನು ತೆಗೆದಿರುವರು.

ಸಾಯಂಕಾಲ ರಾವ ಸಾಹೇಬ ಸುಬ್ಬರಾಯರ ಗಾರ್ಡನ್‌ಪಾರ್ಟಿ ಇತ್ತು. ಇಲ್ಲಿ ಗವರ್ನರವರು ಕ್ಲಪ್ತ ಸಮಯಕ್ಕೆ ಬಾರದು ತಪ್ಪಿಲ್ಲವಾದ್ದರಿಂದಲೂ ಮಳೆಬಿದ್ದದರಿಂದಲೂ, ಕೆಂಬಳ ಯಾ ಕೋಣಗಳ ಓಟವು ಅತೀ ಬೇಗದಲ್ಲಿಯೇ ಮುಗಿಯಿತು. ಮಡಿಕೇರಿರಸ್ತೆಯ ಕಂಕನಾಡಿ ಗದ್ದೆಗಳಲ್ಲಿ, ಈ ಓಟವನ್ನು ನೋಡಿ ಆದ ಮೇಲೆ ಮಡಿಕೇರಿರಸ್ತೆಯ ಬಂಗ್ಲೆಗೆ ದೊರೆಗಳವರು ದಯಪಾಲಿಸಿದರು. ಈ ಬಂಗ್ಲೆಯನ್ನು ಸಹಾ ಗೂಡುದೀಪಗಳಿಂದಲೂ ಲಾಂದ್ರ ಮುಂತಾದ ದೀಪಸ್ತೋಮಗಳಿಂದಲೂ ಬಹಳ ಯೋಗ್ಯ ಮತ್ತು ನವೀನ ರೀತಿಯಲ್ಲಿ ಶೃಂಗರಿಸಿದ್ದರು. ಮನೆಯಾದರೋ ಇಲ್ಲಿಯೂ ಕಬ್ಬುಗಳಿಂದ ನಿಬಿಡವಾದ ದಳಿ, ಇದರ ಮೇಲೆ ಚಿಕ್ಕ ದೀಪಗಳು ಇದ್ದು, ಒಲಪಾರ್ಶ್ವದಲ್ಲಿ ಗಣಪತಿ ಮಂದಿರದಿಂದಲೂ ಆನಂದನಂದಿರದಂತೆ ಎತ್ತರದಿಂದ ಕಂಗೊಳಿಸುತ್ತಿತ್ತು. ಸತ್ಕಾರಗಳ ಏರ್ಪಾಟವು ಏನೂ ಗಲಿಬಿಲಿ ಇಲ್ಲದೆ ಒಳ್ಳೇ ರೀತಿಯಲ್ಲಿ ಹವಣಿಸಿತ್ತು. ಬಂದಂಥಾ ಅತಿಥಿಗಳಿಗೆ ಹಸಿವು ಬಾಯಾರಿಕೆಗಳು ತಿಳಿಯದೆ ಬಾಲಕಿಯರ ವಿವಿಧ ಗಾಯನಾದಿಗಳನ್ನು ಕಪಟೆ ಮುಂತಾದವುಗಳ ಆಟವನ್ನೂ ಮೊದಲಾದ ಆನಂದಗಳನ್ನು ಭೋಗಿಸುವರೆ ಫಲಾಹಾರದ ಏಲೆವಾರಿಗಳು ಇದ್ದವು. ಖಾವಂದರವರು ಇವನ್ನೆಲ್ಲಾ ನೋಡಿ ಬಂಗ್ಲೆಯಿಂದ ಹೊರಡುತ್ತಾ ಭವನದ ಅಂಗಳದಲ್ಲಿ ಆಗುವ ದಶಾವತಾರದ ಆಟವನ್ನೂ, ಬೊಂಬೆ ಆಟವನ್ನೂ ಶೃಂಗರಿಸಿಟ್ಟ ದೇವಸ್ಥಾನಗಳಲ್ಲಿರುವ ಸಪ್ತ ರಥವನ್ನೂ ನೋಡಿ ಆನಂದಭರಿತರಾದರು. ಈ ಸಂದರ್ಭದಲ್ಲಿ ದೊರೆಗಳವರು ಮ| ರಾ| ರಾ| ಬೆಳ್ಳಿಪಾಡಿ ನರಸಿಂಗಯ್ಯಗಳವರಿಗೆ ಭೇಟಿ ಕೊಟ್ಟು, ರೈತರ ಸುಖದುಃಖಗಳ ವಿಷಯ ಮಾತಾಡಿದರು. ಇಲ್ಲಿಗೆ ಗವರ್ನರವರ ಮಂಗಳೂರು ಸತ್ಕಾರಗಳೆಲ್ಲವು ಸಂಪೂರ್ಣವಾದವು.

[ಮೂಡಬಿದ್ರೆ ವ ಕಾರ್ಕಳದ ವಿವರವನ್ನು ಬೇರೊಂದು ಕಡೆಯಲ್ಲಿ ಮುದ್ರಿಸಿರುವೆವು]

———o———

ಗವರ್ನರ ದೊರೆಗಳಿಗೆ ಮಂಗಳೂರಲ್ಲಿ ಅರ್ಪಿಸಿದ ಭಿನ್ನವತ್ತಳೆಗಳೂ ಅವಕ್ಕೆ ಅವರು ದಯಪಾಲಿಸಿದ ಅಪ್ಪಣೆಗಳ ಗೋಶ್ವಾರೆ.

ಮಂಗಳೂರು ಮುನಿಸಿಪಾಲಿಟಿಯವರ ಭಿನ್ನವತ್ತಳೆ.

———o———

ಸಂಭಾವಿತ ಮದ್ರಾಸ್ ಗವರ್ನರ ಸರ್. ಆರ್ಥರ್ ಲೋಲೆ ಜಿ. ಸಿ. ಎ. ಇ., ಕೆ. ಸಿ. ಎಸ್. ಐ. ಇವರ ಸನ್ನಿಧಾನಗಳಿಗೆ—

ಮಹಾಸ್ವಾಮಿ,

ನಮ್ಮ ಪ್ರೀತಿಪಾತ್ರರಾದ ಚಕ್ರವರ್ತಿಗಳ ಪ್ರತಿನಿಧಿಗಳಾದ ಖಾವಂದರನ್ನು ನಮ್ಮ ಪಟ್ಟಣಕ್ಕೆ ಅಗಾಧಭಕ್ತಿ ಪುರಸ್ಸರವಾಗಿ ಆಮಂತ್ರಿಸುವೆವು.

ಮಂಗಳೂರು ವರೆಗೆ ರೈಲುಮಾರ್ಗವನ್ನು ಮುಂದರಿಸಿದ್ದಕ್ಕೆ ಸರಕಾರದ ಉಪಕಾರವನ್ನು ಕೃತಜ್ಞತೆಯಿಂದ ಸ್ಮರಿಸುವದು ನಮ್ಮ ಕರ್ತವ್ಯವು. ನಾವು ಅದನ್ನು ವರವೆಂದೆಣಿಸುವೆವು. ಈ ಮೂಲಕ ನಮ್ಮ ಜಿಲ್ಲೆಗೆ ಇತರ ಜಿಲ್ಲೆಗಳೊಡನೆ ಉಂಟಾದ ಸಂಪರ್ಕದಿಂದ ನಮ್ಮಲ್ಲಿಯ ವ್ಯಾಪಾರ ವೃದ್ಧಿಗೆ ಬಂದು ಜಿಲ್ಲೆಯು ಉನ್ನತಿಗೆ ಬರುವದೆಂದು ನಿರೀಕ್ಷಿಸುತ್ತೇವೆ. ಈ ಮಾರ್ಗವನ್ನು ಮೈಸೂರ ಜಿಲ್ಲೆಯಿಂದ ಅರಸಿಕೆರೆಗೆ ಕೂಡಿಸಿದರೆ ಈ ವರವು ಇಮ್ಮಡಿಸಿ ಜನರ ಐಶ್ವರ್ಯವೂ ನಮ್ಮ ಕೃತಜ್ಞತೆಯೂ ಹೆಚ್ಚುವದು.

ಸರಕಾರದವರು ಉದಾರಭಾವದಿಂದ ದಯಪಾಲಿಸಿದ ಸಾಲ ವ ದಾನಗಳ ಮೂಲಕವೂ ಕಲೆಕ್ಟರ ದೊರೆಗಳವರ ಬುದ್ಧಿ ಸಹಾಯದಿಂದಲೂ ಪ್ಲೇಗು ರೋಗದ ಸಂಗಡ ಹೋರಾಡಲಿಕ್ಕೆ ಶಕ್ತಿ ಹೊಂದಿರೆವು. ಅನಾರೋಗ್ಯಕರವಾದ ಕಟ್ಟೋಣಗಳನ್ನು ನಾಶ ಮಾಡುವದು, ವಾಯುಸಂಚರಣೆಗೆ ಎಡೆಕೊಡದೆ ಇಕ್ಕಟ್ಟಾಗಿರುವ ಗಲ್ಲಿಗಳನ್ನು ಸಪ್ಪು ಮಾಡುವದೇ ಮುಂತಾದ ಹಲವು ತರದ ಕಾರ್ಯಗಳು ಇನ್ನೂ ಮಾಡಲಿಕ್ಕಿವೆ. ಆದರೆ ನಮ್ಮ ಮುನಿಸಿಪಾಲಿಟಿಯು ಬಡವಾಗಿದೆ. ಜನರ ಮೇಲೆ ನಾವು ತೆರಿಗೆಯನ್ನು ಇನ್ನು ಹೆಚ್ಚಿಸುವದು ಅಸಾಧ್ಯ. ನಾವು ಸರಕಾರದ ಸಾಲವನ್ನು ಕಂತು ಪ್ರಕಾರ ಕೊಡಬೇಕಾದ ಪಕ್ಷಕ್ಕೂ ಮುನಿಸಿಪಲ್ ಕಾರ್ಯನಿರ್ವಾಹಕ್ಕ ಕುಂದು ತಾರದೆ ತೆರಲಾರೆವು. ಪ್ಲೇಗುರೋಗದ ಹಾವಳಿಯಿಂದ ಪ್ರಜೆಗಳನ್ನು ರಕ್ಷಿಸುವ ಭಾರವು ಮುನಿಸಿಪಾಲಿಟಿಗಿಂತಲೂ ಹೆಚ್ಚಾಗಿ ಸರಕಾರಕ್ಕೆ ಸೇರಿದೆ ಎಂಬಂತೆ ಉದಾರಭಾವದಿಂದ ನಮಗೆ ಕೊಟ್ಟ ಗ್ರೇಂಟುಗಳಿಗಾಗಿ ಸರಕಾರದ ಉಪಕಾರವನ್ನು ವಿಶೇಷವಾಗಿ ಸ್ಮರಿಸುತ್ತೇವೆ. ಸರಕಾರದಿಂದ ದೊರಕಿದ ಈ ಉತ್ತೇಜನದಿಂದ ಧೈರ್ಯಗೊಂಡು ನಾವು ನಮ್ಮ ಸಾಲವನ್ನು ಮಾಫ್ ಮಾಡಬೇಕೆಂದೂ ಇನ್ನು ಉಚಿತದಾನಗಳಿಂದ ನಮಗೆ ಈ ಭಯಂಕರವಾದ ಪ್ಲೇಗು ವ್ಯಾಧಿಯನ್ನು ಜೈಸಲಿಕ್ಕೆ ಕೈಕೊಡಬೇಕೆಂದೂ ಪ್ರಾರ್ಥಿಸುತ್ತೇವೆ.

ಖಾವಂದರ ಚಿತ್ತಕ್ಕೆ ಎರಡು ಹಂಚಿಕೆಗಳನ್ನು ಅರಿಕೆ ಮಾಡುತ್ತೇವೆ. ಕಶ್ಮಲವೈಯುವ ತೋಬುಗಳೂ, ಕುಡಿಯುವ ನೀರಿನ ಸರಬರಾಯಿಯೂ ಇವೆರಡನ್ನು ಸೆನಿಟೆರಿ ಕಮ್ಮಿಶನರು ಈ ಪಟ್ಟಣದ ಒಂದು ಪಾರ್ಶ್ವಕ್ಕೆ ಶಿಫಾರಸು ಮಾಡಿರುವರು. ಆದರೆ ಇವಕ್ಕೆ ಲಕ್ಷಕಕ್ಕಿಯಲ್ಲಿ ಖರ್ಚು ತಗಲುವದು. ಮೇಲೆ ಹೇಳಿದ ಕಾರಣಗಳಿಂದ ಈ ಕಾರ್ಯಗಳು ಮುನಿಸಿಪಾಲಿಟಿಗೆ ಕೈಲಾಗದು. ಇವು ಅವಶ್ಯವೆಂದು ತೋರಿದರೆ ನಾವು ಸರಕಾರಕ್ಕೆನೇ ಮೊರೆಯಿಡಬೇಕಾಗುವದು.

ಖಾವಂದರ ಕ್ಷಮೆ ಬೇಡಿ ನಾವು ಇನ್ನೊಂದು ಪ್ರಾರ್ಥನೆ ಮಾಡುವೆವು. ಮುನಿಸಿಪಾಲಿಟಿಯ ಎಲ್ಲಾ ಇಲಾಖೆಗಳಿಗೆ ಶಕ್ಯವಷ್ಟು ಸ್ಥಳವು ಈಗಿನ ಖಚೇರಿಯಲ್ಲಿಲ್ಲ. ಹಣದ ತುಸ್ತಿಯಿಂದ ಸ್ಥಳ ಹೆಚ್ಚಿಸುವದು ನಮ್ಮಿಂದ ಸಾಗುವದಿಲ್ಲ. ಆದ್ದರಿಂದ ಸರಕಾರವು ಉದಾರಭಾವದಿಂದ ನಮ್ಮ ಖಚೇರಿ ಪ್ರಕೃತವಿರುವ ಇಡೀ ಕಟ್ಟೋಣವನ್ನೂ (ಈಗ ಕಟ್ಟೋಣದ ಒಂದಂಶದಲ್ಲಿ ಖಚೇರಿಯಿದೆ) ಅದರ ತೋಟಸ್ಥಳವನ್ನೂ ಮುನಿಸಿಪಾಲಿಟಿಗೆ ದಯಪಾಲಿಸಬೇಕೆಂದು ಬಿನ್ನೈಸುತ್ತೇವೆ.

ಖಾವಂಧರ ಪತ್ನಿಯರಿಗೂ ಕುಮಾರಿಯರಿಗೂ ಸ್ವಾಗತವನ್ನೀಯಲಿಕ್ಕೂ ಅವರಿಗೆ ಇತ್ತಲಾಗೆ ಒದಗಿದ ವಿಯೋಗದಲ್ಲಿ ಸಹಸಂತಾಪವನ್ನು ಪ್ರದರ್ಶಿಸಲಿಕ್ಕೂ ಅಪ್ಪಣೆ ಬೇಡುತ್ತೇವೆ.

———

ಡಿಸ್ಟ್ರಿಕ್ಟ ಬೋರ್ಡಿನವರ ಬಿನ್ನಹ ಪತ್ರದ ಸಾರಾಂಶ.

ಮಹಾಸ್ವಾಮಿ,

ನಮಗೆ ದಯಪಾಲಿಸಿದ ಅಜಕಲ್ ಮಂಗಳೂರು ರೈಲ್ವೆಯನ್ನು ಮಲ್ಪೆ ವರೆಗೆ ಮುಂದರಿಸಿದರೆ ಜಿಲ್ಲೆಗೆ ಇನ್ನೂ ಹೆಚ್ಚು ಪ್ರಯೋಜನಕಾರಿಯಾಗುವದು. ಅಲ್ಲಿಯ ಬಂದರು ಶಾಂತವಾಗಿದ್ದು ವರುಷದ ಯಾವ ಕಾಲದಲ್ಲಿಯೂ ಹಡಗಗಳು ಬರಬಹುದಾಗಿವೆ. ಮಲ್ಪೆಯಿಂದ ಮೂರು ಮೈಲುಗಳೊಳಗೆ ಅನೇಕ ಯಾತ್ರಸ್ಥರು ಬರುವ ಶ್ರೀಕೃಷ್ಣ ದೇವಾಲಯವಿರುವ ಉಡುಪಿ ಕ್ಷೇತ್ರವಿರುವದು. ಅರಸಿಕೆರೆ ಮಂಗಳೂರು ರೈಲ್ವೆಗೆ ಈ ರೈಲ್ವೆಯನ್ನು ಜೋಡಿಸಿದರೆ ಸದ್ಯಾ ನಮ್ಮ ಜಿಲ್ಲೆಯ ಕೊರತೆಗಳು ನೀಗುವವು. ಈ ರೈಲ್ವೆಯಿಂದ ಕಾಫಿ ಮುಂತಾದ ವ್ಯಾಪಾರವು ವೃದ್ಧಿಗೊಳ್ಳುವದು.

ವಿದ್ಯಾಭ್ಯಾಸಕ್ಕೂ ಸಾರ್ವಜನಿಕ ಕಟ್ಟೋಣಗಳಿಗೂ ಸರಕಾರದವರು ಕೊಟ್ಟ

ಸ್ತ್ರೀಯರುಗಳಿಗೂ ಕೃತಜ್ಞರಾಗಿದ್ದೇವೆ. ಉತ್ಕೃಷ್ಟ ಸುಂದರವನ್ನು [illegible] ಕೊಟ್ಟ ವರವನ್ನು ಸ್ಮರಿಸುವೆವು.

ಖಾವಂದರವರ ಉತ್ತರ.

ನಿಮಗೆ ಕೊಟ್ಟ ಸ್ವಾಗತಕ್ಕಾಗಿ ಡಿಸ್ಟ್ರಿಕ್ಟ್ ಬೋರ್ಡ ಮೆಂಬರರಿಗೂ ಮುನಿಸಿಪಾಲಿಟಿಗೂ ಕೃತಜ್ಞನಾಗಿರುವೆವು. ನಾವು ನೆನಸಿದ ಸಮಯದಲ್ಲಿ ಬರಲಿಕ್ಕಾಗದೆ ನಿಮಗೆ ಉಂಟಾದ ತೊಂದರೆಗಳಿಗಾಗಿ ವಿಷಾದಿಸುತ್ತೇನೆ. ನೀವು ಪ್ರಕಟಿಸಿದ ಭಕ್ತಿಭಾವವು ಚಕ್ರವರ್ತಿಯ ಪ್ರತಿನಿಧಿಯಾದ ನನಗೆ ಆನಂದಕರವಾಗಿದೆ. ಮಂಗಳೂರಿಗೆ ವಿಸ್ತರಿಸಿದ ರೈಲ್ವೆಯಿಂದ ಈ ಜಿಲ್ಲೆಗೆ ಸಂಪತ್ತು, ಸೌಕರ್ಯಗಳು ಉಂಟಾಗಲೆಂದು ಇಚ್ಛಿಸುತ್ತೇನೆ. ನೀವು ಅಡ್ರೆಸುಗಳಲ್ಲಿ ಪ್ರಸ್ತಾಪಿಸಿದ ಹಲವು ವಿಷಯಗಳು ಡೆಪ್ಯುಟೇಶನಿಗೆ ತಕ್ಕಂಥವು. ಯಾಕೆಂದರೆ ಆ ಸಂದರ್ಭದಲ್ಲಿ ಈ ವಿಷಯಗಳನ್ನು ಸಾಂಗವಾಗಿ ಚರ್ಚಿಸಲಾಗುತ್ತದೆ. ಅರಸಿಕೆರೆ ಮಂಗಳೂರು ರೈಲ್ವೆಗೆ ತಗಲುವ ಖರ್ಚಿಗೆ ತಕ್ಕ ಪ್ರತಿಫಲವು ದೊರಕುವ ಸಂಭವವಿಲ್ಲದ್ದರಿಂದಲೂ, ಹಣದ ಅಡಚಣೆಯಿಂದಲೂ ಅದರಿಂದ ಪ್ರಯೋಜನ ಹೊಂದತಕ್ಕವರ ಸಹಾಯವು ದೊರೆಯದ್ದರಿಂದಲೂ ಅದನ್ನು ಕಟ್ಟಿಸುವದು ಇಂಡ್ಯಾ ಸರಕಾರಕ್ಕೆ ಉಚಿತ ಕಾಣಲಿಕ್ಕಿಲ್ಲ. ಖಾಸಗಿಯಿಂದ ಕಟ್ಟಿಸುವ ಇಚ್ಛೆಯಿದ್ದರೆ ಆ ವಿಷಯವನ್ನು ಸಂತೋಷದಿಂದ ಆಲೋಚನೆಗೆ ತರುವೆನು.

ಪ್ಲೇಗುರೋಗವು ಹಲವು ವರುಷಗಳಿಂದ ಈ ಪಟ್ಟಣವನ್ನು ಬಾಧಿಸುವದನ್ನು ಕಂಡು ವಿಷಾದಿಸುತ್ತೇನೆ. ಈ ರೋಗದ ಸಂಗಡ ಕಾದಾಡಲಿಕ್ಕೆ ಮುನಿಸಿಪಲ್ ಚೇರ್ಮನರಿಗೂ ಇತರ ಉದ್ಯೋಗಸ್ಥರಿಗೂ ತನುಮನಧನಗಳನ್ನು ವೆಚ್ಚ ಮಾಡಬೇಕಾಯಿತು. ಸರಕಾರವು ಮುಂಚಿಗಿಂತ ಹೆಚ್ಚಿನ ದ್ರವ್ಯಸಹಾಯವನ್ನು ನೀಡಬೇಕೆಂದು ನೀವು ಕೇಳುವಿರಿ. ನನಗೆ ಆ ತರದ ಮನಸ್ಸಿದ್ದರೂ ಮುನಿಸಿಪಾಲಿಟಿಯವರು ಎಲ್ಲಾ ತರದ ತೆರಿಗೆಗಳನ್ನು ಹೊರಿಸಿನೋಡುವ ಮುಂಚೆಯೇ ನಾನು ಹಾಗೆ ಸಹಾಯ ನೀಡುವದು ನ್ಯಾಯವಲ್ಲ. ಒಂದು ಮುನಿಸಿಪಾಲಿಟಿಯು ಸ್ಥಳೀಯ ವಿಷಯಗಳಲ್ಲಿ ವೆಚ್ಚ ಮಾಡಿ ಬಡವಾದಾಗ ಸರಕಾರದವರು ಸಾಮ್ರಾಜ್ಯದ ಖಜಾನೆಯಿಂದ ಅಂದರೆ ಸರ್ವ ಪ್ರಜೆಗಳ ದುಡ್ಡಿನಿಂದ ಆ ಪ್ರತ್ಯೇಕ ಸಂಸ್ಥೆಗೆ ಎಷ್ಟರ ಮಟ್ಟಿಗೆ ಸಹಾಯ ಮಾಡಬೇಕೆಂಬದು ಕಷ್ಟ ವಿಷಯವಾಗಿದೆ. ಪ್ಲೇಗು ನಿವಾರಣಾರ್ಥವಾಗಿ ಮಾಡಿದ ವೆಚ್ಚವನ್ನು ಸಾಮ್ರಾಜ್ಯದ ಖಜಾನೆಯಿಂದ ಕೊಡಕೂಡದೆಂದು ಇಂಡ್ಯಾ ಸರಕಾರದವರ ನಿಯಮವದೆ. ಪಟ್ಟಣದ ಆರೋಗ್ಯ, ಕಶ್ಮಲವಿಸರ್ಜನೆ, ಜಲಾಶಯಗಳನ್ನು ಕುರಿತು ನೀವು ಏರ್ಪಾಡು ಮಾಡಲಿದ್ದೀರಿ. ಇವುಗಳಲ್ಲಿ ಮುಖ್ಯವಾದ ನಿರ್ಮಲ ಜಲಾಶಯವನ್ನು ಕದ್ರಿಯಿಂದ ಪಟ್ಟಣಕ್ಕೆ ವೈಯುವ ಏರ್ಪಾಡನ್ನು ಕುರಿತು ಸೆನಿಟರಿ ಇಲಾಖೆಯವರು ರಿಪೋರ್ಟು ಮಾಡಿರುವರು. ಇದು ಹಸ್ತಗತವಾದರೆ ಸರಕಾರದಿಂದ ಇದರ ಖರ್ಚಿಗೂ ಕಶ್ಮಲವಿಸರ್ಜನೆಯ ಖರ್ಚಿಗೂ ಸಹಾಯ ದೊರೆಯುವದು. ಇಕ್ಕಟ್ಟಾಗಿದ್ದ ಗಲ್ಲಿಗಳನ್ನು ವಾಯು ಸಂಚಾರಕ್ಕೆ ಸಜ್ಜು ಮಾಡುವ ವಿಷಯವನ್ನು ಡೆಪ್ಯುಟೇಶನ ಸಮಯದಲ್ಲಿ ಚರ್ಚಿಸುವೆನು. ಮುನಿಸಿಪಲ್ ಕಚೇರಿಯ ಕಟ್ಟೋಣವನ್ನು ಸ್ವತಹಾ ಪರೀಕ್ಷಿಸಿದನಂತರ ಆ ಕಟ್ಟೋಣವನ್ನು ವಿಶೇಷವಾಗಿ ನಿಮ್ಮ ವಶ ಕೊಡಬಹುದೋ ಎಂದು ನಿಶ್ಚಯಿಸುವೆನು.

ಈ ಸುಂದರ ಪಟ್ಟಣದಲ್ಲಿ ಉಳಿಯುವದು ನಮಗೆ ಆನಂದಕರವಾಗಿದೆ. ಈ ಆನಂದವು ನಿಮ್ಮಗಳ ಅಕೃತ್ರಿಮ ಸ್ವಾಗತದಿಂದ ಇಮ್ಮಡಿಸಿತು.

———o———

ಫಾದರ್ ಮುಲ್ಲರವರಿಗೆ ಕೈಸರಿ ಹಿಂದ್ ಮೆಡಲ್ ಕೊಡುವಾಗ್ಯೆ ಜಪ್ಪು ಚಪ್ಪರದಲ್ಲಿ ಮಾಡಿದ ಭಾಷಣ.

ಕೈಸರಿ ಹಿಂದ್ ಪದಕವನ್ನು ಕೊಡುವದರ ಉದ್ದಿಶ್ಯವು ಹಿಂದುಸ್ಥಾನಕ್ಕೂ ಅಲ್ಲಿಯ ಜನರಿಗೂ ಯಾರೊಬ್ಬನು ಮಾಡಿದ ಅಸಾಧಾರಣ ಉಪಕಾರವನ್ನು ಪ್ರಕಟಗೊಳಿಸುವದೇ. ನೀವು ಮಾಡಿದ್ದು ಅಸಾಧಾರಣ ಉಪಕಾರವೆಂದರೆ ಸಾಲದು. ಈ ಜಿಲ್ಲೆಯಲ್ಲಿ ನಿಮ್ಮ ಮತ (ರೋಮನ್ ಕಥೋಲಿಕ)ದ ಗುರುಗಳು ಸದಾ ನಿತ್ಯವೂ ತಮ್ಮ ಸ್ವಾರ್ಥತ್ಯಾಗ, ಪರೋಪಕಾರ ಪರಾಯಣತೆ, ಆತ್ಮನಿವೇದನಗಳಿಂದ ಕ್ರಿಸ್ತನ ಧರ್ಮಬೋಧೆಯನ್ನು ನಿದರ್ಶಿಸಿದ್ದಾರೆ. ಸಭಿಕರೇ ಫಾದರ್ ಮುಲ್ಲರವರಿಗಿಂತಲೂ ಚನ್ನಾಗಿ ಈ ಧರ್ಮವನ್ನು ಯಾರೂ ಕಾರ್ಯತಃ ಪ್ರಕಟಿಸಲಿಲ್ಲ. ಅಜ್ಞಾನ, ದಾರಿದ್ರ್ಯ, ಪಾಪ ಇವನ್ನು ಹಿಂದೆಟ್ಟುವದು, ಪ್ಲೇಗ್, ಕುಷ್ಠರೋಗ, ಮುಂತಾದ ಬೇನೆಗಳ ಸಂಗಡ ಹೋರಾಡುವದು ಇವೇ ಇವರ ಜೀವನದ ಮುಖೋದ್ದೇಶಗಳಾಗಿದ್ದವು. ಇವರು ಜರಾಗ್ರಸ್ತರಾಗಿದ್ದರೂ ಇವರ ನಿಸ್ಸೀಮ ಆಸಕ್ತಿಯೂ ದರ್ಮನಿಷ್ಠೆಯೂ ಪುಜಾನು

[illegible] ತಂದಿದ್ದೇನೆಂದರೆ ಈ [illegible] ಇವರ ಕಾರ್ಯವು ಸಿದ್ಧಿಯಾಗಲೆಂದು ನಾವು ದೇವರನ್ನು ಪ್ರಾರ್ಥಿಸುತ್ತೇವೆ.

ಈ ಪದಕವನ್ನು ನಿಮ್ಮ ಎದೆಗೆ ಸಿಕ್ಕಿಸುವಾಗ ನಾನು ನಿಮ್ಮನ್ನು ಕೇಳಿಕೊಳ್ಳುವದೇನೆಂದರೆ, ನೀವು ಅನೇಕ ಕಾಲ ಈ ಪದಕವನ್ನು ಧರಿಸಬೇಕು. ಅದು ನಿಮ್ಮನ್ನೂ ನಿಮ್ಮ ಸಹಚಾರಿಗಳನ್ನೂ ತಮ್ಮ ಧರ್ಮಕಾರ್ಯದಲ್ಲಿ ಉತ್ಸಾಹಿಸಬೇಕು.

ರಾವ್ ಸಾಹೇಬ ಎಸ್. ಸುಬ್ರಾಯರಿಗೆ ಸನ್ನದು ಕೊಡುವಾಗ ಮಾಡಿದ ಭಾಷಣ.

ಈ ಸನ್ನದನ್ನು ರಾ| ಸುಬ್ರಾಯರಿಗೆ ಕೊಡುವದು ನನಗೆ ಬಹು ಸಂತೋಷಕರವಾಗಿದೆ. ಅವರು ಈ ನಗರದ ಸೌಖ್ಯದಲ್ಲಿ ತೋರಿಸಿದ ಶ್ರದ್ಧೆಯು ನಮ್ಮಲ್ಲಿ ಅವರಿಗಾಗಿ ವಿಸ್ಮಯವನ್ನೂ ಗೌರವವನ್ನೂ ಹುಟ್ಟಿಸುವಂಥಾದ್ದು. ತಮ್ಮ ಸ್ವಾರ್ಥವನ್ನು ತ್ಯಾಗಮಾಡಿ ಅವರು ಮುನಿಸಿಪಾಲಿಟಿಯ ಕಾರ್ಯದಲ್ಲಿ ನಿರತರಾಗಿ ಆ ಕಾರ್ಯವನ್ನು ಚೆನ್ನಾಗಿ ಕೈಗೂಡಿಸಿರುವರು. ಪ್ಲೇಗು ಸಂಬಂಧ ಆ ಕರ್ತವ್ಯವು ಕಷ್ಟತರವಾಗಿತ್ತು. ಈ ವಿಷಯ ಮಾಡುವ ಏರ್ಪಾಡುಗಳಿಂದ ಜನರಲ್ಲಿ ವೈಮನಸ್ಸು ಉಂಟಾಗುವದರಿಂದ ಈ ಕೆಲಸವು ಯೋಗ್ಯ ಗೃಹಸ್ಥರೇ ಕೈಕೊಳ್ಳಲಾಗುವದು. ರಾ| ಸುಬ್ರಾಯರವರು ತಮ್ಮ ಪ್ರಾಣರಕ್ಷಣೆಯನ್ನು ಪ್ರಜಾ ರಕ್ಷಣೆಯಲ್ಲಿ ಮರೆತು ಸರ್ಕಾರಕ್ಕೂ ಜನರಿಗೂ ತಾವು ಮಾಡತಕ್ಕ ಕರ್ತವ್ಯವನ್ನು ಧೈರ್ಯದಿಂದಲೂ, ಸ್ಥೈರ್ಯದಿಂದಲೂ ಗೈದಿದ್ದಾರೆ. ಇವರ ಯೋಗ್ಯತೆಗೆ ತಕ್ಕಂತೆ ಇವರಿಗೆ ದೊರಕಿದ ಮರ್ಯಾದೆಗೆ ನಾನು ಹರ್ಷಿಸಿ ಇವರು ಚಿರಂಜೀವಿಯಾಗಲೆಂದು ಇಚ್ಛಿಸುತ್ತೇನೆ.

ಗವರ್ನಮೆಂಟ್ ಕಾಲೇಜಿನ ಹುಡುಗರು ಅರ್ಪಿಸಿದ ಬಿನ್ನಹ ಪತ್ರ.

ಖಾವಂದರವರು ಈ ಕಾಲೇಜಿಗೆ ಚಿತ್ತೈಸಿದರಿಂದ ನಮಗೆ ಉಂಟಾದ ಗೌರವಕ್ಕೆ ನಾವು ತಂಬಾ ಕೃತಜ್ಞರಾಗಿದ್ದೇವೆ. ನಮ್ಮ ಪಟ್ಟಣಕ್ಕೆ ತಲ್ಪಿದ ರೈಲ್ವೆಯು ಖಾವಂದರ ಆಡಳಿತೆಯ ಸ್ಮಾರಕ ಚಿನ್ಹೆಯಾಗಿದೆ. ನಮಗೆ ಒಂದು ಹೊಸ್ಟೆಲು ಯಾನೆ ವಿದ್ಯಾರ್ಥಿಗೃಹವಿಲ್ಲದಿರುವದು ಒಂದು ಕೊರತೆಯಾಗಿದೆ. ಹೊಸ್ಟೆಲ ಕಟ್ಟೋಣಕ್ಕಾಗಿ ನಮ್ಮ ಮಾಜಿ ಪ್ರಿನ್ಸಿಪಾಲ (ಅಧ್ಯಕ್ಷ)ರ ಪ್ರಯತ್ನಗಳಿಂದ ೫೦೦೦ ರೂಪಾಯಿ ಕೂಡಿದೆ, ಇನ್ನು ೩೦೦೦ ರೂಪಾಯಿ ಬರಲಿಕ್ಕಿದೆ. ಆದರೆ ಈ ಮೊಬಲಗು ಸಾಲ್ದದ್ದರಿಂದ ಸರ್ಕಾರದವರು ನಮಗೆ ದ್ರವ್ಯಸಹಾಯ ನೀಡದಿದ್ದರೆ ನಮ್ಮ ಕೋರಿಕೆಯು ನೆರವೇರುವ ಕಾಲವು ಎಷ್ಟು ದೂರ ಹೋಗುವದೋ ತಿಳಿಯದು.

ಈ ಆಧಿಪತ್ಯದ ಇತರ ಸೆಕೆಂಡ್ ಗ್ರೇಡ್ ಕಾಲೇಜುಗಳನ್ನು ತೆಗದು ಹಾಕಿದರೂ ನಮ್ಮ ಕಾಲೇಜನ್ನು ಇರಗೊಡಿಸಿದ್ದಕ್ಕೆ ನಾವು ಸರ್ಕಾರಕ್ಕೆ ಕೃತಜ್ಞರಾಗಿದ್ದೇವೆ.

ಈ ಕಾಲೇಜಿಗೆ ಮಿಡ್ಲ್ ಸ್ಕೂಲ್ ಮತ್ತು ಪ್ರೈಮರಿ ಡಿಪಾರ್ಟಮೆಂಟುಗಳು ಇಲ್ಲದಿದ್ದರೂ ಕಾಸರಗೋಡು, ಪುತ್ತೂರು ಮಿಡ್ಲ್ ಶಾಲೆಗಳನ್ನು ಇದರ ಮೇಲ್ವಿಚಾರಣೆಯಲ್ಲಿಟ್ಟದ್ದರಿಂದಲೂ, ಗಣಪತಿ ಮಿಡ್ಲ್ ಶಾಲೆಯನ್ನು ಇದಕ್ಕೆ ಸೇರಿಸುವ ಏರ್ಪಾಡು ನಡಿಯುವದರಿಂದಲೂ ನಮ್ಮ ಕಾಲೇಜಿಗೆ ಎಲ್ಲಾ ದರ್ಜೆಗಳು ಸಿಕ್ಕಿದಂತಾಗಿ ಮೇಲಿನ ದರ್ಜೆಗಳಿಗೆ ವಿದ್ಯಾರ್ಥಿಗಳು ತಪ್ಪದೆ ಬರುವರು. ಕಳೆದ ವರ್ಷ ಎಫ್. ಎ ಪರೀಕ್ಷೆಯಲ್ಲಿ ನಮ್ಮ ವಿದ್ಯಾರ್ಥಿಗಳು ಮದ್ರಾಸ ಆಧಿಪತ್ಯದ ಹುಡುಗರಲ್ಲಿ ಒಂದನೇ ಎರಡನೇ ಸ್ಥಳಗಳನ್ನು ಹೊಂದಿದರೆಂದು ಖಾವಂದರಿಗೆ ಅರಿಕೆ ಮಾಡಲು ಸಂತೋಷಪಡುತ್ತೇವೆ. ಕಳೆದಸಾರಿಯ ಇಂಟರ್ ಸ್ಕೂಲ ಜಮ್ಖಾನಾ (ವ್ಯಾಯಾಮದಲ್ಲಿ ಶಾಲೆಗಳೊಳಗಿನ ಪೋಟಾಪೋಟಿ)ದಲ್ಲಿ ನಾವು ಕುಸ್ತಿ ಆಟದಲ್ಲಿಯೂ ಇತರ ಅಂಗಸಾಧಕದಲ್ಲಿಯೂ ದೊಡ್ಡ ಪಂಚಪಾತ್ರೆ (ಬೆಳ್ಳಿನ್ನು)ಗಳನ್ನು ಪಡೆದಿರುತ್ತೇವೆ. ಖಾವಂದರ ಕುಟುಂಬಕ್ಕೆ ದೇವರು ಉತ್ತರೋತ್ತರ ಅಭಿವೃದ್ಧಿಯನ್ನು ದಯಪಾಲಿಸಲೆಂದು ಪ್ರಾರ್ಥಿಸುತ್ತೇವೆ.

ಖಾವಂದರ ಉತ್ತರ.

ಈ ಆಧಿಪತ್ಯದ ಶಾಲೆಗಳನ್ನು ಸಂದರ್ಶಿಸುವದು ನನಗೆ ಆನಂದಕರವಾಗಿದೆ. ಈ ಆನಂದವು ನೀವು ಈ ದಿನ ಆಡಿದ ಮಧುರ ವಚನಗಳಿಂದ [illegible] ಸ್ವಲ್ಪಕಾಲದಲ್ಲಿಯೇ ಈ ಸಾಮ್ರಾಜ್ಯ [illegible] [illegible]

[illegible] ಪರಸ್ಪರ ಸಹಕಾರಿಗಳಾಗ ಬೇಕು. ಆದ್ದರಿಂದ ನಮ್ಮೊಳಗೆ ಒಡಂಬಡಿಕೆ ಇರಬೇಕು. ನಮ್ಮ ಉದ್ದಿಶ್ಯವೇನು? ಅದನ್ನು ಸಾಧಿಸುವ ಬಗೆ ಹೇಗೆ? ಎಂಬದನ್ನು ತಿಳಿಯಬೇಕು. ನನ್ನ ಇಂದಿನ ಭೇಟಿಯಿಂದ ಇದೆಲ್ಲಾ ಕೈಗೂಡ ಶಕ್ಯವಲ್ಲದಿದ್ದರೂ ನಾನು ತೆರಳಿದ ನಂತರ ನೀವು ನನ್ನ ಕುರಿತು ಹೀಗೆಂದು ತಿಳಿಯಬೇಕೆಂದಿದ್ದೇನೆ.—ನಾನು ನಿಮ್ಮಂತೆ ಹುಡುಗನಾಗಿದ್ದೆನು, ನಿಮ್ಮ ತೊಂದರೆಗಳು, ಶ್ರಮ, ಆಶೆ, ಕೋರಿಕೆಗಳನ್ನೂ ನಾನು ತಿಳಿದವನು; ನಿಮ್ಮ ಶಿಕ್ಷಣ, ವಿದ್ಯೆ, ಶಾಲೆಯಲ್ಲಿ ನಿಮ್ಮ ಜೀವನವನ್ನು ಉತ್ಕೃಷ್ಟ ರೀತಿಗೆ ತಂದು ನಿಮ್ಮನ್ನು ನಮ್ಮ ಸಾಮ್ರಾಜ್ಯದ ಯೋಗ್ಯ ನಿವಾಸಿಗಳೆನಿಸ ಬೇಕೆಂದು ಕಾಂಕ್ಷೆಯುಳ್ಳವನಾಗಿದ್ದೇನೆ. ನಿಮ್ಮ ಶಿಕ್ಷಣವು ಮುಗಿದು ಪ್ರಪಂಚವನ್ನು ಸೇರುವಾಗ ಹಿಂದುಸ್ಥಾನದ ಗತಿಯನ್ನು ನಿಶ್ಚಯಿಸುವದರಲ್ಲಿ ನೀವು ಭಾಗಿಗಳೆಂದು ನಿಮ್ಮನ್ನು ಒಳಕೊಳ್ಳುವೆನು.

ಈ ಜೀವನಕಲಹದಲ್ಲಿ ನೀವು ಉದಾಸೀನರಾದ ಪ್ರೇಕ್ಷಕರಾಗಿರಬಹುದೆಂಬ ತಪ್ಪುಗ್ರಹಿಕೆಯನ್ನು ಬಿಟ್ಟುಬಿಡಿ. ನೀವು ಈ ಕದನಕ್ಕೆ ಅನುಗೊಳ್ಳಬೇಕು. ನೀವು ಅದರಲ್ಲಿ ಜಯಹೊಂದುವಿರೋ ನಿಮ್ಮ ಮಾತೃಭೂಮಿಗೆ ಯೋಗ್ಯ ಪುತ್ರರೆನಿಸುವಿರೋ, ಎಂಬ ವಿಷಯವು ನೀವು ಈ ಕೊಲೇಜಿನಲ್ಲಿ ನಿಮ್ಮ ಸಮಯವನ್ನು ಹ್ಯಾಗೆ ಕಳೆದಿದ್ದೀರಿ ಎಂಬದನ್ನು ಅನುಸರಿಸಿರುವದು. ನಿಮ್ಮ ಪೂರ್ವದ ವಿದ್ಯಾರ್ಥಿಗಳು ತಾವು ಪಡೆದ ಬಹುಮಾನದಿಂದ ನಾವು ಇಲ್ಲಿ ಕೊಲೇಜು ಉಳಿಸಿದ್ದನ್ನು ಸಾರ್ಥಕಗೊಳಿಸಿದರು. ನೀವೂ ಅವರನ್ನು ಅನುಸರಿಸಿದರೆ ನಿಮಗೆ ಸರಕಾರವು ಅಖಂಡ ಸಹಾಯನೀಡುವದು. ನಿಮಗೊಂದು ಹೊಸ್ಟೆಲ್ ಬೇಕೆಂಬುದು ನನಗೂ ಸಮ್ಮತವೇ, ಆದರೆ ಈ ಕಾರ್ಯಸಾಧನವನ್ನು ಸ್ಪಷ್ಟವಾಗಿ ವಿವರಿಸಿದ ವಿನಾ, ನಿಮಗೆ ಏನು ಬೇಕು, ನಿಮ್ಮ ಆಲೋಚನೆ ಕೈಗೂಡಲಿಕ್ಕೆ ಎಷ್ಟು ಖರ್ಚು ತಗಲುವದು, ಇಲ್ಲಿಯ ಜನರು ಎಷ್ಟರ ಮಟ್ಟಿಗೆ ನೆರವಾಗುವರು ಎಂಬ ಅಂಶಗಳನ್ನು ನಿಶ್ಚಯಿಸಿದ ವಿನಾ ನಾನು ನಿಮಗೆ ಎಷ್ಟರ ಮಟ್ಟಿಗೆ ಕೈಕೊಡಬಹುದೆಂದು ಊಹೆಯನ್ನಾದರೂ ಹೇಳಲಾರೆ. ವಿದ್ಯಾರ್ಥಿಗಳು ಆಟಪಾಠಗಳಲ್ಲಿ ಹೊಂದಿದ ಜಯದ ಸಲುವಾಗಿ ಉಪಾಧ್ಯಾಯರನ್ನು ಹರ್ಷಿಸುತ್ತೇನೆ. ಇನ್ನೂ ಮುಂದೆ ಇವರಿಗೆ ಜಯಸಿಕ್ಕಲೆಂದು ಇಚ್ಛಿಸುತ್ತೇನೆ. ನಿಮ್ಮ ಮಧುರವಚನಗಳಿಗೆ ನಿಮ್ಮನ್ನು ಅಭಿವಂದಿಸುತ್ತೇನೆ.

ಸೆಂಟ್ ಆಲೋಯ್ಸಿಸ್ ಕೊಲೇಜಿನ ಉಪಾಧ್ಯಾಯರೂ ವಿದ್ಯಾರ್ಥಿಗಳೂ ಕೊಟ್ಟ ಅಡ್ರೆಸ್

ಮಹಾಸ್ವಾಮಿ,

ಖಾವಂದರನ್ನು ನಮ್ಮೊಳಗೆ ಆಮಂತ್ರಿಸಿ ನಮ್ಮ ಭಕ್ತಿಯನ್ನು ಸಮರ್ಪಿಸುವದನ್ನು ನಾವು ಬಹುಮಾನವೆಂದೆಣಿಸುತ್ತೇವೆ.

ನಮ್ಮ ಚಕ್ರವರ್ತಿಯ ಪ್ರತಿನಿಧಿಯನ್ನು ನಾವು ಅನೇಕ ಸಾರಿ ಈ ಭವನಕ್ಕೆ ಆಮಂತ್ರಿಸಿದ್ದರೂ ನಮ್ಮ ಆಸಕ್ತಿಯೂ ಯಥಾರ್ಥವೂ ಇಷ್ಟು ಅಗಾಧ ಎಂದಿಗೂ ಆಗಿರಲಿಲ್ಲ. ಯಾಕಂದರೆ ನಾವೂ ನಮ್ಮ ವಿದ್ಯಾಭ್ಯಾಸ ಕಾರ್ಯವೂ ಖಾವಂದರಿಗೆ ಪರಕೀಯರಲ್ಲ. ತಮ್ಮಷ್ಟು ವಿದ್ಯಾಸಾಧನೆಯಲ್ಲಿ ಕುತೂಹಲವನ್ನು ಯಾರೂ ತೋರಲಿಲ್ಲವೆನ್ನಬಹುದು. ವಿದ್ಯಾಖಾತೆಯಲ್ಲಿ ತಾವು ಮಾಡಿದ ಏರ್ಪಾಡುಗಳಿಂದ ಹುಡುಗರಿಗೆ ಅದೃಷ್ಟಪೂರ್ವ ಲಾಭವುಂಟಾಗುವದು. ನಮ್ಮಲ್ಲಿಯ ವಿದ್ಯಾಭ್ಯಾಸ ಪದ್ಧತಿಯು ತಮ್ಮಗಳಿಗೆ ವೇದ್ಯವಿರುವದರಿಂದ ನಾವು ನಮಗೆ ಕೊಡುವ ಬುದ್ಧಿವಾದವು ವಿಶೇಷ ಅರ್ಥ ಗರ್ಭಿತವಾಗಿರುವದು. ಇಲ್ಲಿ ಓದುಹೇಳುವ ಸಮಾಜವೂ (ಜೆಸುವಿಟ್ ಸೊಸ್ಯಾಟಿಯು) ಖಾವಂದರು ಬ್ರಿಟಿಷ ಸಾಮ್ರಾಜ್ಯದ ಇನ್ನೊಂದು ಮೂಲೆಯಲ್ಲಿ (ಆಫ್ರಿಕದಲ್ಲಿ) ಕಂಡ ಸಮಾಜವೂ ಒಂದೇ. ಅಲ್ಲಿ ಮಹಾಸ್ವಾಮಿಗಳು ಏರ್ಪಡಿಸಿದ ವಿದ್ಯಾಭ್ಯಾಸ ಪದ್ಧತಿಯೂ ಪ್ರಜಾಪಾಲನೆಯೂ ಆ ಚಂದ್ರಾರ್ಕಸ್ಥಾಯಿಯಾಗಿವೆ. ಖಾವಂದರು ನಮ್ಮನ್ನು ತದನುರಾಗದಿಂದ ಪಾಲಿಸುವಿರೆಂದು ನಂಬಿದ್ದೇವೆ. ನಮ್ಮ ಕೊಲೇಜಿನ ಅಧ್ಯಕ್ಷರನ್ನು ಮದ್ರಾಸು ಯುನಿವರ್ಸಿಟಿಯ ಫೆಲ್ಲೋರನ್ನಾಗಿ ನೇಮಿಸಿದ್ದು ಈ ಅನುರಾಗದ ಮೊದಲನೇ ಕುರುಹಾಗಿದೆ. ಇದಕ್ಕಾಗಿ ನಾವು ಕೃತಜ್ಞರಾಗಿದ್ದೇವೆ.

ಜೆಸುವಿಟರ ವಿದ್ಯಾಪದ್ಧತಿಯು ಸರ್ವತ್ರ ಒಂದೇ ಆಗಿದೆ. ಹಸ್ತಕೌಶಲವನ್ನೂ ಬುದ್ಧಿಚಾತುರ್ಯವನ್ನೂ ಹೃದಯ ವಿಕಾಸವನ್ನೂ ಉಂಟುಮಾಡುವದೇ ಮುಂದಿನ ಪೀಳಿಗೆಯನ್ನು ಐಹಿಕಾಮುಷ್ಮಿಕ ವಿದ್ಯೆಯಿಂದ ಅನುಗೊಳಿಸಿ ಅವರನ್ನು ಯೋಗ್ಯಪ್ರಜೆಗಳೆನಿಸುವದೇ ಆ ಪದ್ಧತಿಯ ಮೂಲಮಂತ್ರವಾಗಿದೆ. ರಾಜಭಕ್ತಿಯೂ ಪ್ರಭುಪರಾಯಣತೆಯೂ ನಮ್ಮ ಮತದ ಪವಿತ್ರಧರ್ಮವಾಗಿದೆ. ಈ ವಿದ್ಯಾಸಂಸ್ಥೆಯಲ್ಲಿ ಖಾವಂದರಿಗೂ ತಮ್ಮ ಕುಟುಂಬಕ್ಕೂ ದೇವರು ಉತ್ತರೋತ್ತರ ಅಭಿವೃದ್ಧಿಯನ್ನೀಯಲೆಂದು ಪ್ರಾರ್ಥಿಸುತ್ತೇವೆ.

ಖಾವಂದರವರ ಉತ್ತರ. ನಿಮ್ಮ ದಯಾಭರಿತವಾದ ಸ್ವಾಗತಕ್ಕೆ ಕೃತಜ್ಞನಾಗಿರುವೆನು. ನಾನು ಅನ್ಯದೇಶಗಳಲ್ಲಿ ಮಾಡಿದ ಕಾರ್ಯಭಾರವನ್ನೂ ಅಲ್ಲಿ ಜೆಸುವಿಟ್ ಪಾದ್ರಿಗಳ ಸಂಪರ್ಕವನ್ನೂ ಕುರಿತು ನೀವು ಆಡಿದ ವಚನಗಳು ಆನಂದಕರವಾಗಿವೆ. ಪರಮೇಶ್ವರ ಸೇವಾಪ್ರೇರಿತರಾಗಿ ಜೆಸುವಿಟರು ಮಾಡುವ ವಿದ್ಯಾಭ್ಯಾಸ ಕಾರ್ಯವು ಅತ್ಯುತ್ಕೃಷ್ಟವಾದದ್ದು. ಸದ್ಗುಣಿಗಳೂ ಸತ್ಯಸಂಧರೂ ಆದ ಪಾದರಿಗಳು (ಆಫ್ರಿಕದ) ರೋಡೆಸಿಯದಲ್ಲಿ ಮಾಡುವ ಕೆಲಸವು ಅವರ ಯಜಮಾನನಾದ ಯೇಸುಕ್ರೈಸ್ತನ ಶಿಷ್ಯರಿಗೆ ಯೋಗ್ಯವಾದದ್ದು. ಅವರಲ್ಲಿ ಪರಿಚಿತಿಯನ್ನೂ ಮೈತ್ರಿಯನ್ನೂ ಗಳಿಸುವದು ನನ್ನ ಗೌರವವಾಗಿತ್ತು. ನಾನು ಆ ಮೈತ್ರಿಯನ್ನೂ ಆ ಸಹಾನುಭವವನ್ನೂ ಎಂದೆಂದಿಗೂ ನೆನೆವೆನು. ಅಯ್ಯಾ, ನೀವು ಇಲ್ಲಿ ಮಾಡುವ ಕೆಲಸದಲ್ಲಿಯೂ ಅಷ್ಟೇ ಅನುರಾಗವುಳ್ಳವನಾಗಿದ್ದೇನೆ. ಈ ಅನುರಾಗವನ್ನು ಕಾರ್ಯತಃ ಪ್ರದರ್ಶಿಸುವ ಸಂಭವ ಒದಗಿದರೆ ನನಗೆ ಅನುಪಮಾನಂದವೀಯುವದು. ಮೂವತ್ತು ವರ್ಷಗಳ ಮೊದಲು ಈ ಕೊಲೇಜು ಸ್ಥಾಪಿತವಾದಂದಿನಿಂದ ಇಂದಿನವರೆಗೆ ಕೊಲೇಜಿನ ಅಧ್ಯಕ್ಷರೂ ಉಪಾಧ್ಯಾಯರೂ ನಿರಂತರವಾಗಿ ಧನವನ್ನೂ ತನುಮನವನ್ನೂ ಸಮರ್ಪಿಸಿದ್ದಾರೆ. ಯುವಕ ಮಿತ್ರರೇ ಸಂಸಾರ ಸಾಗರವನ್ನು ದಾಟುವದಕ್ಕೆ ಸಹಕಾರಿಯಾದ ವಿದ್ಯಾಧನವು ಹ್ಯಾಗೆ ಇಲ್ಲಿ ನಿಮ್ಮ ಕೈಸೇರುತ್ತದೆಂದು ನೀವು ವಿಚಾರಮಾಡಿ ತಿಳಕೊಂಡಿದ್ದೀರೋ? ನಿಮಗಾಗಿ ಅನುರಾಗ, ಎಷ್ಟು ಚಿಂತೆ, ಎಷ್ಟು ಜಾಗರೂಕತೆಯನ್ನು ಇವರು ತೋರುವರೆಂದು ತಿಳಿದಿರುವಿರೋ? ನೀವು ಅರಿತಿರುವಿರೆಂದು ಭಾವಿಸುವೆನು. ನೀವು ಇಷ್ಟು ಔದಾರ್ಯವನ್ನೂ ಇಷ್ಟು ಮಮತೆಯನ್ನೂ ಹೊಂದಲಿಕ್ಕೆ ಯೋಗ್ಯರೆನಿಸುವಿರೆಂದೂ ಭಾವಿಸುವೆನು. ಇತಃ ಪೂರ್ವ ವಿದ್ಯಾರ್ಥಿಗಳು ಈ ಕೊಲೇಜಿನಿಂದ ತೇರ್ಗಡೆ ಪಟ್ಟು ಲೋಕದಲ್ಲಿ ಪ್ರಖ್ಯಾತಿಗೊಂಡು ದೇಶ ಸೇವೆಯಲ್ಲಿ ಹೆಸರು ಹೊಂದಿದ್ದನ್ನು ಕಂಡರೆ ನೀವು ಅವರನ್ನು ಅನುಸರಿಸುವಿರೆಂದು ದೃಢವಾಗಿ ಹೇಳಬಹುದು. ನಿಮಗೆ ನನ್ನ ಬುದ್ಧಿಮಾರ್ಗವೇನಂದರೆ "ನೀವು ಹೋಗಿ ಅವರಂತೆ ನಡೆಯಿರಿ". ಆಗ್ಯೆ ನೀವು ಈ ಕೊಲೇಜಿನ ಋಣದಿಂದ ಮುಕ್ತರಾಗುವಿರಿ. ಆಗ್ಯೆ ದರ್ಮಪರಾಯಣರಾದ ನಿಮ್ಮ ಗುರುಗಳ ಯೋಗ್ಯ ಶಿಷ್ಯರೆನಿಸುವಿರಿ.

ಕೊಲೇಜಿನ ಅಧ್ಯಕ್ಷರೂ ಉಪಾಧ್ಯಾಯರೂ ಇಲ್ಲಿ ಗೈದ ಉತ್ಕೃಷ್ಟ ಕಾರ್ಯವನ್ನು ಪರೀಕ್ಷಿಸುವದಕ್ಕೆ ನನಗೆ ಸಂದರ್ಭವಿತ್ತದ್ದಕ್ಕೆ ನಾನು ಅವರಿಗೆ ವಿಶೇಷವಾಗಿ ಕೃತಜ್ಞನಾಗಿರುವೆನು. ದೇವರು ಈ ಕೃತ್ಯದಲ್ಲಿ ಇವರನ್ನು ಆಶೀರ್ವಾದಿಸಲೆಂದು ಪ್ರಾರ್ಥಿಸುವೆನು.

ಸೆಂಟ್ ಎನ್ಸ್ ಶಾಲೆಯಲ್ಲಿ ಕೊಟ್ಟ ಭಾಷಣ.

ನಾವು ಈಗ ಕೇಳಿದ ಗೀತದ "ಸುಖಿ" ವೆಂಬ ಪಲ್ಲವಿಯೇ ನಿಮ್ಮ ಜೀವನದ ಪಲ್ಲವಿಯಾಗಲಿ. ಒಂದು ಶತಮಾನಕ್ಕೆ ಮುಂಚೆ ಈ ಸ್ಥಳದಲ್ಲಿ ಒಂದು ಕೋಟೆ ಇತ್ತು. ಇಲ್ಲಿ ಅನೇಕ ಕದನಗಳೂ ಕಷ್ಟಾರ್ಜಿತದ ಜಯಗಳೂ ಪ್ರಾಪ್ತಿಸಿದ್ದವು. ಈ ಹೊತ್ತು ಈ ಸ್ಥಳದಲ್ಲಿ ಒಂದು ಹುಡುಗಿಯರ ಶಾಲೆಯಿದೆ. ಇದೆಂತಹ ಅಂತರ! ಇದು ಈ ರಂಗಭೂಮಿಯಲ್ಲಿ ಧೈರ್ಯ, ಕ್ಷಮೆ, ವಿವೇಕಗಳು, ದಾರಿದ್ರ್ಯ, ಅಜ್ಞಾನ, ದುರಾಗ್ರಹಗಳನ್ನು ಜೈಸುವವು. ಈ ಜಯ ಬಾಯಿಂದ ತಿಳುವಳಿಕೆಗೆ ಬಾರದೆ ನಿಧಾನವಾಗಿಯೂ ಶಾಂತವಾಗಿಯೂ ಗುಪ್ತವಾಗಿಯೂ ಗಳಿಸಿದ್ದಾದರೂ ಖ್ಯಾತಿಪ್ರದವೇ. ಮೂವತ್ತು ವರ್ಷಗಳ ಮುಂಚೆ ಪಾದ್ರಿಗಳ ಕಾರ್ಯವು ಇಲ್ಲಿ ಸಮಾಪ್ತಿಯಾಗುವ ಸಂಭವ ತೋರಿತು. ಆದರೆ ಮಾನ್ಯ ಮದರ್ ಮೇರಿ ಡಿ ಅಗ್ನೆಸರವರು ಈ ಬಂಜರು ಭೂಮಿಯಲ್ಲಿ ಹೊಸ ಬೀಜಬಿತ್ತಿ ಆ ಸಸಿಗೆ ನೀರೆರೆದು ಅದನ್ನು ಬೆಳೆಸಿದರು. ಇದರ ಫಲವೇನಂದರೆ—ಈ ತನಕ ನೂರಾರು ಹೆಣ್ಣು ಉಪಾಧ್ಯಾಯರುಗಳೂ ವಿದ್ಯಾರ್ಥಿಗಳೂ ಈ ಶಾಲೆಯಿಂದ ತೇರ್ಗಡೆ ಪಟ್ಟಿರುವರು. ಈ ಪರಿಣಾಮವು ಕರ್ತೃಗಳಿಗೆ ಒಂದು ವಿಧದ ಪ್ರತಿಫಲವಾಗಿರುವದು. ಮಾನ್ಯ ಮಾತೆಯೇ, ನಿಮ್ಮ ನಿಮ್ಮ ಸಂಗಡಿಗರ ಕೆಲಸವು ಬೆಳೆಯಲೆಂದು ಇಚ್ಛಿಸುವೆನು. ನೀವು ನಮಗಾಗಿ ಈ ದಿನ ಪ್ರದರ್ಶಿಸಿದ ವಿನೋದ ವಿಹಾರಗಳಿಗಾಗಿ ನಾನು ನಿಮ್ಮೆಲ್ಲರನ್ನು ಅಭಿವಂದಿಸುವೆನು. ಇಲ್ಲಿಯ ಗುರು ವಿದ್ಯಾರ್ಥಿನಿಗಳೆಲ್ಲರು ಸುಖದಲ್ಲಿ ಬಾಳಲೆಂದು ಇನ್ನೊಮ್ಮೆ ಇಚ್ಛಿಸುವೆನು.

ಗವರ್ನರ್‌ಮೆಂಟು ಕಾಲೇಜು ವಸ್ತುಪ್ರದರ್ಶನದ ನಂತರ ಕೊಟ್ಟ ಭಾಷಣ

ಇಂಟರ್ ಸ್ಕೂಲ್ ಜಿಮ್ಖಾನದಲ್ಲಿ ಗೆದ್ದವರಿಗೆ ಬೆಳ್ಳಿ ಬಹುಮಾನ ಪಾತ್ರೆಗಳನ್ನು ಕೊಟ್ಟಾದ ನಂತರ ಖಾವಂದರವರು ಹೀಗೆ ಅಪ್ಪಣೆ ಕೊಡಿಸಿದರು. ವಿದ್ಯಾರ್ಥಿಗಳ ದೇಹಶಕ್ತಿಯು ವಿದ್ಯಾಭ್ಯಾಸದಿಂದ ವರ್ಧಿಸುತ್ತಿರುವಾಗ್ಯೆ ಅವರು ಆರೋಗ್ಯ ದೃಢಕಾಯಿಗಳಾಗಿ ಶಾರೀರಕ ಪುಷ್ಟಿಯು ತಕ್ಕದಾದ ರೀತಿಯಲ್ಲಿ ಸಾಗುವಂತೆ ಇಂಟರ್ ಸ್ಕೂಲ್ ಜಿಮ್ಖಾನದಂತಹ ಏರ್ಪಾಡುಗಳು ಆವಶ್ಯಕವೆಂದೂ ತಾನು ಸಹ ತನ್ನ ಸಣ್ಣ ಪ್ರಾಯದಲ್ಲಿ ಈ ಅಂಗಸಾಧನೆಯ ಪಾಠಗಳಲ್ಲಿ ಅಧಿಕ ಮನಸ್ಸು ಕೊಡುತ್ತಿದ್ದೆನೆಂದೂ ಹೇಳಿ, ಗೆದ್ದ ಹುಡುಗರಿಗೆ ವರುಷಂಪ್ರತಿ ಮೆಡಲ್ ಮುಂತಾದವುಗಳನ್ನು ಕೊಡುವರೆ ಕೊಡಿಸಿದ ಹಣವು ಅರ್ಬತನೋಟ ದಿವಾಳಿಯಲ್ಲಿ ನಷ್ಟವಾಯಿತೆಂಬದನ್ನು ಕೇಳಿ ವ್ಯಸನಪಡುತ್ತೇನೆಂತಲೂ, ಈ ಫಂಡಿಗೆ ಹಣ ದೊರಕುವರೆ ಸಾಧ್ಯವಾಗುವಷ್ಟು ಸಹಾಯ ಮಾಡುವೆನೆಂದೂ ತಿಳಿಯಪಡಿಸಿದರು

ವಸ್ತುಪ್ರದರ್ಶನವನ್ನು ಏರ್ಪಡಿಸಿದ ಮಾನ್ಯ ಗೃಹಸ್ತರನ್ನು ಸಂಭೋಧಿಸಿ, ತನ್ನ ಪತ್ನಿ ವ ತನಗೋಸ್ಕರವೂ ಏರ್ಪಡಿಸಿದ ಈ ವಸ್ತುಪ್ರದರ್ಶನಕ್ಕೋಸ್ಕರ ತನ್ನ ಮನಃಪೂರ್ವಕ ಧನ್ಯವಾದವನ್ನು ಕೊಟ್ಟು ಎಗ್ರಿಕಲ್ಚರಲ್ ಎಸೋಸಿಯೇಶನಿನ ವಿಷಯ ಹೇಳಿದ್ದೇನಂದರೆ:—ಗವರ್ನಮೆಂಟಿನವರು ದೇಶದ ವ್ಯವಸಾಯವನ್ನು ವೃದ್ಧಿಸುವರೆ ಅತ್ಯಾಸಕ್ತಿಯುಳ್ಳವರಾಗಿರುತ್ತಾರೆ ಇದನ್ನು ಜನರು ಬಯಸುವಷ್ಟು ಶೀಘ್ರದಲ್ಲಿ ಕೈಗೂಡಿಸುವರೆ ಮುಖ್ಯ ಎರಡು ಅಭ್ಯಂತರಗಳಿರುವವು ಒಂದನೇದು ಸಾಕಷ್ಟು ಹಣವಿಲ್ಲದೆ ಇರುವದು, ಎರಡನೇದು ವ್ಯವಸಾಯ ಶಾಸ್ತ್ರವನ್ನು ಕಲಿತು ಅದನ್ನು ಕಾರ್ಯತಃ ಸಾಧಿಸುವವರು ಬಹಳ ಕಡಿಮೆ ಈ ಕಾರಣಗಳಿಂದ ವ್ಯವಸಾಯ ವೃದ್ಧಿಯ ಪ್ರಯತ್ನಗಳನ್ನು ಒಂದೊಂದಾಗಿಯೇ ಸಾಗಿಸಬೇಕು ವಿನಹಾ ಬೇರೆ ಉಪಾಯವಿಲ್ಲ ವ್ಯವಸಾಯ ವಿದ್ಯೆಯನ್ನು ಕಲಿಸುವದಕ್ಕೋಸ್ಕರ ಗವರ್ನಮೆಂಟಿನವರು ಕೊಯಮುತ್ತೂರಿನಲ್ಲಿ ಒಂದು ಸಂಸ್ಥೆಯನ್ನು ಸ್ಥಾಪಿಸಿರುವರು ಇದರ ದೃಷ್ಟಾಂತವನ್ನು ನೋಡಿ ಮುಂದೆ ಬೇಕಾದ ರೀತಿಯಲ್ಲಿ ವರ್ತಿಸುವರು ಆಯಾ ಊರುಗಳಲ್ಲಿ ದವಸಧಾನ್ಯದ ಬೀಜಗಳ ಡಿಪೋಗಳನ್ನು ಸ್ಥಾಪಿಸಿ ರೈತರಿಗೆ ಅದಷ್ಟು ಮಟ್ಟಿಗೆ ಸಹಾಯ ಕೊಡಲುಪಕ್ರಮಿಸುವರು ಗವರ್ನಮೆಂಟಿನವರ ಉದ್ದಿಶ್ಯಗಳು ಹೀಗೆ ಸಫಲವಾಗಬೇಕಾದರೆ ಪ್ರಜಾಸಹಕಾರವಿಲ್ಲದೆ ಆಗದು ಜಿಲ್ಲೆಯ ವ್ಯವಸಾಯ ಸಂಘದವರು ತಮ್ಮಿಂದಾಗುವಷ್ಟು ಪ್ರಯತ್ನಪಡಬೇಕು ಅಲ್ಲಲ್ಲಿ ಊರುಗಳಲ್ಲಿ ಈ ಸಂಘಗಳ ಶಾಖೆಗಳನ್ನು ಸ್ಥಾಪಿಸಿ ರೈತರೆಲ್ಲರಿಗೂ ಬಹಳ ಪ್ರಯೋಜನ ಸಿಕ್ಕುವಂತೆ ಆಗಬೇಕು ಸರಕಾರವು ಈ ಸಂಘದವರ ಈ ವರೇಗಿನ ಪ್ರಯತ್ನಗಳಿಗೆ ಮನ್ನಣೆಯನ್ನು ಕೊಟ್ಟಿರುವದು ಹೀಗೆಂದು, ತನಗೆ ವ ತನ್ನ ಪತ್ನಿಗೆ ಮಾಡಿದ ಸತ್ಕಾರಗಳಿಗೋಸ್ಕರ ವಸ್ತುಪ್ರದರ್ಶನವನ್ನು ಏರ್ಪಡಿಸಿದ ಮಾನ್ಯ ಗೃಹಸ್ಥರನ್ನು ತಿರಿಗೊಮ್ಮೆ ವಂದಿಸಿ, ತನ್ನ ಭಾಷಣವನ್ನು ಮುಗಿಸಿದರು

———o———

ನವೆಂಬರ ತಾ. 8 ಶುಕ್ರವಾರ. ಖಾವಂದರವರೂ ಇತರ ಪರಿವಾರವೂ ಬೆಳಿಗ್ಯೆ ೭ ಘಂಟೆಗೆ ಇಲ್ಲಿಂದ ಹೊರಟು ೮ ಘಂಟೆಗೆ ಮೂಡಬಿದ್ರೆಗೆ ತಲ್ಪಿದರು ಮ। ರಾ। ರಾ। ಹೆಡ್‌ಕ್ವಾರ್ಟರ್ಸ್ ಡಿಪ್ಯುಟಿ ಕಲೆಕ್ಟರ್ ಪಿ ನಾರಾಯಣ ಮೇನನ್, ಮ। ರಾ। ರಾ। ಮಂಗಳೂರು ತಹಸೀಲದಾರ ಪಾಂಡುರಂಗ ಕಿಣಿಯರು, ರಾ। ಕೆ ಕೃಷ್ಣನಾಯರ್, ಡಿಸ್ಟ್ರಿಕ್ಟ್ ಬೋರ್ಡ್ ಇಂಜಿನಿಯರ್, ಚೌಟರ ಕುಂಞಮ್ಮಶೆಟ್ಟಿರವರು ಮೊದಲಾದವರೂ ಇನ್ನೂ ಅನೇಕ ಸ್ಥಳೀಕ ಗೃಹಸ್ಥರೂ ಗವರ್ನರ್ ದೊರೆಗಳವರಿಗೆ ಸ್ವಾಗತವಿತ್ತರು ಲೋಕಲ್ ಫಂಡಿನವರ ಇನ್ಸ್‌ಪೆಕ್ಷನ್ ಶೆಡ್ ಯಾ ಬಂಗ್ಲೆಯಲ್ಲಿ ಉಳಕೊಂಡರು

ಪೂರ್ವಾಹ್ನ ಘಂಟೆ 10 15ಕ್ಕೆ ಬಸ್ತಿಗಳಿಗೆ ಮೆರವಣಿಗೆಯಲ್ಲಿ ಹೋಗಿ ಅಲ್ಲಿ ಗವರ್ನರವರು ಪ್ರಮುಖ ಗೃಹಸ್ಥರಿಗೆ ಭೇಟಿಕೊಟ್ಟರು, ಖಾವಂದರವರ ಸಂದರ್ಶನಕ್ಕೋಸ್ಕರ ಸಿದ್ಧಪಡಿಸಿದ ಹಲವು ವಸ್ತುಗಳಲ್ಲಿ ಅತೀ ವಿಚಿತ್ರವಾದೊಂದು ತೆಂಗಿನಮರವಿತ್ತು. ಈ ಮರದ ವಕ್ಷಸ್ಥಳದಿಂದ ಎರಡುಮೂರು ಸಸಿಗಳು ಚಿಗುರಿ ಬಹಳ ಲವಲವಿಕೆಯಿಂದ ಬೆಳದಿದ್ದವು. ಇದನ್ನು ದೃಷ್ಟಿಸಿದ ನಂತರ ಸವಾರಿಯು ಪರಿವಾರದೊಡನೆ ಬಸ್ತಿಯಿಂದ ಬಸ್ತಿಗೆ ನೋಡ ಹೊರಟಿತು ಹಳೆ ಯಾ ಗುರುಬಸ್ತಿಯನ್ನು ಮೊದಲಾಗಿ ನೋಡಿ, ಹಿರೆ ಬಸ್ತಿಯನ್ನು ಆ ಬಳಿಕ ಸಂದರ್ಶಿಸಿ, ಹೊಸ ಯಾ ಸಾವಿರ ಕಂಬಗಳ ಬಸ್ತಿ ಕಡೆಗೆ ಚಿತ್ತೈಸಿದರು ಜೈನ ಮತಸ್ಥರ ಶ್ರೀ ಸ್ವಾಮಿಗಳವರಾದ ಚಾರುಕೀರ್ತಿ ಪಂಡಿತಾಚಾರ್ಯವರ್ಯರುಗಳವರು ಖಾವಂದರನ್ನು ಇಲ್ಲಿ ಎದುರ್ಗೊಂಡರು

ತ್ರಿಭುವನ ಚುಡಾಮಣಿ ಚೈತ್ಯಾಲಯವೆಂದು ವರ್ಣಿಸಲ್ಪಟ್ಟ ಹೊಸ ಬಸ್ತಿ ಯಾ ಸಹಸ್ರ ಕಂಭಗಳ ಬಸ್ತಿಯು ಈ ಬಸ್ತಿಗಳಲ್ಲಿ ವಿಶೇಷವಾದದ್ದು ಎಂಟನೇ ತೀರ್ಥಂಕರ ಚಂದ್ರನಾಥ ಸ್ವಾಮಿಗಳವರ ಹೆಸರಿಗೆ ಅರ್ಪಿಸಲ್ಪಟ್ಟ ಈ ಚೈತ್ಯಾಲಯವು ಜೈನ್ಯಗುರುಗಳ ವಾಸಸ್ಥಾನವಾಗಿರುವದು ಈ ಕಟ್ಟಡಕ್ಕೆ ಮೂರು ಅಂತರ ಯಾ ಮಾಳಿಗೆಗಳಿರುವವು. ಈ ಬಸ್ತಿಯ ಕೆಲಸವು ಶಾಲಿವಾಹನ ಶಕ ೧೩೫೦ರಲ್ಲಿ ಪ್ರಾರಂಭಿಸಲ್ಪಟ್ಟು ೧೪೬೨ರಲ್ಲಿ ಅಂತ್ಯವಾಯಿತು ಹೊಯಿಸಾಲ ಬಳ್ಳಾಲ ವಿಷ್ಣುವರ್ಧನ ಎಂಬ ಜೈನಪ್ರಮುಖರು ರಾಮಾನುಜಾಚಾರ್ಯರ ಮತಾವಲಂಬಿಗಳಾದೊಡನೆ ಜೈನಶಿಲ್ಪಿಗಳು ಮೈಸೂರು ಪ್ರಾಂತ್ಯವನ್ನು ಬಿಟ್ಟು ದಕ್ಷಿಣ ಕನ್ನಡಕ್ಕೆ ಬಂದು ಇಲ್ಲಿದ್ದ ಜೈನರಾಜರುಗಳ ಆಶ್ರಯ ಹೊಂದಿ ಈ ಬಸ್ತಿಗಳನ್ನೆಲ್ಲಾ ಕಟ್ಟಿದರಾಗಿ ಕಂಡುಬರುತ್ತದೆ

ಈ ದಿನ ಸಾಯಂಕಾಲ 4 30 ಘಂಟೆಗೆ ಗವರ್ನರ ದೊರೆಗಳವರು ಮೂಡಬಿದ್ರೆಯಿಂದ ಕಾರ್ಕಳಕ್ಕೆ ತಲ್ಪಿದರು ಕುಂದಾಪುರ ಡಿವಿಜನ್ ಡಿಪ್ಯುಟಿ ಕಲೆಕ್ಟರವರ ಚಾರ್ಜ ನೋಡುತ್ತಿರುವ, ಮ। ರಾ। ರಾ। ಪಿ ನಾರಾಯಣ ಮೇನನ್, ರಾ। ಅ ದೇವಪ್ಪ ಪುಂಜರವರು, ರಾ। ಬಿ ರಾಮರಾವ್, ಕಾರ್ಕಳ ಮುನ್ಸಿಫ, ರಾ। ವಾಸುದೇವರಾವ್ ಡಿಪ್ಯುಟಿ ತಹಸೀಲದಾರ್, ರಾ। ಬಿ ವೈಕುಂಠ ಬಾಳಿಗ ಸಬ್‌ರಜಿಸ್ಟ್ರಾರ, ಕಾಫಿ ಪ್ಲೆಂಟರ್ ರಾ। ಎಸ್ ಎಲ್ ಮತಾಯಸ್, ರಾ। ಕೆ। ಸದಾಶಿವ ಭಟ್ಟ ವಕೀಲ, ರಾ। ಕೆ। ಸುಬ್ರಾಯ ಕಾಮತ್, ಜಮೀನುದಾರ, ರಾ। ಮ। ಚಿದಂಬರಯ್ಯ ಕಾರ್ಕಳ, ಸರಕಾರಿ ವಕೀಲರು, ಈ ಮೊದಲಾದವರು ದೊರೆಗಳವರಿಗೆ ಸ್ವಾಗತ ಸನ್ಮಾನವನ್ನು ಅರ್ಪಿಸಿದರು ಶ್ಯಾಮ ಘಂಟೆ 7ಕ್ಕೆ ಭೂತವೇಶಧಾರಿಗಳ ಕುಣಿದಾಟವನ್ನು ನೋಡಿ ರಾತ್ರಿ ಭೋಜನದ ತರ ವಾಯು ಖಾವಂದರವರು ಪೇಟೆಸವಾರಿಗೆ ಹೊರಟರು, ದೊರೆಗಳವರು ಹೊದಲ್ಲೆಲ್ಲಿಯೂ ದೀಪಸ್ತೋಮಗಳ ಬೆಳಕಿನಿಂದ ಕತ್ತಲೆಯೇ ಇರಲಿಲ್ಲ ಕಾರ್ಕಳದಲ್ಲಿ ವರುಷಂಪ್ರತಿ ಜರುಗುತ್ತಿರುವ ಲಕ್ಷದೀಪಗಳ ಮಹೋತ್ಸವಗಿಂತಲೂ ಈ ಸರ್ತಿಯ ದೀಪಾಲಂಕಾರವು ಇಮ್ಮಡಿಯಾಗಿತ್ತು

ನವೆಂಬರ ತಾ 9 ಶನಿವಾರ ಈ ದಿವಸ ಬೆಳಿಗ್ಯೆ ಚತುರ್ಮುಖ ಬಸ್ತಿ, ಗೌತಮಪ್ರತಿಮೆ, ಹಳೇಅಂಗಡಿ ಸ್ತಂಬಗಳನ್ನು ನೋಡಿ, ಬೆಳಿಗ್ಯೆ 10 30 ಘಂಟೆಗೆ ಕಾರ್ಕಳದಿಂದ 1 30 ಕ್ಕೆ ಮಂಗಳೂರಿಗೆ ಕಲೆಕ್ಟರವರ ಬಂಗ್ಲೆಗೆ ಬಂದು ತಲ್ಪಿದರು.

ಚತುರ್ಮುಖ ಬಸ್ತಿಯು ಕ್ರಿಸ್ತಶಕ 1334ನೇ ಇಸವಿಯ ಮೊದಲೇ ಕಟ್ಟಲ್ಪಟ್ಟಿರಬೇಕೆಂದು ಊಹಿಸುತ್ತಾರೆ ಗೌತಮಪ್ರತಿಮೆಯು ಕ್ರಿಸ್ತಶಕ 1432ನೇ ಇಸವಿಯಲ್ಲಿ ವೀರಪಾಂಡ್ಯ ಎಂಬ ಅರಸರಿಂದ ವಿಷಭನ ಮಗನಾದ ಬಾಹುಬಲಿಯ ಹೆಸರಲ್ಲಿ ಒಂದೇ ಕಲ್ಲಿನಿಂದ ಕೊರೆಯಲ್ಪಟ್ಟಿದಾಗಿರುತ್ತದೆ. ಈ ಪ್ರತಿಮೆಯು ಎತ್ತರದಲ್ಲಿ 45 ಅಡಿಯಾಗಿರುವದು ಹಳೇಅಂಗಡಿ ಸ್ತಂಭಗಳು ಎತ್ತರದಲ್ಲಿ 33 ಅಡಿಗಳಾಗಿದ್ದು ಬಹು ಅಂದವಾಗಿ ಕೆತ್ತಲ್ಪಟ್ಟ ನಕ್ಷೆಗಳಿಂದ ತುಂಬಿರುವವು.

ಈ ಮೂರು ಕಡೆಗಳಲ್ಲಿಯೂ ಲಲಿತ ಕೀರ್ತಿ ಭಟಾರಕ ಸ್ವಾಮಿಗಳಾದ ಜೈನರ ಗುರುಗಳು ಗವರ್ನರ ದೊರೆಗಳವರನ್ನು ತಮ್ಮ ಬಸ್ತಿಗಳಿಗೆ ಸ್ವಾಗತವಿತ್ತು ಸನ್ಮಾನಿಸಿದರು

ವಿದೇಶ ವೃತ್ತಾಂತ

ಇಂಡಿಯಾ ಆಫೀಸಿನ ಎಕೌಂಟೆಂಟ ಜನರಲರಾದ ಮ। ಸ್ಕೋಟ ಎಂಬವರು ಕೆಲವು ದಿವಸಗಳಲ್ಲಿಯೇ ಪೆನ್ಶನ್ ತೆಗೆದುಕೊಳ್ಳುವರು ಇವರಿಗೆ ಅರ್ಧ ಶತಮಾನದ ಸರ್ವಿಸು ಇರುವದು. ಇವರು ಇಂಡಿಯಾ ಕಂಪೆನಿ ಕೈಕೆಳಗೆ ಕೆಲಸನೋಡುತ್ತಿದ್ದ ಕಡೇ ಆಫೀಸರರಾಗಿರುತಾರೆ.

ರುಶ್ಯಾದೇಶದಲ್ಲಿ ದವಸ ಧಾನ್ಯಗಳ ಕ್ರಯವು ವಿಪರೀತ ಏರಿರುವದರಿಂದ ರುಶ್ಯಾ ಗವರ್ನಮೆಂಟಿನವರು ಹೀಗೆ ಈ ಕ್ರಯ ಏರಲಿಕ್ಕೆ ಕಾರಣಗಳನ್ನು ಶೋಧಿಸಲಿಕ್ಕೂ ಅವುಗಳನ್ನು ತಗ್ಗಿಸುವರೆ ತಕ್ಕದಾದ ಏರ್ಪಾಡು ಮಾಡುವದಕ್ಕೂ ಒಂದು ಕೊನ್ಫರೆನ್ಸನ್ನು ಮಾಡಿರುವರು.

ಅಮೇರಿಕದಲ್ಲಿ ವ್ಯಾಪಾರ ವೈವಾಟಗಳಿಗೆ ರೊಕ್ಕ ವ ಇತರ ನಾಣ್ಯಗಳ ಅಡಚಣೆಯು ಬಹಳ ವಿಪರೀತವಿರುವದು. ನ್ಯೂಯೋರ್ಕ ಮುನಿಸಿಪಾಲಿಟಿಯವರು ಸೇವಕ ನೌಕರುಗಳಿಗೆ ಕೊಡಲಿಕ್ಕೆ ರೊಕ್ಕವಿಲ್ಲದೆ, ಬ್ಯಾಂಕು ಚೆಕ್ಕುಗಳ ಮುಖಾಂತರ ಸಂಬಳ ಕೊಡುವರು. ಅನೇಕ ಜನ ಶ್ರೀಮಂತರು ಬ್ಯಾಂಕುಗಳ ಅಪನಂಬಿಕೆಯಿಂದ ತಮ್ಮಲ್ಲಿಹ ಹಣವನ್ನು ಬ್ಯಾಂಕಿನಿಂದ ಪಡಕೊಂಡು ಅಡಗಿಸಿರುವರು.

ಅಮೇರಿಕ ಸಂಯುಕ್ತ ಸಂಸ್ಥಾನದ ಒಹಿಂಗಟನ

... ಹಿಂದುಗಳ ವಿಚಾರಗಳನ್ನು ಒಳನುಗ್ಗಿ ಅಮೇರಿಕನ ...

ಬ್ರಿಟಿಷ್ ಪಾರ್ಲಿಮೆಂಟಿನ ಮೆಂಬರರಾದ ಮೆ। ರುತ ... ಎಂಬವರು ನೆಷನಲ್ ಕೊಂಗ್ರೆಸಿನಗೋಸ್ಕರ ಹಿಂದುಸ್ಥಾನಕ್ಕೆ ಬರುವರೆ ಮೊಂಗೋಲಿಯಾ ಎಂಬ ಸ್ಟೀಮರ ಹತ್ತಿರುವರು

ಉತ್ತರ ಹಿಂದುಸ್ಥಾನ

ಸಿಡಿಸಿಯಸ್ ಮೀಟಿಂಗ್ಸ್ ಬಿಲ್ ಯಾ ರಾಜದ್ರೋಹ ಕೂಟದ-ಕಾನೂನು-ಮಸೂದೆಯು ಸಿಲೆಕ್ಟ ಕಮಿಟಿಯವರು ತಿದ್ದುಪಡಿಸಿದಂತೆ ವೈಸರಾಯ ಪ್ರಭುಗಳ ನ್ಯಾಯ ನಿರ್ಮಾಣ ಸಭೆಯಲ್ಲಿ ಮಂಜೂರು ಮಾಡಿರುವರು

ಮೆ। ಗೋಖಲೆಯವರಿಗೂ ವ್ಯಾಸರಾಯರಿಗೂ ಒಂದುವರೆ ಘಂಟೆ ತನಕ ಏಕಾಂತ ಭೇಟಿ ಇತ್ತೆಂದು ತಿಳಿದು ಬರುತ್ತದೆ.

ದಾದಾಭಾಯಿ ನವರೋಜಿಯವರು ಮುಂಬಯಿಗೆ ಬಂದು ತಲ್ಪಿರುವರು ಆರೋಗ್ಯದಲ್ಲಿದ್ದರೂ ನವರೋಜಿಯವರು ದೇಹದಲ್ಲಿ ಬಹಳ ಅಶಕ್ತಿ ಇರುವದೆಂದು ಕೇಳುತ್ತೇವೆ.

... ಧ

ಈ ಸರ್ತಿಯು ಕೊಂಗ್ರೆಸು ಮದ್ರಾಸಿನಲ್ಲಿ ಆಗುವ ವಿಲೆವಾರಿ ನಡಿಯುವದು ಮೆ। ಕೀಯಾರ್ ಹಾರ್ಡಿಯವರು ಮದ್ರಾಸಿಗೆ ಬಂದು ಅಲ್ಲಿಯ ಪ್ರಜೆಗಳ ಸ್ಥಿತಿಗತಿಗಳನ್ನು ಪರಾಂಬರಿಸಿ ಹೋಗಿರುವರು

ನಮ್ಮ ಜಿಲ್ಲಾ ಕಲೆಕ್ಟರನವರಾದ ಅಜೀಜುದ್ದೀನ್ ಖಾನ್ ಬಹದೂರರವರ ಸಮ್ಮಂಧಿಕರಾದ ಕಾದಿರ್ ನವಾಬ ಖಾನ್ ಸಾಹೇಬ ಖಾನ್ ಬಹದೂರರವರಿಗೆ ಕರ್ನೂಲು ಜಿಲ್ಲಾ ಕಲೆಕ್ಟರ್ ಕೆಲಸ ನೇಮಕವಾಗಿರುವದು

ಆರ್ಬತನೋಟರ ಕಂಪೆನಿಯಲ್ಲಿ ಹಣವಿಟ್ಟವರಿಗೆ ಯಾವ ಪ್ರಮಾಣವಾಯಿಯಲ್ಲಿ ಹಣ ಕೊಡುವದೆಂಬದನ್ನು ಹೈಕೋರ್ಟಿನಲ್ಲಿ ಸದ್ಯದಲ್ಲಿ ನಿರ್ಣಯಿಸಲ್ಪಡುವದು

ದಕ್ಷಿಣ ಕನ್ನಡ

ಮೇನೇಜರರ ನೋಟೀಸು.

ಈ ಸಂಚಿಕೆಯನ್ನು ತಾ 10ಕ್ಕನೇ ಪ್ರಕಟಿಸಬೇಕೆಂದು ಆ ಪ್ರಕಾರ ಸಂಚಿಕೆಗೆ ತಾರೀಕನ್ನು ಹಾಕಿದ್ದರೂ ಮುದ್ರಣ ಕೆಲಸ ನಡಿಯುತ್ತಿರುವ ಛಾಪಾಯಂತ್ರವು ಕೆಲವು ದೋಷಗಳಿಂದ ನಿರುಪಯುಕ್ತವಾಗಿದ್ದರಿಂದ ಈ ಸಂಚಿಕೆಯನ್ನು ತಾ. 12ಕ್ಕೆ ಪ್ರಕಟಿಸಿರುವೆವು. ಗವರ್ನರ್ ದೊರೆಗಳ ಆಗಮನದ ಪೂರ್ಣ ವಿವರವು ನಮ್ಮ ವಾಚಕರಿಗೆ ಬೇಗ ಹಸ್ತಗತವಾಗಲೆಂತ ನಮ್ಮ ಈ ತಿಂಗಳ ತಾ. 16ಕ್ಕೆ ಪ್ರಕಟವಾಗಲಿಕ್ಕಿರುವ ಈ ಸಂಚಿಕೆಯನ್ನು ತಾ. 12ಕ್ಕೆ ಪ್ರಕಟಿಸಿರುವೆವು. ತಾ. 16ಕ್ಕೆ ಬೇರೆ ಸಂಚಿಕೆ ಇಲ್ಲ.

ಮೇನೇಜರ್,
ಸ್ವದೇಶಾಭಿಮಾನಿ.

ಮಂಗಳೂರು. ಮಂಗಳೂರು ಪಟ್ಟಣದ ಕೆಲವು ಭಾಗಗಳಲ್ಲಿ ಪ್ಲೇಗಿನೊಂದಿಗೆ ಕೋಲೆರಾ ರೋಗವು ಬಂದಿರುವದು ಸಾಲದಿಂದ ಮುಳುಗಿದ ಮಂಗಳೂರು ಮುನಿಸಿಪಾಲಿಟಿಗೆ ಖರ್ಚಿಗೋಸ್ಕರ ಇನ್ನಷ್ಟು ಮಾರ್ಗವಾಯಿತು. ಗವರ್ನರ ದೊರೆಗಳವರು ನಿರಾಕರಿಸಿದ ಮೇಲೆ ಈ ಮುನಿಸಿಪಾಲಿಟಿಯನ್ನು ಎಂದಸೇ ತರದ್ದಾಗಿ ಮಾಡಿ ಜನರ ಮೇಲೆ ಸೇಕಡಾ 8½ರ ತೆರಿಗೆಯನ್ನು ಹೊರಿಸುವ ಸಂಭವವಿರುವದು

ಈ ತಿಂಗಳ ತಾರೀಕು ೩ಕ್ಕೆ ಮಂಗಳೂರು ಕೆನರಾ ಹೈಸ್ಕೂಲಿನಲ್ಲಿ ಮೆ। ಸಿಂಕ್ಲೇರವರ "ಪುಣ್ಯಾತ್ಮನ ಅನುಭವ"ಗಳೆಂಬ ಉಪನ್ಯಾಸವಿತ್ತು. ಇದರಲ್ಲಿವರು ಜಾತಿಭೇದದ ಗುಣಾವಗುಣ ವಿಷಯ ಮಾತಾಡಿ ಜಾತಿಭೇದದ ಕೆಡಕುಗಳಿಂದ ಹ್ಯಾಗ ನಾವು ನಿವೃತ್ತಿ ಹೊಂದಬಹುದೆಯೆಂಬದನ್ನೂ ಇದನ್ನು ಅನುಸರಿಸುವವರು ಸಹಾ ರಾಷ್ಟ್ರೀಯ ಕಲ್ಪನೆ ವ ಇತರ ಬನಾಂಗಗಳೊಂದಿಗೆ ಭ್ರಾತೃಭಾವವನ್ನು ಅಭ್ಯಾಸಿಸುವ ತರದಲ್ಲಿ ಪ್ರವರ್ತಿಸಬೇಕಾಗಿಯೂ ಸೂಚಿಸಿದರು ಮಾರಣೇ ದಿನ ಈ ಶಾಲೆಯಲ್ಲಿಯೇ ಇವರ ಹರಿಕೀರ್ತನೆ ಇತ್ತು ಸಂಸಾರವಿಷಯ ತುಕಾರಾಮ ದೇವಭಕ್ತರಿಂದ ರಚಿಸಲ್ಪಟ್ಟ ಅಭಂಗಗಳನ್ನು ಹಾಡಿ, ಜನರಿಗೆ ಇವುಗಳ ಗೂಢಾರ್ಥವನ್ನು ವ್ಯಕ್ತಪಡಿಸಿದರು.

ತಾರೀಕು ೩ನೇ ಭಾನುವಾರ ಶ್ರೀ ರಾಮಕೃಷ್ಣ ವಿದ್ಯಾರ್ಥಿಭವನದಲ್ಲಿ ಬಂಟ ವಿದ್ಯಾರ್ಥಿಗಳ ವರುಷಾವಧಿ ವರ್ಧಂತಿ ಮಹೋತ್ಸವ ನೆರವೇರಿತು ಮ। ರಾ। ರಾ। ಹೈಕೋರ್ಟು ವಕೀಲ ಆ ಸುಬ್ರಾಯ ಪೈಗಳವರು ಅಧ್ಯಕ್ಷರಾಗಿದ್ದರು. ನೆರದ ಸಭಿಕರಲ್ಲಿ ಅನೇಕ ಜನ ಇಂಗ್ಲೀಷು ತಿಳಿಯದ ಬಂಟರಿದ್ದದರಿಂದ ಅಧ್ಯಕ್ಷರವರು ಕನ್ನಡದಲ್ಲಿಯೇ ತಮ್ಮ ಭಾಷಣವನ್ನು ಕೊಟ್ಟರು ಬಂಗಾಳದಲ್ಲಿ ಕಾಯಸ್ಥರು ವೈಶ್ಯರೊಳಗೆ ಒಕ್ಕಲಿಗರು ಹ್ಯಾಗೆ ತಮ್ಮ ಸಮಾಜದ ಅಭಿವೃದ್ಧಿಯನ್ನು ಸಾಧಿಸ ಪ್ರಯತ್ನಿಸುವರೋ ಹಾಗೆಯೇ ದಕ್ಷಿಣ ಕನ್ನಡದ ಬಂಟರವರು ಪ್ರಯತ್ನಿಸುವದು ಶ್ಲಾಘನೀಯವೆಂದೂ, ಆರೋಗ್ಯಧನವೂ ಸಂಪತ್ತೂ ಇವರಿಗಿರುವದರಿಂದ ತಮ್ಮ ಸಂಪತ್ತನ್ನು ಸುಮಾರ್ಗಗಳಲ್ಲಿಯೇ ವಿನಿಯೋಗಿಸುವರೆ ತಕ್ಕ ವಿದ್ಯಾವ್ಯಾಸಂಗವು ಬಂಟರವರಿಗೆ ಅಗತ್ಯವೆಂದಲೂ, ಬಂಟರವರ ಮಾದರಿಯನ್ನನುಸರಿಸಿ ಇತರ ಜಾತಿಗಳು ಸಹಾ ತಂತಮ್ಮ ಅಭಿವೃದ್ಧಿಯನ್ನು ಪ್ರಯತ್ನಿಸಲುದ್ಯುಕ್ತರಾಗಬಹುದೆಂತಲೂ ಅಪ್ಪಣೆಕೊಟ್ಟರು ನಮ್ಮ ಜಿಲ್ಲೆಯ ಬಂಟರವರು ಒಂದು ವಿದ್ಯಾರ್ಥಿಭವನವನ್ನು ಸ್ಥಾಪಿಸುವರೆ ದ್ರವ್ಯಸಹಾಯದ ಬಗ್ಗೆ ಪ್ರಕಟಣೆಗಳನ್ನು ಪ್ರಕಟಿಸಿರುವರು. ಹೇರಳ ದ್ರವ್ಯಸಹಾಯವನ್ನು ಆಯಾ ಕಡೆಯಲ್ಲಿರುವ ಒಕ್ಕಲಿಗರು ವಾಗ್ದಾನ ಮಾಡಿರುವದಾಗಿ ಕೇಳುತ್ತೇವೆ. ಬಂಟರವರ ಈ ಸದುದ್ದೇಶ್ಯಗಳು ಸುಫಲಹೊಂದಲೆಂದು ಅಪೇಕ್ಷಿಸುತ್ತೇವೆ.

ಸೆಶ್ಶನ್ಸ್ 07ನೇ 16ನೇ ಮೊಕದಮೆಯಲ್ಲಿ ಸೆಶ್ಶನ್ಸ್ ಕೋರ್ಟಿನವರು ವಿಧಿಸಿದ ಮರಣದಂಡನೆಯು ಬದಲಾಗಿ ಹೈಕೋರ್ಟಿನವರು ಜೀವಾವಧಿ ಶಿಕ್ಷೆಯನ್ನು ವಿಧಿಸಿರುವರು.

ಅಕ್ಕಿಯನ್ನು ಕೊಳ್ಳೆಹಾಯಿಸಿದ ಪುತ್ತೂರು ಸೆಶ್ಶನ್ ಮೊಕದಮೆಯಲ್ಲಿ ೬ ಜನರಿಗೆ ಶಿಕ್ಷೆ ವಿಧಿಸಿರುವರು. ಮೂ... ವರ್ಷ ಸೀಮೆ ... ಸಾಧಿಸಿದ್ದರಿಂದ ಅವರನ್ನು ವಿಮೋಚಿಸಿರುವರು

ರಾ। ಬಿ. ಕೇಶವ ರಾವ್ ಎಲ್. ಎಮ್. ಎಸ್ ಇವರು ಪ್ಲೇಗಿನ ದಾಕನ್ನು ಹಾಕುವರೆ ನಮ್ಮ ಜಿಲ್ಲೆಗೆ ಮೊನ್ನೆ ದಿನ ಕೆಲಸಕ್ಕೆ ಹಾಜರಾಗಿರುವರು.

ಕಾಸರಗೋಡು. ಕಾಸರಗೋಡು ಟವನಿಗೆ ಶುಮಾರು ೨ ಮೈಲು ದೂರವಿರುವ ಕಾವು ಎಂಬ ಸ್ಥಳದಲ್ಲಿ ವಾಸ್ತವ್ಯ ಕಾವುಭಟ್ಟರೆಂಬ ಒಬ್ಬ ಪ್ರಖ್ಯಾತ ಧರ್ಮಿಷ್ಟರ ಮನೆಯನ್ನು ಪಕ್ಕಾ ಕಳ್ಳರು ನುಗ್ಗಿ ೩ ಬಾಗಲುಗಳ ಬೀಗಗಳನ್ನು ಮುರಿದು ಶುಮಾರು ೫-೬ ಸಾವಿರ ರೂಪಾಯಿಗಳ ನವರತ್ನಗಳಪೈಕಿ ಹೆಚ್ಚು ಬೆಲೆಯುಳ್ಳ ನವರತ್ನ ಕಲ್ಲುಗಳನ್ನೂ ಆಭರಣಗಳನ್ನೂ ಎತ್ತಿಹಾಕಿರುತ್ತಾರೆ. ಇದಲ್ಲದೆ ಪುರಾತನದಲ್ಲಿ ಮಧ್ವಾಚಾರ್ಯರೂ ಶಂಕರಾಚಾರ್ಯರೂ ಆ ಮನೆಗೆ ಕೊಟ್ಟಿರುವ ಮತ್ತು ದಿನಂಪ್ರತಿ ಪೂಜೆ ಮಾಡುತ್ತಿರುವ ಪಾದಕಗಳನ್ನೂ ಎತ್ತಿಹಾಕಿದ್ದಾರಂತೆ. ಇಲ್ಲಿಯ ಸಬ್ ಇನ್ಸ್ಪೆಕ್ಟರರೂ ಪೋಲೀಸಿನವರೂ ಇದರ ಪತ್ತೆ ಕುರಿತು ಹೆಚ್ಚಿನ ಉತ್ಸಾಹದಲ್ಲಿರುತ್ತಾರೆ

8—11—07 ಮುಳಿಯೂರ ಗ್ರಾಮದ ಪಟೇಲರು ಕುಂಞಿ ಕೃಷ್ಣನಾಯರಿಗೆ ಕೋವಿಯಿಂದ ಹೊಡದು ಕೊಲ್ಲಬೇಕೆಂಬದಾಗಿ ಪ್ರಯತ್ನಿಸಿದ ಕುಂಬಾರನಿಗೆ ಪುತ್ತೂರು ಡಿವಿಜನು ಡಿಪ್ಯುಟಿ ಕಲೆಕ್ಟರವರು ೪ ತಿಂಗಳ ಕಠಿಣ ಸಜಾವನ್ನೂ ೧೦ ರೂಪಾಯಿ ಜುಲುಮಾನೆಯನ್ನೂ ವಿಧಿಸಿರುತ್ತಾರೆ

ಈ ತಾಲೂಕಿನ ಅನೇಕ ಗ್ರಾಮಗಳಲ್ಲಿ ವಾಂತಿಭೇದಿ ರೋಗವು ತಲೆದೋರಿ ಹೆಚ್ಚು ಹಾವಳಿಯನ್ನು ಮಾಡುತ್ತಾ ಬರುತ್ತದೆ ಚಂಗಳದಲ್ಲಿ ೧೧ ಜನ ತಗಲಿದವರಲ್ಲಿ ಇಬ್ಬರೂ, ಪೊಕಾರ್ಯಲ್ಲಿ ೨ರಲ್ಲಿ ಒಬ್ಬನೂ, ಕೊಳಿಯೂರಿನಲ್ಲಿ ೫ರಲ್ಲಿ ನಾಲ್ವರೂ, ಎಡರುಳ್ವಾರಿನಲ್ಲಿ ೩ರಲ್ಲಿ ಒಬ್ಬನೂ ಮರಣಪಟ್ಟಿರುವರು

6-11 07 ಇಲ್ಲಿಯ ಮೆಜಿಸ್ಟ್ರೇಟ ಖಚೇರಿಗೆ ಸಮೀಪ ಒಬ್ಬ ಬಿಲ್ಲವನ ಅಂಗಡಿಬಾಗಲಿನಲ್ಲಿ ಸ್ವಲ್ಪ ಕಸ ಕೂಡಿಸಿಟ್ಟದ್ದನ್ನು ಇಲ್ಲಿಯ ಪೋಲೀಸು ಸಬ್ ಇನ್ಸಪೆಕ್ಟರರು ನೋಡಿ ಆ ಬಗ್ಗೆ ಅವನಿಗೆ ಹಲವು ತರದ ನೀಚಮಾತುಗಳಿಂದ ಬೈದು ಕೂಡಲೇ ಆ ಕಸವನ್ನು ತೆಗಿಯಬೇಕೆಂತ ಹುಕುಂ ಕೊಟ್ಟರಂತೆ. ಅಂಗಡಿಬಾಗಲಿಗೆ ಬರುತ್ತಾ ಇರುವಾಗಲೆ ಬೈಯುತ್ತಾ ತೆಗಿಯಬೇಕೆಂತ ಹೇಳಿದ್ದರಿಂದ ಇದನ್ನು ಸಹಿಸಲಾರದೆ ಆ ಬಡ ಅಂಗಡಿಯವನು ತಾವು ಹೀಗೆ ಬೈದರೆ ನಾನು ಆ ಕಸವನ್ನು ತೆಗಿಯಲಾರೆ ಎಂಬದಾಗಿ ಉತ್ತರಕೊಟ್ಟನು ಅಷ್ಟರೊಳಗೆ ಆತನನ್ನು ಸಬ್ ಇನ್ಸ್ಪೆಕ್ಟರರು ಚನ್ನಾಗಿ ಹೊಡೆದು ಬೇರೆ ಪೋಲೀಸಿನವರನ್ನು ಕರದು ಕಸವನ್ನು ಕೂಡಲೇ ತೆಗಿಸಬೇಕೆಂತ ಪೋಲಿಸಿನವರಿಗೆ ಹುಕುಂ ಕೊಟ್ಟು ಸ್ಟೇಶನಿಗೆ ಹೋಗಿ ನ್ಯೂಸೆನ್ಸ ಚಾರ್ಜು ಆತನ ಮೇಲೆ ಏರ್ಪಡಿಸಿ ಮೆಜಿಸ್ಟ್ರೇಟರ ಬಳಿಗೆ ರವಾನಿಸಿರುತ್ತಾರೆಂತೆ. ಅಂಗಡಿಯವನಾದರೊ, ತನ್ನನ್ನು ಕಾರಣವಿಲ್ಲದೆ ಬೈದು ಹೊಡದು ನಿರ್ಬಂಧಪಡಿಸಿರುತ್ತೀರಾಗಿ ಪೋಲೀಸು ಇನ್ಸಪೆಕ್ಟರ ಮೇಲೆಯೂ ಬೇರೆ ಪೋಲೀಸಿನವರ ಮೇಲೆಯೂ ಸರಿಯಾದ ಫಿರ್ಯಾದನ್ನು ಮೆಜಿಸ್ಟ್ರೇಟರ ಮುಂದೆ ದಾಖಲು ಮಾಡಿರುತ್ತಾನೆ.

Please Patronise Indigenous Industry.

DIARIES FOR 1908
IN TWO SIZES.

Note-Book Size As 8.

4 × 5¼ Size As 6

Containing various practical information of ready reference specially useful to lawyers clerk

FOR COPIES APPLY TO—

THE MANAGER,

Sharada Press, Mangalore

THE HINDU SOAP MANUFACTURING CO.

ಹಿಂದೂ ಸೋಪ್‌ಮೆನ್ಯುಫೆಕ್ಚರಿಂಗ್ ಕಂಪೆನಿ.

ಕುಂದಾಪುರ, ದಕ್ಷಿಣ ಕನ್ನಡ.

ಈ ಕಂಪೆನಿಯಲ್ಲಿ ನಾನಾ ವಿಧದ ಸಾಬೂನುಗಳು ತಯಾರಾಗುತ್ತವೆ ಸಾಬೂನು ಅತ್ಯುತ್ತಮವಾದದ್ದು ಕ್ರಯ ಕುಲಭ, ಚರಬಿ ವಿರಹಿತವಾದದ್ದು ಮಾದರಿಗಳೂ, ವಿಶೇಷವಾಹಿತಿಯೂ ಮೆನೇಜಿಂಗ್ ಏಜಂಟರಿಂದ ದೊರಕುವವು ಮಾರಾಟಕ್ಕೆ ಏಜಂಟರಾಗ ಅಪೇಕ್ಷಿಸುವವರು ಬರಕೊಳ್ಳಬಹುದು

ಬಿ. ದತ್ತ ಎಂಡ್ ಬ್ರದರ್ಸ್, ಮೆನೇಜಿಂಗ್ ಏಜಂಟ್ಸ್

ಈಗಲೇ ಸೀಮೆಯಿಂದ S S ಕ್ರೊಸ್ಸವೆಲ್ಸ್ ಸ್ಟೀಮರಿನಲ್ಲಿ

ಎಣ್ಣೆಕೆಂಪು, ಮತ್ತು ತಾಜಾ ಕಪ್ಪು ಸುಪೀರಿಯರ್

ಹಾಸನ್ ವೂಲನ್ ದಾರಗಳು

ಒಂದಿವೆ, ನೋಡಿರಿ.

	ರೂ	ಆ	ಪೈ
ಒಂದು ಪೌಂಡು ವೂಲನ್ ದಾರಕ್ಕೆ W W	3	0	0
ಹತ್ತು ಟೋಪಿಯಾಗುವ ಬಂಡಲ್ S W	3	9	0
ಒಂದು ಟೋಪಿಯಾಗುವ ದಾರಕ್ಕೆ	0	8	0
ಈ ದಾರದಲ್ಲಿ ಒದ ಟೋಪಿ ಡಜನ್ 1ಕ್ಕೆ	13	2	0
ಕೊಕ್ಕೆಸೂಜಿ ಡಜನ್ 1ಕ್ಕೆ	0	14	0
,, ,, 1ಕ್ಕೆ	0	1	6
30 ಇಂಚಿನ ಬನಿಯನ್ 1ಕ್ಕೆ	0	9	0
ಪೇಸ್ಸಿ ಪೋಸ್ಟ್‌ಕಾರ್ಡ್ 100ಕ್ಕೆ	0	4	0

ವಿ ಪಿ ಯಿಂದಲೂ ರವಾನಿಸುತ್ತೇವೆ

ವಿಳಾಸ — ದಿ ವೂಲನ್ ಮಾರ್ಟ್, ಬೋಳಾರ, ಮಂಗಳೂರು

N B ಬೇಕು ಉತ್ತಮ ತರಗತಿಯಲ್ಲಿ ಹಾಸನ್‌ಟೋಪಿ ಹೊಲಿಯುವವರು

R. M. KAMATH'S

SWADESHI BLUE BLAOK INK POWDER

ಆರ್. ಯಂ. ಕಾಮತ್.

ಇವರ ಸ್ವದೇಶಿ ಕಪ್ಪುಶಾಯಿ ಹುಡಿ, ಕಟ್ಟು 1ಕ್ಕೆ 3ಪೈ.

ಈ ಹುಡಿ ಬಿಸೀ ನೀರಿನಲ್ಲಿ ಹಾಕಿದ ಕೂಡಲೇ ಉತ್ತಮವಾದ ಶಾಯಿ ಆಗುತ್ತದೆ. ಹೆಚ್ಚಿಗೆ ತರಿಸಿಕೊಳ್ಳುವವರಿಗೆ ಒಳ್ಳೇ ಕಮ್ಮಿಶನ್ ಶಿಕ್ಕುವದು. ಈ ಶಾಯಿಯು ಕಟ್ಟುಗಳನ್ನು ಒಂದೇ ಸಲ 250ಕ್ಕೆ ಕಡಿಮೆಯಾಗದಂತೆ ತರಿಸಿಕೊಳ್ಳುವವರಿಗೆ ಬಹಳ ಕಮ್ಮಿ ಕ್ರಯಕ್ಕೆ ಶಿಕ್ಕುವದು.

ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆದಲ್ಲಿ ಕ್ರಯದ ವಿಲೇವಾರಿ ತಿಳಿಸಲಾಗುವುದು.

ಸುಗಂಧಭರಿತ ಚೂರ್ಣ—ಶೀಸೆ 1ಕ್ಕೆ 0—1—0. 12 ಶೀಸೆಗಳನ್ನು ತರಿಸಿಕೊಳ್ಳುವವರಿಗೆ ರೂ. 2—4—0ಗೆ ಶಿಕ್ಕುವದು. ಇದು ಹಲ್ಲುಗಳಿಗೆ ಅತೀ ಉತ್ತಮವಾದದ್ದು

ಗಂಡಮಾಲಿಗೆ ಸೌಗಂಧೀ ತೈಲ್ಯ ಬಹಳ ಉತ್ತಮವಾದದ್ದು. ಗುಳ್ಳೆಗಳು ಇದ್ದರೂ ಇರಲಿ, ಅಥವಾ ವ್ರಣ ಉಂಟಾಗಿದ್ದರೂ ಇರಲಿ, ಹಳೆಯದರಿಂದ ಹಿಡಿಕೊಂಡಲ್ಲಿ ಗುಣವಾಗುತ್ತದೆ ಈ ಎಣ್ಣೆ ಉಪಯೋಗಿಸಿಕೊಂಡವರಲ್ಲಿ ಗಂಡಮಾಲೆ ಗುಣವಾಗದೇ ಇದ್ದವರು ಒಬ್ಬರೂ ಇಲ್ಲ. ಶೀಸೆ 1ಕ್ಕೆ 0—12—0 ಒಂದೇ ಸಲ 6 ಶೀಸೆ ತರಿಸಿಕೊಳ್ಳುವವರಿಗೆ 1 ಶೀಸೆ ಉಚಿತವಾಗಿ ಸಿಕ್ಕುವದು.

ಪುಯಿಂಟೇಲ್ ತೈಲ್ಯ—ಶೀಸೆ 1ಕ್ಕೆ 1—0—0 ಅರ್ಧ ಶೀಸೆಗೆ 0—8—0. ಇದು ಮುಖ್ಯವಾಗಿ ಮೇಹ ಇತ್ಯಾದಿಗಳಿಂದ ಉಂಟಾದ ಸಕಲ ತರದ ವ್ರಣಗಳಿಗೆ ಶ್ರೇಷ್ಠವಾದ ಮದ್ದು ಅಲ್ಲದೆ ವಾತದ ನೋವು, ಪೆಟ್ಟು ತಾಗಿದ ನೋವು ಉಳುಕು ಇತ್ಯಾದಿಗಳಿಗೆ ಸಹಾ ಉಪಯೋಗಿಸ ಬಹುದು

ಸುಗಂಧಕಲಾವಿಲಾಸ—ಡಬ್ಬಿ 1ಕ್ಕೆ ರೂ 0—4—0 12 ಡಬ್ಬಿಗಳಿಗೆ ರೂ 2—4—0. ಇದು ಬಹಳ ಪರಿಮಳವುಳ್ಳದ್ದಾಗಿ ಗಂಧದ ಸಂಗಡ ಸೇರಿಸಬಹುದು, ವಸ್ತ್ರ ಇತ್ಯಾದಿಗಳಿಗೆ ಹಚ್ಚಿಕೊಳ್ಳಲಿಕ್ಕೂ ಆಗುತ್ತದೆ

ಕಜ್ಜನಾಶಕ ಚೂರ್ಣ—ಶೀಸೆ 1ಕ್ಕೆ 0—2—0. ಉಪಯೋಗಿಸುವ ವಿವರ ಮದ್ದಿನ ಸಂಗಡ.

ಈ ಮೇಲಿನ ಸಾಮಾನುಗಳನ್ನು ಟಪ್ಪಾಲ ದ್ವಾರಾ ತರಿಸಿಕೊಳ್ಳುವವರಿಗೆ ಕ್ರಯದ ಹೊರತು ವಿ ಪಿ ಖರ್ಚು ಪ್ರತ್ಯೇಕ ಬೀಳುವದು

ವಿಳಾಸ — ಆರ್. ಯಂ ಕಾಮತ್	Address —**R M Kamath**
ಪಂಚಮ್ಹಾಲ್,	*Panchamahal*
ಮುಲ್ಕಿ, ದ ಕನ್ನಡ	*Moolky S Canara*

ಒರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿ.

ಲ್ಯಾಫ್ ಎಶ್ಯೂರನ್ಸ್ ಕಂಪನಿ, ಲಿಮಿಟೆಡ್

ಎಂಬ

ಹಿಂದುಸ್ಥಾನದ ಅಗ್ರಗಾಮಿ ಸ್ವದೇಶಿ

ಜೀವ ವಿಮೇ ಉತ್ತರಿಸುವ ಸಂಘ.

1874ರಲ್ಲಿ ಸ್ಥಾಪಿಸಲ್ಪಟ್ಟಿತು

ಹಿಂದುಸ್ಥಾನದಲ್ಲಿ ಸ್ಥಾಪಿಸಲ್ಪಟ್ಟ ಸಂಘಗಳಲ್ಲಿ ಇದೇ ಮೊದಲಿನದು.

ಕಳೆದ ವರುಷದಲ್ಲಿ ಹೊಸದಾಗಿ ಸೇರಿದವರ ವಾರ್ಷಿಕ ವಿಮೇ ಮುಂಗಡ

ರೂಪಾಯಿ 3,92,999—10—0

ಸಂಘದ ಕೂಡಿಟ್ಟ ಧನವು 2 ಕೋಟಿ 75 ಲಕ್ಷ ರೂಪಾಯಿಗಿಂತಲೂ ಮೀರಿರುತ್ತದೆ ಇಷ್ಟರ ವರೆಗೆ 2,2700,000 ರೂಪಾಯಿಗಿಂತಲೂ ಹೆಚ್ಚಿನ ಹಣವನ್ನು ವಿಮೇದಾರರಿಗೆ ಸಲಾಯಿಸಿರುತ್ತದೆ 1882ನೇ ಇಸವಿ ಮಾರ್ಚಿ 29ನೇ ತಾರೀಕಿನಲ್ಲಿ ಈ ಸಂಘದವರು ಮುಂಬಾಯಿ ಸರಕಾರದವರೊಡನೆ ಮಾಡಿಕೊಂಡ ಕರಾರಿನ ಶರ್ತಗಳಿಗನುಸಾರವಾಗಿ ವಿಮೇದಾರರ ಭದ್ರತೆಗಾಗಿ ಅವರು ತೆರುವ ಎಲ್ಲಾ ಹಣದಲ್ಲಿ ಸೇಕಡಾ 80ರ ಮೇರೆಗೆ ಮೊಬಲಗು ಸರಕಾರದ ಭದ್ರತಾಪತ್ರಗಳಲ್ಲಿ ಠೇವಣಾತಿಯಾಗಿಟ್ಟು, ಮುಂಬಾಯಿ ಸರಕಾರದ ಹುದ್ದೇದಾರರಾಗಿರುವ "ಟ್ರಸ್ಟಿ" ಎಂಬ ಮೊಕ್ತೇಸರರ ವಶದಲ್ಲಿರುತ್ತದೆ ಸದರಿ ಮೊಬಲಗನ್ನು ವಿಮೇ ಹಕ್ಕು ತೀರಿಸುವ ಕಾಲದಲ್ಲಿ ವಿನಹಾ ಇತರ ಕಾಲದಲ್ಲಿ ಕಂಪನಿಯ ಮೇಲ್ವಿಚಾರಕರು ಪಡಕೊಳ್ಳದ ಹಾಗೆ ನಿರ್ಬಂಧ ಉಂಟು ಈ ದೇಶದ ಜನರ ಸ್ಥಿತಿಗತಿಗೆ ಅನುಕೂಲವಾಗುವಂತೆ ಈ ಸಂಘವು ಲೋಕಮಾನ್ಯವಾದ ಸೂತ್ರಗಳ ಮೇಲೆ ಸ್ಥಾಪಿಸಲ್ಪಟ್ಟಿರುತ್ತದೆ.

ವಿಮೇ ಉತ್ತರಿಸಲುಳ್ಳವರು ಸಂಘದ ಸೂಚನಾಪತ್ರಗಳನ್ನೂ ಮಸೂದೆಗಳನ್ನೂ ಕುರಿತು ಕೆಳಗೆ ನಮೂದಿಸಿದ ಯಾವುದಾದರೊಂದು ವಿಳಾಸಕ್ಕೆ ಬರೆದುಕೊಳ್ಳುವುದು

ರಾ.ರಾ. ಡಿ ವಾಸ್ ಮತ್ತು ಮುಗಂದಿರು.	ಮು. ಆರ್. ಪೆಟರ್ಸನ್ ಬ್ರೌನ್,
ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ	ಕಾರಭಾರಿ.
ಜಿಲ್ಲೆಗಳಿಗೆ ಮುಖ್ಯ ಏಜಂಟರು,	**Oriental Life Offices**
ಮಂಗಳೂರು.	*Oriental Buildings*

Messrs. WILLIAM & Co., BOMBAY.

ಗಜಕರ್ಣದ ಮುಲಾಮು

ಈ ಗಜಕರ್ಣದ ಮುಲಾಮು ಹಾಗಿಸುವದರಿಂದ ಎಲ್ಲಾ ತರದ ಖಜ್ಜಿಯು ನಾಶವಾಗಿ ಹೋಗುವದು. ಮೂರು ಸಾರಿ ಹಾಗಿಸುವದರೊಳಗೆ ಗಜಕರ್ಣವು ಹೋಗುವದು. ಇದರಿಂದ ಚರ್ಮವು ಕಪ್ಪಾಗುವದಿಲ್ಲ. ಮತ್ತು ಉರಿಯುವದಿಲ್ಲ ಇದರಿಂದ ಗುಣವು ಕಂಡುಬರುವದಿಲ್ಲವಾದರೆ ಹಣವು ಮರತು ರವಾನಿಸಲ್ಪಡುವದು. ಲಕ್ಷಾನುಲಕ್ಷ ಜನರಿಗೆ ನಮ್ಮ ಈ ಗಜಕರ್ಣವು ಜೀವದಾನ ಕೊಟ್ಟಿರುತ್ತದೆ ಬಿಡ ಬೇಡಿರಿ! ಇಂಥಾ ಸಮಯ ಎಂದಿಗೂ ದೊರಕಲಾರದು ತ್ವರೆ ಮಾಡಿರಿ!

ಡಬ್ಬಿ ಒಂದಕ್ಕೆ ಕಿಮ್ಮತು 0—6—0. ವಿ. ಪಿ. 0—10—0. 12 ಡಬ್ಬಿ ತರಿಸಿಕೊಂಡವರಿಗೆ ಒಂದು ಡಬ್ಬಿ ಉಚಿತ.

ಸುಂದರೀತೈಲ್ಯ 0-8-0 ವಜ್ರಗುಟಿಕ 1-0-0 ಜೀರ್ಣರಸಾಯನ 1-4-0 ಜ್ವರಹಾರಿ 0-12-0 ಖಜ್ಜಿಮುಲಾವು 0-3-0 ದಂತಮಂಜನ 0-2-0. ಕೇಶವರ್ಧಿನೀ ತೈಲ್ಯ 1-0-0. ಚೇಳುಕಡತದ ಮದ್ದು 0-8-0 ಕಫಹಾರಿ 1-4-0 ಕಫನಾಶಕ ಚೂರ್ಣ 0-8-0 ಮೂಲವ್ಯಾಧಿ ತೈಲ್ಯ 0-12-0. ಹೇನುನಾಶಕ ತೈಲ 0-4-0. ಜುಲಾಬು ಮಾತ್ರೆ 0-8-0 ವಿರೇಚನ ಗುಟಿಕೆ 0-8-0 ಕುಸುಮಾರಿ ಗುಟಿಕ 1-0-0 ಮೇಹದ ಮಿಶ್ರಣ 1-0-0.

ಈ ಕಂಪೆನಿಯವರು ಹೆಚ್ಚು ನಮೂನೆಯ ಔಷಧಗಳನ್ನು ತಯಾರಿಸುವದರಿಂದ ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರದಲ್ಲಿ ಒಂದು ಹೊಸ ಕೆಟಲಾಗು ರವಾನಿಸಲ್ಪಡುವದು.

ವಂದೇ ಮಾತರಂ.

ಅಮೃತಾಂಜನ

ಬಾಟ್ಲಿ ಒಂದಕ್ಕೆ ಕಿಮ್ಮತು 0—8—0. ವಿ. ಪಿ. 0—12—0.

ಅಮೃತಾಂಜನ—ಸುಖಾಂಜನ
ಅಮೃತಾಂಜನ—ವರವಾಂಜನ
ಅಮೃತಾಂಜನ—ದಿವ್ಯಾಂಜನ
ಅಮೃತಾಂಜನ—ಸಂಜೀವನ.

ಜಕಮ್ ಮತ್ತು ಘಾಯ, ವಾತ, ಎದೆನೋವು, ಗಂಟ್ಲುನೋವು, ಸಂಧಿವಾತ, ಶೀತ, ಕೆಮ್ಮು, ಮೊದಲಾದ ರೋಗಗಳಿಗೆ ಈ ನಮ್ಮ ಅಮೃತಾಂಜನವು ಅತೀ ಉತ್ತಮವಾದದ್ದು. ಒಂದು ಸಾರಿ ಪರೀಕ್ಷಿಸಿರಿ! ಇದರಿಂದ ಗುಣ ಕಂಡುಬರುವದಿಲ್ಲವಾದರೆ ಹಣ ಹಿಂತಿರುಗಿ ಕೊಡಲ್ಪಡುವದು. ಬಿಡ ಬೇಡಿರಿ!

ಅಮೃತಾಂಜನ—ಶೀತಭಂಜನಿ.
ಅಮೃತಾಂಜನ—ತಕ್ಷಣ ಪರಿಹಾರಿನಿ.
ಅಮೃತಾಂಜನ--ಅಪೂರ್ವದರ್ಶನಿ
ಅಮೃತಾಂಜನ--ಭಂಜಿನಿ ವಿಮರ್ಧಿನಿ

ತಲೆನೋವು, ಶಿರೋಭಾರ, ಅರ್ಧಾಂಗವಾಯು, ಶಿರೋವೇಧನ, ಆನೆಗಾಲು, ಈ ಎಲ್ಲಾ ತರದ ರೋಗಗಳಿಗೆ ಇದು ಒಂದು ಸಂಜೀವನ ಎಂಬದಾಗಿ ಕರೆಯಲ್ಪಡುವದು ಕ್ರಯ ಕಮ್ಮಿ ಗುಣ ಹೆಚ್ಚು ನಮ್ಮ ಅಮೃತಾಂಜನವು ಇಡೀ ಹಿಂದುಸ್ಥಾನದಲ್ಲಿ ಪ್ರಚುರಗೊಂಡಿರುತ್ತದೆ ಲಕ್ಷಾನುಲಕ್ಷ ಜನರಿಗೆ ಗುಣಕೊಟ್ಟ ಈ ನಮ್ಮ ಅಮೃತಾಂಜನವನ್ನು ಪ್ರತಿ ಒಬ್ಬರೂ ತರಿಸಿಕೊಳ್ಳುವಿರಾಗಿ ನಂಬಿದ್ದೇವೆ

Messrs. William & Co.,
GENERAL MERCHANTS,
16 Oak Lane,
Fort, BOMBAY.

Agent, Mangalore:
N. Nowrojee,
Chemist
HAMPANKATTE.

ವಿಳಾಸ:—ವಿಲ್ಲಿಯಮ್ ಮತ್ತು ಕಂಪೆನಿ, 16 ಓಕ್ ಲೇನ್, ಫೋರ್ಟ, ಮುಂಬಯಿ.
ಟೆಲಿಗ್ರಾಫ್ ಎಡ್ರೆಸು—"ಅಮೃತಾಂಜನ", ಮುಂಬಯಿ.

Printed and published by V. S. Kamath at the Mangalore Trading Association's Sharada Press.

ಸ್ವದೇಶಾಭಿಮಾನಿ

ಎಂಬ

ಕನ್ನಡ ಪಕ್ಷ ಪತ್ರವು.

ಪುಸ್ತಕ 1. ಮಂಗಳೂರು, ತಾರೀಕು 1ನೇ ದಸೆಂಬರ 1907 ಸಂಚಿಕೆ 23.

THE

MANGALORE TRADING ASSOCIATION.

ಮಂಗಳೂರು ಟ್ರೇಡಿಂಗ್ ಎಸ್ಸೋಸಿಯೇಶನ್.

ಈ ಕಂಪೆನಿಯಲ್ಲಿ ಅನೇಕ ನಮೂನೆಯ ವಿಲಾಯತಿ ಔಷಧಗಳು, ಒಳ್ಳೇ ಪರಿಮಳ ದ್ರವಗಳು, ಚಾ, ಕೋಕೋ, ಬಿಸ್ಕುಟು, ಸಾಬೂನು, ಚುರುಟು ಮುಂತಾದವುಗಳು ಕಾಗದ ವಗೈರೆ ಲಿಖಾವಟದ ಸಾಮಾನುಗಳು, ಕೋಟನ ಎಲ್ಲಾ ನಮೂನೆಯ ಫೋರ್ಮುಗಳು ಕ್ರಯಕ್ಕೆ ದೊರೆಯುತ್ತವೆ ಇದೇ ಕಂಪೆನಿಗೆ ಸಮ್ಮಂಧಪಟ್ಟ, ಶಾರದಾ ಮುದ್ರಾಲಯದಲ್ಲಿ ವಿವಾಹ ಪತ್ರಿಕೆಗಳು, ಎಲ್ಲಾ ನಮೂನೆಯ ಫೋರ್ಮುಗಳು, ನೋಟೀಸುಗಳು, ಕನ್ನಡ ಮತ್ತು ಇಂಗ್ಲಿಷ ಪುಸ್ತಕಗಳು, ಯೋಗ್ಯರೀತಿಯಲ್ಲಿ ಮುದ್ರಿಸಲ್ಪಡುತ್ತವೆ ಅಂಗಡಿ, ಭಂಡಸಾಲೆ ವಗೈರೆ ವ್ಯಾಪಾರಸ್ಥರ ಬಗ್ಗೆ ತಯಾರಿಸಿದ ವಗ-ಉಪಯೋಗದ ಪುಸ್ತಕಗಳು, ಯಾವಾಗಲೂ ಕ್ರಯಕ್ಕೆ ದೊರೆಯುತ್ತವೆ ಇತರ ಪುಸ್ತಕಗಳನ್ನು ಚಲೋನಮೂಯಲ್ಲಿ ಬ್ಯಾಂಡ್‌ಮಾಡಿಸೋಣಾಗುತ್ತದೆ

ಸ್ವದೇಶಾಭಿಮಾನಿಯಲ್ಲಿ ಪ್ರಕಟಣೆಗಳನ್ನು ಪ್ರಕಟಿಸುವದರ ದರ.

	೧ ಸಾರಿ	೪ ಸಾರಿ	೧೨ ಸಾರಿ	೨೪ ಸಾರಿ
ಇಡೀ ಪಾನು	ರೂ ೬	ರೂ ೨೩	ರೂ ೪೮	ರೂ ೭೨
ಅರ್ಧ ಪಾನು	,, ೩ ೮	,, ೧೨	,, ೨೪	,, ೪೦
ಕಾಲು ಪಾನು	,, ೨ ೮	,, ೮	,, ೧೮	,, ೩೦
ಅರೆಕಾಲು ಪಾನು	,, ೧ ೮	,, ೫	,, ೧೩	,, ೨೨

ಅರೆಕಾಲು ಪಾನುಗಳಿಗಿಂತಲೂ ಸಣ್ಣದಾದ ಪ್ರಕಟಣೆಗಳ ದರವನ್ನು ಮೆನೇಜರರಿಗೆ ಬರದು ತಿಳಕೊಳ್ಳಬೇಕು

ಸ್ವದೇಶಾಭಿಮಾನಿಯ ಚಂದಾಹಣ.

	ರೂ	ಆ
ಟಪ್ಪಾಲು ಹಾಸಲು ಇಲ್ಲದೆ ೧ ವರ್ಷಕ್ಕೆ... ..	೧	೦
ಟಪ್ಪಾಲು ಹಾಸಲು ಸಹಿತ ೧ ವರ್ಷಕ್ಕೆ	೧	೬
,, ,, ,, ಅರ್ಧ ವರ್ಷಕ್ಕೆ	೦	೧೨

ಚಂದಾಹಣವನ್ನು ಮುಂದಾಗಿ ಕೊಡತಕ್ಕದ್ದು ಪ್ರಕಟಣೆಗಳನ್ನೂ ಚಂದಾದಾರಿಕೆಯನ್ನೂ ಕುರಿತು ಈ ಕೆಳಗಿನ ವಿಳಾಸಕ್ಕೆ ಬರೆಯುವದು.

ವಿಳಾಸ —ಮೆನೇಜರ್ ಶಾರದಾ ಛಾಪಖಾನೆ, ಮಂಗಳೂರು

INDIGENOUS AYURVEDIC PHARMACY OF

K. VENKAPPAYAR & Co.

ಕೆ. ವೆಂಕಪ್ಪಯ್ಯರ್ ಎಂಡ್ ಕೊ.

ಇವರ ಮಂಗಳೂರು ರಥಬೀದಿಯಲ್ಲಿರುವ

ಸ್ವದೇಶಿ ಆಯುರ್ವೇದಿಕ್ ಔಷಧಾಲಯದಲ್ಲಿ ತಯ್ಯಾರಿಸಲ್ಪಟ್ಟ

ಮೇಹಕುಲಾಂತಕ ಗುಳಿಗೆ ಈ ಮಾತ್ರೆಯು ಬಹಳ ಪೂಜ್ಯವಾದದ್ದು, ಇದು ಎಲ್ಲಾ ತರದ ಮೇಹರೋಗಗಳನ್ನು ಸಿಂಹವು ಮೃಗಗಳನ್ನು ವಧಿಸುವಂತೆ ತಕ್ಷಣವೇ ನಾಶಪಡಿಸುತ್ತದೆ ಇದನ್ನು ಕಫಪ್ರಕೃತಿಯುಳ್ಳ ಸ್ಥೂಲದೇಹದವರು ಲೋಧ್ರಾಸವವೆಂಬ ಔಷಧಿಯಲ್ಲಿಯೂ, ವಾತಪ್ರಕೃತಿಯವರು ದಶಮೂಲ ಅರಿಷ್ಟದಲ್ಲಿಯೂ, ಪಿತ್ತಪ್ರಕೃತಿಯವರು ನಾಮದಬೇರು ಕಷಾಯ ಯಾ ಮಂಜಿಷ್ಠಾದಿ ಆಸವದಲ್ಲಿ ತೆಗದುಕೊಂಡರೆ ಅವರವರಿಗಿರತಕ್ಕ ಎಲ್ಲಾ ಮೇಹರೋಗಗಳು ಮೂರು ದಿವಸಗಳೊಳಗೆ ವಾಸಿಯಾಗುತ್ತದೆ 25 ಮಾತ್ರೆಯುಳ್ಳ ಸೀಸೆ 1ಕ್ಕೆ 5–8–0

ರಾಮಬಾಣ ತೈಲ ಈ ತೈಲವು ಮಕ್ಕಳ ಚೇಷ್ಟೆ ಅಪಸ್ಮಾರಕ್ಕೆ ದಿವ್ಯೌಷಧವಾಗಿರುತ್ತದೆ ಇದನ್ನು ಸಂದು ಸಂದುಗಳಿಗೆ ಮುಟ್ಟಿಸಿ ಪ್ರಾಯದ ಅವಸ್ಥೆ ಪ್ರಕಾರ ಹೊಟ್ಟೆಗೆ ಸಹ ತಕೊಂಡರೆ 13 ತರದ ಸನ್ನಿಯನ್ನೂ, 5 ವಿಧದ ಗ್ರಹನನ್ನೂ 18 ವಿಧದ ಅಪಸ್ಮಾರವನ್ನೂ ಹುಟ್ಟುವಾಗ್ಯೆ ಇರುವ ಹಲ್ಲನ್ನೂ, ಪಕ್ಕೆಗಳು ಹೂರುವದನ್ನೂ, ಕಫದ ಉಪದ್ರವನ್ನೂ ಕೈಕಾಲು ನಡುಗುವದನ್ನೂ, ನೇವಸ, ಎಕ್ಕಳು, ಕೆಮ್ಮು, ಜ್ವರ, ಪೈಮುರಿಕೆ ತೆಗಿಯುವಂಥಾದ್ದನ್ನೂ, ಗರ್ಭಿಣಿಗೆ ಹಕ್ಕಿ ದಾಟಿದ ರೋಗಕ್ಕೂ, ಮಕ್ಕಳಿಗೆ ವರ್ಣ ಹಗರುವದಕ್ಕೂ, ಹೊರಕಡೆ ಹೋಗುವದಕ್ಕೂ, ಭೂತ ಪ್ರೇತ ಪಿಶಾಚ ಬಾಧೆಗೂ ಅತಿ ಹಿತಕರದ್ದಾಗಿರುತ್ತದೆ. ಮತ್ತು ಮಕ್ಕಳ ಚೇಷ್ಟೆಯು ಮಕ್ಕಳಿಗೆ ಇದಕ್ಕಿಂತ ಮೇಲಿನ ಔಷಧಿ ಈ ಭೂಲೋಕದಲ್ಲಿರಲಿಕ್ಕಿಲ್ಲ ಎಂತ ಖಂಡಿತವಾಗಿ ಹೇಳುತ್ತೇವೆ. ಸೇವಿಸಿದ ಯಾ ಹಚ್ಚಿದಕೂಡಲೇ ಗುಣಸಿಕ್ಕುವಂಥಾದ್ದು. ಇದಕ್ಕೆ ಶೀಸೆ 1ಕ್ಕೆ 1-0-0.

ದಶಮೂಲ ಅರಿಷ್ಟ. ಈ ಅರಿಷ್ಟವನ್ನು ಸೇವಿಸಿದರೆ ಗ್ರಹಣಿ, ಜ್ವರ, ಶ್ವಾಸಕಾಸ, ಗುಲ್ಮ, ಭಗಂಧರ, ವಾತರೋಗ, ಕ್ಷಯ, ಛರ್ಧಿ, ಪಾಂಡು, ಕಾಮಿಲ, ಕುಷ್ಟ, ಅರ್ಶಸ್ಸು, ಮೇಹ ಮದಹತ್ಯ, ಉದರರೋಗ, ಅಸನಜ್ವರ, ಮೂತ್ರಕೃಚ್ಛ್ರ, ಧಾತುಕ್ಷಯ, ಕೃಶತ್ವ, ಮೊದಲಾದವುಗಳನ್ನು ನಾಶಪಡಿಸಿ ಸೌಖ್ಯಪಡಿಸುವದರ ಶಿವಾಯಿ ಬಾಣಂತಿರೋಗಕ್ಕೆ ಅತಿ ಹಿತಕರವಾದ್ದಾಗಿರುತ್ತದೆ ಪ್ರಸವ ಆದನಂತರ ಹೆಂಗಸರು ಬೇರೆ ಯಾವ ಔಷಧಿಯನ್ನು ತಕ್ಕೊಳ್ಳದೆ ಇದನ್ನು ಮಾತ್ರ ಸೇವಿಸಿದರೆ ಯಾವ ರೋಗದ ಉಪದ್ರಗಳಿಲ್ಲದೆ ಸುಖವನ್ನು ಹೊಂದುವರು. ಇಡೀ ಬಾಟ್ಲಿ 1ರ ಕ್ರಯ ರೂ. 4–0–0.

ಇನ್ನು ಬೇರೆ ನಮೂನೆಯ ಔಷಧಿಗಳು ಅಗತ್ಯವಿದ್ದವರಿಗೆ ಅವರು ನಮಗೆ ತಿಳಿಸಿದ್ದಲ್ಲಿ ಅವರವರಿಗೆ ಬೇಕಾದ ತರದಲ್ಲಿ ಸಂಗ್ರಹಿಸಿ ತಯಾರಿಸಿ ಕೊಡುವೆವು. [illegible] ರಕ್ಕೆ ನಮಗೆ ಬರದ್ದಲ್ಲಿ ನಮ್ಮ ಕೆಟಲಾಗನ್ನು ಕಳುಹಿಸಿಕೊಡುವೆವು.

— K. V[illegible]

...ಯವರ ಟೋನಿಕ (ಬಲಕಾರಿ) ಗುಳಿಗೆಗಳು.

(ವೀರ್ಯ ದುರ್ಬಲ್ಯಕ್ಕೆ).

ಸ್ವಪ್ನಸ್ಖಲನ, ವೀರ್ಯನಾಶ ಮತ್ತು ಯುವಕರ ಇತರ ರೋಗಗಳಿಗೆ ಇದೊಂದೇ ಸಿದ್ಧೌಷಧವೆಂದು ಹೆಸರ್ಗೊಂಡಿದೆ. ಸ್ತ್ರೀಪುರುಷರ ಮೆದುಳಿಗೆ ಪುಷ್ಟಿ ಕೊಟ್ಟು ಕ್ಷೀಣವಾದ ದೇಹವನ್ನು ಬಲಪಡಿಸುತ್ತದೆ.

ಇದು ವಾತ, ಸೊಂಟ ನೋವು, ತಲೆ ತಿರುಗುವಿಕೆ, ವಾಯು, ಕೈಕಾಲು ಮರಗಟ್ಟುವದು, ಇವೇ ಮುಂತಾದ ಅನೇಕ ರೋಗಗಳನ್ನೂ ವಾಸಿ ಮಾಡುವದು. ಮೆದುಳುಶಕ್ತಿಯನ್ನು ಹೆಚ್ಚಿಸುವದರಿಂದ ವಿದ್ಯಾರ್ಥಿಗಳಿಗೆ ಅತ್ಯುಪಯೋಗಕರವಾದದ್ದು. ಈಗುಳಿಗೆಗಳು ಹೆಂಗಸರ ದುರ್ಬಲತೆಯನ್ನು ಹೋಗಲಾಡಿಸಿ ಗರ್ಭಕೋಶವನ್ನು ಬಲಪಡಿಸಿ ಬಂಜೆಯೆನಿಸಿದವಳಿಗೆ ಗರ್ಭದಾನ ಮಾಡುವವು. ಇವುಗಳಿಂದ ಅಸ್ಥಿಜ್ವರ, ಕ್ಷಯರೋಗಗಳು ಗುಣವಾಗುವವು.

ಚಿಕಿತ್ಸೆ. ದಿನಕ್ಕೆ ಎರಡಾವರ್ತಿ ಒಂದು ಯಾ ಎರಡು ಗುಳಿಗೆಗಳನ್ನು ಹಾಲು ಯಾ ನೀರಿನಲ್ಲಿ ಸೇವಿಸುವದು. ಆಹಾರವು ಆರೋಗ್ಯಕರವೂ ಪುಷ್ಟಿಕರವೂ ಆಗಿರಬೇಕು

ಕ್ರಯ—೩೬ ಗುಳಿಗೆಗಳ ಒಂದು ಬಾಟ್ಲಿಗೆ ರೂ 1–0–0 ಎಲ್ಲಾ ವೈದ್ಯಶಾಲೆಗಳಲ್ಲಿ ದೊರಕುವದು

ಏಜೆಂಟರು —ವಾಸನ್ಜಿ ನಾಥೂ ಎಂಡ್ ಕೊ,

ವಿನ್ಸರ ಸುವರ್ಣ ಬಿಂದುಗಳು.

ಸ್ತ್ರೀ ಪುರುಷರ ಮೂತ್ರವ್ಯಾಧಿಗಳನ್ನು ಶೀಘ್ರವಾಗಿ ಗುಣ ಮಾಡುವವು

ಸೇವನಾಕ್ರಮ ದಿನಕ್ಕೆ ಮೂರಾವರ್ತಿ ಒಂದು ಟೀಸ್ಪೂನ (ಸಣ್ಣ ಚಮ್ಚುವ)ನ್ನು ಹಾಲು ಯಾ ನೀರಿನಲ್ಲಿ ತೆಕ್ಕೊಳ್ಳುವದು ಕ್ರಯ ರೂ 1—8—0

ವಿಕ್ರಯಿ —ವಾಸನ್ಜಿ ನಾಥೂ ಎಂಡ್ ಕೊ.

ಮಾಲೇಕ ಎಗ್ರ್ಯೂ ಮಿಕ್ಸ್ಚರ

ಸರ್ವ ಜ್ವರ ವಿನಾಶಕ

ಅಗ್ನಿಮಾಂದ್ಯ ಪಿತ್ತ, ಮುಂತಾದ ಕಾರಣಗಳಿಂದುಂಟಾದ ಯಾವ ಜ್ವರವನ್ನಾದರೂ ಒಂದೇ ಸೇವನೆಯಿಂದ ಇಳಿಸುವದು. ಮೂರ ಸಾರಿ ಸೇವಿಸಿದನಂತರ ಜ್ವರವು ಪೂರ್ಣನಾಶವಾಗುವದಲ್ಲದೆ ಎಂದಿಗೂ ಮರಳದು

ಶೀತಜ್ವರ, ಉಷ್ಣಜ್ವರ ಮೂರು ನಾಲ್ಕು ದಿವಸಕ್ಕೊಮ್ಮೆ ಬರುವ ಜ್ವರ ಗಟ್ಟಿದಜ್ವರ ಇತ್ಯಾದಿ ಎಲ್ಲಾ ಜ್ವರಗಳೂ, ತತ್ಕಾಲವೇ ಉಪಯೋಗಿಸುವದರಿಂದ ಪ್ಲೇಗುಜ್ವರವೂ ಕೂಡ ಗುಣವಾಗುವದು ಮಲೆನಾಡುಗಳಲ್ಲಿರ ವವರಿಗೂ ಪಯಣಿಕರಿಗೂ ಅವಶ್ಯಕರವಾದ್ದು

ಕ್ರಯ 12 ಆಣೆ ಎಲ್ಲಾ ವೈದ್ಯಾಲಯಗಳಲ್ಲಿ ದೊರಕುತ್ತದೆ

ಏಜೆಂಟರು —ವಾಸನ್ಜಿ ನಾಥೂ ಎಂಡ್ ಕೋ

ವಿನ್ಸ್ ಗಜಕರ್ಣದ ಮುಲಾಮು ರಜಿಸ್ಟರ್ಡ ನಂಬ್ರ 106/1895

ಗಜಕರ್ಣಕ್ಕೆ ಸಿದ್ಧೌಷಧ ರೋಗ ನಿರ್ಮೂಲವಾಗುವದು ಮೂರೇ ಸಲ ಹಚ್ಚುತ್ತಲೇ ಗುಣವಾಗುತ್ತದೆ ಮರಳಿ ಮೊಳೆಯುವದೇ ಇಲ್ಲ ಜ್ವಾಲೆ ಇಲ್ಲ ಇಂಡ್ಯಾದಲ್ಲಿಯೂ ಹೊರಪದೇಶಗಳಲ್ಲಿಯೂ ವರುಷಂಪ್ರತಿ ಸಾವಿರಾರು ಪೆಕೇಟು ಬಿಕರಿಯಾಗುತ್ತದೆ. ತಯಾರು ಮಾಡುವ ಒಂದೇ ಕಾರ್ಖಾನೆ

ವಾಸನ್ಜಿ ನಾಥೂ ಎಂಡ್ ಕೋ, ಮುಂಬಯಿ

ಏಜೆಂಟರು. **Mangalore Trading Association, Mangalore.**

ಮೆಸರ್ಸ್. **ಕೂಬಾಜಿ ಭೋಜಾ ಎಂಡ್ ಕೊ, ಬಾರಾಬಜಾರ್ ಕಲ್ಕತ್ತ**

ಬಹಿರುಪಯೋಗಕ್ಕೆ ಮಾತ್ರ ವಿನ್ಸರ ಎಂಬ್ರೋಕೇಶನ

ವಾತ, ನರಗಳ ಬೇನೆ, ಸಂದುವಾತ, ಉಳುಕು, ಘಾಯ, ಸೊಂಟ ನೋವು, ಮೈಬೇನೆ, ಕೈಕಾಲು ನೋವು, ಎದೆ ನೋವು, ಶೀತ, ಗಂಟು ಹಿಡಿಯುವದು, ಮುಂತಾದ ಶರೀರದ ಎಲ್ಲಾ ತರದ ನೋವುಗಳಿಗೆ ಸಿದ್ಧೌಷಧ ನೋವಿದ್ದಲ್ಲಿ ದಿನಕ್ಕೆ ಒಂದು ಯಾ ಎರಡು ಸಾರಿ ಹಚ್ಚುವದು. ಕ್ರಯ 8 ಆಣೆ.

ಎಡ್ರೆಸು.—**Vasanjee Nathu & Co.**
111—113 Market Bombay.

...ಕಂಪನಿ ಲಿಮಿಟೆಡ್

ಹೆಡ್ ಆಫೀಸು—ವಿಶಾಖಪಟ್ಣ, ಮದ್ರಾಸು ಸಂಸ್ಥಾನ.

ಕೇವಲ ದೇಶೀಯ ಸಂಸ್ಥೆ.

ಫಂಡು ರೂಪಾಯಿ 100,000.

ಪ್ರೊವಿಡೆಂಟ್ ಕಂಪೆನಿಗಳಲ್ಲಿ ಈ ತರದ ಕಂಪೆನಿ ಬೇರೆ ಇಲ್ಲ. ನಡುವಂತರಿಗೂ ಬಡವರಿಗೂ ಎಂದೂ **ಕೇಳದ ಪ್ರಯೋಜನವೀಯುತ್ತದೆ.** ಪ್ರಬಲರೂ ಸಾಹಸಿಕರೂ ಆದ ಸಬ್ ಏಜೆಂಟರೂ **ಫಾಯಿಷ್ ಮಾಡುವವರೂ ಕಂಪೆನಿಗೆ ಬೇಕು.**

ಕಂಪೆನಿಯು ಅದಷ್ಟು ಕಮ್ಮಿ ದರದಲ್ಲಿ ೧೦೦ ರೂಪಾಯಿಗಳಿಂದ ೧೦೦೦ ರೂಪಾಯಿ ವರೇಗಿನ ಮೊಬಲಗುಗಳಿಗೆ ಜೀವ ಉತ್ತರಾಯಿಸುವದು ಕಮಿಶನ್ ಧಾರಾಳ ದೊರಕುವದು ಹೊಸ್ಪಿಟಲ್ ಅಸಿಸ್ಟಾಂಟರೂ ವಿಮೇದಾರರನ್ನು ಪರೀಕ್ಷಿಸಬಹುದು

ಬರುವ ಜನ್ಮದಿನಕ್ಕಾಗುವ ಪ್ರಾಯ	ಲಾಭ ಸಮೇತ ಸಿಕ್ಕುವ ವಿಮೇಗೆ 100 ರೂಪಾಯಿಯ ವರ್ಷಂಪ್ರತಿ ಕಂತು ದರ.		ಲಾಭ ಸಮೇತ ಸಿಕ್ಕುವ ವಿಮೇಗೆ 1000 ರೂಪಾಯಿ ಮೇಲಿನ ವರ್ಷಂಪ್ರತಿ ಸ್ಪೆಶಲ್ ದರಗಳು	
	ಮರಣಾಂತ	ಹತ್ತು ವರ್ಷದಲ್ಲಿ ಹಣ ಸಿಕ್ಕುವದು	ಮರಣಾಂತ	ಹತ್ತು ವರುಷದಲ್ಲಿ ಹಣ ಸಿಕ್ಕುವದು
20	2– 8–0	9–15–0	21– 8–6	99– 0–0
25	2–13–0	10– 4–0	24– 0 0	99– 8–0
30	3– 4–0	10 –9–0	27– 2–0	100– 1–0
35	3–10–0	10–14–0	31– 4–0	100–15–0
40	4–.2–0	11– 3–0	36–10–0	102– 5 0
45	4 14–0	11– 8–0	43–12–0	104– 7–0
50	6 8–0	11–13–0	50 10–0	107–12–0

200ರೂಪಾಯಿ ಯಾ 900ರ ವರೇಗಿನ ಮೊಬಲಗಿನ ದರಗಳು 100 ರೂಪಾಯಿಯ ದರಗಳನ್ನು 2ರಿಂದ ಮುಂತಾಗಿ 9ರ ವರೇಗೆ ಗುಣಿಸಿ, ದಾವಾಶಾಯದಲ್ಲಿ ಕಂಡುಹಿಡಿಯುವದು ಪ್ರಕಟಣೆಗೆ ತಪಸೀಲುಗಳನ್ನು ಕೆಳಗಿನ ವಿಳಾಸಕ್ಕೆ ಬರದು ತರಿಸಿಕೊಳ್ಳುವದು.

ಎಲ್ಲೂರ ರಾಮರಾವ್,
ಉತ್ತರ ದಕ್ಷಿಣಕನ್ನಡ ಜಿಲ್ಲೆಗಳ ಜನರಲ್ ಏಜೆಂಟ್,
ಆಶ್ವನಿ ಲ್ಯಾಫ್ ಎಸ್ಯೂರೆನ್ಸ ಕಂಪೆನಿ
ಕಾಸರಗೋಡು, ದ ಕನ್ನಡ

ಜೆ. ಎಸ್. ಸೋಜ ಎಂಡ್ ಕಂಪೆನಿ

ದೃಷ್ಟಿಚಕ್ರಗಳನ್ನು ಮಾಡಿ ವಿಕ್ರಯಿಸುವ ನಂಬಿಕೆಯುಳ್ಳ ಫರ್ಮಿನ ಏಜೆಂಟರು

ಪ್ರಖ್ಯಾತಿಪಟ್ಟ ಸಂಪೂರ್ಣ ಪೆಬ್ಲ್ ಎಂಬ ಗುರುತು ಕಲ್ಲು ಕನ್ನಡಿಯಿಂದ ಮಾಡಿಸಿಟ್ಟ ದೃಷ್ಟಿಚಕ್ರಗಳನ್ನು ಹೆಚ್ಚಿನ ಸಂಗ್ರಹವಿಟ್ಟು, ದೃಷ್ಟಿ ಶಕ್ತಿಯನ್ನು ಸರಿಯಾಗಿ ಪರೀಕ್ಷಿಸಿ ವಿಕ್ರಯಿಸುತ್ತಾರೆ. ದೃಷ್ಟಿಯ ಅಶಕ್ತಿಯುಳ್ಳವರು ತಮ್ಮ ದೃಷ್ಟಿಯನ್ನು ಪರೀಕ್ಷಿಸಗೆ ಅಸಡ್ಡೆ ಮಾಡಿ ಬಾಜಾರಿನಲ್ಲಿ ಶಿಕ್ಕುವ ಕಮ್ಮಿ ಕ್ರಯದ ಕನ್ನಡಕಗಳನ್ನು ತಕ್ಕೊಂಡು ಉಪಯೋಗಿಸಿದರೆ ಕಣ್ಣಿನ ತ್ರಾಣವು ಕುಂದಿಹೋಗುವಂಥಾ ಅಪಾಯದಲ್ಲಿ ಬೀಳುತ್ತಾರೆ ಹೆಚ್ಚಾಗಿ ಅನೇಕ ಮನುಷ್ಯರ ಕಣ್ಣುಗಳ ದೃಷ್ಟಿಯು ಒಂದಕ್ಕೊಂದು ಸರಿ ಇಲ್ಲದರಿಂದ ಅದನ್ನು ಜಾಗ್ರತೆಯಾಗಿ ಪರೀಕ್ಷಿಸಿ ಅದಕ್ಕೆ ತಕ್ಕದ್ದಾದದನ್ನು ಆರಿಸಿ ತೆಗಿಯುವಂಥಾದ್ದು ಮುಖ್ಯ ಸಂಗತಿಯಾಗಿರುತ್ತದೆ ಬಾಜಾರಿನಲ್ಲಿ ಶಿಕ್ಕುವ ದೃಷ್ಟಿ ಚಕ್ರಗಳು ನಿಜವಾದ ಪೆಬ್ಲ್ ಅಲ್ಲವಾದ್ದರಿಂದಲೂ, ದೃಷ್ಟಿಯ ತಾರತಮ್ಯ ಅನುಭವ ಮಾಡಿ ಆರಿಸಿಕೊಡುವರೆ ತಿಳಿಯದವರಾದರಿಂದಲೂ, ಅವುಗಳ ಉಪಯೋಗವು ಸ್ವಲ್ಪ ಸಮಯದೊಳಗೆ ಕಣ್ಣುಗಳಿಗೆ ಕೆಡಕು ಉಂಟು ಮಾಡುವದು.

ಶರ್ತ:—ತಮ್ಮ ದೃಷ್ಟಿಯನ್ನು ಪರೀಕ್ಷಿಸಲಪೇಕ್ಷಿಸುವವರು ಪ್ರತಿ ದಿನ ಮಧ್ಯಾನ್ಹ ಘಂಟೆ 2ರಿಂದ ಶ್ಯಾಮ ಘಂಟೆ 6ರ ವರೇಗೆ ನಮ್ಮ ಆಫೀಸಿಗೆ ಬಂದಲ್ಲಿ, ಚಾರ್ಜು ಇಲ್ಲದೆ ದೃಷ್ಟಿ ಪರೀಕ್ಷಿಸಿ ಆಲೋಚನೆ ಹೇಳೋಣಾದೀತು. ಮುನಿಸಿಪಾಲಿಟಿಯೊಳಗೆ ಗಿರ್ಾಕಿಯವರ ಮನೆಗೆ ಬರಬೇಕಾದರೆ ಪ್ರತಿಸಾರಿ ರೂ. 1 ಫೀಸು ಕೊಡಬೇಕಾದೀತು.

ಜೆ. ಎಸ್ ಸೋಜ ಎಂಡ್ ಕಂಪೆನಿ,
ಮೂಲ ಬಾಬಾ ಬುಡಾನ್ಗಿರಿ ಕಾಫಿ ಪುಡಿ ತಯಾರಿಸುವವರು,
ಹಂಪನಕಟ್ಟಾ, ಮಂಗಳೂರು, ದಕ್ಷಿಣ ಕನ್ನಡಾ.

ಸ್ವದೇಶಾಭಿಮಾನಿ.

ಮಂಗಳೂರು, ತಾರೀಕು 1ನೇ ಡಿಸೆಂಬರ 1907.

ಲಾಲಾ ಲಾಜಪತರಾಯಿ ಮತ್ತು ಸರದಾರ ಅಜೀತಸಿಂಗರ ಬಿಡುಗಡೆ.

ಲಾಲಾ ಲಾಜಪತರಾಯರವರನ್ನೂ ಅಜಿತಸಿಂಗರನ್ನೂ ಸೆರೆಯಿಂದ ಬಿಡುಗಡೆ ಮಾಡಿ ಕಳದ ತಿಂಗಳ ೧೧ನೇ ತಾರೀಕಿನಲ್ಲಿ ಲಾಹೋರಿಗೆ ತಪ್ಪಿಸಿದ ವರ್ತಮಾನವನ್ನು ವಾಚಕರಲ್ಲನೇಕರು ತಿಳಿದು ಆನಂದಪಟ್ಟಿರ ಬೇಕು. ಆರುತಿಂಗಳ ಮೊದಲು ಮೇ ೯ನೇ ತಾರೀಕಿಗೆ ಲಾಜಪತರಾಯರವರನ್ನು ಒಮ್ಮಿಂದೊಮ್ಮೆ ಹದ್ದುಪಾರು ಮಾಡಿದ ಸುದ್ದಿ ಕೇಳಿ ಹಿಂದೂ ಜನಾಂಗವು ಇದೊಂದು ಇದೇ ದೇಶಕ್ಕೊದಗಿದ ಆಪದೆಸೆಯೆಂದು ಕಳವಳಪಟ್ಟಿತು. ಸಾಮಾನ್ಯ ಕೈದಿಗೆ ಮಾಡುವ ವಿಚಾರಣೆಯಾದರೂ ಆ ಮಹಾನುಭಾವರಿಗೆ ದಯಪಾಲಿಸಬೇಕೆಂದೂ ೧೮೧೮ನೇ ವರ್ಷದ ಕಾನೂನು ಆಗಿನ ಸಮಯಾನುಸಾರವಾಗಿ ಏರ್ಪಡಿಸಿದ್ದಾಗಿ ಪ್ರಕೃತ ವಿದ್ಯಮಾನಗಳಿಗೆ ಸಲ್ಲದೆಂದೂ ಜನರು ಮೊರೆಯಿಟ್ಟರು. ಇದಕ್ಕೆ ತತ್ವಜ್ಞಾನಿಯೂ, ವಿಚಾರಶೀಲರೂ, ಪಂಡಿತರೂ ಆದ ಘನಹೊಂದಿದ ಮೋರ್ಲೆ ಸಾಹೇಬರು, ಅಂದದ್ದೇನೆಂದರೆ "ಇಂತಹ ರಾಜದ್ರೋಹಿಗಳನ್ನು ತನಿಖೆ ಮಾಡಿದರೆ ತನಿಖೆಕಾಲದಲ್ಲಿ ಬ್ಯಾರಿಸ್ಟರು ಮಾಡುವ ಭಾಷಣಗಳಿಂದ ರಾಜದ್ರೋಹವ ಮತ್ತೂ ಹರಡುವದು. [illegible] ಕಾನೂನು ಪ್ರಕಾರ ತನಿಖೆ ಮಾಡದೆ ಹದ್ದುಪಾರು ಮಾಡುವ [illegible] ಸರಕಾರಕ್ಕಿದೆ". ಆದರೂ ದೀನ ಹಿಂದುಸ್ಥಾನದ ಮಿತ್ರರಾದ ಕೇಯರ್ ಹಾರ್ಡಿ, ಸರ್ ಹೆನ್ರಿ ಕಾಟನ್ ಮೊದಲಾದ ಕೆಲ ಗೃಹಸ್ಥರು [illegible] ಲಾಜಪತರಾಯರವರ [illegible] "[illegible]"ವನ್ನು ಕೇಳಿ ಪ್ರಶ್ನೆಮಾಡಿದರು. [illegible] ಇಂಥಾ ಕೃತ್ಯಕ್ಕೆ [illegible] ಆ ಮಹಾನುಭಾವರು [illegible] ಪ್ರಕಟಿಸಿ [illegible] ಸರಕಾರ [illegible] [illegible] ಪ್ರಶ್ನೆ [illegible] "[illegible]" [illegible] ಲಾಜಪತರಾಯರವರ [illegible] [illegible] ಮತ್ತು [illegible] ಇದರಿಂದ [illegible] ಅವರು ದೇಶವತ್ಸಲರಾಗಿದ್ದು ಭಾರತೋನ್ನತಿ [illegible] ಕೆಲವು ಆಂಗ್ಲೋ ಇಂಡಿಯನ್ ಪತ್ರಗಳ [illegible] ಇವರ [illegible] ವ್ಯಕ್ತವಾಯಿತು. [illegible] ಸರಕಾರಕ್ಕೆ [illegible] ನೂನನ್ನು ನೋಡಿ [illegible] ಈ ಸಂದರ್ಭವನ್ನು ಕಂಡು [illegible] ಕರು ಲಾಜಪತರಾಯಿ"ಯೆಂದು ಸರಕಾರವನ್ನು ಬೆದರಿಸಿದರು. ಅಹಾ! ೧೮೧೮ನೇ ಕಾಟಕಾಯಿಯಲ್ಲಿ ಸಿಕ್ಕಿರು ಸರಕಾರಕ್ಕೆ ನೆರವಾಗಿದ್ದರು. ಇಂದು ಅವರೇ ಎದುರು ನಿಂತರು ಏನು ಸಂಗತಿ? ಬಂಗಾಳವೆಂತೂ ಸರಕಾರಕ್ಕೆ ಪ್ರತಿಕೂಲವಾಗಿದೆ. ಹೀಗೆಂದು ಊಹಿಸಿ ಸರಕಾರದವರು ಇದನ್ನು ನಿವಾರಿಸುವದಕ್ಕೆ ಈ "ಕಾಟಕಾಯಿ"ಯ ಮುಖ್ಯಸ್ಥನನ್ನೇ ಹದ್ದುಪಾರು ಮಾಡುವದು ಅಗತ್ಯವೆಂದು ಮೋರ್ಲೆ ಸಾಹೇಬರಿಗೆ ತಿಳಿಸಿದರೆ ತನ್ನ ಕಾಲದಲ್ಲಿ ಹಿಂದುಸ್ಥಾನದಲ್ಲಿ ದಂಗೆಯಾಗಿ ರಕ್ತಪಾತವಾಯಿತೆಂದು ಅಪಯಶಸ್ಸು ಬರುವದಕ್ಕಿಂತಲೂ ಒಬ್ಬನನ್ನು ಗಡಿಪಾರುಮಾಡುವದು ಲೇಸೆಂದು ಅವರು ಎಣಿಸುವದು ಸಹಜವಲ್ಲವೇ? ಲಾಜಪತರಾಯರವರನ್ನು ಹದ್ದುಪಾರು ಮಾಡಿದ ನಂತರ ಸಂಭವಿಸಿದ ಸಂಗತಿಗಳಿಂದಲೂ ಮೋರ್ಲೆ ಸಾಹೇಬರು ಸಮರ್ಪಕವಾದ ಸಮಾಧಾನ ಹೇಳದಿದ್ದರೂ ನಾವು ಹೀಗೆ ಊಹಿಸಬೇಕಾಗಿದೆ. ತಕ್ಕ ಕಾರಣಗಳಿಲ್ಲದೆ ಮೋರ್ಲೆಯಂತಹ ಮಹಾತ್ಮರು ಇಂಥಾ ಕೃತ್ಯವನ್ನು ಸೆಂಕ್ಷನ್ ಮಾಡಲಿಕ್ಕಿಲ್ಲವೆಂದು ಅವರ ಪಕ್ಷಪಾತಿಗಳು ಹೇಳ ತೊಡಗಿದರು. ಕಡೆಗೆ ಅಫಘಾನ್ ಅಮೀರರು ಇಲ್ಲಿ ಬಂದಾಗ ಲಾಲಾರವರು ಅವರ ಸಂಗಡ ಸಿತೂರಿನಡಿಸ ಯತ್ನಿಸಿನರೆಂದು ವರ್ತಮಾನವನ್ನು ಹರ

[illegible] ಬಂದಿಗಳ ವಿಮೋಚನೆಯನ್ನು [illegible] ತರ ರಾಜದ್ರೋಹಿಗಳಾಗಿದ್ದ ಪಕ್ಷದಲ್ಲಿ ಮೋರ್ಲೆ ಸಾಹೇಬರು ಅವರನ್ನು [illegible] ನ್ನು ಆಕ್ಷೇಪಿಸುತ್ತಿದ್ದಿಲ್ಲವೇ? ಲಾಜಪತರಾಯರವರ ವಿಮೋಚನೆಯಿಂದ ದೇಶಕ್ಕೆ ಶ್ರೇಯಸ್ಸು ದೊರಕಿತು. ಅವರು ಒಬ್ಬ ಪ್ರಜಾನಾಯಕರಾಗಿದ್ದು ಅವರ ಮೇಲೆ ರಾಜದ್ರೋಹದ ಆರೋಪಣೆಯು ರುಜುವಾಗದ್ದರಿಂದ ಹಿಂದುಸ್ಥಾನದಲ್ಲಿ ಮುಖ್ಯವಾಗಿ ಶಿಕ್ಷಿತ ಪ್ರಜೆಗಳಲ್ಲಿ, ರಾಜದ್ರೋಹವು ಹರಡಿದೆ ಎಂಬ ದುರ್ಭಾವನೆಯು ನಿರಾಧಾರವಾದದ್ದೆಂದು ವ್ಯಕ್ತವಾಯಿತು. ಕುರುಬರ ಹುಡುಗನ ಬರೇ ಗುಲ್ಲಿನಹಾಗೆ ಕೆಲವು ಆಂಗ್ಲೋ ಇಂಡಿಯನ್ ಪತ್ರಗಳು ಹುಲಿಬಂತು ಹುಲಿಬಂತೆಂದರೆ ತಾವು ದಿಗಿಲುಪಟ್ಟು ಅನುಚಿತ ಕೃತ್ಯಗಳಿಗೆ ಕೈಹಾಕಬಾರದೆಂದು ಸರಕಾರಕ್ಕೂ ಖಚಿತವಾಯಿತು.

ಗವರ್ನರ್ ದೊರೆಗಳ ಆಗಮನ.

ಕಳದ ಸಂಚಿಕೆಯಲ್ಲಿ ಗವರ್ನರ ಸಾಹೇಬರಿಗೆ ನಮ್ಮ ಜಿಲ್ಲೆಯಲ್ಲಿ ಆದ ಆತಿಥ್ಯ ಸತ್ಕಾರಗಳನ್ನೂ ಅವರಿಗೆ ಅರ್ಪಿಸಿದ ಬಿನ್ನವತ್ತಳೆಗಳನ್ನೂ ಅವಕ್ಕೆ ದೊರಕಿದ ಅಪ್ಪಣೆಗಳನ್ನೂ ಸಂಕ್ಷೇಪವಾಗಿ ವಿವರಿಸಿದೆವು. ಈ ಇಡೀ ತಮಾಷೆಯನ್ನು ಕುರಿತು ನಮ್ಮ ಅಭಿಪ್ರಾಯಗಳನ್ನು ಪ್ರಕಟಿಸಲಿಕ್ಕೆ ಆಗ್ಯೆ ಅವಕಾಶದೊರೆಯಲಿಲ್ಲನೆಂದು ವಿಷಾದಿಸುತ್ತೇವೆ. ಈ ಲೋಪವನ್ನು ಈಗಲಾದರೂ ನೀಗುವದು ಕರ್ತವ್ಯವೆಂದರಿತು ಕೆಲವು ಮಾತುಗಳನ್ನು ಹೇಳುವೆವು.

ಗವರ್ನರ ದೊರೆಗಳ ಬಹುಮಾನಾರ್ಥವಾಗಿ ನಾವು ಏರ್ಪಡಿಸಿದ ಸಮಾರಂಭ, ಉಲ್ಲಾಸ ವಿನೋದಗಳು ಪರಜಿಲ್ಲೆಯವರಿಗೂ ಸ್ವತಹಾ ಖಾವಂದರಿಗೂ ವಿಸ್ಮಯವನ್ನುಂಟುಮಾಡಿದವು. ತನ್ನ ಆನಂದವನ್ನೂ ಆಶ್ಚರ್ಯವನ್ನೂ ಖಾವಂದರು ಗವರ್ನಮೆಂಟ್ ಕೊಲೇಜಿನಲ್ಲಿ ಡಿಸ್ಟ್ರಿಕ್ಟ್ ಅಸೋಸಿಯೇಶನವರು ಮಾಡಿದ ಸತ್ಕಾರಗಳನ್ನು [illegible] ಕೃತಜ್ಞತಾಪೂರ್ವಕವಾ ಪ್ರದರ್ಶಿಸಿದರು. ನಮ್ಮ ಈ ಬಡ ಜಿಲ್ಲೆಯು [illegible] ಕೈಷಕ್ಕೆ 2,000 ರೂಪಾಯಿಯನ್ನು ಸನ್ಮಾನಕ್ಕಾಗಿ ವೆಚ್ಚಮಾಡಿತು. [illegible] ನ್ನು ದನ ಪ್ರಮದಿಂದ ಸಿದ್ಧಪಡಿಸದಾದರೆ ಪ್ರಮುಖ [illegible] ಸು? ಆದರೆ ಅಂತರ್ಯವನ್ನು ಬಾಹ್ಯ ಲಕ್ಷಣಗಳಿಂದ ಕಂಡು ಹಿಡಿಯಕೂಡದು. ಶ್ರೀಕೃಷ್ಣನು ಕೌರವನ ಅರಮನೆಯನ್ನೂ ಡಾಂಭಿಕ ರಾಜವೈಭವವನ್ನೂ ತುಚ್ಛೀಕರಿಸಿ [illegible] ರನ ಭಕ್ತಿಪೂರಿತವಾದ ಉಪಚಾರಗಳನ್ನು ಅಂಗೀಕರಿಸಿದನು. ಕ್ರೈಸ್ತರ ಏಹೋವನು [illegible] ಅಹಂಕಾರಿಯಾದ ಕಾಯಿನನ ರುಚಿಕರ ಮಾಂಸ ಹಾರವನ್ನೊಲ್ಲದೆ ಆಬೇಲನು ಸದ್ಭಕ್ತಿಪೂರ್ವಕವಾಗಿ ಅರ್ಪಿಸಿದ ಹಣ್ಣುಹಂಪಲನ್ನು ಒಳಕೊಂಡನು. ನಮ್ಮ ಜನರಲ್ಲಿ ರಾಜಭಕ್ತಿಯಿಲ್ಲವೆಂದು ನಾವೆಂದೂ ಸೂಚಿಸುವದಿಲ್ಲ. ಆದರೆ ಆ ಶ್ರದ್ಧೆಯನ್ನು ಪ್ರದರ್ಶಿಸಬೇಕಾದರೆ ಶಕ್ತಿ ಮೀರಿಯಾಗಲೀ ಅನಾವಶ್ಯಕ ರೀತಿಯಲ್ಲಿಯಾಗಲೀ ವೆಚ್ಚಮಾಡುವದು ಯುಕ್ತವಲ್ಲವೆಂದೇನಾವನ್ನುವದಾಗಿದೆ. ಒಂದಡೆಯಲ್ಲಿ ಎಲ್ಲೆಲ್ಲಿಯೂ ವಿಜೃಂಭಣೆ ತೋರುವದು. ಇನ್ನೊಂದು ಕಡೆಯಲ್ಲಿ ಮುನ್ಸಿಪಾಲಿಟಿಯವರು "ತಾವು ಸರಕಾರದ ಸಾಲ ತೀರಿಸಲಾರೆವು. ಸರಕಾರ ನಮಗೆ ಇನ್ನೂ ದ್ರವ್ಯ ಸಹಾಯ ನೀಡಬೇಕು. ನ ವಿರುವ ಕಟ್ಟಡವನ್ನು ಉಚಿತವಾಗಿ ಕೊಡಬೇಕು" ಎಂದು ಪ್ರಾರ್ಥಿಸುವರು. ಊರೆಲ್ಲಾ ಲಕ್ಷ್ಮಿಯ ನಿವಾಸದಂತಿರುವಾಗ ಗವರ್ನಮೆಂಟ್ ಕೊಲೇಜಿನ ಹುಡುಗರು ಹೊಸ್ಟೆಲ ಕಟ್ಟಿಸಲಿಕ್ಕೆ ಸರಕಾರದ ಸಹಾಯವನ್ನು ಕೇಳುವದೆಂದರೇನು? ಇದೆಲ್ಲಾ ನೋಡಿ ಖಾವಂದರು ಮುನ್ಸಿಪಾಲಿಟಿಯವರು ತೆರಿಗೆಯನ್ನು ಹೆಚ್ಚಿಸಬೇಕೆಂದೂ ಕೊಲೇಜು ಹುಡುಗರು ಊರ ಜನರ ಆಶ್ರಯ ಪಡೆದು ತನ್ನನ್ನು ಪ್ರಾರ್ಥಿಸಬೇಕೆಂದೂ ಅಪ್ಪಣೆ ಕೊಟ್ಟಿದ್ದರಲ್ಲಿ ಆಶ್ಚರ್ಯವೇನು?

ನಮ್ಮ ಪಟ್ಟಣದಲ್ಲಿ "ವಿಕ್ಟೋರಿಯಾ ಮೆಮೋರಿಯಲ್ ಹಾಲ"ನ್ನು ಕಟ್ಟಿಸುವದೆಂದೂ ಅದರ ಕೆಸರು ಕಲ್ಲನ್ನು ಖಾವಂದರಿಂದ ಇಡಿಸುವದೆಂದೂ ಅಭಿಪ್ರಾಯವಿತ್ತು. ಇದಕೆ ತಕ್ಕಷ್ಟು ವಂತಿಗೆ ಆಗಲಿಲ್ಲವೆಂದು ತಿಳಿಯಬರುವದು. ಗವರ್ನರ ಸಾಹೇಬರ ಸಂಬಂಧ ಕೂಡಿದ ಹಣದ ಸಾಕಷ್ಟು ಅಂಶವನ್ನು ಈ ಸತ್ಕಾರ್ಯದಲ್ಲಿ ವೆಚ್ಚಮಾಡಿದರೆ ತನ್ನ ಅಗ್ರಜ ವೆನ್‌ಲೊಕ್ ಪ್ರಭುಗಳ ಹೆಸರು ಆಸ್ಪತ್ರೆಯ ಮೂಲಕ ಹ್ಯಾಗೆ ಜನರ ಸ್ಮರಣೆಯಲ್ಲಿ ಉಳಿಯುವದೋ ಹಾಗೇ ಈ ಕಟ್ಟೋಣವು ತನ್ನ ಸ್ಮಾರಕ ಚಿನ್ಹೆಯಾಗುವದೆಂದು ಖಾವಂದರೇ ಆನಂದ ಪಡುತ್ತಿದ್ದರು.

ಗವರ್ನರ ಸಾಹೇಬರು ನಮಗ್ಯಾವ ವರವಿತ್ತರು? ಎಂಬ ಪ್ರಶ್ನೆಯು [illegible]

[illegible] ಭಾಷಣಗಳನ್ನು ಕೇಳಿದವು. ರಾಜ್ಯಭಾರದ ನಿರ್ಬಂಧಗಳು ಯಾವುದರಿಂದಲೂ ಉಲ್ಲಂಘಿಸಲಸಾಧ್ಯವಾಗಿದ್ದಿರಬಹುದು. ಅವರು ಸ್ವತಹಾ ದಯಾರ್ದ್ರ ಹೃದಯರಾಗಿರಬಹುದು. ನಾವು ಸ್ವಾವಲಂಬನವನ್ನು ಕಲಿಯಬೇಕೆಂದೆಣಿಸಿರಲೂ ಬಹುದು. ಪರಂತು ಯಾವ ಬಿನ್ನಹವೂ ಪಾಲಿಸಲಿಲ್ಲ. ರೋಮನ್ ಕೆಥೋಲಿಕರಿಗೆ ಅವರ ಪ್ರಾರ್ಥನೆ ಮೇರೆಗೆ "ಸು| ರಾ| ರಾ|" ಎಂಬ ಹಿಂದು ವಿಳಾಸದ ಪ್ರತಿಯಾಗಿ "ಎಸ್‌ಕೊಯರ್" ಎಂಬ ಯುರೇಶಿಯನ್ ವ ಯುರೋಪಿಯನ್ ಅಂಕಿತವನ್ನು ದಯಪಾಲಿಸಿದರಂತೆ. ಇವರ ಇತರ ಮನೋರಥಗಳು ಸಿದ್ಧಿಯಾಗಲಿಲ್ಲ. ಇದೊಂದರಿಂದ ಇವರಿಗೆ ಲಾಭ [illegible]ಂದು ವಾಚಕರೇ ಊಹಿಸಲಿ.

ಪ್ಲೇಗಿನ ವಿಷಯ.

ಪ್ಲೇಗ್ ರೋಗದ ಹಾವಳಿಯನ್ನು ಕುರಿತು ಶ್ರೀಮನ್ ಚಕ್ರವರ್ತಿಯವರು ವೈಸರಾಯರ ದೊರೆಗಳಿಗೂ ಇವರು ಗವರ್ನರ ದೊರೆಗಳವರಿಗೂ ಬರೆದ ಪತ್ರಗಳನ್ನು ಕುರಿತು ಹಿಂದಿನ ಸಂಚಿಕೆಯಲ್ಲಿ ಪ್ರಸ್ತಾಪಿಸಿದ್ದೇವೆ. ಈ ಪತ್ರವ್ಯವಹಾರವನ್ನು ಮದ್ರಾಸು ಸರಕಾರದವರು ದೇಶೀಯ ಭಾಷೆಗಳಲ್ಲಿ ಪರಿವರ್ತಿಸಿ ಸೋಂಕು ತಗಲಿದ ಊರಿನ ಜನರಿಗೆ ಹಂಚಿಸಿರುವರು. ಬೊಂಬಾಯಿ ಸಂಸ್ಥಾನದ ಗವರ್ನರ ಸಾಹೇಬರಾದ ಸರ್. ಜಿ. ಕ್ಲಾರ್ಕರವರು ದೇಶಭಾಷಾ ಪತ್ರಿಕಾಕರ್ತರಿಗೆ ಈ ಕುರಿತು ಒಂದು ಸರ್ಕಲರ್ ಕಾಗದ ಬರೆದಿರುವರು. ಇದರ ಸಾರಾಂಶವೇನಂದರೆ, ಪ್ಲೇಗು ರೋಗದ ಹಾವಳಿಯನ್ನು ಕಂಡು ಬ್ರಿಟಿಷ ಚಕ್ರವರ್ತಿಯವರೂ ಬ್ರಿಟಿಷ ಜನರೂ ಮನನೊಂದಿರುವರು. ಈ ದುಃಖಾಸ್ಪದವಾದ ರೋಗದ ಪೀಡೆಯನ್ನು ಜನರ ಸಹಕಾರವಿದ್ದರೆ ನಿಜವಾಗಿಯೂ ನಿವಾರಿಸಬಹುದು. ಸಾಮಾನ್ಯ ಜನ ಸಮುದಾಯವನ್ನು ಸೇರುವ ದೇಶಭಾಷಾ ಪತ್ರಿಕಾಕರ್ತರ ಗುರುತರ ಕರ್ತವ್ಯವು ಜನರಿಗೆ (ರೋಗದ) ನಿಜಸ್ಥಿತಿಯನ್ನು ತಿಳಿಯ ಹೇಳಿ ಅನೇಕ ಪ್ರಾಣಗಳನ್ನು ರಕ್ಷಿಸುವದೂ ದುಃಖವನ್ನು ನಿವಾರಿಸುವದೂ ಆಗಿದೆ. ಇಂಗ್ಲಾಂಡಿನಲ್ಲಿಯೂ ಇಂಡಿಯಾದಲ್ಲಿಯೂ ತಾನು ಸ್ವತಹಾ ಮಾಡಿದ ಪರಾಮರ್ಶೆಯಿಂದ ಕಂಡುಹಿಡಿದ ಕೆಳಗಿನ ಉಪಾಯಗಳು ಗುಣಕಾರಿಗಳೆಂದು ನೀವು ನಂಬಬೇಕು. (1) ಹವೆಯನ್ನು ಶುದ್ಧಿ ಕರಿಸವದರಿಂದ ಇದರ ಹಾವಳಿಯು ಕಡಿಮೆಯಾಗುವದೆಂಬದು ನಿಸ್ಸಂದೇಹ (2) ಸೋಂಕು ತಗಲಿದ ಮನೆ ಖಾಲಿ ಮಾಡುವದು ಉಪಯುಕ್ತವಾಗಿದೆ. ಒಡವರಿಗೆ ಇದು ಅನಾನುಕೂಲವಾದ್ದಲ್ಲಿ ಸರಕಾರವು ಅವರಿಗೆ ಕೈಕೊಡುವದು. (3) ಇಲಿಗಳನ್ನು ನಾಶಮಾಡಿದರೆ ನಿಜವಾಗಿಯೂ ಜನರಿಗೆ ಸುಖವಾಗುವದು. ಈ ವಿಷಯದಲ್ಲಿ ಜನರೇ ಮನಸ್ಸು ಮಾಡಿ ನೆರವಾಗದಿದ್ದರೆ ಸರಕಾರವು ಮುಂದರಿಸಲಾಗದು. (4) ಟಾಕು ಹಾಕುವದರಿಂದ ಇಂಡಿಯದಲ್ಲಿಯೂ ಔಸ್ಟ್ರೇಲ್ಯದಲ್ಲಿಯೂ ಬಹಳ ಗುಣ ದೊರಕಿದೆ. ಈ ದ್ರವವನ್ನು ತಯ್ಯಾರಿಸುವದನ್ನು ನಾನು ಸ್ವತಹಾ ಕಂಡಿದ್ದೇನೆ. ಇದರಷ್ಟು ಪ್ರಯೋಜನಕಾರಿಯಾದ ಮಾರ್ಗವು ವೈದ್ಯಶಾಸ್ತ್ರಕ್ಕೆ ಇನ್ನೂ ದೊರಕಲಿಲ್ಲ. ಇದರಿಂದ ಯಾವ ತರದ ಅಪಾಯವೂ ಇಲ್ಲ. ಈ ಉಪಾಯವನ್ನು ಜನರು ಅನುಸರಿಸಿದರೆ ಅಸಂಖ್ಯಾತವಾದ ಭಯಂಕರ ಪ್ರಾಣನಾಶವನ್ನು ನಿಲ್ಲಿಸಬಹುದು. ಜನರಿಗೆ ಈ ವಿಷಯಗಳನ್ನು ತಿಳಿಯ ಹೇಳಿ ಪ್ರಾಣಹಾನಿಯನ್ನು ನಿವಾರಿಸುವದರಲ್ಲಿ ನೀವು ನನ್ನ ಸಹಕಾರಿಗಳಾಗಬೇಕೆಂದು ಕೇಳಿಕೊಳ್ಳುತ್ತೇನೆ. ನಿಮಗೆ ಇದಕ್ಕಿಂತಲೂ ಘನವಾದ ಉದ್ದಿಶ್ಯ ಬೇರೊಂದಿಲ್ಲ" ಇದೇ ರೀತಿಯಲ್ಲಿ ಪ್ಲೇಗ್ ಕಮಿಶನಿನ ಪರಾಮರ್ಶದ ಸಿದ್ಧಾಂತಗಳನ್ನು ಆಧರಿಸಿ ಮದ್ರಾಸು ಸರಕಾರದವರೂ ಕೆಳ ನೌಕರರಿಗೆ ಕೆಲವು ಸೂಚನೆಗಳನ್ನು ಕೊಟ್ಟಿರುವರು. ಅಂದರೆ ಈ ವಿಷಯದಲ್ಲಿ ಸರಕಾರವು ಪ್ರಜೆಗಳ ಮೇಲೆ ಕನಿಕರಪಟ್ಟು ರೋಗವನ್ನು ಕಿತ್ತುಹಾಕಲಿಕ್ಕೆ ಭಗೀರಥ ಪ್ರಯತ್ನಗಳನ್ನು ಮಾಡುತ್ತಿರುವದು. ಖಾಸಗಿ ಜನರು ಪ್ಲೇಗ್ ಆಸ್ಪತ್ರೆ, ಯಾ ಕಟ್ಟಡಗಳನ್ನಿಟ್ಟರೆ ದ್ರವ್ಯಸಹಾಯ ಮಾಡುವರು. ಇಲಿಗಳನ್ನು ಕೊಲ್ಲಲಿಕ್ಕೆ ಪ್ರತ್ಯೇಕ ಶಿಬಂದಿ ಇಟ್ಟಿರುವರು. ಈ ವಿಷಯದಲ್ಲಿ ನಮ್ಮದೊಂದು ಸೂಚನೆ ಅದೆ. ಸೊಂಕುತಗಲಿದ ಇಲಿಯ ಗೂಡಿನಲ್ಲಿ ಬಿದ್ದರೆ ಅದೇ ಗೂಡನ್ನು ಇನ್ನೊಂದು ಮನೆಯಲ್ಲಿ ಸರಿಯಾಗಿ ತೊಳಿಯದೆ ಇಟ್ಟರೆ ಮೇಲು ಬಿಟ್ಟು ಹಾನಿಯೇ ಹುಟ್ಟುವದು. ಯುಕ್ತ ಸಂದರ್ಭದಲ್ಲಿ ಜನರಿಂದ ಮನೆ ಬಿಡಿಸಿ ಪ್ರಾಣಗಳನ್ನು ಉಳಿಸುವರು. ಅತೀ ಬಡವರಿಗೆ ಈ ಕಾಲದಲ್ಲಿ ಊಟಕ್ಕೆ ಕೊಡುವರು. ಬಡವರ ಮನೆ ಸುಟ್ಟು ಹಾಕಿದರೆ ಪ್ರತಿಫಲ ಕೊಡುವರು. ಇದೇ ಅಲ್ಲ, ಸರಕಾರದವರು ಈ ಉದ್ದಿಶ್ಯಕ್ಕಾಗಿಯೇ 250 ರೂಪಾಯಿ ತಲುಬು ಕೊಟ್ಟು ಬಬ್ಬ ತರಬೇತಾದ ಶಾಸ್ತ್ರಜ್ಞನನ್ನು ದಾಕಿನ ಕೆಲಸಕ್ಕೆ ಪ್ರತ್ಯೇ

[illegible] ಸರಕಾರದ ಉದ್ಯೋಗಸ್ಥರಾದರೋ [illegible] ತಮ್ಮ [illegible] ತೋರದೆ ನಯನುಡಿಗಳಿಂದಲೇ ಅವರನ್ನು ಸಮಾಧಾನ ಪಡಿಸಿ ಕಾರ್ಯವನ್ನು ಕಡೆಗಾಣಿಸುವರೆಂದು ನಂಬಿದ್ದೇವೆ. ಬಡ ಜನರಿಗೆ ಸೋಂಕಿದ ಉಪವಾಸ ರೋಗವು, ಪ್ಲೇಗ್ ಕೋಲರಾ ರೋಗಕ್ಕೆ ಒಂದು ಕಾರಣವಾಗಿರಬೇಕು. ಸರಕಾರವು ತಮ್ಮ ಔದಾರ್ಯದಿಂದ ತೆರಿಗೆಯನ್ನು ತಗ್ಗಿಸಿಯಾಗಲೀ ಕೈಗಾರಿಕೆಗೆ ಕೈಕೊಟ್ಟಾಗಲೀ ಈ ಪ್ರಥಮ ರೋಗವನ್ನು ನಿವಾರಿಸಿದರೆ ಉಳಿದರೋಗ ನಾಶಿಯಾಗಲಿಕ್ಕೆ ದಾರಿ ಸುಲಭವಾಗುವದು.

ನೆವಿನ್ಸನ್ ದೊರೆಗಳ ಆಗಮನ.

ಹಿಂದಿನ ಸಂಚಿಕೆಯಲ್ಲಿ ಕೀಯರ್ ಹಾರ್ಡಿಯವರ ಸಂಚರಣೆಯನ್ನು ವಿವರಿಸಿದ್ದೆವು. ಕಳೆದ ಕಾಲ ನೆನಸಿದಂತೆ ಇಂಗ್ಲೀಷ್ ಪತ್ರಿಕಾಕರ್ತರನ್ನು ಇಲ್ಲಿಯವರು ಆಮಂತ್ರಿಸಿದರೆ ಬ್ರಿಟಿಷರಿಗೆ ನಮ್ಮ ಯಥಾರ್ಥ ಸ್ಥಿತಿಯು ತಿಳಿದು ದೇಶಕ್ಕೆ ಹಿತವಾಗಬಹುದೆಂದು ಸಂದರ್ಭದಲ್ಲಿ ಸೂಚಿಸಿದೆವು.

ಕಳೆದ ವರ್ಷ ದುರ್ದೈವದಿಂದ ನೆರವೇರದ ಈ ಆಲೋಚನೆಯು ಈ ಸಾರಿಯೂ ಕೈಗೂಡುವದಿಲ್ಲವೆಂದು ಮಿ| ಸ್ಟೆಡರವರ ತಂತಿಯಿಂದ ತಿಳಿದುಬರುತ್ತದೆ. ಅದರೂ ಇಂಗ್ಲೀಷ್ ಉದಾರ (ಲಿಬರಲ್) ಪಕ್ಷದ ಕೆಲವು ಪ್ರಖ್ಯಾತ ಪತ್ರಿಕೆಗಳು (ಡೇಲಿಕ್ರೊನಿಕಲ್, ಮೆಂಚೆಸ್ಟರ್ ಗಾರ್ಡಿಯನ್, ಮತ್ತು ಗ್ಲಾಸ್ಗೋ ಹೆರಾಲ್ಡ್) ಸ್ವತಹಾ ತಮ್ಮ ಕಡೆಯಿಂದ ಮಿ| ನೆವಿನ್ಸನ್ ಎಂಬ ಒಬ್ಬ ಪ್ರತಿನಿಧಿಯನ್ನು ಇಲ್ಲಿಯ ಕ್ಷೋಭೆಯನ್ನು ತಿಳಿದುಬರಲಿಕ್ಕೆ ಕಳುಹಿಸಿರುವರು. ಹಿಂದುಸ್ಥಾನದಲ್ಲಿ ದಂಗೆಯಾಗಲಿಕ್ಕಿದೆ, ರಾಜದ್ರೋಹ ತುಂಬಿದೆ ಎಂಬ ಅಭಿಪ್ರಾಯವು ವಿಲಾಯತಿಯಲ್ಲಿ ಹುಟ್ಟುವಂತೆ ಇಲ್ಲಿ ನಡೆಯುವ ಸಂಗತಿಗಳ ಸಮಾಚಾರವು ರುಟರ್ ಸಾಹೇಬರ ತಂತೀದ್ವಾರ ಅಲ್ಲಿ ತಲ್ಪಿತು. ಇಂಥಾ ಪಿಸುಣರಿಂದ ನಮಗೆ ಹಾನಿಯಾಯಿತೆಂದು ಮೊದಲು ತೋರುವದಾದರೂ ನಿಜವಾಗಿ ಇದರಿಂದ ಒಳ್ಳೇದೇ ಆಯಿತೆಂದು ಹೇಳಬೇಕು. ಇಂಥಾ ಸುಳ್ಳು ವರ್ತಮಾನಗಳು ತಪ್ಪಿದ್ದರಿಂದಲೇ ಕೀಯರ್ ಹಾರ್ಡಿಯಂತಹ ಗೃಹಸ್ಥರು ಇಲ್ಲಿಗೆ ಬಂದು ಕಣ್ಣಾರೆ ಇಲ್ಲಿಯ ಸಮಾಚಾರವನ್ನು ಪರೀಕ್ಷಿಸ ಮಾರ್ಗವಾಯಿತು. ನೆವಿನ್ಸನ್ ಸಾಹೇಬರ ಆಗಮನಕ್ಕೂ ಇದೇ ಕಾರಣವಾಗಿರಬೇಕು. ಇವರು ನ್ಯಾಯಶೀಲರೂ, ನಿಷ್ಪಕ್ಷಪಾತಿಗಳೂ, ಸತ್ಯಸಂಧರೂ, ಸ್ವಾತಂತ್ರ್ಯವತ್ಸಲರೂ, ಆಗಿದ್ದು ಇಂಗ್ಲೀಷ್ ಜನರಲ್ಲಿ ಸಂಭಾವಿತರೆನ್ನಿಸಿರುವರಂತೆ. ಕೀಯರ್ ಹಾರ್ಡಿಯವರು ಇಲ್ಲಿ ರಾಜದ್ರೋಹವಿಲ್ಲವೆಂದೂ, ಇಲ್ಲಿಯ ಜಾತಿಗಳೊಳಗೆ ಇಂಗ್ಲಾಂಡಿನಲ್ಲಿರುವದಕ್ಕಿಂತಲೂ ಹೆಚ್ಚಿನ ವೈಷಮ್ಯವಿಲ್ಲವೆಂತಲೂ, ನಾವು ಕೆನಡಾ ಮುಂತಾದ ವಸಹತುಗಳಂತೆ ಸ್ವರಾಜ್ಯಕ್ಕೆ ಅರ್ಹರೆಂದೂ ರಾಜದ್ರೋಹ ಕೂಟದ ಆಕ್ಷೆ ಸಲ್ಲದೆಂದೂ ಅಭಿಪ್ರಾಯಪಟ್ಟರು. ಇವರು ಭಾರತೀಯರಿಗೆ ಪುನಃ ಪುನಃ ಹೇಳಿದ ಬುದ್ಧಿವಾದವು ಸ್ವಾವಲಂಬನವೇ. ನೆವಿನ್ಸನ್ ದೊರೆಗಳು ಬೊಂಬಾಯಿಯಲ್ಲಿ ಇಳಿದು ಕೆಲವು ಕಾಲವಾಯಿತು. ಅವರು ಅಲ್ಲಿಂದ ಪುಣೆಗೆ ಹೋಗಿ ಗೋಖಲೆಯವರನ್ನೂ ಇತರ ಮುಖ್ಯಸ್ಥರನ್ನೂ ಕಂಡರು. ನಂತರ ಮದ್ರಾಸಿಗೆ ತೆರಳಿದರು. ಇಲ್ಲಿಂದ ಹೊರಟು ಬರದಿಂದ ನರಳುವ ಉತ್ಕಲದೇಶವನ್ನು ಸಂಚರಿಸಿ ಅಲ್ಲಿಂದ ಪೂರ್ವಬಂಗಾಳ, ಕಲ್ಕತ್ತಕ್ಕೆ ಹೋಗಿ ಕೊಂಗ್ರೆಸು ಕಾಲ ಸೂರತಿಗೆ ಬಂದು ನಂತರ ಲಾಹೋರಿಗೆ ತೆರಳುವರೆಂದು ತೋರುತ್ತದೆ. ಹಿಂದುಸ್ಥಾನದ ಜನರನ್ನೂ ಅವರ ಸ್ಥಿತಿಯನ್ನೂ ಕುರಿತು ಇವರಿಗಿರುವ ಅಭಿಪ್ರಾಯಗಳನ್ನು ತಿಳಿಯಲಿಕ್ಕೆ ವಾಚಕರಿಗೆ ಆತುರವಿರಬಹುದು. "ಇಂಗ್ಲೀಷ ಜನರಿಗೆ ನಮ್ಮ ವಿಷಯ ಯಾವ ಅಭಿಪ್ರಾಯವಿದೆ?" ಎಂದು ಹಿಂದೂ ಪತ್ರದ ಪ್ರತಿನಿಧಿಯು ಅವರನ್ನು ಕೇಳಿದರು. "ಇಂಗ್ಲೀಷರಿಗೆ ಹಿಂದುಸ್ಥಾನದ ಕುರಿತಿರುವ ಅಜ್ಞಾನವು ಅಸಾಧಾರಣವಾಗಿದೆ. ಹಿಂದುಸ್ಥಾನದ ರಾಜ್ಯಭಾರವು ನೆಮ್ಮದಿಯಾಗಿ ನಡೆಯುವಾಗ ಅಲ್ಲಿ ಏನು ನಡೆಯುತ್ತದೆಂದು ಅವರು ತಿಳಿಯಲಪೇಕ್ಷಿಸುವರು. ಇತ್ತಲಾಗೆ ಇಲ್ಲಿ ನಡೆದ ಸಂಗತಿಗಳಿಂದ ಅವರು ಜಾಗ್ರತರಾಗಿದ್ದಾರೆ. ಆದರೆ ಹಿಂದುಸ್ಥಾನದಲ್ಲಿ ೫೦ ವರುಷಗಳ ಮೊದಲು ನಡೆದ ದಂಗೆಯೊಂದೇ ಅವರ ಜ್ಞಾಪಕದಲ್ಲಿರುವದು. ಟ್ಯಾಮ್ಸು ಮೊದಲಾದ ಪ್ರಖ್ಯಾತ ಪತ್ರಿಕೆಗಳು ಇಂದ್ಯದ ಹಾನಿ ಬಯಸಿ ಇಂಗ್ಲಿಷರಲ್ಲಿ ಆ ಕಾಟಕಾಯಿಯ ನೆನಪು ಹುಟ್ಟಿಸಿದ್ದನ್ನು ಎಷ್ಟು ಧಿಕ್ಕರಿಸಿದರೂ ಸಾಲದು" ಎಂದು ಉತ್ತರ ದೊರೆಯಿತು. ಇವರು ಇನ್ನೂ ಹೇಳಿದ್ದೇನಂದರೆ "ಯಥಾರ್ಥವನ್ನು ಮರೆಮಾಡಿ ಇಲ್ಲಿ ರಾಜದ್ರೋಹವಿದೆಯೆಂದು ಬಾತಮಿಗಳನ್ನು ಇಂಗ್ಲಾಂಡಿಗೆ ಕಳುಹಿಸುವವರೂ ತಪ್ಪುಗಾರರೇ. ತಾನು ಇಷ್ಟರ

ವರೆಗೆ ರಾಜದ್ರೋಹದ ಸ್ಪರ್ಶವನ್ನಾದರೂ ಕಾಣಲಿಲ್ಲ. ಎಂಥಾ [illegible] ದರೂ ಇಂಗ್ಲೀಷರನ್ನು ಇಲ್ಲಿಂದ ಓಡಿಸಬೇಕೆಂದು ಹೇಳುವದಿಲ್ಲ." ಇಂಗ್ಲೀಷರಿಗಿರುವ ಅಜ್ಞಾನವನ್ನು ಹೋಗಿಸುವ ಬಗೆ ಹೇಗೆ? ಇದಕ್ಕೆ ನೆವಿನ್ಸನರ ಉತ್ತರವೇನೆಂದರೆ "ಪಾರ್ಲಿಮೆಂಟಿನ ಮೆಂಬರರೂ ಉದಾರಪಕ್ಷದ ಪತ್ರಗಳ ಪ್ರತಿನಿಧಿಗಳೂ ಇಲ್ಲಿ ಬಂದು ನಿಮ್ಮ ಸ್ಥಿತಿಯನ್ನು ಕಣ್ಣಾರೆ ಕಂಡು ಹೋಗಿರುವದರಿಂದ ನಿಮಗೆ ಲಾಭವಿರುವದಾದರೂ ನೀವು ಸ್ವಪ್ರಯತ್ನಗಳಿಂದಲೇ ಇಷ್ಟಾರ್ಥವನ್ನು ಸಿದ್ಧಿಸಬೇಕು. ಸ್ವದೇಶಿಯ ವಿಷಯ ಇವರ ಅಭಿಪ್ರಾಯವೇನು? "ಸ್ವದೇಶಿಯು ಜನರಲ್ಲಿ ಮೊಳೆತ ರಾಷ್ಟ್ರೀಯ ಭಾವದ ಗುರುತಾಗಿದೆ. ಸ್ವದೇಶಿಗಾಗಿ ಜನರು ಕೋರುವ ಸ್ವಾರ್ಥತ್ಯಾಗವು ಸ್ತುತ್ಯವೇ. ತೀಕ್ಷ್ಣ ಸೌಮ್ಯಪಕ್ಷಿಗಳ ಉದ್ದಿಶ್ಯವು ಒಂದೇ. ಅವರು ಅನುಸರಿಸುವ ಮಾರ್ಗಗಳು ಮಾತ್ರ ಬೇರೆಯಾಗಿರುವವು."

"ಇಲ್ಲಿ ಇಂಗ್ಲೀಷರಿಗೂ ದೇಶೀಯರಿಗೂ ಇರುವ ವೈಷಮ್ಯದ ಕುರಿತು ನಿಮ್ಮ ಅಭಿಪ್ರಾಯವೇನು? ಎಂದು ಕೇಳಿದ್ದಲ್ಲಿ ನೆವಿನ್ಸನರು ಕೊಟ್ಟ ಉತ್ತರವು ಮಾರ್ಗದರ್ಶಿಯಾಗಿರುವದು. "ನೀವು ನಿಮ್ಮ ಬೆನ್ನು ಮೂಳೆಯನ್ನು ಗಟ್ಟಿ ಮಾಡಿಕೊಳ್ಳಬೇಕು. ಆಂಗ್ಲೋ ಇಂಡಿಯನರ ಸೊಕ್ಕು ಮುರಿಯಲಿಕ್ಕೆ ಬೇರೆ ಉಪಾಯವಿಲ್ಲ. ನಿಮ್ಮ ಪೌರುಷದಿಂದಲೇ ಅವರ ಗರ್ವವನ್ನು ಖಂಡಿಸಬೇಕು. ಭಾರತೀಯರು ತಮ್ಮಲ್ಲಿ ಈಗ ವಿಪರೀತವಾಗಿರುವ ಶಿಷ್ಟಾಚಾರ (ದೈನ್ಯ)ವನ್ನು ಪೂರ್ಣ ಬಿಟ್ಟುಬಿಡಬಾರದು. ಆದರೂ ಹೆಚ್ಚಿನ ಪೌರುಷವನ್ನು ತೋರಿ ಮುಂದೆ ನೂಕಿ ಮುನಿಸಿಪಲ್ ವ ರಾಷ್ಟ್ರೀಯ ಸ್ವಾತಂತ್ರ್ಯಗಳನ್ನೂ ಕೇಳಬೇಕು. ನಿಮಗೆ ಪೌರುಷದಿಂದ ಗೌರವವೂ ಸ್ವಾಭಿಮಾನವೂ ಹೆಚ್ಚುವವು. ರೈಲ್ವೆಯಲ್ಲಿ ಪ್ರಯಾಣ ಮಾಡುವ ಇಂಗ್ಲೀಷ ಗೃಹಸ್ಥನು ತನ್ನ ಬಂಡಿಯಲ್ಲಿರುವ ಮಹಾರಾಜನಿಗೆ ಕಾಲು ತಿಕ್ಕೆಂದು ಹೇಳಿದ ಕೂಡಲೆ ಮಹಾರಾಜನು ಆ ಮಾತನ್ನು ಮನ್ನಿಸದೆ ಅವನ ಕಿವಿ ತಿರುಗಿಸಿ ರೈಲಿನ ಒಬ್ಬಲೊಳಗೆ ತೂರಿದರೆ ಅಂಥಾ ದುರ್ನಯವು ನಿಲ್ಲುತ್ತಿತ್ತು." "ಇಂಗ್ಲಿಷ ಜನರಿಗೆ ನಮ್ಮ ದೇಶದ ಕುರಿತಿರುವ ಅಜ್ಞಾನವನ್ನು ಕಳೆದು ಸಹಾನುಭೂತಿ ಹುಟ್ಟಿಸ ಬಹುದೋ" ಎಂದು ಕೇಳಿದ್ದಕ್ಕೆ ಕೊಟ್ಟ ಉತ್ತರ, "ನೀವು ಲಿಬರಲ್ (ಉದಾರ) ಪಕ್ಷದ ಪತ್ರಕರ್ತರನ್ನೂ ಪಾರ್ಲಿಮೆಂಟಿನ ಆ ಪಕ್ಷದ ನಾಯಕರನ್ನೂ ಸೇರಿ ಅವರಿಗೆ ಇಲ್ಲಿಯ ನಿಜಸ್ಥಿತಿಯನ್ನು ತಿಳಿಸಿದರೆ ಅವರು ನಿಮಗೆ ನೆರವಾಗುವರೆಂದು ತಾನು ನಂಬುವೆನು."

ಕೀಯರ್ ಹಾರ್ಡಿ ವ ನೆವಿನ್ಸನ್‌ರವರ ಸಂಚರಣೆಗಳಿಂದ ಇಂಗ್ಲಿಷರಿಗೆ ಭರತಖಂಡದಲ್ಲಿ ರಾಜದ್ರೋಹವಿಲ್ಲವೆಂದೂ ಆಂಗ್ಲೋ ಇಂಡಿಯನರು ತಮ್ಮ ದರ್ಪದಿಂದ ಜನರಲ್ಲಿ ವೈಮನಸ್ಯವನ್ನು ಹುಟ್ಟಿಸಿರುವರೆಂದೂ ನಮ್ಮಲ್ಲಿ ಪ್ರಕೃತ ಮೊಳೆತಿರುವ ರಾಷ್ಟ್ರೀಯ ಭಾವಕ್ಕೆ ತಕ್ಕವಾಗಿ ರಾಜ್ಯಭಾರವನ್ನು ಬದಲಾಯಿಸಬೇಕೆಂದೂ ತಿಳಿಯುವದು. ತಾನು ಸಾಯಬೇಕು ಸ್ವರ್ಗ ಪಡೆಯಬೇಕೆಂಬಂತೆ ನಮ್ಮ ಸ್ವಾತಂತ್ರ್ಯಗಳನ್ನು ನಮ್ಮ ಪ್ರಯತ್ನಗಳಿಂದಲೂ ಸ್ವಾವಲಂಬನದಿಂದಲೂ ಪಡೆಯಬೇಕೆಂದು ನಮಗೆ ಆ ಗೃಹಸ್ಥರಿಂದ ತಿಳಿದು ಬಂತು.

——o——

ದಕ್ಷಿಣಕನ್ನಡ ಜಿಲ್ಲೆಯ ಕೋಲೆರಾ ಯಾ ವಾಂತಿಭೇದಿ.

——o——

ರೈಲ್ವೆ ಮಾರ್ಗವು ತೆರೆಯಲ್ಪಟ್ಟು ಮಂಗಳೂರಿಗೆ ಟ್ರೈನುಗಳ ಓಡ್ಯಾಟವು ಶುರುವಾದಂದಿನಿಂದ, ಮಲಬಾರಜಿಲ್ಲೆಗೆ ಹತ್ತರವಿರುವ ಕಾಸರಗೋಡು ತಾಲೂಕಿನ ಕೆಲವು ಹಳ್ಳಿಗಳಲ್ಲಿ ಮಾತ್ರ ಈ ಮಾರಿರೋಗವು ತಲೆದೋರಿತ್ತು. ಕ್ರಮೇಣ ಇದು ಅಲ್ಲಿಂದ ಮಂಗಳೂರು ಉಪ್ಪಿನಂಗಡಿ ತಾಲೂಕುಗಳಿಗೂ ಹರಡಿರುವದು. ಪ್ರಕೃತ ಮಂಗಳೂರು ತಾಲೂಕಿನಲ್ಲಿ ಸುಮಾರು ೫೦ ಗ್ರಾಮಗಳಲ್ಲಿಯೂ ಕಾಸರಗೋಡು ತಾಲೂಕಿನಲ್ಲಿ ೩೧ ಗ್ರಾಮಗಳಲ್ಲಿಯೂ, ಉಪ್ಪಿನಂಗಡಿ ತಾಲೂಕಿನಲ್ಲಿ ೯ ಹಳ್ಳಿಗಳಲ್ಲಿಯೂ ವಾಂತಿರೋಗದ ಬಾಧೆ ಇರುವದು. ಈಚೆಗೆ ಹತ್ತು ಹದಿನೈದು ದಿವಸಗಳಿಂದ ಮಂಗಳೂರು ಮುನ್ಸಿಪಾಲಿಟಿಯಲ್ಲಿಯೂ ಅಲ್ಲಲ್ಲಿ ಜನರು ಈ ರೋಗಕ್ಕೆ ತುತ್ತಾಗುತ್ತಿರುವರು. ಕಳೆದ ತಿಂಗಳ ತಾರೀಖು 25ರ ವರೆಗೆ 142 ಜನರಿಗೆ ಈ ಸಂಕಷ್ಟವು ಪ್ರಾಪ್ತಿಯಾಗಿ 119 ಜನರು ಮರಣಪಟ್ಟಿರುವರು. ಮಂಗಳೂರು ಪಟ್ಟಣದಲ್ಲಿ ಕೋಲೆರಾ ಶುರುವಾದಂದಿನಿಂದ ಪ್ಲೇಗಿನ ಮರಣಗಳು ಕಡಿಮೆಯಾಗಿ ಇತ್ತಲಾಗೆ ನಾಲ್ಕೈದು ದಿವಸಗಳಿಂದ ಪ್ಲೇಗು ಪೂರ್ಣ ಅದೃಶ್ಯವಾಗಿರುವದು. ಮಂಗಳೂರು ಮ್ಯುನಿಸಿಪಾಲಿಟಿಯ ಬಡಸ್ಥಿತಿಯು ಈ ಸಾಂಕ್ರಾಮಿಕ ರೋಗಗಳಿಗೆ ವಿದಿತವಾಗಿ ಹಾಗ್ಯಾರೂ ಒಂದೇ ಸಲ ಪಟ್ಟಣವನ್ನು ಉಪದ್ರವಿಸಬಾರದೆಂಬಂತೆ ಪ್ಲೇಗುರೋಗವು ಮಾಯಿಹೋಯಿತೋ ಏ[illegible] [illegible] ಕಲ್ಲಿ ಕೋಲೆರಾ ತಗಲಿದವರನ್ನಿಡಲು ಉಪಾಯವಾಯಿತು. ಪ್ಲೇಗ [illegible] ಡಿಸ್ಪೆಲುಗಳನ್ನು ತಯ್ಯಾರಿಸುವ ಖರ್ಚು ಉಳಿಯಿತು. ಮಂಗಳೂರು ಪಟ್ಟಣದಿಂದ ಕೋಲೆರಾ ಪೂರ್ಣ ಮಾಯಿಹೋಗುವವರೆಗೆ ಪ್ಲೇಗು ರೋಗವು ತಲೆದೋರಿ ಪ್ಲೇಗು ರೋಗಿಗಳನ್ನೂ ಕೋಲೆರಾ ತಗಲಿದವರನ್ನೂ ಒಂದೇ ಗುಡಿಸಲಿನಲ್ಲಿಡುವ ಸಂಕಷ್ಟವು ಬಂದೊದಗದೆಂದು ನಾವೆಲ್ಲರೂ ಕೋರುವೆವು.

ಈ ರೋಗದ ಹಾವಳಿಯನ್ನು ಹೋಗಗೊಳಿಸುವರೆ ಸರಕಾರದವರು ವಿಶೇಷ ಪ್ರಯತ್ನಗಳನ್ನು ಮಾಡುತ್ತಿರುವರು. ಕಾಸರಗೋಡು ತಾಲೂಕಿನಲ್ಲಿ ಎರಡು [illegible] ಸೆನಿಟರಿ ಇನ್ಸ್‌ಪೆಕ್ಟರರವರನ್ನೂ ಒಬ್ಬ ಹೊಸ್ಪಿಟಲ್ ಅಸಿಸ್ಟಾಂಟರನ್ನೂ ನೇಮಿಸಿ[illegible] ಮಂಗಳೂರು ತಾಲೂಕಿನಲ್ಲಿ ಉಳ್ಳಾಲದಲ್ಲಿ ಒಬ್ಬ ಹೊಸ್ಪಟಲ್ ಅಸಿಸ್ಟಾಂಟರನ್ನೂ ಸೆನಿಟರಿ ಇನ್ಸ್‌ಪೆಕ್ಟರನ್ನೂ ನೇಮಕಮಾಡಿರುವರು. ಕೋಲೆರಾದಿಂದ ಮೃತಪಟ್ಟವರ ಸಂಖ್ಯೆಯು ಕ್ರಮವಾಗಿ ರಿಜಿಸ್ಟ್ರಿಗಳಿಗೆ ದಾಖಲಾಗಿ ರಿಪೋರ್ಟುಗಳು ಶೀಘ್ರವಾಗಿ ಬರುವಂತೆ ಆಯಾ ತಾಲೂಕಿನ ತಹಸೀಲ್‌ದಾರರಿಗೆ ಅಪ್ಪಣೆ ಕೊಟ್ಟಿರುವರು. ಔಷಧಗಳನ್ನು ಬಯಸಿದವರಿಗೆ ಅವುಗಳು ಸಿಕ್ಕುವಂತೆ ತಕ್ಕ ಏರ್ಪಾಡಿರುವದು.

ಪ್ರಜಾ ಸಂಕಷ್ಟಗಳ ಕಾರಣಗಳನ್ನು ಹುಡುಕಿ ಅವುಗಳನ್ನು ಮೂಲದಲ್ಲಿಯೇ ಕಿತ್ತುಹಾಕದೆ ಈ ಕಾರಣಗಳಿಂದ ಜನಿತವಾದ ಸಂಕಷ್ಟ ನಿವಾರಣೆ ಬಗ್ಗೆ ಹೇರಳ ದ್ರವ್ಯ ವೆಚ್ಚವನ್ನು ಮಾಡುವದು ನಮ್ಮ ಸರಕಾರದವರ ವಿಶೇಷ ಲಕ್ಷಣವಾಗಿರುವದು. ಇಡೀ ಹಿಂದುಸ್ಥಾನದಲ್ಲಿ ಪ್ರಾಪ್ತವಾದ ಪ್ರಜಾ ದಾರಿದ್ರ್ಯವು ಈ ಎಲ್ಲಾ ರೋಗಗಳ ಮುಖ್ಯ ಕಾರಣ. ಯೋಗ್ಯವಾದ ಆಹಾರವನ್ನು ಉಪಯೋಗಿಸಿ ನಿರ್ಮಲವಾದ ವಸ್ತ್ರಗಳಲ್ಲಿ ಉಳಕೊಳ್ಳುವಷ್ಟು ಭಾಗ್ಯವು ಈ ದಾರಿದ್ರ್ಯದಿಂದ ನಮ್ಮಲ್ಲಿ ಅನೇಕರಿಗೆ ಇರುವದಿಲ್ಲ. ಸಕಲ ದವಸು ಧಾನ್ಯಗಳೂ ಪೈದಾಸಾಗುವ ಈ ಸಮಯದಲ್ಲಿಯೇ ಅಕ್ಕಿ ಮುಡಿಗೆ ೫॥ ರೂಪಾಯಿಯಾದರೆ ಬಡವರ ಮುಂದಿನ ಕಾಲಕ್ಷೇಪದ ಉಪಾಯವೇನೋ? ಎರಡು ಮೂರು ವರುಷಗಳಿಂದ ಹೀಗೆ ಅಕ್ಕಿಗೆ ಕ್ರಯವೇರುತ್ತ ಬಂದಿತ್ತಾದರೂ ಮಂಗಳೂರು ರೈಲ್ವೆಗಳ ಕಾಮಗಾರಿಯಲ್ಲಿ ಅನೇಕರಿಗೆ ಕೆಲಸ ದೊರಕ್ಕಿದ್ದರಿಂದ ಅಕ್ಕಿ ಕೊಂಡುಕೊಳ್ಳುವರೆ ಉಪಾಯವಾಯಿತು. ಈಗ ಈ ಕೆಲಸವು ಮುಗಿದು ಅನೇಕ ಜನರು ಈ ಕ್ರಯವೇರಿದ ಅಕ್ಕಿಯನ್ನು ಕೊಂಡುಕೊಳ್ಳುವರೆ ಉಪಾಯವಿಲ್ಲದೆ ಸಿಕ್ಕಿದ್ದನ್ನು ತಿಂದು ಕೋಲರಾ ಮುಂತಾದ ಸಾಂಕ್ರಾಮಿಕ ರೋಗಗಳ ಉಲ್ಬಣವಾಗಿರುವವು. ಈ ವರುಷಗಳಲ್ಲಿ ಮಳೆಯು ಕಡಿಮೆಯಾಗಿ ಒಂದು ಹವಾ ಪ್ರಕೃತಿಯು ಈ ರೋಗದ ಮುಖ್ಯ ಕಾರಣವೆಂದರೂ ಯೋಗ್ಯ ಆಹಾರ ಇದ್ದಲ್ಲಿ ಒಂದು ವೇಳ್ಯ ಕೋಲೆರಾ ಪ್ರಾಪ್ತಿಯಾದರೂ ಅದನ್ನು ಅತಿ ಶೀಘ್ರದಲ್ಲಿ ನಿವಾರಿಸಬಹುದು. ಈ ರೋಗದಿಂದ ನರಳುತ್ತಿರುವ ಆಯಾ ಗ್ರಾಮಗಳ ನಿವಾಸಿಗಳು ನಮಗೆ ಸೆನಿಟರಿ ಇನ್ಸಪೆಕ್ಟರರ ಆರೋಗ್ಯ ಸೂತ್ರಗಳಿಂದಲೂ ಹೊಸ್ಪಿಟಲ್ ಅಸಿಸ್ಟಂಟರ ಔಷಧಿಯಿಂದಲೂ ಏನು ಪ್ರಯೋಜನ? ಔಷಧಿಗಳನ್ನು ತಿಂದರೆ ಹೊಟ್ಟೆ ಹಸಿವು ನಿಲ್ಲದು ಎನ್ನುವರು. ಸೆನಿಟರಿ ಇನ್‌ಸ್ಪೆಕ್ಟರರನ್ನೂ ಡಾಕ್ಟ್ರರರನ್ನೂ ನೇಮಿಸುವದು ಮಾತ್ರ ಈ ರೋಗದ ಪೂರ್ಣ ನಿವಾರಣೆಯಲ್ಲ. ಬಡವರಿಗೆ ಒಳ್ಳೇ ಆಹಾರವು ದೊರಿಯುವಂತೆ ಏರ್ಪಾಡು ಮಾಡಬೇಕು. ಕ್ರಯವೇರಿದ ಅಕ್ಕಿಯನ್ನು ಅಲ್ಪಕ್ರಯದಲ್ಲಿ ಬಡವರಿಗೆ ದೊರಿಯುವಂತೆ ಆಗಬೇಕು. ರಾಜಭಕ್ತಿ ಪರಾಯಣರೂ ಪ್ರಜಾಹಿತೈಷಿಗಳೂ ಆದ ಅಫೀಸಿಯಲ್ ಯಾ ನೊನ್ ಆಫೀಸಿಯಲ್ ಮುಂದಾಳುಗಳು ಗವರ್ನರ ದೊರೆಗಳವರ ಆಗಮನ ಕಾಲದಲ್ಲಿ ವಿಶೇಷ ಆಸಕ್ತಿಯನ್ನು ತೋರ್ಪಡಿಸಿ ಸಾವಿರಗಟ್ಟಲೆಯಿಂದ ಹಣಕೂಡಿಸಿ ವೆಚ್ಚಮಾಡಿರುವರು. ಇಂತಹ ಆಸಕ್ತಿಯನ್ನು ಪ್ರಜಾಸುಖದಲ್ಲಿಯೂ ತೋರ್ಪಡಿಸಲಿಕ್ಕೆ ಒಂದು ಒಳ್ಳೇ ಸಂದರ್ಭವಿರುವದು. ಆ ದೊಡ್ಡ ಸರಕಾರಿ ಉದ್ಯೋಗಸ್ಥರೂ ಇತರ ಐಶ್ವರ್ಯವಂತರೂ ನಮ್ಮ ಜಿಲ್ಲೆಗೆ ಬಂದೊದಗಿದ ಈ ವಾಂತಿಭೇದಿಯ ಸಂಕಷ್ಟವನ್ನು ನಿವಾರಿಸುವರೆ ಯಾವ ಏರ್ಪಾಡುಗಳನ್ನು ಮಾಡುವರೆಂಬುದನ್ನು ಇನ್ನು ತಿಳಿಯಲಿಕ್ಕಿರುವದು.

ಚಿತ್ರಪ್ರದರ್ಶನವು.

(ಕೃಷ್ಣಪಾದ ಬ್ರಾಹ್ಮಣರು.)

ಗೋವಿಂದರಾವ್ ಬಿ. ಎ. ಮತ್ತು ಕುಂಬಾಲ ಬೊಗ್ಗು—ಇವರೊಳಗೆ ನಡೆದ ಸಂವಾದವು.

ಬೊಗ್ಗು—[illegible]

ಗೋವಿಂದರಾವ್—ಯಾರೋ! ಯಾರು! [illegible]

ಬೊ—ಬುದ್ಧೀ ವಂದೇ ಮಾತರಂ.

ಗೋ—ಏಕೆ ಬಂದಿಯೋ?

ಬೊ—ತಾವು ಸ್ವದೇಶಿ ಕೈಗಾರಿಕೆ ಕಾರಖಾನೆಯನ್ನು ಇಡುತ್ತೀರೆಂತ ಕೇಳಿ ಬಂದೆ. ತಮ್ಮ ಕಾರಖಾನೆಯಲ್ಲಿ ನನಗೆ ಒಂದು ಪೇದೆ ಉದ್ಯೋಗ ಕೊಡೋಕಾಗ ಬೇಕು. ನಾನು ಪ್ರೈಮರಿ ಪಾಸಾಗಿದ್ದೇನೆ. ಕನ್ನಡ ವರ್ತಮಾನ ಪತ್ರಗಳನ್ನು ಓದುತ್ತೇನೆ. ಲಕೋಟಿ ಮೇಲೆ ಬರೆದ ವಿಳಾಸವನ್ನು ಓದಬಲ್ಲೆನು. ಹೊರ ಕುಳಗಳಿಗೆ ಬಿಲ್ಲುಗಳನ್ನು ಕೊಟ್ಟು ಹಣ ವಸೂಲು ಮಾಡಬಲ್ಲೆನು.

ಗೋ—ಹೂಂ, ನೀನು ಯಾವಜಾತಿಯವನೋ?

ಬೊ—ನಾನು ಕೃಷ್ಣಪಾದ ಬ್ರಾಹ್ಮಣನು.

ಗೋ—ಕೃಷ್ಣಪಾದ ಬ್ರಾಹ್ಮಣ! ಕೃಷ್ಣಪಾದ ಬ್ರಾಹ್ಮಣ! ಇಂತಹ ಹೆಸರು ನಾನು ಈ ವರೇಗೆ ಕೇಳಲಿಲ್ಲ

ಗೋ—ನಿನಗೆ ಯಜ್ಞೋಪವೀತ ಉಂಟೇ?

ಬೊ—ಹಾಗಂದರೇನು? ಬುದ್ಧೀ.

ಗೋ—ಯಜ್ಞೋಪವೀತವೆಂದರೆ "ಜನಿವಾರ" ಹತ್ತಿಯ ಮೂರು ನೂಲುಗಳಿರುವ ಸಪೂರವಾದ ಹಗ್ಗ ಬ್ರಾಹ್ಮಣರು ಕುತ್ತಿಗೆಗೆ ಹಾಕಿಕೊಳ್ಳುವಂಥಾದ್ದು

ಬೊ—ಹೌದು ಬುದ್ಧೀ ಉಂಟು ತಮಗೆ ಹೆಗಲ ಮೇಲೆ ಜನಿವಾರ ಉಂಟು ನನಗೆ ಸೊಂಟಕ್ಕೆ ಉಂಟು ತಮ್ಮ ಹತ್ತಿರ ಹಣದ ಪೆಟ್ಟಿಗೆ ಇರುವದರಿಂದ ತಾವು ಬೀಗದಕೈಗಳನ್ನು ಜನಿವಾರಕ್ಕೆ ಕಟ್ಟಿಕೊಳ್ಳುತ್ತೀರಿ ನಮಗೆ ಹಣವಿಲ್ಲ ಆದದರಿಂದ ಬೀಗದಕೈಗಳು ಅಗತ್ಯವಿಲ್ಲ ಲಂಗೋಟಿ ಅಗತ್ಯವಿರುವದರಿಂದ ನಾವು ಸೊಂಟಕ್ಕೆ ಹಾಕಿಕೊಂಡು ಲಂಗೋಟಿಯನ್ನು ಅದಕ್ಕೆ ಕಟ್ಟಿಕೊಳ್ಳುತ್ತೇವೆ

ಗೋ—ಏನೋ-ನಿನ್ನ ಸೊಂಟದ ನೂಲು ಬ್ರಾಹ್ಮಣರ ಜನಿವಾರಕ್ಕೆ ಸಮಾನವಾದ್ದೆಂತ ಹೇಳುತ್ತೀಯೋ?

ಬೊ—ದಮ್ಮಯ್ಯ ಬುದ್ಧೀ, ನಾನು ಹಾಗೆ ಸರ್ವಥಾ ಹೇಳಲಾರೆ ಬ್ರಹ್ಮಜ್ಞಾನಿಗಳಾಗಿ ಬ್ರಹ್ಮನಲ್ಲಿ ಐಕ್ಯರಾಗ ನಡೆಯುವ ಬ್ರಾಹ್ಮಣರೆಂಬ ಪೂರ್ವ್ವಪುರುಷರ ಹೆಗಲ ಮೇಲೆ ಇರುವ ಮನೋದಂಡ, ವಾಗ್ದಂಡ, ಕಾಯದಂಡವೆಂಬ ಅರ್ಥವನ್ನು ಸೂಚಿಸುವ ಮೂರು ನೂಲುಗಳಿರುವ ಯಜ್ಞೋಪವೀತ ಪರಿಶುದ್ಧವಾದದ್ದೆಂದು ನನ್ನ ಸೊಂಟದ ಹುರಿ ಅಂಥಾ ಯುಕ್ತಿ ಪವಿತ್ರದಂತೆ ಸರ್ವದಾ ಪರಿಶುದ್ಧವಾದದ್ದಲ್ಲ

ಗೋ—ನಿನ್ನ ಮಾತಿನ ಅರ್ಥವೇನೋ? ನಿನ್ನ ಸೊಂಟದ ಹಗ್ಗ ನನ್ನ ಜನಿವಾರಕ್ಕೆ ಸರಿಯಾದ್ದೆಂದು ಹೇಳುತ್ತೀಯೋ?

ಬೊ—ಬುದ್ಧೀ, ಹಾಗೆ ಹೇಳಿಕ್ಕೆ ನಾನು ಸಮರ್ಥನಲ್ಲ ನನ್ನ ಸೊಂಟದ ಜನಿವಾರ ತಿಂಗಳಿಗೆ ಒಮ್ಮೆ ಕಡಿದು ಹಾಕುತ್ತೇನೆ ತಮ್ಮ ಜನಿವಾರ ತಾವು ವರುಷಕ್ಕೆ ಒಮ್ಮೆ ತೆಗೆಯುವಂತಾದ್ದು ತಮ್ಮ ಜನಿವಾರ ಈಗ ಗಾಣಕ್ಕೆ ಹಾಕಿದರೆ 1 ಕುತ್ತಿ ಎಣ್ಣೆ 2 ವ[illegible] ಸಿಕ್ಕೀತು ಅಷ್ಟು ಯೋಗ್ಯತೆ ತಮ್ಮ ಜನಿವಾರದಲ್ಲಿ ಉಂಟು

ಗೋ—ನಿನ್ನ ಗೋತ್ರ ಯಾವದೋ ವೇದ ಯಾವದೋ ನಿನ್ನ ಋಷಿ ಯಾರೋ ನಿನಗೆ ಗಾಯತ್ರಿ ಉಂಟೋ ನಿನಗೆ ಆಚಮಾನ್ಯ ಬರುತ್ತದೋ?

ಬೊ—ಎಲ್ಲ ತಮ್ಮದೇ—ಗೋತ್ರ, ವೇದ, ಋಷಿ, ಗಾಯತ್ರಿ, ಆಚಮಾನ್ಯ ಎಲ್ಲಾ ತಮ್ಮದೇ ತಾವು ಆಚಮಾನ್ಯ ಹೇಳಿರಿ

ಗೋ—ಏನೋ ನಾನು ಲೋವರಸೆಕಂಡರಿ ಪಾಸಾದಂದಿನಿಂದ ಸಂಧ್ಯಾವಂದನೆ ಮಾಡುವ ಕ್ರಮ ಬಿಟ್ಟೆ ಆದದರಿಂದ ಈಗ ನನಗೆ ಮರತುಹೋಗಿದೆ ಮೊದಲು ಎಲ್ಲವೂ ನನಗೆ ಗೊತ್ತಿತ್ತು ನನ್ನ ಹಿರಿಯರಿಗೆ ಎಲ್ಲಾ ಗೊತ್ತುಂಟು

ಬೊ—ನನ್ನ ಹಿರಿಯರಿಗೂ ಗೊತ್ತಿತ್ತು ಬುದ್ಧೀ—ವೇದಗಳನ್ನು ತಮಿಳು ಭಾಷೆಯಲ್ಲಿ ತರ್ಜುಮೆ ಮಾಡಿದ ಕಪಿಲನು ನನ್ನ ಜಾತಿಯವನು ರೊಮೇಶ ಚಂದ್ರದತ್ತರು ಇತ್ತಲಾಗೆ ಅಲ್ಲವೇ ಬಂಗಾಳಿ ಭಾಷೆಯಲ್ಲಿ ವೇದಗಳನ್ನು ತರ್ಜುಮೆ ಮಾಡಿದ್ದು? ಸಹಸ್ರಜಾತಿಯ ಬ್ರಾಹ್ಮಣರೂ ಹಿಂದುಸ್ಥಾನದಲ್ಲಿ ಇರುತ್ತಾರೆ. ಯಾರಾದರೂ ಯಾವ ಭಾಷೆಯಲ್ಲಿಯಾದರೂ ವೇದಗಳನ್ನು ತರ್ಜುಮೆ ಮಾಡಿದ್ದುಂಟೇ? ಚೊಕ್ಕನು ಕನಕನು ಬಕ್ತಿಮತಿಯೂ ಇವರೆಲ್ಲಾ ಮಹಾ ಭಕ್ತರು ನನ್ನ ಜಾತಿಯವರಾಗಿದ್ದರು ತಮ್ಮ ಜಾತಿಯಲ್ಲಿ ಈಗಿನ ಕಾಲದಲ್ಲಿ ಇಂತಹ ಭಕ್ತರು ಇದ್ದಾರೇನು?

ಗೋ—ಏನೋ-ನಿನ್ನ ಜಾತಿ ನನ್ನ ಜಾತಿಗಿಂತಲೂ ಮೇಲಜಾತಿಯೆಂತ ಹೇಳುತ್ತೀಯೋ?

ಬೊ—ಬುದ್ಧೀ ಸರ್ವಥಾ ನಾನು ಹಾಗೆ ಹೇಳಲಾರೆ.

ಗೋ—ಕೃಷ್ಣಪಾದ ಬ್ರಾಹ್ಮಣ ಎಂದರೆ ಅರ್ಥವೇನು?

ಬೊ—ಕೃಷ್ಣಪಾದವೆಂದರೆ ಮಹಾ ಪರಿಶುದ್ಧ ಮಾತು. ಈಗಿನ ಕಾಲದಲ್ಲಿ ತಮ್ಮ ಜಾತಿಯವರು ನಮಗೆ ಕಪ್ಪುಕಾಲಿನವರೆಂತ ಕುಚೋದ್ಯಮಾಡುತ್ತಾರೆ.

ಗೋ—ಓಹೋ!—ನೀನು ಹೊಲೆಯನೇ! ನೀನು ಹೊಲೆಯನೇ!

ಬೊ—ಬುದ್ಧೀ-ನಾನು ಹೊಲೆಯನಲ್ಲ-ವಿದ್ಯಾವಂತನಾಗಿರುತ್ತಾ ಸೃಷ್ಟಿಕರ್ತನಾದ ದೇವರನ್ನು ಆರಾಧಿಸದೇ ಆತನನ್ನು ಮರೆತು ನಡಿಯುವವನು ಹೊಲೆಯ. ದೇವರು ಕೊಟ್ಟ ಅನ್ನವನ್ನು ಆತನ ಕೃಪೆ ಸ್ಮರಿಸದೇ ನಾಯಿ ಅಥವಾ ಬೆಕ್ಕು ಅನ್ನ ತಿನ್ನುವ ಹಾಗೆ ತಿಂದು ಊಟಮಾಡುವವನು ಹೊಲೆಯ. ಹೆತ್ತವರಿಗೂ ಹೆಂಡತಿಗೂ ತಿಳಿಯದ ಹಾಗೆ ಮ್ಲೇಂಛರ ಹೋಟೇಲಿಗೆ ಹೋಗಿ ಶರಾಬು ಕುಡಿಯುವವನು, ಅಸಹ್ಯ ಪದಾರ್ಥಗಳನ್ನು ತಿನ್ನುವಂಥವನು ಹೊಲೆಯ.

ಗೋ—ಏನೋ ಬಾಯಿತಪ್ಪಿ ಮಾತನಾಡುತ್ತೀ.

ಬೊ—ಬುದ್ಧೀ ತಮಗೆ ನಾನು ಹೇಳಿದ್ದಲ್ಲ-ತಮಗೆ ಇಂತಹ ಲಕ್ಷಣಗಳು ಉಂಟೆಂತ ನನಗೆ ಗೊತ್ತಿರಲಿಲ್ಲ-ಬುದ್ಧೀ-ಶಿಕ್ಷೆ ಮಾಡಬೇಡಿರಿ

ಗೋ—ನಿನ್ನ ಜಾತಿಯವರು ಶೇಂದಿ ಕುಡಿಯುವದಿಲ್ಲವೊ? ಅಸಂಖ್ಯವಾದಂಥಾ ಮಾಂಸ ತಿನ್ನುವದಿಲ್ಲವೊ?

ಬೊ—ಬುದ್ಧೀ ಕಾಫಿ, ಚಾ, ಕೊಕೋ, ಕೋಲಾ, ರುಲಾಂ, ಸಾಗು, ಮೊದಲಾದ ಪಾನಗಳನ್ನು ಕುಡಿಯುವದಕ್ಕೆ ನಮ್ಮ ಹತ್ತರ ಹಣ ಇಲ್ಲ ನಾವು ಸಾಗುವಳಿ ಮಾಡಿ ಉಂಟು ಮಾಡುವ ಅಕ್ಕಿ ಮೇಲು ಜಾತಿಯವರು ತಿನ್ನುತ್ತಾರೆ ನಮಗೆ ಸಿಕ್ಕುವದಿಲ್ಲ ಆದದರಿಂದ ನನ್ನ ಜಾತಿಯವರು ಶೇಂದಿ ಕುಡಿಯುತ್ತಾರೆ ಅಸಹ್ಯವಾದ ಮಾಂಸ ತಿನ್ನುತ್ತಾರೆ ತಮಗೆ ಹಾಗೋ ಬುದ್ಧೀ?

ಗೋ—ಬಾಯಿ ತಪ್ಪಿ ಮಾತನಾಡಬೇಡ ನೀನು ಹೊಲೆಯ ನಿನಗೆ ಮುಟ್ಟಿಕ್ಕೆ ಆಗುವದಿಲ್ಲ ನಿನಗೆ ಪೇದೆ ಉದ್ಯೋಗ ಕೊಡುವದಕ್ಕೆ ಸಾಧ್ಯವಿಲ್ಲ ಹೋಗು ನಡಿ

ಬೊ—ಬುದ್ಧೀ ಹಾಗೆ ಒಪ್ಪಣೆ ಕೊಡಬೇಡಿರಿ ತಾವು ಸ್ವದೇಶಿ ದೀಕ್ಷೆ ಹಿಡಿದವರು ನಮಸ್ಕಾರವೆಂತ ಹೇಳುವ ನನಗೆ ವಂದೇ ಮಾತರಂ ಎಂತ ಹೇಳುವಂಥವರು "ಮುಟ್ಟಿಕ್ಕೆ ಆಗುವದಿಲ್ಲ, ಹೋಗು ನಡಿ" ಎಂತ ಅಪ್ಪಣೆ ಕೊಡಬೇಡಿರಿ ಇಂತಹ ಭ್ರಾಂತಿ ನಮ್ಮ [illegible] ಪೂರ್ವಿಕರಲ್ಲಿ ಇರಲಿಲ್ಲ ಅವರು ಮಹಾ ಜನಾಂಗವೆಂತ ಕೀರ್ತಿ ಇದ್ದವರಾಗಿದ್ದರು ವಿಲಾಯತಿ ಜನರ ಮಧ್ಯವೂ ಇಂತಹ ಭ್ರಾಂತಿ ಇಲ್ಲ ಆದುದರಿಂದ ವಿಲಾಯತಿ ಜನಾಂಗಗಳೆಲ್ಲಾ ಮಹಾ ಜನಾಂಗವೆಂತ ಅನ್ನಿಸಿಕೊಳ್ಳುತ್ತಾರೆ ಜಪಾನಿನಲ್ಲಿ ಈಗ ಚಕ್ರವರ್ತಿ ಮಿಕಾಡೋರವರು ನಮ್ಮ ಜಾತಿಯವರಾದ [illegible] ಕಾಲೇಜುಗಳಲ್ಲಿಯೂ [illegible]ಯೂ ಇತರ ಸರಕಾರಿ ಆಫೀಸುಗಳಲ್ಲಿಯೂ ಸೇರಿಸಿಕೊಂಡದ್ದರಿಂದ ಜಪಾನು ಈಗ ದಿವ್ಯವಾಗಿದೆ ರುಶ್ಯನ್ ಯುದ್ಧದಲ್ಲಿ ನಮ್ಮ ಜಾತಿಯವರಲ್ಲವೇ ರುಷ್ಯರನ್ನು ಅಪಜಯ ಪಡಿಸಿ ಜಪಾನ ದೇಶಕ್ಕೆ ಮಹಿಮೆ ಸಂಪಾದಿಸಿದ್ದು? ನಾವು ಈ ತಕ್ಕ ದೇಶದಲ್ಲಿ ಸುಖಿಗಳಾಗಿ ಸ್ವರಾಜ್ಯ ಅನುಭವಿಸಿ ಇದ್ದೆವು ತಮ್ಮ ಜಾತಿಯವರು ಉತ್ತರ ಹಿಂದ ಸ್ಥಾನದಿಂದ ನಮ್ಮ ದೇಶಕ್ಕೆ ಬಂದು ನಮ್ಮ ರಾಜ್ಯ ನಮ್ಮ ಸಂಪತ್ತು, ಎಲ್ಲವನ್ನೂ ನಮ್ಮಿಂದ ಕಸಕೊಂಡು ನಮ್ಮನ್ನು ಗುಡ್ಡಗಳಿಗೆ ಕಾಡುಗಳಿಗ ಓಡಿಸಿದರು ನಮ್ಮ ಸ್ಥಿತಿಯನ್ನು ಕೆಡಿಸಿದರು ತಮ್ಮ ಸ್ಥಿತಿಯನ್ನೂ ಕೆಡಿಸಿ ಕೊಂಡರು ತಮ್ಮ ಜಾತಿಯವರು ನಮ್ಮ ಜಾತಿಯವರನ್ನು ದಯೆಯಿಂದ ನಡಿಸಿದರೆ ಪರಕೀಯ ಜನಾಂಗದವರು ನಮ್ಮ ದೇಶಕ್ಕೆ ಒಂದಾಗ್ಯೆ ನಾವು ತಮಗೆ ಬಿಟ್ಟು ಹಾಕುವದಿತ್ತೇ? ತಾವು ನಮಗೆ ಸಹಾಯ ಮಾಡಬೇಕಿತ್ತು ಆದರ ಬದಲಿಗೆ ದಯಾಳುವಾದ ಇಂಗ್ಲಿಷ ಸರಕಾರದವರು ನಮಗ ಸಹಾಯ ಮಾಡುವಾಗ್ಯೆ ತಾವು ನಮ್ಮ ಶತ್ರುಗಳಾಗಿ ಅಡ್ಡ ಬರುತ್ತೀರಿ ನಮಗೆ ಸಹಾಯಮಾಡುವವರಿಗೆ ದೂಷಿಸುತ್ತೀರಿ ಸ್ವದೇಶಿ ವ್ರತಧಾರಿಗಳಾಗಿರುತ್ತೀರಿ ಪರಂತು ಸ್ವದೇಶಿ ಎಂಬ ಮಾತಿನ ಅರ್ಥವೇನೆಂಬದು ತಾವು ಆಲೋಚಿಸಲಿಲ್ಲ ಮಾತು ಮಾತಿಗೆ 'ವಂದೇ ಮಾತರಂ' ಎಂತ ಒದರುತ್ತೀರಿ ಆಹ! 'ವಂದೇ ಮಾತರಂ' ಎಂಬದು ಎಂತಹ ಪರಿಶುದ್ಧ ಮಾತು ಸ್ವದೇಶಾಭಿವೃದ್ಧಿ ಏನೆಂಬದು ತಿಳಿಯದ ಮೂಢರು ಭ್ರಷ್ಟ ನಾಲಿಗೆಯಿಂದ ಅಂಥಾ ಪರಿಶುದ್ಧ ಮಾತು ಉಚ್ಚರಿಸುವದರಿಂದಲ್ಲವೇ 'ವಂದೇ ಮಾತರಂ' ಎಂತ ಹೇಳುತ್ತಲೇ ವಿಲಾಯತಿ ಜನರಿಗೆ ಸಿಟ್ಟು ಬರುವಂಥಾದ್ದು? **ವಿಲಾಯತಿಯಲ್ಲಿಯೂ ಜಾತಿ ಎಂಬದು ಉಂಟೆಂತ ತಾವು ಹೇಳುವಿರಿ. ಪರಂತು ಅಲ್ಲಿ ಭ್ರಾಂತಿ ಇಲ್ಲ. ನೀಚನು, ಉತ್ತಮನು, ಬಡವನು ಸಂಪನ್ನನು ಎಂಬ ಜಾತಿಭೇದ ವಿಲಾಯತಿಯಲ್ಲಿ ಉಂಟು. 'ಬಾವಿಗೆ ಮುಟ್ಟ ಕೂಡದು. ಕೊಡೆಗೆ ಮುಟ್ಟ ಕೂಡದು. ಸತ್ರಕ್ಕೆ ಮುಟ್ಟ ಕೂಡದು. ಮಾಡಿನ ಒಳಗೆ ಬರ ಬಾರದು'**

ಎಂಬ ಈ ಭ್ರಾಂತಿ ಸ್ವೇಚ್ಛಾಸ್ಥಿತಿ ಹೊಂದಿದ ನಮ್ಮ ಹಿಂದುಸ್ಥಾನದಲ್ಲಿ ಅಲ್ಲದೇ ಧರಿತ್ರಿಯಲ್ಲಿ ಯಾವ ಕಡೆಯಲ್ಲಿಯಾದರೂ ಉಂಟೇ?

ಗೋ—ಬೊಗ್ಗ!-ಸಾಕು! ಸಾಕು! ನಿನ್ನ ಭಾಷಣಕ್ಕೆ ಮೆಚ್ಚಿದೆ. ನಾಳೆ ಬಾ. ನಾಳೆ ಮಾತನಾಡುವ.

ದಾಸ ಭಟ್ಟ.

ಡಿಸೆಂಟ್ರ್ಯಾಲೈಜೇಶನ್ ಕಮಿಶನ್.

ಇಂಡಿಯಾ ಸರಕಾರದವರು ತಮ್ಮ ಅಧೀನವಿರುವ ಸರಕಾರಗಳಿಗೂ ಮುಖ್ಯ ಉದ್ಯೋಗಸ್ಥರಿಗೂ ಈಗ ಇರುವ ಅಧಿಕಾರಿಗಳಿಗಿಂತ ಹೆಚ್ಚಿನ ಅಧಿಕಾರವನ್ನು ಕೊಟ್ಟು ರಾಜ್ಯಾಧಿಕಾರದಲ್ಲಿ ಪ್ರಜೆಗಳಿಗೆ ಸ್ವಲ್ಪ ಮಟ್ಟಿನ ಹೆಚ್ಚಿನ ಸ್ವಾತಂತ್ರ್ಯವನ್ನು ಕೊಡುವದು ಯಾವ ತರದಲ್ಲೆಂಬದನ್ನು ನಿಶ್ಚಯಿಸುವದು ಈ ಡಿಸೆಂಟ್ರ್ಯಾಲೈಜೇಶನ್ ಕಮಿಶನ್ ಯಾ ಸಭೆಯ ಮುಖ್ಯ ಉದ್ದಿಶ್ಯವಾಗಿರುವದು. ಜಿಲ್ಲಾ ಕಲೆಕ್ಟರವರುಗಳೂ, ಆಯಾ ಸಂಸ್ಥಾನದ ಸರಕಾರಗಳೂ ಪ್ರಕೃತ ಅಲ್ಪ [illegible]ತಿಗಳನ್ನ ಸಹಾ ಇಂಡಿಯಾ ಗವರ್ನಮೆಂಟಿನವರ ಅಪ್ಪಣೆಯಿಲ್ಲದೆ ಮಾಡಲಶಕ್ತರು. ಮ್ಯುನ್ಸಿಪಾಲ್ ಡಿಸ್ಟ್ರಿಕ್ಟ್ ಬೋರ್ಡುಗಳು ಜೀವಕಳೆಯಿಲ್ಲದ ಸಂಸ್ಥೆಗಳಾಗಿರುವವು. ಇದರಿಂದ ಕಲೆಕ್ಟರುಗಳಿಗೂ ಇತರ ಸಂಸ್ಥೆಗಳಿಗೂ ತಮ್ಮ ತಮ್ಮ ಪ್ರಮುಖ ಸರಕಾರಗಳೊಟ್ಟಿಗೆ ಕಾರ್ಯವ್ಯವಹಾರದ ಆಫೀಸಿನ ಕೆಲಸವೇ ಹೆಚ್ಚಾಗಿ ಪ್ರಜಾ ಸಂಪರ್ಕಕ್ಕೆ ಸಮಯ ದೊರಕದೆ ಕೊನೆಯಲ್ಲಿ ಸರಕಾರದವರ ಮುಖ್ಯ ಕರ್ತವ್ಯವೇ ಸರಿಯಾಗಿ ಸಾಗುವದು ಕಷ್ಟಸಾಧ್ಯ. ಸ್ಥಳೀಯ ಸರಕಾರದವರಿಗೆ ಒಳಪಟ್ಟ ಮ್ಯುನ್ಸಿಪಾಲ್ ಮತ್ತು ಡಿಸ್ಟ್ರಿಕ್ಟ್ ಬೋರ್ಡಿನವರ ಗತಿಯು ಸಹಾ ಹೀಗೆಯೇ. ಈಗ ಕಲೆಕ್ಟರವರಿಂದ [illegible] ಡಿಸಿಮಿಸ್ ಮಾಡಲ್ಪಟ್ಟ 5 ರೂಪಾಯಿ ವೇತನ ದೊರೆಯುವ ಪೇದೆಗೆ ಸಹಾ ಕಲೆಕ್ಟರವರ ಅಪ್ಪಣೆ ಮೇಲೆ ರೆವಿನ್ಯೂ ಬೋರ್ಡಿಗೂ ಮುಂಬಯಿ ಗವರ್ನಮೆಂಟಿನವರಿಗೂ ಕಡೆಗೆ ಇಂಡಿಯಾ ಗವರ್ನಮೆಂಟಿನವರಿಗೂ ಅಪೀಲುಮಾಡುವ ಅಧಿಕಾರವಿರುವದು. ಶೇಕಡಾ 99ರಂತೆ ಈ ಅಪೀಲುಗಳಲ್ಲಿ ಕಲೆಕ್ಟರವರ ಅಪ್ಪಣೆಯೇ ಊರ್ಜಿತ ಉಳಿಯುವದು. ಹೀಗಿರುತ್ತಾ ಇಂತಹ ಅಧಿಕಾರವನ್ನು ಸಹಾ ಮೇಲಿನ ಸರಕಾರದವರ ಇಟ್ಟುಕೊಂಡು ಪ್ರಯೋಜನವೇನು? 'ಅಡ್ವೈಸರಿ ಕೌನ್ಸಿಲ್' ಯಾ ಆಲೋಚನಾ ಸಭೆಗಳನ್ನು ಕಲೆಕ್ಟರುಗಳ ಸಹಾಯಾರ್ಥವಾಗಿ ನಿಯಮಿಸಿ ಅವರಿಗೆ ಹೆಚ್ಚಿನ ಅಧಿಕಾರಗಳನ್ನು ಕೊಡುವದು. ಮ್ಯುನ್ಸಿಪಾಲ್ ಮತ್ತು ಡಿಸ್ಟ್ರಿಕ್ಟ್ ಬೋರ್ಡಿನವರಿಗೆ ಸ್ವಲ್ಪಮಟ್ಟಿಗೆ ಸ್ವತಂತ್ರಾಧಿಕಾರ ನೀಡುವದು, ಹೀಗೆಯೇ ರೆವಿನ್ಯೂ ಬೋರ್ಡಿನವರಿಗೂ ಆಯಾ ಸಂಸ್ಥಾನಗಳ ಸರಕಾರದವರಿಗೂ ಸಹಾ.

ಚಕ್ರವರ್ತಿಯವರು ತನ್ನ ಹಿಂದುಸ್ಥಾನದ ಪ್ರಜೆಗಳನ್ನಾಳುವ ಸರಕಾರಗಳಲ್ಲಿರುವ ನ್ಯೂನಾತಿರಿಕ್ತಗಳನ್ನ ಮಾಜುವರೆ ಈ ಕಮಿಶನನ್ನು ನೇಮಕಮಾಡಿರುವರು. ಇದರ ಅಧ್ಯಕ್ಷರು ಇಂಡಿಯಾ ಸರಕಾರದವರ 'ಅಂಡರ್ ಸೆಕ್ರೆಟರಿ'ಗಳಾದ ಮಿ। ಹೋ[illegible] ದ್ ಹಾಬ್‌ಹೌಸ್ [illegible] ಈ ಸಭೆಗೆ [illegible] ಮೇಶ ಚಂದ್ರದತ್ತರೂ ಕೂಡಿ ಆರು ಜನ ಮೆಂಬರುಗಳಿರುವರು. ಈಗ [illegible]ಲ್ಲಿ ಈ ಸಭೆಯವರ ತನಖಿ ನಡೆಯುತ್ತಿರುವದು. ತನಖಿಯಲ್ಲಿ ಅನೇಕ ಜನ ಆಫೀಸರುಗಳ ಮ ಪ್ರಜಾಮುಖಂಡರ ಅಭಿಪ್ರಾಯಗಳನ್ನು ಕೇಳುತ್ತಿರುವರು. ನಮ್ಮ ಜಿಲ್ಲಾ ಕಲೆಕ್ಟರವರಾದ ಖಾನ್ ಸಾಹೇಬ ಅಜೀಜ್ ಉದ್‌ದ್ದಿನ್ ಸಾಹೇಬ ಬಹದೂರರವರನ್ನು ಅವರ ಅಭಿಪ್ರಾಯ ಮ ಅನುಭವಗಳನ್ನು ಕೇಳುವ ಬಗ್ಗೆ ಈ, ಸಭೆಯವರು ಮದ್ರಾಸಿಗೆ ಇವರನ್ನು ಆಮಂತ್ರಿಸಿರುವರು. ಈ ವಿಷಯದ ಕುರಿತು ಮುಂದಕ್ಕೆ ನಡಿಯುವ ಸಮಾಚಾರಗಳನ್ನು ನಮ್ಮ ಮುಂದಿನ ಸಂಚಿಕೆಗಳಲ್ಲಿ ಕ್ರಮವಾಗಿ ಪ್ರಕಟಿಸುವೆವು.

ಪತ್ರವ್ಯವಹಾರ

ಅಯ್ಯಾ ಪತ್ರಕರ್ತರೇ, ಹೊಸದುರ್ಗ

ಸಮ ಜನರ ಉಪಯೋಗಕ್ಕಾಗಿ ಇಲ್ಲಿ ಇಡಲ್ಪಟ್ಟ ಆಸ್ಪತ್ರಿಯ ವೈದ್ಯ ಉದ್ಯೋಗಸ್ಥರು ಹುಕುಂ ಪ್ರಕಾರ ಆಸ್ಪತ್ರಿಯನ್ನು ಮುಚ್ಚಿ ಪ್ಲೇಗ್ ಕೆಲಸಕ್ಕಾಗಿ ಸುಬ್ರಮಣ್ಯಕ್ಕೆ ಹೋಗಿ ನಾಲ್ಕೈದು ದಿವಸಗಳಾದವು. ಈ ಆಸ್ಪತ್ರಿಗೆ ಚಿಕಿತ್ಸೆಗಾಗಿ ಬರುವ ರೋಗಿಗಳ ಸರಾಸರಿ ದಿನಂಪ್ರತಿಯ ಸಂಖ್ಯೆಯು ಹೆಚ್ಚುಕಡಿಮೆ ನೂರಕ್ಕೆ ಕಡಿಮೆಯಾಗಲಾರದು. ಇಡೀ ವರುಷಕ್ಕೆಂದು ಕಳುಹಿಸಲ್ಪಡುವ ಮದ್ದುಗಳಲ್ಲಿ ಹೆಚ್ಚಿನವು ಮುಕ್ಕಾಲು ವರುಷದಲ್ಲಿಯೇ ಮುಗಿದು ಹೋಗುತ್ತವೆ. ಈ ಎರಡು ಸಂಗತಿಗಳೇ ಈ ಆಸ್ಪತ್ರಿಯ ಪ್ರಯೋಜನವೂ ಕೆಲಸವೂ ಎಷ್ಟೆಂಬುದನ್ನು ರುಜು ಪಡಿಸುವವು. ಆಸ್ಪತ್ರಿಯು ಇಲ್ಲದಿದ್ದರೆ ಜನರು ತಮ್ಮ ಕೈಲಾದ ಮದ್ದನ್ನು ಅನುಕೂಲಪಡಿಸಿ ರೋಗಚಿಕಿತ್ಸೆಯನ್ನು ಹೊಂದುತ್ತಿದ್ದರು. ಇತ್ತಲಾಗೆ ಕಳೆದ 15 ವರುಷಗಳಿಂದ ನಡೆಯುತ್ತಿದ್ದ ಆಸ್ಪತ್ರಿಯ ಕೆಲಸವು ಊರ ವೈದ್ಯರನ್ನು ದುರ್ಬಲ ಪಡಿಸಿ ಊರಿಂದ ಓಡಿಸಿ ಬಿಟ್ಟಿತು. ಈಗಲೋ ಆಸ್ಪತ್ರಿಯು ಮುಚ್ಚಲ್ಪಟ್ಟದ್ದರಿಂದ ಜನರು ಹೆಚ್ಚು ಕಳವಳ ಪಡುತ್ತಾರಲ್ಲದೆ ದೂರ ಊರುಗಳಿಂದ ಜನರು ಶ್ರಮ ಪಟ್ಟು ಬಂದು ನಿರಾಶೆಯಿಂದ ಹಿಂದಕ್ಕೆ ತಿರುಗುತ್ತಿರುತ್ತಾರೆ. ಆಸ್ಪತ್ರಿಯ ಸಹಾಯದಿಂದಲೇ ತಾನು ಜೀವಿಸುವೆನೆಂಬ ಪೂರ್ಣ ಭರವಸದಿಂದ ಒಬ್ಬ ರೋಗಿಯು ದೂರದಿಂದ ಬಂದು ವೈದ್ಯ ಉದ್ಯೋಗಸ್ಥರು ಇಲ್ಲದ್ದನ್ನು ಕೇಳಿ ರೋಗದಿಂದ ಈ ಊರಲ್ಲೇ ಸತ್ತು ಹೋದನು. ಹೀಗೆಯೇ ಒಬ್ಬ ಬಡ ಶಿಲ್ಪಿಗನು ಮೈ ಎಲ್ಲಾ ಸುಟ್ಟುಕೊಂಡು ಬಂದು ನಿರಾಶೆಪಟ್ಟನು. ಕೆಲವರು ಮೊಸಳೆಗಳ ಭಯಂಕರ ಘಾಯಗಳು ಮೊದಲಾದ ಸಂಕಷ್ಟಗಳೊಡನೆ ಬಂದು ಬಂದೆರಡು ದಿನ ಆಸ್ಪತ್ರಿಯ ಚಿಕಿತ್ಸೆಯನ್ನು ಪಡೆದು ಸದ್ಯ ನಿರುಪಾಯದಾಗಿದ್ದಾರೆ. ಊರಲ್ಲಿ ವಾಂತಿಭೇದಿರೋಗವು ಇನ್ನೂ ಸಮಾಧಾನವಾಗಲಿಲ್ಲ. ಅದಲ್ಲದೆ ಕಾಸರಗೋಡು ಊರಿನ ದಕ್ಷಿಣಕ್ಕೆ ನಮ್ಮ ತಾಲೂಕಿನಲ್ಲಿ ಇದೊಂದೇ ಆಸ್ಪತ್ರಿಯಾಗಿರುತ್ತದೆ.

ಈ ಊರ ಆಸ್ಪತ್ರಿಯು ಚಲೋ ಕಟ್ಟೋಣವು ಸಂತೋಷಕ್ಕೆ ಎಡೆ ಕೊಡುವದಾದರೂ ಅದರಿಂದ ಸಿಕ್ಕಬಹುದಾದ ಪ್ರಯೋಜನವು ಆಸ್ಪತ್ರಿಯು ಮುಚ್ಚಲ್ಪಡುವ ಬಂದೇ ಕಾರಣದಿಂದ ಕಡಿಮೆಯಾಗುತ್ತಾ ಬರುತ್ತಿದೆ.

ಜನರ ಹಿತಚಿಂತಕರಾದ ಸರಕಾರದವರು ಇನ್ನು ಮುಂದೆ ಆಸ್ಪತ್ರಿಯ ಪ್ರಯೋಜನವು ಸದಾ ಎಲ್ಲರಿಗೆ ದೊರಕುವಂತೆ ಮಾಡಬೇಕಾಗಿ ನಮ್ಮ ಸರ್ವರ ಪ್ರಾರ್ಥನೆಯಾಗಿರುತ್ತದೆ.

H V K

ವಿದೇಶ ವೃತ್ತಾಂತ

ಇಟಲಿಯಲ್ಲಿರುವ ರೋಮನ್ ಕೆಥೊಲಿಕರ ಘನ ಹೊಂದಿದ ಪೋಪ ಸಾಹೇಬರವರಿಗೂ ಆಗ್ರದಿಂದ ಹೋಗಿರುವ ಆರ್ಚಿಬಿಷೋಪ ಸಾಹೇಬರವರಿಗೂ ಹಿಂದುಸ್ಥಾನದ ಈಗಿನ ಅಸಮಾಧಾನ ಸ್ಥಿತಿಯ ವಿಷಯ ಸಂಭಾಷಣೆಯಾಯಿತು. ಪೋಪ ಸಾಹೇಬರವರು ಈ ಅಸಮಾಧಾನ ಸ್ಥಿತಿಯನ್ನು ಬ್ರಿಟಿಷರು ಬೇಗನೆ ಮಾಜಿಬಿಡುವರಾಗಿ ಕೋರಿದರು.

ಜರ್ಮನೀಯ ಅರಸರಾದ ಕೈಸರವರು ಇಂಗ್ಲಾಂಡಿಗೆ ಚಿತ್ತಯಿಸಿರುವರು. ಇವರ ನಿವಾಸವು ವಿಂಡ್ಸರ್ ಅರಮನೆಯಲ್ಲಿ ಆಗಿರುವದು. ಒಕ್ಸ್‌ಫರ್ಡ್ ಯುನಿವರ್ಸಿಟಿಯ ಪರ ಪ್ರತಿನಿಧಿಯಾಗಿ ಕರ್ಜನ ಪ್ರಭುಗಳವರು ಕೈಸರರನ್ನು ಸಂದರ್ಶಿಸಿದರು.

ಪ್ರಿನ್ಸ್ ಅಫ್ ವೇಲ್ಸರೂ ಅವರ ಪತ್ನಿಯರೂ ಜರ್ಮನ್ ಕೈಸರರ ಆಮಂತ್ರಣದ ಮೇರೆಗೆ ಜರ್ಮನಿಗೆ ದಯಪಾಲಿಸುವರೆ ಸಮ್ಮತಿಯನ್ನು ಕೊಟ್ಟಿರುವರೆಂದು ತಿಳಿದು ಬರುತ್ತದೆ.

ರುಶ್ಯದೇಶದ ಮತ್ತು ಹಿಂದುಸ್ಥಾನದ ರೈಲ್ವೆಗಳನ್ನು ಜೋಡಿಸುವ ಅವಶ್ಯಕತೆಯನ್ನು ತರ್ಕಿಸುವರೆ ಗವರ್ನಮೆಂಟಿನವರು ಒಂದು ಕಮಿಟಿಯನ್ನು ನೇಮಕ ಮಾಡುವರಾಗಿ "ಡೈಲಿ ಟೆಲಿಗ್ರಾಫ್" ಎಂಬ ಆಂಗ್ಲದೇಶದ ಪತ್ರಿಕೆಯ ಸೆಂಟ್ ಪೀಟರ್ಸ್‌ಬರ್ಗಿನಲ್ಲಿರುವ ಬಾತ್ಮೀದಾರರು ತಿಳಿಸಿರುವರು.

ಉತ್ತರ ಹಿಂದುಸ್ಥಾನ

'ಸಿವಿಲ್ ಎಂಡ್ ಮಿಲಿಟರಿ ಗೆಜೆಟ್' [illegible] ಸಾಹೇಬರ ಕ್ರಿಮಿನಲ್ [illegible] ಸಾಹೇಬರವರಿಗೆ 6 ತಿಂಗಳ ಕಠಿಣ ಸಜಾ, ೨೦೦ ರೂಪಾಯಿ ಜುರುಮಾನೆ ವಿಧಿಸಲ್ಪಟ್ಟಿತು. ಜುರುಮಾನೆ ಹಣವು ಸ್ಪೆರ್‌ಲಿಂಗರವರಿಂದ ಕೊಲ್ಲಲ್ಪಟ್ಟ ನೌಕರನ ಹೆಂಡತಿಗೆ ಕೊಡುವರೆ ಕೋರ್ಟಿನವರು ತೀರ್ಮಾನಿಸಿರುವರು.

ಮುಂಬಯಿ ಗವರ್ನರರ ಪತ್ನಿ ಲೇಡಿ ಕ್ಲಾರ್ಕರವರು ಕಳೆದ ತಿಂಗಳ ತಾ. 23ರಲ್ಲಿ ಮುಂಬಾಯಿಗೆ ಚಿತ್ತೈಸಿರುವರು.

ಲಾಲಾ ಲಾಜಪತರಾಯರೂ ಸರದಾರ ಅಜಿತಸಿಂಗರವರೂ ಲಾಹೋರನ್ನು ಬಿಟ್ಟು [illegible] ಕೊಂಡೊಯ್ಯಲ್ಪಟ್ಟವರೆಂದು ಹೇಳಿಸಿದ್ದಾರು [illegible] ಹೋಗುತ್ತಿರುವರು.

[illegible] ವಂದೇ ಮಾತರಂ ಪತ್ರಿಕೆಯವರು ಇವರ [illegible] ಸ್ಟೇಷನ್ ಪ್ಲಾಟ್ ಫೋರ್ಮಿನಲ್ಲಿ ಸಂದರ್ಶಿಸಲಿಕ್ಕೆ ಹೋಗಿದ್ದರು. ಪಾಲಕರವರು ಇವರನ್ನು ಆಲಿಂಗಿಸಿ, ತನ್ನ [illegible] ಇನ್ನು ಕೆಲವು ತಿಂಗಳುಗಳು ಬೇಗನೆ ದಾಖಿಲೋ[illegible]ಗುವವನಂತೆ ಹತ್ತರವಿರುವ ತನ್ನ ಮಗನನ್ನು ಸಮಜಾಯಿಸಿ [illegible] ಸೆಕೆಂಡ್ ಕ್ಲಾಸಿನಲ್ಲಿ ಇಬ್ಬರು ಗಾರ್ಡುಗಳೊಂದಿಗೆ ಪ್ರಯಾಣ ಬೆಳೆಸಿದರು

ಈ ವರುಷದ ಕೊಂಗ್ರೆಸು ಯಾ ರಾಷ್ಟ್ರೀಯ ಸಭೆಯು ಸುರತಿನಲ್ಲಿ ಜರಗುವದು. ಡಾಕ್ತರ್ ರಾಸ್ ಬಿಹಾರಿ ಘೋಷರವರು ಅಧ್ಯಕ್ಷರಾಗಿ ಆರಿಸಲ್ಪಟ್ಟಿರುವರು

ಕಳೆದ ತಿಂಗಳ ಅಕ್ಟೋಬರ ತಿಂಗಳಲ್ಲಿ [illegible] ಹೌಸಲಿನ ದರವನ್ನು ತಗ್ಗಿಸಿದರಿಂದ [illegible] ವರೆಗೆ ಆಫೀಸಿನವರ ಕೆಲಸವು ಅಧಿಕವಾಗಿರುವದು. ಕಳೆದ ವರುಷದಲ್ಲಿ [illegible] ಹೆಡ್ ಪೋಸ್ಟ ಮಾಸ್ತರರಿಗೂ, [illegible] ಸಬ್ ಪೋಸ್ಟ ಮಾಸ್ತರರಿಗೂ, [illegible] ಬ್ರೆಂಚ್ ಪೋಸ್ಟಮಾಸ್ತರರಿಗೂ, [illegible] ಪೋಸ್ಟಮನ್ನರಿಗೂ [illegible] ಇತರ ನೌಕರರಿಗೂ ಸಂಬಳ [illegible] ದ್ದರು

ಗಂಗಾನದಿಗ [illegible] ಸಂಕವನ್ನು ಕಟ್ಟಿಸುವರ [illegible] ವೊರ್ಸ್ಲೆಯವರು [illegible] ಳಿಗೆ ಇವನ್ನು [illegible]

—

ಬೆರಿಸಾಲಿನ ಡಿಸ್ಟ್ರಿಕ್ [illegible] ಎಂಬವರಂತನ್ನಕೊರ್ಟಿನಲ್ಲಿ [illegible] ಗುಮಾಸ್ತರನ್ನ ತನ್ನ [illegible] ಚಿತ್ರಗಳನ್ನು ವಿಕ್ರಯ [illegible] ಕಾರಣದಿಂದ [illegible] ವ ಆರ್ಡರುವರಂತೆ

ಬರಿಸಾಲಿನಲ್ಲಿ [illegible] ದಿನವನ್ನು ಆಚರಿಸಿದ [illegible] ಪ್ಲೀಡರರನ್ನು ಅಲ್ಲಿಯ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರು ಕೆಲಸದಿಂದ ವಿಮೋಚಿಸಿರುವರೆಂಬ ವರ್ತಮಾನವನ್ನು ಕೇಳುತ್ತೇವೆ

ಕಲಿಕತ್ತೆಯ ದೇಶಭಾಷಾ ಪತ್ರಿಕೆಗಳು ಕಳೆದ [illegible] ಬೆಯಲ್ಲಿ [illegible] ಮುದ್ರಕರನ್ನು ಪೋಲೀಸಿನವರು ಹೊಡಿಯುವ ನಕ್ಷೆಯುಳ್ಳ ಪದಗಳನ್ನು ಮುದ್ರಿಸುತ್ತಿರುವವು

ಇದೇ ತಿಂಗಳ [illegible] ತಾರೀಕಿನಲ್ಲಿ ಮುಂಬಾಯಿ ಶಹರಿನಲ್ಲಿ ಕಾವೇರಿಬಾಯಿ ಎಂಬಾಕೆಯನ್ನು [illegible] ರಾಮರಾವ್ ಎಂಬವರಿಗೆ ಕೊಟ್ಟು ವಿವಾಹವಾಯಿತು. ಶ್ರೀಮತಿ ಕಾವೇರಿಬಾಯಿ, ಮಹಾರಾಜಶ್ರೀ [illegible] ಬಾಯರ ಸಹೋದರ ಜನಾರ್ದನಯ್ಯ ಎಂಬವರ ಮಗಳು. ಸಂಸ್ಕೃತವನ್ನು ಎರಡನೇ ಭಾಷೆಯಾಗಿ ಕಲಿತು ಮೆಟ್ರಿಕ್ಯುಲೇಶನ್ ಪರೀಕ್ಷೆ ಪಾಸಾಗಿರುತ್ತಾರೆ. ಮದುಮಗನು ಮುಂಬಾಯಿ ಹ್ಯಾಕೋರ್ಟು ಜಡ್ಜರಾದ ಬಹುಮಾನಪಟ್ಟ ನಾರಾಯಣ ಗಣೇಶ ಚಂದಾವರಕರರ ಸಮ್ಮಂಧಿಕನು. ಈ ವಿವಾಹದಲ್ಲಿ ಮಹಾರಾಜಶ್ರೀ ವಿದ್ಯಾಪ್ರವೀಣರಾದ ರಾಮಕೃಷ್ಣ ಗೋಪಾಲ ಭಂಡಾರಕರರ ಮಗ ಶ್ರೀಧರ ರಾಮಕೃಷ್ಣ ಭಂಡಾರಕರರು ಪೌರೋಹಿತ್ಯ ನಡಿಸಿದರು. ಈ ವಿವಾಹವು ಸಾರಸ್ವತ ಬ್ರಾಹ್ಮಣರಲ್ಲಿ ಆದ ವಿಧವಾ ವಿವಾಹದ ಮೊದಲ ದೃಷ್ಟಾಂತವು.

ಮುಂಬಾಯಿ ಮುನ್ಸಿಪಾಲಿಟಿಯವರು ಕಳೆದ 30 ವರುಷಗಳಿಂದ ಜೀನಸುಗಳೆಲ್ಲವುಗಳಿಗೂ ಕ್ರಯವೇರುತ್ತಾ ಬರುತ್ತದ್ದಾದರಿಂದ ರೂಪಾಯಿ 25 ಮತ್ತು 40 ರ ಒಳಗಿನ ಸಂಬಳವುಳ್ಳ ಗುಮಾಸ್ತರಿಗೆಲ್ಲರಿಗೂ ಸಂಬಳ ವೇರಿಸಿರುವರು

—

ಸರ್ ಫಿರೋಜಷಹಾ ಮೇಥರವರ ಧರ್ಮಪತ್ನಿಯರು ಕಳೆದ ತಿಂಗಳ ತಾರೀಕು 12ರಲ್ಲಿ ದೈವಾಧೀನರಾದರು

ದಕ್ಷಿಣ ಹಿಂದುಸ್ಥಾನ.

—

ಮೈಸೂರು ಮಹಾರಾಜರವರು ಕುಟುಂಬ ಸಹಿತ [illegible] ಉತ್ತರ ಕಡೆ ಕೆಲವು ಸ್ಥಳಗಳಲ್ಲಿ ವಿನೋದ ಯಾತ್ರೆಗೆ ತೆರಳುವರಾಗಿ ಕೇಳುತ್ತೇವೆ

ಮದ್ರಾಸು ಗವರ್ನಮೆಂಟಿನವರ [illegible] ಶಾಲೆಗೋಸ್ಕರ [illegible] ಲಕ್ಷ ರೂಪಾಯಿ [illegible] ಮದ್ರಾಸ ಸಂಸ್ಥಾನದ [illegible] ಡಿಸ್ಟ್ರಿಕ್ [illegible] ಲಕ್ಷ ರೂಪಾಯಿ [illegible] ಸಂಕವನ್ನು ಮಾಡಿದ [illegible] ಲಕ್ಷ ರೂ [illegible] ರೂ [illegible]

ಕರೂಲಿನ [illegible] ರ ಗಣಪತಿಯ್ಯರವರನ್ನು ಡಿಸ್ಟ್ರಿಕ್ [illegible] ನೇಮಿಸಿರುವರು

—

ಮೈಸೂರು ಮಹಾರಾಜರವರ ಕಪ್ತನ್ [illegible] ಸಾಹೇಬರು [illegible] ಬೇಟೆಗೆ ಹೋಗಿ [illegible] ಹುಲಿಯ [illegible] ಗುಂಡು ಹೊಡೆದರು. ಆದರೆ ಆ ಪೆಟ್ಟಿನಿಂದ ಸಾಯದೆ ಎಂದು ಹೊದೆಯಲ್ಲಿ ಅವಿತಿದ್ದ ಆ ವ್ಯಾಘ್ರವು ಮಹಾರಾಜರ ಪರಿವಾರವು [illegible] ಹೊದೆಯನ್ನು ನೋಡುತ್ತಿರಲು ಸೇವಕರಲ್ಲಿ ಒಬ್ಬನ ಮೇಲೆ ಬೀಳಲು ಯುವರಾಜರವರು ತ್ವರೆಯಿಂದ ಹುಲಿಗೆ ಹೊಡೆದು ಕೊಂದರು. ಸೇವಕರಲ್ಲಿ ಒಬ್ಬನಿಗೆ [illegible] ತಾಗಿ ಅವನು ಮೃತಪಟ್ಟನು

ರಾಜಮಹೇಂದ್ರಿ ಶಹರಿನಲ್ಲಿ ತೆಲುಗು ದೇಶಸ್ಥ ಬ್ರಾಹ್ಮಣ ರಾವ ಬಹದೂರ ವಿರೇಶಲಿಂಗಂ ಪಂತಲುಗಾರು ಎಂಬವರ ಮನೆಯಲ್ಲಿ ಇದೇ ನವಂಬರ ತಿಂಗಳ ಲನೇ ತಾರೀಕಿನಲ್ಲಿ ಒಂದು ವಿಧವಾ ವಿವಾಹವಾಯಿತು. ಮದುಮಗಳು ಕಾವೇರಮ್ಮ ಎಂಬಾಕೆ. ಮದುಮಗನು ಮದ್ರಾಸು ಶಹರಿನ ರಾಯಪೇಟೆಯ ಸಬ್ ಪೋಸ್ಟ ಮಾಸ್ತರ ನರಸಿಂಹಾಚಾರ್ಯರು. ಉಭಯತರು ಜಾತಿಯಲ್ಲಿ [illegible] ಬ್ರಾಹ್ಮಣರಾಗಿರುತ್ತಾರೆ. ಈ ವಿವಾಹದಲ್ಲಿ

ತಾಂಡವ ಕೃಷ್ಣ ಶಾಸ್ತ್ರಿ ಎಂಬವರು ಪೌರೋಹಿತ್ಯವನ್ನು ನಡಿಸಿದರು.

ದಕ್ಷಿಣ ಕನ್ನಡ

—

ಪತ್ರಕರ್ತರ ವಿನಂತಿ.

ನಮ್ಮ ಈ ವರುಷದ ಕಡೇ ಸಂಚಿಕೆಯು ಈ ತಿಂಗಳ ತಾ [illegible] ಹೊರಡುವದು. ಕಳೆದ ಜನವರಿಯಲ್ಲಿ ಚಂದಾದಾರರಾದವರೆಲ್ಲರೂ ಬರುವ ವರುಷದ ಚಂದಾಹಣವನ್ನು ಕಟ್ಟಿ [illegible] ಪೇಕ್ಷಿಸುತ್ತೇವೆ. ಚಂದಾದಾರರನ್ನು ಸಂಗ್ರಹಿಸುವರೆ ನಮ್ಮ ಜಿಲ್ಲೆಯ ಪ್ರಾಮುಖ್ಯ ಊರುಗಳಿಗ ನಮ್ಮ ಪ್ರತಿನಿಧಿಯನ್ನು ಈ ತಿಂಗಳಲ್ಲಿ ಕಳಹಿಸಿ ಕೊಡುವೆವು. ಕಳೆದ ಸತಿಯಂತೆಯೇ ನಮ್ಮ ಮಿತ್ರರು [illegible] ಚಂದಾದಾರರನ್ನು ಸಂಗ್ರಹಿಸುವಲ್ಲಿ ನಮ್ಮನ್ನು ಪ್ರೋತ್ಸಾಹಿಸುವರಾಗಿ ನಂಬಿದ್ದೇವೆ

ಇತಿ

ಪತ್ರಕರ್ತ

ಮಂಗಳೂರು ಕುಂಬಾರರ, ಅಗಸರ, [illegible] ಗೊಲ್ಲರು ಮದ್ರಾಸು ಗವರ್ನಮೆಂಟಿನವರಿಗೆ ಮಾಡಿದ ಬಿನ್ನವತ್ತಳೆಗೆ ಇತ್ತಲಾಗೆ ಉತ್ತರ ದೊರಕಿರುವದು. ಈ ಮೂರು ಜಾತಿಗಳನ್ನು ಸರಕಾರದವರು ಬೇಕವಾರ್ಡ ಜಾತಿ ಯಾ ನಾಗರೀಕತನದಲ್ಲಿ [illegible] ಜಾತಿ [illegible] ಸೇರಿಸಿರುವರು. [illegible] ಪ್ರಾಯಮರಿ ವಿದ್ಯಾಭ್ಯಾಸವು ಎಲ್ಲಿಯೂ ಉಚಿತ ದೊರಕಬೇಕೆಂದೂ [illegible] ಕಂಡರಿ ಮತ್ತು ಕೋಲೇಜು ಕ್ಲಾಸುಗಳಲ್ಲಿ ಓದ [illegible] ಇವರ ವಿದ್ಯಾರ್ಥಿಗಳನ್ನು [illegible] ಪ್ಪಿಸಿದ್ದಾರೆ

ಪ್ಲೇಗಿನ ಮರಣಗಳು ಕುಂದಾಪುರದಲ್ಲಿ [illegible] ನವಂಬರ 21ಕ್ಕೆ [illegible] ವಾರದಲ್ಲಿ [illegible] ಕ್ಷೀಣ [illegible] ಶಹರಿನಲ್ಲಿ ಹರಡಿರುವದು

ಡಿಸ್ಟ್ರಿಕ್ಟ ಬೋರ್ಡಿನ [illegible] ಸಾಹೇಬರ [illegible] ತಿಂಗಳ ತಾರೀಕು 11ಕ್ಕೆ [illegible] ತಾ 15ಕ್ಕೆ [illegible] ಆಫೀಸನ್ನು ಸಂದರ್ಶಿಸಿರು [illegible] ಮತ್ತು ಪೋಲೀಸು ಸಂಗತಿಗಳಲ್ಲಿ ಕೆಲವು ವಿಷಯಗಳನ್ನು [illegible] ಮಾಡುವ ಒಕ್ಕಣೆ ಇವರು ಬಂದದ್ದೆಂತ ತಿಳಿದು ಬರುತ್ತದೆ

ಪೂಜ್ಯ ಬಾಬು ಬ್ರಾಜೆಂ ಗೋಪಾಲ ನಿಯೋಗಿ [illegible] ಶ್ರೀಕೃಷ್ಣ ಸಮಾಜದ [illegible] ಕಳೆದ ತಿಂಗಳಲ್ಲಿ ಇಲ್ಲಿಗೆ [illegible] ಇವರು ತನ್ನ ಮತ [illegible] ತಮ್ಮ ಸಮೋದವನ್ನು [illegible] ಭಾಷಣಗಳಲ್ಲಿ ಕೊಟ್ಟು ದೇವಪ್ರಾರ್ಥನಾ [illegible] ಫಲಗಳ ವಿಷ [illegible] ಸಮುದಾಯದವರೆಲ್ಲ [illegible] ತಿಳಿಸಿ [illegible]

[illegible] ಬಗ್ಗೆ [illegible] ಭಿನ್ನಬಿವ್ರಾಯ ಗಳಿದ್ದ ಗೋವಿಂದರಾಯ ಕೊಡ್ಪಿಯ ಕ್ರಿಮಿನಲ್ ಮೊಕದ್ದಮೆಯು ಹ್ಯಾಕೋರ್ಟಿನಲ್ಲಿ ತೀರ್ಮಾನಿಸಲ್ಪಟ್ಟಿತು. ಕೊಡ್ಗಿಗೆ ಎರಡು ವರುಷದ ಕಠಿಣಕಾರಾಗೃಹ ಸಜೆಯೂ [illegible] ರೂಪಾಯಿ ಜುರಮಾನೆಯೂ ವಿಧಿಸಲ್ಪಟ್ಟಿರುವದು

ಕಳೆದ ತಿಂಗಳ ತಾರೀಕು [illegible] ರಲ್ಲಿ ನಮ್ಮ ಜಿಲ್ಲಾ ಕಲೆಕ್ಟರವರಾದ ಖಾನ್ ಸಾಹೇಬ ಅಜೀಜ್ ಉದ್ದೀನ್ ಸಾಹೇಬರ ಕುಮಾರಿಯವರಿಗೆ ಮದ್ರಾಸಿನಲ್ಲಿರುವ ಅಜೀಜುದ್ದೀನ್ ಅಹಮದ್ ಎಂಬವರ ಕೂಡೆ ವಿವಾಹವಾಗುವ

ರಿ ನಿಶ್ಚಯ ತಾಂಬೂಲವಾಗಿರುವದೆಂದು ತಿಳಿದು ಬರುತ್ತದೆ. ಅಜೀಜುದ್ದೀನ್ ಅಹಮ್ಮದ್ ಸಾಹೇಬರವರು ಬಿ. ಎ. ಪರೀಕ್ಷೆಯ ಒಂದು ಶಾಖೆಯಲ್ಲಿ ಪಾಸಾಗಿರುವರು.

ಕದ್ರಿಯಿಂದ ಪಟ್ಟಣಕ್ಕೆ ನೀರೊಯ್ಯುವ ಸರಬರಾಯಿಯ ನಕ್ಷೆ ವಗೈರೆಗಳನ್ನು ತಯ್ಯಾರಿಸುವರೆ ಒಂದು ಸಿಬಂದಿಯು ನೇಮಕವಾಗುವರೆ ಸೆಂಕ್ಷನಾಗಿರುವದು.

ಕೆನರಾ ಹ್ಯಾಸ್ಕೂಲಿನ ವರುಷಾವಧಿ ಸ್ಪೋರ್ಟ್ಸ್ ಕೊಂಪಿಟೀಷನ್ ಯಾ ವಿದ್ಯಾರ್ಥಿಗಳ ಪಂಥದ ಆಟಗಳ ಸಮಾರಂಭವು ಕಳದ ತಿಂಗಳ ತಾರೀಕು ೧೭ರಲ್ಲಿ ಜರಗಿತು. ಅದಕ್ಕೆ ಸರಕಾರಿ ಉದ್ಯೋಗಸ್ಥರೂ ಇತರ ಮಾನ್ಯ ಗೃಹಸ್ಥರೂ ಆ ದಿವಸ ಹ್ಯಾಸ್ಕೂಲಿನಲ್ಲಿ ದಯಮಾಡಿದರು. ನಮ್ಮ ಡಿಸ್ಟ್ರಿಕ್ಟ್ ಜಡ್ಜ ಮಿ। ಹಾರ್ಡಿಂಗರವರು ಈ ಸಂದರ್ಭದಲ್ಲಿ ಗೆದ್ದ ವಿದ್ಯಾರ್ಥಿಗಳಿಗೆ ಇನಾಮುಗಳನ್ನು ದಯಪಾಲಿಸಿದರು. ಹಿರೇ ಹುಡುಗರಲ್ಲಿ ಕೊಪಕಾರ ಸುಂದರರಾಯರಿಗೆ ಮೆಡಲ್ ಯಾ ಬಹುಮಾನದ ಪದಕವು ದೊರಕಿರುವದು, ಕಿರಿಯರಲ್ಲಿ ಅಬ್ದುಲ್ ರೈಮಾನ್ ಎಂಬವರಿಗೆ ಈ ಬಹುಮಾನ ಸಿಕ್ಕಿರುವದು. ವಿದ್ಯಾರ್ಥಿಗಳಿಗೆ ಪಾರಿತೋಷಕಗಳನ್ನು ಹಂಚಿ ಆದ ಮೇಲೆ ಮಿ। ಹಾರ್ಡಿಂಗ ದೊರೆಗಳವರು ವಿದ್ಯಾರ್ಥಿಗಳಿಗೆ ಯಥೋಚಿತ ಬುದ್ಧಿವಾದವನ್ನು ಕೊಟ್ಟರು. ನಿಷ್ಕಳಂಕ ಸ್ವದೇಶಿ ಇಂದ್ರೇನೆಂದು ಹೇಳಿಕೊಟ್ಟು ಪಾಶ್ಚಾತ್ಯರಲ್ಲಿಯೂ ಇರುವ ಒಳ್ಳೇ ಗುಣಗಳನ್ನು ಪೌರ್ವಾತ್ಯ ಜನಾಂಗಗಳೂ ತಿಳಕೊಂಡು ಸಂಪೂರ್ಣ ಗುಣವಂತರೂ ಕಾರ್ಯಾಧ್ಯಕ್ಷರೂ ನೀತಿಜ್ಞರೂ ಆಗಬೇಕೆಂದು ಅಪ್ಪಣೆ ಕೊಟ್ಟರು. ವಿದ್ಯಾರ್ಥಿಗಳನ್ನು ಸಂಬೋಧಿಸಿ, ತಾನಿನ್ನು ಸ್ವಲ್ಪ ಸಮಯದಲ್ಲಿಯೇ ಫರ್ಲೋ ಯಾ ರಜೆಯ ಮೇಲೆ ಹೋಗ ಬೇಕೆಂದಿರುವದರಿಂದ ಆ ನಂತರ ಈ ಜಿಲ್ಲೆಗೆ ಬರುವ ಸಂದರ್ಭವು ಇಲ್ಲವಾದ್ದರಿಂದಲೂ ತಾನು ಇಂತಹ ಸಂದರ್ಭಗಳಲ್ಲಿ ಕೆನರಾ ಹ್ಯಾಸ್ಕೂ [illegible] ವಿದ್ಯಾರ್ಥಿಗಳಿಗೆ ಕೊಡುವ ಭಾಷಣವು ಕಡೆಯದಾಗಿರುವದೆಂದು ಹೇಳಿ ವಿದ್ಯಾರ್ಥಿಗಳಿಗೆ [illegible] ಗುಣವನ್ನೂ ಸ್ವಾವಲಂಬನವನ್ನೂ [illegible] ತಾನೇ ತಿಳಕೊಳ್ಳುವ ಸದ್ಗುಣವನ್ನೂ ಅಭ್ಯಾಸಿಸಿರೆಂದು ತನ್ನ ಭಾಷಣವನ್ನು ಮುಕ್ತಾಯ ಪಡಿಸಿದರು. ಮ। ರಾ। ರಾ। ಅವ್ವೆಂಬಳ ಶ್ರೀನಿವಾಸ ಪೈಗಳವರು ಶಾಲಾಧಿಕಾರಿಗಳ ಧನ್ಯವಾದವನ್ನು ಹಾರ್ಡಿಂಗ್ ದೊರೆಗಳವರಿಗೆ ಕೊಟ್ಟನಂತರ ಸಭೆಯು ಹೀತಿತು.

ಮಿ। ಎ ಜೆ ಲೋಬೊ ಬಿ ಎ, ಬಿ ಎಲ್ ಗವರ್ನಮೆಂಟ ಪ್ಲೀಡರ್ ಮತ್ತು ಪಬ್ಲಿಕ್ ಪ್ರೋಸಿಕ್ಯೂಟರವರು ಒಂದು ತಿಂಗಳ ರಜೆಯ ಮೇಲೆ ಹೋಗಿರುವರು. ಇವರ ಗೈರಹಾಜರಿನಲ್ಲಿ ರಾ। ಶ್ರೀನಿವಾಸ ಪೈಗಳು ಹ್ಯಾಕೋರ್ಟ ವಕೀಲ ಗವರ್ನಮೆಂಟ ಪ್ಲೀಡರರಾಗಿಯೂ, ಮಿ। ಬೆರಿಷ್ಟರ್ ಡ್ಯಾರವರು ಪಬ್ಲಿಕ್ ಪ್ರೋಸಿಕ್ಯೂಟರರಾಗಿಯೂ ನೇಮಕವಾಗಿರುವರು.

ಕಳದ ತಿಂಗಳ ತಾ ೧೭ರಲ್ಲಿ ಕೆನರಾ ಹ್ಯಾಸ್ಕೂಲಿನಲ್ಲಿ ಮಿ। ಸಂಜೀವರಾವ ಎಂಬವರ ಕೊಳಲ ಗಾಯನವಿತ್ತು. ಈ ಗಾಯನದಿಂದ ಹುಟ್ಟಿಬಂದ ಹಣದಲ್ಲಿ ೧೦೦ ರೂಪಾಯಿಯನ್ನು ಸಂಜೀವರಾಯರಿಗೂ, ೮೫ ರೂಪಾಯಿಗಳನ್ನು ಇಂಟರ್‌ಸ್ಕೂಲ್ ಜಿಮ್ನಾಫಂಡಿಗೂ ಹಂಚಿಕೊಟ್ಟಿರುವರು. ಮಿ। ಸಂಜೀವರಾಯರು ತನ್ನ ೧೦೦ ರೂಪಾಯಿಗಳಲ್ಲಿ ೨೦ ರೂಪಾಯಿಗಳನ್ನು ಜಿಮ್ನಾಫಂಡಿಗೇ ಕೊಟ್ಟರು. ಅದೇ ತಿಂಗಳ ತಾ ೧೯ರಲ್ಲಿ ಕಲೆಕ್ಟರವರ ಆಫೀಸಿನಲ್ಲಿ ಪ್ಲೇಗ್ ವಿಜಿಲೆನ್ಸ ಕಮಿಟಿಯ [illegible] ಸಭೆ ನೆರವಿತು. ಕಲೆಕ್ಟರವರು ಈ ಸಂದರ್ಭದಲ್ಲಿ [illegible]

[illegible] ಪ್ರತಿನಿಧಿಗಳಾದ [illegible] ಯೋಜನೆಗಳನ್ನು ವಿವರಿಸಿ ಹೇಳಿ ಸರಕಾರದವರ ಈ ಪ್ರಯತ್ನದಲ್ಲಿ ಪ್ರಜೆಗಳು ನೆರವಾಗಬೇಕೆಂದು ಅಪ್ಪಣೆ ಕೊಟ್ಟರು.

ತಾರೀಕು 20ರಲ್ಲಿ ಪಂಚಮರ ಓದು ಬರಹದ ವ ಕೈಗಾರಿಕೆಯ ಶಾಲೆಯು ಡಿಸ್ಟ್ರಿಕ್ಟ್ ಕಲೆಕ್ಟರವರಿಂದ ತೆರೆಯಲ್ಪಟ್ಟಿತು. ಮ। ರಾ। ರಾ। ವಕೀಲ್ ಕೆ. ರಂಗರಾಯರ ಸಾಹಸದಿಂದ ಕೀಳು ಜಾತಿಗಳನ್ನುದ್ಧರಿಸುವ ಇಂಥಾದೊಂದು ಸಂಸ್ಥೆಯು ನಮ್ಮ ಜಿಲ್ಲೆಯಲ್ಲಿ ಸ್ಥಾಪಿತವಾಯಿತು. ರಾಷ್ಟ್ರೀಯ ಭಾವವು ನಮ್ಮಲ್ಲಿ ನೆಲೆಗೊಂಡು ನಾವೆಲ್ಲರೂ ಐಕ್ಯಭಾವದಿಂದ ದೇಶಾಭಿವೃದ್ಧಿಯನ್ನು ಎಸಗಬೇಕಾದರೆ ಕೆಳಗಿನ ಜಾತಿವರ್ಗಗಳ ಅಭಿವೃದ್ಧಿಯೇ ಮುಖ್ಯವಾದದ್ದು. ಮುಂಬಯಿಯಿಂದ ಇಲ್ಲಿಗೆ ಬಂದಿರುವ ಮಿ। ಸಿಂಧೆಯವರು ಕೀಳು ಜಾತಿಗಳನ್ನು ಉದ್ಧರಿಸುವ ವಿಷಯ ಮಾತಾಡಿದರು. ಆ ಸಂದರ್ಭದಲ್ಲಿ ಸ್ತ್ರೀಯರಿಂದ ಮರಾಠಿ ಅಭಂಗಗಳೂ ಕನ್ನಡ ಪದಗಳೂ ಹಾಡಲ್ಪಟ್ಟವು. ಪಂಚಮರ ವಿದ್ಯಾರ್ಥಿಗಳು ಹಿಂದುಸ್ಥಾನಿಯಲ್ಲಿ ಹಾಡಿದರು. ನಂತರ ಕಲೆಕ್ಟರವರು ತಮ್ಮ ಪ್ರೀತಿಪೂರಿತ ಭಾಷಣದಿಂದ ರಂಗರಾಯರವರನ್ನು ಅವರ ಈ ಪರೋಪಕಾರದ ಕೃತ್ಯದಲ್ಲಿ ಉತ್ಸಾಹಗೊಳಿಸಿ, ಎದೆಗುಂದದೆ ಈ ಕೆಲಸವನ್ನು ಮುಂದುವರಿಸ ಬೇಕಾಗಿಯೂ ತನ್ನಿಂದಾಗುವಷ್ಟು ಸಹಾಯವನ್ನು ತಾನು ಮಾಡುವೆನೆಂದು ವಾಗ್ದಾನ ಮಾಡಿದರು. ಟ್ರಾನ್ಸ್‌ವಾಲ್ ಭಾರತೀಯರ ದೀನಸ್ಥಿತಿಯನ್ನು ಲೇಸುಗೊಳಿಸಬೇಕೆಂದು ನಾವು ಪ್ರಯತ್ನ ನಡಿಸುವಾಗ ನಮ್ಮ ದೇಶದಲ್ಲಿರುವ ಈ ಪಂಚಮರ ಅಭಿವೃದ್ಧಿಯನ್ನು ಸಾಧಿಸುವದು ನಮ್ಮ ಮೊದಲನೇ ಕರ್ತವ್ಯವಾಗಿರುವದು. ಹೀಗೆಂದು ಕಲೆಕ್ಟರವರು ತಮ್ಮ ಭಾಷಣವನ್ನು ಮುಕ್ತಾಯ ಮಾಡಿದರು.

ಡಿಸ್ಟ್ರಿಕ್ಟ್ ಸರ್ಜನ್ ಬೋಸದೊರೆಗಳವರು ಆರು ತಿಂಗಳ ರಜೆಯ ಮೇಲೆ ಹೋಗಿರುವರು. ನಮ್ಮ ಮಾಜಿ [illegible]ಬೋಪಿ[illegible] ಜಡ್ಜರಾದ ಕೃಷ್ಣಮ್ಮನವರ ಕಿರಿ ಮಗ ಈ ಸಲ ಐ ಸಿ ಎಸ್ ಪರೀಕ್ಷೆ ಪಾಸಾದ ಮಿ। ಜೋನ್ ಕೃಷ್ಣಮ್ಮ ಇವರ ತಂಗಿ ಮಿಸ್ ಕೃಷ್ಣಮ್ಮ ಎಂ ಎ. ಇವರನ್ನು ಬೋಸರವರು ವಿವಾಹ ಮಾಡಿಕೊಳ್ಳುವರಂತೆ.

ಮ। ರಾ। ರಾ। ಮಂಗಳೂರು ತಹಸಿಲ್ದಾರ ಪಾಂಡುರಂಗ ಶೆಣೈಯವರಿಗೆ ಎರಡು ತಿಂಗಳ ರಜೆ ದೊರಕಿರುವದು. ಇವರ ಗೈರಹಾಜರಿನಲ್ಲಿ ರಾ। ಇಂಗ್ಲೀಷ್ ಹೆಡ್‌ಕ್ಲಾರ್ಕ ಕಂಚಿ ಕೃಷ್ಣರಾಯರವರು ಮಂಗಳೂರು ತಹಸಿಲ್ದಾರರ ಚಾರ್ಜು ವಹಿಸಿಕೊಳ್ಳುವರು. ರಾ। ಸಿ. ನಾರಾಯಣ ರಾಯರವರು ಇಂಗ್ಲೀಷ್ ಹೆಡ್‌ಕ್ಲಾರ್ಕರ ಕೆಲಸವನ್ನೂ ಮಿ। ಎನ್ ಎಸ್ ಸಾಲ್ದಾಂಞರವರು ಸಬ್ ಮ್ಯಾಜಿಸ್ಟ್ರೇಟರ ಚಾರ್ಜನ್ನೂ ವಹಿಸಿಕೊಳ್ಳುವರು.

ಕೊಂಡೆ ಆಸ್ತಿಯನ್ನು ನಮ್ಮ ಜಿಲ್ಲೆಯ ಸಬ್ ಕಲೆಕ್ಟರವರು ಬರುವ ಫೆಬ್ರುವರಿ ತಿಂಗಳ ೩ನೇ ತಾರೀಕಿನಲ್ಲಿ ಹರಾಜು ಹಾಕುವರೆ ಪ್ರಾರಂಭಿಸುವರು.

ಕನ್ನಡ ಜಿಲ್ಲೆಗೆ ಸೆಂಕ್ಷನ್ ಮಾಡಲ್ಪಟ್ಟ ಡಿಪ್ಯುಟಿ ವೆಕ್ಸಿನೇಷನ್ ಇನ್ಸ್‌ಪೆಕ್ಟರವರು ರಾ। ಶೇಷಯ್ಯರ್ ಎಂಬವರು ಇಲ್ಲಿಗೆ ಬಂದಿರುವರು.

ಇಲ್ಲಿಯ ಪೋಸ್ಟ್ ಮಾಸ್ತರರಾದ ಮಿ। ಅಲ್ವರೀಸರು ಎರಡು ತಿಂಗಳ ರಜೆಯ ಮೇಲಿರುವರು. ಕಲಿಕೋಟೆಯ ಡಿಪ್ಯುಟಿ ಪೋಸ್ಟ್ ಮಾಸ್ತರರಾದ ಮಿ। ಸದಾಶಿವ ಪಿಳ್ಳೆಯವರು ಇವರ ಚಾರ್ಜನ್ನು ವಹಿಸಿಕೊಂಡಿರುವರು. [illegible] ರಾ। [illegible]

[illegible] ದನ್ನು ನಮ್ಮ [illegible] ಇದು ಇವರ ಕೈಗಾರಿಕೆಯ [illegible] ದ್ದನ್ನು ಎಣಿಸಿದರೆ ಈ ಸಾಬೂನನ್ನು [illegible] ಶಿಫಾರಸು ಮಾಡಬೇಕು. ಇದು ಹೊರತು ಬಾರ್ ಸೋಪ್ ಕಾರ್ಖಾನೆಯು ಜಿಲ್ಲೆಯಲ್ಲಿ ಇನ್ನೆಲ್ಲಿಯೂ ಇಲ್ಲವೆಂದು ತಿಳಿಯುತ್ತೇವೆ. ಆದ್ದರಿಂದ ನಮ್ಮ ಜಿಲ್ಲೆಗೆ ಇದು ಭೂಷಣವೇ. ಸ್ವದೇಶವಾತ್ಸಲ್ಯವಿರುವವರು ಜಿಲ್ಲೆಯ ಮೇಲ್ಮೆಯಲ್ಲಿ ಅನುರಾಗವುಳ್ಳವರು ಈ ತರುಣರನ್ನು ಪ್ರೋತ್ಸಾಹಿಸಿ ಇವರು ಕಲಿತುಕೊಂಡ ಮೇಣದ ಬತ್ತಿ, ನೂಲಿಗೆ ಬಣ್ಣ ಕೊಡುವದು ಮೊದಲಾದ ಇತರ ವೃತ್ತಿಗಳೂ ಕ್ರಮೇಣ ಪ್ರಚಾರಕ್ಕೆ ಬರಲಿಕ್ಕೆ ಮಾರ್ಗಮಾಡುವರೆಂದು ನಂಬಿದ್ದೇವೆ. ರಾ। ಮಲ್ಯರು ತಮ್ಮ ಕೈಗಾರಿಕೆಯಲ್ಲಿ ಇನ್ನಷ್ಟು ಪರಿಶ್ರಮ ತಕೊಂಡು ತಮ್ಮ ವಸ್ತುಗಳನ್ನು ವಿಲಾಯತಿ ಸಾಮಗ್ರಿಯ ತರಗತಿಗೆ ತಂದು ಸ್ವದೇಶಿಗೆ ಗೌರವ ತರುವರೆಂದು ನಂಬಿದ್ದೇವೆ.

ಈ ಸತಿ ಸಂಚಿಕೆಯ ಪೋರ್ಟ್ ಸೆಂಟ್ ಜೋರ್ಜ್ ಗಜೇಟಿನಲ್ಲಿ, ಪ್ಲೇಗಿನ ದಾಕಿನ ವಿಷಯವನ್ನು ಜನರಲ್ಲಿ ಪ್ರಚಾರಕ್ಕೆ ತರಲಿಕ್ಕೆ ಕೆಲವು ಸಂಗತಿಗಳನ್ನು ಪ್ರಕಟಿಸಿರುವರು. ಇದರಲ್ಲಿ ಈ ರೋಗವು ಹ್ಯಾಗೆ ಉಂಟಾಗುವದೆಂಬದನ್ನೂ, ಅದರ ಸ್ವಭಾವವನ್ನೂ, ಅದನ್ನು ನಿವಾರಿಸುವ ಕೆಲವು ಉಪಾಯಗಳನ್ನೂ ಸೂಚಿಸಿರುವರು. ಪ್ಲೇಗು ದಾಕು ಹಾಕಿಸುವ ಮೊದಲು ಯಾವ ಜಾಗ್ರತೆಗಳನ್ನು ತಕ್ಕೊಳ್ಳಬೇಕೆಂಬದೂ, ದಾಕು ಹಾಕಿದ ನಂತರ ಯಾವ ಅನುಪಾನ ಪಥ್ಯ ಮುಂತಾದವುಗಳನ್ನು ಅನುಸರಿಸಬೇಕೆಂಬದೂ ಇದರಲ್ಲಿ ವ್ಯಕ್ತ ಪಡಿಸಿರುವದು.

ನಮ್ಮ ಡಿಸ್ಟ್ರಿಕ್ಟ್ ಕಲೆಕ್ಟರವರು ಡಿಸೆಂಟ್ರಾಲಿಜೇಷನ್ ಕಮಿಶನಿಗೆ ತನ್ನ ಅಭಿಪ್ರಾಯವನ್ನು ಕೊಡುವ ಬಗ್ಗೆ ಮದ್ರಾಸಿಗೆ ಹೋಗಿರುವರು. ಈ ದಿವಸ ಇಲ್ಲಿಗೆ ಬಂದು ತಲ್ಪುವರಾಗಿ ತಿಳಿದು ಬರುತ್ತದೆ.

ಕುಂದಾಪುರ ಡಿವಿಜನಲ್ ಆಫೀಸರರು ಆದಿನದೀ ರಜೆಗೆ ಹೋಗಿರುವದರಿಂದ ಹೆಡ್‌ಕ್ವಾರ್ಟರ್ ಡಿಪ್ಯುಟಿ ಕಲೆಕ್ಟರ್ ರಾ। ನಾರಾಯಣ ಮೇನನರು ಆ ಡಿವಿಜನಿನ ಚಾರ್ಜನ್ನೂ, ಟ್ರೆಜರಿ ಡಿಪ್ಯುಟಿ ಕಲೆಕ್ಟರ ರಾ। ವಸಂತರಾಯರವರು ಟ್ರೆಜರಿ ಇನ್ಸ್‌ಪೆಕ್ಷನಿಗೆ ಹೋಗಿರುವದರಿಂದ ಪುತ್ತೂರು ಡಿವಿಜನಲ್ ಆಫೀಸರ್ ರಾ। ರಾಮರಾಯರೂ, ಟ್ರೆಜರಿ ಡಿಪ್ಯುಟಿ ಕಲೆಕ್ಟರವರ ಚಾರ್ಜನ್ನು ವಹಿಸಿಕೊಂಡಿರುವರು. ಪ್ರಕೃತ ಡಿವಿಜನಲ್ ಆಫೀಸರರೆಲ್ಲರೂ ಮಂಗಳೂರಲ್ಲಿಯೇ ಇರುವರು.

ಪುಣೆಯ ಹಿಂದು ವಿಧವಾಗೃಹ ಸಂಘದವರ ಪ್ರತಿನಿಧಿಗಳಾದ ಪಾರ್ವತಿಬಾಯಿ ಅಥವಾಲೆ ಎಂಬವರು ಇಲ್ಲಿಗೆ ಬಂದಿರುವರು. ಇವರು ಕೆನರಾ ಹ್ಯಾಸ್ಕೂಲಿನ ಭುವನೇಂದ್ರ ಸಭಾಸದನದಲ್ಲಿ ಕೆಲವು ಭಾಷಣಗಳನ್ನು ಕೊಡುವರಾಗಿ ತಿಳಿದು ಬರುತ್ತದೆ. ಈ ಸಂಘದವರ ಉದ್ದೇಶಗಳನ್ನು ಆಯಾ ದಿಕ್ಕಿನ ಜನರಿಗೆ ತಿಳಿಯ ಹೇಳಿ ಸಂಘದ ವಿಷಯ ಸರ್ವ ಸಮಾಚಾರವನ್ನು ಎಲ್ಲರಿಗೂ ವಿಶದಪಡಿಸಿ ಇದಕ್ಕೆ ಬೇಕಾದ ದ್ರವ್ಯಸಹಾಯವನ್ನು ಸಂಗ್ರಹಿಸುವದೇ ಪಾರ್ವತಿಬಾಯಿ ಅಥವಾಲೆಯವರ ಮೊದಲಾದ ಈ ಸಂಘದ ಸ್ತ್ರೀ ಶಿಕ್ಷಕಿಯರ ಉದ್ದೇಶ [illegible] ಈ ಮಹತ್ಕಾರ್ಯಕ್ಕೆ [illegible] ತನು ಮನ [illegible] [illegible]

ಶೆಯನ್ನು ಮಾಡಲಶಕ್ತರಾದ ವಿತಂತುಗಳಿಗೆ ಸಮರ್ಪಕ ವಾದ ಶಿಕ್ಷಣವನ್ನು ಕೊಟ್ಟು ಸ್ವಾತಂತ್ರಿಕ ಜೀವನವನ್ನು ಇವರು ಮಾಡಲುಪಾಯವಾಗುವಂತೆ ಈ ಸಂಘದವರು ಪುಣೆಯಲ್ಲಿ ಬಂದು ವಿತಂತಾಲಯವನ್ನು ಸ್ಥಾಪಿಸಿರುವರು ಈ ಸಂಘದವರ ಕಳೆದ ವರುಷದ ವರದಿಯು ನಮ್ಮ ಹಸ್ತಗತವಾಗಿರುವದು ಇದನ್ನು ನಮ್ಮ ಅಭಿಪ್ರಾಯಗಳೊಡನೆ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸುವೆವು ಪಾರ್ವತಿ ಬಾಯಿ ಅಥವಾಲೆಯಮ್ಮನವರಿಗೆ ಇಲ್ಲಿಯ ಮಹಾಜನರೆಲ್ಲರೂ ತಕ್ಕ ಪ್ರೋತ್ಸಾಹವನ್ನು ಕೊಡುವರಾಗಿ ಕೋರುತ್ತೇವೆ.

ಮುಲ್ಕಿ ಕೆಲವು ದಿನಗಳಿಂದ ಪ್ರತಿರಾತ್ರಿ ಬಿಡದೆ ಮಳೆ ಗರೆಯುತ್ತಿತ್ತು ಈಗ ತಿರಿಗಿ ಇಲ್ಲಿ [illegible] ಪ್ರಾರಂಭ ವಾಗಲಿಲ್ಲದೆ ಛಳಿ ಶುರುವಾಗಿರುವದೆ ಈ ಮಳೆಯ ತರವನ್ನು ನೋಡುವಾಗ ಸುಭಿಕ್ಷಕಾಲವೆನ್ನ [illegible] ದವಸ ಧಾನ್ಯಗಳ ಬೆಲೆಯು ತಗ್ಗಿದವಿಲ್ಲ [illegible] ಬಡವರ ಗೋಳು ಹೇಳಿ ಪೂರೈಸದು

ತಾರೀಕು 7ರಲ್ಲಿ ಮುಲ್ಕಿಯ ಗ್ರಾಮದಲ್ಲಿ ಬ [illegible] ಒಂಟಿರ ಜಾತಿಯ ಹುಡುಗಿಯು ದೇವಸ್ಥಳಕ್ಕೆ ಹೋದವಳು ಅಕಸ್ಮಾತ್ತಾಗಿ ನೀರಿಗೆ ಬಿದ್ದು ಪ್ರಾಣಾಂತಿಕವಾಗಿರುವ ವಾರ್ತೆಯು ಇಲ್ಲಿಯ ಸಬ್ ಇನ್ಸ್‌ಪೆಕ್ಟರರಿಗೆ ತಿಳಿದದ್ದರಿಂದ ತಾರೀಕ 9ರಲ್ಲಿ ಅವರು ಅಲ್ಲಿಗೆ ಹೋಗಿ [illegible] ಅವಳ [illegible]

ತಾರೀಕು 13ರಲ್ಲಿ [illegible] ದೊರೆ [illegible] ಇಲ್ಲಿಯ ಪ್ರೋ [illegible] ಇನ್ನು [illegible] [illegible]

[illegible]

[illegible]

ತಾರೀಕ 16ರಲ್ಲಿ ಇಲ್ಲಿಯ ಮ| ರಾ| ಹರಿರಾವು ಕಾಮತ್ ಎಂಬವರು ಲಾಲಾ ಲಜಪತ್‌ರಾಯರವರ ಬಿಡುಗಡೆ ಹೊಂದಿದ ದಿವಸದ ಜ್ಞಾಪಕಾರ್ಥವಾಗಿ ವಿದ್ವದ್ದನ್ನು ಕೇಳಿ ಇಲ್ಲಿಯ ಅನೇಕ ಜನರಿಗೆ ಸ್ವದೇಶಿ ಕಲ್ಲುಸಕ್ಕರೆಯನ್ನು ಬಹು ಸಂತೋಷದಿಂದ ಹಂಚಿದರು ಎಂಬ ವಾರ್ತೆಯನ್ನು ತಿಳಿಸಲು ಸಂತೋಷಪಡುತ್ತೇವೆ.

ನಮ್ಮ ಉಡುಪಿ ಬಾತ್ಮಿದಾರರಿಂದ

ಕೆಲವು ದಿವಸಗಳ ಹಿಂದೆ ಶಾಲಾ ಇನ್ಸ್‌ಪೆಕ್ಟರರಾದ ಬ್ರೈತ್‌ವೇಟ್ ದೊರೆಗಳವರು ಇಲ್ಲಿಯ ಸಂಸ್ಕೃತಶಾಲೆಗೆ ದಯಮಾಡಿ ಈಗಿನ ಹೊಸ ಕ್ರಮಕ್ಕೆ ಅನುಸಾರವಾಗಿ ಸಂಸ್ಕೃತವನ್ನು ವಿದ್ಯಾರ್ಥಿಗಳಿಗೆ ಕಲಿಸುವದಕ್ಕೆ ವ್ಯವಸ್ಥೆ ಮಾಡಿರುವದನ್ನು ಕಂಡು ಸಂತೋಷಪಟ್ಟರು.

ಗವರ್ನರ್ ಸಾಹೇಬರವರು ಬರುವ ಸಮ್ಮಂಧ ಪೇಟೆಗಳಲ್ಲಿಯು, ಮೂಡಬಿದ್ರಿ, ಕಾರ್ಕಳಗಳಲ್ಲಿ ವಿಶೇಷ ಖರ್ಚು ತಗಲಿಸಿ ತಯಾರಿಸಿದ ಚಪ್ಪರ ಮಂಟಪ ದೀಪಾವಳಿ ಬಾಣ ಬಿರುಸು ಮೊದಲಾದವುಗಳಿಗೆ ಬಹಳ ಅನವ್ಯಯ ಮಾಡಿಸಿದರೆಂದು ಆಯಾ ಉದ್ಯೋಗಸ್ಥರ ಮೇಲೆ ಸ್ವಲ್ಪ ಬೇಸರಪಟ್ಟರೆಂಬ ವದಂತಿ ಇಲ್ಲಿ ಹಬ್ಬಿಯದೆ. ನಿಶ್ಚಯವಾಗಿಯೂ ಈ ಡಂಭಗಳಿಗೆಲ್ಲ ಆ ಸಾಹೇಬರು ಸಂತೋಷಪಡಲಿಕ್ಕಿಲ್ಲ

ಒಂಕೆಯ್ಯಕ್ಟ್ಟು ಎಂಬ ಊರಿನ ನಾಡವರವನೊಬ್ಬನು ಒಂದ್ರೆ ಮೊಕದಮೆಯಲ್ಲಿ ಮುನ್ಸೀಫ ಕೋರ್ಟಿಗೆ ಹಾಜರು ಮಾಡಿದ ರಶೀದಿಯು ಫೋರ್ಜರಿ ಎಂಬದಾಗಿ ಮುನ್ಸೀಫರು ಅನುಮಾನ ಪಟ್ಟು ಜಡ್ಜಮೆಂಟಿನಲ್ಲಿ ಬರದಿದ್ದರು ಆ ಹೆಗ್ಗಡೆಯು ಪ್ಯಾಗೋ [illegible] ವಕೀಲರಗ ಮಾಸ್ತನ ಮುಖಾಂತರ ಆ ರಶೀದಿಯನ್ನು ನೋಡಿ ಕೊಡುವದಕ್ಕಾಗಿ ತೆಗದುಕೊಂಡು ಆ ಗುಮಾಸ್ತನ ಕಣ್ಣು ತಪ್ಪಿಸಿ ಹರದು ನುಂಗಿ ಬಿಟ್ಟ ಆತನ ಮೇಲೆ ಕ್ರಿಮಿನಲ್ ವ್ಯವಹರಣೆ ನಡಿಸುವದರಲ್ಲಿದ್ದಾರೆ

ಕುಂದಾಪುರ ತಾಲೂಕು ತೊಂಭತ್ತು ಮಾಗಣೆ ಹಂಗ್ಳಳ್ಳಿ ಗ್ರಾಮದ ಮರೂರ ಸ್ಥಾನಿಕ ಬ್ರಾಹ್ಮಣ ಜಾತಿ ವೆಂಕಟ್ರಮಣ ಹೆಬ್ಬಾರ ೧, ಮತ್ತು ಈತನ ಹೆಂಡತಿ ಶಮಾರು ೨೪ ವರುಷ ಪ್ರಾಯದ ಹೆಂಗಸು ೧, ಕೂಡಾ ೨ ಜನರನ್ನು ತಾ ೨೨ನೆ ರಾತ್ರಿ ಯಾರೋ ಕಳ್ಳರು ಹೊಡದು ಕೊಂದು ಹಾಕಿರುತ್ತಾರಂತೆ ಕೊಲೆ ಮಾಡಿದ ಮನುಷ್ಯರು ಈ ವರೆಗೆ ಪತ್ತೆಯಾಗಲಿಲ್ಲ ತನಖಿ ನಡೆಯುತ್ತದೆ ಇವರಿಗೆ ೩ ವರುಷದ ಮಗು ೧, ೧ವರುಷದ [illegible], ಕೂಡಾ ಎರಡು ಮಕ್ಕಳ ಗೋಳನ್ನು ಬರಿಯಲು ಸಾದ್ಯವಿಲ್ಲ

ಕಾಸರಗೋಡ , ತಾ 22-11-07

[illegible] ಗೋಡು ಬಾತ್ಮೀದಾರರಿಂದ ತಾರೀಕು [illegible]1 07ಕ್ಕೆ ನಿಮ್ಮ ಪತ್ರಕ್ಕೆ ಕೊಟ್ಟ ಕಾಸರಗೋಡಿನ ವರ್ತಮಾನಗಳ ಪೈಕಿ ಒಬ್ಬ ಅಂಗಡಿಯವನ ಮೇಲೆ ಪೋಲೀಸ್ ಸಬ್ ಇನ್ಸಪೆಕ್ಟರು ಒಂದು ನಂಬ್ರವನ್ನು ಏರ್ಪಡಿಸಿದ್ದಾರಾಗಿಯೂ ಸಬ್ ಇನ್ಸಪೆಕ್ಟರರ ಮೇಲೆ ಸದರಿ ಅಂಗಡಿಯವನು ಮತ್ತೊಂದು ಪಿರಿಯಾದಿ ಮಾಡಿದ್ದಾನಾಗಿಯೂ ವರ್ತಮಾನ ಕೊಟ್ಟಿದ್ದು ಸರಿಯಲ್ಲ ಸದರಿ ವರ್ತಮಾನವು ಆ ಅಂಗಡಿಯವನ ಸಂಬಂಧಿಕನಿಂದ ತಿಳಿದ್ದರಿಂದ ಅದರ ನಿಜಸ್ಥಿತಿಯು ಆ ಸಮಯದಲ್ಲಿ ಸರಿಯಾಗಿ ತಿಳಿಯದೆ ಹೋಯಿತು

ಅಂಗಡಿಯವನು ಸಬ್ ಇನ್ಸಪೆಕ್ಟರ ಮೇಲೆ ಮಾಡಿದ ಪಿರ್ಯಾದಿಯೂ ಸಬ್ ಇನ್ಸಪೆಕ್ಟರರು ಅಂಗಡಿಯವನ ಮೇಲೆ ಹೊರಿಸಿದ ಚಾರ್ಜು ಇನ್ನೂ ತನಖಿಗೆ ಬಾಕಿ ಇರುವದು. [illegible] ಯಾವ ರೀತಿಯಲ್ಲಿ ತೀರುತ್ತದೊ ಎಂಬದನ್ನು ತಿಳಕೊಳ್ಳುವರೆ ಊರಿನವರೆಲ್ಲರೂ ಹೆಚ್ಚು ಕುತೂಹಲದಲ್ಲಿರುತ್ತಾರೆ.

ಬಂಗ್ರಮಂಜೇಶ್ವರ ತಾ. ೧೨-೧೧-'೦೭

ಇಲ್ಲಿಯ ಕೆಲವು ಸಂಭಾವಿತ ಗ್ರಹಸ್ಥರು ಕೂಡಿ ಒಂದು ಶಾಲೆಯನ್ನು ಸ್ಥಾಪಿಸಿರುವರು. ನಮ್ಮ ಊರ ಮ| ರಾ| ರಾ| ನರಸಯ್ಯ ಶ್ಯಾನುಭಾಗರು ಉದಾರಮನಸ್ಸಿನಿಂದ ನಮಗೆ ದಯಪಾಲಿಸಿದ ಮಾಳಿಗೆಯಲ್ಲಿ ನಿನ್ನೆ ತಾರೀಕು 11-11-07ರ 10 ಘಂಟೆಗೆ ಶಾಲೆಯ ಮುಹೂರ್ತವು ಜರಗಿತು. ರಾ| ಸಾವಕಾರ ಬಾಬಣ್ಣಯ್ಯನವರು ನರಸಿಂಹ ಜೆಟ್ಟರು, ನಾರಾಯಣ ಕಮ್ತಿರು ವಗೈರೆ ಪೂರಾ ಜನರು ಹಾಜರಿದ್ದು ಸಮಯೋಚಿತ ಮಾತುಗಳಿಂದ ನಮ್ಮನ್ನು ಆಶೀರ್ವದಿಸಿದ್ದಕ್ಕಾಗಿ ಅವರಿಗೆ ತುಂಬಾ ಕೃತಜ್ಞರಾಗಿರುತ್ತೇವೆ ರಾ| ನರಸಯ್ಯ ಶ್ಯಾನುಭಾಗರ ಗೈರಹಾಜರಿ ಸಂಬಂಧ ಅವರಕಡೆ ರಾ| ವಾಮನ ನ್ಯಾಕರು ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟಿದ್ದರು. ರಾ| ಬಾಬಣ್ಣಯ್ಯನವರು ಶಾಲೆ ಮಕ್ಕಳಿಗೆ ಮಿಠಾಯಿ ಕಾಗದ ವಗೈರೆ ಇನಾಮು ಮಾಡಿದ ನಂತರ ಕೂಡಿದ ಸಭೆಯು ಹರ್ಷೋದ್ಗಾರ ಪ್ರಯುಕ್ತ [illegible] "ಬಂಗ್ರಮಂಜೇಶ್ವರ ಶಾರದಾ ವಿದ್ಯಾಲಯ" ಎಂಬ ಹೆಸರಿನಿಂದ ಸ್ಥಾಪಿಸಿದ ಈ ಶಾಲೆಗೆ ಸ್ವದೇಶಬಾಂಧವರೆಲ್ಲರೂ ನಮ್ಮನ್ನು ಸರ್ವವಿಷಯಗಳಿಂದಲೂ ಪ್ರೋತ್ಸಾಹಗೊಳಿಸುವರಾಗಿ ನಂಬುತ್ತೇವೆ

ಕಾ ಸ ಬಂ ಮ

ಪುತ್ತೂರು. ಉಪ್ಪಿನಂಗಡಿ ತಾಲೂಕಿನ ರಯಿತರ ಎಲ್ಲಾ ಕಷ್ಟಗಳ ಕುರಿತು ಆಗಾಗ್ಯೆ ವಿಚಾರಿಸಿಕೊಂಡು ಅವುಗಳನ್ನು ಸಮ್ಮಂಧಪಟ್ಟ ಸರಕಾರಿ ಉದ್ಯೋಗಸ್ಥರ ತಿಳುವಳಿಕೆಗೆ ತಂದು ಯಾವ್ಯಾವ ತರದಲ್ಲಿ ಅವರ ಸಹಾಯ ಅಗತ್ಯವಿದೆ ಎಂಬದನ್ನು ಸೂಚಿಸುತ್ತಾ ಕೂಡಿದ ಮಟ್ಟಿಗೆ ಅವರಿಂದ ಸಹಾಯ ಪಡಿಯುವ ಉದ್ದಿಶ್ಯಾರ್ಥವಾಗಿ ವರ್ತಕಾರರೂ, ಈ ತಾಲೂಕಿನ ವಕೀಲರೂ, ಇತರರೂ ಕೂಡಿ ಒಂದು ಸಂಘವನ್ನು ಏರ್ಪಡಿಸುವರಾಗಿ ಕೇಳುತ್ತೇವೆ ಈ ಸಂಘದ ಪೂರ್ಣ ವಿವರವನ್ನು ಸಂಘದ ಕಾರ್ಯಾಧಿಕಾರಿಗಳಿಂದ ತಿಳಿದು ನಮ್ಮ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸುವೆವು.

ಶಾಲಿವಾಹನ ಶಕ ೧೮೨೯ನೇ ಪ್ಲವಂಗ ಸಂವತ್ಸರದ ಕಾರ್ತಿಕ ಬ ೧೧ಯು ರವಿವಾರದಾರಭ್ಯ ಮಾರ್ಗಶಿರಶು ೧೧ಯು ರವಿವಾರದ ವರೆಗಿನ ವಾರ ಪಂಚಾಂಗವು 1907ನೇ ಇಸವಿ ದಶಂಬರ ತಾರೀಕು 1ರಿಂದ 15ರ ವರೆಗೆ

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ತಾ.	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ
1	ರವಿ	೧೧	೩೭|||	ಹಸ್ತಾ	೧೭||	9	ಚಂದ್ರ	೪	೪||	ಜ್ಯೇಷ್ಠಾ	೨೯||
2	ಚಂದ್ರ	೧೨	೩೬||	ಚಿತ್ರಾ	೧೮|	10	ಕುಜ	೬	೫೩|	ಧನಿಷ್ಠಾ	೫೧|
3	ಕುಜ	೧೩	೩೪|	ಸ್ವಾತಿ	೧೭|||	11	ಬುಧ	೭	೪೮|	ಶತಭಿಷಾ	೪೮
4	ಬುಧ	೧೪	೩೦|||	ವಿಶಾಖಾ	೧೬||	12	ಗುರು	೮	೪೪	ಪೂ|ಭಾ	೪೫|
5	ಗುರು	೩೦	೨೬|	ಅನೂರಾಧಾ	೧೪	13	ಶುಕ್ರ	೯	೪೦||	ಉ|ಭಾ	೪೩||
6	ಶುಕ್ರ	೧	೨೧||	ಜ್ಯೇಷ್ಠಾ	೧೨	14	ಶನಿ	೧೦	೩೮	ರೇವತಿ	೪೨|||
7	ಶನಿ	೨	೧೬	ಮೂಲಾ	೭|	15	ರವಿ	೧೧	೩೬|||	ಅಶ್ವಿನಿ	೪೩
8	[illegible]	[illegible]	೧೦|	[illegible]	[illegible]						

Please Patronise Indigenous Industry.

DIARIES FOR 1908

IN TWO SIZES.

Note-Book Size As. 8.

4 × 5½ Size As. 6.

Containing various practical information of ready reference specially useful to lawyer's clerk

FOR COPIES APPLY TO—

THE MANAGER,

Sharada Press, Mangalore

THE HINDU SOAP MANUFACTURING CO.

ಹಿಂದೂ ಸೋಪ್‌ಮೆನ್ಯುಫೆಕ್ಚರಿಂಗ್ ಕಂಪೆನಿ.

ಕುಂದಾಪುರ, ದಕ್ಷಿಣ ಕನ್ನಡ.

ಈ ಕಂಪೆನಿಯಲ್ಲಿ ನಾನಾ ವಿಧದ ಸಾಬೂನುಗಳು ತಯಾರಾಗುತ್ತವೆ. ಸಾಬೂನು ಅತ್ಯುತ್ತಮವಾದದ್ದು. ಕ್ರಯ ಸುಲಭ, ಚರಬಿ ವಿರಹಿತವಾದದ್ದು ಮಾದರಿಗಳೂ, ವಿಶೇಷವಾಹಿತಿಯೂ ಮೆನೇಜಿಂಗ್ ಏಜಂಟರಿಂದ ದೊರಕುವವು. ಮಾರಾಟಕ್ಕೆ ಏಜಂಟರಾಗ ಅಪೇಕ್ಷಿಸುವವರು ಬರಕೊಳ್ಳಬಹುದು.

ಬಿ. ದತ್ತ್ ಎಂಡ್ ಬ್ರದರ್ಸ್, ಮೆನೇಜಿಂಗ್ ಏಜಂಟ್ಸ್

ಈಗಲೇ ಸೀಮೆಯಿಂದ S S ಕ್ರೊಸ್ಟಪೆಲ್ಸ್ ಸ್ಟೀಮರಿನಲ್ಲಿ

ಎಣ್ಣೆ ಕೆಂಪು, ಮತ್ತು ತಾಜಾ ಕಪ್ಪು ಸುಪೀರಿಯರ್

ಹಾಸನ್ ವೂಲನ್ ದಾರಗಳು

ಬಂದಿವೆ, ನೋಡಿರಿ,

	ರೂ	ಆ	ಪೈ
ಒಂದು ಪೌಂಡು ವೂಲನ್ ದಾರಕ್ಕೆ W W	3	0	0
ಹತ್ತು ಟೋಪಿಯಾಗುವ ಬಂಡಲ್ S W	3	9	0
ಒಂದು ಟೋಪಿಯಾಗುವ ದಾರಕ್ಕೆ . .	0	8	0
ಈ ದಾರದಲ್ಲಿ ಬದ ಟೋಪಿ ಡಜನ್ 1ಕ್ಕೆ	13	2	0
ಕೊಕ್ಕೆಸೂಜಿ ಡಜನ್ 1ಕ್ಕೆ . .	0	14	0
,, ,, 1ಕ್ಕೆ . . .	0	1	6
30 ಇಂಚಿನ ಬನಿಯನ್ 1ಕ್ಕೆ ,	0	9	0
ಫೇನ್ಸಿ ಪೋಸ್ಟ್ ಕಾರ್ಡ 100ಕ್ಕೆ .	0	4	0

ವಿ ಪಿ ಯಿಂದಲೂ ರವಾನಿಸುತ್ತೇವೆ.

ವಿಳಾಸ:— ದಿ ವೂಲನ್ ಮಾರ್ಟ, ಬೋಳಾರ, ಮಂಗಳೂರು.

N B, ಬೇಕು ಉತ್ತಮ ತರಗತಿಯಲ್ಲಿ ಹಾಸನ್‌ಟೋಪಿ ಹೊಲಿಯುವವರು

R. M. KAMATH'S

SWADESHI BLUE BLACK INK POWDER.

ಆರ್. ಯಂ. ಕಾಮತ್.

ಇವರ ಸ್ವದೇಶಿ ಕಪ್ಪುಶಾಯಿ ಹುಡಿ, ಕಟ್ಟು 1ಕ್ಕೆ 3ಪೈ.

ಈ ಹುಡಿ ಬಿಸೀ ನೀರಿನಲ್ಲಿ ಹಾಕಿದ ಕೂಡಲೇ ಉತ್ತಮವಾದ ಶಾಯಿ ಆಗುದೆ ಹೆಚ್ಚಿಗೆ ತರಿಸಿಕೊಳ್ಳುವವರಿಗೆ ಒಳ್ಳೇ ಕಮ್ಮಿಶನ್ ಶಿಕ್ಕುವದು. ಈ ಶಾಯಿಯ ಕಟ್ಟುಗಳನ್ನು ಒಂದೇ ಸಲ 250ಕ್ಕೆ ಕಡಿಮೆಯಾಗದಂತೆ ತರಿಸಿಕೊಳ್ಳುವವರಿಗೆ ಬಹಳ ಕಮ್ಮಿ ಕ್ರಯಕ್ಕೆ ಶಿಕ್ಕುವದು.

ಬೇಕಾದವರು ಕೆಳಗಿನ ವಿಳಾಸಕ್ಕೆ ಬರದ್ದಲ್ಲಿ ಕ್ರಯದ ವಿಲೇವಾರಿ ತಿಳಿಸಲಾದೀತು.

ಸುಗಂಧ[illegible]—[illegible] 1ಕ್ಕೆ 0–4–0. 12[illegible] ಒಂದೇ ಸಲ ತರಿಸಿಕೊಳ್ಳುವವರಿಗೆ ರೂ. 2–4–0ಕ್ಕೆ ಶಿಕ್ಕುವವು. ಇದು ತಲೆ[illegible] ಇತ್ಯಾದಿಗೆ ಅತೀ ಉತ್ತಮವಾದದ್ದು.

ಗಂಡಮಾಲೆಗೆ **ಸೌಗಂಧೀ ತೈಲ್ಯ** ಬಹಳ ಉತ್ತಮವಾದದ್ದು. ಗಾಳೆಗಳು ಇದ್ದರೂ ಇರಲಿ, ಅಥವಾ ವ್ರಣ ಉಂಟಾಗಿದ್ದರೂ ಇರಲಿ, ಹೊರಗಿನಿಂದ ತಾಗಿಸಿಕೊಂಡಲ್ಲಿ ಗುಣವಾಗುತ್ತದೆ. ಈ ಎಣ್ಣೆ ಉಪಯೋಗಿಸಿಕೊಂಡವರಲ್ಲಿ ಗಂಡಮಾಲೆ ಗುಣವಾಗದೇ ಇದ್ದವರು ಒಬ್ಬರೂ ಇಲ್ಲ. ಶೀಸೆ 1ಕ್ಕೆ 0–12–0 ಒಂದೇ ಸಲ 6 ಶೀಸೆ ತರಿಸಿಕೊಳ್ಳುವವರಿಗೆ 1 ಶೀಸೆ ಉಚಿತವಾಗಿ ಸಿಕ್ಕುವದು.

ಪ್ರಯಿಂತೇಲ್ ತೈಲ್ಯ—ಶೀಸೆ 1ಕ್ಕೆ 1–0–0 ಅರ್ಧ ಶೀಸೆಗೆ 0–8–0. ಇದು ಮುಖ್ಯವಾಗಿ ಮೇಹ ಇತ್ಯಾದಿಗಳಿಂದ ಉಂಟಾದ ಸಕಲ ತರದ ವ್ರಣಗಳಿಗೆ ಶ್ರೇಷ್ಠವಾದ ಮದ್ದು ಅಲ್ಲದೆ ವಾತದ ನೋವು, ಪೆಟ್ಟು ತಾಗಿದ ನೋವು ಉಳುಕು ಇತ್ಯಾದಿಗಳಿಗೆ ಸಹಾ ಉಪಯೋಗಿಸ ಬಹುದು

ಸುಗಂಧಕಲಾವಿಲಾಸ—ಡಬ್ಬಿ 1ಕ್ಕೆ ರೂ 0–4–0. 12 ಡಬ್ಬಿಗಳಿಗೆ ರೂ 2–4–0. ಇದು ಬಹಳ ಪರಿಮಳವುಳ್ಳದ್ದಾಗಿ ಗಂಧದ ಸಂಗಡ ಸೇರಿಸಲಿಕ್ಕೂ, ವಸ್ತ್ರ ಇತ್ಯಾದಿಗಳಿಗೆ ಹಚ್ಚಿಕೊಳ್ಳಲಿಕ್ಕೂ ಆಗುತ್ತದೆ

ಕಜ್ಜಿನಾಶಕ ಚೂರ್ಣ—ಶೀಸೆ 1ಕ್ಕೆ 0–2–0. ಉಪಯೋಗಿಸುವ ವಿವರ ಮದ್ದಿನ ಸಂಗಡ.

ಈ ಮೇಲಿನ ಸಾಮಾನುಗಳನ್ನು ಟಪ್ಪಾಲ ದ್ವಾರಾ ತರಿಸಿಕೊಳ್ಳುವವರಿಗೆ ಕ್ರಯದ ಹೊರತು ವಿ. ಪಿ ಖರ್ಚು ಪ್ರತ್ಯೇಕ ಬೀಳುವದು

ವಿಳಾಸ:— **ಆರ್. ಯಂ. ಕಾಮತ್**	Address —**R. M. Kamath**
ಪಂಚಮ್ಹಾಲ್,	*Pnnchamahal*
ಮುಲ್ಕಿ, ದ. ಕನ್ನಡ	*Moolky, S Canara*

ಒರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿ.

ಲ್ಯಾಫ್ ಎಶ್ಯೂರೆನ್ಸ್ ಕಂಪನಿ, ಲಿಮಿಟೆಡ್

ಎಂಬ

ಹಿಂದುಸ್ಥಾನದ ಅಗ್ರಗಾಮಿ ಸ್ವದೇಶಿ

ಜೀವ ವಿಮೇ ಉತ್ತರಿಸುವ ಸಂಘ.

1874ರಲ್ಲಿ ಸ್ಥಾಪಿಸಲ್ಪಟ್ಟಿತು.

ಹಿಂದುಸ್ಥಾನದಲ್ಲಿ ಸ್ಥಾಪಿಸಲ್ಪಟ್ಟ ಸಂಘಗಳಲ್ಲಿ ಇದೇ ಮೊದಲಿನದು.

ಕಳದ ವರುಷದಲ್ಲಿ ಹೊಸದಾಗಿ ಸೇರಿದವರ ವಾರ್ಷಿಕ ವಿಮೇ ಮುಂಗಡ

ರೂಪಾಯಿ 3,92,999–10–0.

ಸಂಘದ ಕೂಡಿಟ್ಟ ಧನವು 2 ಕೋಟಿ 75 ಲಕ್ಷ ರೂಪಾಯಿಗಿಂತಲೂ ಮೀರಿರುತ್ತದೆ

ಇಷ್ಟರ ವರೆಗೆ 2,2700,000 ರೂಪಾಯಿಗಿಂತಲೂ ಹೆಚ್ಚಿನ ಹಣವನ್ನು ವಿಮೇದಾರರಿಗೆ ಸಲಾಯಿಸಿರುತ್ತದೆ 1882ನೇ ಇಸವಿ ಮಾರ್ಚ 29ನೇ ತಾರೀಕಿನಲ್ಲಿ ಈ ಸಂಘದವರು ಮುಂಬಾಯಿ ಸರಕಾರದವರೊಡನೆ ಮಾಡಿಕೊಂಡ ಕರಾರಿನ ಶರ್ತಗಳಿಗನುಸಾರವಾಗಿ ವಿಮೇದಾರರ ಭದ್ರತೆಗಾಗಿ ಅವರು ತೆರುವ ಎಲ್ಲಾ ಹಣದಲ್ಲಿ ಸೇಕಡಾ 80ರ ಮೇರೆಗೆ ಮೊಬಲಗು ಸರಕಾರದ ಭದ್ರತಾಪತ್ರಗಳಲ್ಲಿ ಠೇವಣಾತಿಯಾಗಿಟ್ಟು, ಮುಂಬಾಯಿ ಸರಕಾರದ ಹುದ್ದೇದಾರರಾಗಿರುವ "ಟ್ರಸ್ಟಿ" ಎಂಬ ಮೊಕ್ತೇಸರರ ವಶದಲ್ಲಿರುತ್ತದೆ. ಸದರಿ ಮೊಬಲಗನ್ನು ವಿಮೇ ಹಕ್ಕು ತೀರಿಸುವ ಕಾಲದಲ್ಲಿ ವಿನಹಾ ಇತರ ಕಾಲದಲ್ಲಿ ಕಂಪನಿಯ ಮೇಲ್ವಿಚಾರಕರು ಪಡಕೊಳ್ಳದ ಹಾಗೆ ನಿರ್ಬಂಧ ಉಂಟು ಈ ದೇಶದ ಜನರ ಸ್ಥಿತಿಗತಿಗೆ ಅನುಕೂಲವಾಗುವಂತೆ ಈ ಸಂಘವು ಲೋಕಮಾನ್ಯವಾದ ಸೂತ್ರಗಳ ಮೇಲೆ ಸ್ಥಾಪಿಸಲ್ಪಟ್ಟಿರುತ್ತದೆ.

ವಿಮೇ ಉತ್ತರಿಸಲುಳ್ಳವರು ಸಂಘದ ಸೂಚನಾಪತ್ರಗಳನ್ನೂ ಮಸೂದೆಗಳನ್ನೂ ಕುರಿತು ಕೆಳಗೆ ನಮೂದಿಸಿದ ಯಾವುದಾದರೊಂದು ವಿಳಾಸಕ್ಕೆ ಬರೆದುಕೊಳ್ಳುವುದು.

ರಾ.ರಾ. ಡಿ. ವಾಸ್ ಮತ್ತು ಮಗಂದಿರು.	**ಮ. ಆರ್. ಪೆಟರ್ಸನ್ ಬ್ರೌನ್**
ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ	**ಕಾರಭಾರಿ.**
ಜಿಲ್ಲೆಗಳಿಗೆ ಮುಖ್ಯ ಏಜಂಟರು,	**Oriental Life Office,**
ಮಂಗಳೂರು.	***Oriental Buildings***
	BOMBAY.

Messrs. WILLIAM & Co., BOMBAY.

ಗಜಕರ್ಣದ ಮುಲಾಮು

ಈ ಗಜಕರ್ಣದ ಮುಲಾಮು ಹಾಗಿಸುವದರಿಂದ ಎಲ್ಲಾ ತರದ ಖಜ್ಜಿಯು ನಾಶವಾಗಿ ಹೋಗುವದು. ಮೂರು ಸಾರಿ ಹಾಗಿಸುವದರೊಳಗೆ ಗಜಕರ್ಣವು ಹೋಗುವದು ಇದರಿಂದ ಚರ್ಮವು ಕಪ್ಪಾಗುವದಿಲ್ಲ. ಮತ್ತು ಉರಿಯುವದಿಲ್ಲ ಇದರಿಂದ ಗುಣವು ಕಂಡುಬರುವದಿಲ್ಲವಾದರೆ ಹಣವು ಮರತು ರವಾನಿಸಲ್ಪಡುವದು. ಲಕ್ಷಾನುಲಕ್ಷ ಜನರಿಗೆ ನಮ್ಮ ಈ ಗಜಕರ್ಣವು ಜೀವದಾನ ಕೊಟ್ಟಿರುತ್ತದೆ ಬಿಡ ಬೇಡಿರಿ! ಇಂಥಾ ಸಮಯ ಎಂದಿಗೂ ದೊರಕಲಾರದು. ತ್ವರೆ ಮಾಡಿರಿ!

ಡಬ್ಬಿ ಒಂದಕ್ಕೆ ಕಿಮ್ಮತು 0—6—0. ವಿ. ಪಿ. 0—10—0. 12 ಡಬ್ಬಿ ತರಿಸಿಕೊಂಡವರಿಗೆ ಒಂದು ಡಬ್ಬಿ ಉಚಿತ.

ಸುಂದರೀತೈಲ್ಯ 0-8-0 ವಜ್ರಗುಟಿಕ 1-0-0 ಜೀರ್ಣರಸಾಯನ 1-4-0. ಜ್ವರಹಾರಿ 0-12-0. ಖಜ್ಜಿಮುಲಾಮು 0-3-0. ದಂತಮಂಜನ 0-2-0 ಕೇಶವರ್ಧಿನೀ ತೈಲ್ಯ 1-0-0 ಚೇಳುಕಡಿತದ ಮದ್ದು 0-8-0 ಕಫಹಾರಿ 1-4-0. ಕಫನಾಶಕ ಚೂರ್ಣ 0-8-0 ಮೂಲವ್ಯಾಧಿ ತೈಲ್ಯ 0-12-0. ಹೇನುನಾಶಕ ತೈಲ 0-4-0. ಜುಲಾಬು ಮಾತ್ರೆ 0-8-0 ವಿರೇಚನ ಗುಟಿಕೆ 0-8-0 ಕುಸುಮಹಾರಿ ಗುಟಿಕ 1-0-0. ಮೇಹದ ಮಿಶ್ರಣ 1-0-0

ಈ ಕಂಪೆನಿಯವರು ಹೆಚ್ಚು ನಮೂನೆಯ ಔಷಧಗಳನ್ನು ತಯಾರಿಸುವದರಿಂದ ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ಒಂದು ಹೊಸ ಕೆಟಲಾಗು ರವಾನಿಸಲ್ಪಡುವದು.

ವಂದೇ ಮಾತರಂ.

ಅಮೃತಾಂಜನ

ಬಾಟ್ಲಿ ಒಂದಕ್ಕೆ ಕಿಮ್ಮತು 0—8—0. ವಿ. ಪಿ. 0—12—0.

ಅಮೃತಾಂಜನ ಅಥವಾ ಮುಲಾಮು.

ಅಮೃತಾಂಜನ—ಸುಖಾಂಜನ
ಅಮೃತಾಂಜನ—ಪರಮಾಂಜನ
ಅಮೃತಾಂಜನ—ದಿವ್ಯಾಂಜನ
ಅಮೃತಾಂಜನ—ಸಂಜೀವನ

ಜಕಮ್ ಮತ್ತು ಘಾಯ, ವಾತ, ಎದೆನೋವು, ಗಂಟ್ಲುನೋವು, ಸಂಧಿವಾತ, ಶೀತ, ಕೆಮ್ಮು, ಮೊದಲಾದ ರೋಗಗಳಿಗೆ ಈ ನಮ್ಮ **ಅಮೃತಾಂಜನವು** ಅತೀ ಉತ್ತಮವಾದದ್ದು. ಒಂದು ಸಾರಿ ಪರೀಕ್ಷಿಸಿರಿ! ಇದರಿಂದ ಗುಣ ಕಂಡುಬರುವದಿಲ್ಲವಾದರೆ ಹಣ ಹಿಂತಿರುಗಿ ಕೊಡಲ್ಪಡುವದು ಬಿಡ ಬೇಡಿರಿ!

ಅಮೃತಾಂಜನ—ಶೀತಭಂಜನಿ
ಅಮೃತಾಂಜನ—ತತ್ಕ್ಷಣ ಪರಿಹಾರಿನಿ.
ಅಮೃತಾಂಜನ—ಅಪೂರ್ವದರ್ಶಿನಿ.
ಅಮೃತಾಂಜನ—ಭಂಜಿನಿ ವಿಮರ್ಧನಿ.

ತಲೆನೋವು, ಶಿರೋಭಾರ, ಅರ್ಧಾಂಗವಾಯು, ಶಿರೋವೇಧನ, ಆನೆಗಾಲು, ಈ ಎಲ್ಲಾ ತರದ ರೋಗಗಳಿಗೆ ಇದು ಒಂದು ಸಂಜೀವನ ಎಂಬದಾಗಿ ಕರೆಯಲ್ಪಡುವದು ಕ್ರಯ ಕಮ್ಮಿ ಗುಣ ಹೆಚ್ಚು ನಮ್ಮ **ಅಮೃತಾಂಜನವು** ಇಡೀ ಹಿಂದುಸ್ಥಾನದಲ್ಲಿ ಪ್ರಚುರಗೊಂಡಿರುತ್ತದೆ ಲಕ್ಷಾನುಲಕ್ಷ ಜನರಿಗೆ ಗುಣಕೊಟ್ಟ ಈ ನಮ್ಮ **ಅಮೃತಾಂಜನವನ್ನು** ಪ್ರತಿ ಒಬ್ಬರೂ ತರಿಸಿಕೊಳ್ಳುವಿರಾಗಿ ನಂಬಿದ್ದೇವೆ

Messrs. William & Co.,
GENERAL MERCHANTS,
16 Oak Lane,
Fort, BOMBAY.

Agent, Mangalore:
N. Nowrojee,
Chemist
HAMPANKATTE.

ವಿಳಾಸ:—ವಿಲಿಯಮ್ ಮತ್ತು ಕಂಪೆನಿ, 16 ಓಕ್ ಲೇನ್, ಫೋರ್ಟ್, ಮುಂಬಯಿ.

ಟೆಲಿಗ್ರಾಫ್ ಎಡ್ರಸು—"ಅಮೃತಾಂಜನ", ಮುಂಬಯಿ.

Printed and published by V. S. Kamath at the Mangalore Trading Association's "Sharada Press"

ಸ್ವದೇಶಾಭಿಮಾನಿ

ಎಂಬ

ಕನ್ನಡ ಪಕ್ಷ ಪತ್ರವು.

ಪುಸ್ತಕ 1. ಮಂಗಳೂರು, ತಾರೀಕು 16ನೇ ದಶಂಬರ 1907 ಸಂಚಿಕೆ 24.

THE

MANGALORE TRADING ASSOCIATION.

ಮಂಗಳೂರು ಟ್ರೇಡಿಂಗ್ ಎಸ್ಸೋಸಿಯೇಶನ್.

ಈ ಕಂಪೆನಿಯಲ್ಲಿ ಅನೇಕ ನಮೂನೆಯ ವಿಲಾಯತಿ ಔಷಧಗಳು, ಒಳ್ಳೇ ಪರಿಮಳ **ದ್ರವಗಳು, ಚಾ,** ಕೋಕೋ, ಬಿಸ್ಕೂಟು, ಸಾಬೂನು ಚುರುಟು ಮುಂತಾದವುಗಳು ಕಾ**ಗದ ವಗೈರೆ ಲಿಖಾವಟದ ಸಾಮಾನುಗಳು,** ಕೋರ್ಟಿನ ಎಲ್ಲಾ ನಮೂನೆಯ ಫೋರ್ಮು**ಗಳು ಕ್ರಯಕ್ಕೆ** ದೊರೆಯುತ್ತವೆ ಇದೇ ಕಂಪೆನಿಗೆ ಸಮ್ಮಂಧಪಟ್ಟ **ಶಾರದಾ ಮುದ್ರಾಲಯದಲ್ಲಿ** ವಿವಾಹ ಪತ್ರಿಕೆಗಳು, ಎಲ್ಲಾ ನಮೂನೆಯ ಫೋರ್ಮುಗಳ , ನೋಟೀ**ಸುಗಳು,** ಕನ್ನಡ ಮತ್ತು ಇಂಗ್ಲಿಷ ಪುಸ್ತಕಗಳು, ಯೋಗ್ಯರೀತಿಯಲ್ಲಿ ಮುದ್ರಿಸಲ್ಪಡುತ್ತವೆ **ಅಂಗಡಿ, ಭಂಡಸಾಲೆ ವಗೈರೆ** ವ್ಯಾಪಾರಸ್ಥರ ಬಗ್ಗೆ ತಯಾರಿಸಿದ ವರ್ಗಲೂಳಿಗದ ಪುಸ್ತಕ**ಗಳು, ಯಾವಾಗಲೂ ಕ್ರಯಕ್ಕೆ** ದೊರೆಯುತ್ತವೆ ಇತರ ಪುಸ್ತಕಗಳನ್ನು ಚಲೋನಮೂ**ಯಲ್ಲಿ ಬ್ಯಾಂಡ್‌ಮಾಡಿಸೋಣಾಗುತ್ತದೆ.**

ಸ್ವದೇಶಾಭಿಮಾನಿಯಲ್ಲಿ ಪ್ರಕಟಣೆಗಳನ್ನು ಪ್ರಕಟಸುವದರ ದರ.

	೧ ಸಾರಿ	೪ ಸಾರಿ	೧೨ ಸಾರಿ	೨೪ ಸಾರಿ
ಇಡೀ ಪಾನು	ರೂ ೬	ರೂ ೨೩	ರೂ ೪೮	ರೂ ೭೨
ಅರ್ಧ ಪಾನು	,, ೩ ೮	, ೧೨	,, ೨೪	,, ೪೦
ಕಾಲು ಪಾನು	,, ೨ ೮	,, ೮	,, ೧೮	,, ೩೦
ಅರೆಕಾಲು ಪಾನು	,, ೧ ೮	,, ೫	,, ೧೩	,, ೨೨

ಅರೆಕಾಲು ಪಾನುಗಳಿಗಿಂತಲೂ ಸಣ್ಣದಾದ ಪ್ರಕಟಣೆಗಳ ದರವನ್ನು ಮೆನೇಜರರಿಗೆ ಬರದು ತಿಳಕೊಳ್ಳಬೇಕು

ಸ್ವದೇಶಾಭಿಮಾನಿಯ ಚಂದಾಹಣ.

		ರೂ	ಆ
ಟಪ್ಪಾಲು ಹಾಸಲು ಇಲ್ಲದೆ ೧ ವರ್ಷಕ್ಕೆ	..	೧	೦
ಟಪ್ಪಾಲು ಹಾಸಲು ಸಹಿತ ೧ ವರ್ಷಕ್ಕೆ	..	೧	೬
,, ,, ,, ಅರ್ಧ ವರ್ಷಕ್ಕೆ		೦	೧೨

ಚಂದಾಹಣವನ್ನು ಮುಂದಾಗಿ ತೆರತಕ್ಕದ್ದು ಪ್ರಕಟಣೆಗಳನ್ನೂ ಚಂದಾದಾರಿಕೆಯನ್ನೂ ಕುರಿತು ಈ ಕೆಳಗಿನ ವಿಳಾಸಕ್ಕೆ ಬರೆಯುವದು

ವಿಳಾಸ —ಮೆನೇಜರ್ ಶಾರದಾ ಛಾಪಖಾನೆ, ಮಂಗಳೂರು

INDIGENOUS AYURVEDIC PHARMACY OF

K. VENKAPPAYAR & Co.

ಕೆ. ವೆಂಕಪ್ಪಯ್ಯರ್ ಎಂಡ್ ಕೊ.

ಇವರ ಮಂಗಳೂರು ರಥಬೀದಿಯಲ್ಲಿರುವ

ಸ್ವದೇಶಿ ಆಯುರ್ವೇದಿಕ ಔಷಧಾಲಯದಲ್ಲಿ ತಯ್ಯಾರಿಸಲ್ಪಟ್ಟ

ಮೇಹಕುಲಾಂತಕ ಗುಳಿಗೆ ಈ ಮಾತ್ರೆಯು ಬಹಳ ಪೂಜ್ಯವಾದದ್ದು, ಇದು ಎಲ್ಲಾ ತರದ ಮೇಹರೋಗಗಳನ್ನು ಸಿಂಹವು ಮೃಗಗಳನ್ನು ವಧಿಸುವಂತೆ ತತ್ಕ್ಷಣವೇ ನಾಶಪಡಿಸುತ್ತದೆ ಇದನ್ನು ಕಫಪ್ರಕೃತಿಯುಳ್ಳ ಸ್ಥೂಲದೇಹದವರು ಲೋಧ್ರಾಸವವೆಂಬ ಔಷಧಿಯಲ್ಲಿಯೂ, ವಾತಪ್ರಕೃತಿಯವರು ದಶಮೂಲ ಅರಿಷ್ಟದಲ್ಲಿಯೂ, ಪಿತ್ತ ಪ್ರಕೃತಿಯವರು ನಾಮದಬೇರು ಕಷಾಯ ಯಾ ಮಂಜಿಷ್ಠಾದಿ ಆಸವದಲ್ಲಿ ತೆಗದುಕೊಂಡರೆ ಅವರವರಿಗಿರತಕ್ಕ ಎಲ್ಲಾ ಮೇಹರೋಗಗಳು ಮೂರು ದಿವಸಗಳೊಳಗೆ **ವಾಸಿ** ಯಾಗುತ್ತದೆ 25 ಮಾತ್ರೆಯುಳ್ಳ ಸೀಸೆ 1ಕ್ಕೆ 5–8–0

ರಾಮಬಾಣ ತೈಲ. ಈ ತೈಲವು ಮಕ್ಕಳ ಚೇಷ್ಟೆ ಅಪಸ್ಮಾರಕ್ಕೆ ದಿವ್ಯೌಷಧವಾಗಿರುತ್ತದೆ ಇದನ್ನು ಸಂದು ಸಂದುಗಳಿಗೆ ಮುಟ್ಟಿಸಿ ಪ್ರಾಯದ ಅವಸ್ಥೆ ಪ್ರಕಾರ **ಹೊಟ್ಟೆಗೆ** ಸಹ ತಕೊಂಡರೆ 13 ತರದ ಸನ್ನಿಯನ್ನೂ, 5 ವಿಧದ ಗ್ರಹವನ್ನೂ 18 ವಿಧದ ಅಪಸ್ಮಾರವನ್ನೂ ಹುಟ್ಟುವಾಗ್ಯೆ ಇರುವ ಹಲ್ಲನ್ನೂ, **ಪಕ್ಕೆಗಳು ಹೊರುವದನ್ನೂ** ಕಫದ ಉಪದ್ರವನ್ನೂ ಕೈಕಾಲು ನಡುಗುವದನ್ನೂ, ನೇವಸ, ಎಕ್ಕಳು, ಕೆಮ್ಮು, ಜ್ವರ, ಮೈಮುರಿಕೆ ತೆಗಿಯುವಂಥಾದ್ದನ್ನೂ, ಗರ್ಭಿಣಿಗೆ ಹಕ್ಕಿ ದಾಟಿದ ರೋಗಕ್ಕೂ, ಮಕ್ಕಳಿಗೆ ವರ್ಣ ಹಗರುವದಕ್ಕೂ, ಹೊರಕಡೆ ಹೋಗುವದಕ್ಕೂ, ಭೂತ ಪ್ರೇತ ಪಿಶಾಚ ಬಾಧೆಗೂ ಅತಿ ಹಿತಕರದ್ದಾಗಿರುತ್ತದೆ. ಮತ್ತು ಮಕ್ಕಳ ಚೇಷ್ಟೆಯು ಮಕ್ಕಿಗೆ ಇದಕ್ಕಿಂತ ಮೇಲಿನ ಔಷಧಿ ಈ ಭೂಲೋಕದಲ್ಲಿ ಎಲ್ಲಿಕ್ಕಿಲ್ಲ ಎಂತ ಖಂಡಿತವಾಗಿ ಹೇಳುತ್ತೇವೆ. ಸೇವಿಸಿದ ಯಾ ಹಚ್ಚಿದಕೂಡಲೇ ಗುಣಸಿಕ್ಕುವಂಥಾದ್ದು. ಇದಕ್ಕೆ **ಶೀಸೆ 1ಕ್ಕೆ 1-0-0.**

ದಶಮೂಲ ಅರಿಷ್ಟ. ಈ ಅರಿಷ್ಟವನ್ನು ಸೇವಿಸಿದರೆ ಗ್ರಹಣಿ, ಜ್ವರ, ಶ್ವಾಸಕಾಸ, ಗುಲ್ಮ, ಭಗಂದರ, ವಾತರೋಗ, ಕ್ಷಯ, ಚರ್ದಿ, ಪಾಂಡು, ಕಾಮಿಲ, ಕುಷ್ಟ, ಅರ್ಶಸ್ಸು, ಮೇಹ ಮದಹತ್ಯ, ಉದರರೋಗ, ಆಸನಜ್ವರ, ಮೂತ್ರಕೃಚ್ಛ್ರ, ಧಾತುಕ್ಷಯ, ಕೃಶತ್ವ, ಮೊದಲಾದವುಗಳನ್ನು ನಾಶಪಡಿಸಿ ಸೌಖ್ಯಪಡಿಸುವದರ ಶಿವಾಯಿ ಬಾಲಂತಿರೋಗಕ್ಕೆ ಅತಿ ಹಿತಕರವಾದ್ದಾಗಿರುತ್ತದೆ ಪ್ರಸವ ಆದನಂತರ ಹೆಂಗಸರು ಬೇರೆ ಯಾವ ಔಷಧಿಯನ್ನು ತಕ್ಕೊಳ್ಳದೆ ಇದನ್ನು ಮಾತ್ರ ಸೇವಿಸಿದರೆ ಯಾವ ರೋಗದ ಉಪದ್ರಗಳಿಲ್ಲದೆ ಸುಖವನ್ನು ಹೊಂದುವರು. ಇಡೀ ಬಾಟ್ಲಿ 1ರ ಕ್ರಯ ರೂ. 4–0–0.

ಇನ್ನು ಬೇರೆ ನಮೂನೆಯ ಔಷಧಿಗಳು ಆಗತ್ಯವಿದ್ದವರಿಗೆ ಅವರು ನಮಗೆ ತಿಳಿಸಿದ್ದಲ್ಲಿ ಅವರವರಿಗೆ [illegible] ಕ್ಕೆ ನಮಗೆ ಬರದ್ದಲ್ಲಿ ನಮ್ಮ ಕೆಟಲಾಗನ್ನು ಕಳುಹಿಸಿಕೊಡುವೆವು.

...ದಿದರೆ ನಿಮ್ಮ ಅರಿಷ್ಟ ನಾಶವಾಗುವದು, ಸುಖಿಯಾಗುವಿರಿ.

ಡ್ಯಾರಿಮುವರ ಟೊನಿಕ (ಬಲಕಾರಿ) ಗುಳಿಗೆಗಳು

(ವೀರ್ಯ ದುಃಖ್ಯಕ್ಕೆ).

ಸ್ವಪ್ನೇಂದ್ರಿಯ, ವೀರ್ಯಪಾತ, ಮತ್ತು ಯುವಕರ ಇತರ ರೋಗಗಳಿಗೆ ಇದೊಂದೇ ಸಿದ್ಧೌಷಧವೆಂದು ಹೆಸರ್ಗೊಂಡಿದೆ. ಸ್ತ್ರೀಪುರುಷರ ಮೆದುಳಿಗೆ ಪುಷ್ಟಿ ಕೊಟ್ಟು ಕ್ಷೀಣವಾದ ದೇಹವನ್ನು ಬಲಪಡಿಸುತ್ತದೆ.

ಇದು ವಾತ, ಸೊಂಟ ನೋವು, ತಲೆ ತಿರುಗುವಿಕೆ, ವಾಯು, ಕೈಕಾಲು ಮರಕಟ್ಟುವದು, ಇದೇ ಮುಂತಾದ ಅನೇಕ ರೋಗಗಳನ್ನೂ ವಾಸಿ ಮಾಡುವದು. ಮೆದುಳುಶಕ್ತಿಯನ್ನು ಹೆಚ್ಚಿಸುವದರಿಂದ ವಿದ್ಯಾರ್ಥಿಗಳಿಗೆ ಅತ್ಯುಪಯೋಗಕರವಾದದ್ದು. ಈಗುಳಿಗೆಗಳು ಹೆಂಗೆಸರ ದುರ್ಬಲತೆಯನ್ನು ಹೋಗಲಾಡಿಸಿ ಗರ್ಭಕೋಶವನ್ನು ಬಲಪಡಿಸಿ ಭಂಜೆಯೆನಿಸಿದವಳಿಗೆ ಗರ್ಭದಾನ ಮಾಡುವವು. ಇವುಗಳಿಂದ ಅಸ್ಥಿಜ್ವರ, ಕ್ಷಯರೋಗಗಳು ಗುಣವಾಗುವವು.

ಚಿಕಿತ್ಸೆ. ದಿನಕ್ಕೆ ಎರಡಾವರ್ತಿ ಒಂದು ಯಾ ಎರಡು ಗುಳಿಗೆಗಳನ್ನು ಹಾಲು ಯಾ ನೀರಿನಲ್ಲಿ ಸೇವಿಸುವದು. ಆಹಾರವು ಆರೋಗ್ಯಕರವೂ ಪುಷ್ಟಿಕರವೂ ಆಗಿರಬೇಕು.

ಕ್ರಯ—೩೭ ಗುಳಿಗೆಗಳ ಒಂದು ಬಾಟ್ಲಿಗೆ ರೂ 1–0–0. ಎಲ್ಲಾ ವೈದ್ಯಶಾಲೆಗಳಲ್ಲಿ ದೊರಕುವದು.

ಏಜೆಂಟರು.—ವಾಸನ್ಜಿ ನಾಥೂ ಎಂಡ್ ಕೊ,

ವಿನ್ಸ್ಟರ ಸುವರ್ಣ ಬಿಂದುಗಳು.

ಸ್ತ್ರೀ ಪುರುಷರ ಮೂತ್ರವ್ಯಾಧಿಗಳನ್ನು ಶೀಘ್ರವಾಗಿ ಗುಣ ಮಾಡುವವು.

ಸೇವನಾಕ್ರಮ. ದಿನಕ್ಕೆ ಮೂರಾವರ್ತಿ ಒಂದು ಟೀಸ್ಪೂನ (ಸಣ್ಣ ಚಮ್ಚ)ವನ್ನು ಹಾಲು ಯಾ ನೀರಿನಲ್ಲಿ ತಕ್ಕೊಳ್ಳುವದು. ಕ್ರಯ ರೂ 1—8—0.

ವಿಕ್ರಯಿ—ವಾಸನ್ಜಿ ನಾಥೂ ಎಂಡ್ ಕೊ.

ಮಾಲೆಕ ಎಗ್ಯೂ ಮಿಕ್ಸ್ಚರ

ಸರ್ವ ಜ್ವರ ವಿನಾಶಕ

ಅಗ್ನಿಮಾಂದ್ಯ, ಪಿತ್ತ, ಮುಂತಾದ ಕಾರಣಗಳಿಂದುಂಟಾದ ಯಾವ ಜ್ವರವನ್ನಾದರೂ ಒಂದೇ ಸೇವನೆಯಿಂದ ಇಳಿಸುವದ, ಮೂರು ಸಾರಿ ಸೇವಿಸಿದನಂತರ ಜ್ವರವು ಪೂರ್ಣನಾಶವಾಗದಿರುವದಲ್ಲದೆ ಎಂದಿಗೂ ಮರಳದ.

ಶೀತಜ್ವರ, ಉಷ್ಣಜ್ವರ, ಮೂರು ನಾಲ್ಕು ದಿವಸಕ್ಕೊಮ್ಮೆ ಬರುವ ಜ್ವರ, ಗಟ್ಟಿಜ್ವರ ಇತ್ಯಾದಿ ಎಲ್ಲಾ ಜ್ವರಗಳೂ, ತತ್ಕಾಲವೇ ಉಪಯೋಗಿಸುವದರಿಂದ ಪ್ಲೀಗುಜ್ವರವೂ ಕೂಡ ಗುಣವಾಗುವದು. ಮಲೆನಾಡುಗಳಲ್ಲಿರುವವರಿಗೂ ಪ್ರಯಾಣಿಕರಿಗೂ ಅವಶ್ಯಕರವಾದದ್ದು.

ಕ್ರಯ 12 ಆಣೆ. ಎಲ್ಲಾ ವೈದ್ಯಾಲಯಗಳಲ್ಲಿ ದೊರಕುತ್ತದೆ.

ಏಜೆಂಟರು:—ವಾಸನ್ಜಿ ನಾಥೂ ಎಂಡ್ ಕೋ.

ವಿನ್ಸ್ ಗಜಕರ್ಣದ ಮುಲಾಮು ರಿಜಿಸ್ಟರ್ಡ ನಂಬ್ರ 106/189

ಗಜಕರ್ಣಕ್ಕೆ ಸಿದ್ಧೌಷಧ. ರೋಗ ನಿರ್ಮೂಲವಾಗುವದು. ಮೂರೇ ಸಲ ಹಚ್ಚುತ್ತಲೇ ಗುಣವಾಗುತ್ತದೆ. ಮರಳಿ ಮೊಳೆಯುವದೇ ಇಲ್ಲ. ಜ್ವಾಲೆ ಇಲ್ಲ. ಇಂಡ್ಯಾದಲ್ಲಿಯೂ ಹೊರದೇಶಗಳಲ್ಲಿಯೂ ವರುಷಂಪ್ರತಿ ಸಾವಿರಾರು ಪಕೇಟು ಬಿಕರಿಯಾಗುತ್ತದೆ. ತಯಾರು ಮಾಡುವ ಒಂದೇ ಕಾರ್ಖಾನೆ.

ವಾಸನ್ಜಿ ನಾಥೂ ಎಂಡ್ ಕೋ, ಮುಂಬಯಿ.

ಏಜೆಂಟರು. **Mangalore Trading Association, Mangalore.**

ಮೆಸರ್ಸ್. ಕೂಬಾಜಿ ಭೋಜಾ ಎಂಡ್ ಕೊ, ಬಾರಾಬಜಾರ್ ಕಲ್ಕತ್ತ.

ಬಹಿರುಪಯೋಗಕ್ಕೆ ಮಾತ್ರ ವಿನ್ಸ್ಟರ ಎಂಬ್ರೋಕೇಶನ

ವಾತ, ನರಗಳ ಬೇನೆ, ಸಂದುವಾತ, ಉಳುಕು, ಘಾಯ, ಸೊಂಟ ನೋವು, ಮೈಬೇನೆ, ಕೈಕಾಲು ನೋವು, ಎದೆ ನೋವು, ಶೀತ, ಗಂಟು ಹಿಡಿಯುವದು, ಘುಂತಾದ ಶರೀರದ ಎಲ್ಲಾ ತರದ ನೋವುಗಳಿಗೆ ಸಿದ್ಧೌಷಧ. ನೋವಿದ್ದಲ್ಲಿ ದಿನಕ್ಕೆ ಒಂದು ಯಾ ಎರಡು ಸಾರಿ ಹಚ್ಚುವದು. ಕ್ರಯ 8 ಆಣೆ.

ಎಡ್ರೆಸು:—**Vasanjee Nathu & Co.**

111—113 Market Bombay.

ಅಶ್ವಿನಿ ಗವರ್ನಮೆಂಟ್ ಸೆಕ್ಯೂರಿಟಿ ಜೀವ ವಿಮೇ ಕಂಪೆನಿ ಲಿಮಿಟೆಡ್

ಹೆಡ್ ಆಫೀಸು—ವಿಶಾಖ ಪಟ್ಣ, ಮದ್ರಾಸು ಸಂಸ್ಥಾನ.

ಭಕ್ತ ದೇಶೀಯ ಸಂಘ.

ಫಂಡು ರೂಪಾಯಿ 100,000.

ಪ್ರೊವಿಡೆಂಡ್ ಕಂಪೆನಿಗಳಲ್ಲಿ ಈ ತರದ ಕಂಪೆನಿ ಬೇರೆ ಇಲ್ಲ. ನಡುತರದವರಿಗೂ ಬಡವರಿಗೂ ಎಂದೂ ಕೇಳದ ಪ್ರಯೋಜನವೇ ಯುತ್ತದೆ. ಪ್ರಬಲರೂ ಸಾಹಸಿಕರೂ ಆದ ಸಬ್ ಏಜೆಂಟರೂ ಘಾಯಿಷ್ ಮಾಡುವವರೂ ಕಂಪೆನಿಗೆ ಬೇಕು.

ಕಂಪೆನಿಯು ಅದನ್ನು ಕಮ್ಮಿ ದರದಲ್ಲಿ ೧೦೦ ರೂಪಾಯಿಗಳಿಂದ ೧೦೦೦೦ ರೂಪಾಯಿ ವರೇಗಿನ ಮೊಬಲಗುಗಳಿಗೆ ಜೀವ ವಿಮೇ ಉತ್ತರಾಯಿಸುವದು. ಕಮಿಶನ ಧಾರಾಳ ದೊರಕುವದು. ಹೊಸ್ಪಿಟಲ್ ಅಸಿಸ್ಟಾಂಟರೂ ವಿಮೇದಾರರನ್ನು ಪರೀಕ್ಷಿಸಬಹುದು.

ಬರುವ ಜನ್ಮ ದಿನಕ್ಕಾಗುವ ಪ್ರಾಯ	ಲಾಭ ಸಮೇತ ಸಿಕ್ಕುವ ವಿಮೇಗೆ 100 ರೂಪಾಯಿಯ ವರ್ಷಂಪ್ರತಿ ಕಂತು ದರ		ಲಾಭ ಸಮೇತ ಸಿಕ್ಕುವ ವಿಮೇಗೆ 1000 ರೂಪಾಯಿ ಮೇಲಿನ ವರ್ಷಂಪ್ರತಿ ಸ್ಪೆಶಲ್ ದರಗಳು	
	ಮರಣಾಂತ	ಹತ್ತು ವರ್ಷದಲ್ಲಿ ಹಣ ಸಿಕ್ಕುವದು	ಮರಣಾಂತ	ಹತ್ತು ವರುಷದಲ್ಲಿ ಹಣ ಸಿಕ್ಕುವದು
20	2– 8–0	9–15–0	21– 8–6	99– 0–0
25	2–13–0	10– 4–0	24– 0–0	99– 8 0
30	3– 4–0	10 –9–0	27 2–0	100– 1 0
35	3–10–0	10–14 0	31 4–0	100–15 0
40	4– 2–0	11– 3 0	36–10–0	102– 5 0
45	4–14 0	11– 8–0	43–12–0	104– 7–0
50	6 8–0	11–13–0	50–10–0	107–12–0

• 200ರೂಪಾಯಿ ಯಾ 900ರ ವರೇಗಿನ ಮೊಬಲಗಿನ ದರಗಳು 100 ರೂಪಾಯಿಯ ದರಗಳನ್ನು 2ರಿಂದ ಮುಂತಾಗಿ 9ರ ವರೇಗೆ ಗುಣಿಸಿ, ಪಾವತಾದ ದಲ್ಲಿ ಕಂಡುಹಿಡಿಯುವದು. ಪ್ರಕಟಣೆಗೆ ತಪಸೀಲುಗಳನ್ನು ಕೆಳಗಿನ ವಿಳಾಸಕ್ಕೆ ಬರೆದು ಕೇಳಿಕೊಳ್ಳುವದು.

ಎಲ್ಲೂರ ರಾಮರಾವ್,
ಉತ್ತರ ದಕ್ಷಿಣಕನ್ನಡ ಜಿಲ್ಲೆಗಳ ಜನರಲ್ ಏಜೆಂಟ್,
ಅಶ್ವಿನಿ ಲೈಫ್ ಎಸ್ಸೂರೆನ್ಸ್ ಕಂಪೆನಿ
ಕಾಸರಗೋಡು, ದ ಕನ್ನಡ

ಜೆ. ಎಸ್. ಸೋಜ ಎಂಡ್ ಕಂಪೆನಿ

ದೃಷ್ಟಿಚಕ್ರಗಳನ್ನು ಮಾಡಿ ವಿಕ್ರಯಿಸುವ ನಂಬಿಕೆಯುಳ್ಳ ಫರ್ಮಿನ ಏಜೆಂಟರು.

ಪ್ರಖ್ಯಾತಿಪಟ್ಟ ಸಂಪೂರ್ಣ ಪೆಬ್ಲ್ ಎಂಬ ಗುರುತು ಕಲ್ಲು ಕನ್ನಡಿಯಿಂದ ಮಾಡಿಟ್ಟ ದೃಷ್ಟಿಚಕ್ರಗಳನ್ನು ಹೆಚ್ಚಿನ ಸಂಗ್ರಹವಿಟ್ಟು, ದೃಷ್ಟಿ ಶಕ್ತಿಯನ್ನು ಸರಿಯಾಗಿ ಪರೀಕ್ಷಿಸಿ ವಿಕ್ರಯಿಸುತ್ತಾರೆ. ದೃಷ್ಟಿಯ ಅಶಕ್ತಿಯುಳ್ಳವರು ತಮ್ಮ ದೃಷ್ಟಿಯನ್ನು ಪರೀಕ್ಷಿಸಗೆ ಅಸಡ್ಡೆ ಮಾಡಿ ಬಜಾರಿನಲ್ಲಿ ಸಿಕ್ಕುವ ಕಮ್ಮಿ ಕ್ರಯದ ಕನ್ನಡಕಗಳನ್ನು ತಕ್ಕೊಂಡು ಉಪಯೋಗಿಸಿದರೆ ಕಣ್ಣಿನ ತ್ರಾಣವು ಕುಂದಿಹೋಗುವಂಥಾ ಅಪಾಯದಲ್ಲಿ ಬೀಳುತ್ತಾರೆ. ಹೆಚ್ಚಾಗಿ ಅನೇಕ ಮನುಷ್ಯರ ಕಣ್ಣುಗಳ ದೃಷ್ಟಿಯು ಒಂದಕ್ಕೊಂದು ಸರಿ ಇಲ್ಲದರಿಂದ ಅದನ್ನು ಜಾಗ್ರತೆಯಾಗಿ ಪರೀಕ್ಷಿಸಿ ಅದಕ್ಕೆ ತಕ್ಕದ್ದಾದ್ದನ್ನು ಆರಿಸಿ ತೆಗಿಯುವಂಥಾದ್ದು ಮುಖ್ಯ ಸಂಗತಿಯಾಗಿರುತ್ತದೆ. ಬಜಾರಿನಲ್ಲಿ ಸಿಕ್ಕುವ ದೃಷ್ಟಿಚಕ್ರಗಳು ನಿಜವಾದ ಪೆಬ್ಲ್ ಅಲ್ಲವಾದ್ದರಿಂದಲೂ, ದೃಷ್ಟಿಯ ತಾರತಮ್ಯ ಅನುಭವ ಮಾಡಿ ಆರಿಸಿಕೊಡುವವರ ತಿಳಿಯದವರಾದ್ದರಿಂದಲೂ, ಅವುಗಳ ಉಪಯೋಗವು ಸ್ವಲ್ಪ ಸಮಯದೊಳಗೆ ಕಣ್ಣುಗಳಿಗೆ ಕೇಡನ್ನು ಉಂಟು ಮಾಡುವದು.

ಶರ್ತ:—ತಮ್ಮ ದೃಷ್ಟಿಯನ್ನು ಪರೀಕ್ಷಿಸಲಪೇಕ್ಷಿಸುವವರು ಪ್ರತಿ ದಿನ ಮಧ್ಯಾಹ್ನ ಘಂಟೆ 2ರಿಂದ ಸಾಯಂ ಘಂಟೆ 6ರ ವರೇಗೆ ನಮ್ಮ ಆಫೀಸಿಗೆ ಬಂದಲ್ಲಿ ಚಾರ್ಜು ಇಲ್ಲದೆ ದೃಷ್ಟಿ ಪರೀಕ್ಷಿಸಿ ಆಲೋಚನೆ ಹೇಳಲಾಗುವದು. ಮುನಿಸಿಪಾಲಿಟಿಯೊಳಗೆ ಗಿರ್ಹಾಕಿಯವರ ಮನೆಗೆ ಬರಬೇಕಾದರೆ ಪ್ರತಿಸಾರಿ ರೂ. 1 ಫೀಸು ಕೊಡಬೇಕಾದೀತು.

ಜೆ. ಎಸ್ ಸೋಜ ಎಂಡ್ ಕಂಪೆನಿ,
ಮೂಲ ಬಾಬಾ ಬುಡಾನ್ಗಿರಿ ಕಾಫಿ ಪುಡಿ ತಯಾರಿಸುವವರು,
ಹಂಪನಕಟ್ಟಾ, ಮಂಗಳೂರು, ದಕ್ಷಿಣ ಕನ್ನಡಾ.

ಸ್ವದೇಶಾಭಿಮಾನಿ.

ಮಂಗಳೂರು, ತಾರೀಖು 16ನೇ ದಶಂಬರ 1907.

ಬರುವ ಕೊಂಗ್ರೆಸ್ ಸಭೆ

ಕೊಂಗ್ರೆಸ್ಸಿನಲ್ಲಿ ಸೌಮ್ಯ ಮತ್ತು ತೀಕ್ಷ್ಣ ಪಕ್ಷಗಳೆಂಬ ಇತ್ತಂಡಗಳು ಹುಟ್ಟಿ ಇವರೊಳಗಣ ವೈಷಮ್ಯದ ದೆಸೆಯಿಂದ ಕಳೆದ ವರ್ಷ ಕಲ್ಕತ್ತೆಯಲ್ಲಿ ಸಭೆಯ ಕೂಟವು ನಿರ್ವಿಘ್ನದಿಂದ ನೆರವೇರಬೇಕಾದರೆ ದಾದಾಭಾಯಿ ನವರೋಜಿಯವರನ್ನು ಕರತಂದು ಆ ಪ್ರಾಚೀನ ಪುರುಷನಿಗೆ ಅಗ್ರಾಸನದ ಭಾರವನ್ನು ವಹಿಸಬೇಕಾಯಿತು ಈ ಸಲ ನಾಗಪುರದಲ್ಲಿ ಇದೇ ವೈಷಮ್ಯವು ಬೆಳೆದು ಮುಂಚೆ ಗೊತ್ತುಮಾಡಿದಂತೆ ಅಲ್ಲಿ ಸಭೆ ಕೂಡುವದು ದುರ್ಲಭವೆಂದು ಕಂಡುಬಂತು ಇಂಥಾ ಶೋಚನೀಯವಾದ ಅಂತಃಕಲಹಕ್ಕೆ ಯಾವ ಪಕ್ಷವು ಹೊಣೆಯೆಂದು ನಿಶ್ಚಯಿಸುವದು ಸುಲಭವಲ್ಲದಿದ್ದರೂ ತೀಕ್ಷ್ಣ ಪಕ್ಷದವರು ಹುಡುಗರನ್ನು ಈ ಕಲಹದಲ್ಲಿ ಪ್ರವೇಶಿಸಗೊಡ ಬಾರದಿತ್ತೆಂದು ಹೇಳಬಹುದು. ನಾಗಪುರದ ಸ್ವಾಗತ ಸಭೆಯವರು ಈ ವರ್ಷ ಕೊಂಗ್ರೆಸ್ ಸಭೆಯು ಅಲ್ಲಿ ಕೂಡುವದು ಅಸಾಧ್ಯವೆಂದು ಇಂಡ್ಯಾ ಕೊಂಗ್ರೆಸ್ ಕಮಿಟಿಗೆ ತಿಳಿಸಿದರು ಮದ್ರಾಸು ಮಹಾಜನ ಸಭೆಯು ಈ ಸಂಕಷ್ಟದಲ್ಲಿ ಕೊಂಗ್ರೆಸ್ಸನ್ನು ಮದ್ರಾಸಿಗೆ ಆಮಂತ್ರಿಸಲಿಕ್ಕೆ ನಿಶ್ಚಯಿಸಿದರು. ಆದರೆ ಇಂಡ್ಯಾ ಕೊಂಗ್ರೆಸ ಕಮಿಟಿಯು ಈ ಸಂಧಿಯಲ್ಲಿ ಮುಂದಿನ ಕಾರ್ಯವನ್ನು ನಿರ್ಧರಿಸಲಿಕ್ಕೆ ಬೊಂಬಾಯಿಯಲ್ಲಿ ನೆರೆದಾಗ ಸೂರತ್ ಪ್ರತಿನಿಧಿಗಳು ಕೊಂಗ್ರೆಸ್ಸನ್ನು ತಮ್ಮಲ್ಲಿ ಕೂಡಿಸಬೇಕೆಂದು ಅರಿಕೆಮಾಡಿದರು ಹಾಗೆಯೇ ನಿಶ್ಚಯವಾಯಿತು.

ಸೂರಾತಿಯರಿಗೆ ಮೇಲಿನ ಕಾರಣಗಳಿಂದ ಸಮಯ ಸ್ವಲ್ಪವೇ ಸಿಕ್ಕಿದ್ದರೂ ಅವರು ಹೆಚ್ಚಿನ ಶ್ರಮಪಟ್ಟಿದ್ದರಿಂದ ಈ ವರ್ಷದ ಕೊಂಗ್ರೆಸ್ ಸಭೆಯು ಎಂದಿಗಿಂತಲೂ ಅಧಿಕ ವಿಜೃಂಭಣೆಯಿಂದ ನೆರವೇರುವಂತೆ ತೋರುವದು. ಸಭೆಯ ಅಧ್ಯಕ್ಷರಾಗಿ ನೇಮಿಸಲ್ಪಟ್ಟ ಡಾ| ರಾಸಬಿಹಾರಿ ಘೋಷರಿಗಿಂತಲೂ ಅಧಿಕ ಕೀರ್ತಿವಂತರೂ ವಿದ್ವಾಂಸರೂ ನಮ್ಮಲ್ಲಿಲ್ಲವೆನ್ನಬೇಕು. ಇವರು ಧರ್ಮಶಾಸ್ತ್ರದಲ್ಲಿಯೂ (ಲೋ), ಇಂಗ್ಲಿಷ ವ ಸಂಸ್ಕೃತ ವಾಙ್ಮಯದಲ್ಲಿಯೂ ನಿಸ್ಸೀಮ ಪಾಂಡಿತ್ಯಕ್ಕೆ ಖ್ಯಾತಿಹೊಂದಿರುವರು ಇವರ ವಕ್ತೃತೆಯು ಮನಮೋಹನವಾದದ್ದು. ಇವರು ತಮ್ಮ ಉದಾರ ಚರಿತೆಯಿಂದಲೂ ಸಾಮ್ರಾಜಿಕ ನಿಯಮ ನಿರ್ಮಾಣಕ ಸಭೆಯಲ್ಲಿಯೂ ಕೊಂಗ್ರೆಸ್ ಸಭೆಯಲ್ಲಿಯೂ ಮಾಡಿದ ಉದ್ದೀಪಕ ಭಾಷಣಗಳಿಂದಲೂ ತಮ್ಮ ಪ್ರಜಾ ವಾತ್ಸಲ್ಯವನ್ನು ಪ್ರಕಾಶಗೊಳಿಸಿದ್ದಾರೆ ಇವರಲ್ಲಿ ಸರಕಾರಕ್ಕೂ ಜನರಿಗೂ ಏಕಪ್ರಕಾರವಾದ ವಿಶ್ವಾಸವಿರುವದ .

ಈ ಸಾರಿ ಕೊಂಗ್ರೆಸ್ ಸಭೆಗೆ ಹಲವು ಗುರುತರವಾದ ಕಾರ್ಯಗಳಿರುವವು ದೇಶದಲ್ಲಿ ಪ್ರಾಬಲ್ಯಕ್ಕೆ ಬಂದ ತೀಕ್ಷ್ಣ ಸೌಮ್ಯ ಪಕ್ಷಗಳ ಬೇಧವು ವೃದ್ಧಿಯಾಗುತ್ತಾ ಬರುವಂತಿದೆ ವಿಲಾಯತಿಯಲ್ಲಿ ಪಾರ್ಲಿಮೆಂಟಿನಲ್ಲಿ ಹಲವು ಪರಸ್ಪರ ವಿರುದ್ಧವಾದ ಪಕ್ಷಗಳಿದ್ದರೂ ಕೆಲಸವು ಸರಾಗವಾಗಿ ನಡೆಯುವದು ಆ ಸಭೆಯಲ್ಲಿ ಎಂಥಾ ಭೇದ ಹುಟ್ಟಿದರೂ ಅದನ್ನು ನಿರ್ಧರಿಸಲಿಕ್ಕೆ ಏರ್ಪಡಿಸಿಟ್ಟ ನಿಬಂಧನೆಗಳು ಮೊದಲೇ ಇರುವವು ಕೊಂಗ್ರೆಸ್ಸಿನ ಗೃಹಕೃತ್ಯವು ಇನ್ನು ಮುಂದೆ ಕೊಂಕುಕೊರತೆ ಇಲ್ಲದೆ ಸಾಗಬೇಕಾದರೆ ಇಂಥಾ ನಿಬಂಧನೆಗಳನ್ನು ತಪಸೀಲುವಾರು ಏರ್ಪಡಿಸುವದು ಅವಶ್ಯಕ ಉಭಯ ಪಕ್ಷದವರಲ್ಲಿಯೂ ಸಹಕಾರಭಾವವು ಅವಶ್ಯಕ

ಇನ್ನೂ ವಿಶೇಷ ಸಂಗತಿಗಳಿವೆ ಸರ್ಕಾರಕ್ಕೆ ತಮ್ಮ ರಾಜ್ಯಭಾರಕ್ರಮದಲ್ಲಿ ನ್ಯೂನತೆಗಳಿವೆ ಎಂದು ಕಂಡುಬಂದು ಇವನ್ನು ಕಳೆಯುವ ಉದ್ದಿಶ್ಯ ಡಿಸೆಂಟ್ರಲೈಜೇಶನ್ (ಅಧಿಕಾರ ವಿಭಾಗ) ಕಮ್ಮಿಶನ್ ಒಂದನ್ನು ಏರ್ಪಡಿಸಿದ್ದಾರೆ ಈ ಕಮ್ಮಿಶನಿನವರು ತಮ್ಮ ಉದ್ದಿಶ್ಯವು ಚೆನ್ನಾಗಿ ನೆರವೇರುವಂತೆ ಸರ್ಕಾರದ ಆಡಳಿತೆಯಲ್ಲಿ ಯಾವ ಬದಲಾವಣೆಗಳು ಅವಶ್ಯಕವೆಂದು ಪ್ರಜಾಮುಖಂಡರನ್ನೂ ಪ್ರಭುಸೇವಕರನ್ನೂ ವಿಚಾರಿಸುತ್ತಿರುವರು ಇಂಥಾ ವೇಳೆಯಲ್ಲಿ ಇಡೀ ದೇಶದ ಪ್ರಜಾಪ್ರತಿನಿಧಿಗಳೂ ನಮ್ಮಲ್ಲಿಯ ವಿದ್ವಾಂಸ ಶಿರೋಮಣಿಗಳೂ ಎನಿಸುವ ಕೊಂಗ್ರೆಸ್ ಸಭೆಯು ಕಮ್ಮಿಶನಿನ ವಿಮರ್ಶೆಗೆ ಕಾರಣವಾದ ವಿಷಯಗಳಲ್ಲಿ ತಮ್ಮ ವಿಚಾರಭರಿತವಾದ ಅಭಿಮತವನ್ನು ಸೂಚಿಸಿದರೆ ಅದಕ್ಕೆ ಹೆಚ್ಚಿನ ಭಾರವಿರುವದು.

ರಾಷ್ಟ್ರೀಯ ವ ಪ್ರಾಂತಿಕ ನಿಯಮನಿರ್ಮಾಣಕ ಸಭೆಗಳಲ್ಲಿಯೂ ಬದಲಾವಣೆಗಳನ್ನು ಸೂಚಿಸಿ ಸರ್ಕಾರದವರು ಕೊಟ್ಟ ಸರ್ಕಿಲಾರು ವಾಚಕರ ಮನಸ್ಸಿನಲ್ಲಿರುವದು ಈ ಬದಲಾವಣೆಗಳನ್ನೂ ಲೋಕಾಭಿಮತವನ್ನೂ ಅನುಸರಿಸಿ ಮಾರ್ಪಡಿಸಬಹುದೆಂದು ಸರ್ಕಾರದವರು ಹೇಳಿರುವರು ಪ್ರಕೃತ ಸೂಚಿಸಿದ ಏರ್ಪಾಡುಗಳಿಂದ ದೇಶಕ್ಕೆ ಹಾನಿಯಲ್ಲದೆ ಮೇಲಾಗದು ಆದ್ದರಿಂದ ಈ ಬದಲಾವಣೆಗಳನ್ನೇ ಎಷ್ಟರಮಟ್ಟಿಗೆ ಯಾವ ರೀತಿಯಲ್ಲಿ ಮಾರ್ಪಡಿಸಬೇಕೆಂದು ಕೊಂಗ್ರೆಸ್ ಸಭೆಯವರು ಪ್ರಜಾಪರವಾಗಿ ಅರಿಕೆ ಮಾಡುವದು ಯುಕ್ತ ವ ಅವಶ್ಯಕ.

ಇದಲ್ಲದೆ ರಾಷ್ಟ್ರೀಯ ವ ಪ್ರಾಂತಿಕ ಆಲೋಚನಾ ಸಭೆಗಳನ್ನು ನಿರ್ಮಿಸುವರು. ಈ ಸಭೆಗೆ ಎಂಥವರನ್ನು ಚುನಾಯಿಸಬೇಕು ಅಥವಾ ಅವರಿಗೆ ಯಾವ ತರದ ಅಧಿಕಾರಗಳಿರಬೇಕು ಎಂಬ ಅಂಶಗಳನ್ನೂ ಸಭೆಯು ಚರ್ಚಿಸಿ ಸರಕಾರಕ್ಕೆ ಮನವಿ ಮಾಡುವರೆಂದು ನಂಬಿದ್ದೇವೆ

ಮುಖ್ಯವಾಗಿ ಈಗ ದೇಶದಲ್ಲೆಲ್ಲಾ ಹರಡಿದ ನವ ಚೇತನವನ್ನು ಯಾವ ರೀತಿಯಲ್ಲಿ ಸಾಕಬೇಕೆಂಬದನ್ನೂ ಅದು ದೇಶಕ್ಕೆ ಪ್ರಯೋಜನಕಾರಿಯಾಗುವಂತೆ ಯಾವ ಏರ್ಪಾಡುಗಳು ಅಗತ್ಯವೆಂಬದನ್ನೂ ನಿರ್ಣಯಿಸುವದು ಕೊಂಗ್ರೆಸ್ಸಿನ ವಿಶೇಷ ಕಾರ್ಯವೆಂದು ನಮಗೆ ತೋರುವದು

ಸ್ವವಿಷಯ.

ಈ ಸಂಚಿಕೆಯಲ್ಲಿ ಸ್ವದೇಶಾಭಿಮಾನಿಯು ಮೊದಲನೇ ವರ್ಷವನ್ನು ಪೂರೈಸಿ ಬರುವ ಸಂಚಿಕೆಯಲ್ಲಿ ಎರಡನೇ ವರ್ಷಕ್ಕೆ ಕಾಲಿಡುವದು ಹೀಗೆ ನಮ್ಮ ಪ್ರಯಾಣದಲ್ಲಿ ಒಂದು ಮಜಲು ದಾಟಿ ಇನ್ನೊಂದು ಮಜಲನ್ನು ಸೇರವಾಗ ನಾವು ಎಷ್ಟು ದಾರಿ ನಡೆದೆವು, ನಮ್ಮ ಗುರಿಯು ಇನ್ನೆಷ್ಟು ದೂರವಿದೆ, ಮುಂದಿನ ಪಯಣ ಹ್ಯಾಗೆ ಬೆಳೆಸಬೇಕೆಂಬ ವಿಚಾರವು ಸಹಜವಾಗಿ ಹುಟ್ಟುವದು ಈ ವಿಚಾರತರಂಗವನ್ನು ವಾಚಕರ ಮುಂದಿಟ್ಟು ಕೆಳಗಿನ ವಿಷಯಗಳನ್ನು ತಾಳ್ಮೆಯಿಂದೋಳಕೊಳ್ಳ ಬೇಕೆಂದು ಅರಿಕೆ ಮಾಡುವೆವು

ನಮ್ಮ ಮಾತೆಯಾದ ಈ ಭರತಖಂಡವು ದೀರ್ಘನಿದ್ರೆಯಿಂದ ಜಾಗ್ರತಾವಸ್ಥೆಗೆ ಬರುತ್ತಿರುವದು ಮೊದಂತೆ ಸುಧಾರಣೆಯಲ್ಲಿ ಮುಂದೆ ಓಡಿದ ಹಿಂದೂದೇಶವು ಈಗ ಎಚ್ಚತ್ತು ನೋಡುವಾಗ ಪಾಶ್ಚಾತ್ಯ ಅಮೆಗಳು ನಮ್ಮನ್ನು ಹಿಂದಿಕ್ಕಿದ್ದು ಕಂಡು ಶೋಕಿಸುವದು ಆ ಜನಾಂಗಗಳ ಪ್ರಗತಿಯನ್ನು ನೋಡಿ ನಾವು ಹ್ಯಾಗೆ ಮುಂದರಿಸಬೇಕೆಂದು ತಿಳಕೊಂಡು ನಮ್ಮ ಮುಂಬಾಳುಗಳು ಮುಂದೊತ್ತುವರು ಇಡೀ ಪ್ರಜಾಸಮೂಹವನ್ನೇ ಉನ್ನತಿಗೆ ತರುವ ಕಾರ್ಯವು ಪ್ರಜೆಗಳ ಸಹಕಾರ ವಿನಾ ಸಾಗದು ಇಂತಹ ಐಕಮತ್ಯವನ್ನು ಬೆಳಿಸಲಿಕ್ಕೆ ದೇಶದ ನಾನಾ ಕಡೆಗಳಲ್ಲಿ ಯಾವ್ಯಾವ ಪ್ರಯತ್ನಗಳು ನಡೆಯುವವು ಅವನ್ನು ನಾವು ಎಷ್ಟರಮಟ್ಟಿಗೆ ಅನುಸರಿಸಿ ಆ ಪ್ರವಾಹವನ್ನು ವೃದ್ಧಿಕೊಳಿಸಬಹುದೆಂದು ಕೈಲಾದಮಟ್ಟಿಗೆ ವಾಚಕರಿಗೆ ಸೂಚಿಸುವದೇ ನಮ್ಮ ಉದ್ದಿಶ್ಯ ಸಂಪತ್ತಿಯೇ ಸುಧಾರಣೆಗೆ ವಾಹನ, ಕೈಗಾರಿಕೆಗಳ ಅಭಿವೃದ್ಧಿಯು ಸಂಪತ್ತಿಗೆ ಮೂಲ, ಕೈಗಾರಿಕೆಗಳನ್ನು ಏಳಿಗೆಗೆ ತರಲಿಕ್ಕೂ ದೇಶದ ಸಂಪತ್ತನ್ನು ದೇಶಾಭಿವೃದ್ಧಿಗನೇ ವಿನಿಯೋಗಿಸಲಿಕ್ಕೂ ಸ್ವರಾಜ್ಯವು ಬೇಕು ಮತ್ತು ಯಥಾರ್ಥವಾದ, ಸುಧಾರಣೆಯ ಮುಖ್ಯ ಅಂಶವು ಧರ್ಮೋಜ್ಜೀವನವಾಗಿರಲು ಆರ್ಯಧರ್ಮೋಜ್ಜೀವನವು ಅವಶ್ಯಕ. ಮೇಲಿನ ಪುರುಷಾರ್ಥಗಳನ್ನು ಕೈಗೂಡಿಸಲಿಕ್ಕೆ ಈಗ ಸಮಾಜವನ್ನು ಕಾಡುವ ಶಾಸ್ತ್ರವಿರುದ್ಧವಾದ ಹಲವು ದುರಾಚಾರಗಳನ್ನು ಕಿತ್ತುಹಾಕಿ ಪ್ರಜೆಗಳಲ್ಲಿ ದೇಹದಾರ್ಢ್ಯವನ್ನೂ ಐಕ್ಯವನ್ನೂ ಉಂಟುಮಾಡಬೇಕು ಎಂಬ ವಿಷಯಗಳು ನಿಶ್ಚಿತವಾಗಿವೆ. ಈ ವಿಷಯಗಳನ್ನು ದೇಶಬಾಂಧವರಿಗೆ ತಿಳಿಯಹೇಳಿ ಅವನ್ನು ಕೈಲಾದಮಟ್ಟಿಗೆ ಪ್ರಚಾರಕ್ಕೆ ತರುವದೇ ನಮ್ಮ ಕರ್ತವ್ಯ. ಇದು ಇಂಗ್ಲಿಷು ಅರಿಯದ ನಮ್ಮ ವಾಚಕರಿಗೆ ನಮ್ಮಿಂದ ಸಲುವ ಋಣವು. ಇಂಗ್ಲಿಷು ಭಾಷೆಯಲ್ಲಿ ಪ್ರವೀಣರಾದ ಮಹಾನುಭಾವರು ತಮ್ಮ ನಾಡಿಗರಿಗೆ ಹಿತವಾದವನ್ನು ಬೋಧಿಸಲಿಕ್ಕೆ ಒಂದು ದಾರಿಯಾಗುವಂತೆ ಕನ್ನಡ ಪತ್ರವನ್ನು ಉಪಯೋಗಿಸಿದ್ದು ನಮ್ಮ ಇನ್ನೊಂದು ಉದ್ದಿಶ್ಯವಾಗಿದೆ.

ಭಾಷಾಪಾಂಡಿತ್ಯವಿಲ್ಲದ್ದರಿಂದಲೂ, ನವೀನವಾಗಿ [illegible] ದಿಂದಲೂ ನಾವು ಅಗ್ಯಾಗ್ಯೆ ತಪ್ಪಿದ್ದಿರಬೇಕು. [illegible] ನೋಡಬೇಕು. [illegible]

[illegible]ವನ್ನು ತೋರುವೆವೆಂದು ದಯಾಳು ವಾಚಕರನ್ನು ನಂಬಿಸುವೆವು. ದೇಶಬಾಂಧವರು ಈ ವರ್ಷ ಕೊಟ್ಟ ಆದರವನ್ನು ಮುಂದೆಯೂ ನೀಡಿ ತಮ್ಮ ಕೈಚಾಚುವಲ್ಲಿ ನಮಗೆ ಆಶ್ರಯ ದೊರಕಿಸುವರೆಂದು ನಂಬಿದ್ದೇವೆ. ಈ ಸಂದರ್ಭದಲ್ಲಿ ಈ ವರ್ಷ ನಮಗೆ ಉತ್ತೇಜನ ಕೊಟ್ಟ ಗೃಹಸ್ಥರಿಗೆ ಕೃತಜ್ಞತೆಯನ್ನು ಪ್ರದರ್ಶಿಸುವೆವು.

ಇತ್ತಲಾಗೆ ನಮ್ಮ ವಾಚಕರಲ್ಲಿ ಕೆಲವರು ಮುಲ್ಕಿ, ಉಡುಪಿ, ಕಾಸರಗೋಡು ಕಾರ್ಕಳ ಮುಂತಾದ ಸ್ಥಳಗಳಲ್ಲಿ ಬಾತಮಿದಾರರಾಗಲಿಕ್ಕೆ ಸಮ್ಮತಿಸಿದ್ದನ್ನು ತಿಳಿಸುವರೆ ಸಂತೋಷಪಡುತ್ತೇವೆ. ಇತರ ಊರಿನವರೂ ಇಂತಹ ವಾತ್ಸಲ್ಯವನ್ನು ತೋರುವವರಿರಬೇಕೆಂದು ನಂಬಿದ್ದೇವೆ. ಪ್ರತಿಫಲಬೇಕೆಂದಿರುವವರು ಪತ್ರದ ಮೆನೇಜರರಿಗೆ ಬರೆದು ತಿಳಿಯಬಹುದು.

ಬರುವ ಜನವರಿಯಿಂದಲೇ ಪತ್ರಿಕೆಯನ್ನು ವಾರಪತ್ರವನ್ನಾಗಿಡಬೇಕೆಂದಿದ್ದೆವು. ಈ ವಿಷಯ ಅನೇಕ ಮಿತ್ರರ ಅಗ್ರಹವೂ ಇತ್ತು. ಆದರೆ ಮುದ್ರಣದ ಅನಾನುಕೂಲತೆಯಿಂದಲೂ ಬೇರೆ ಕೆಲವು ಅಭ್ಯಂತರಗಳಿಂದಲೂ ಇದನ್ನು ಸ್ವಲ್ಪ ತಿಂಗಳುಗಳಿಗೆ ಮುಂದಿಡಬೇಕಾಗಿದೆ. ಚಂದಾದಾರರ ಉತ್ತೇಜನ ದೊರೆತರೆ ಈ ಸಂಕಲ್ಪವನ್ನು ಆದಷ್ಟು ತ್ವರೆಯಲ್ಲಿ ಜ್ಯಾರಿಗೆ ತರುವೆವು.

ಡಿಸೆಂಟ್ರಾಲೈಜೇಶನ್ ಕಮಿಶನ್.

ಈ ಕಮಿಶನಿನವರು ಮದ್ರಾಸಿನಲ್ಲಿಯ ವಿಚಾರಣೆಯನ್ನು ತೀರಿಸಿದರು. ಅಲ್ಲಿಯ ಸಾಕ್ಷಿಗಾರರಿಗೆ ವಿಶಯಗಳ ಪರಾಮರ್ಶೆಗೆ ತಕ್ಕಷ್ಟು ಸಮಯ ದೊರಕಲಿಲ್ಲವೆಂದು ಕಮಿಶನಿನ ಪ್ರೆಸಿಡೆಂಟರೇ ಒಪ್ಪಿರುವರು. ಅದುಹೊರತು ಕಡೆಯಲ್ಲಿ ಕೆಲವರನ್ನು ವಿಚಾರಿಸಲಿಕ್ಕೇನೆ ಅವಕಾಶವಿಲ್ಲದೆ ಅವರ ಬರಹ ಮೂಲಕ ಹೇಳಿಕೆಗಳಲ್ಲೇ ಸಾಕ್ಷ್ಯವನ್ನು ತೀರಿಸಬೇಕಾಯಿತು. ಆದರೂ ವಿಚಾರಶೀಲರಾದ ಕಮಿಶನಿನವರು ತಾವು ಪಡೆದ ವಾಜ್ಮೂಲಗಳಲ್ಲಿ ಗರ್ಭಿತವಾದ ಹಲವು ವಿಷಯಗಳಿಗೆ ಗಮನಕೊಟ್ಟು ಅವುಗಳಿಂದ ಸೂಚಿಸಲ್ಪಟ್ಟ ಏರ್ಪಾಡುಗಳನ್ನು ಪ್ರಜಾಹಿತಕ್ಕಾಗಿ ನೆರವೇರಿಸಿದರೆ ಕಮಿಶನಿನ ಶ್ರಮವು ಸಾರ್ಥಕವಾಗುವದು. ಮೋರ್ಲೆ ಸಾಹೇಬರ ಹೆಸರಿಗೆ ಅಂಟಿದ ಕಳಂಕವು ಮಾಯುವದು. ಈ ಏರ್ಪಾಡುಗಳಲ್ಲಿ ಮುಖ್ಯವಾದ ಒಂದೆರಡನ್ನು ಇಲ್ಲಿ ಚರ್ಚಿಸುವೆವು.

ಎಡ್ವೈಜರಿ ಕೌನ್ಸಿಲ್ ಯಾನೆ ಆಲೋಚನಾ ಸಭೆಗಳು

ಮೋರ್ಲೆ ಸಾಹೇಬರು ಪಾರ್ಲಿಮೆಂಟಿನಲ್ಲಿ ಹೇಳಿದಂತೆ ಮೇಲೆ ಹೇಳಿದ ಕಮಿಶನಿನ ಮುಖ್ಯ ಉದ್ದಿಶ್ಯವು ಜಿಲ್ಲಾಧಿಕಾರಿಯಾದ ಕಲೆಕ್ಟರರಿಗೂ ಜನರಿಗೂ ಪರಸ್ಪರ ಸಂಪರ್ಕ ಬೆಳೆಯುವಂತೆ ಮಾಡಿ ಅವರೊಳಗೆ ಸಹಾನುಭೂತಿಯನ್ನುಂಟುಮಾಡುವದೇ. ಕಲೆಕ್ಟರರಿಗೆ ಅಧಿಕಾರವನ್ನು ಹೆಚ್ಚಿಸಿ ಅಲ್ಪ ವಿಷಯಗಳಲ್ಲಿ ಅವರು ಮೇಲಾಧಿಕಾರಿಗಳ ಸೆಂಕ್ಷನ್ ಪಡೆಯಬೇಕೆಂಬ ಈಗಿನ ಕಾಯಿದೆಯನ್ನು ತಿದ್ದಿದರೆ ಅವರ ಪತ್ರವ್ಯವಹಾರ ಕಾರ್ಯಭಾರವು ಕಡಿಮೆಯಾಗಿ ಪ್ರಜೆಗಳ ಕುಂದು ಕೊರತೆಗಳನ್ನೂ ಆಚಾರ ವಿಚಾರಗಳನ್ನೂ ತಿಳಕೊಳ್ಳಲಿಕ್ಕೆ ಅವಕಾಶದೊರೆಯುವದೆಂದು ಕೆಲವರ ಅಭಿಪ್ರಾಯವಿದೆ. ಈ ಏರ್ಪಾಡಿಗೆ ಒಂದು ಬಲವಾದ ಆಕ್ಷೇಪವೇನಂದರೆ, ಮೇಲಾಧಿಕಾರಿಗಳ ಅಂಜಿಕೆಯಿಲ್ಲದ ಜಿಲ್ಲೆಗಳಲ್ಲಿ ಎಲ್ಲೆಯಿಲ್ಲದ ಮೊಗಲಾಯಿ ದರ್ಬಾರು ಜ್ಯಾರಿಗೆ ಬಂದೀತು. ನಮ್ಮ ಬಿಳೇ ಯಜಮಾನರಿಗೆ ಅವಕಾಶ ದೊರಕಿದರೂ ಕಪ್ಪು ಜನರಲ್ಲಿ ಬೆರಸಿ ಬಳಕೆಯನ್ನು ಘಳಿಸಿ ಅವರಿಗೆ ಮೇಲಿಸಗಬೇಕೆಂಬ ಸಂಕಲ್ಪವನ್ನು ದೊರಕಿಸುವದು ಹ್ಯಾಗೆಂಬದು ಇನ್ನೊಂದು ತೊಂದರೆ. ಕಾರ್ಯಭಾರವು ಎಷ್ಟು ಕಠಿಣವಾದರೂ ಈಗಲೂ ಕೆಲ ಕಲೆಕ್ಟರರು ಪ್ರಜೆಗಳ ಯೋಗಕ್ಷೇಮಗಳನ್ನು ವಿಚಾರಿಸುವವರಿರುವರು. ಆದರೆ ಈಗ ಬೆಳದುಹೋದ ವ್ಯವಹಾರ ಭಾರವನ್ನು ತಗ್ಗಿಸಬೇಕೆಂಬದು ಖರೆ. ಕಲೆಕ್ಟರರು ತಮಗೆ ಸಿಕ್ಕಿದ ಅಧಿಕಾರವನ್ನು ಜನರ ಕ್ಷೇಮಕ್ಕಾಗಿ ಉಪಯೋಗಿಸುವಂತೆ ಏರ್ಪಾಡಾಗಬೇಕೆಂಬದು ಖರೆ. ಅಂದರೆ ಜನರ ಪ್ರತಿನಿಧಿಗಳಿಗೆ ಜಿಲ್ಲೆಯ ಆಡಳಿತೆಯಲ್ಲಿ ಕೈಇರಬೇಕು. ಈ ಉದ್ದಿಶ್ಯವು ಕಮಿಶನಿನವರು ಸೂಚಿಸಿದ ಆಲೋಚನಾ ಸಭೆಗಳ ಮೂಲಕ ನೆರವೇರಬಹುದು. ಜಿಲ್ಲೆಯ ಪ್ರಮುಖರಿರುವ ಈ ಸಭೆಯು ಕಲೆಕ್ಟರರ ಮಾತ್ರಸಭೆಯಾಗಿದ್ದು ಸಭೆಯ ಅನುಮತಿ ಪಡೆದು ವಿಶೇಷ ವಿಷಯಗಳನ್ನು ತೀರ್ಮಾನಿಸಬೇಕು. ಕಲೆಕ್ಟರರ ಮತ್ತು ಸಭೆಯ ಅಭಿಮತಗಳಲ್ಲಿ ಸರಿಬೀಳದಿದ್ದ ಸಂಗತಿಯಲ್ಲಿ ಗವರ್ನಮೆಂಟಿನ ತೀರ್ಪು ಪಡೆಯಬೇಕು. ಹೀಗಾದರೆ ಜನರಿಗೆ ತಮ್ಮ ಜಿಲ್ಲೆಯ ಆಡಳಿತೆಯಲ್ಲಿ ಅಭಿರುಚಿ ಹುಟ್ಟಿ ಸ್ವರಾಜ್ಯದ [illegible] ಕಲಿಯಲಿಕ್ಕೆ ಮಾರ್ಗವಾಗುವದು. ಡಿಸ್ಟ್ರಿಕ್ಟ್ ಬೋರ್ಡುಗಳು ಈಗ ಮಾಡುವ ಕೆಲಸವನ್ನೂ ಇನ್ನೂ ಕೆಲವು ವಿಷಯಗಳನ್ನೂ ಈ ಸಭೆಗೆ ವಹಿಸಿದರೆ ಕಲೆಕ್ಟರರ ಹೊರೆ ಕಡಿಮೆಯಾಗಿ ಪ್ರಜೆಗಳ ಪರಿಚಿತಿ ಹೊಂದಲಿಕ್ಕೆ ಮಾರ್ಗವಾಗುವದು. ಇಂಥಾ ಒಂದು ಸಭೆಯನ್ನು ನಿರ್ಮಿಸಿದರೆ ತನಗೆ ಮನಸ್ಸಿದ್ದರೂ ಮನಸ್ಸಿಲ್ಲದಿದ್ದರೂ ಕಲೆಕ್ಟರರು ಅವರ ಸಂಗಡ ಕೂಡಿ ನಡೆಯಬೇಕಾಗಿ ಆ ಜನರ ಆಚಾರ ವಿಚಾರಗಳನ್ನು ತಿಳಕೊಳ್ಳುವದು ಅವಶ್ಯ ತೋರುವದು. ಆ ಸಭೆಯ ಮೆಂಬರರಲ್ಲಿ ಅರ್ಧ ಪಾಲನ್ನಾದರೂ ಜನರು ಚುನಾಯಿಸಬೇಕು. ತಿಂಗಳಿಗೊಮ್ಮೆಯಾದರೂ ಆ ಸಭೆ ಕೂಡುವಂತೆ ನಿಯಮವಿಡಬೇಕು.

ಮುನ್ಸಿಪಾಲ್ ಕೌನ್ಸಿಲುಗಳೂ ಡಿಸ್ಟ್ರಿಕ್ಟ್ ಬೋರ್ಡುಗಳೂ.

ಈ ಸಂಸ್ಥೆಗಳನ್ನು ಜನರಿಗೆ ಸ್ವರಾಜ್ಯ ಪದ್ಧತಿಯನ್ನು ಕಲಿಸುವ ಉದ್ದಿಶ್ಯ ಏರ್ಪಡಿಸಿದ್ದಾಗಿದೆ. ಆದರೆ ಈಗ ಅವುಗಳಲ್ಲಿ ಸರಕಾರಿ ಉದ್ಯೋಗಸ್ಥರು ಅಂದರೆ ಕಲೆಕ್ಟರವ ಡಿಪ್ಯುಟಿ ಕಲೆಕ್ಟರರ ಭಾರವೇ ಹೆಚ್ಚು. ಪ್ರಜೆಗಳ ಪ್ರತಿನಿಧಿಗಳಿಗೆ ಏನೇನೂ ಸ್ವತಂತ್ರವಿಲ್ಲವೆನ್ನಬಹುದು. ಬೋರ್ಡುಗಳ ಮೆಂಬರರನ್ನು ಜನರ ಪ್ರತಿನಿಧಿಗಳೆಂದು ಹೇಳಕೂಡದು. ಇದಲ್ಲದೆ ಈ ಸಂಸ್ಥೆಗಳಲ್ಲಿ ಗವರ್ನಮೆಂಟಿನವರ ಮೇಲಾಧಿಕಾರವು ಮಿತಿಮೀರಿದ್ದರೂ ಪ್ರಜಾ ಕ್ಷೇಮಕ್ಕೆ ಬೇಕಾದ ಏರ್ಪಾಡುಗಳನ್ನು ಮಾಡಲಿಕ್ಕೆ ತಕ್ಕ ದ್ರವ್ಯ ಸಹಾಯ ಗವರ್ನಮೆಂಟಿನವರಿಂದ ಇವಕ್ಕೆ ದೊರಕುವದು ವಿರಳ. ಸರಕಾರಿ ಉದ್ಯೋಗಸ್ಥರ ಮುಷ್ಟಿಯನ್ನು ಸ್ವಲ್ಪ ಸಡಲಿಸಿ ಡಿಸ್ಟ್ರಿಕ್ಟ್ ಬೋರ್ಡು ಮುನ್ಸಿಪಾಲಿಟಿಗಳಿಗೆ ದ್ರವ್ಯಾನುಕೂಲವನ್ನೂ ಸ್ವಾತಂತ್ರವನ್ನೂ ಕೊಡದಿದ್ದರೆ ಆ ಸಂಸ್ಥೆಗಳ ಉದ್ದಿಶ್ಯವೇ ವ್ಯರ್ಥವಾಗುವದು.

ಗ್ರಾಮ ಪಂಚಾಯಿತರು.

ಕಮಿಶನರಿಗೆ ಪ್ರಾಚೀನಕಾಲದ ಗ್ರಾಮ ಪಂಚಾಯಿತ ಸಭೆಗಳನ್ನು ಪುನರುಜ್ಜೀವಿಸುವ ಆಲೋಚನೆ ಇರುವದು. ಇವಕ್ಕೆ ಸ್ವಲ್ಪಮಟ್ಟಿಗೆ ಸಿವಿಲ್ ಕ್ರಿಮಿನಲ್ ಅಧಿಕಾರಗಳನ್ನೂ ಗ್ರಾಮದ ವಿದ್ಯಾಖಾತೆ, ನೀರಾಶ್ರಯ, ಆರೋಗ್ಯ ರಕ್ಷಣೆ ಮುಂತಾದ್ದರ ಆಡಳಿತೆಯನ್ನೂ ಕೊಡುವ ಸೂಚನೆಯು ಯುಕ್ತತೋರುವದು. ಇದು ಸಹ ಸ್ವರಾಜ್ಯದ ಮೊದಲನೇ ಸೋಪಾನವಾಗುವದು. ಇಂಗ್ಲೀಷರು ನಮಗೆ ತೀರಾ ಸ್ವರಾಜ್ಯ ವಿತ್ತರೆ ಅಂತಃಕಲಹಗಳಾಗಿ ಅನಾಯಕತ್ವವುಂಟಾಗುವದೆಂದು ಹೇಳುವರು. ಗ್ರಾಮ ಪಂಚಾಯತಗಳಿಗೆ ಈ ತರದ ಆಕ್ಷೇಪವಿರಲಾರದು. ಇದಲ್ಲದೆ ಈ ಏರ್ಪಾಡಿನಿಂದ ಜನರಿಗೆ ಡಿಸ್ಟ್ರಿಕ್ಟ್ ಮುನ್ಸಿಫ ಕೋರ್ಟುಗಳಿಗೆ ತಮ್ಮ ಕೆಲಸ ಬಿಟ್ಟು ಹೋಗಿ ಕಾಯುವ ತೊಂದರೆಯೂ ಅನಾವಶ್ಯಕ ಧನವ್ಯಯವೂ ಉಳಿಯುವದು.

ಅಪ್ಪೀಲಿನ ಸ್ವಾತಂತ್ರ

ಕಲೆಕ್ಟರ್ ಯಾ ಡಿಪ್ಯುಟಿ ಕಲೆಕ್ಟರವರ ತೀರ್ಮಾನದಿಂದ ಅನ್ಯಾಯ ಹೊಂದಿದ ರೈತನೂ ಸರಕಾರಿ ನೌಕರನೂ ಈಗಿನ ರೂಲು ಪ್ರಕಾರ ರೆವಿನ್ಯೂ ಬೋರ್ಡು ಕೆಲವು ಸಾರಿ ಗವರ್ನಮೆಂಟು ವರೆಗೆ ಅಪ್ಪೀಲು ಮಾಡಬಹುದು. ಇದರಿಂದ ಕಲೆಕ್ಟರರಿಗೂ ಮೇಲಾಧಿಕಾರಿಗಳಿಗೂ ಕೆಲಸ ವೃಧಾ ಹೆಚ್ಚುವದೆಂದೂ ಇದನ್ನೆಲ್ಲ ತಿದ್ದಿ ಒಂದೇ ಅಪೀಲಿನ ಸ್ವತಂತ್ರ ಕೊಡಬೇಕೆಂದೂ ಕೆಲವು (ಮುಖ್ಯವಾಗಿ ಉದ್ಯೋಗಸ್ಥ) ಸಾಕ್ಷಿಗಾರರು ಕಮಿಶನಿನ ಮುಂದೆ ಹೇಳಿದರು. ಇದು ಯುಕ್ತತೋರುವದಿಲ್ಲ. ಯಾಕಂದರೆ ಡಿ| ಕಲೆಕ್ಟರರು ದುರಾಗ್ರಹದಿಂದ ಯಾ ಅಪೂರ್ಣ ವಿಚಾರದಿಂದ ಒಂದು ಹುಕುಂ ಕೊಡಬಹುದು. ಒಂದು ವೇಳೆ ಶಿಕ್ಷೆ ಕಡಿಮೆ ಮಾಡಿದರೂ ಡಿಪ್ಯುಟಿ ಕಲೆಕ್ಟರರ ಮೇಲೆ ತಮಗಿರುವ ಭರವಸೆಯಿಂದ ತೀರ್ಪು ಮಂಜೂರು ಮಾಡಬಹುದು. ಆದರೆ ಬೋರ್ಡಿನವರು ಈ ರಿಕಾರ್ಡನ್ನೇ ಅನುಸರಿಸಿ ಬಡ ಅಪ್ಪಿಲಾಂಟರಿಗೆ ನೀತಿಮಾಡುವದುಂಟು. ಇದಲ್ಲದೆ ರೈತರೂ ಸರಕಾರದ ಕೆಳ ನೌಕರರೂ ತಮ್ಮ ಅಪ್ಪೀಲು ಸ್ವಾತಂತ್ರ್ಯಕ್ಕೆ ಹೆಚ್ಚು ಬೆಲೆ ಕಟ್ಟಿರುವರು. ಆದ್ದರಿಂದ ಅನಾವಶ್ಯಕ ಪತ್ರವ್ಯವಹಾರಗಳನ್ನು ತೆಗೆದುಹಾಕಿ ಸರಕಾರದವರು ಕಲೆಕ್ಟರರ ಭಾರ ತಗ್ಗಿಸಬೇಕಲ್ಲದೆ ಅಪ್ಪೀಲು ಸ್ವಾತಂತ್ರವನ್ನು ಮುಟ್ಟಬಾರದು.

ಸ್ವದೇಶಿ ಭಾವದ ಅಭಿವೃದ್ಧಿ.

ಸ್ವದೇಶಿ ಭಾವವು ಎರಡು ವರುಷಗಳಿಂದಿತ್ತಲಾಗೆ ಪ್ರಬಲಗೊಂಡಿದ್ದೆಂದು ನಮ್ಮ ವಾಚಕರಿಗೆ ಗೊತ್ತಿರುವದಷ್ಟೇ. ಇದರ ಮುಂಚೆಯೂ ಈ ಶಬ್ದವೂ ಅದರಿಂದ ಸೂಚಿತವಾದ ಭಾವನೆಯೂ ಇದ್ದವು. ಆದರೆ ಇದು ಸ್ವಲ್ಪ ಕಡೆಗಳಲ್ಲಿ ಮಾತ್ರ

ಇತ್ತು. ಪೂನೆಯಲ್ಲಿ ಈ ಭಾವನೆಯು ಮೊದಲನೆಯೇ ನೆಲೆಗೊಂಡಿತ್ತು, ಮತ್ತು ಪೂನೆಯವರನ್ನು ಅನುಸರಿಸುವ ಮಹಾರಾಷ್ಟ್ರದ ಪ್ರಾಂತ್ಯಗಳಲ್ಲಿಯೂ ಸ್ವಷ್ಟಮಟ್ಟಿಗೆ ಇತ್ತು. ತಮ್ಮ ದೇಶವನ್ನು ಪ್ರತಿ ರೀತಿಯಲ್ಲಿ ಅಭಿವೃದ್ಧಿಸುವದಕ್ಕೆ ನೋಡುವ ಆರ್ಯ ಸಮಾಜದವರು ಸಹ ಸ್ವದೇಶಿ ವಸ್ತುಗಳನ್ನೇ ಉಪಯೋಗಿಸಬೇಕೆಂದು ಬೋಧಿಸುತ್ತಿದ್ದರು. ಆದರೆ ಈಗ ಮುಖ್ಯಸ್ಥಾನವಾಗಿ ಪ್ರಖ್ಯಾತಿಗೊಂಡ ಬಂಗಾಳದಲ್ಲಿ, ಈ ಸ್ವದೇಶಿ ಭಾವವು ಎಲ್ಲಾ ಪ್ರಾಂತ್ಯಗಳಲ್ಲಿ ಇರುವದಕ್ಕಿಂತ ಕಡಿಮೆ ಇತ್ತು. ಬಂಗಾಳದ ಜನರು ತೆಗೆದುಕೊಳ್ಳುವಷ್ಟು ಅನ್ಯ ದೇಶದ ವ್ಯಾಪಾರ ಯಾವ ಪ್ರಾಂತ್ಯದಲ್ಲಿಯೂ ತೆಗೆದುಕೊಳ್ಳುತ್ತಿರಲಿಲ್ಲ. ಬಂಗಾಳಿ ಹೆಂಗಸರು ಉಡುವ ಶೀರೆಗಳು ಸಹ ವಿಲಾಯತಿಯಿಂದ ಬರುತ್ತಿದ್ದವು. ಇದು ಮಾತ್ರವಲ್ಲ, ಅವರು ಆಹಾರಕ್ಕೆ ಉಪಯೋಗಿಸುವ ಉಪ್ಪು ಸಹ ಬಿಳೀ ಉಪ್ಪು. ಆದರೆ 1905ನೇ ಅಕ್ಟೋಬರದಲ್ಲಿ ಬಂಗಾಳವನ್ನು ವಿಭಾಗ ಮಾಡಿ ಬೇರೆ ಬೇರೆ ಲೆಫ್ಟಿನೆಂಟ್ ಗವರ್ನರರಿಗೆ ಒಪ್ಪಿಸಿದರು ಮಾಡಿದರು. ಈ ವಿಭಾಗದಿಂದ ತಮ್ಮ ಜನಾಂಗದ ಒಕ್ಕಟ್ಟುತನಕ್ಕೆ ಭಂಗ ಬರುವದರಿಂದ, ವಿಭಾಗ ಮಾಡಕೂಡದು ಎಂದು ಬಂಗಾಳದವರು ಎಷ್ಟು ಹೇಳಿದ್ದಾಗ್ಯೂ, ಸರಕಾರದವರು ಕೇಳದೆ ವಿಭಾಗ ಮಾಡಲು, ಇವರು ತಿರಿಗಿ ಬಂಗಾಳವನ್ನು ಒಂದಾಗಿ ಮಾಡುವ ವರೆಗೆ ತಾವು ಇಂಗ್ಲೀಷು ವ್ಯಾಪಾರ ತೆಗೆದುಕೊಳ್ಳಬಾರದು ಎಂದು ನಿಶ್ಚಯಿಸಿದರು. ಇಂಗ್ಲೀಷ್ ವ್ಯಾಪಾರವೇ ಹೆಚ್ಚಾಗಿ ಹಿಂದೂ ದೇಶದ ಒಳಗೆ ಬರುವದು. ಆದರೆ ಹೀಗ ಇಂಗ್ಲೀಷ್ ವ್ಯಾಪಾರವನ್ನು ಬಹಿಷ್ಕಾರ ಮಾಡಿ ಅನ್ಯ ದೇಶಗಳ ವ್ಯಾಪಾರ ತೆಗೆದುಕೊಳ್ಳಬೇಕೆಂದು ಬಂಗಾಳಿಗಳ ಎಣಿಸಲಿಲ್ಲ. ಹೀಗೆ ಮಾಡಿದ್ದರೆ, ಬಂಗಾಳದವರು ಸರಕಾರದವರ ಹತ್ತರ ದೋಷವಾಗಿದ್ದೇ ಇವರ ಫಲವಾಗುತ್ತಿತ್ತು, ಹೊರ್ತು ಹಿಂದುಸ್ಥಾನಕ್ಕೆ ಏನೂ ಪ್ರಯೋಜನ ಶಿಕ್ಕುತ್ತಿರಲಿಲ್ಲ. ಆದರೆ ಬಂಗಾಳಿಗಳು ಇಂಗ್ಲಿಷ್ ವ್ಯಾಪಾರ ಮಾತ್ರವಲ್ಲ ಬೇರೆ ಎಲ್ಲಾ ಅನ್ಯ ದೇಶಗಳ ವ್ಯಾಪಾರ ಬಹಿಷ್ಕಾರ ಮಾಡಬೇಕು, ಮತ್ತು ಇವರ ಬದಲಿಗೆ ಹಿಂದೂ ದೇಶದ ವ್ಯಾಪಾರವನ್ನೇ ತೆಗೆದುಕೊಳ್ಳಬೇಕೆಂದಾಗಿ ನಿರ್ಣಯಿಸಿದ್ದರಿಂದ, ಬಹಿಷ್ಕಾರವೂ (ಬೋಯಿಕೊಟ್) ಸ್ವದೇಶಿ ಭಾವವೂ, ಹೆಸರಿನಲ್ಲಿ ಬೇರೆಯಾದರೂ, ಅವುಗಳು ಫಲದಲ್ಲಿ ಒಂದೇ ಆದವು.

ಕರ್ಜನ್ ದೊರೆಗಳು ಹಿಂದೂ ದೇಶದಲ್ಲಿ ಒಳ್ಳೇ ಶಿಲ್ಪಾಲಯಗಳಿಟ್ಟು ಹಿಂದುಸ್ಥಾನದ ಜನರಿಗೂ ವಿಲಾಯತಿ ಜನರಿಗೂ ಇಷ್ಟ ವಸ್ತು ಜ್ಞಾನವನ್ನೆಲ್ಲಾ ಕಲಿಸಬೇಕೆಂಬ ನಮ್ಮ ಪ್ರಜಾಗ್ರೇಸರರ ಪ್ರಾರ್ಥನೆಗೆ ಏನೂ ಕಿವಿಗೊಡಲಿಲ್ಲ. ವಿಕ್ಟೋರಿಯಾ ಚಕ್ರವರ್ತಿನಿಯವರು ಮೃತಪಟ್ಟಾಗ ಸುಮಾರು 40 ಲಕ್ಷ ರೂಪಾಯಿ ಅವರ ಹೆಸರನ್ನು ಸ್ಮರಿಸಲಿಕ್ಕೆ ಏನಾದರೂ ಕಟ್ಟಬೇಕೆಂದು ಕೊಡಲಾಯಿತು. ಇದನ್ನು ಜನರ ಪ್ರಯೋಜನಾರ್ಥವಾದ ಶಿಲ್ಪಾಲಯಗಳನ್ನು ಕಟ್ಟಲಿಕ್ಕೆ ಉಪಯೋಗಿಸಬೇಕೆಂದು, ಜನರು ಎಷ್ಟು ಪ್ರಾರ್ಥಿಸಿದರೂ, ಈ ಕರ್ಜನ್ ದೊರೆಗಳು ಕೇಳದೆ ಈ ಎಲ್ಲಾ ಹಣದಿಂದ ಚಂದ್ರಕಾಂತ ಶಿಲೆಯ ಚಲೋ ಒಂದು ಕಟ್ಟೋಣ ನಿರ್ಮಿಸಬೇಕು ಹೊರ್ತು ಇದರಿಂದ ಬೇರೆ ಏನಾದರೂ ಮಾಡಕೂಡದು ಎಂದು ಅವರ ಆಜ್ಞೆಯಾಯಿತು. ಆದರೆ, ಇಂಗ್ಲೀಷ್ ವರ್ತಕರು ಇಲ್ಲಿ ಆದಷ್ಟು ಬರಬೇಕು, ಈ ದೇಶದ ಜನರಿಗೆ ಇಲ್ಲಿ ಇರುವ ಗಣಿಗಳನ್ನು ಅಗೆಯಲಿಕ್ಕಾಗಲೀ, ಬೇರೆ ಕೈಗಾರಿಕೆಗಳನ್ನು ಸಾಧಿಸಲಿಕ್ಕಾಗಲೀ ಗೊತ್ತಿಲ್ಲ. ಆದ್ದರಿಂದ ಯುರೋಪಿಯರೇ ಇವೆಲ್ಲ ಸ್ಥಾಪಿಸಿ, ಈ ದೇಶದ ಬಡ ಕೂಲಿಗಳಿಗೆ ಉದ್ಯೋಗ ಶಿಕ್ಕಿ ಕ್ಷಾಮ ದೂರವಾದೀತು, ಎಂದು ಹೇಳಿ, ಇಂಗ್ಲಿಷ್ ಬಂಡವಾಳವನ್ನು ಇಲ್ಲಿಗೆ ಈ ಕರ್ಜನ್ ಪ್ರಭುಗಳು ಆಮಂತ್ರಿಸುತ್ತಿದ್ದರು. ಮತ್ತು ಹಿಂದುಸ್ಥಾನದ ಜನರಿಗೆ ದೊಡ್ಡ ಹುದ್ದೆಗಳನ್ನು ಕೊಡಬೇಕೆಂಬ ಪ್ರಾರ್ಥನೆಯನ್ನು ಅವರು ತಿರಸ್ಕಾರ ಮಾಡಿ, ಈಗ ಜಮೀನು ಕಂದಾಯವನ್ನು ಅಗ್ಯಾಗ್ಯೆ ಹೆಚ್ಚು ಮಾಡುವ ರೀತಿಯಲ್ಲಿ, ಏನಾದರೂ ಬದಲಾವಣೆ ಮಾಡಿ, ಬೇರೆ ಪ್ರಾಂತ್ಯದಲ್ಲಿ ಇರುವ ಕಂದಾಯವನ್ನು ಸ್ವಲ್ಪಮಟ್ಟಿಗಾದರೂ, ಬಂಗಾಳದಲ್ಲಿ ಇರತಕ್ಕ ಖಾಯಂ ಕಂದಾಯದ ಹಾಗೆ ಮಾಡಬೇಕು ಎಂಬದಕ್ಕೆ ಸಹ ಅವರು ಕೇಳಲಿಲ್ಲ. ಇದೆಲ್ಲಾ ನೋಡಿ, ಹಿಂದುಸ್ಥಾನದ ಜನರಲ್ಲಿ ನೆಲೆಗೊಂಡ ಭಾವವು ಏನೆಂದರೆ, ಅನ್ಯ ದೇಶದ ಸರಕಾರದವರಿಂದ ನಮ್ಮ ಕಷ್ಟಗಳು ಪರಿಹಾರವಾಗುವವೆಂದು ನಂಬುವದು ಅಸಾಧ್ಯ. ನಾವೇ ನಮ್ಮ ಸ್ವಂತ ಶ್ರಮದಿಂದ, ನಮ್ಮ ಸ್ಥಿತಿಯನ್ನು ಅಭಿವೃದ್ಧಿಸಲಿಕ್ಕೆ ನೋಡಬೇಕು! ಇಂಥಾ ಭಾವವು ಜನರಲ್ಲಿ ಚನ್ನಾಗಿ ನೆಲೆಗೊಂಡಾಗ ಕರ್ಜನರು ಬಂಗಾಳವನ್ನು ವಿಭಾಗಮಾಡಿ, ಅಲ್ಲಿಂದ ಸ್ವದೇಶಿಯ ಆರ್ಭಟ ಏರಲು, ಕನ್ಯಾ ಕುಮಾರಿಯಿಂದ ಹಿಮಾಚಲದವರೆಗೆ, ಸಿಂಧೂ ತೀರದಿಂದ, ಬ್ರಹ್ಮಪುತ್ರದ ಧಡದವರೆಗೆ, ಎಲ್ಲಾ ದೇಶಾಭಿಮಾನಿಗಳು ಸ್ವದೇಶಿಯನ್ನು ತಮ್ಮ ನಂಬಿಕೆಯಲ್ಲಿಯೂ ನಡತೆಯಲ್ಲಿಯೂ ಅಂಗೀಕರಿಸಿದರು.

ಹೀಗೆ ಸ್ವದೇಶಿ ಮತವನ್ನು ಸ್ಥಾಪಿಸಿದವರ ಅಭಿಪ್ರಾಯ, ಮತ್ತು [illegible] ಹಿಂದೂ ದೇಶದಲ್ಲಿ ಕೈಗಾರಿಕೆಗಳು ಅಭಿವೃದ್ಧಿಗೆ ಬರಬೇಕೆಂಬದೇ. ಹಿಂದೂ ಧರ್ಮಕ್ಕೆ ಯಾ ಹಿಂದೂ ಪದ್ಧತಿಗೆ ಮತ್ತು ಸ್ವದೇಶಿ ಭಾವಕ್ಕೆ ಮೂಲಸಂಬಂಧವಿಲ್ಲ. ಸ್ವದೇಶಿಯ ವಿಶಯ ಹೆಚ್ಚು ಆತುರವುಳ್ಳ ಆರ್ಯಸಮಾಜದವರು, ಜಾತಿಭೇದ ಮುಂತಾದವನ್ನು ತಿರಸ್ಕಾರವಮಾಡುತ್ತಾರೆ. ಆದರೆ ಪುರಾತನ ಪದ್ಧತಿಗಳ ವಿಷಯವೇ ಹೆಚ್ಚು ಆತುರವುಳ್ಳ ಅನೇಕರು ಸ್ವದೇಶಿ ಮತವನ್ನು ಅವಲಂಬಿಸಿದ್ದಾರೆ. ಇದು ಯಾಕಂದರೆ ಅನ್ಯ ದೇಶಗಳಲ್ಲಿ ವಸ್ತುಗಳನ್ನು ಯಾವ ರೀತಿಯಲ್ಲಿ ತಯಾರಿಸುತ್ತಾರೆಂಬವನ್ನು ನಾವು ತಿಳಿಯುವದಕ್ಕೆ ಆಗುವದಿಲ್ಲ. ಹಿಂದೂ ದೇಶದಲ್ಲಿ ಆಗುವ ವಸ್ತುಗಳಾದರೂ, ಅವನ್ನು ತಯಾರಿಸುವ ರೀತಿಯನ್ನು ನಾವೇ ಕಣ್ಣಿನಿಂದ ನೋಡಬಹುದು, ಅಥವಾ ನಮಗೆ ನಂಬಿಕೆಯುಳ್ಳ ಸ್ನೇಹಿತರನ್ನು ಕಳುಹಿಸ ಬಹುದು. ಮತ್ತು ಯುರೋಪಿಯನ್ ಮರ್ಜಿಯನ್ನು ಅನುಸರಿಸುವವರಿಗೆ ಬೇಕಾದ ಎಲ್ಲಾ ವಸ್ತುಗಳು ಹಿಂದೂ ದೇಶದಲ್ಲಿ ತಯ್ಯಾರಿಸಲ್ಪಡುವದಿಲ್ಲ. ಆದ್ದರಿಂದ ಸ್ವದೇಶಿ ಮತವನ್ನು ಅಂಗೀಕರಿಸಿದವರು ತಮ್ಮ ದೇಶ ಪದ್ಧತಿಗಳನ್ನು ಅನುಸರಿಸಬೇಕು.

ನಮ್ಮ ಕೈಗಾರಿಕೆಗಳು ಅಭಿವೃದ್ಧಿಯಾಗಬೇಕಾದರೆ, ಸ್ವದೇಶಿ ವಸ್ತುಗಳನ್ನು ಕೊಂಡುಕೊಳ್ಳುವ ಒಂದು ರೀತಿಯಲ್ಲಿಯೇ ಆಗುವದಿಲ್ಲ. ಸಾಮಗ್ರಿಗಳನ್ನು ಸುಲಭ ರೀತಿಯಲ್ಲಿ ತಯ್ಯಾರಿಸುವ ನವೀನ ಮಾದರಿಗಳನ್ನು ಕಲಿತುಕೊಂಡು ಬರಲಿಕ್ಕೆ ನಮ್ಮ ಯೌವನಸ್ಥರನ್ನು ಅನ್ಯ ದೇಶಗಳಿಗೆ ಕಳಹಿಸಬೇಕು. ಮತ್ತು ಇವರು ಹೀಗೆ ಕಲಿತುಕೊಂಡು ಬಂದ ಮೇಲೆ ಅವರಿಗೆ ಯಂತ್ರಗಳನ್ನು ಸ್ಥಾಪಿಸುವರೆ ತಕ್ಕದಾದ ಭಂಡವಾಳವನ್ನು ಒಟ್ಟುಗೂಡಿಸುವರೆ ಕಂಪೆನಿಗಳನ್ನು ಏರ್ಪಡಿಸಬೇಕು. ಈಗ ಹುಟ್ಟುತ್ತಿರುವ ಸ್ವದೇಶಿ ಚಳವಳಿಯಿಂದ ಇಂಥಾ ಕೈಗಾರಿಕೆಯ ಕಂಪೆನಿಗಳಿಗೆ ಬಾಲ್ಯಾವಸ್ಥೆಯಲ್ಲಿ ತಕ್ಕ ಆಧಾರವೂ ಉತ್ತೇಜನವೂ ಶಿಕ್ಕಿ, ಈ ಕೈಗಾರಿಕೆಯ ಕಂಪೆನಿಗಳು ಚನ್ನಾಗಿ ಬಲಗೊಂಡು ಪ್ರಾಯಕ್ಕೆ ಬಂದ ಮೇಲೆ ಸ್ವದೇಶಿ ಭಾವದ ಸಹಾಯವಿಲ್ಲದೆ, ಅನ್ಯದೇಶದ ಕಂಪೆನಿಗಳ ಹತ್ತರ ಕಾದಾಡುವದಕ್ಕೆ ಸಿದ್ಧವಾಗುವವು. ಸ್ವಲ್ಪ ವರುಷಗಳ ಮುಂಚೆ ಹಿಂದೂ ದೇಶದ ಜನರು ಸರಕಾರಿ ಕೆಲಸವೆಂದರೆ ಅತ್ಯಾತುರ ಪಡುತ್ತಿದ್ದರು. ಈಗ ಲಾರ್ಡ ಮಾರ್ಲೀ, ಸರಕಾರಿ ಕೆಲಸದಲ್ಲಿದ್ದ ಪಕ್ಷದಲ್ಲಿ ತಮ್ಮ ಮನಸ್ಸಾಕ್ಷಿಗೆ ವಿರೋಧವಾದ ಕೆಲಸಗಳನ್ನು ಮಾಡಬೇಕಾದ್ದರಿಂದ, ಸರಕಾರಿ ಕೆಲಸಕ್ಕೆ ಸೇರಬಾರದೆಂದಲೂ, ತಮ್ಮ ಜೀವಕಾಲದಲ್ಲಿ ತಮ್ಮಿಂದ ಆದಷ್ಟು ಸಾಹಸ ಮಾಡಬೇಕೆಂತಲೂ, ಅನೇಕ ಯೌವನಸ್ಥರ ಮನಸ್ಸಿನಲ್ಲಿದೆ. ಸರಕಾರಕ್ಕೆ ಆಶ್ರಿತವಾದ ಕಲ್ಕತ್ತಾ ಯುನಿವರ್ಸಿಟಿಗೆ ಸೇರಿದ ಬಂಗಾಳದ ವಿದ್ಯಾಶಾಲೆಗಳಲ್ಲಿ ಈಗ 3,000 ವಿದ್ಯಾರ್ಥಿಗಳು ಇದ್ದಾರೆ. ಕೈಗಾರಿಕೆಗಳಿಗೆ ಸಮ್ಮಂದವಾದ ಶಾಸ್ತ್ರಗಳನ್ನು ಕಲಿತು ಬರುವದಕ್ಕೆ ಅನ್ಯ ದೇಶಗಳಿಗೆ ಬಂಗಾಳದಿಂದ ಯೌವನಸ್ಥರಿಗೆ ಕಳಹಿಸುವದಕ್ಕೆ ಮೂರು ವರುಷಗಳ ಹಿಂದೆ ಕಲ್ಕತ್ತೆಯಲ್ಲಿ ಒಂದು ಸಂಘವನ್ನು ಏರ್ಪಡಿಸಿದ್ದಾರೆ. ಈ ಸಂಘದವರು 1905ರಲ್ಲಿ 18 ವಿದ್ಯಾರ್ಥಿಗಳನ್ನು ವಿಲಾಯತಿ ಅಮೇರಿಕ ಮೊದಲಾದ ದೇಶಗಳಿಗೆ ಕಳುಹಿಸಿದರು. 1906ರಲ್ಲಿ 44 ಯೌವನಸ್ಥರನ್ನು ಕಳುಹಿಸಿದರು. ಇವರಲ್ಲಿ ಅನೇಕ ಜನರಿಗೆ ಸಂಘದವರು ದಾರಿ ಖರ್ಚು ಕೊಟ್ಟದ್ದು ಹೊರತು, ಅವರ ಬೇರೆ ಖರ್ಚನ್ನೆಲ್ಲಾ ಅವರೇ ನೋಡುತ್ತಾರೆ. ಕೆಲವು ಯೌವನಸ್ಥರು ದಾರಿ ಖರ್ಚನ್ನು ಸಹಾ ತೆಗೆದುಕೊಳ್ಳಲಿಲ್ಲ. ಹೀಗೆ ಅನ್ಯ ದೇಶಗಳಿಗೆ ಹೋದವರಲ್ಲಿ ಮಹಾ ಶ್ರೀಮಂತರ ಮಕ್ಕಳು ಕೆಲವು ಮಂದಿ ಇದ್ದಾರೆ. 1906 ಕಳುಹಿಸಿದ ಯೌವನಸ್ಥರ ಪೈಕಿ 5 ಮಂದಿ ಕೋಟ್ಯಾಧಿಪತಿಗಳ ಮಕ್ಕಳಿರುವರು.

ಬಂಗಾಳದಲ್ಲಿ ಸ್ವದೇಶಿ ಚಳವಳವು ಬಹಳ ಕಡಿಮೆಯಾಗಿದೆ, ವಿಲಾಯತಿ ಸಾಮಗ್ರಿಗಳು ಈಗ ಮುಂಚಿನ ವರುಷಕ್ಕಿಂತ ಬಹಳ ಹೆಚ್ಚು ಆಮದು ಆಗುತ್ತವೆ, ಎಂದು ನಿದರ್ಶಿಸುವದಕ್ಕೆ ಇಂಗ್ಲೀಷು ಪತ್ರಕರ್ತರು ಕಸ್ಟಮ್ಸ್ ಆಫೀಸಿನ ಲೆಖ್ಖವನ್ನು ತೋರಿಸುತ್ತಾರೆ. ಇವರು ತೋರಿಸಿದ ಹಾಗೆ ನಿಜವಾಗಿ ಹೆಚ್ಚು ವಿಲಾಯತಿ ವಸ್ತುಗಳು ಆಮದು ಆಗುತ್ತವೋ ಎಂಬದಾಗಿ ಹೇಳುವದಕ್ಕೆ ಆಗುವದಿಲ್ಲ. ಕಲ್ಕತ್ತೆಯ ವಿಲಾಯತಿ ಪೇಪರುಗಳಲ್ಲಿ ಮುಖ್ಯವಾದ ಸ್ಟೇಟ್ಸ್‌ಮೇನ್ ಎಂಬ ಪೇಪರು ಹೇಳುವದೇನಂದರೆ: 'ಕಲ್ಕತ್ತೆಯ ಒಂದು ಪಟ್ಟಣದಲ್ಲಿಯೇ 6 ಕೋಟಿ ರೂಪಾಯಿ ಬಾಳುವ ವಿಲಾಯತಿ ಬಟ್ಟೆ ಯಾರೂ ಕೊಂಡುಕೊಳ್ಳದೆ ಸುಮ್ಮನೆ ಬಿದ್ದಿರುತ್ತದೆ. 'ಉಪ್ಪು ಸಹ ಹಾಗೆಯೇ ಯಾರೂ ಕ್ರಯ ಮಾಡುವವರಿಲ್ಲದೆ ಸುಮ್ಮನೆ ದಾಸ್ತಾನವಾಗಿರುತ್ತದೆ. ಇದು ಹೀಗಿರಲು, ನಮ್ಮ ಸ್ವದೇಶಿ ಕಾರಖಾನೆಗಳು [illegible] ದಿನಾ [illegible] ಒಂದೇ ದಿವಸ ಸುಮಾರು 90 ಲಕ್ಷ ರೂಪಾಯಿ ಬಾಳುವ ಬಟ್ಟೆಯನ್ನು [illegible] ಯಾರು ಪಟ್ಟಣದ ಬಂದೇ [illegible] ತೆಗೆದುಕೊಳ್ಳುವ [illegible]

...ಮಾಡಿದ್ದಾರಂತೆ. ಬಂಗಾಳದಲ್ಲಿ ಅನ್ನವಿಲ್ಲದೆ ಸಾಯುವ ನೇಯಿಗರು ಈಗ ...ನಿಗೆ 25 ರೂಪಾಯಿ, ಸಂಪಾದಿಸುತ್ತಾರೆಂದು ಇಂಗ್ಲೀಷ್ ಆಫೀಸರರು ತಮ್ಮ ...ಗಳಲ್ಲಿ ಹೇಳಿದ್ದಾರೆ. ಹೀಗೆ ಬಡವರಿಗೆ ಅನ್ನವನ್ನೂ ದೇಶಕ್ಕೆ ಸಮೃದ್ಧಿಯನ್ನೂ ಈಯುವ ಸ್ವದೇಶೀ ಭಾವವು ದಿನೇ ದಿನೇ ಹೆಚ್ಚು ಬರಲಿ!

ಅನಾಥ ಬಾಲಿಕಾಶ್ರಮ.

ಪ್ರೊಫೆಸರ್ ಕಾರ್ವೆಯವರು ಪುಣೆಯಲ್ಲಿ ಸ್ಥಾಪಿಸಿದ ಈ ಬಾಲಿಕಾಶ್ರಮದ ಉದ್ದೇಶ್ಯವನ್ನೂ ಆಶ್ರಮದ ಹುಡುಗಿಯರ ದಿನಕ್ರಮ ಮೊದಲಾದ್ದನ್ನೂ ವಿವರಿಸಿ ಕಳೆದ 1ನೇ ತಾರೀಕಿನಲ್ಲಿ ಶ್ರೀಮತಿ ಪಾರ್ವತಿ ಬಾಯಿಯವರು ಭುವನೇಂದ್ರ ಸಭಾಸದನದಲ್ಲಿ ಒಂದು ಹೃದಯಾಂಗಮವಾದ ಉಪನ್ಯಾಸ ಕೊಟ್ಟರು. ಸ್ತ್ರೀಯರು ಶಾಸ್ತ್ರದಲ್ಲಿ ಪುರುಷರ ಅರ್ಧಾಂಗಿಯರೆಂದು ಕರೆಯಲ್ಪಟ್ಟರು. ಆ ಅರ್ಧಾಂಗಕ್ಕೆ ತಕ್ಕ ಶಿಕ್ಷಣವೂ ಆರೈಕೆಯೂ ಇಲ್ಲದ್ದರಿಂದ ಕ್ಷೀಣವಾಗಿ ಸಮಾಜಕ್ಕೆ ಪಕ್ಷವಾತ ಪ್ರಾಪ್ತವಾಗಿದೆಂದು ಶ್ರೀಮತಿಯವರು ಹೇಳಿದ ಮಾತು ಯಥಾರ್ಥವೇ. ತರುಣ ಪ್ರಾಯದಲ್ಲಿ ಹಲವು ಮಕ್ಕಳ ಮಾತೆಯರಾಗಿ ಗಂಡರನ್ನು ಕಳಕೊಂಡ ಅನಾಥ ವಿಧವೆಯರು ನವ ಜನಕ್ಕೆ ವ್ಯಣಪಾಯರಾಗಿರುವರು. ಈ ಶೋಕ ಹೇತುವನ್ನು ಪರಿಹರಿಸಿ ದೇಶಕ್ಕೆ ಇವರಿಂದ ಹಿತವಾಗುವಂತೆ ಒಂದು ಬಾಲಿಕಾಶ್ರಮವನ್ನು ಸ್ಥಾಪಿಸಿ ಕಾರ್ವೆಯವರು ಈ ಅನಾಥೆಯರಿಗೆ ಸೂಲಗಿತ್ತಿಯ ಕೆಲಸ, ಕಸೂತಿ, ದಾದಿಯ ವೃತ್ತಿ, ಗೃಹಶಾಸ್ತ್ರ, ಪುರಾಣನೀತಿ ಕಥಾಸ ಮೊದಲಾದ್ದನ್ನು ಕಲಿಸುವ ಏರ್ಪಾಡು ಮಾಡುತ್ತಾರೆ. ಈ ಆಶ್ರಮದಲ್ಲಿ ಊಟ ಉಪಚಾರಗಳಲ್ಲಿ ಜಾತಿಭೇದವನ್ನು ಪಾಲಿಸುವರು. ವಿಧವೆಯರಿಗೆ ವಿವಾಹ ಮಾಡುವದು ಇವರ ಉದ್ದಿಶ್ಯವಲ್ಲ. ಇಂಥಾ ಸಮಾಜ ಸಂಸ್ಕಾರಕ್ಕೆ ಯಾವ ಪಕ್ಷವೂ ಆಕ್ಷೇಪ ತೆಗೆಯಲಾರದು. ಸಭಾ ಮಂದಿರದಲ್ಲಿ ಕೂಡಿದ ಮಹಾಜನರಲ್ಲಿ ಕೆಲವರು ವಾರ್ಷಿಕ ಚಂದಾಹಣವನ್ನೂ ಕೆಲವರು ಒಂದೇ ಸಹಾಯ ದ್ರವ್ಯವನ್ನೂ ಇನ್ನೂ ಕೆಲವರು ಎರಡನ್ನೂ ಬಾಲಿಕಾಶ್ರಮದ ಪರವಾಗಿ ದಯಪಾಲಿಸಿದರು.

ಮುಸಲೀಹಟ್ಣಣದ ಭಾವಿ ನೇಕಾರ ಶಾಲೆ.

ಯಾವದೊಂದು ಜನಾಂಗದ ಗೌರವಕ್ಕೆ ಅದರ ಚರಿತ್ರೆ ವಾಙ್ಮಯ, ವಿಜ್ಞಾನ ಮೊದಲಾದ ನಾಗರಿಕತೆಯ ಲಕ್ಷಣಗಳೇ ಕಾರಣಗಳು. ಸಾಮಗಳಲ್ಲಿಯೂ ಸಮರದಲ್ಲಿಯೂ ನಮ್ಮ ಪೂರ್ವಜರು ಹೊಂದಿದ ಖ್ಯಾತಿ, ವ್ಯಾಕರಣ ಕಾವ್ಯ, ಶಾಸ್ತ್ರ ದರ್ಶನಗಳಲ್ಲಿ ಅವರು ತೋರಿದ ನೈಪುಣ್ಯ, ಐಹಿಕ ಜೀವನವು ಪಾರಮಾರ್ಥಿಕ ಸುಖಕ್ಕೆ ದಾರಿಯಾಗುವಂತೆ ಹಿರಿಯರು ವಿರಚಿಸಿದ ತತ್ವಮಾರ್ಗ, ಇವೇ ನಮ್ಮ ಆರ್ಯ ವಿಜಯಕ್ಕೂ ಅಭಿಮಾನಕ್ಕೂ ಉತ್ತೇಜನ ಕೊಡುವವು. ನಮ್ಮಲ್ಲಿ ರಾಷ್ಟ್ರೀಯ ಭಾವನೆಯನ್ನು ವೃದ್ಧಿಸುವವು ಇವೇ. ಆದರೆ ನವೀನ ವಿದ್ಯಾಭ್ಯಾಸಕ್ರಮ ಮತ್ತು ನವನಾಗರಿಕತೆಯಿಂದ ಒದಗುವ ಸ್ಥಿತಿಗೆ ನಮ್ಮ ರಾಷ್ಟ್ರೀಯ ಗೌರವಕ್ಕೆ ಹಾನಿ ಬಂತು. ರಾಮ, ಕೃಷ್ಣ, ಭೀಷ್ಮ, ಮೊದಲಾದವರು ಇರಲೇ ಇಲ್ಲವೆಂದೂ ಪುರಾಣಗಳು ಕಟ್ಟುಕಥೆಗಳೆಂದೂ ನಾವು ಕಲಿತೆವು. ಇಂಗ್ಲೀಷರು 300 ಜನರಿದ್ದರೂ 10000 ಸಿಪಾಯಿಗಳು ಅವರೆದುರು ನಿಲ್ಲಲಾರದೆ ಹೋದರೆಂದು ಚರಿತ್ರೆಗಳು ಹೇಳುವವು. ಸಂಸ್ಕೃತ ಭಾಷೆಯು ಕಲಿಯಲಿಕ್ಕೆ ಕಠಿಣವೂ ಕಲಿತರೂ ವ್ಯವಹಾರದಲ್ಲಿ ನಿಷ್ಪ್ರಯೋಜಕವೂ ಆಗಿದ್ದು ನಮ್ಮ ಹಿರಿಯರು ಅರ್ಜಿಸಿದ ಜ್ಞಾನವು ನಮಗೆ ಹೂಳಿಟ್ಟ ನಿಧಿಯಂತಿದೆ.

ಸ್ವದೇಶಿಯ ತೌರಮನೆಯಾದ ಬಂಗಾಳದಲ್ಲಿ ರಾಷ್ಟ್ರೀಯ ಭಾವದಿಂದ ಪ್ರೇರಿತರಾದ ಸರ್ ಗುರುದಾಸ ಬೆನರ್ಜಿ ಮೊದಲಾದ ಹಲವು ಮಹಾನುಭಾವರು ಈ ಶೋಚನೀಯವಾದ ಸ್ಥಿತಿಯನ್ನು ಪರಿಹಾರಗಲಿಕ್ಕೆ ರಾಷ್ಟ್ರೀಯ ವಿದ್ಯಾಭ್ಯಾಸವೇ ಮಾರ್ಗವೆಂದು ತಿಳಿದು ಆ ವಿದ್ಯಾಭ್ಯಾಸ ಕ್ರಮವನ್ನು ಏರ್ಪಡಿಸಿದರು. ಈ ಉದ್ದಿಶ್ಯ ಯುನಿವರ್ಸಿಟಿ ನಿಯಮಗಳನ್ನು ತ್ಯಜಿಸಿ ತಮ್ಮ ಸ್ವಂತ ಆದರ್ಶನವನ್ನೇ ಅನುಸರಿಸಿ ಅವರು ಬಂಗಾಳದಲ್ಲಿ ಶಾಲೆಗಳನ್ನು ಸ್ಥಾಪಿಸಿದ್ದಾರೆ. ಈ ಶಾಲೆಗಳಲ್ಲಿ ವೇದಶಾಸ್ತ್ರಗಳ ಪಠನವನ್ನೂ ದೇಶಭಾಷೆಗಳ ಅಭಿವೃದ್ಧಿಯನ್ನೂ ಅನುಕೂಲಿಸಿದ್ದಾರೆ. ದೇಶಾಭಿಮಾನವು ತರುಣರಲ್ಲಿ ನೆಲೆಗೊಳ್ಳುವಂತೆ ಹಿಂದುದೇಶದ ನಿಜವಾದ ಚರಿತ್ರೆಯನ್ನು ಸಾಂಗವಾಗಿ ಕಲಿಸುವರು.

ಸ್ವದೇಶಿಯೂ ಔದ್ಯೋಗಿಕ ಶಿಕ್ಷಣವೂ ಬಂಗಾಳದಿಂದ ದಕ್ಷಿಣ ಹಿಂದುಸ್ಥಾನಕ್ಕೆ ಪಸರಿಸಿದಂತೆ ಈ ರಾಷ್ಟ್ರೀಯ ಶಿಕ್ಷಣ ಕಲ್ಪನೆಯೂ ಕ್ರಮೇಣ ಈ ಪ್ರಾಂತ್ಯವನ್ನು ಸೇರಿದೆ. ಕೊಯಮುತ್ತೂರಿನಲ್ಲಿ ಒಂದು ಕೋಲೇಜನ್ನು ಸ್ಥಾಪಿಸಿ ಹುಡುಗರಿಗೆ ಐಹಿಕಾಮುಷ್ಮಿಕ ಶಾಸ್ತ್ರಜ್ಞಾನವನ್ನು ಕೊಡುವ ಉದ್ದಿಶ್ಯ ಮದ್ರಾಸಿನ ಅನೇಕ ಸಂಭಾವಿತ ಗೃಹಸ್ಥರು ಉದ್ಯುಕ್ತರಾಗಿದ್ದಾರೆ. ಆ ಏರ್ಪಾಡಿನಲ್ಲಿ ನಮಗೆ ತೋರಿದ ಕೊರತೆಗಳನ್ನು ಹಿಂದಿನ ಸಂಚಿಕೆಯಲ್ಲಿ ವಾಚಕರ ಮುಂದಿಟ್ಟೆವು. ಬಂಗಾಳದ ಮಾದರಿಯಲ್ಲಿ ಒಂದು ಹೈಸ್ಕೂಲನ್ನು ಮಚಲಿ ಪಟ್ಟಣದಲ್ಲಿ ಸ್ಥಾಪಿಸುವರೆಂದು ತೋರುವದು. ಈ ಶಾಲೆಯ ಮುಖ್ಯ ಲಕ್ಷಣಗಳ್ಯಾವವೆಂದರೆ—ಇದರಲ್ಲಿ ಒಡಿಗೆ, ನೇಯಿಗೆ, ಮೊದಲಾದ ಕೈಕಾರಿಕೆಗಳ ಒಂದು ಶಾಖೆಯನ್ನಿಟ್ಟು ಹುಡುಗರಿಗೆ ಮೆದುಳಿಗೂ ಅವಯವಗಳಿಗೂ ಅಭ್ಯಾಸ ದೊರಕುವದು. ಮತ್ತು ಕೈಗಾರಿಕೆಯ ವೃತ್ತಿಗಳು ಹೀನವೆಂದೆಣಿಸದೆ ವಿದ್ಯಾರ್ಥಿಗಳು ಉದ್ಯೋಗ ಗೌರವವನ್ನು ಕಲಿಯುವರು. ಇದಲ್ಲದೆ ತರುಣ ಪ್ರಾಯದಲ್ಲೇ ಮಕ್ಕಳಿಗೆ ಧರ್ಮಬೋಧೆಯನ್ನೂ ಕೊಡುವರು. ಈ ಶಾಲೆಯಲ್ಲಿ ದೇಶೀಯ ಭಾಷೆಗಳಿಗೆ ಹೆಚ್ಚಿನ ಲಕ್ಷ್ಯಕೊಡುವರು.

ಸರ್ವ ಕಾರ್ಯಭಾರವು ದೇಶೀಯರ ಮೂಲಕವೇ ಸಾಗುವದರಿಂದ ದೇಶೀಯರಲ್ಲಿಯೂ ಕಾರ್ಯ ನಿರ್ವಾಹ ಶಕ್ತಿಯಿದೆ ಎಂದು ಇದರಿಂದ ತೋರಬಹುದು. ಇವರಿಗೆ ಅನುಕೂಲವಾಗುವಂತೆ ಪ್ರೈಮರಿ ಡಿಪಾರ್ಟ್‌ಮೆಂಟಿಗೆ ಶಿಕ್ಷಣವನ್ನು ಉಚಿತವಾಗಿಯೂ ಸೆಕೆಂಡ ಡಿಪಾರ್ಟ್‌ಮೆಂಟಿನಲ್ಲಿ ಏಳು ದರ್ಜೆಗಳಿಗೆ ಮಾಸಂಪ್ರತಿ 6, 8, 12, 16, 20, 24, ರೂಪಾಯಿಯಂತೆಯೂ ಸಂಬಳ ವಿಟ್ಟಿರುವರು.

ಈ ಶಾಲೆಗಳಿಂದ ಪಾಸಾದವರಿಗೆ ಯುನಿವರ್ಸಿಟಿಯವರ ಸರ್ಟಿಫಿಕೇಟು (ಯೋಗ್ಯತಾಪತ್ರ) ದೊರಕದು. ಯಾಕೆಂದರೆ ಇವರು ಯುನಿವರ್ಸಿಟಿ ರೂಲುಗಳ ಪ್ರಕಾರ ತಮ್ಮ ಶಿಕ್ಷಣ ಕ್ರಮವಿಟ್ಟಿಲ್ಲ. ಆದರೂ ಇವರು ತಮ್ಮ ಜಾಹೀರಾತಿನಲ್ಲಿ ಹೇಳಿದಂತೆ ವಿದ್ಯಾಭ್ಯಾಸ ಕ್ರಮವನ್ನು ನೆರವೇರಿಸಿದರೆ ದೇಶಕ್ಕೆ ಮೇಲಾಗುವದು. ಇದಕ್ಕಾಗಿ ಈ ಶಾಲೆಯಿಂದ ತೇರ್ಗಡೆ ಪಟ್ಟವರಿಗೆ ಜಮೀನುದಾರರೂ ರಾಜರೂ ಶ್ರೀಮಂತರೂ ಉದ್ಯೋಗ ಕೊಟ್ಟರೆ ಶಾಲೆಯು ಊರ್ಜಿತಕ್ಕೆ ಬರಬಹುದು. ಈ ಶಾಲೆಯು ನೆಲೆಗೊಂಡು ಏಳಿಗೆಗೆ ಬರಲೆಂದು ಪ್ರಾರ್ಥಿಸುತ್ತೇವೆ.

ಪತ್ರವ್ಯವಹಾರ

ಸ್ವದೇಶಾಭಿಮಾನಿ ಪತ್ರಿಕಾಕರ್ತರೇ

ಪ್ಲೇಗು ವಿಷೂಚಿ ಮೊದಲಾದ ಸಾಂಕ್ರಾಮಿಕ ರೋಗಗಳ ನಿವಾರಣೆ ಬಗ್ಗೆ ನಮ್ಮ ದಯಾಳು ಸರಕಾರದವರು ಮಾಡುವ ಏರ್ಪಾಡುಗಳಲ್ಲಿ ಕೆಲವು ಜನರಿಗೆ ಬಹಳ ಅಹಿತವಾಗಿ ಪರಿಣಮಿಸುವದೂ ಉಂಟು. ಉಡುಪಿ ಪರ್ಯಾಯ ಜಾತ್ರೆ ಸಂಬಂಧ ಈಚೆಗೆ ಕೆಲವು ವರುಷಗಳಿಂದ ಜನವರಿ 1ನೇ ತಾರೀಕಿನ ಲಾಗಾಯಿತು 17ನೇ ತಾರೀಕಿನ ವರೇಗೆ ಯಾತ್ರಿಕರು ಉಡುಪಿಗೆ ಬಾರದಂತೆ ಪ್ರತಿಬಂಧಕ ಮಾಡುವರು. ಭಕ್ತಜನರುಗಳು ತಮ್ಮ ಧನ ಮಾನ ಪ್ರಾಣವನ್ನಾದರೂ ಅರ್ಪಿಸಿ ಯಾತ್ರೆಮಾಡದೆ ಇರುವುದಿಲ್ಲ. ಈ ಪ್ರತಿಬಂಧಕ ಕಾನೂನು ಜಾರಿಗೆ ಬರುವ ಮೊದಲು ಯಾತ್ರಿಕರು ಬಂದು 4–5 ದಿವಸ ಮಾತ್ರ ಸುಖವಾಗಿದ್ದು ಹೋಗಿಬಿಡುವ ಪದ್ಧತಿ ಇತ್ತು. ಈಗಲಾದರೋ 2–3 ಸಾವಿರ ಜನರು 20–30 ದಿವಸಗಳ ಮುಂಚಿತವಾಗಿಯೇ ಬರಲಿಕ್ಕೆ ಶುರುಮಾಡುವದರಿಂದ ಸ್ಥಳ ಸೌಕರ್ಯವಿಲ್ಲದೆಯೂ ಆಹಾರ ಸಾಮಗ್ರಿಗಳು ತುಟ್ಟಿಯಾಗಿಯೂ ಹೊತ್ತು ಹೊತ್ತಿಗೆ ಅನ್ನನೀರು ಕಾಣದೆ ತಾವು ಅನೇಕ ಸಂಕಷ್ಟಗಳಿಗೆ ಗುರಿಯಾಗಿ ಕ್ಷೇತ್ರವಾಸಿಗಳಿಗೂ ಬಹು ಅಡಚಣೆಗೆ ಗುರಿಪಡಿಸುತ್ತಾರೆ. ಕಳೆದ ಪರ್ಯಾಯ ಕಾಲದಲ್ಲಿ ಜನರಿಗೆ ಒದಗಿದ ತೊಂದರೆಗಳ ಅನುಭವವು ನಮ್ಮ ಮಾನ್ಯ ತಹಸೀಲುದಾರರಿಗೂ, ಡಾಕ್ಟರರಿಗೂ ಇರದೆ ಹೋಗದು. ಆದುದರಿಂದ ಈ ವರ್ಷವಾದರೂ ಜನರು ಅಂತಹ ಕಷ್ಟಗಳಿಗೆ ಗುರಿಯಾಗದೆ ಹಾಗಿನ ಏರ್ಪಾಡುಗಳನ್ನು ಸ್ಥಳೀಯ ಸರಕಾರದವರು ಮಾಡಿ ಸರ್ವರ ಪ್ರೀತಿಗೆ ಪಾತ್ರರಾಗುವರಾಗಿ ನಂಬುತ್ತೇನೆ.

ಉಡುಪಿ, ತಾ. 12-12-1907. ಕ್ಷೇತ್ರವಾಸಿ.

ಶ್ರೀಮತ್ಸಕಲಗುಣಸಂಪನ್ನರಾದ ಸ್ವದೇಶಾಭಿಮಾನಿಗಳವರ ಸನ್ನಿಧಾನಕ್ಕೆ ತಮ್ಮ ದಾಸಾನುದಾಸ ಪಾತಾಳವಾಸಿಯಾದ ನೆಲಕಡಲೆಯು ಮಾಡುವ ವಂದೇ ಮಾತರಂ; ಅದಾಗಿ,

ಸ್ವಾಮಿ! 'ಸ್ವದೇಶೋಭುವನತ್ರಯಂ' ಎಂಬ ಶಾಸ್ತ್ರ ಸಮ್ಮತವಿದೆ. ಕಾರಣ ಸುರನರ ಪಾತಾಳ ಲೋಕಗಳೂ ತಮ್ಮ ಅಧಿಕಾರಕ್ಕೆ ಒಳಪಟ್ಟಿವೆ. ಆದುದರಿಂದ

ಪಾತಾಳವಾಸಿಯಾದ ನನ್ನ ಲೇಸುಕಷ್ಟಗಳನ್ನು ಆಲಿಸುವುದು ನಿಮ್ಮ ಕರ್ತವ್ಯವೇ ಸರಿ. ಪರಂತು,

ಭೂಮಿಯಲ್ಲಡಗಿ ಪಾಂಡವರಂತೆ ಅಜ್ಞಾತವಾಸ ಮಾಡುತ್ತಿದ್ದರೂ ನಾನೊಂದು ದೊಡ್ಡ ವಂಶಸ್ಥನು. 'ಕಾಯಿ' ಎಂಬುದು ನನ್ನ ಕುಟುಂಬದ ಸಾಮಾನ್ಯ ನಾಮಧೇಯವು. ಈ ಕಾಯಿ ಕುಟುಂಬಕ್ಕೆ ಇಂಗ್ಲಿಷಿನಲ್ಲಿ ನಟ್ ಎಂದು ಹೆಸರು. ಆದುದರಿಂದ ನನ್ನ ವಂಶಸ್ಥರನೇಕರು ನೆಲಕಡಲೆ (ಗ್ರೌಂಡ್ ನಟ್)ಯಾದ ನನ್ನಂತೆಯೇ ಸೀಗೆ ಕಾಯಿ (ಸೋಪ್ ನಟ್), ಅಳಲೆ ಕಾಯಿ (ಗೋಲ್ ನಟ್), ಅಡಿಕೆ ಕಾಯಿ (ಅರೇಕಾ ನಟ್), ತೆಂಗಿನ ಕಾಯಿ (ಕೋಕಾ ನಟ್) ಮುಂತಾದ ಹೆಸರುವಾಸಿಯನ್ನು ಹೊಂದಿ ಮೂರು ಲೋಕಗಳಲ್ಲಿಯೂ ಮೆರೆಯುತ್ತಿರುವರು. ಇವರಲ್ಲಿ ಮೊದಲನೆಯವರಿಬ್ಬರು ಮನುಷ್ಯಲೋಕದಲ್ಲಿ ವಾಸಿಸುವರು. ಮತ್ತಿಬ್ಬರಾದ ಮಹಾನುಭಾವರು ಸಾಕ್ಷಾತ್ ಸ್ವರ್ಗವಾಸಿಗಳು

ಮನುಷ್ಯರ ಮೈಯಲ್ಲಿರುವ ಮಾಲಿನ್ಯವನ್ನು ನಿರ್ಮೂಲಮಾಡಲು ನಾನೇ ಸಮರ್ಥನೆಂದು ಸೀಗೆ ಕಾಯಿ ಸೆಡಕು ಮಾಡತೊಡಗಿತು. ಶಾರದೆಯ ವರದಿಂದ ಸರ್ವರ ಲೇಖನಿಯ ಶಾಯಿಗೂ ನಾನೇ ಮೂಲಕಾರಣನೆಂದು ಅಳಲೆಕಾಯಿಗೆ ಅಹಂಬ್ರಹ್ಮತ್ವವು ಬಂದಿತು. ಇಂತಹ ಗರ್ವಖಂಡನಾರ್ಥವಾಗಿ ಈಗ ಇವೆರಡನ್ನೂ ಸಾರ್ವಭೌಮ ಸರಕಾರದವರು ಹರಾಜು ಮಾಡುತ್ತಿರುವರು. ಅತ್ತಿತ್ತ ನೋಡದೆ ಎತ್ತರವಾಗಿ ಹೋಗುವ ಅಡಿಕೆಮರವು ತಾನೇ ಆಕಾಶರಾಯನೆಂದು ಅಹಂಕರಿಸುತ್ತಿದ್ದಿತು. ಅಹಂಕಾರಕ್ಕೆ ತಕ್ಕ ಮದ್ದಿನಂತೆ ಮೈಸೂರು ಸರಕಾರದವರು ಇದರ ತಲೆಯಮೇಲೆ ಸಾಯರೆಂಬ ಮತ್ತೊಂದು ತೆರಿಗೆಯನ್ನು ಹೊರಿಸಿದ್ದರು. ಆದರೆ 'ಬಾಗಿದವ ಬದ-ಕ್ಯಾನು' ಎಂಬ ಗಾದೆಯಂತೆ ಪಶ್ಚಾತ್ತಾಪಪಟ್ಟು ಪ್ರಾರ್ಥಿಸಿಕೊಂಡ ಕಾರಣ ಅಂತಹ ಸುಂಕವು ಇತ್ತಲಾಗೆ ನಿಂತುಹೋಯಿತು. ಭೂಲೋಕದಲ್ಲಿ ನಾನೇ ಕಲ್ಪವೃಕ್ಷವೆಂದು ಕೊಂಡಾಡಿಕೊಳ್ಳುತ್ತಿರುವ ತೆಂಗಿನಮರದ ಪಾಡೇನಾಗಿದೆ! ಬೊಂಡದಿಂದಲೂ ಹೆಂಡದಿಂದಲೂ ಉತ್ತಮರನ್ನೂ ಅಧಮರನ್ನೂ ತೃಪ್ತಿಗೊಳಿಸುತ್ತಿರುವ ಸಾಕ್ಷಾತ್ಕಲ್ಪವೃಕ್ಷಕ್ಕೆ ಎಂತಹ ಶಿಕ್ಷೆ!! ಮಡಲು ಮರ ಬೇರುಗಳಿಂದ ಸ್ವರ್ಗ ಮರ್ತ್ಯ ಪಾತಾಳ ಲೋಕಗಳನ್ನು ಆವರಿಸಿರುವ ಈ ಸುರತರುವಿಗೆ ಎಷ್ಟೆಷ್ಟು ಕಷ್ಟ!!! ಬೇರಿಗೆ ಭೂಕಂದಾಯ ಒಂದು! ಮರಕ್ಕೆ ಮಾಲೀಕರ ಗೇಣಿ ಮತ್ತೊಂದು!! ತಲೆಗೆ ಅಬ್ಕಾರಿ ತೆರಿಗೆ ಬೇರೊಂದು!!! ಸಾಲದ ಕಡಿನುಗೆ ನೀಲದ ಬಾವಲಿ' ಎಂಬಂತೆ ಮಧ್ಯೆ ಮಧ್ಯೆ ಮೆಟ್ಟಿಲು ಕಡಿದು ಮೂರುದಾರಿ ಮರವೇರಿ ಎಳೆಯ ಕೊಂಬನ್ನು ಕೆತ್ತಿ ಗರ್ಭಖೂನ್ ಮಾಡುವ ಕೊಲೆಪಾತಕ ಬೇರೆ!

ಆದರೆ 'ಏಳುವಿಕೆಗೆ ಬೀಳುವಿಕೆಯುಂಟು' (Height has a fall), 'ಮೆರೆದವರು ತಿರಿದಾರು' (Blaze has a quench) ಎಂಬ ನಾಣ್ಣುಡಿಗಳಿವೆ. 'ಲೋಕದ ಹೇಳಿಕೆಗೂ ಮಗಳ ಬಾಳಿಕೆಗೂ' ಸಮನಾಗಿ ನನ್ನವರ ಅಹಂಕಾರಕ್ಕಾದ ಅಸಂಗತಗಳನ್ನು ನೋಡಿ ಗಡಗುಟ್ಟಿ ನಡುಗಿ, ನಾನು ನೆಲದಲ್ಲಿ ಅಡಗಿಕೊಂಡಿರುವೆನು. ಆದುದರಿಂದ ಈ ನನ್ನ ಚರಿತ್ರೆಯನ್ನರಿಯದವರು ನನ್ನನ್ನು 'ನೆಲಕಡಲೆ, ನೆಲಕಡಲೆ' ಎಂದು ಸಲುಗೆಯಿಂದ ಕರೆಯುತ್ತಿರುವರು. ಅಡಿಯಲ್ಲಿ ಅಡಗಿದ್ದರೂ ಒಡಲಿನ ದಡಬಡವು ಬಿಡಲಿಲ್ಲ. ಕಾರಣ ನನ್ನ ಗಿಡದ ದಂಟುಗಳ ಗಂಟುಗಂಟಿಗುಂಟಾಗುವ ಬೇರುಗಳಿಗೆ ಅಂಟಿಕೊಂಡು [illegible] ಮುಚ್ಚಲ್ಪಟ್ಟು ನಿಶ್ಚಿಂತನಾಗಿ ನೆಲಸಿರುವೆನು.

ಆದರೆ ಈ ಪ್ರಾಂತ್ಯದ ಆಂಗ್ಲ ಸಾಮ್ರಾಜ್ಯದಲ್ಲಿ [illegible] ಗೈಯಷ್ಟು ಭಾಗವನ್ನು ಸಹಿತ ಸರ್ವೆಮಾಡುವರು) ಎಂಬುದೇ [illegible] ಗಿದೆ. ಈ ವೇದವಾಕ್ಯಕ್ಕೆಗೆಡೆಯಾಗಿ ಅಡಗಿದ್ದ ನಾನು ಥಟ್ಟನೆ ಇತ್ಯರ್ಥದ ಇಲಾಖಾಧಿಪತಿಗಳ (ಸೆಟ್ಲ್‌ಮೆಂಟ್ ಆಫೀಸರ್) ದೃಷ್ಟಿಪಥದಲ್ಲಿ ಸಿಕ್ಕಿಬಿದ್ದೆನಲ್ಲ! ಅಕಟಾ! ಪಾತಾಳಲೋಕದಿಂದ ನನ್ನನ್ನು ಭೂತಳಕ್ಕೆ ತಂದು ಅಟ್ಟಕ್ಕೆ ಏರಿಸಿ ಆಕಾಶಪರ್ಯಂತವೂ ಎತ್ತಿಹಿಡಿಯುತ್ತಿರುವರು. ದಕ್ಷಿಣ ಕನ್ನಡಿಗರಾಗಿ ದಾಕ್ಷಿಣ್ಯವರ್ತಿಗಳಾದ ನಮ್ಮೆದುರಿಗೆ ಕಂಡು ಕಾಣದ ನನ್ನ ಕೀರ್ತಿಯನ್ನು ಕೊಂಡಾಡುತ್ತಿರುವರು. ವಂಗಧಂಗವು 'ಇತ್ಯರ್ಥವಾದ ವಿಷಯ' (ಸೆಟ್ಲ್ಡ್ ಫೆಕ್ಟ್) ಎಂದು ಮೋರ್ಲೆಯವರು ಸಾರಿದಂತೆ ಈ ಪ್ರಾಂತ್ಯದಲ್ಲಿಯೂ ನನ್ನ ಬೆಳಸು 'ನಿಸ್ಸಂದೇಹವಾದುದು' (ಎಸ್ಟಾಬ್ಲಿಷ್ಡ್ ಕ್ರೊಪ್) ಎಂದು ವ್ಯವಸಾಯ ಇಲಾಖೆಯ ಅಧ್ಯಾಪಕರು ವೇದ್ಯಗೊಳಿಸುತ್ತಿರುವರು.

ಆದರೆ 'ಶಿವನ ಗುಟ್ಟು ಶಿವನೇ ಬಲ್ಲ' ಎಂಬಂತೆ ಅನುಭವ ಸಿದ್ಧವಾದ ನನ್ನ ಯಥಾಸ್ಥಿತಿಗಳನ್ನು ನಾನೇ ವ್ಯಕ್ತಪಡಿಸುವೆನು. ಶ್ರವಣಮಾತ್ರದಿಂದ ನನ್ನ ವಿಷಯವಾದ ಸಾಧ್ಯಾಸಾಧ್ಯಗಳನ್ನು ನೀವೇ ನಿರ್ಧರಿಸಿಕೊಳ್ಳಬಹುದು. ಪ್ರಕೃತ:-ಕಲ್ಲಿನ ಮೇಲಂತೂ ನಾನು ನಿಲ್ಲಲಿಕ್ಕೇ ಇಲ್ಲ. ಕಲ್ಲುನೆಲದಲ್ಲಿ ಹಾಕಿ ನನ್ನನ್ನು ಕೊಲ್ಲುವುದು ಬೇಡ, ಕೆಸರು ಮಣ್ಣಿನಲ್ಲಿ ನನ್ನ ಹೆಸರೆತ್ತಲಾಗದು; ಬತ್ತದ ಗದ್ದೆಯಲ್ಲಿ ನನ್ನನ್ನು ಬಿತ್ತಬೇಡಿರಿ, ಬತ್ತ ಕೊಯ್ದಮೇಲೆ ನನ್ನ ಬೆಳೆಗೆ ಹೊತ್ತು ಸಾಲದು. ಜೇಡಿಮಣ್ಣನ್ನು ನಾನೆಂದಿಗೂ ಸೋಕಲಾರೆನು. ಅಂಟುಮಣ್ಣು ನನಗೆ ಬಹಳ ತಂಪಾಗುತ್ತೆ. ಭದ್ರಮುಷ್ಟಿ ಇದ್ದಲ್ಲಿ ಒದ್ದಾಟ ಹೆಚ್ಚು; ದೂರುವೆಯ ಭಾಗ ಸ್ವಾರಸ್ಯವಲ್ಲ; ನೀರಿಲ್ಲದಿದ್ದರೆ ಬೇರೂರುವುದು ಕಷ್ಟ, ನೀರು ಮೀರಿದರೆ ನಂಜೇರುವುದು, ಹತ್ತಿರ ಬಿತ್ತಿದರೆ ಎತ್ತರ ಹೆಚ್ಚು, ಉತ್ಪತ್ತಿ ಕಡಿಮೆ. ದೂರದೂರ ಬಿತ್ತಿದರೆ ಮಧ್ಯ ಮಧ್ಯ ಹುಟ್ಟದಿದ್ದರೆ ಮೋಸ. ಆದುದರಿಂದ ಈ ರೀತಿಯಾದ ಅನಾರೋಗ್ಯ ಕಾರಣಗಳನ್ನಳಿಯಬೇಕು. ಆರೇಳು ತಿಂಗಳ ಅವಧಿ ಪರ್ಯಂತರ ಬೆಳೆಯಬೇಕು. ಒಟ್ಟಿನ ಮೇಲೆ ಸ್ವಲ್ಪಮಟ್ಟಿಗೆ ತ್ಯಾವವೂ ಹನ್ನೆರಡು ತಿಂಗಳು ಹೋದಲೂ ಹೆಚ್ಚಾಗಿ ಹೊಯಿಗೆಯೂ ಇರುವ ಹೇರಳ ಭೂಮಿಯು ದೊರೆತಲ್ಲಿ ನನಗೆ ಪರಮೋತ್ತಮವಾಗುವದು. ಇದೇ ನನ್ನ ಪರಮ ರಹಸ್ಯವು. ಈ ತತ್ತ್ವಾರ್ಥದ ವಿಸ್ತಾರವನ್ನು ಕೃಷಿಕರ್ಮ ಕೋವಿದರಾದ ಸೂಕ್ತಿಕರ್ತರಿಂದ ವ್ಯಕ್ತಪಡಿಸಿಕೊಳ್ಳುವುದು ಯುಕ್ತವಲ್ಲದೆ ಅಸಾಧ್ಯವಾದ ಕೃಷಿಶಾಸ್ತ್ರವನ್ನು ಬಣಉಪದೇಶ ಮಾಡುವ ವ್ಯವಸಾಯಾಧ್ಯಾಪಕರ ಉಪನ್ಯಾಸವನ್ನು ಕಣ್ಣುಮುಚ್ಚಿ ಕೇಳುವುದು ಉಪಯುಕ್ತವಲ್ಲ.

ಇನ್ನು ನನ್ನ ನೆವನದಿಂದ ನಿಮ್ಮ ತಲೆಯಮೇಲೆ ಮತ್ತೊಂದು ತೆರಿಗೆಯನ್ನು ಏತ್ತಿಡುವುದಾದರೆ ನಾನು ನಿಮ್ಮ ಭಾಗಕ್ಕೆ ನೆಲಕಡಲೆಯಾಗದೆ ಕಬ್ಬಿಣದ ಕಡಲೆಯಾಗಿ ಪರಿಣಮಿಸಿದಂತಾಗುವೆನು. ನಾನೇನು ದ್ರುವಸ್ಯರಲ್ಲ, ಇಂತಹ ನನ್ನನ್ನು ಆಧರಿಸಿ ಅಂತಹ ಬೇರೊಂದು ಹೊರೆಯನ್ನು ಸರಕಾರದವರು ನಿಮ್ಮ ಮೇಲೆ ಹೊರಿಸಲಾರರೆಂದು ನೆರೆನಂಬಿ ತಮ್ಮೆಲ್ಲರ ಬೆಂಬಲವನ್ನು ಹಂಬಲಿಸುತ್ತಿರುವ ಬಲಗೈ ಬಂಟ

ನೆಲಕಡಲೆಕಾಯಿ.

ವಿದೇಶ ವೃತ್ತಾಂತ

ಕರ್ಜನ್ ಪ್ರಭುಗಳು ಬರ್ಮಿಂಗ್ ಹಮ್‌ನಲ್ಲಿ ಮಾಡಿದ ಭಾಷಣದಲ್ಲಿ ಭಾರತೀಯರಿಗೆ ಸ್ವರಾಜವಿತ್ತರ ಭರತಖಂಡಕ್ಕೆ ನೇ ವಿನಾಶಕಾಲ ಒದಗುವದೆಂದೂ, ಬ್ರಿಟಿಷ್ ಸಾರ್ವಭೌಮನ ಪ್ರಾಬಲ್ಯವು ಚಕ್ರಾಧಿಪತ್ಯದಲ್ಲಿ ಇನ್ನು ಮುಂದೆ ಹೆಚ್ಚುತ್ತ ಬರುವದೆಂದೂ ಅಭಿಪ್ರಾಯಪಟ್ಟರು.

ಅಮೇರಿಕದ ಪ್ರೆಸಿಡೆಂಟರಾದ ರೂಸವೆಲ್ಟರವರು ಇನ್ನು ಮುಂದಿನ ವರುಷದ ಪ್ರೆಸಿಡೆಂಟ ಪದವಿಯನ್ನು ವಹಿಸುವದೆ ನಿರಾಕರಿಸಿರುವರು.

ನ್ಯೂಜಿಲೆಂಡಿನಲ್ಲಿಯ ಪಾರ್ಲಿಮೆಂಟ್ ಮಂದಿರಗಳಿಗೆ ಬೆಂಕಿ ಬಿದ್ದು [illegible] ಪುರಾತನ ರಿಕಾರ್ಡು ಮಂದಿರಗಳೂ ಸುಟ್ಟು ಬೂದಿಯಾದವು.

ಉತ್ತರ ಹಿಂದುಸ್ಥಾನ

ಮೆ॥ ನೆವಿನ್ಸನರು ಮೈಮಾನಸಿಂಗ ಪಟ್ಟಣಕ್ಕೆ ಬಂದಿರುವರು. ಹಿಂದುಸ್ಥಾನದ ಸ್ವದೇಶಿ ಚಳವಳಿಂದ ಲಂಕಷಾಯಿರ್ ವರ್ತಕರಿಗೆ ಬಹಳ ಯೋಚನೆ ಉಂಟಾಗಿರುವದೆಂದು ಹೇಳಿರುವರು.

ಅಫೀಮು ಕಂದಾಯದಲ್ಲಿ ಸರಕಾರದವರಿಗೆ ನಿರೀಕ್ಷಿಸಿದ್ದಕ್ಕಿಂತ 4,752 150 ರೂಪಾಯಿ ಹೆಚ್ಚು ದೊರೆತಿರುವದು.

ನಾಕ್ಪುರ್ ರಾವ ಬಹಾದೂರ್ [illegible] ಸರವರು, ಈ ಸಾರೆ [illegible] ಕಾಂಗ್ರೆಸಿನ ಅಗ್ರಾಸನವನ್ನು ಲಾಲಾ ಲಾಜಪತರಾಯರವರಿಗೆ ಬಿಟ್ಟುಕೊಡಬೇಕೆಂದು ಅನೇಕ ಜನರು ನಾಕ್ಪುರದವರಿಗೆ ಮನವಿ ಮಾಡಿಕೊಂಡಿರುವರು.

ಪಂಜಾಬಿ ಬೆರಿಸ್ಟರ್ ಎಟ್ ಲಾ ಲಾಲಾ ಹರಿಕೃಷ್ಣಲಾಲ್ ಎಂಬವರು ಜಾತಿಭೇದ, ಬಾಲವಿವಾಹ ಮೊದಲಾದ ಆಚಾರಗಳಿಂದ ನಮ್ಮ ಮಾತೃಭೂಮಿಯಾದ ಹಿಂದುಸ್ಥಾನವು ನೀಚಸ್ಥಿತಿ ಹೊಂದಿರುವದರಿಂದ ಇಂತಹ ಆಚಾರಗಳಿಂದ ನಮ್ಮ ಜನರಿಗೆ ಉಂಟಾದ [illegible]

ಯಾವದಾದರೂ ಹಿಂದು ಗ್ರಹಸ್ಥರು ವಿವಾಹ ಮೊದಲಾದ ಕಾರ್ಯಗಳಲ್ಲಿ ನಿರ್ವಹಿಸುವ ವೇಳ್ಯದಲ್ಲಿ ಮೇಳದವರನ್ನು ಕರೆಸಿ ನಾಟ್ಯ ಮಾಡಿಸುವದಾದರೆ ಅಂಥಾ ಸಭೆಗೆ ಇಂಗ್ಲಿಷ ದೊರೆಗಳೂ ದೊರೆಸಾನಿಗಳೂ ಹೋಗಬಾರದು. ಹಾಗೆ ಯಾವದು ವೇಳ್ಯೆ ಆಮಂತ್ರಣವನ್ನು ಸ್ವೀಕರಿಸಿ ಹೋಗುವ ಪಕ್ಷಾಯುಪಟ್ಟರೆ ಅಂಥಾ ಸಭೆಯಲ್ಲಿ ಇಂಗ್ಲಿಷ ದೊರೆಸಾನಿಗಳು ಕೂತುಕೊಳ್ಳದೆ, ಸಭೆಯ ಮುಂದೆ ಬಾರದೆ ಮನೆಯೊಳಗೆ ಕೂತುಕೊಳ್ಳುವ ಹಿಂದು ಕುಲ ಸ್ತ್ರೀಯರೊಡನೆ ಕೂತುಕೊಳ್ಳಬೇಕು ಎಂತ ಕ್ರಿಶ್ಚನ್ ವಿಮೆನ್ ವರ್ಕರ್ಸ್ ಯೂನಿಯನ್ ಎಂಬ ಪರೋಪಕಾರದ ಕಾರ್ಯಗಳನ್ನು ಮಾಡುವ ಸ್ತ್ರೀಯರ ಕಡೆಯಿಂದ ಕೆಲವು ಇಂಗ್ಲಿಷ ದೊರೆಸಾನಿಗಳು ಸಭೆಕೂಡಿ ಮಾಡಿದ ನಿರ್ಣಯವನ್ನು ಎಲ್ಲಾ ವರ್ತಮಾನ ಪತ್ರಕರ್ತರಿಗೆ ತಿಳಿಸಿರುತ್ತಾರೆ

"೩೦ ಶತಮಾನಗಳಿಂದ ಹಿಂದು ಜನರು ಮಾಡಿದ ವೃದ್ಧಿ ಯಾವದು? ೨೯,೮೦,೦೦,೦೦೦, ಜನಸಂಖ್ಯೆ ಇರುವ ನಮ್ಮ ಹಿಂದುಸ್ಥಾನದಲ್ಲಿ ೨೪೬,೦೦೦,೦೦೦ ಜನರು ಓದಲಿಕ್ಕೂ ಬರಿಯಲಿಕ್ಕೂ ಅರಿಯದ ಮೂಢರಾಗಿರುತ್ತಾರೆ ೪೦೦೦೦೦೦೦ ಸ್ತ್ರೀಯರು ಗೋಷಾ ಹೆಂಗಸರಾಗಿ ಮನೆ ಒಳಗನೇ ಬಂಧನೆಯಲ್ಲಿರುವಂಥವರು ೨೭೦೦೦೦೦೦ ಸ್ತ್ರೀಯರು ವಿಧವೆಗಳಾಗಿರುತ್ತಾರೆ ೧೪ ವರುಷದ ಒಳಗಿನ ಪ್ರಾಯದ ವಿಧವೆಯರು ೬೦೦೦೦೦೦ ಇರುತ್ತಾರೆ ೧೦ ವರುಷ ಪ್ರಾಯವಾಗದ ಪರಂತು ವಿವಾಹವಾದ ಹೆಣ್ಣು ಮಕ್ಕಳು ೨೫೦೦೦೦೦ ಇರುತ್ತಾರೆ ೧೪ ವಯಸ್ಸದ ಒಳಗಿನ ಪ್ರಾಯದ ವಿಧವೆಯರು ೨೫೦೦೦೦ ಇರುತ್ತಾರೆ ೪ ವರುಷದ ಒಳಗಿನ ಪ್ರಾಯದ ವಿಧವೆಯರು ೧೪೦೦೦ ಇರುತ್ತಾರೆ. ೫೦,೦೦೦,೦೦೦ ನಿವಾಸಿಗಳು ಮುಟ್ಟಿಕೂಡದ ಹೊಲೆಯರಾಗಿರುತ್ತಾರೆ ಅಹಾ," ಎಂತ ಒಬ್ಬ ಗ್ರಹಸ್ಥನು ಎಪಿಫಾನಿಯ ಪತ್ರಕರ್ತರಿಗೆ ಪ್ರಶ್ನೆ ಕೇಳಿರುತ್ತಾನೆ

ದಕ್ಷಿಣ ಹಿಂದುಸ್ಥಾನ.

ಸರ್. ಎಸ್. ಸುಬ್ರಮಣ್ಯಯ್ಯರವರನ್ನು ಥಿಯೊಸೊಫಿಕಲ್ ಸೊಸೈಟಿ ಯಾ ಬ್ರಹ್ಮಜ್ಞಾನ ಸಂಘದ, ವೈಸ್ ಪ್ರೆಸಿಡೆಂಟರಾಗಿ ನೇಮಿಸಿರುವರು

ಕರ್ನಲ್ ಒಲ್ಕೋಟರವರ ಮತ್ತು ವೆ ಡಾಮ್ ಬ್ಲವಾಟ್ಸ್ಕೆಯವರ ಪ್ರತಿಮೆಗಳನ್ನು ಈ ತಿಂಗಳ ತಾರೀಕು 7ರಲ್ಲಿ ಮದ್ರಾಸ್ ಅದ್ಯಾರದಲ್ಲಿ ಪ್ರತಿಷ್ಠೆ ಮಾಡಿದರು

ಮದ್ರಾಸು ಮಹಾ ಜನ ಸಭೆಯವರು ಬರುವ ಕೊಂಗ್ರೆಸು ಸಭೆಗೆ ನಮ್ಮ ಜಿಲ್ಲೆಯಿಂದ ರಾವ್ ಸಾಹೇಬ ನ. ಸುಬ್ಬರಾವರನ್ನೂ, ರಾ| ಜಿ. ಅಣ್ಣಾಜಿರಾಯರನ್ನೂ, ರಾ| ಕೆ, ನಾರಾಯಣ ರಾಯರನ್ನೂ ಪ್ರತಿನಿಧಿಗಳಾಗಿ ಆರಿಸಿರುವರು.

ದಕ್ಷಿಣ ಕನ್ನಡ

ಚಂದಾದಾರರಿಗೆ ನೋಟೀಸು. ನಮ್ಮ ಪ್ರಥಮ ಸಂಚಿಕೆಯಿಂದ ಚಂದಾದಾರರಾದವರ ಚಂದಾಹಣವು ಈ ತಿಂಗಳಲ್ಲಿ ಸಮಾಪ್ತವಾಗುವದು. ಬರುವ ವರುಷದ ಚಂದಾಹಣವನ್ನು ಮುಂಗಡವಾಗಿ ಮುಟ್ಟಿಸ ಬೇಕಾಗಿ ಅಪೇಕ್ಷಿಸುತ್ತೇವೆ. ವಿ. ಪಿ. ದ್ವಾರಾ ಕಳುಹಿಸಬೇಕೆನ್ನುವವರು ಆ ರೀತಿ ಬರದ್ದಲ್ಲಿ ಬರುವ ವರ್ಷದ ಪ್ರಥಮ ಸಂಚಿಕೆಯನ್ನು ಚಂದಾಹಣಕ್ಕೋಸ್ಕರ ವಿ. ಪಿ. ಮೂಲಕ ರವಾನಿಸುವೆವು.

ಮ್ಯಾನೇಜರ್, ಸ್ವದೇಶಾಭಿಮಾನಿ.

ಮಂಗಳೂರು. ಒಂದು ತಿಂಗಳಿನಿಂದ ಪ್ಲೇಗು ಮರಣಗಳಿಲ್ಲದ ಕಾರಣ, ಮಂಗಳೂರು ಪ್ಲೇಗಿನ ಬಾಧೆಯಿಂದ ವಿರಹಿತವಾಗಿರುವದೆಂದು ಸದ್ಯದಲ್ಲಿ ಪ್ರಕಟಿಸುವ ಸಂಭವವಿರುವದು.

ಪೋಸುಪೋರ್ಟು ನಿಬಂಧನೆಗಳನ್ನು ತೆಗದುಹಾಕ ಬೇಕೆಂದು ಅನೇಕಜನ ಮಂಗಳೂರು ನಿವಾಸಿಕರು ಒಂದು ಬಿನ್ನವತ್ತಳಿಕೆಯನ್ನು ಕಲೆಕ್ಟರ ದೊರೆಗಳಿಗೆ ಮಾಡುವರಾಗಿ ತಿಳಿದುಬರುತ್ತದೆ.

ಕಾಸರಗೋಡು ತಾಲೂಕಿನ ಬರುವ ಫಸಲಿ ಜಮಾಬಂದಿಯನ್ನು ಕಲೆಕ್ಟರರವರು ಸ್ವತಹಾ ನಡಿಸುವರು ಮಂಜೇಶ್ವರದಲ್ಲಿ ಜನವರಿ ತಾ 20–25, ಕುಂಬಳೆ ಜನವರಿ 27–ಫೆಬ್ರುವರಿ ತಾ 2, ಕಾಸರಗೋಡು, 3–8, ಹೊಸದುರ್ಗ, ತಾ 10–15, ಉದೆನೂರ, 17–19, ಈ ರೀತಿ ಜಮಾಬಂದಿಯು ನಡಿಸಲ್ಪಡುವದು

ಈ ತಿಂಗಳ ತಾ 7 ರಾತ್ರೆ ಬೊಂಗರಕೇರಿಯಲ್ಲಿರುವ ವಾಣಿಯವರ ದೇವಸ್ಥಾನದಲ್ಲಿ ಕೆಲವು ಕಳ್ಳರು ಚೋರಿ ಮಾಡಲು ಪ್ರಯತ್ನಿಸಿದರು ದೇವಸ್ಥಾನದ ಪಹರೆಯವನು ಎಚ್ಚತ್ತದ್ದರಿಂದ ಇವರ ಪ್ರಯತ್ನಗಳು ನಿಷ್ಫಲವಾದವು.

ಈ ತಿಂಗಳ ತಾ 3ಕ್ಕೆ ಒಬ್ಬ ಯುರೋಪಿಯ ತಿರುಕಳಿಸು ಇಲ್ಲಿಗೆ ಒಂದು ಕೈಯಲ್ಲಿ ಕಾಸಿಲ್ಲದವನಾಗಿ ಹೆಡ್ ಕ್ವಾರ್ಟರ್ಸ್ ಡಿಪ್ಯುಟಿ ಕಲೆಕ್ಟರವರಿಗೆ ಅರ್ಜಿಮಾಡಲು ಆತನ ಊಟದ ಖರ್ಚಿಗೆ ಎಂಟಾಣೆಯನ್ನೂ ಕಣ್ಣಾನೂರಿಗೆ ಹೋಗುವರೆ ದಾರಿಖರ್ಚಿಗೆ ನಾಲ್ಕು ರೂಪಾಯಿಯನ್ನೂ ಕೊಟ್ಟಿರುವರು.

ನವಳ್ಲಿ ಡಿಸ್ಟ್ರಿಕ್ಟ ರಿಜಿಸ್ಟ್ರಾರಾಗಿದ್ದ ಚಂದ್ರನ್‌ರವರು ಎರಡು ತಿಂಗಳ ಬಗ್ಯೆ ಮಲಬಾರಿಗೆ ವರ್ಗಾಯಿಸಲ್ಪಟ್ಟಿರುವರು ರಾ| ಪಿ ರಾಮಕೃಷ್ಣರಾಯರ. ಇವರ ಚಾರ್ಜನ್ನ ವಹಿಸಿಕೊಂಡಿರುವರು ಚಂದ್ರನವರು ಇಲ್ಲಿಗನೇ ತಿರಿಗಿ ಬರುವ ಸಂಭವವಿಲ್ಲವೆಂತಲೂ ರಾ| ಮುಕುಂದರಾಯರು ಇಲ್ಲಿಯ ಡಿಸ್ಟ್ರಿಕ್ಟ ರಿಜಿಸ್ಟ್ರಾರರಾಗಿ ನೇಮಕವಾಗುವರೆಂತಲೂ ವರ್ತಮಾನವಿರುವದು ರಾ| ರಾಮಕೃಷ್ಣರಾಯರು ಸರ್ಕಿಟಿನ ಮೇಲೆ ಹೋಗಿರುವದರಿಂದ ರಾ| ಸ| ದೇವರಾಯರು ಈಗ ಮಂಗಳೂರಲ್ಲಿ ಡಿಸ್ಟ್ರಿಕ್ಟ ರಿಜಿಸ್ಟ್ರಾರರವರ ಚಾರ್ಜ ವಹಿಸಿಕೊಂಡಿರುವರು

ಈ ತಿಂಗಳತಾರೀಕು 7ರಲ್ಲಿ ಎಸ್ಸೆಸರರ ಮತ್ತು ಜೂರಿಯವರ ಪಟ್ಟಿಯು ಡಿಸ್ಟ್ರಿಕ್ಟ ಕಲೆಕ್ಟರವರಿಂದಲೂ ಜಡ್ಜರವರಿಂದಲೂ ತಿದ್ದುಪಡಿಮಾಡಲ್ಪಟ್ಟಿತು. ಕಲೆಕ್ಟರವರು ಮದ್ರಾಸಿನಿಂದ 6ನೇ ತಾರೀಕಿಗೆ ಬಂದು ತಲ್ಪಿದ್ದರಿಂದ ಇದನ್ನು ಕ್ಲಪ್ತ ಸಮಯದಲ್ಲಿ ಮಾಡಲಿಕ್ಕಾಗದೆ ತಾ 7ರಲ್ಲಿ ನೆರವೇರಿಸಿದರು

ನಮ್ಮ ಜಿಲ್ಲೆಗೆ ಮಾಜಿ ಕಲೆಕ್ಟರಾಗಿದ್ದ ಮೇ| ಡಾನ್ಸ್‌ದೊರೆಗಳು ಬರುವ ತಿಂಗಳ ತಾ. 3ಕ್ಕೆ ಪೆನ್ಶನ್ ತೆಗದುಕೊಳ್ಳುವರು

ಇಲ್ಲಿ ಕಲೆಕ್ಟರರಾಗಿದ್ದ ಮೇ. ರೋಬರ್ಟಸನ್ ದೊರೆಗಳು ಸ್ಲೋಲಮಿನಲ್ಲಿ ತಮ್ಮ ಬಂಗಲೆಯ ತೋಟದಲ್ಲಿ ಹುಲಿಗಳನ್ನು ಮೃಗಕ್ಕೆ ಕಟ್ಟಿಹಾಕಿ ಸಾಕುತ್ತಿದ್ದರು. ಕಲೆಕ್ಟರ ದೊರೆಗಳ ಸಂದರ್ಶನೆಗೆ ಹೋಗುವದು ಅತಿ ದುರ್ಲಭವಾಗಿತ್ತು ದೊರೆಗಳು ಯಾವಾಗಲೂ ಏಕಾಂತ ವಾಸ ವ್ರತವನ್ನೇ ಅವಲಂಭಿಸಿ ಈ ಹುಲಿಗಳನ್ನು ಸಾಕಿದ್ದರೆಂತ ತಿಳಿದು ಬರುತ್ತದೆ ಹ್ಯಾಗೂ ಬಂಗ್ಲೆಯ ತೋಟದಲ್ಲಿ ಕಡ್ಡಿಗಳನ್ನು ಹೆಕ್ಕಲಿಕ್ಕೆ ಬಂದ ಬಡ ಹೆಂಗಸರಿಬ್ಬರು ಈ ಹುಲಿಗಳಿಗೆ ಆಹುತಿಯಾದರು. ಹುಲಿಗಳನ್ನು ಕ್ರಮೇಣ ಗುಂಡು ಹಾಕಿ ಕೊಂದಿರುವರೆಂದು ತಿಳಿದು ಬರುತ್ತದೆ

ಊರಿನವಲ್ಲಿಯೂ ಪ್ಲೇಗಿಲ್ಲದ ಕಾರಣ ಪ್ಲೇಗಿನ ಶಿಬಂದಿಯವರು ಕೊಲೇರಾ ನಿವಾರಣೆಯ ಕೆಲಸವನ್ನು ಮಾಡುತ್ತಿರುವರು.

ಅಮಿನ ದೀವಿಗೆ ಹೋದ ಡ್ರೈಗ್ ದೊರೆಗಳವರು ಇಲ್ಲಿಗೆ ಬಂದು ತಲ್ಪಿರುವರು ಈ ಹೊತ್ತು ನಾಳೆಯೊಳಗೆ ಕುಂದಾಪುರ ಡಿವಿಜನಿನ ಚಾರ್ಜನ್ನು ವಹಿಸಿಕೊಳ್ಳುವರು

ರಾ| ಪಿ. ನಾರಾಯಣ ಮೇನನರು ಕ್ರಿಸ್ತಮಸ್ ರಜೆಯೊಂದಿಗೆ ೧೫ ದಿವಸಗಳ ರಜೆಯ ಮೇಲೆ ಹೋಗುವರೆಂದೂ ರಾ| ರಗಡೆ ರಾಮರಾಯರು ಇವರಗೈರಹಾಜರಿನಲ್ಲಿ ಮಂಗಳೂರು ಡಿವಿಜನಿನ ಚಾರ್ಜ ವಹಿಸಿಕೊಳ್ಳುವರಾಗಿಯೂ ವರ್ತಮಾನವಿರುವದು

ಕಳದ ತಾ 14ರಲ್ಲಿ ಕೆನರಾ ಗರ್ಲ್ ಯಾ ಹುಡುಗಿಯರ ಶಾಲೆಯಲ್ಲಿ, ಪರೀಕ್ಷೆಗಳಲ್ಲಿ ಉತ್ತೀರ್ಣರಾದ ಹುಡುಗಿಯರೆಲ್ಲರಿಗೂ ಇನಾಮು ಕೊಡಲ್ಪಟ್ಟಿತು ರಾವ ಸಾಹೇಬ ನ ಸುಬ್ರಾಯರ ಧರ್ಮಪತ್ನಿಯರು ಈ ಸಂದರ್ಭದಲ್ಲಿ ಅಗ್ರಾಸನವನ್ನು ವಹಿಸಿದ್ದರು.

ನಿನ್ನೆ ದಿನ ಬೆಳಗ್ಯೆ ಇಲ್ಲಿಯ ಡಿಸ್ಟ್ರಿಕ್ಟ ಜೈಲಿನಲ್ಲಿ ರಿಮಾಂಡಿನಲ್ಲಿದ್ದ 8 ಜನ ಬಂದಿವಾನರನ್ನು ಮುಖ ಕೈಕಾಲುಗಳನ್ನು ತೊಳಿಯುವ ಬಗ್ಯೆ ಹೊರಗೆ ತಂದು ತಿರುಗಿ ರಿಮಾಂಡ್ ಕೋಣೆಗೆ ತಕ್ಕೊಂಡುಹೋಗುವಾಗ್ಯೆ ಅವರಲ್ಲಿ ಒಬ್ಬನು ಪರಾರಿಯಾದನು ಪೊಲೀಸಿನವರು ಅವನನ್ನು ಹಿಂಬಾಲಿಸಿ ಇಲ್ಲಿಯೇ ಸಮೀಪವಿರುವ ಅಳ್ಕೆ ಕಬ್ಬಿಯಬಳಿಯಲ್ಲಿ ಹಿಡಿದು ದಸ್ತಗಿರಿ ಮಾಡಿ ಜೈಲಿಗೆ ವೈದರು.

ಕಳದ ತಿಂಗಳ ತಾ 9ರಲ್ಲು ಮಂಗಳೂರು ಗವರ್ನಮೆಂಟು ಕೊಲೇಜಿನಲ್ಲಿ ಪ್ರೊಫೆಸರ ಬೊಬ್ಬಿಯವರ ಬಯಸ್ಕೋಪು ಎಂಬ ನವೀನ ಯಂತ್ರದಿಂದ ರುಶ್ಯ ಜಾಪಾನ ಯುದ್ಧದ ದೇಖಾವೆಗಳು ಪ್ರದರ್ಶಿಸಲ್ಪಟ್ಟವು.

ಈ ದಿನ ಡಿಸ್ಟ್ರಿಕ್ಟ ಬೋರ್ಡ ಮೆಂಬರರ ಮೀಟಿಂಗ್ ಇರುವದು ಕಳದ ತಾ 14ರಲ್ಲಿ ತಾಲೂಕು ಬೋರ್ಡು ಮೆಂಬರರ ಸಭೆ ಕೂಡಿತು. ಪ್ರೆಸಿಡೆಂಟರೂ ವೈಸ್ ಪ್ರೆಸಿಡೆಂಟರೂ ಇಲ್ಲದ ಕಾರಣ ಮೆಂಬರರ ಪೈಕಿ ಸುರತ್ಕಲ್ ಪಾದ್ರಿಗಳಾದ ಫಾದರ್ ಕೊಹಿಲೊ ಎಂಬವರನ್ನು ಪ್ರೆಸಿಡೆಂಟರಾಗಿ ಚುನಾಯಿಸಿದ್ದರು.

ಮ. ರಾ. ರಾ. ಬಿ. ಸುಬ್ಬಯ್ಯ ಶೆಟ್ರರವರ ವಿದ್ಯಾರ್ಥಿವೇತನದ ಪ್ರಕಟನಾಪತ್ರವನ್ನೂ ರಾ|| ರಂಗರಾಯರು ಪಂಚಮರ ಶಾಲೆಯನ್ನು ತೆರೆಯಲ್ಪಟ್ಟ ಸಮಯದಲ್ಲಿ ಓದಿದ ಉಪನ್ಯಾಸವನ್ನೂ ಕೃತಜ್ಞತಾ ಪೂರ್ವಕ ಸ್ವೀಕರಿಸಿರುವೆವು. ಇವುಗಳನ್ನು ಬರುವ ಸಂಚಿಕೆಯಲ್ಲಿ ಪ್ರಕಟಿಸುವೆವು.

ಬಾತ್ಮೀದಾರರು ಕೊಡುವ ಅಭಿಪ್ರಾಯಕ್ಕೆ ನಾವು ಜವಾಬ್ದಾರರಲ್ಲ.

Ed.

ಹೊಸದುರ್ಗ. ಇಲ್ಲಿಯ ಆಸ್ಪತ್ರೆಯು ಇನ್ನೂ ತೆರೆಯಲ್ಪಡಲಿಲ್ಲ. ಮದ್ದುಗಳ ಅತೀ ಆಗತ್ಯವಿದ್ದವರು ಕಾಸರಗೋಡಿಗೆ ಹೋಗಿ ಅಲ್ಲಿಯ ದಯಾಶೀಲರಾದ ವೈದ್ಯ ಉದ್ಯೋಗಸ್ಥರಿಂದ ಸಹಾಯವನ್ನು ಪಡೆಯುತ್ತಾರೆ.

ಮೊದಲು ಈ ಆಸ್ಪತ್ರೆಯು ಕೆಲಸವು ಒಂದು ಸಣ್ಣ ಸರಕಾರಿ ಕಟ್ಟೋಣದಲ್ಲಿ ನಡೆಯುತ್ತಿರುವದನ್ನು ನೋಡಿ, ಕೋಡೋತ್ತ ಜಮೀನದಾರ ಮಹಾರಾಜಶ್ರೀ ತಮ್ಮಣ್ಣರ ನಾಯರವರು ಮೂರು ನಾಲ್ಕು ಸಾವಿರ ರೂಪಾಯಿ ವೆಚ್ಚಮಾಡಿ ಒಂದು ಚೆಲೋ ಕಟ್ಟೋಣವನ್ನು ಕಟ್ಟಿಸಿ ಆಸ್ಪತ್ರೆಯ ಉಪಯೋಗಕ್ಕೆ ಕೊಟ್ಟರು. ತದನಂತರ ವೈದ್ಯ ಉದ್ಯೋಗಸ್ಥರ ಬಿಡಾರವು ಆಸ್ಪತ್ರೆಯನ್ನು ಬಿಟ್ಟು ದೂರವಿದ್ದರೆ ಜನರಿಗೆ ತೊಂದರೆಯಾದೀತು ಎಂಬ ಭಾವನೆಯಿಂದ ಸರ್ವ ಜನರಿಗೆ ಅನುಕೂಲವಾಗುವಂತೆ ವೈದ್ಯ ಉದ್ಯೋಗಸ್ಥರಿಗೆ ಆಸ್ಪತ್ರೆಯ ಸಮೀಪವೇ ಮನೆ ಒದಗಿಸುವ ಬಗ್ಗೆ ಹಣ ಕೂಡಿಸಿ ಒಂದು ಯೋಗ್ಯ ಕಟ್ಟೋಣವನ್ನು ಕಟ್ಟಿಸುತ್ತಿದ್ದಾರೆ.

ಆಸ್ಪತ್ರೆಯ ಸಹಾಯವು ಸದಾ ಚೆಲೋ ರೀತಿಯಲ್ಲಿ ದೊರಕಬೇಕೆಂಬ ಇಚ್ಛೆಯಿಂದ ಅನಾನುಕೂಲತೆಗಳನ್ನು ತೊಲಗಿಸಲು ಜನರು ಎಷ್ಟು ಕಷ್ಟಪಟ್ಟರೂ ವೈದ್ಯ ಉದ್ಯೋಗಸ್ಥರನ್ನು ಬೇರೆ ಕೆಲಸದ ಮೇಲೆ ಕಳುಹಿಸಲ್ಪಟ್ಟರೆ ಜನರು ಮಾಡತಕ್ಕದ್ದೇನು? ಸರಕಾರದವರು ಹೊಸದುರ್ಗ ಆಸ್ಪತ್ರೆಗೆ ನೇಮಕವಾದ ವೈದ್ಯ ಉದ್ಯೋಗಸ್ಥರನ್ನು ಇಲ್ಲಿಯ ಆಸ್ಪತ್ರೆಯ ಕೆಲಸಕ್ಕೇನೇ ಹಚ್ಚುವರೆಂದು ನಮ್ಮ ಪ್ರಾರ್ಥನೆಯಾಗಿರುತ್ತದೆ.

ಶಾಂತಿಭೇದಿ ರೋಗವು ಎಲ್ಲೆಲ್ಲಿಯೂ ಹಾವಳಿ ಮಾಡುತ್ತಾ ಇದೆ. ಜನರು ಭಯಗ್ರಸ್ತರಾಗಿ ರಾತ್ರಿ ಸಮೀಪಿಸುತ್ತಲೇ ಮನೆಗಳನ್ನು ಸೇರುತ್ತಾರೆ. ಮೂಡು ಹಳ್ಳಿಗಳಲ್ಲಿ ಪೈದಾಸ್ತು ಆಗುವ ನೇಂದ್ರಬಾಳೆ ಹಣ್ಣು ಗೊನೆ ಬಾಗಫಲಗಳು ಅಲ್ಲಲ್ಲಿಯೇ ಇರುತ್ತವೆ. ಸಾಮಾನು ಕ್ರಯವು ಕಡಮೆ ಆಗುತ್ತಾ ಇದೆ. ಮುಂಚಿತವಾಗಿ ಭತ್ತ ಮೊದಲಾದವುಗಳಿಗೋಸ್ಕರ ಹಣಕೊಟ್ಟವರು ವಸೂಲಿಗೆ ಹೋಗಲೊಲ್ಲರು. ಈ ರೋಗವು ಜನರ ಹೆದರಿಕೆಯಿಂದಲೂ ಮೂಢತ್ವದಿಂದಲೂ ಭಯಂಕರ ರೂಪವನ್ನು ತಾಳುತ್ತದೆ. ಪಾಪಿಷ್ಠರು ಬೇರೆ ಹೆಚ್ಚಾಗದವರ್ಯಾವ ವ್ಯವಸ್ಥೆ ತೆಗೆದುಕೊಳ್ಳಲಾರದೆಯೂ ಪಂಚಾಂಗಬರಿಕೆ ಹಿಂಸೆಯಾಗಿಯೂ ಸಾಯುತ್ತಾರೆ.

ಭತ್ತ ಅಕ್ಕಿಯ ಕ್ರಯವು ದಿನೇ ದಿನೇ ಏರುತ್ತಾ ಇದೆ. ಈಗಿನ ಸ್ಥಿತಿಯೇ ಈ ರೀತಿಯಾದರೆ ಮುಂದಿನ ಸ್ಥಿತಿ ಶ್ರೀದೇವರಿಗೆ ಗೋಚರ.

ಕಾಸರಗೋಡು, ತಾ॥ 9-12-07.

ಕಾಸರಗೋಡಿಗೆ ಸುಮಾರು 2 ಮೈಲು ದೂರವಿರುವ ಕಾವು ಎಂಬ ಒಳಗ್ರಾಮದಲ್ಲಿ ಧರ್ಮಕೊಡುವದರಲ್ಲಿ ಕೀರ್ತಿಗೆ ಬಂದಿರುವ ವಾಸ್ತವ ಕಾವುಭಟ್ಟರ ಮನೆಗೆ ಕಳೆದ ತಿಂಗಳಲ್ಲಿ ಕಳ್ಳರು ನುಗ್ಗಿ ಹೆಚ್ಚು ಒಡವೆ ವಸ್ತುಗಳನ್ನೂ ಆಭರಣಗಳನ್ನೂ ಎತ್ತಿ ಹಾಕಿದ್ದರಷ್ಟೆ. ಸದರಿ ತಕ್ಸೀರು ನಡಿಸಿದ ಕಳ್ಳರನ್ನು ಇಲ್ಲಿಯ ಪೋಲೀಸ್ ಸಬ್ ಇನ್ಸ್‌ಪೆಕ್ಟರರು ಬಹಳ ಶ್ರಮಪಟ್ಟು ಪತ್ತೆಮಾಡಿ ಅವರ ಮೇಲೆ ನಂಬ್ರ ಏರ್ಪಡಿಸಿ ಅವರ ಪೈಕಿ ಮಮ್ಮೂಞ್ಞಿ ಮತ್ತು ಮಮ್ಮದೆ ಎಂಬ ಇಬ್ಬರಲ್ಲಿ ಪ್ರತಿ ಒಬ್ಬನಿಗೆ 6 ತಿಂಗಳ ಪ್ರಕಾರ ಕಠಿಣ ಸಜವನ್ನು ಇಲ್ಲಿಯ ಮೇಜಿಸ್ಟ್ರೇಟರು ವಿಧಿಸಿರುತ್ತಾರೆ.

ಮಹಾನುಭಾವರಾದ ಲಾಲಾ ಲಜಪತ ರಾಯರವರನ್ನೂ ಅಜಿತ ಸಿಂಗರನ್ನೂ ಸೆರೆಯಿಂದ ಬಿಡುಗಡೆ ಮಾಡಿದರೆಂಬ ವದಂತಿಯು ಕಾಸರಗೋಡಿಗೆ ತಲ್ಪುತ್ತಲೇ ಇಲ್ಲಿಯ ವ್ಯಾಪಾರಸ್ಥರ ಪೈಕಿ ಅಂದುಬ್ಯಾರಿ ಎಂಬವರು ತನ್ನ ಸಂತೋಷವನ್ನೂ ಸ್ವದೇಶಾಭಿಮಾನವನ್ನೂ ತೋರಿಸುವದಕ್ಕಾಗಿಯೂ ನಿರಪರಾಧಿಯಾದ ಮಹಾನುಭಾವರು ಲೋಕೋಪಕಾರಕ್ಕಾಗಿ ಸುಮಾರು 6 ತಿಂಗಳ ಪರಿಯಂತರ ಅಘೋರ ಶಿಕ್ಷೆಗೆ ಒಳಪಟ್ಟ ನಂತರ ನಮ್ಮ ಸಂಗಡ ಪುನಃ ಸೇರುವ ಸಮಯವನ್ನು ಅವರಿಗೆ ಭಗವಂತನು ದಯಪಾಲಿಸಿದ್ದಕ್ಕಾಗಿಯೂ ಊರಿನವರಿಗೆ 4 ಮೂಡೆ ಮಿಠಾಯಿಯನ್ನು ಬಹಳ ಸಂತೋಷದಿಂದ ಹಂಚಿದರು. ಸ್ವದೇಶಾಭಿಮಾನವೂ ಸಹೋದರ ಪ್ರೀತಿಯೂ ಇಂಥಾ ಚಿಕ್ಕ ಚಿಕ್ಕ ಸಂಗತಿಗಳಲ್ಲಿ ಕೂಡಾ ಎಷ್ಟರ ಮಟ್ಟಿಗೆ ತಲೆದೋರುತ್ತದೆಂಬದು ಮೇಲಿನ ಕೃತ್ಯದಿಂದ ಸ್ಪಷ್ಟವಾಗುವದು.

ಇದೇ ತಿಂಗಳ 9ನೇ ತಾರೀಖಿಗೆ ತಾಲೂಕು ಬೋರ್ಡ ಸಭೆಯು ಕಾಸರಗೋಡು ತಾಲೂಕು ಕಚೇರಿಯಲ್ಲಿ ಜರಗಿತು. ಪುತ್ತೂರು ಡಿವಿಜನ್ ಡಿ ಕಲೆಕ್ಟರ್ ಮ॥ ರಾ॥ ರಾ॥ ರಾಮರಾಯರವರು ಅಗ್ರಾಸನರಾಗಿದ್ದರು. ಈ ಸಭೆಯಲ್ಲಿ ಚರ್ಚಿಸಲಿಕ್ಕಿದ್ದ ಅನೇಕ ಸಂಗತಿಗಳಲ್ಲಿ ಇಲ್ಲಿಯ ಲವರ್ ಸೆಕೆಂಡರಿ ಶಾಲೆ ಕುರಿತು ಒಂದು ವಿಶೇಷ ಸಂಗತಿಯು ಚರ್ಚಿಸಲ್ಪಟ್ಟಿತು. ಅದು ಯಾವದಂದರೆ— ಈಗಿನ ವಿದ್ಯಾ ಇಲಾಖೆಯ ರೂಲುಗಳ ಪ್ರಕಾರ ಇಲ್ಲಿಯ ಲವರ ಸೆಕೆಂಡರಿ ಶಾಲೆಯನ್ನು ಸೆಕೆಂಡರಿ ಶಾಲೆಯಾಗಿ ಮಾಡುವದು ಆಗತ್ಯವೋ ಹಾಗೆ ಮಾಡುವದಾದರೆ ಅದರಿಂದ ಲಭಿಸುವ ಹಣವು ರೂಲಿಗೆ ಸರಿಯಾಗಿ ಸದರಿ ಶಾಲೆಯನ್ನು ನಡಿಸಲಿಕ್ಕೆ ಸಾಕಾಗುವದೋ? ಅಥವಾ ಅದನ್ನು ಎಲಿಮೆಂಟರಿ ಶಾಲೆಯಾಗಿ ಮಾಡ ಬಹುದೋ ಎಂಬೀ ಮುಂತಾದ ಚರ್ಚೆಗಳು. ಸಭೆಯಲ್ಲಿ ಕೂಡಿದ್ದ ಮೆಂಬರರ ಪೈಕಿ ಶಾಲಾ ಸಬ್ ಅಸಿಸ್ಟಾಂಟರಾದ ಪಿ. ಮಂಗೇಶರಾಯರವರು ಸೆಕೆಂಡರಿ ಶಾಲೆಗೂ ಎಲಿಮೆಂಟರಿ ಶಾಲೆಗೂ ಇರುವ ತಾರತಮ್ಯವನ್ನೂ ಮೇಲೆ ಪ್ರಸ್ತಾಪಿಸಿದ 2 ತರದ ಶಾಲೆಯಿಂದ ಹುಡುಗರಿಗುಂಟಾಗುವ ಬಾಧಕ ಸಾಧಕವನ್ನೂ ವಿವರಿಸಿ ತಿಳಿಸಿದರು. ನಂತರ ಹೆಚ್ಚು ಆಲೋಚನೆಯಿಂದ ಸದ್ರಿ ಲವರ್ ಸೆಕೆಂಡರಿ ಶಾಲೆಯು ಈಗ ಇರುವಂತೆಯೇ ಸೆಕೆಂಡರಿ ಶಾಲೆಯಾಗಿ ಮಂಗಳೂರು ಗವರ್ನಮೆಂಟ ಶಾಲೆಗೆ ಒಂದು ಶಾಖೆಯಾಗ ಬೇಕೆಂದೂ ಅದರಲ್ಲಿರುವ 3ನೇ ದರ್ಜೆಯ ಕ್ಲಾಸನ್ನು ತೆಗಿಯ ಬೇಕೆಂದೂ 4ನೇ ದರ್ಜೆಯನ್ನು ಕಲಿಸುವರೆ ಮೆಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದವರನ್ನು ಉಪಾಧ್ಯಾಯರನ್ನಾಗಿ ನೇಮಕ ಮಾಡಬೇಕೆಂದೂ ತೀರ್ಮಾನವಾಯಿತು. ಈಗಿನ ವಿದ್ಯಾ ಇಲಾಖೆಯ ರೂಲುಗಳನ್ನು ಚನ್ನಾಗಿ ಪರಿಶೋಧಿಸಿದರೆ ಸಾಧಾರಣ ತರದ ಜನರ ಮಕ್ಕಳಿಗೆ ಇನ್ನು ಮುಂದೆ ವಿದ್ಯೆಯು ಶೂನ್ಯವೆಂತ ಹೇಳಲೇ ಬೇಕು.

ಕುಂಬಡಾಜೆ ಗ್ರಾಮದಲ್ಲಿ ಕಳೆದ ತಿಂಗಳಲ್ಲಿ ಬ್ಯಬ್ಬ ಬದ್ದ ಕುಂಞಿ ಎಂಬ ಮಾಪಿಳ್ಳೆಯನ್ನು ಕೊಂದ ನಂಬ್ರದಲ್ಲಿ ಮುದ್ದೈಲೆಂದ ಕೆಲವು ಜಂಟರನ್ನೂ ಆ ಪೈಕಿ ಒಂದು ಹೆಂಗಸನ್ನೂ ಡಿಸ್ಟ್ರಿಕ್ಟ ಮೇಜಿಸ್ಟ್ರೇಟರು ಸೆಶ್ಶನ್ ಕೋರ್ಟಿಗೆ ಕಮಿಟ್ಟು ಮಾಡಿರುತ್ತಾರೆ.

ಕಾಸರಗೋಡು ತಾಲೂಕಿನಲ್ಲಿ ಕೊಲರಾ ರೋಗ ಪ್ರವೇಶಿಸಿ ಸುಮಾರು ಸಮಯವಾಯಿತು. ಹಿಂತಿರುಗಿ ಬಿಟ್ಟ ಅದಕ್ಕೆ ಮತ್ತಷ್ಟು ಬಲ ಕಾಣುತ್ತದೆ. ಆದರೂ ಅದನ್ನು ಗುಣಪಡಿಸುವ ಮಾಡುವ ಬಗ್ಗೆ ಇಲ್ಲಿಯ ವೈದ್ಯ ಉದ್ಯೋಗಸ್ಥರೂ ಸೆನಿಟರಿ ಇನ್ಸಪೆಕ್ಟರರೂ ಹೆಚ್ಚು ಶ್ರದ್ಧೆಯಲ್ಲಿರುತ್ತಾರೆ.

ಇದೇ ದಶಂಬರ 1ರ ಲಾಗಾಯಿತು 12ರ ವರೆಗೆ ಕೊಲೆರಾ ರೋಗವು ತಗಲಿದ 61 ಜನರ ಪೈಕಿ 45 ಜನರು ಇಲ್ಲಿಯ ಅನೇಕ ಗ್ರಾಮಗಳಲ್ಲಿ ಈ ಸಾಂಕ್ರಾಮಿಕ ರೋಗಕ್ಕೆ ತುತ್ತಾದರು.

ಕೆಲವು ತಿಂಗಳ ಹಿಂದೆ ಮಂಗಳೂರು ಫೋರೆಸ್ಟ್ ಆಫೀಸಿಗೆ ತಲ್ಪಿಸತಕ್ಕ ಕೆಲವು ಕಟ್ಟುಗಳು ಕಾಸರಗೋಡು ರೈಲ್ವೆ ಸ್ಟೇಶನಿಗೆ ಬಂದು ತಲ್ಪಿದವು. ಅವುಗಳನ್ನು ಕಾಸರಗೋಡು ತಾಲೂಕು ಕಚೇರಿಯಿಂದ ರೈಲ್ವೆ ಹಣವನ್ನು ಕೊಟ್ಟು ಪಡಕೊಂಡು ಮಂಗಳೂರು ಫೋರೆಸ್ಟ್ ಆಫೀಸಿಗೆ ರವಾನಿಸಬೇಕಿತ್ತು. ಆದರೆ ಆ ಸಮಯದಲ್ಲಿ ಗವರ್ನ್‌ಮೆಂಟ ಶಿಲ್ಕಿನಲ್ಲಿ ಹಣ ಇಲ್ಲದ್ದರಿಂದ ಆ ಕಟ್ಟುಗಳು ರೈಲ್ವೆ ಸ್ಟೇಶನಿನಲ್ಲೆ ಉಳಿದವು. ಕೆಲವು ದಿವಸಗಳು ದಾಟಿದ ನಂತರವಾದರೂ ಶಿರಸ್ತೆದಾರ ಯಾನೆ ಹೆಡ್ ಎಕೌಂಟೆಂಟರು ಅದಕ್ಕೆ ಬೇಕಾದ ಹಣವನ್ನು ಬೀಲು ಮಾಡಿ ಖಜಾನೆಯಿಂದ ತೆಗೆದು ಆ ಕಟ್ಟುಗಳನ್ನು ಮಂಗಳೂರಿಗೆ ರವಾನಿಸುವ ವಿಲೆವಾರಿ ಮಾಡುವದರ ಬದಲಿಗೆ ಅನೇಕ ಕಾಲದವರೆಗೆ ಆ ಕಟ್ಟುಗಳನ್ನು ಪಡಕೊಳ್ಳದೆ ಸ್ಟೇಶನಿನಲ್ಲೆ ಇರಗೊಡಿಸಿದ್ದರಿಂದ ಸುಮಾರು ೧೫ ರೂಪಾಯಿ ಹೆಚ್ಚಿಗೆ ಹಣ ಕೊಟ್ಟು ಆ ಕಟ್ಟುಗಳನ್ನು ಪಡಕೊಳ್ಳಬೇಕಾಯಿತು. ಸದರಿ ಜಾಸ್ತಿಯಾಗಿ ಕೊಟ್ಟ ಹಣವನ್ನು ರವಾನಿಸುವಬಗ್ಗೆ ಮಂಗಳೂರು ಫೋರೆಸ್ಟ್ ಆಫೀಸಿಗೆ ಕಾಗದ ಬರದ್ದಲ್ಲಿ ಆ ಹಣವನ್ನು ಅಸಡ್ಡೆ ತೋರಿಸಿದವರಿಂದ ವಸೂಲು ಮಾಡಬೇಕೆಂದಾದ್ದರಿಂದ ನಿರಪರಾಧಿಗಳಾದ 2 ಜನ ಕ್ಲಾರ್ಕರವರ 3 ತಿಂಗಳ ತಲಬಿನಿಂದ ಆ ಹಣವನ್ನು (೧೫ ೦.೦) ಭರ್ತಿ ಮಾಡುವ ಬಗ್ಗೆ ಕಳೆದು ಬಾಕಿ ತಲಬನ್ನು ಪಡಕೊಳ್ಳಬೇಕೆಂಬದಾಗಿ ತಹಶಿಲದಾರರು ಹೇಳಿರುವದರಿಂದ ಆ 2 ಜನ ಗುಮಾಸ್ತರು ತಮ್ಮ ತಲಬನ್ನು ಪಡಕೊಳ್ಳದೆ ನಿರಪರಾಧಿಯಾದ ನಮಗೆ ಊರಲ್ಲಿ ಎಲ್ಲಾ ತರದ ಆಹಾರ ಪದಾರ್ಥಗಳ ಧಾರಣೆಯು ಹೆಚ್ಚು ಇರುವಾಗ್ಯೆ ಈ ತರದ ಕಷ್ಟವನ್ನು ತಹಶಿಲದಾರರು ನಮಗೆ ಕೊಡುವದು ಸರಿಯಲ್ಲವೆಂತಲೂ ನಾವು ಆ ಕಟ್ಟುಗಳ ಕುರಿತು ಪದೇ ಪದೇ ಶಿರಸ್ತೆದಾರರಿಗೆ ಸೂಚಿಸುತ್ತಾ ಇದ್ದಾಗ್ಯೂ ಕೂಡಾ ಹಣ ವದಗಿಸಿಕೊಡದ್ದರಿಂದ ಈ ನಷ್ಟಕ್ಕೆ ನಾವು ಬಾಧ್ಯರಲ್ಲವೆಂತಲೂ ನಮ್ಮನ್ನು ಈ ಕಷ್ಟದಿಂದ ನಿವಾರಣೆ ಮಾಡಬೇಕೆಂತಲೂ ದಯಾಶಾಲಿಯಾದ ಡಿಪ್ಯುಟಿ ಕಲೆಕ್ಟರವರಿಗೆ ಹೇಳಿಕೊಂಡಲ್ಲಿ ನಿಮ್ಮ ಅರ್ಜಿಯನ್ನು ತನ್ನಿರಿ, ತಕ್ಕ ನಿವೃತ್ತಿಯನ್ನು ಮಾಡುತ್ತೇನೆಂದಾಗಿ ಡಿಪ್ಯುಟಿ ಕಲೆಕ್ಟರವರು ಈ 2 ಜನ ಗುಮಾಸ್ತರರಿಗೆ ಅಭಯವನ್ನು ದಯಪಾಲಿಸಿದ್ದಾರಂತೆ.

ಕಾಸರಗೋಡಿನ ಸಬ್ ರಿಜಿಸ್ಟ್ರಾರರು ಮ॥ ರಾ॥ ರಾ॥ ಸಿ. ರಾಮಕೃಷ್ಣಯ್ಯನವರು ಮಂಗಳೂರು ಡಿಸ್ಟ್ರಿಕ್ಟ ರಿಜಿಸ್ಟ್ರಾರಾಗಿ ಬದ್ಲಿಗೆ ನೇಮಕಪಟ್ಟು ಹೋದ್ದರಿಂದ ಸುಮಾರು ಬಾರದು ವಾರದಿಂದ ಇಲ್ಲಿಯ ರಿಜಿಸ್ಟ್ರಿ ಆಫೀಸಿನಲ್ಲಿ ಹೆಡ್ ಕ್ಲಾರ್ಕರೇ ರಿಜಿಸ್ಟ್ರಾರರ ಕೆಲಸವನ್ನು ಮಾಡುತ್ತಾ ಇದ್ದಾರೆ. ಇಲ್ಲಿಗೆ ಯಾರು ರಿಜಿಸ್ಟ್ರಾರರು ಬರುವರೆಂಬದು

ಯಾವಾದರೂ ಹಿಂದು ಗ್ರಹಸ್ಥರು ವಿವಾಹ ಮೊದಲಾದ ಕಾರ್ಯಗಳಲ್ಲಿ ನಿರ್ವಹಿಸುವ ವೇಳ್ಯದಲ್ಲಿ ಮೇಳದವರನ್ನು ಕರಿಸಿ ನಾಟ್ಯವಾಡಿಸುವದಾದರೆ ಅಂಥಾ ಸಭೆಗೆ ಇಂಗ್ಲಿಷ ದೊರೆಗಳೂ ದೊರೆಸಾನಿಗಳೂ ಹೋಗಬಾರದು. ಇಂಥದು ವೇಳ್ಯ ಆಮಂತ್ರಣವನ್ನು ಸ್ವೀಕರಿಸಿ ಹೋಗುವ ಪಕ್ಷಾಯಪಕ್ಷ್ವರೆ ಅಂಥಾ ಸಭೆಯಲ್ಲಿ ಇಂಗ್ಲಿಷ ದೊರೆಸಾನಿಗಳು ಕೂತುಕೊಳ್ಳದೆ, ಸಭೆಯ ಮುಂದೆ ಬಾರದೆ ಮನೆಯೊಳಗೆ ಕೂತುಕೊಳ್ಳುವ ಹಿಂದು ಕುಲ ಸ್ತ್ರೀಯರೊಡನೆ ಕೂತುಕೊಳ್ಳಬೇಕು ಎಂತ ಕ್ರಿಸ್ಚನ್ ವಿಮೆನ್ ವರ್ಕರ್ಸ್ ಯುನಿಯನ್ ಎಂಬ ಪರೋಪಕಾರದ ಕಾರ್ಯಗಳನ್ನು ಮಾಡುವ ಸ್ತ್ರೀಯರ ಕಡೆಯಿಂದ ಕೆಲವು ಇಂಗ್ಲಿಷ ದೊರೆಸಾನಿಗಳು ಸಭೆಕೂಡಿ ಮಾಡಿದ ನಿರ್ಣಯವನ್ನು ಎಲ್ಲಾ ವರ್ತಮಾನ ಪತ್ರಕರ್ತರಿಗೆ ತಿಳಿಸಿರುತ್ತಾರೆ.

"೩೦ ಶತಮಾನಗಳಿಂದ ಹಿಂದು ಜನರು ಮಾಡಿದ ವೃದ್ಧಿಯಾವದು? ೨೯,೪೦,೦೦,೦೦೦, ಜನಸಂಖ್ಯೆ ಇರುವ ನಮ್ಮ ಹಿಂದುಸ್ಥಾನದಲ್ಲಿ ೨೪೬,೦೦೦,೦೦೦ ಜನರು ಓದಲಿಕ್ಕೂ ಬರಿಯಲಿಕ್ಕೂ ಅರಿಯದ ಮೂಢರಾಗಿರುತ್ತಾರೆ ೪೦೦೦೦೦೦೦ ಸ್ತ್ರೀಯರು ಗೋಷಾ ಹೆಂಗಸರಾಗಿ ಮನೆ ಒಳಗನೇ ಬಂಧನೆಯಲ್ಲಿರುವಂಥವರು. ೨೬೦೦೦೦೦೦ ಸ್ತ್ರೀಯರು ವಿಧವೆಗಳಾಗಿರುತ್ತಾರೆ ೧೪ ವರುಷದ ಒಳಗಿನ ಪ್ರಾಯದ ವಿಧವೆಯರು ೬೦೦೦೦೦ ಇರುತ್ತಾರೆ ೧೦ ವರುಷ ಪ್ರಾಯವಾಗದ ಪರಂತು ವಿವಾಹವಾದ ಹೆಣ್ಣು ಮಕ್ಕಳು ೨೫೦೦೦೦೦ ಇರುತ್ತಾರೆ. ೧೪ ವಯಸ್ಸದ ಒಳಗಿನ ಪ್ರಾಯದ ವಿಧವೆಯರು ೨೫೦೦೦೦ ಇರುತ್ತಾರೆ ೪ ವರುಷದ ಒಳಗಿನ ಪ್ರಾಯದ ವಿಧವೆಯರು ೧೪೦೦೦ ಇರುತ್ತಾರೆ. ೫೦,೦೦೦,೦೦೦ ನಿವಾಸಿಗಳು ಮುಟ್ಟಕೂಡದ ಹೊಲೆಯರಾಗಿರುತ್ತಾರೆ ಅಹಾ," ಎಂತ ಒಬ್ಬ ಗ್ರಹಸ್ಥನು ಎಪಿಫಾನಿ ಎಂಬ ಪತ್ರಕರ್ತರಿಗೆ ಪ್ರಶ್ನೆ ಕೇಳಿರುತ್ತಾನೆ.

ದಕ್ಷಿಣ ಹಿಂದುಸ್ಥಾನ.

ಸರ್. ಎಸ್. ಸುಬ್ರಮಣ್ಯಯ್ಯರವರನ್ನು ಥಿಯೊಸೊಫಿಕಲ್ ಸೊಸೈಟಿ ಯಾ ಬ್ರಹ್ಮಜ್ಞಾನ ಸಂಘದ, ವೈಸ್ ಪ್ರೆಸಿಡೆಂಟರಾಗಿ ನೇಮಿಸಿರುವರು.

ಕರ್ನಲ್ ಒಲ್ಕೊಟರವರ ಮತ್ತು ಮೆ ಡಾಮ್ ಬ್ಲವಾಟ್ಸ್ಕೆಯವರ ಪ್ರತಿಮೆಗಳನ್ನು ಈ ತಿಂಗಳ ತಾರೀಕು 7ರಲ್ಲಿ ಮದ್ರಾಸ್ ಅಡ್ಯಾರದಲ್ಲಿ ಪ್ರತಿಷ್ಠೆ ಮಾಡಿದರು.

ಮದ್ರಾಸು ಮಹಾ ಜನ ಸಭೆಯವರು ಬರುವ ಕೊಂಗ್ರೆಸು ಸಭೆಗೆ ನಮ್ಮ ಜಿಲ್ಲೆಯಿಂದ ರಾವ್ ಸಾಹೇಬ ನ. ಸುಬ್ಬರಾವರನ್ನೂ, ರಾ| ಜಿ. ಅಣ್ಣಾಜಿರಾಯರನ್ನೂ, ರಾ| ಕೆ, ನಾರಾಯಣ ರಾಯರನ್ನೂ ಪ್ರತಿನಿಧಿಗಳಾಗಿ ಆರಿಸಿರುವರು.

ದಕ್ಷಿಣ ಕನ್ನಡ

ಚಂದಾದಾರರಿಗೆ ನೋಟೀಸು. ನಮ್ಮ ಪ್ರಥಮ ಸಂಚಿಕೆಯಿಂದ ಚಂದಾದಾರರಾದವರ ಚಂದಾಹಣವು ಈ ತಿಂಗಳಲ್ಲಿ ಸಮಾಪ್ತವಾಗುವದು. ಬರುವ ವರುಷದ ಚಂದಾಹಣವನ್ನು ಮುಂಗಡವಾಗಿ ಮುಟ್ಟಿಸ ಬೇಕಾಗಿ ಅಪೇಕ್ಷಿಸುತ್ತೇವೆ. ವಿ. ಪಿ. ದ್ವಾರಾ ಕಳುಹಿಸಬೇಕೆನ್ನುವವರು ಆ ರೀತಿ ಬರದ್ದಲ್ಲಿ ಬರುವ ವರ್ಷದ ಪ್ರಥಮ ಸಂಚಿಕೆಯನ್ನು ಚಂದಾಹಣಕ್ಕೋಸ್ಕರ ವಿ. ಪಿ. ದ್ವಾರಾ ರವಾನಿಸುವೆವು.

ಮ್ಯಾನೇಜರ್, ಸ್ವದೇಶಾಭಿಮಾನಿ.

ಮಂಗಳೂರು: ಒಂದು ತಿಂಗಳಿಂದ ಪ್ಲೇಗು ಮರಣಗಳಿಲ್ಲದ ಕಾರಣ, ಮಂಗಳೂರು ಪ್ಲೇಗಿನ ಬಾಧೆಯಿಂದ ವಿರಹಿತವಾಗಿರುವದೆಂದು ಸದ್ಯದಲ್ಲಿ ಪ್ರಕಟಿಸುವ ಸಂಭವವಿರುವದು.

ಪಾಸುಪೋರ್ಟು ನಿಬಂಧನೆಗಳನ್ನು ತೆಗದು ಹಾಕಬೇಕೆಂದು ಅನೇಕಜನ ಮಂಗಳೂರು ನಿವಾಸಿಕರು ಒಂದು ಬಿನ್ನವತ್ತಳಿಕೆಯನ್ನು ಕಲೆಕ್ಟರ ದೊರೆಗಳಿಗೆ ಮಾಡುವಂತಾಗಿ ತಿಳಿದುಬರುತ್ತದೆ.

ಕಾಸರಗೋಡು ತಾಲೂಕಿನ ಬರುವ ಫಸಲಿ ಜಮಾಬಂದಿಯನ್ನು ಕಲೆಕ್ಟರವರು ಸ್ವತಹಾ ನಡಿಸುವರು ಮಂಜೇಶ್ವರದಲ್ಲಿ ಜನವರಿ ತಾ. 20–25, ಕುಂಬಳೆ ಜನವರಿ 27–ಫೆಬ್ರವರಿ ತಾ 2; ಕಾಸರಗೋಡು, 3–8; ಹೊಸದುರ್ಗ, ತಾ. 10–15, ಉದೆನೂರ, 17–19, ಈ ರೀತಿ ಜಮಾಬಂದಿಯು ನಡಿಸಲ್ಪಡುವದು

ಈ ತಿಂಗಳ ತಾ 7 ರಾತ್ರೆ ಬೊಂಗರಕೇರಿಯಲ್ಲಿರುವ ವಾಣಿಯವರ ದೇವಸ್ಥಾನದಲ್ಲಿ ಕೆಲವು ಕಳ್ಳರು ಚೋರಿ ಮಾಡಲು ಪ್ರಯತ್ನಿಸಿದರು ದೇವಸ್ಥಾನದ ಪಹರೆಯವನು ಎಚ್ಚತ್ತದ್ದರಿಂದ ಇವರ ಪ್ರಯತ್ನಗಳು ನಿಷ್ಫಲವಾದವು.

ಈ ತಿಂಗಳ ತಾ 3ಕ್ಕೆ ಒಬ್ಬ ಯುರೋಪಿಯ ತಿರುಕನಿಯು ಇಲ್ಲಿಗೆ ಒಂದು ಕೈಯಲ್ಲಿ ಕಾಸಿಲ್ಲದವನಾಗಿ ಹೆಡ್ ಕ್ವಾರ್ಟರ್ಸ್ ಡಿಪ್ಯುಟಿ ಕಲೆಕ್ಟರವರಿಗೆ ಅರ್ಜಿಮಾಡಲು ಅತನ ಊಟದ ಖರ್ಚಿಗೆ ಎಂಟಾಣೆಯನ್ನೂ ಕಣ್ಣಾನೂರಿಗೆ ಹೋಗುವರೆ ಬಾಂಡಿ ಖರ್ಚಿಗೆ ನಾಲ್ಕು ರೂಪಾಯಿಯನ್ನೂ ಕೊಟ್ಟಿರುವರು

ನಮ್ಮಲ್ಲಿ ಡಿಸ್ಟ್ರಿಕ್ಟ ರಿಜಿಸ್ತ್ರಾರಾಗಿದ್ದ ಚಂದ್ರನ್‌ರವರು ಎರಡು ತಿಂಗಳ ಬಗ್ಯೆ ಮಲಬಾರಿಗೆ ವರ್ಗಾಯಿಸಲ್ಪಟ್ಟಿರುವರು ರಾ| ಪಿ. ರಾಮಕೃಷ್ಣರಾಯರು. ಇವರ ಚಾರ್ಜನ್ನು ವಹಿಸಿಕೊಂಡಿರುವರು. ಚಂದ್ರನವರು ಇಲ್ಲಿಗೆನೇ ತಿರಿಗಿ ಬರುವ ಸಂಭವವಿಲ್ಲವೆಂತಲೂ ರಾ| ಮುಕುಂದರಾಯರು ಇಲ್ಲಿಯ ಡಿಸ್ಟ್ರಿಕ್ಟ್ ರಿಜಿಸ್ತ್ರಾರರಾಗಿ ನೇಮಕವಾಗುವರೆಂತಲೂ ವರ್ತಮಾನವಿರುವದು ರಾ| ರಾಮಕೃಷ್ಣರಾಯರು ಸರ್ಕಿಟಿನ ಮೇಲೆ ಹೋಗಿರುವದರಿಂದ ರಾ| ನ| ದೇವರಾಯರು ಈಗ ಮಂಗಳೂರಲ್ಲಿ ಡಿಸ್ಟ್ರಿಕ್ಟ್ ರಿಜಿಸ್ತ್ರಾರರವರ ಚಾರ್ಜ ವಹಿಸಿಕೊಂಡಿರುವರು.

ಈ ತಿಂಗಳತಾರೀಕು 7ರಲ್ಲಿ ಎಸ್ಸೆಸರರ ಮತ್ತು ಜೂರಿಯವರ ಪಟ್ಟಿಯು ಡಿಸ್ಟ್ರಿಕ್ಟ್ ಕಲೆಕ್ಟರವರಿಂದಲೂ ಜಡ್ಜರವರಿಂದಲೂ ತಿದ್ದುಪಡಿಮಾಡಲ್ಪಟ್ಟಿತು. ಕಲೆಕ್ಟರವರು ಮದ್ರಾಸಿನಿಂದ 6ನೇ ತಾರೀಕಿಗೆ ಬಂದು ತಲ್ಪಿದ್ದರಿಂದ ಇದನ್ನು ಕ್ಲುಪ್ತ ಸಮಯದಲ್ಲಿ ಮಾಡಲಿಕ್ಕಾಗದೆ ತಾ 7ರಲ್ಲಿ ನೆರವೇರಿಸಿದರು

ನಮ್ಮ ಜಿಲ್ಲೆಗೆ ಮಾಜಿ ಕಲೆಕ್ಟರಾಗಿದ್ದ ಮೀ| ಡಾನ್ಸ್‌ದೊರೆಗಳು ಬರುವ ತಿಂಗಳ ತಾ. 3ಕ್ಕೆ ಪೆನ್ಶನ್ ತೆಗದುಕೊಳ್ಳುವರು

ಇಲ್ಲಿ ಕಲೆಕ್ಟರರಾಗಿದ್ದ ಮೀ. ರೋಬರ್ಟಸನ್ ದೊರೆಗಳು ಸೇಲಮಿನಲ್ಲಿ ತಮ್ಮ ಬಂಗಲೆಯ ತೋಟದಲ್ಲಿ ಹುಲಿಗಳನ್ನು ಮರಕ್ಕೆ ಕಟ್ಟಿ ಹಾಕಿ ಸಾಕುತ್ತಿದ್ದರು. ಕಲೆಕ್ಟರ ದೊರೆಗಳ ಸಂದರ್ಶನೆಗೆ ಹೋಗುವದು ಅತಿ ದುರ್ಲಭವಾಗಿತ್ತು. ದೊರೆಗಳು ಯಾವಾಗಲೂ ಏಕಾಂತ ವಾಸ ವೃತವನ್ನೇ ಅವಲಂಭಿಸಿ ಈ ಹುಲಿಗಳನ್ನು ಸಾಕಿದ್ದರೆಂತ ತಿಳಿದು ಬರುತ್ತದೆ. ಹ್ಯಾಗೂ ಬಂಗ್ಲೆಯ ತೋಟದಲ್ಲಿ ಕಡ್ಡಿಗಳನ್ನು ಹೆಕ್ಕಲಿಕ್ಕೆ ಬಂದ ಬಡ ಹೆಂಗಸರಿಬ್ಬರು ಈ ಹುಲಿಗಳಿಗೆ ಆಹುತಿಯಾದರು. ಹುಲಿಗಳನ್ನು ಕ್ರಮೇಣ ಗುಂಡು ಹಾಕಿ ಕೊಂದಿರುವರೆಂದು ತಿಳದು ಬರುತ್ತದೆ.

ಊರಿನಲ್ಲೆಲ್ಲಿಯೂ ಪ್ಲೇಗಿಲ್ಲದ ಕಾರಣ ಪ್ಲೇಗಿನ ಶಿಬಂದಿಯವರು ಕೊಲೇರಾ ನಿವಾರಣೆಯ ಕೆಲಸವನ್ನು ಮಾಡುತ್ತಿರುವರು.

ಅಮಿನ ದೀವಿಗೆ ಹೋಗಿ ಡ್ಯೊಗ್ ದೊರೆಗಳವರು ಇಲ್ಲಿಗೆ ಬಂದು ತಲ್ಪಿರುವರು. ಈ ಹೊತ್ತು ನಾಳೆಯೊಳಗೆ ಕುಂದಾಪುರ ಡಿವಿಜನಿನ ಚಾರ್ಜನ್ನು ವಹಿಸಿಕೊಳ್ಳುವರು.

ರಾ| ಪಿ. ನಾರಾಯಣ ಮೇನನರು ಕ್ರಿಸ್ತಮಸ್ ರಜೆಯೊಂದಿಗೆ ೧೫ ದಿವಸಗಳ ರಜೆಯ ಮೇಲೆ ಹೋಗುವರೆಂದೂ ರಾ| ರಗಡೆ ರಾಮರಾಯರು ಇವರ ಗೈರಹಾಜರಿನಲ್ಲಿ ಮಂಗಳೂರು ಡಿವಿಜನಿನ ಚಾರ್ಜು ವಹಿಸಿಕೊಳ್ಳುವರಾಗಿಯೂ ವರ್ತಮಾನವಿರುವದು.

ಕಳದ ತಾ 14ರಲ್ಲಿ ಕೆನರಾ ಗರ್ಲ್ ಯಾ ಹುಡುಗಿಯರ ಶಾಲೆಯಲ್ಲಿ. ಪರೀಕ್ಷೆಗಳಲ್ಲಿ ಉತ್ತೀರ್ಣರಾದ ಹುಡುಗಿಯರೆಲ್ಲರಿಗೂ ಇನಾಮು ಕೊಡಲ್ಪಟ್ಟಿತು. ರಾವ ಸಾಹೇಬ ನ. ಸುಬ್ರಾಯರ ಧರ್ಮಪತ್ನಿಯರು ಈ ಸಂದರ್ಭದಲ್ಲಿ ಅಗ್ರಾಸನವನ್ನು ವಹಿಸಿದ್ದರು.

ನಿನ್ನೆ ದಿನ ಬೆಳಗ್ಯೆ ಇಲ್ಲಿಯ ಡಿಸ್ಟ್ರಿಕ್ಟ್ ಜೈಲಿನಲ್ಲಿ ರಿಮಾಂಡಿನಲ್ಲಿದ್ದ 8 ಜನ ಬಂದಿವಾನರನ್ನು ಮುಖ ಕೈಕಾಲುಗಳನ್ನು ತೊಳಿಯುವ ಬಗ್ಯೆ ಹೊರಗೆ ತಂದು ತಿರುಗಿ ರಿಮಾಂಡ್ ಕೋಣೆಗೆ ತಕ್ಕೊಂಡು ಹೋಗುವಾಗ್ಯೆ ಅವರಲ್ಲಿ ಒಬ್ಬನು ಪಲಾಯಿಯಾದನು ಪೋಲೀಸಿನವರು ಅವನನ್ನು ಹಿಂಬಾಲಿಸಿ ಇಲ್ಲಿಯೇ ಸಮೀಪವಿರುವ ಅಳ್ಕೆಕಟ್ಟೆಯಬಳಿಯಲ್ಲಿ ಹಿಡಿದು ದಸ್ತಗಿರಿ ಮಾಡಿ ಜೈಲಿಗೆ ನೈದರು.

ಕಳದ ತಿಂಗಳ ತಾ. 9ರಲ್ಲು ಮಂಗಳೂರು ಗವರ್ನಮೆಂಟು ಕೊಲೇಜಿನಲ್ಲಿ ಪ್ರೊಫೆಸರ ಬೊಬ್ಬಿಯವರ ಬಯಸ್ಕೋಪು ಎಂಬ ನವೀನ ಯಂತ್ರದಿಂದ ರುಶ್ಯ ಜಪಾನ ಯುದ್ಧದ ದೇಖಾವೆಗಳು ಪ್ರದರ್ಶಿಸಲ್ಪಟ್ಟವು.

ಈ ದಿನ ಡಿಸ್ಟ್ರಿಕ್ಟ ಬೋರ್ಡ್ ಮೆಂಬರರ ಮೀಟಿಂಗ್ ಇರುವದು. ಕಳದ ತಾ. 14ರಲ್ಲಿ ತಾಲೂಕು ಬೋರ್ಡು ಮೆಂಬರರ ಸಭೆ ಕೂಡಿತು. ಪ್ರೆಸಿಡೆಂಟರೂ ವೈಸ್ ಪ್ರೆಸಿಡೆಂಟರೂ ಇಲ್ಲದ ಕಾರಣ ಮೆಂಬರರ ಪೈಕಿ ಸುರತ್ಕಲ್ ಪಾದ್ರಿಗಳಾದ ಫಾದರ್ ಕೊಹಿಲೊ ಎಂಬವರನ್ನು ಪ್ರೆಸಿಡೆಂಟರಾಗಿ ಚುನಾಯಿಸಿದ್ದರು.

ಮ. ರಾ. ರಾ. ಬಿ. ಸುಬ್ಬಯ್ಯ ಶೆಟ್ರಿಯವರ ವಿದ್ಯಾರ್ಥಿವೇತನದ ಪ್ರಕಟನಾಪತ್ರವನ್ನೂ ರಾ|| ರಂಗರಾಯರು ಪಂಚಮರ ಶಾಲೆಯನ್ನು ತೆರೆಯಲ್ಪಟ್ಟ ಸಮಯದಲ್ಲಿ ಒದಿದ ಉಪನ್ಯಾಸವನ್ನೂ ಕೃತಜ್ಞತಾ ಪೂರ್ವಕ ಸ್ವೀಕರಿಸಿರುವೆವು. ಇವುಗಳನ್ನು ಬರುವ ಸಂಚಿಕೆಯಲ್ಲಿ ಪ್ರಕಟಿಸುವೆವು.

ಬಾತ್ಮೀದಾರರು ಕೊಡುವ ಅಭಿಪ್ರಾಯಕ್ಕೆ ನಾವು ಜವಾಬ್ದಾರರಲ್ಲ.

Ed.

ಹೊಸದುರ್ಗ. ಇಲ್ಲಿಯ ಆಸ್ಪತ್ರೆಯು ಇನ್ನೂ ತೆರೆಯಲ್ಪಡಲಿಲ್ಲ. ಮದ್ದುಗಳ ಅತೀ ಅಗತ್ಯವಿದ್ದವರು ಕಾಸರಗೋಡಿಗೆ ಹೋಗಿ ಅಲ್ಲಿಯ ದಯಾಶೀಲರಾದ ವೈದ್ಯ ಉದ್ಯೋಗಸ್ಥರಿಂದ ಸಹಾಯವನ್ನು ಪಡೆಯುತ್ತಾರೆ.

ಮೊಟ್ಟಮೊದಲು ಈ ಆಸ್ಪತ್ರೆಯ ಕೆಲಸವು ಒಂದು ಸಣ್ಣ ಸರಕಾರಿ ಕಟ್ಟೋಣದಲ್ಲಿ ನಡೆಯುತ್ತಿರುವದನ್ನು ನೋಡಿ, ಕೋಡೋತ್ತ ಜಮೀನದಾರ ಮಹಾರಾಜ ಶ್ರೀ ತಮ್ಮಾರ ನಾಯರರು ಮೂರು ನಾಲ್ಕು ಸಾವಿರ ರೂಪಾಯಿ ವೆಚ್ಚ ಮಾಡಿ ಒಂದು ಚೆಲೋ ಕಟ್ಟೋಣವನ್ನು ಕಟ್ಟಿಸಿ ಆಸ್ಪತ್ರೆಯ ಉಪಯೋಗಕ್ಕೆ ಕೊಟ್ಟರು. ತರುವಾಯ ವೈದ್ಯ ಉದ್ಯೋಗಸ್ಥರ ಬಿಡಾರವು ಆಸ್ಪತ್ರೆಯನ್ನು ಬಿಟ್ಟು ದೂರವಿದ್ದರೆ ಜನರಿಗೆ ತೊಂದರೆಯಾದೀತು ಎಂಬ ಭಾವನೆಯಿಂದ ಸರ್ವ ಜನರಿಗೆ ಅನುಕೂಲವಾಗುವಂತೆ ವೈದ್ಯ ಉದ್ಯೋಗಸ್ಥರಿಗೆ ಆಸ್ಪತ್ರೆಯ ಸಮೀಪವೇ ಮನೆ ಒದಗಿಸುವ ಬಗ್ಗೆ ಹಣ ಕೂಡಿಸಿ ಒಂದು ಯೋಗ್ಯ ಕಟ್ಟೋಣವನ್ನು ಕಟ್ಟಿಸುತ್ತಿದ್ದಾರೆ.

ಆಸ್ಪತ್ರೆಯ ಸಹಾಯವು ಸದಾ ಚೆಲೋ ರೀತಿಯಲ್ಲಿ ದೊರಕಬೇಕೆಂಬ ಇಚ್ಛೆಯಿಂದ ಅನಾನುಕೂಲತೆಗಳನ್ನು ತೊಲಗಿಸಲು ಜನರು ಎಷ್ಟು ಕಷ್ಟಪಟ್ಟರೂ ವೈದ್ಯ ಉದ್ಯೋಗಸ್ಥರನ್ನು ಬೇರೆ ಕೆಲಸದ ಮೇಲೆ ಕಳುಹಿಸಲ್ಪಟ್ಟರೆ ಜನರು ಮಾಡತಕ್ಕದ್ದೇನು? ಸರಕಾರದವರು ಹೊಸದುರ್ಗ ಆಸ್ಪತ್ರೆಗೆ ನೇಮಕವಾದ ವೈದ್ಯ ಉದ್ಯೋಗಸ್ಥರನ್ನು ಇಲ್ಲಿಯ ಆಸ್ಪತ್ರೆಯ ಕೆಲಸಕ್ಕೆನೇ ಹಚ್ಚುವರೆ ನಮ್ಮೆಲ್ಲರ ಪ್ರಾರ್ಥನೆಯಾಗಿರುತ್ತದೆ.

ವಾಂತಿಭೇದಿ ರೋಗವು ಎಲ್ಲೆಲ್ಲಿಯೂ ಹಬ್ಬಿ ವಳೆ ಮಾಡುತ್ತಾ ಇದೆ. ಜನರು ಬಹುಗ್ರಸ್ತರಾಗಿ ರಾತ್ರಿ ಸಮೀಪಿಸುತ್ತಲೇ ಮನೆಗಳನ್ನು ಸೇರುತ್ತಾರೆ. ಮೂರು ಹಳ್ಳಿಗಳಲ್ಲಿ ಸೈದಾಸ್ತ್ರ ಆಗುವ ನೇಂದ್ರಬಾಳೆ ಹಣ್ಣು ಮೊದಲಾದ ಫಲಗಳು ಹಳ್ಳಿಯೇ ಇರುತ್ತವೆ. ಸಾಮಾನುಗಳ ಕ್ರಯವು ಕಡಿಮೆ ಆಗುತ್ತಾ ಇದೆ. ಮುಂಚಿತವಾಗಿ ಭತ್ತ ಮೊದಲಾದವುಗಳಿಗೋಸ್ಕರ ಹಣಕೊಟ್ಟವರು ವಸೂಲಿಗೆ ಹೋಗಲೊಲ್ಲರು. ಈ ರೋಗವು ಜನರ ಹೆದರಿಕೆಯಿಂದಲೂ ಮೂಢತ್ವದಿಂದಲೂ ಭಯಂಕರ ರೂಪವನ್ನು ತಾಳುತ್ತದೆ. ಮಾಪಿಳೆಯವರು ಬೇರೆ ಯಾವದರಲ್ಲಿಯೂ ಯಾವ ಪ್ರಯತ್ನ ತೆಗೆದುಕೊಳ್ಳಲಾರದೆಯೂ ಪರಂಪರೆಗೆ ಹೀನರಾಗಿಯೂ ಸಾಯುತ್ತಾರೆ.

ಭತ್ತ ಅಕ್ಕಿಯ ಕ್ರಯವು ದಿನೇ ದಿನೇ ಏರುತ್ತಾ ಇದೆ. ಈಗಿನ ಸ್ಥಿತಿಯೇ ಈ ರೀತಿಯಾದರೆ ಮುಂದಿನ ಸ್ಥಿತಿ ಶ್ರೀ ದೇವರಿಗೆ ಗೋಚರ.

ಕಾಸರಗೋಡು, ತಾ 9-12-07.

ಕಾಸರಗೋಡಿಗೆ ಸುಮಾರು 2 ಮೈಲು ದೂರವಿರುವ ಕಾವು ಎಂಬ ಒಳಗ್ರಾಮದಲ್ಲಿ ಧರ್ಮ ಕೊಡುವದರಲ್ಲಿ ಕೀರ್ತಿಗೆ ಬಂದಿರುವ ವಾಸ್ತವ ಕಾವುಭಟ್ಟರ ಮನೆಗೆ ಕಳೆದ ತಿಂಗಳಲ್ಲಿ ಕಳ್ಳರು ನುಗ್ಗಿ ಹೆಚ್ಚು ಒಡವೆ ವಸ್ತುಗಳನ್ನೂ ಆಭರಣಗಳನ್ನೂ ಎತ್ತಿ ಹಾಕಿದ್ದರಷ್ಟೆ. ಸದರಿ ತೆಕ್ಷೀರು ನಡಿಸಿದ ಕಳ್ಳರನ್ನು ಇಲ್ಲಿಯ ಪೋಲೀಸ್ ಸಬ್ ಇನ್ಸ್‌ಪೆಕ್ಟರರು ಬಹಳ ಶ್ರಮಪಟ್ಟು ಪತ್ತೆಮಾಡಿ ಅವರ ಮೇಲೆ ನಂಬ್ರ ಏರ್ಪಡಿಸಿ ಅವರ ಪೈಕಿ ಮಮ್ಮೂಞ ಮತ್ತು ಮಮ್ಮಸೆ ಎಂಬ ಇಬ್ಬರಲ್ಲಿ ಪ್ರತಿ ಒಬ್ಬನಿಗೆ 6 ತಿಂಗಳ ಪ್ರಕಾರ ಕಠಿಣ ಸಜವನ್ನು ಇಲ್ಲಿಯ ಮೇಜಿಸ್ಟ್ರೇಟರು ವಿಧಿಸಿರುತ್ತಾರೆ.

ಮಹಾನುಭಾವರಾದ ಲಾಲಾ ಲಜಪತ್ ರಾಯರವರನ್ನೂ ಅಜಿತ ಸಿಂಗರನ್ನೂ ಸೆರೆಯಿಂದ ಬಿಡುಗಡೆ ಮಾಡಿದರೆಂಬ ವದಂತಿಯು ಕಾಸರಗೋಡಿಗೆ ತಲ್ಪುತ್ತಲೇ ಇಲ್ಲಿಯ ವ್ಯಾಪಾರಸ್ಥರ ಪೈಕಿ ಅಂದುಬ್ಯಾರಿ ಎಂಬವರು ತನ್ನ ಸಂತೋಷವನ್ನೂ ಸ್ವದೇಶಾಭಿಮಾನವನ್ನೂ ತೋರಿಸುವದಕ್ಕಾಗಿಯೂ ನಿರಪರಾಧಿಯಾದ ಮಹಾನುಭಾವರು ಲೋಕೋಪಕಾರಕ್ಕಾಗಿ ಸುಮಾರು 6 ತಿಂಗಳ ಪರಿಯಂತರ ಅಘೋರ ಶಿಕ್ಷೆಗೆ ಒಳಪಟ್ಟ ನಂತರ ನಮ್ಮ ಸಂಗಡ ಪುನಃ ಸೇರುವ ಸಮಯವನ್ನು ಅವರಿಗೆ ಭಗವಂತನು ದಯಪಾಲಿಸಿದ್ದಕ್ಕಾಗಿಯೂ ಊರಿನವರಿಗೆ 4 ಮುಡಿ ಅಕ್ಕಿ ದಾನವನ್ನು ಬಹಳ ಸಂತೋಷದಿಂದ ಹಂಚಿದರು. ಸ್ವದೇಶಾಭಿಮಾನವೂ ಸಹೋದರ ಪ್ರೀತಿಯೂ ಇಂಥಾ ಚಿಕ್ಕ ಚಿಕ್ಕ ಸಭೆಗಳಲ್ಲಿ ಕೂಡಾ ಎಷ್ಟರ ಮಟ್ಟಿಗೆ ತಲೆದೋರುತ್ತದೆಂಬುದು ಮೇಲಿನ ಕೃತ್ಯದಿಂದ ಸ್ಪಷ್ಟವಾಗುವದು.

ಇದೇ ತಿಂಗಳ 9ನೇ ತಾರೀಖಿಗೆ ತಾಲೂಕು ಬೋರ್ಡು ಸಭೆಯು ಕಾಸರಗೋಡು ತಾಲೂಕು ಕಚೇರಿಯಲ್ಲಿ ಜರಗಿತು. ಪುತ್ತೂರು ಡಿವಿಜನ್ ಡಿ ಕಲೆಕ್ಟರ್ ಮ. ರಾ. ರಾ. ರಾಮರಾಯರವರು ಅಗ್ರಾಸನರಾಗಿದ್ದರು. ಈ ಸಭೆಯಲ್ಲಿ ಚರ್ಚಿಸಲಿಕ್ಕಿದ್ದ ಅನೇಕ ಸಂಗತಿಗಳಲ್ಲಿ ಇಲ್ಲಿಯ ಲವರ್ ಸೆಕೆಂಡರಿ ಶಾಲೆ ಕುರಿತು ಒಂದು ವಿಶೇಷ ಸಂಗತಿಯು ಚರ್ಚಿಸಲ್ಪಟ್ಟಿತು. ಅದು ಯಾವದೆಂದರೆ—ಈಗಿನ ವಿದ್ಯಾ ಇಲಾಖೆಯ ರೂಲುಗಳ ಪ್ರಕಾರ ಇಲ್ಲಿಯ ಲವರ ಸೆಕೆಂಡರಿ ಶಾಲೆಯನ್ನು ಸೆಕೆಂಡರಿ ಶಾಲೆಯಾಗಿ ಮಾಡುವದು ಅಗತ್ಯವೋ ಹಾಗೆ ಮಾಡುವದಾದರೆ ಅದರಿಂದ ಲಭಿಸುವ ಹಣವು ರೂಲಿಗೆ ಸರಿಯಾಗಿ ಸದರಿ ಶಾಲೆಯನ್ನು ನಡಿಸಲಿಕ್ಕೆ ಸಾಕಾಗುವದೋ? ಅಥವಾ ಅದನ್ನು ಎಲಿಮೆಂಟರಿ ಶಾಲೆಯಾಗಿ ಮಾಡಬಹುದೋ ಎಂಬೀ ಮುಂತಾದ ಚರ್ಚೆಗಳು. ಸಭೆಯಲ್ಲಿ ಕೂಡಿದ್ದ ಮೆಂಬರರ ಪೈಕಿ ಶಾಲಾ ಸಬ್ ಆಸಿಸ್ಟಂಟರಾದ ಪಿ. ಮಂಗೇಶರಾಯರವರು ಸೆಕೆಂಡರಿ ಶಾಲೆಗೂ ಎಲಿಮೆಂಟರಿ ಶಾಲೆಗೂ ಇರುವ ತಾರತಮ್ಯವನ್ನೂ ಮೇಲೆ ಪ್ರಸ್ತಾಪಿಸಿದ 2 ತರದ ಶಾಲೆಯಿಂದ ಹುಡುಗರಿಗುಂಟಾಗುವ ಬಾಧಕ ಸಾಧಕವನ್ನೂ ವಿವರಿಸಿ ತಿಳಿಸಿದರು. ನಂತರ ಹೆಚ್ಚು ಆಲೋಚನೆಯಿಂದ ಸದ್ರಿ ಲವರ್ ಸೆಕೆಂಡರಿ ಶಾಲೆಯು ಈಗ ಇರುವಂತೆಯೇ ಸೆಕೆಂಡರಿ ಶಾಲೆಯಾಗಿ ಮಂಗಳೂರು ಗವರ್ನಮೆಂಟ ಶಾಲೆಗೆ ಒಂದು ಶಾಖೆಯಾಗ ಬೇಕೆಂದೂ ಅದರಲ್ಲಿರುವ 3ನೇ ದರ್ಜೆಯ ಕ್ಲಾಸನ್ನು ತೆಗೆಯ ಬೇಕೆಂದೂ 4ನೇ ದರ್ಜೆಯನ್ನು ಕಲಿಸುವರೆ ಮೆಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ತೇರ್ಗಡೆ ಪಟ್ಟವರನ್ನು ಉಪಾಧ್ಯಾಯರನ್ನಾಗಿ ನೇಮಕ ಮಾಡಬೇಕೆಂದೂ ತೀರ್ಮಾನವಾಯಿತು. ಈಗಿನ ವಿದ್ಯಾ ಇಲಾಖೆಯ ರೂಲುಗಳನ್ನು ಚನ್ನಾಗಿ ಪರಿಶೋಧಿಸಿದರೆ ಸಾಧಾರಣ ತರದ ಜನರ ಮಕ್ಕಳಿಗೆ ಇನ್ನು ಮುಂದೆ ವಿದ್ಯೆಯು ಶೂನ್ಯವೆಂತ ಹೇಳಲೇ ಬೇಕು.

ಕುಂಬಡಾಜೆ ಗ್ರಾಮದಲ್ಲಿ ಕಳೆದ ತಿಂಗಳಲ್ಲಿ ಬ್ಯಾರಿ ಬಡ್ಡ ಕುಂಞಿ ಎಂಬ ಮಾಪಿಳೆಯನ್ನು ಕೊಂದ ನಂಬ್ರದಲ್ಲಿ ಮುದ್ದೈಲೆರಾದ ಕೆಲವು ಜಂಟರನ್ನೂ ಆ ಪೈಕಿ ಒಂದು ಹೆಂಗಸನ್ನೂ ಡಿಪ್ಯುಟಿ ಮೇಜಿಸ್ಟ್ರೇಟರು ಸೆಶ್ಯನ್ ಕೋರ್ಟಿಗೆ ಕಮಿಟ್ ಮಾಡಿರುತ್ತಾರೆ.

ಕಾಸರಗೋಡು ತಾಲೂಕಿನಲ್ಲಿ ಕಾಲರಾ ರೋಗ ಪ್ರವೇಶಿಸಿ ಸುಮಾರು ಸಮಯವಾಯಿತು. ಹಿಂತಿರುಗಲಿಕ್ಕೆ ಅದಕ್ಕೆ ಮನಸ್ಸಿಲ್ಲವೆಂತ ಕಾಣುತ್ತದೆ. ಆದರೂ ಅದನ್ನು ಗಡಿಪಾರು ಮಾಡುವ ಬಗ್ಗೆ ಇಲ್ಲಿಯ ವೈದ್ಯ ಉದ್ಯೋಗಸ್ಥರೂ ಸೆನಿಟರಿ ಇನ್ಸಪೆಕ್ಟರರೂ ಹೆಚ್ಚು ಶ್ರದ್ಧೆಯಲ್ಲಿರುತ್ತಾರೆ.

ಇದೇ ದಶಂಬರ 1ರ ಲಾಗಾಯತು 12ರ ವರೇಗೆ ಕೋಲೆರಾ ರೋಗವು ತಗಲಿದ 61 ಜನರ ಪೈಕಿ 45 ಜನರು ಇಲ್ಲಿಯ ಅನೇಕ ಗ್ರಾಮಗಳಲ್ಲಿ ಈ ಸಾಂಕ್ರಾಮಿಕ ರೋಗಕ್ಕೆ ತುತ್ತಾದರು.

ಕೆಲವು ತಿಂಗಳ ಹಿಂದೆ ಮಂಗಳೂರು ಫೋರೆಸ್ಟ ಆಫೀಸಿಗೆ ತಲ್ಪಿಸತಕ್ಕ ಕೆಲವು ಕಟ್ಟುಗಳು ಕಾಸರಗೋಡು ರೈಲ್ವೆ ಸ್ಟೇಶನಿಗೆ ಬಂದು ತಲ್ಪಿದವು. ಇವುಗಳನ್ನು ಕಾಸರಗೋಡು ತಾಲೂಕು ಕಚೇರಿಯಿಂದ ರೈಲ್ವೆ ಹಣವನ್ನು ಕೊಟ್ಟು ಪಡಕೊಂಡು ಮಂಗಳೂರು ಫೋರೆಸ್ಟ ಆಫೀಸಿಗೆ ರವಾನಿಸಬೇಕಿತ್ತು. ಆದರೆ ಆ ಸಮಯದಲ್ಲಿ ಪರ್ಮನೆಂಟ ಶಿಲ್ಕಿನಲ್ಲಿ ಹಣ ಇಲ್ಲದ್ದರಿಂದ ಆ ಕಟ್ಟುಗಳು ರೈಲ್ವೆ ಸ್ಟೇಶನಿನಲ್ಲೇ ಉಳಿದವು. ಕೆಲವು ದಿವಸಗಳು ದಾಟಿದ ನಂತರವಾದರೂ ಶಿರಸ್ತೆದಾರ ಯಾನೆ ಹೆಡ್ ಎಕೌಂಟೆಂಟರು ಅದಕ್ಕೆ ಬೇಕಾದ ಹಣವನ್ನು ಬಿಲು ಮಾಡಿ ಖಜಾನೆಯಿಂದ ತೆಗದು ಆ ಕಟ್ಟುಗಳನ್ನು ಮಂಗಳೂರಿಗೆ ರವಾನಿಸುವ ಏಲಿವಾರಿ ಮಾಡುವದರ ಬದಲಿಗೆ ಅನೇಕ ಕಾಲದವರೇಗೆ ಆ ಕಟ್ಟುಗಳನ್ನು ಪಡಕೊಳ್ಳದೆ ಸ್ಟೇಶನಿನಲ್ಲೇ ಇರಗೊಡಿಸಿದ್ದರಿಂದ ಸುಮಾರು ೧೨ ರೂಪಾಯಿ ಹೆಚ್ಚಿಗೆ ಹಣ ಕೊಟ್ಟು ಆ ಕಟ್ಟುಗಳನ್ನು ಪಡಕೊಳ್ಳಬೇಕಾಯಿತು. ಸದರಿ ಜಾಸ್ತಿಯಾಗಿ ಕೊಟ್ಟ ಹಣವನ್ನು ರವಾನಿಸುವ ಬಗ್ಗೆ ಮಂಗಳೂರು ಫೋರೆಸ್ಟ ಆಫೀಸಿಗೆ ಕಾಗದ ಬರದ್ದಲ್ಲಿ ಆ ಹಣವನ್ನು ಅಸಡ್ಡೆ ತೋರಿಸಿದವರಿಂದ ವಸೂಲು ಮಾಡಬೇಕೆಂದಾದ್ದರಿಂದ ನಿರಪರಾಧಿಗಳಾದ 2 ಜನ ಕ್ಲಾರ್ಕರವರ 3 ತಿಂಗಳ ತಲಬಿನಿಂದ ಆ ಹಣವನ್ನು (೧೨ ೦.೦) ಭರ್ತಿ ಮಾಡುವ ಬಗ್ಗೆ ಕಳೆದು ಬಾಕಿ ತಲಬನ್ನು ಪಡಕೊಳ್ಳಬೇಕೆಂಬದಾಗಿ ತಹಶೀಲದಾರರು ಹೇಳಿರುವದರಿಂದ ಆ 2 ಜನ ಗುಮಾಸ್ತರು ತಮ್ಮ ತಲಬನ್ನು ಪಡಕೊಳ್ಳದೆ ನಿರಪರಾಧಿಯಾದ ನಮಗೆ ಊರಲ್ಲಿ ಎಲ್ಲಾ ತರದ ಆಹಾರ ಪದಾರ್ಥಗಳ ಧಾರಣೆಯು ಹೆಚ್ಚು ಇರುವಾಗ್ಯೆ ಈ ತರದ ಕಷ್ಟವನ್ನು ತಹಶೀಲದಾರರು ನಮಗೆ ಕೊಡುವರು. ಸರಿಯಲ್ಲವೆಂತಲೂ ನಾವು ಆ ಕಟ್ಟುಗಳ ಕುರಿತು ಪದೇ ಪದೇ ಶಿರಸ್ತೆದಾರರಿಗೆ ಸೂಚಿಸುತ್ತಾ ಇದ್ದಾಗ್ಯೂ ಕೂಡಾ ಹಣ ಮಂಗಿಸಿಕೊಡದ್ದರಿಂದ ಈ ನಷ್ಟಕ್ಕೆ ನಾವು ಬಾಧ್ಯರಲ್ಲವೆಂತಲೂ ನಮ್ಮನ್ನು ಈ ಕಷ್ಟದಿಂದ ನಿವಾರಣೆ ಮಾಡಬೇಕೆಂತಲೂ ದಯಾಶಾಲಿಯಾದ ಡಿಪ್ಯುಟಿ ಕಲೆಕ್ಟರವರಿಗೆ ಹೇಳಿಕೊಂಡಲ್ಲಿ ನಿಮ್ಮ ಅರ್ಜಿಯನ್ನು ತನ್ನಿರಿ, ತಕ್ಕ ನಿವೃತ್ತಿಯನ್ನು ಮಾಡುತ್ತೇನೆಂದಾಗಿ ಡಿಪ್ಯುಟಿ ಕಲೆಕ್ಟರವರು ಈ 2 ಜನ ಗುಮಾಸ್ತರರಿಗೆ ಅಭಯವನ್ನು ದಯಪಾಲಿಸಿದ್ದಾರಂತೆ.

ಕಾಸರಗೋಡಿನ ಸಬ್ ರಿಜಿಸ್ಟ್ರಾರರು ಮ. ರಾ. ರಾ. ಸಿ. ರಾಮಕೃಷ್ಣಯ್ಯನವರು ಮಂಗಳೂರು ಡಿಸ್ಟ್ರಿಕ್ಟ್ ರಿಜಿಸ್ಟ್ರಾರಾಗಿ ಬದ್ಲಿಗೆ ನೇಮಕಪಟ್ಟು ಹೋದ್ದರಿಂದ ಸುಮಾರು ಒಂದು ವಾರದಿಂದ ಇಲ್ಲಿಯ ರಿಜಿಸ್ಟ್ರಿ ಆಫೀಸಿನಲ್ಲಿ ಹೆಡ್ ಕ್ಲಾರ್ಕರೇ ರಿಜಿಸ್ಟ್ರಾರರ ಕೆಲಸವನ್ನು ಮಾಡುತ್ತಾ ಇರುತ್ತಾರೆ. ಇಲ್ಲಿಗೆ ಯಾರು ರಿಜಿಸ್ಟ್ರಾರಾಗಿ ಬರುತ್ತಾರೆಯೋ

ಉತ್ತರ ಸಿಕ್ಕಿತ ಗೊತ್ತಾಗಲಿಲ್ಲ. ರಜೆಯ ಮೇಲೆ ಹೋದ ಡಿಸ್ಟ್ರಿಕ್ಟ್ ರಿಜಿಸ್ಟ್ರಾರ ಮಗ ಚಂದ್ರನ್ ಎಂಬವರು ಮಂಜೇಶ್ವರಕ್ಕೂ ಮಂಜೇಶ್ವರದಲ್ಲಿ ಈಗ ಇರುವ ಗೋವಿಂದ ರಾಯರು ಈ ಸರಗೋಡಿಗೂ ಸಬ್ ರಿಜಿಸ್ಟ್ರಾರಾಗಿ ಬರುವರೆಂದು ವರ್ತಮಾನದಿಂದ ತಿಳಿದುಬರುತ್ತದೆ. ಗೋವಿಂದ ರಾಯರವರು ಇದೇ ರಿಜಿಸ್ಟ್ರಿ ಆಫೀಸಿನಲ್ಲಿ 2ನೇ ಕ್ಲಾರ್ಕರಾಗಿದ್ದಾರೆ. ಇಲ್ಲಿಂದಲೇ ಮಂಜೇಶ್ವರಕ್ಕೆ ಆಕ್ಟಿಂಗಾಗಿ ಬತ್ತಿಗೆ ಹೋದವರಾಗಿರುತ್ತಾರೆ.

ಮುಲ್ಕಿ. ಇಲ್ಲಿಯ ಮ. ರಾ. ರಾ ಬಂಗ್ಲೆ ನಾರಾಯಣ ಕಮ್ತಿಯರು ವರ್ತಮಾನಪತ್ರಿಕೆಗಳನ್ನು ಓದದ ವಿನಹ ಜನರ ಜ್ಞಾನವು ವಿಕಾಸವಾಗದೆಂದು ತಿಳಕೊಂಡು ಓದುಬಲ್ಲಂಥಾ ಪ್ರತಿ ಒಬ್ಬನು ಧರ್ಮಾರ್ಥವಾಗಿ ಜ್ಞಾನವನ್ನು ಪಡಿಯಬೇಕೆಂಬ ಯೋಚನೆಯಿಂದ ವಂದೇಮಾತರಂ ಮರಾಟ್ಟ, ಪ್ರಭುದ್ಧ ಭಾರತ, ಸೆಂಟ್ರಲ್ ಹಿಂದೂ ಕಾಲೇಜ್ ಮೆಗಜಿನ್, ಕೆನರಾ ಹ್ಯಾಸ್ಕೂಲು ಮೆಗಜಿನ್, ಎಂಬ ಇಂಗ್ಲಿಷ ಪತ್ರಿಕೆಗಳನ್ನೂ, ಕಾಳ್, ಕೇಸರಿ, ಆರ್ಯಧರ್ಮ ಮೊದಲಾದ ಮರಾಠಿ ಭಾಷೆಯ ಪತ್ರಿಕೆಗಳನ್ನೂ, ವಿವೇಕೋದಯ, ವೃತ್ತಾಂತ ಪತ್ರಿಕೆ, ವೃತ್ತಾಂತ ಚಿಂತಾಮಣಿ, ವಿಕಟಪ್ರತಾಪ, ಸುಭಾಶಿಣಿ, ಸ್ವದೇಶಾಬಿಮಾನಿ, ಮೊದಲಾದ ಕನ್ನಡ ಪತ್ರಿಕೆಗಳನ್ನು ತರಿಸಿ ಎಲ್ಲರೂ ಓದುವ ಬಗ್ಯೆ ಬಂಗ್ಲೆಯ ಮೇಜಿಯೊಂದರ ಮೇಲೆ ಪಸರಿಸಿರುವರು. ಅವರು ಮಾಡಿದಂಥಾ ಈ ಕಾರ್ಯವು ಮಹಾ ಶ್ರೇಯಸ್ಕರವೆಂಬದಾಗಿ ಹೇಳಿದರೆ ಬಲ್ಲವರು ಅಲ್ಲಗಳೆಯಲಿಕ್ಕಿಲ್ಲವೆಂಬದಾಗಿ ನೆನಸುತ್ತೇನೆ.

ಇಲ್ಲಿ ಹೊಸ ಪೋಲೀಸ್ ಸ್ಟೇಶನನ್ನು ಕಟ್ಟುವ ಬಗ್ಯೆ ಸದ್ಯ 2500 ರೂಪಾಯಿ ಸೆಂಕ್ಷನ್ ಆಗಿರುವದರಿಂದ ಅದರ ಕೆಲಸವು ನಡಿಯುತ್ತಲಿದೆ ಇನ್ನು ಇಲ್ಲಿ ಸದ್ಯ ಬಂದಿರುವ ಸಬ್ ಇನ್ಸ್‌ಪೆಕ್ಟರ ಕೆಳಗೆ 60 ಪೋಲೀಸಿನವರನ್ನು ಇಡುವರೆಂಬಗಾಗಿಯೂ ಸುರತ್ಕಲ್ಲಿನ ಸ್ಟೇಶನನ್ನು ಇಲ್ಲಿಗೆನೇ ಸೇರಿಸುವರೆಂಬದಾಗಿಯೂ ವದಂತಿ ಇದೆ ಮಾತ್ರವಲ್ಲದೆ ಪೋಲೀಸಿನವರಿಗೆ ಸೆನಿಟರಿ ಮನೆಗಳನ್ನು ಕಟ್ಟುವ ಬಗ್ಯೆ ತಿರಿಗಿ ಸರ್ಕಾರದಿಂದ ಹಣವು ಸದ್ಯ ಸೆಂಕ್ಷನ್ ಆದೀತಂತೆ.

ಹುಡಿಗಿಯರ ಶಾಲಾ ಅಸಿಸ್ಟೆಂತ ಇನ್ಸ್‌ಪೆಕ್ಟ್ರೆಸ್ ಮಿಸ್ ಪೆಟರ್ಸನ್ ಇವರು ತಾರೀಕು 4ರಲ್ಲು ಇಲ್ಲಿಗೆ ಬಂದು ತಾರೀಕು 5ರಲ್ಲು ಬಿ ಜಿ. ಎಮ್. ಹುಡಿಗಿಯರ ಭೋಜನಶಾಲೆಯ ಮಕ್ಕಳನ್ನೂ, ತಾರೀಕು 6ರಲ್ಲು ಪೇಟೆಯ ಶಾಲೆಯ ಮಕ್ಕಳನ್ನೂ ಪರೀಕ್ಷಿಸಿ ಹಿಂದೆರಳಿದರು. ಫಲಿತಾಂಶವು ಸದ್ಯ ತಿಳಿದುಬರಲಿಲ್ಲ.

ಇಲ್ಲಿಯ ಪ್ರೊತೆಸ್ಟಾಂತ ಕ್ರೈಸ್ತರು ಕಾನ್ವಾರ್ಡ್ ಬಿ ಜಿ ಎಮ್. ಶಾಲೆಯಲ್ಲಿ ಪ್ರತೀ ಶುಕ್ರವಾರ ರಾತ್ರಿಗೆ ಹೊಸತಾಗಿ ಒಂದು ದೇವತಾ ಪ್ರಾರ್ಥನಾ ಕೂಟವನ್ನು ಮಾಡಲಿಚ್ಛೈಸಿ ಕೆಲಸ ಪ್ರಾರಂಭಿಸಿರುವರು. ಇದರಲ್ಲಿ ದೇವರಿಗೆ ಪ್ರಾರ್ಥನೆಯೂ ಇನ್ನು ಮತಸಂಬಂಧವಾದ ಸಲ್ಲಾಪಗಳೂ ನಡಿಯುವವು.

ಉಡುಪಿ. ಛಳಿಯು ಪ್ರಾರಂಭವಾಗಿ ರಾತ್ರಿಗೆ ಮಳೆನಿಯಂತೆಯೆ ಇಬ್ಬನಿಯು ಸುರಿಯುತ್ತದೆ. ಸುಗ್ಗಿ ಬೆಳೆಯು ಚನ್ನಾಗಿದೆ. ಅಕ್ಕಿಬೆಲೆಯು ಏರುತ್ತಾ ಬರುತ್ತದೆ. ಈಗಲೇ ಕ್ಷಾಮಕಾಲದ ಬೆಲೆ ನಡಿಯುತ್ತದೆ ಎಂತ ಹೇಳುವದಕ್ಕೆ ಏನೇನೂ ಸಂದೇಹವಿಲ್ಲ ಬಡವರ ಗೋಳಿಗೆ ಪಾರವೇ ಇಲ್ಲ.

ಮ. ರಾ. ರಾ. ಪಂಡಿತ ಸಾವಕಾರ ಬಂಗ್ಲೆ ನಾರಾಯಣ ಕಾಮತ್ ಇವರು ಈ ತಿಂಗಳ ಪ್ರಾರಂಭದಲ್ಲಿ ಈ ಊರಿಗೆ ದಯಮಾಡಿ ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ದೇಶೋನ್ನತಿಯ ವಿಷಯವಲ್ಲಿ ಎರಡು ಮೂರು ಉಪನ್ಯಾಸಗಳನ್ನು ಮಾಡಿದವರಾದರು. ಈ ದೇಶ ಕಾಲಗಳಿಗೆ ಅನುಗುಣವಾದ ಅನ್ನಪಾನ ಉಡುಪುಗಳನ್ನು ಉಪಯೋಗಿಸುತ್ತಿದ್ದ ನಮ್ಮ ಪೂರ್ವಿಕರು ವಿದೇಶ ಅನ್ನಪಾನ ಉಡುಪುಗಳಿಗೆ ಮರುಳರಾಗಿರುವ ನಮ್ಮಿಂದ ಎಷ್ಟೋ ದೇಹದಾರ್ಢ್ಯವಿದ್ದವರೂ, ದೀರ್ಘಾಯುಷ್ಯಗಳೂ, ಐಶ್ವರ್ಯವಂತರೂ, ಮೇಧಶಕ್ತಿ ಇದ್ದವರೂ, ಆಗಿದ್ದರಾದುದರಿಂದ ನಾವುಗಳು ಸರ್ವ ಪ್ರಕಾರದಿಂದಲೂ ನಮ್ಮ ಆರೋಗ್ಯಾದಿಗಳಿಗೆ ಹಾನಿಕರವಾದ ವಸ್ತುಗಳನ್ನೂ ಸಾಂಪ್ರದಾಯಗಳನ್ನೂ ಬಿಡುವದಕ್ಕೆ ಪ್ರಯತ್ನ ಮಾಡಬೇಕೆಂಬದಾಗಿಯೂ ನಮ್ಮಲ್ಲಿ ಅತಿ ಬಡವರು ಕೂಡ ಯಥೋಚಿತ ವಿದ್ಯಾವಂತರಾಗುವಂತೆ ಸರ್ವರೂ ಪ್ರಯತ್ನಪಡಬೇಕಾಗಿಯೂ ಇವರ ಉಪನ್ಯಾಸದ ಮುಖ್ಯ ಸಾರಾಂಶವಾಗಿದ್ದಿತು. ಇವರ ಅಭಿಪ್ರಾಯ ಪ್ರಕಾರ ಇಲ್ಲಿ ಈಗ ಪ್ರತಿ ಭಾನುವಾರ ಪ್ರಾತಃಕಾಲ ಈ ದೇವಸ್ಥಾನದಲ್ಲಿ ಸ್ವಧರ್ಮದ ವಿಷಯದಲ್ಲಿ ಉಪನ್ಯಾಸಗಳನ್ನು ಮಾಡುತ್ತಾರೆ ಇಡೀ ಜಿಲ್ಲೆಯನ್ನು ಸುತ್ತುವ ಸದುದ್ದೇಶದಿಂದ ಹೊರಟಿರುವರಾಗಿ ತಿಳಿದು ಸಂತೋಷಪಡುತ್ತೇನೆ

ಬಾಲಿಕಾ ಪಾಠಶಾಲೆಗಳ ಇನ್ಸಪೆಕ್ಟ್ರೆಸ್ ಪೆಟರ್ಸನ್ ದೊರೆಸಾನಿಯವರು ಬಾಲಿಕಾ ಪಾಠಶಾಲೆಗಳ ಪರೀಕ್ಷೆಗಾಗಿ ಇಲ್ಲಿಗೆ ಬಂದಿದ್ದರು ಇಷ್ಟು ದೊಡ್ಡ ಊರಲ್ಲಿ ಸರ್ಕಾರಿ ಪರಿಕ್ಷೆಗೆ ಯೋಗ್ಯವಾದ ಬಾಲಿಕಾ ಪಾಠಶಾಲೆಯು ಒಂದೂ ಇಲ್ಲದೆ ಇರುವುದು ಅತೀ ಶೋಚನೀಯವು ಹೆತ್ತವರು ತಮ್ಮ ಬಾಲಕಿಯರನ್ನು ಹುಡುಗರ ಶಾಲೆಗಳಿಗೆ ಹುಡುಗರೊಡನೆಯೇ ಕೂತು ವಿದ್ಯೆಕಲಿಯುತ್ತಿರುವದನ್ನು ಕಣ್ಣು ಬಿಟ್ಟು ನೋಡುತ್ತಿರುವರು. ಹೀಗೆ ಬೇರೆ ಬೇರೆ ಶಾಲೆಗಳಲ್ಲಿ ಸುಮಾರು 60 ಮಂದಿ ಹುಡುಗಿಯರು ಇರಲಿಕ್ಕೆ ಸಾಕು. ಹೀಗಿದ್ದಾಗ್ಯೂ ಒಂದು ಬಾಲಿಕಾ ಪಾಠಶಾಲೆಯನ್ನು ತೆರಿಯುವ ಹಾಗೆ ಯಾರೂ ಪ್ರಯತ್ನಿಸದಿರುವದು ಅತ್ಯಾಶ್ಚರ್ಯವಾಗಿ ತೋರುತ್ತದೆ.

ಇಲ್ಲಿ ಹಗಲು ಕಳ್ಳರ ಅವಾಂತರವು ಶುರುವಾಗಿದೆ. ಸದರಿ ಉಪ್ಪೂರು ಭಾಗವತರು ಎಂಬವರ ಮನೆಗೆ ಈ ತಾ. 2ರಲ್ಲು ಹಗಲಲ್ಲಿಯೇ ಕಳ್ಳರು ಹೊಕ್ಕು ಕೆಲವು ಚಿನ್ನಾಭರಣಗಳನ್ನೂ ಮರು ದಿನ ಹಗಲಲ್ಲಿ ಚಿಟ್ಪಾಡಿಯಲ್ಲಿ ಒಂದು ಹೆಂಗಸಿನ ಮನೆಗೆ ಹೊಕ್ಕು ಕೆಲವು ನಗನಾಣ್ಯಗಳನ್ನೂ ಎತ್ತಿ ಹಾಕಿದರು. ಪರ್ಯಾಯ ಕಾಲದಲ್ಲಿ ಏನೆಲ್ಲ ಅವಾಂತರಗಳು ನಡಿಯಲಿಕ್ಕೆ ಇದೆಯೋ ತಿಳಿಯದು ಇಲ್ಲಿಯ ಹೆ ಕೊ ರಾಮಯ್ಯನವರು ಬಹು ಚಟ್ಟವಟಿಕೆಯಿಂದ ಕೆಲಸ ಮಾಡುವವರೂ ಅನೇಕರಿಗೆ ಬೇಕಾದವರೂ ಆಗಿರುವದರಿಂದ ಈ ನಂಬ್ರಗಳನ್ನು ತಲಾಶಿ ಮಾಡದೆ ಇರಲಾರರೆಂತ ಜನರು ಗ್ರಹಿಸುತ್ತಾರೆ

ಸೋದೇ ಶ್ರೀ ಪಾದಂಗಳವರು ಕೊಚ್ಚಿ ಸಂಸ್ಥಾನಕ್ಕೆ ಹೋಗುವ ಆಲೋಚನೆಯಿಂದ ಸಂಚಾರಕ್ಕೆ ಹೊರಟಿರುತ್ತಾರೆ. ಪೇಜಾವರ ಶ್ರೀಗಳವರು ಮೊದಲೇ ಸಂಚಾರದಲ್ಲಿರುತ್ತಾರೆ ಅದುದರಿಂದ ಈ ವರ್ಷದ ಪರ್ಯಾಯೋತ್ಸವಕ್ಕೆ 8 ಮಂದಿ ಸ್ವಾಮಿಗಳವರ ಪೈಕಿ ಆರೇ ಮಂದಿ ಇರುವಂತಾಯಿತು.

ಬೈಂದೂರು ಜಟ್ಕಾಗಾಡಿಗಳ. ಇಲ್ಲಿ ವರೆಗೆ ಬರಲಿಕ್ಕೆ ಶುರುವಾದಂದಿನಿಂದ ಜನರಿಗೆ ತುಂಬಾ ಅನುಕೂಲವೇ ಆಗಿಯದೆ. ಆದರೆ ಜಟ್ಕಾಗಾಡಿಗಳು ಹೊಡಿಯಲಿಕ್ಕೆ ಬರುವ ಜನಗಳೂ ಕುದುರೆಗಳ ಚಾಕರಿಗೆ ಇರುವ ಜನರೂ ಈ ಊರಿನ ಪುಂಡ ಜನಗಳ ಸಂಗಡ ಸೇರಿಕೊಂಡು ಇಲ್ಲಿಯೂ ಆಸಪಾಸ ಹಳ್ಳಿಗಳಲ್ಲಿ ಆಗುವ ಜಾತ್ರೆಗಳಲ್ಲೂ ಹೆಚ್ಚಾಗಿ ರಾತ್ರಿಕಾಲದಲ್ಲಿ ನಡಿಸತಕ್ಕ ಹಿಂಸಾಕೃತ್ಯಗಳೂ ಬಹಳ ಹೆಚ್ಚಾಗಿರುತ್ತವೆ ಇಂಥಾ ದುಷ್ಟ ಜನರನ್ನು ಸುಬ್ಬಯಕಟ್ಟಿರು ತಮ್ಮ ಜಟ್ಕಾನೌಕರರಿಗೆ ಇಟ್ಟುಕೊಳ್ಳುವದು ಸಹಜವಲ್ಲ

ಈ ಪ್ರಾಂತ್ಯದಲ್ಲಿ ಹೊನ್ನಾವರ ತಾಲೂಕಿನ ಮಂಗುವೆ ಎಂಬ ಹಳ್ಳಿಯಿಂದ ಒಬ್ಬ ಗಾಣಿಗರ ಜಾತಿಯವನೊಬ್ಬನು ಬಂದು ತಾನು ಮಂತ್ರವಾದಿಯೆಂದೂ, ಪಂಡಿತನೆಂದೂ, ಭೂಮಿಯಲ್ಲಿರುವ ಹೂಳಿಟ್ಟ ನಿಕ್ಷೇಪವನ್ನು ತೆಗದುಕೊಡುತ್ತೇನೆಂದೂ ಚಿನ್ನ ಮುತ್ತು ಬೆಳ್ಳಿ ಮಾಡುತ್ತೇನೆಂದೂ ಹೇಳಿಕೊಳ್ಳುತ್ತಾ ಜನರನ್ನು ಮೋಸಗೊಳಿಸಿ ಹಣ ಸಂಪಾದನೆ ಮಾಡುತ್ತಾ ಇದ್ದಾನೆ ಆತನು ಇತ್ತಲಾಗಿನಿಂದ ಮುಂದೆ ಕುಂದಾಪುರ ಉಡ್ಪಿ, ಮಂಗ್ಳೂರು, ಪುತ್ತೂರು ಈ ತಾಲೂಕ ಗಳ ಹಳ್ಳಿಗಳಲ್ಲಿ ತಿರುಗಾಡಲಿಕ್ಕೆ ಹೊರಟಿದ್ದಾನೆ. ಈತನು ಕಳೂರು ಕಟ್ಟೆ, ಸಾಗರ, ನಗರ, ತಾಲೂಕುಗಳ ಹಳ್ಳಿಗಳಲ್ಲಿ ಬಹಳ ಜನರನ್ನು ಠಕ್ಕು ಮಾಡಿದ್ದಾನೆ. ಆದ್ದರಿಂದ ಸದರಿಯವನ ವಿಷಯದಲ್ಲಿ ಎಲ್ಲರೂ ತಮ್ಮ ತಮ್ಮ ಜಾಗ್ರತೆಯಿಂದ ಇದ್ದರೆ ಮೋಸಕ್ಕೆ ಒಳಗಾಗರೆಂದು ಹಾರೈಸುವ.

ಸರ್ವರ ಹಿತಚಿಂತಕ.

ತೀರ್ಥಹಳ್ಳಿಯಲ್ಲಿ ಪ್ಲೇಗು ರೋಗವು ಉಲ್ಬಣವಾದ್ದರಿಂದ ಶಂಕರನಾರಾಯಣದಲ್ಲಿರುವ ಲೋಕಲ್ ಫಂಡಿನವರ ಆಸ್ಪತ್ರೆಯನ್ನು ಹೊಸಂಗಡಿಯಲ್ಲಿಡುವರಂತೆ.

ಕುಂದಾಪುರದಲ್ಲಿಯ ಅಬ್ಬಿಗುಡ್ಡೆ ಕಾಡನ್ನು ಉಪ್ಪಿನಂಗಡಿ ತಾಲೂಕಿನ ನಲಕೂರು ಕಾಡನ್ನು ರಿಜರ್ವ ಫೋರೆಸ್ಟಗಳಾಗಿ ವಿಂಗಡಿಸಿರುವರು

ಶಾಲಿವಾಹನ ಶಕ ೧೮೨೯ನೇ ಪ್ಲವಂಗ ಸಂವತ್ಸರದ ಮಾರ್ಗಶಿರ ಶು ೧೨ಯು ಚಂದ್ರವಾರದಾರಭ್ಯ ಮಾರ್ಗಶಿರ ಬ. ೧೧ಯು ಕುಜವಾರದ ವರೆಗಿನ ವಾರ ಪಂಚಾಂಗವು. 1907ನೇ ಇಸವಿ ದಶಂಬರ ತಾರೀಕು 16ರಿಂದ 31ರ ವರೆಗೆ.

ತಾ.	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ತಾ.	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ
16	ಚಂದ್ರ	೧೨	೩೬|||	ಭರಣಿ	೪೪||	24	ಕುಜ	೪	೪|	ಆಶ್ಲೇಷಾ	೨೧
17	ಕುಜ	೧೩	೩೭|||	ಕೃತ್ತಿಕಾ	೪೭|	25	ಬುಧ	೫	೮|||	ಮಘಾ	೨೬||
18	ಬುಧ	೧೪	೪೦|	ರೋಹಿಣಿ	೫೧	26	ಗುರು	೬	೧೨||	ಹುಬ್ಬಾ	೩೧
19	ಗುರು	೧೫	೪೪	ಮೃಗಶಿರಾ	೫೬|	27	ಶುಕ್ರ	೭	೧೪|||	ಉತ್ತರಾ	೩೪|
20	ಶುಕ್ರ	೧	೪೬|||	ಆರ್ದ್ರಾ	೬೦	28	ಶನಿ	೮	೧೬	ಹಸ್ತಾ	೩೬||
21	ಶನಿ	೨	೪೮|||	ಆರ್ದ್ರಾ	೨	29	ರವಿ	೯	೧೬	ಚಿತ್ರಾ	೪೩||
22	ರವಿ	೩	೫೫	ಪುನರ್ವಸು	೮||	30	ಚಂದ್ರ	೧೦	೧೪|||	ಸ್ವಾತಿ	೩೭|||
23	ಚಂದ್ರ	೪	೬೦	ಪುಷ್ಯ	೧೪|||	31	ಕುಜ	೧೧	೧೨||	ವಿಶಾಖಾ	೩೬

Pocket Diaries for 1908.

1908ನೇ ಇಸವಿಯ

ಪ್ರೊಕೆಟ್ ಡ್ಯಾರಿಗಳು

ಮಾರಾಟಕ್ಕೆ ಸಿದ್ಧವಾಗಿವೆ! ತ್ವರೆಮಾಡಿರಿ!

ನೋಟುಬೂಕಿನ ಸ್ಯಾಜು 0—8—0.

4×5½ ಸ್ಯಾಜು 0—6—0

ಹದಿನೆರಡು ಪ್ರತಿಗಳನ್ನು ತೆಗದುಕೊಳ್ಳುವವರಿಗೆ ಒಂದು ಪ್ರತಿ ಉಚಿತವಾಗಿ ದೊರೆಯುವದು ವ್ಯಾಪಾರಸ್ಥರಿಗೆ ಬೇರೆ ಕಮ್ಮಿ ದರ

ಪ್ರತಿಗಳು ಬೇಕೆಂದಿರುವವರು ಈ ಕೆಳಗಿನ ವಿಳಾಸಕ್ಕೆ ಕೂಡಲೇ ಬರಿಯುವದು

ಮೆನೇಜರ್
ಶಾರದಾ ಪ್ರೆಸ್,
ಮಂಗಳೂರು

THE HINDU SOAP MANUFACTURING CO.

ಹಿಂದೂ ಸೋಪ್‌ಮೆನ್ಯುಫೆಕ್ಚರಿಂಗ್ ಕಂಪೆನಿ.

ಕುಂದಾಪುರ, ದಕ್ಷಿಣ ಕನ್ನಡ

ಈ ಕಂಪೆನಿಯಲ್ಲಿ ನಾನಾ ವಿಧದ ಸಾಬೂನುಗಳು ತಯಾರಾಗುತ್ತವೆ ಸಾಬೂನು ಉತ್ಕೃಷ್ಟಮವಾದದ್ದು ಕ್ರಯ ಸುಲಭ, ಚರಬಿ ವಿರಹಿತವಾದದ್ದು ನಾಗರಿಗಳೂ, ವಿಶೇಷವಾಹಿತಿಯೂ ಮೆನೇಜಿಂಗ್ ಏಜಂಟರಿಂದ ದೊರಕುವವು ಮಾರಾಟಕ್ಕೆ ಏಜಂಟರಾಗ ಅಪೇಕ್ಷಿಸುವವರು ಬರಕೊಳ್ಳಬಹುದು

ಬಿ ದತ್ತ ಎಂಡ್ ಬ್ರದರ್ಸ್, ಮೆನೇಜಿಂಗ್ ಏಜಂಟ್ಸ್

1908ನೇ ಇಸವಿ ಕೆಲೆಂಡರ್.

ಒಂದು ಕೆಲೆಂಡರಿಗೆ ೦ ೧-೦.

ಒಂದೇ ನಮೂನೆಯ 12 ಕೆಲೆಂಡರ್ ತೆಗದುಕೊಂಡರೆ ಒಂದು ಉಚಿತವಾಗಿ ದೊರೆಯುವದು

ಈ ಕೆಲೆಂಡರ್ ನೇತ್ರಾನಂದಕರವಾಗಿ ಗೋಡೆಗೆ ತೂಗ ಹಾಕಿಸಲಿಕ್ಕೂ ಮೇಜಿನ ಮೇಲೆ ಇಡಲಿಕ್ಕೂ ಅನುಕೂಲವಿದೆ

ಕೆಲೆಂಡರ್ ಗಲಾಟೆಯಲ್ಲಿ ಭ್ರಾಂತಿ ಹೊಂದಬೇಡಿ ಉತ್ತಮವಾದವುಗಳಿಗೆ ಹಣವನ್ನು ವ್ಯಯಮಾಡಿರಿ, ಕೂಡಲೇ ಒಂದಾಣೆ ಸ್ಟಾಂಪು ಕಳುಹಿಸಿರಿ

ವಿಳಾಸ
ಪ್ರೊಪ್ರೈಟರ್
ದಿ ಉಲನ್ ಮಾರ್ಟ್
ಮಂಗಳೂರು

R. M. KAMATH'S

SWADESHI BLUE BLACK INK POWDER.

ಆರ್. ಯಂ. ಕಾಮತ್.

ಇವರ ಸ್ವದೇಶಿ ಕಪ್ಪುಶಾಯಿ ಹುಡಿ, ಕಟ್ಟು 1ಕ್ಕೆ 3ಪೈ.

ಈ ಹುಡಿ ಬಿಶೀ ನೀರಿನಲ್ಲಿ ಹಾಕಿದ ಕೂಡಲೇ ಉತ್ತಮವಾದ ಶಾಯಿ ಆಗುತ್ತದೆ ಹೆಚ್ಚಿಗೆ ತರಿಸಿಕೊಳ್ಳುವವರಿಗೆ ಒಳ್ಳೇ ಕಮ್ಮಿಶನ್ ಶಿಕ್ಕುವದು. ಈ ಶಾಯಿಯು ಕಟ್ಟುಗಳನ್ನು ಒಂದೇ ಸಲ 250ಕ್ಕೆ ಕಡಿಮೆಯಾಗದಂತೆ ತರಿಸಿಕೊಳ್ಳುವವರಿಗೆ ಬಹಳ ಕಮ್ಮಿ ಕ್ರಯಕ್ಕೆ ಶಿಕ್ಕುವದು.

ಸುಗಂಧನಾಶಿಕ ಚೂರ್ಣ—ಶೀಸೆ 1ಕ್ಕೆ 0—4—0. 12ಶೀಸೆ ಒಂದೇ ಸಲ ತರಿಸಿಕೊಳ್ಳುವವರಿಗೆ ರೂ. 2—4—0ಗೆ ಶಿಕ್ಕುವವು. ಇದು ತಲೆಪಾತಿ ಇತ್ಯಾದಿಗೆ ಅತೀ ಉತ್ತಮವಾದದ್ದು.

ಗಂಡಮಾಲೆಗೆ ಸೌಗಂಧೀ ತೈಲ್ಯ ಬಹಳ ಉತ್ತಮವಾದದ್ದು. ಗುಳ್ಳೆಗಳು ಇದ್ದರೂ ಇರಲಿ, ಅಥವಾ ವ್ರಣ ಉಂಟಾಗಿದ್ದರೂ ಇರಲಿ, ಹೊರಗಿನಿಂದ ತಾಗಿಸಿಕೊಂಡಲ್ಲಿ ಗುಣವಾಗುತ್ತದೆ. ಈ ಎಣ್ಣೆ ಉಪಯೋಗಿಸಿಕೊಂಡವರಲ್ಲಿ ಗಂಡಮಾಲೆ ಗುಣವಾಗದೇ ಇದ್ದವರು ಒಬ್ಬರೂ ಇಲ್ಲ. ಶೀಸೆ 1ಕ್ಕೆ 0—12—0 ಒಂದೇ ಸಲ 6 ಶೀಸೆ ತರಿಸಿಕೊಳ್ಳುವವರಿಗೆ 1 ಶೀಸೆ ಉಚಿತವಾಗಿ ಸಿಕ್ಕುವದು

ಫುಯಿಂತೇಲ್ ತೈಲ್ಯ—ಶೀಸೆ 1ಕ್ಕೆ 1—0—0 ಅರ್ಧ ಶೀಸೆಗೆ 0—8—0, ಇದು ಮುಖ್ಯವಾಗಿ ಮೇಹ ಇತ್ಯಾದಿಗಳಿಂದ ಉಂಟಾದ ಸಕಲ ತರದ ವ್ರಣಗಳಿಗೆ ಶ್ರೇಷ್ಟವಾದ ಮದ್ದು ಅಲ್ಲದೆ ವಾತದ ನೋವು, ಪೆಟ್ಟು ತಾಗಿದ ನೋವು ಉಳುಕು ಇತ್ಯಾದಿಗಳಿಗೆ ಸಹಾ ಉಪಯೋಗಿಸ ಬಹುದು

ಸುಗಂಧಕಲಾವಿಲಾಸ—ಡಬ್ಬಿ 1ಕ್ಕೆ ರೂ 0—4—0 12 ಡಬ್ಬಿಗಳಿಗೆ ರೂ 2—4—0. ಇದು ಬಹಳ ಪರಿಮಳವುಳ್ಳದ್ದಾಗಿ ಗಂಧದ ಸಂಗಡ ಸೇರಿಸಲಿಕ್ಕೂ, ವಸ್ತ್ರ ಇತ್ಯಾದಿಗಳಿಗೆ ಹಚ್ಚಕೊಳ್ಳಲಿಕ್ಕೂ ಆಗುತ್ತದೆ

ಕಜ್ಜಿನಾಶಕ ಚೂರ್ಣ—ಶೀಸೆ 1ಕ್ಕೆ 0—2—0. ಉಪಯೋಗಿಸುವ ವಿವರ ಮದ್ದಿನ ಸಂಗಡ

ಈ ಮೇಲಿನ ಸಾಮಾನುಗಳನ್ನು ಟಪ್ಪಾಲ ದ್ವಾರಾ ತರಿಸಿಕೊಳ್ಳುವವರಿಗೆ ಕ್ರಯದ ಹೊರತು ವಿ ಪಿ ಖರ್ಚು ಪ್ರತ್ಯೇಕ ಬೀಳುವದು

ವಿಳಾಸ —ಆರ್. ಯಂ ಕಾಮತ್
ಪಂಚಮ್ಹಾಲ್,
ಮುಲ್ಕಿ, ದ ಕನ್ನಡ

Address —R M Kamath
Pnnchamahal
Moolky, S Canara

ಓರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿ.

ಲೈಫ್ ಎಶ್ಯೂರನ್ಸ್ ಕಂಪನಿ, ಲಿಮಿಟೆಡ್

ಎಂಬ

ಹಿಂದುಸ್ಥಾನದ ಅಗ್ರಗಾಮಿ ಸ್ವದೇಶಿ

ಜೀವ ವಿಮೇ ಉತ್ತರಿಸುವ ಸಂಘ.

1874ರಲ್ಲಿ ಸ್ಥಾಪಿಸಲ್ಪಟ್ಟಿತು

ಹಿಂದುಸ್ಥಾನದಲ್ಲಿ ಸ್ಥಾಪಿಸಲ್ಪಟ್ಟ ಸಂಘಗಳಲ್ಲಿ ಇದೇ ಮೊದಲಿನದು ಕಳೆದ ವರುಷದಲ್ಲಿ ಹೊಸದಾಗಿ ಸೇರಿದವರ ವಾರ್ಷಿಕ ವಿಮೇ ಮುಂಗಡ ರೂಪಾಯಿ 3,92,999-10-0

ಸಂಘದ ಕೂಡಿಟ್ಟ ಧನವು 2 ಕೋಟಿ 75 ಲಕ್ಷ ರೂಪಾಯಿಗಿಂತಲೂ ಮೀರಿರುತ್ತದೆ

ಇಷ್ಟರ ವರೆಗೆ 2,2700,000 ರೂಪಾಯಿಗಿಂತಲೂ ಹೆಚ್ಚಿನ ಹಣವನ್ನು ವಿಮೇದಾರರಿಗೆ ಸಲಾಯಿಸಿರುತ್ತದೆ 1882ನೇ ಇಸವಿ ಮಾರ್ಚ 29ನೇ ತಾರೀಕಿನಲ್ಲಿ ಈ ಸಂಘದವರು ಮುಂಬಾಯಿ ಸರಕಾರದವರೊಡನೆ ಮಾಡಿಕೊಂಡ ಕರಾರಿನ ಶರ್ತಗಳಿಗನುಸಾರವಾಗಿ ವಿಮೇದಾರರ ಭದ್ರತೆಗಾಗಿ ಅವರು ತೆರುವ ಎಲ್ಲಾ ಹಣದಲ್ಲಿ ಸೇಕಡಾ 80ರ ಮೇರೆಗೆ ಮೊಬಲಗು ಸರಕಾರದ ಭದ್ರತಾಪತ್ರಗಳಲ್ಲಿ ಠೇವಣಾತಿಯಾಗಿಟ್ಟು, ಮುಂಬಾಯಿ ಸರಕಾರದ ಹುದ್ದೇದಾರರಾಗಿರುವ "ಟ್ರಸ್ಟಿ" ಎಂಬ ಮೊಕ್ತೇಸರರ ವಶದಲ್ಲಿರುತ್ತದೆ. ಸದರಿ ಮೊಬಲಗನ್ನು ವಿಮೇ ಹಕ್ಕು ತೀರಿಸುವ ಕಾಲದಲ್ಲಿ ವಿನಹಾ ಇತರ ಕಾಲದಲ್ಲಿ ಕಂಪನಿಯ ಮೇಲ್ವಿಚಾರಕರು ಪಡಕೊಳ್ಳದ ಹಾಗೆ ನಿರ್ಬಂಧ ಉಂಟು ಈ ದೇಶದ ಜನರ ಸ್ಥಿತಿಗತಿಗೆ ಅನುಕೂಲವಾಗುವಂತೆ ಈ ಸಂಘವು ಲೋಕಮಾನ್ಯವಾದ ಸೂತ್ರಗಳ ಮೇಲೆ ಸ್ಥಾಪಿಸಲ್ಪಟ್ಟಿರುತ್ತದೆ.

ವಿಮೇ ಉತ್ತರಿಸಲುಳ್ಳವರು ಸಂಘದ ಸೂಚನಾಪತ್ರಗಳನ್ನೂ ಮಸೂದೆಗಳನ್ನೂ ಕುರಿತು ಕೆಳಗೆ ನಮೂದಿಸಿದ ಯಾವುದಾದರೊಂದು ವಿಳಾಸಕ್ಕೆ ಬರೆದುಕೊಳ್ಳುವುದು.

ರಾ,ರಾ. ಡಿ. ವಾಸ್ ಮತ್ತು ಮಗಂದಿರು.
ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ
ಜಿಲ್ಲೆಗಳಿಗೆ ಮುಖ್ಯ ಏಜಂಟರು,
ಮಂಗಳೂರು.

ಮೆ. ಆರ್. ಪೆಟರ್ಸನ್ ಬ್ರೌನ್,
ಕಾರಭಾರಿ.
Oriental Life Office,
Oriental Buildings,
BOMBAY.

ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆದಲ್ಲಿ ಕ್ರಯದ ವಿವರವಾರಿ ತಿಳಿಸಲಾದೀತು.

Messrs. William & Co. Bombay.

ಗಜಕರ್ಣದ ಮುಲಾಮು.

ಈ ಗಜಕರ್ಣದ ಮುಲಾಮು ಹಚ್ಚುವದರಿಂದ ಎಲ್ಲಾ ತರದ ಒಜ್ಜಿಯು ನಾಶವಾಗಿ ಹೋಗುವದು. ಮೂರು ಸಾರಿ ಹಚ್ಚುವದರೊಳಗೆ ಗಜಕರ್ಣವು ಹೋಗುವದು. ಇದರಿಂದ ಚರ್ಮವು ಕಪ್ಪಾಗುವದಿಲ್ಲ. ಮತ್ತು ಉರಿಯುವದಿಲ್ಲ. ಇದರಿಂದ ಗುಣವು ಕಂಡುಬರುವದಿಲ್ಲವಾದರೆ ಹಣವು ಪರತು ರವಾನಿಸಲ್ಪಡುವದು. ಲಕ್ಷಾನುಲಕ್ಷ ಜನರಿಗೆ ನಮ್ಮ ಈ ಗಜಕರ್ಣವು ಜೀವದಾನ ಕೊಟ್ಟಿರುತ್ತದೆ. ಬಿಡ ಬೇಡಿರಿ! ಇಂಥಾ ಸಮಯ ಎಂದಿಗೂ ದೊರಕಲಾರದು. ತ್ವರೆ ಮಾಡಿರಿ!

ಡಬ್ಬಿ ಒಂದಕ್ಕೆ ಕಿಮ್ಮತು 0—6—0 ವಿ. ಪಿ. 0—10—0. 12 ಡಬ್ಬಿ ತರಿಸಿಕೊಂಡವರಿಗೆ ಒಂದು ಡಬ್ಬಿ ಉಚಿತ.

ಸುಂದರೀತೈಲ್ಯ 0-8-0. ವಜ್ರಗುಟಿಕ 1-0-0. ಜೀರ್ಣರಸಾಯನ 1-4-0. ಜ್ವರಹಾರಿ 0-12-0. ಖಜ್ಜಿಮುಲಾಮು 0-3-0. ದಂತಮಂಜನ 0-2-0. ಕೇಶವರ್ಧಿನೀ ತೈಲ್ಯ 1-0-0. ಚೇಳುಕಡಿತದ ಮದ್ದು 0-8-0. ಕಫಹಾರಿ 1-4-0. ಕಫನಾಶಕ ಚೂರ್ಣ 0-8-0. ಮೂಲವ್ಯಾಧಿ ತೈಲ್ಯ 1-12-0. ಹೇನುನಾಶಕ ತೈಲ್ಯ 0-4-0. ಜಲಾಬು ಮಾತ್ರೆ 0-8-0. ವಿರೇಚನ ಗುಟಿಕೆ 0-8-0. ಕುಸುಮಾರಿ ಗುಟಿಕ 1-0-0. ಮೇಹದ ಮಿಶ್ರಣ 1-0-0.

ಈ ಕಂಪೆನಿಯವರು ಹೆಚ್ಚು ನಮೂನೆಯ ಔಷಧಗಳನ್ನು ತಯಾರಿಸುವದರಿಂದ ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರದಲ್ಲಿ ಒಂದು ಹೊಸ ಕೆಟಲಾಗು ರವಾನಿಸಲ್ಪಡುವದು.

ವಂದೇ ಮಾತರಂ.

ಅಮೃತಾಂಜನ

ಬಾಟ್ಲಿ ಒಂದಕ್ಕೆ ಕಿಮ್ಮತು 0—8—0. ವಿ. ಪಿ. 0—12—0.

ಅಮೃತಾಂಜನ—ಸುಖಾಂಜನ.
ಅಮೃತಾಂಜನ—ಪರಮಾಂಜನ
ಅಮೃತಾಂಜನ—ದಿವ್ಯಾಂಜನ.
ಅಮೃತಾಂಜನ—ಸಂಜೀವನ.

ಜಕಮ್ ಮತ್ತು ಘಾಯ, ವಾತ, ಎದೆನೋವು, ಗಂಟ್ಲುನೋವು, ಸಂಧಿವಾತ, ಶೀತ, ಕೆಮ್ಮು, ಮೊದಲಾದ ರೋಗಗಳಿಗೆ ಈ ನಮ್ಮ **ಅಮೃತಾಂಜನವು** ಅತೀ ಉತ್ತಮವಾದದ್ದು. ಒಂದು ಸಾರಿ ಪರೀಕ್ಷಿಸಿರಿ! ಇದರಿಂದ ಗುಣ ಕಂಡುಬರುವದಿಲ್ಲವಾದರೆ ಹಣ ಹಿಂತಿರುಗಿ ಕೊಡಲ್ಪಡುವದು. ಬಿಡ ಬೇಡಿ!

ಅಮೃತಾಂಜನ ಶ್ರೀ ಮಾಲಿನಿ.

ಅಮೃತಾಂಜನ—ಶೀತಭಂಜನಿ.
ಅಮೃತಾಂಜನ—ತಕ್ಷಣ ಪರಿಹಾರಿನಿ.
ಅಮೃತಾಂಜನ—ಅಪೂರ್ವದರ್ಶನಿ.
ಅಮೃತಾಂಜನ—ಭಂಜಿಸಿ ವಿಮರ್ಧಿನಿ.

ತಲೆನೋವು, ಶಿರೋಭಾರ, ಅರ್ಧಾಂಗವಾಯು, ಶಿರೋವೇದನ, ಆನೆಗಾಲು, ಈ ಎಲ್ಲಾ ತರದ ರೋಗಗಳಿಗೆ ಇದು ಒಂದು ಸಂಜೀವನ ಎಂಬದಾಗಿ ಕರೆಯಲ್ಪಡುವದು. ಕ್ರಯ ಕಮ್ಮಿ ಗುಣ ಹೆಚ್ಚು ನಮ್ಮ **ಅಮೃತಾಂಜನವು** ಇಡೀ ಹಿಂದುಸ್ಥಾನದಲ್ಲಿ ಪ್ರಚುರಗೊಂಡಿರುತ್ತದೆ. ಲಕ್ಷಾನುಲಕ್ಷ ಜನರಿಗೆ ಗುಣಕೊಟ್ಟ ಈ ನಮ್ಮ **ಅಮೃತಾಂಜನವನ್ನು** ಪ್ರತಿ ಒಬ್ಬರೂ ತರಿಸಿಕೊಳ್ಳುವರಾಗಿ ನಂಬಿದ್ದೇವೆ.

Messrs. William & Co.,
GENERAL MERCHANTS,
16 Oak Lane,
Fort BOMBAY.

Agent, Mangalore:
N. Nowrojee,
Chemist
HAMPANKATTE

ವಿಳಾಸ:—**ವಿಲಿಯಮ್ಸ್ ಮತ್ತು ಕಂಪೆನಿ, 16 ಓಕ್ ಲೇನ್, ಫೋರ್ಟು ಮುಂಬಯಿ.**
ಟೆಲಿಗ್ರಾಫ್ ಎಡ್ರೆಸು—**"ಅಮೃತಾಂಜನ" ಮುಂಬಯಿ.**

Printed and published by V. S. Kamath at the Mangalore Trading Association's "Sharada Press"